ಸಮಾಜಕಾರ್ಯ ವಿಷಯದಲ್ಲಿ ಪಿಎಚ್.ಡಿ
ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಮಹಾಪ್ರಬಂಧ

ಸ್ಥಳಾಂತರ ಮತ್ತು ಪುನರ್ವಸತೀಕರಣ: ಸವಾಲು ಮತ್ತು ಸಾಧ್ಯತೆಗಳು

(ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯನ್ನು ಪರಿಗಣಿಸಿ)

ಸಂಶೋಧನಾ ವಿದ್ಯಾರ್ಥಿ
ರವಿಶಂಕರ ಶಾಸ್ತ್ರೀ ಪಿ ಎಸ್

ಮಾರ್ಗದರ್ಶಕರು
ಡಾ. ಎ ಎಸ್ ಪ್ರಭಾಕರ
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ



ಸಮಾಜ ವಿಜ್ಞಾನಗಳ ನಿಕಾಯ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276
2018

ಸ್ಥಳಾಂತರ ಮತ್ತು ಪುನರ್ವಸತೀಕರಣ: ಸವಾಲು ಮತ್ತು ಸಾಧ್ಯತೆಗಳು

(ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯನ್ನು ಪರಿಗಣಿಸಿ)

ಸಮಾಜಕಾರ್ಯ ವಿಷಯದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್. ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧನಾ ವಿದ್ಯಾರ್ಥಿ
ರವಿಶಂಕರ ಶಾಸ್ತ್ರೀ ಪಿ.ಎಸ್.

ಮಾರ್ಗದರ್ಶಕರು
ಡಾ. ಎ.ಎಸ್ ಪ್ರಭಾಕರ
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೮

ಪ್ರಮಾಣ ಪತ್ರ

ಸ್ಥಳಾಂತರ ಮತ್ತು ಪುನರ್ವಸತೀಕರಣ: ಸವಾಲು ಮತ್ತು ಸಾಧ್ಯತೆಗಳು (ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಸಮಾಜಕಾರ್ಯ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧವನ್ನು **ಡಾ. ಎ ಎಸ್ ಪ್ರಭಾಕರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಸದರಿ ಮಹಾಪ್ರಬಂಧವು ಈ ಮೊದಲು ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ:

ರವಿಶಂಕರ ಶಾಸ್ತ್ರೀ ಪಿ.ಎಸ್
ಸಂಶೋಧನ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ಮಾರ್ಗದರ್ಶಕರ ದೃಢೀಕರಣ ಪತ್ರ

ರವಿಶಂಕರ ಶಾಸ್ತ್ರೀ ಪಿ.ಎಸ್ ಅವರು ಸ್ಥಳಾಂತರ ಮತ್ತು ಪುನರ್ವಸತೀಕರಣ: ಸವಾಲು ಮತ್ತು ಸಾಧ್ಯತೆಗಳು (ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಸಮಾಜಕಾರ್ಯ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧವನ್ನು ಈ ಮೊದಲು ಯಾವ ಪದವಿಗೂ ಸಲ್ಲಿಸಲ್ಪಟ್ಟಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ:

ಡಾ. ಎ ಎಸ್ ಪ್ರಭಾಕರ
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ಪರಿವಿಡಿ

ಕೋಷ್ಟಕಗಳ ವಿವರ

ಸಂಕ್ಷಿಪ್ತ ಪದಗಳ ಅರ್ಥ

ಪದಗಳು	ಸಂಕ್ಷಿಪ್ತ ವಿವರಣೆ
ಡಿ ಸಿ ಎಫ್ (DCF)	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು. (Deputy Conservator of Forest.)
ಎ ಸಿ ಎಫ್ (ACF)	ಸಹಾಯಕ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.(Asst, Conservator of Forest.)
ಆರ್ ಎಫ್ ಒ (RFO)	ವಲಯ ಅರಣ್ಯ ಅಧಿಕಾರಿಗಳು. (Range Forest Officer)
ಇ ಡಿ ಸಿ (EDC)	ಪರಿಸರ ಅಭಿವೃದ್ಧಿ ಸಮಿತಿ. (Eco Development Committee).
ಎನ್ ಆರ್ ಇ ಜಿ ಪಿ (NREGP)	ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ. (National Rural Employment Guarantee Program).
ಆರ್ ಎಲ್ ಇ ಜಿ ಪಿ (RLEGP)	ಗ್ರಾಮೀಣ ಭೂರಹಿತರಿಗೆ ಉದ್ಯೋಗ ಖಾತ್ರಿ ಯೋಜನೆ. (Rural Landless Employment Guarantee Program).
ಜೆ ಆರ್ ವೈ (JRY)	ಜವಹರ ರೋಜಗಾರ್ ಯೋಜನೆ. (Jawahar Rojgar Yojana).
ಜೆ ಎಫ್ ಎಂ (JFM)	ಜಂಟಿ ಅರಣ್ಯ ನಿರ್ವಹಣಾ ಸಮಿತಿ. (Joint Forest Management).
ವಿ ಎಫ್ ಸಿ (VFC)	ಗ್ರಾಮ ಅರಣ್ಯ ಸಮಿತಿ. (Village Forest Committee).
ಎ ಎನ್ ಎಫ್ (ANF)	ನಕ್ಸಲ್ ನಿಗ್ರಹ ದಳ. (Anti Naxal Force).
ಎಫ್ ಆರ್ ಎ (FRA)	ಅರಣ್ಯ ಹಕ್ಕು ಅಧಿನಿಯಮ. (Forest Right Act).
ಆರ್ ಡಿ (R D)	(ರೆವಿನ್ಯೂ) ಕಂದಾಯ ಇಲಾಖೆ. (Revenue Department).
ಎಸ್ ಸಿ ಪಿ (SCP)	ವಿಶೇಷ ಘಟಕ ಯೋಜನ (ಅನುಸೂಚಿತ ಜಾತಿ). (Special Component Program).
ಟಿ ಎಸ್ ಪಿ (TSP)	ಗಿರಿಜನ ಉಪ ಯೋಜನೆ (ಅನುಸೂಚಿತ ಬುಟಕಟ್ಟು). (Tribal Sub Plan).
ಐ ಟಿ ಡಿ ಪಿ (ITDP)	ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ. Integrated Tribal Development Program.
ಲ್ಯಾಂಪ್ಸ್ (LAMPS)	ದೊಡ್ಡ ಪ್ರಮಾಣದ ಆದಿವಾಸಿ ವಿಧೋದ್ದೇಶ ಸಹಕಾರ ಸಂಘ ನಿಯಮಿತ. (Large Sized Adivasi Multi Purpose Society).
ಎನ್ ಜಿ ಓ (NGO)	ಸರ್ಕಾರೇತರ ಸಂಸ್ಥೆಗಳು . (Non Government Organization).
ಪೆಸಾ (PESA)	ಪಂಚಾಯತ್ ವ್ಯಾಪ್ತಿಯ ಅನುಸೂಚಿತ ಪ್ರದೇಶಗಳು. Panchayat Extension to Schedule Area
ಆರ್.ಟಿ.ಸಿ (RTC)	Records of Rights, Tenance and Crop

ಅಧ್ಯಾಯ ೧

ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿ

ವಿಷಯಗಳು

೦೧. ಪ್ರಸ್ತಾವನೆ

೦೨. ಅಧ್ಯಯನದ ಉದ್ದೇಶ

೦೩. ಅಧ್ಯಯನ ವಿಧಾನ, ಅಧ್ಯಯನದ ಮಿತಿ ಮತ್ತು ವ್ಯಾಪ್ತಿ

೦೪. ಅಧ್ಯಯನದ ಮಹತ್ವ

೦೫. ಅಧ್ಯಯನದ ಪ್ರಸ್ತುತತೆ

೦೬. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಈವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

೦೭. ಮಹಾಪ್ರಬಂಧದ ಅಧ್ಯಾಯಗಳ ಸಂಕ್ಷಿಪ್ತ ಪರಿಚಯ

ಸಮಾರೋಪ

The social costs are underestimated because only the so-called "directly affected people" are included, but even that number is underestimated because and records are never updated, especially in the case of indigenous people and rural communities.

Medha Patkar........

ಅಧ್ಯಾಯ ೧

ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿ

ಪ್ರಸ್ತಾವನೆ

ಆಧುನಿಕ ಜಗತ್ತಿನಲ್ಲಿ ಬಹು ಚರ್ಚಿತವಾಗುತ್ತಿರುವ ವಿಷಯಗಳೆಂದರೆ, ಜಾಗತಿಕ ತಾಪಮಾನ ಏರಿಕೆ, ಅರಣ್ಯಗಳ ನಾಶ ಹಾಗೂ ವನ್ಯಜೀವಿಗಳ ಸಂರಕ್ಷಣೆಯೊಂದಿಗೆ ಮಾನವ ಚಟುವಟಿಕೆಗಳನ್ನು ನಿಷಿದ್ಧಗೊಳಿಸಿ, ಆ ಪ್ರದೇಶಗಳಿಂದ ಮಾನವ ವಸತಿಗಳನ್ನು ಸ್ಥಳಾಂತರಗೊಳಿಸುವುದು. ಇದಕ್ಕಾಗಿ ಬಹುತೇಕ ರಾಷ್ಟ್ರಗಳೆಲ್ಲವೂ ಒಂದೆಡೆ ಸೇರಿ, ಸಭೆಗಳನ್ನು ಆಯೋಜಿಸಿಕೊಂಡು ರೂಪುರೇಷೆಗಳ ರಚನೆಯೊಂದಿಗೆ ಅನುಷ್ಠಾನಗೊಳಿಸುವಿಕೆಗೆ ಅಣಿಯಾಗಿ, ಮೊದಲಿಗೆ ಅರಣ್ಯಗಳ ಸಂರಕ್ಷಣೆ, ಅರಣ್ಯಗಳ ಅಭಿವೃದ್ಧಿ ಮತ್ತು ವನ್ಯಜೀವಿಗಳ ಸಂರಕ್ಷಣೆಯನ್ನು ಪ್ರಧಾನ ಅಂಶವೆಂದು ಪರಿಗಣಿಸಿವೆ. ಲಭ್ಯವಿರುವ ಅರಣ್ಯ ಪ್ರದೇಶಗಳನ್ನು ಅಭಯಾರಣ್ಯಗಳಾಗಿ, ಕಾಯ್ದಿರಿಸಿದ ಪ್ರದೇಶಗಳಾಗಿ ಮತ್ತು ರಾಷ್ಟ್ರೀಯ ಉದ್ಯಾನವನಗಳನ್ನಾಗಿ ನಮೂದಿಸಿದ್ದಾರೆ. ಇದರ ಪರಿಣಾಮವಾಗಿ ತಲ ತಲಾಂತರದಿಂದಲೂ ಅರಣ್ಯ ಪ್ರದೇಶಗಳಲ್ಲಿ ವಾಸವಾಗಿದ್ದ ಬುಡಕಟ್ಟು ಜನರು ಹಾಗೂ ಇತರೆ ಪಾರಂಪರಿಕ ಅರಣ್ಯವಾಸಿಗಳು ಮೂಲ ಸೌಲಭ್ಯಗಳ ಕೊರತೆಗಳಿಗೆ ಒಳಗಾಗಿದ್ದಾರೆ. ತಾವು ಜೀವನ ರೂಪಿಸಿಕೊಳ್ಳಲು ಆಕರಗೊಳಿಸಿಕೊಂಡಿದ್ದ ಕೃಷಿ ಭೂಮಿಯಲ್ಲಿ ಉತ್ತಮ ಬೆಳೆ ಬೆಳೆಯಲು ಅಗತ್ಯವಿರುವ ಗೊಬ್ಬರಗಳನ್ನು ಕೂಡ ಒದಗಿಸಲಾಗುತ್ತಿಲ್ಲ. ಕಾಡು ಪ್ರಾಣಿಗಳು ಸಂಚರಿಸುವ ಭಾಗವಾಗಿರುವುದರಿಂದ ಕೊಯ್ಲಿಗೆ ಬಂದಿರುವ ಬೆಳೆಗಳಿಗೆ ಅವುಗಳ ಉಪಟಳವಾಗಿ 'ಕೈಗೆ ಬಂದಿರುವ ತುತ್ತು ಬಾಯಿಗೆ ಬರದಂತಾಗುತ್ತಿದ್ದು', ತಮ್ಮ ಮೂಲ ಆರ್ಥಿಕ ವ್ಯವಸ್ಥೆ ಬುಡ ಮೇಲಾಗುತ್ತಿದೆ. ತಾವು ನಾಲ್ಕು ಅಕ್ಷರ ಕಲಿಯದಿದ್ದರು ತಮ್ಮ ಮಕ್ಕಳು ಶಿಕ್ಷಿತರಾಗಲೆಂದು ಶಾಲೆಗೆ ಕಳುಹಿಸುವುದು ಕೂಡ ಸಂಕಷ್ಟವಾಗಿದೆ. ಇದರೊಂದಿಗೆ ಕಾಲಾಂತರದಲ್ಲಿ ತುತ್ತಾಗುವ ಕಾಯಿಲೆಗಳಿಗೆ ಸೂಕ್ತ ಔಷಧೋಪಚಾರವನ್ನು ಪಡೆಯಲು ಮೈಲಿಗಳಷ್ಟು ದೂರ ಕ್ರಮಿಸುವ ಸಂದರ್ಭವು ಬಂದೊದಗಿದೆ.

ವಿಪರ್ಯಾಸವೆಂದರೆ, ಅಭಿವೃದ್ಧಿಯ ಪಥದೆಡೆ ಸಾಗುವ ನಿಟ್ಟಿನಲ್ಲಿ ಪ್ರಭುತ್ವವು ತಾನೇ ಮುಂದೆ ನಿಂತುಕೊಂಡು ರತ್ನಗಂಬಳಿ ಹಾಸಿ ಬಂಡವಾಳ ಶಾಹಿಗಳಿಗೆ ಆಹ್ವಾನವಿತ್ತಿದೆ. ಈ ಮೂಲಕ ತನ್ನ ಪ್ರದೇಶದ ವಸುಂಧರೆಯ ಒಡಲೊಳಗಿರುವ ಸಿರಿ ಸಂಪತ್ತನ್ನು ದೋಚಲು ಅನುವು ಮಾಡಿಕೊಟ್ಟಿದೆ. ಇದರ ಪರಿಣಾಮ ಹಚ್ಚ ಹಸಿರಿನಿಂದ ಬಹುಕಾಲ ಕಂಗೊಳಿಸಿದ್ಧ ವನಸಿರಿಯನ್ನು ಹಾಗೂ ಅದರೊಳಗೆ ವಾಸಿಸುತ್ತಿದ್ದ ವನ್ಯ ಮೃಗಗಳು, ಪಕ್ಷಿ ಹಾಗೂ ಮಾನವ ಸಮೂಹಗಳನ್ನು ಒಕ್ಕಲೆಬ್ಬಿಸುವಿಕೆ ಪ್ರೋತ್ಸಾಹ ನೀಡಿದ್ದಲ್ಲದೆ, ಇಂದು ಅದೇ ಪರಿಸರದ ಉಳಿವಿಗಾಗಿ ಸಂರಕ್ಷಣೆಯ ಹಾದಿಯನ್ನು ಹಿಡಿದಿದೆ.

ಪ್ರಭುತ್ವದ ಇಂತಹ ಸ್ವಾರ್ಥತೆಯ ಫಲವಾಗಿ ಇಂದು ಅರಣ್ಯಗಳು ಹಲವು ಸಮುದಾಯಗಳಿಗೆ ಆವಾಸದ ದೇವಸ್ಥಾನವಾಗಿದ್ದುದು ಭೋಗ ವಸ್ತುವಾಗಿ ಪರಿಣಮಿಸಿದೆ. ನಮ್ಮ ರಾಷ್ಟ್ರೀಯ ಪ್ರಾಣಿಯಾದ 'ಹುಲಿ' ಮತ್ತು ರಾಷ್ಟ್ರೀಯ ಪಕ್ಷಿಯಾದ 'ನವಿಲು' ಹಾಗೂ ಇತರೆ

ಪ್ರಾಣಿಗಳೊಂದಿಗೆ ಅರಣ್ಯವೂ ವಿನಾಶದಂಚಿಗೆ ತಲುಪಿದೆ. ಆದ್ದರಿಂದ ಅವುಗಳ ರಕ್ಷಣೆಗಾಗಿ ಕಾಲ ಕಾಲಕ್ಕೆ ಅನುಸಾರವಾಗಿ ಹಲವಾರು ಕಾನೂನು, ಕಾಯ್ದೆ ಮತ್ತು ಯೋಜನೆಗಳನ್ನು ಜಾರಿಗೆತರಲಾಗಿ ಬುಡಕಟ್ಟು ಸಮುದಾಯಗಳು ಹಾಗೂ ಇತರೆ ಅರಣ್ಯ ವಾಸಿಗಳು ತಮ್ಮ ಮೂಲ ಪಿತ್ರಾರ್ಜಿತ ಭೂಮಿ (Ancestral Land) ಗಳನ್ನು ತೊರೆಯುವಂತಾಗಿದೆ. ಇಂತಹ ಸಮಯದಲ್ಲಿ ಅರಣ್ಯದ ಪರಿಸರಗಳಿಂದ ಸ್ಥಳಾಂತರಗೊಳ್ಳುವವರನ್ನು ಇಂಗ್ಲೀಷ್ ನಲ್ಲಿ ಗ್ರೀನ ಹೌಸ್ಟೀಸ್ (Green Oustees) ಗಳೆಂದು ಕರೆಯಲಾಗುತ್ತಿದೆ.

ಬುಡಕಟ್ಟು ಸಮುದಾಯದ ಹಾಗೂ ಪಾರಂಪರಿಕ ಅರಣ್ಯವಾಸಿ ಸಮುದಾಯಗಳ ಸ್ಥಳಾಂತರತೆಗೆ ಮುಖ್ಯ ಕಾರಣ, ರಾಷ್ಟ್ರೀಯ ಉದ್ಯಾನವನ, ವನ್ಯಮೃಗ ಸಂರಕ್ಷಣೆ ಹಾಗೂ ಕಾಯ್ದಿರಿಸಿದ ಅರಣ್ಯಗಳ ಕಾಯ್ದೆಗಳು. ಅವು ಬ್ರಿಟೀಷ್ ವಸಾಹತು ಕಾಲದಿಂದಲೂ ಪ್ರಾರಂಭವಾಗಿ ಇಂದಿನ ವರೆಗೂ ಚಾಲ್ತಿಯಲ್ಲಿವೆ. ಇದರೊಂದಿಗೆ ನಿರಂತರವಾಗಿ ಬ್ರಿಟೀಷ್ ಮತ್ತು ಪ್ರಸ್ತುತ ಸರ್ಕಾರಗಳು ಪ್ರತಿಪಾದಿಸುತ್ತಾ ಬಂದಿರುವುದು 'ಮಾನವ ಮತ್ತು ಅಳಿವಿನಂಚಿನಲ್ಲಿರುವ ಅರಣ್ಯ ಸಂಪತ್ತು, ವನ್ಯ ಮೃಗಗಳ ನಡುವಿನ ಅಪಹೊಂದಾಣಿಕೆಗಳೆಂದು'. ಈ ಅಪಹೊಂದಾಣಿಕೆಗಳ ಪರಿಣಾಮವಾಗಿ ವಿನಾಶದಂಚಿಗೆ ತಳ್ಳಲ್ಪಟ್ಟಿರುವ ರಾಷ್ಟ್ರೀಯ ಪ್ರಾಣಿಯಾದ ಹುಲಿಯ ಸಂರಕ್ಷಣೆಗಾಗಿ ರಾಷ್ಟ್ರೀಯ ಹುಲಿ ಯೋಜನೆಯನ್ನು, ರಾಷ್ಟ್ರೀಯ ಉದ್ಯಾನವನ ಹಾಗೂ ರಾಷ್ಟ್ರೀಯ ಅರಣ್ಯ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತಂದು ಅವುಗಳ ಪೋಷಣೆಗೆ ಮನ್ನಣೆ ನೀಡಲಾಗಿದೆ.

ಈ ಕಾಯ್ದೆಗಳ ಅನುಷ್ಠಾನದ ಪರಿಣಾಮವಾಗಿ ಹುಲಿ ವಾಸವಿರುವ ಹಾಗೂ ಅರಣ್ಯ ಸಂರಕ್ಷಣಾ ವ್ಯಾಪ್ತಿಯಲ್ಲಿ ಮಾನವರ ಚಟುವಟಿಗಳನ್ನು ನಿಯಂತ್ರಿಸುವುದರೊಂದಿಗೆ Core Zone & Buffer Zoneಗಳೆಂಬ ನಾಮಕರಣದೊಂದಿಗೆ ಅರಣ್ಯ ಪರಿಸರ ವ್ಯಾಪ್ತಿಗಳನ್ನು ವಿಸ್ತರಿಸಲಾಗುತ್ತಿದೆ. ಈ ವ್ಯಾಪ್ತಿಯಲ್ಲಿ ಮಾನವ ವಸತಿ ಸಂಕುಲಗಳನ್ನು ಅನ್ಯ ಪ್ರದೇಶಗಳಿಗೆ ಸ್ಥಳಾಂತರಿಸಲು ಹಾಗೂ ಮೊದಲಿನಂತೆ ಸ್ಥಳಾಂತರಗೊಂಡ ಸ್ಥಳದಲ್ಲಿ ಯತವತ್ತಾಗಿ ಜೀವನ ಶೈಲಿಯನ್ನು ರೂಪಿಸಿಕೊಳ್ಳಲು ಪುನರ್ವಸತೀಕರಣ ಸೌಲಭ್ಯವನ್ನು ಕಲ್ಪಿಸಿಕೊಡುವುದಕ್ಕೆ ಅನುವು ಮಾಡಿಕೊಡಲಾಗಿದೆ.

ವನ್ಯಜೀವಿ ಮತ್ತು ಅರಣ್ಯದ ಪೋಷಣೆಗೆ ಪ್ರಾಮುಖ್ಯತೆ ನೀಡುವ ಮುಖಾಂತರ ಸ್ಥಳಾಂತರದ ಪ್ರಕ್ರಿಯೆಯನ್ನು ಸರ್ಕಾರವು ಅಳವಡಿಸಿಕೊಂಡಿದೆ. ಅರಣ್ಯ ಕಾಯ್ದೆ ಮತ್ತು ಕಾನೂನುಗಳ ಅಡಿಯಲ್ಲಿ ಆದಿವಾಸಿಗಳು, ಅರಣ್ಯವಾಸಿಗಳು ವಾಸಿಸುವ ಸ್ಥಳವನ್ನು ತೊರೆದು ಸರ್ಕಾರ ನಿಗದಿ ಪಡಿಸಿದ ಇಲ್ಲವೇ ಸ್ವ ಇಚ್ಚೆಗೆ ಒಳಪಟ್ಟ ಸ್ಥಳಕ್ಕೆ ಸ್ಥಳಾಂತರಗೊಳ್ಳುವುದು ಹಾಗೂ ಅಲ್ಲಿಯ ವಿವಿಧತೆಯ ವಾತಾವರಣಕ್ಕೆ ಮಾನಸಿಕವಾಗಿ, ದೈಹಿಕವಾಗಿ ಹಾಗೂ ಆರ್ಥಿಕವಾಗಿ ಸಜ್ಜುಗೊಳಿಸಿಕೊಂಡು ತನ್ನ ಅಸ್ತಿತ್ವತೆಯನ್ನು ಕಾಪಾಡಿಕೊಂಡು ಜೀವಿಸುವುದು ಸ್ಥಳಾಂತರಗೊಂಡ ಪ್ರತಿಯೊಬ್ಬ ಜೀವಿಗೂ ಸಂಕಷ್ಟಕರ ಪರಿಸ್ಥಿತಿ ಅನಿವಾರ್ಯ. ಆದರೆ ಸರ್ಕಾರದ ಯೋಜನೆಗಳು ಸಕಾಲದಲ್ಲೂ ಅಪೂರ್ಣವಾದವುಗಳೆಂದು ಸರ್ವವಿಧಿತವಾಗಿ ಪ್ರತಿಯೊಬ್ಬರು ಮನಗಂಡಿದ್ದಾರೆ. ಪುನರ್ವಸತೀಕರಣ ಸೌಲಭ್ಯದ ಕುರಿತಾಗಿ ಕಾಯ್ದೆಗಳು ಕಾಲ ಕಾಲಕ್ಕೆ ರೂಪಾಂತರಗೊಂಡರೂ ಕೂಡ ಅನುಷ್ಠಾನದ ಮಟ್ಟದಲ್ಲಿ ಸರ್ಕಾರದ ನಿರ್ಲಕ್ಷ್ಯದ ಭಾವನೆಗಳು ಎದ್ದು ಕಾಣುವುದು. ಈ

ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸ್ಥಳಾಂತರ ಮತ್ತು ಪುನರ್ವಸತೀಕರಣದ ಸವಾಲು ಮತ್ತು ಸಾಧ್ಯತೆಗಳನ್ನು ಕುರಿತು ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನ ಶೀರ್ಷಿಕೆ 'ಸ್ಥಳಾಂತರ ಮತ್ತು ಪುನರ್ವಸತೀಕರಣ: ಸವಾಲು ಮತ್ತು ಸಾಧ್ಯತೆಗಳು' ಎಂದು. ಉಲ್ಲೇಖಿತ ಶೀರ್ಷಿಕೆ ಅನುಸಾರವಾಗಿ 'ಸ್ಥಳಾಂತರ', 'ಪುನರ್ವಸತೀಕರಣ', 'ಸವಾಲು' ಮತ್ತು 'ಸಾಧ್ಯತೆ' ಎಂಬ ಪದಗಳನ್ನು ಯಾವ ಅರ್ಥದಲ್ಲಿ ಬಳಸಿಕೊಳ್ಳಲಾಗಿದೆ ಎಂಬುದನ್ನು ಇಲ್ಲಿ ಸ್ಪಷ್ಟ ಪಡಿಸಿಕೊಳ್ಳಲಾಗಿದೆ.

'ಸ್ಥಳಾಂತರ' ಎಂಬ ಪದಕ್ಕೆ ನಾನಾರ್ಥಗಳುಂಟು. ಅವುಗಳಲ್ಲಿ ಸರಳವಾಗಿ ಅರ್ಥೈಸಿಕೊಳ್ಳುವುದಾದರೆ, ಒಂದೆಡೆಯಿಂದ ಮತ್ತೊಂದೆಡೆಗೆ ಹೋಗುವುದು ಎಂದು ಅಥವಾ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ತೆರಳುವುದು ಎಂದು ಅಥವಾ ಸ್ಥಾನಗಳ ಪಲ್ಲಟ ಎಂಬರ್ಥಗಳಿವೆ. ಅಧ್ಯಯನ ದೃಷ್ಟಿಯಿಂದ ಕಾನೂನುನಾತ್ಮಕವಾಗಿ ಉಲ್ಲೇಖಿಸಲಪಟ್ಟಿರುವ 'ಸ್ಥಳಾಂತರ' ಪದವನ್ನು ಅರಣ್ಯವಾಸಿಗಳು ಅರಣ್ಯ ಸಂರಕ್ಷಣೆ ಕಾನೂನಿನಡಿ ತಾವಿರುವ ಅರಣ್ಯ ವಾಸಿತ ಪ್ರದೇಶಗಳನ್ನು ತೊರೆದು ಬೇರೆಡೆಗೆ ತಮ್ಮ ಕುಟುಂಬ ಇಲ್ಲವೇ ಪರಿವಾರದೊಂದಿಗೆ ಸಂಪೂರ್ಣವಾಗಿ ಒಕ್ಕಲೇಳುವಿಕೆಯೆಂದು ಅರ್ಥೈಸಿಕೊಳ್ಳಲಾಗಿದೆ.

'ಪುನರ್ವಸತೀಕರಣ' ಎಂಬ ಪದವು ಒಬ್ಬ ವ್ಯಕ್ತಿಯು ನಿಯಮಿತ ಕಾಲದಲ್ಲಿ ಅಥವಾ ತತ್ಕಾಲದಲ್ಲಿ ಆಗಿರುವ ತೊಂದರೆಗಳಿಂದ ವಿಮುಕ್ತಿ ಹೊಂದಿ ಸ್ವಾತಂತ್ರವಾಗಿ ಜೀವಿಸುವಂತೆ ಕಾರ್ಯನಿರ್ವಹಿಸಲು ಅವಕಾಶಕಲ್ಪಿಸುವ ಪ್ರಕ್ರಿಯೆಯಾಗಿದೆ. ಎಂಬರ್ಥದಲ್ಲಿ ಅರ್ಥೈಸಿಕೊಳ್ಳಲಾಗಿದೆ.

'ಸವಾಲು' ಈ ಪದ ಬಹಳಷ್ಟು ಸಂಕೀರ್ಣತೆಯಿಂದ ಕೂಡಿದೆ. ಇದನ್ನು 'ಸಮಸ್ಯೆ'ಎಂಬ ಪದಕ್ಕೆ ಪರ್ಯಾಯವಾಗಿ ಕೆಲವೆಡೆ ಬಳಸುತ್ತಾರೆ. ಪ್ರಸ್ತುತ ಅಧ್ಯಯನದಲ್ಲಿ 'ಆಕ್ಷೇಪಣೆ', 'ವಿರೋಧ', 'ಕಗ್ಗಂಟು' ಅಥವಾ 'ಇಕ್ಕಟ್ಟು' ಈ ಪದಗಳ ಅರ್ಥದ ಹಿನ್ನೆಲೆಯಲ್ಲಿ ಬಳಸಲಾಗಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿ ಮೊದಲ ಹಂತದಲ್ಲಿ ಅರಣ್ಯ ವಾಸಿತ ಸಮುದಾಯಗಳು ಉದ್ಯಾನವನ ಪ್ರದೇಶದಿಂದ ಹೊರ ಹೋಗಬೇಕು ಎಂಬ ವಿಷಯದ ಆಧಾರಿತವಾಗಿ ಹಲವು ವಿರೋಧಗಳು, ಆಕ್ಷೇಪಣೆಗಳು ವ್ಯಕ್ತವಾಗಿವೆ ಹಾಗೂ ಸ್ವ ಇಚ್ಛೆಗೆ ಒಳಪಟ್ಟು ಇರುವ ಪ್ರದೇಶದಿಂದ ಬೇರೆಡೆ ಒಕ್ಕಲೇಳುವಿಕೆಗೆ ಕೂಡ ಎದುರಾಗಿರುವ ಸಮಸ್ಯೆ ಒಂದೆಡೆಯಾಗಿ ಒಕ್ಕಲೆದ್ದು ಬೇರೆಡೆ ನೆಲೆಸಿರುವ ಪ್ರದೇಶಗಳಲ್ಲು ಪ್ರಸ್ತುತವಾಗಿ ಎದುರಿಸುತ್ತಿರುವ ಸಮಸ್ಯೆಗಳೆಂದು ಪರಿಗಣಿಸಲಾಗಿ ಸಮುದಾಯಗಳು ಮತ್ತು ಅಧಿಕಾರಿವರ್ಗಗಳಲ್ಲಿ ಇಕ್ಕಟ್ಟಿನ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಸಂಶೋಧನಾ ಶೀರ್ಷಿಕೆಯಲ್ಲಿ 'ಸವಾಲುಗಳು' ಎಂಬ ಪದ ಉಪಯೋಗಿಸಲಾಗಿದೆ.

'ಸಾಧ್ಯತೆ' ಎಂಬ ಪದವು 'ಶಕ್ಯತೆ', 'ಸಂಭವನೀಯತೆ', 'ಮಾಡಬಹುದಾಗಿರುವಿಕೆ', 'ನೆರವೇರಿಸಬಹುದಾಗಿರುವಿಕೆ', ಎಂಬ ಧನಾತ್ಮಕ ಅರ್ಥವನ್ನು ಹೊಂದಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಉದ್ಯಾನವನದ ಒಳ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಕುಟುಂಬಗಳು ಆ ಭಾಗದಿಂದ ಹೊರ ಬರಲು ನೆರವೇರಿಸಿಕೊಂಡ ಕಾರ್ಯ ಚಟುವಟಿಕೆಗಳು, ಹಾಗೂ ಸ್ಥಳೀಯವಾಗಿ ನೆಲೆಸಿರುವವರು ಇಂದಿಗೂ ನೆಲೆಸಿರುವುದರ ಹಿಂದಿನ ಮೂಲಾಂಶಗಳನ್ನು ಪರಿಗಣಿಸಿಕೊಂಡು ನೋಡುವ ಅರ್ಥದಲ್ಲಿ ಮತ್ತು

ಸಂಶೋಧಕನಿಗೆ ಇತ್ಯಾತ್ಮಕ ಮನೋಭಾವ ಇದ್ದಲ್ಲಿ ಎಂತಹುದೇ ಸಂದರ್ಭದಲ್ಲಿ ಪರಿಹಾರಗಳನ್ನು ಕಂಡುಕೊಳ್ಳುತ್ತಾನೆ. ಮತ್ತು ಇದು ಅವಶ್ಯಕವಾದುದು. ಈ ಹಿನ್ನೆಲೆಯಲ್ಲಿ ಸಾಧ್ಯತೆಗಳು ಎಂಬ ಪದ ಬಳಕೆಗೆ ಪ್ರೇರಕವಾಗಿದೆ.

೧ ಅಧ್ಯಯನದ ಉದ್ದೇಶಗಳು (Objective Of the Study)

೦೧. ಸರ್ಕಾರದ ಉದ್ದೇಶಿತ ಅರಣ್ಯಗಳ ನೀತಿ ಹಾಗೂ ಕಾನೂನುಗಳೊಂದಿಗೆ ಆದಿವಾಸಿಗಳ ಅಸ್ತಿತ್ವತೆಯನ್ನು ಕಂಡುಕೊಳ್ಳುವುದು.

೦೨. ಸಂತ್ರಸ್ಥರಿಗೆ ಸರ್ಕಾರದಿಂದ ಲಭ್ಯವಾಗಿರುವ ಸೌಲಭ್ಯಗಳ ಕುರಿತು ಅಧ್ಯಯನ ಮತ್ತು ಅದನ್ನು ವಿಶ್ಲೇಷಿಸುವುದು.

೦೩. ರಕ್ಷಿತಾರಣ್ಯಗಳು ಹಾಗೂ ಉದ್ಯಾನವಗಳೆಂದು ಘೋಷಿಸಲ್ಪಟ್ಟ ನಂತರ ಅರಣ್ಯವಾಸಿಗಳು ಎದುರಿಸಿರುವ ಸವಾಲುಗಳನ್ನು ಪರಿಶೀಲಿಸುವುದು.

೦೪. ರಾಷ್ಟ್ರೀಯ ಉದ್ಯಾನವನ, ಅರಣ್ಯ ಮತು ವನ್ಯಜೀವಿ ಸಂರಕ್ಷಣಾ ಕಾಯ್ದೆಗಳ ಅನುಷ್ಠಾನದಿಂದ ಆದಿವಾಸಿಗಳ ಸಹಜ ಹಕ್ಕುಗಳ ನಡುವೆ ಉಂಟಾಗಿರುವ ಸಂಘರ್ಷಣೆಗಳನ್ನು ಅಧ್ಯಾಯಿಸುವುದು.

೨ ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ (Method Of Study)

ಪ್ರಸ್ತುತ ಅಧ್ಯಯನದಲ್ಲಿ 'ವಿವರಣಾತ್ಮಕ ಸಂಶೋಧನೆ ವಿಧಾನ'ವನ್ನು ಅಳವಡಿಸಿಕೊಳ್ಳಲಾಗಿದೆ. ಮಾಹಿತಿಗಳನ್ನು ಸಂಗ್ರಹಿಸಲು ಅವಲೋಕನ, ಸಂದರ್ಶನ ಅನುಸೂಚಿ, ಮತ್ತು ವ್ಯಕ್ತಿ ಅಧ್ಯಯನ (ಕೇಸ್ ಸ್ಟಡಿ), ಪ್ರಶ್ನಾವಳಿ ಸಾಧನ/ತಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯ ಕೈಗೊಂಡು ಪ್ರಾಥಮಿಕ ಮತ್ತು ಅನುಷಂಗಿಕ ಮಾಹಿತಿಗಳನ್ನು ಕಲೆಹಾಕಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಸಂಶೋಧನೆಯ ಕ್ಷೇತ್ರವಾಗಿದ್ದು, ೨೫೦ ಕುಟುಂಬಗಳನ್ನು (ಒಳ ಭಾಗದಲ್ಲಿರುವ ಮತ್ತು ಸ್ಥಳಾಂತರಗೊಂಡಿರುವ) ಹಾಗೂ, ೬೦ ಕೇಸ್ ಸ್ಟಡಿಗಳನ್ನು ಅಧ್ಯಾಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಮುಖ್ಯವಾಗಿ ಗೌಡಲು, ಮಲೆಕುಡಿಯ, ಮರಾಠಿನಾಯ್ಕ ಮತ್ತು ಇತರೆ ಅರಣ್ಯವಾಸಿಗಳ ದತ್ತಾಂಶಗಳನ್ನು ಕಲೆಹಾಕಲಾಗಿದೆ. ಇದರೊಂದಿಗೆ ಸರ್ಕಾರದ ಪ್ರಮುಖ ಇಲಾಖೆಗಳಾದ ಅರಣ್ಯ, ಕಾನೂನು, ಕೃಷಿ, ಕಂದಾಯ ಮತ್ತು ತೋಟಗಾರಿಕೆ ಇಲಾಖೆಗಳಿಂದ ಸ್ಥಳಾಂತರ ಮತ್ತು ಪುನರ್ವಸತೀಕರಣದ ಪರಿಹಾರಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕಲೆಹಾಕಲಾಗಿದೆ.

ನಮೂನೆ ಅಥವಾ ಮಾದರಿ ರಚನಾ ಕ್ರಮ (Sampling Plan)

ಅಧ್ಯಯನ ಪ್ರದೇಶ ಅಂದರೆ, ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕುಗಳು, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ಮತ್ತು ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನಲ್ಲಿ ವಿಸ್ತರಿಸಿಕೊಂಡಿದ್ದು, ಈ ವ್ಯಾಪ್ತಿಯಲ್ಲಿ

ಉದ್ಯಾನವನದ ಒಳ ಭಾಗದಲ್ಲಿ ಹಾಗೂ ಉದ್ಯಾನವನದಿಂದ ಸ್ಥಳಾಂತರ ಹೊಂದಿರುವವರ ಗ್ರಾಮಗಳನ್ನಾಧರಿಸಿ ಸಮಾನ ಅವಕಾಶ ನೀಡಲಾಗಿದ್ದು, ಇದಕ್ಕೆ ಅಸಂಭವನೀಯ ನಮೂನೆಯ 'ಉದ್ದೇಶ ಪೂರಿತ' ನಮೂನೆ ಮೂಲಕ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ. ಮಾಹಿತಿ ಸಂಗ್ರಹಣೆಗಾಗಿ ಸಂದರ್ಶನ ಅನುಸೂಚಿ ಮತ್ತು ರಚಿತ ಪ್ರಶ್ನಾವಳಿ ಮತ್ತು ಅರಚಿತ ಪ್ರಶ್ನಾವಳಿ ಎರಡನ್ನೂ ಬಳಸಲಾಗಿದೆ. ಜೊತೆಯಲ್ಲಿ ಅವಲೋಕನ ವಿಧಾನ ಕೂಡ ಬಳಸಲ್ಪಟ್ಟಿದೆ. ಸಂಗ್ರಹಿಸಿದ ಮಾಹಿತಿಯನ್ನು ಮೊದಲು ಕೋಷ್ಟಗೀಕರಣ ಮಾಡಿಕೊಂಡು ದತ್ತಾಂಶಗಳ ಜೊತೆಗೆ ವಿಷಯವನ್ನು ವಿಶ್ಲೇಷಿಸಲಾಗಿದೆ. ನಂತರ ಪ್ರಚಲಿತವಿರುವ ಸಂಶೋಧನಾ ವರದಿ ತಯಾರಿಸುವ ಮಾದರಿಯಲ್ಲಿ ವಿಸ್ತೃತ ಪ್ರಬಂಧವನ್ನು ರಚಿಸಲಾಗಿದೆ.

ದತ್ತಾಂಶ ಸಂಗ್ರಹಣೆಯ ಸಾಧನಗಳು (Data Collection Instruments)

ಕ್ಷೇತ್ರಕಾರ್ಯ ಕೈಗೊಂಡು ಅವಲೋಕನ ವಿಧಾನ ಮತ್ತು ಸಂದರ್ಶನ ಅನುಸೂಚಿಗಳನ್ನು ಬಳಸಿಕೊಂಡು ಮಾಹಿತಿ ಸಂಗ್ರಹಿಸಲಾಗಿದೆ. ಅವಲೋಕನ ವಿಧಾನದಲ್ಲಿ 'ಭಾಗಶಃ ಸಹಭಾಗಿತ್ವ'ದ ಮುಖಾಂತರ ಮಾಹಿತಿಯನ್ನು ಕಲೆಹಾಕಲಾಯಿತು. ಮಾಹಿತಿಯನ್ನು ಪೂರ್ವರಚಿತ ಸಂದರ್ಶನಾ ಅನುಸೂಚಿ ಮುಖಾಂತರ ಪಡೆಯಲಾಗಿದೆ. ಇದರೊಂದಿಗೆ ದೃಶ್ಯ ಮಾಧ್ಯಮ ಮತ್ತು ಧ್ವನಿ ದಾಖಲೀಕರಣ (ರೆಕಾರ್ಡ್) ಬಳಕೆ ಮುಖಾಂತರ ಹೇಳಿಕೆಗಳನ್ನು ಮಾಹಿತಿದಾರರಸಮ್ಮತಿಯ ಮುಖಾಂತರ ಪಡೆಯಲಾಗಿದೆ.

ಕ್ಷೇತ್ರ ಕಾರ್ಯ (Field Work)

ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಸ್ಥಳಾಂತರ ಮತ್ತು ಪುನರ್ವಸತೀಕರಣ ಕುರಿತು ಎದುರಾಗಿರುವ ಸವಾಲುಗಳನ್ನು ಅಧ್ಯಯನ ಮಾಡಲು, ಸಾಧ್ಯತೆಗಳನ್ನು ಗೊತ್ತುಪಡಿಸಿಕೊಳ್ಳಲು ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಅನುಮತಿಯನ್ನು ಪಡೆಯಲಾಗಿ, ಉದ್ಯಾನವನದ ಒಳ ಮತ್ತು ಸ್ಥಳಾಂತರ ಹೊಂದಿದ ಆದಿವಾಸಿ ಮತ್ತು ಇತರೆ ಅರಣ್ಯವಾಸಿಗಳ ಸಮುದಾಯಗಳು ವಾಸಮಾಡುವ ನೆಲೆಗಳನ್ನು ಹತ್ತಿರದಿಂದ ಅವಲೋಕನ ಮಾಡಿ, ಅಲ್ಲಿಯ ಜನರನ್ನು ಸಂದರ್ಶಿಸಲು ಅರಣ್ಯ ಇಲಾಖೆಯ ಸಿಬ್ಬಂದಿಗಳೊಂದಿಗೆ ಕ್ಷೇತ್ರ ಕಾರ್ಯವನ್ನು ಮಾಡಲಾಯಿತು. ಅರಣ್ಯ ಇಲಾಖೆಯ ಮುಖಾಂತರ ಮಾಹಿತಿ ಹಕ್ಕು ಕಾಯ್ದೆ ೨೦೦೫ ರ ಅಡಿ ಅನುಷಂಗಿಕ ದಾಖಲೆಗಳಾದ ಕುಟುಂಬ ಮತ್ತು ಸಮುದಾಯಗಳ ಸಾಂಖಿಕ ವಿವರ ಮತ್ತು ಪ್ರದೇಶಗಳ ನಕಾಶೆಗಳನ್ನು ಪಡೆದುಕೊಂಡು ಮಾರ್ಗದರ್ಶಕರೊಡನೆ ಯೋಜನೆ ತಯಾರಿಸಿಕೊಂಡು ಸಮುದಾಯದವರನ್ನು, ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಕಲೆಹಾಕಲಾಯಿತು.

ದತ್ತಾಂಶಗಳ ಕಾರ್ಯವಿಧಾನ ಮತ್ತು ವಿಶ್ಲೇಷಣಾ ರಚನಾ ಕ್ರಮ (Data Processing and Analysis Plan)

ಸಂಗ್ರಹಿಸಿದ ದತ್ತಾಂಶಗಳನ್ನು ಗಣಕ ಯಂತ್ರದ ಎಸ್ ಪಿ ಎಸ್ ಎಸ್ ಪ್ಯಾಕೇಜ್ ಬಳಸಿ ವಿಶ್ಲೇಷಣೆಗೊಳಪಡಿಸಿ ವಿಂಡೋಸ್ ಎಕ್ಸ್-ಎಲ್ ಕಡತದಲ್ಲಿ ನಮೂದಿಸಲಾಯಿತು. ಹೀಗೆ ನಮೂದಿಸಿದ ದತ್ತಾಂಶಗಳನ್ನು ಕ್ರೂಡೀಕರಿಸಲು ಕೋಷ್ಟಗೀಕರಣ ಮತ್ತು ವರ್ಗೀಕರಣವನ್ನು ಮಾಡಲಾಯಿತು. ಸಂಗ್ರಹಿಸಿದ ಚಲಕಗಳ ಪರಿವರ್ತಕಗಳನ್ನು ವಿಶ್ಲೇಷಿಸಲು ಸಹಸಂಬಂಧವನ್ನು ಬಳಸಲಾಗಿದೆ. ಇದರೊಂದಿಗೆ ಸ್ತಂಭಲೇಖ, ರೇಖಲೇಖ ಮತ್ತು ಪೈ ಚಾರ್ಟ ಗ್ರಾಫ್‌ಗಳ ಅನ್ವಯಿಕೆ ಮುಖಾಂತರ ದತ್ತಾಂಶಗಳನ್ನು ವಿಶ್ಲೇಷಿಸಲಾಗಿದೆ.

ಅಧ್ಯಯನದ ಮಿತಿಗಳು (Limitations of the Study)

ಸಂಶೋಧನೆಯ ವಿಷಯಗಳು ನಿರ್ದಿಷ್ಟ ಕಾಲಾವದಿಯ ಮಿತಿಯನ್ನು ಹೊಂದಿರುವುದು ಸಹಜವಾದದ್ದು. ಈ ನಿಟ್ಟಿನಲ್ಲಿ ಸಂಶೋಧನೆಯ ಅಂಗವಾಗಿ ಕಂಡುಬಂದ ಅಧ್ಯಯನದ ಮಿತಿಗಳನ್ನು ನಮೂದಿಸಲಾಗಿದೆ.

೦೧. ಈ ಪ್ರಾಂತ್ಯದಲ್ಲಿ ಚದುರಿದ ವಸತಿ ವ್ಯವಸ್ಥೆಗಳಿರುವುದರಿಂದ ಅಧ್ಯಯನದಲ್ಲಿ ಕೆಲವು ಪ್ರದೇಶಗಳನ್ನು ಸಂಪರ್ಕಿಸಲು ಸಾಧ್ಯವಾಗಿಲ್ಲ.

೦೨. ಸ್ಥಳಾಂತರ ಪ್ರಕ್ರಿಯೆಗೆ ಕುಟುಂಬಗಳು ಒಳಪಟ್ಟಿದ್ದು, ಅಧ್ಯನಯನಕ್ಕೆ ಸಂಬಂಧಿಸಿದಂತೆ, ಮಹಿಳಾ ಮಾಹಿತಿದಾರರು ಸಕಾರಾತ್ಮಕವಾಗಿ ಸ್ಪಂದಿಸಿಲ್ಲ.

೦೩. ರಾಷ್ಟ್ರೀಯ ಉದ್ಯಾವನದ ಕೆಲವೆಡೆ ಸುತ್ತುಗಟ್ಟಿಗಳಿಗೆ ಭೇಟಿ ಮಾಡಲು ಪೂರಕವಾದ ಸಾರಿಗೆ ಸೌಲಭ್ಯಗಳು ದೊರೆಯದಿರುವುದರಿಂದ ಅಂತಹ ಪ್ರದೇಶಗಳ ನೈಜ ಚಿತ್ರಣ ತಿಳಿದುಕೊಳ್ಳಲು ಅವಕಾಶ ದೊರೆತಿಲ್ಲ.

೦೪. ರಾಷ್ಟ್ರೀಯ ಉದ್ಯಾನವನದಿಂದ ಒಕ್ಕಲೆದ್ದು ಬೇರೆಡೆಗೆ ಪುನರ್ವಸತೀಕರಣಗೊಂಡಿರುವ ಕೆಲ ಕುಟುಂಬಗಳು ಅಧ್ಯಯನಕ್ಕೆ ಅಲಭ್ಯವಾಗಿವೆ.

೦೫. ಅಧ್ಯಯನದಲ್ಲಿ ಒಕ್ಕಲೆದ್ದಂತಹ ಮರಾಠಿನಾಯ್ಕ ಸಮುದಾಯದವರು ಅತಿ ವಿರಳ ಮಾಹಿತಿದಾರರಾಗಿ ದೊರೆತಿದ್ದಾರೆ.

೦೬. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಪುನರ್ವಸತೀಕರಣ ಯೋಜನೆಯು ಸಂಪೂರ್ಣ ವ್ಯಕ್ತಿಯ ಇಲ್ಲವೆ ಕುಟುಂಬದ 'ಸ್ವ' ಇಚ್ಚೆಯ ವಿವೇಚನೆಗೆ ಒಳಪಟ್ಟಿದ್ದು, ದೇಶದಲ್ಲಿ ಹಾಗೂ ರಾಜ್ಯದ ಕೆಲವೆಡೆ ಯೋಜನಾಧಾರಿತವಾಗಿ ಪುನರ್ವಸತೀಕರಣ ಜಾರಿಯಾದ ರೀತಿಯಲ್ಲಿ ಅನುಷ್ಠಾನವಾಗಿಲ್ಲ.

೦೭. 'ಅರಣ್ಯವಾಸಿಗಳು' ಎಂಬ ಶಬ್ಧವನ್ನು ಬಳಸಿಕೊಂಡಿದ್ದು. ಇದರಲ್ಲಿ ಅರಣ್ಯವಾಸಿ ಎಂಬುದುನ್ನು ಯಾವ ಸಮುದಾಯವು ಅರಣ್ಯ ಪ್ರದೇಶಗಳಲ್ಲಿ ವಾಸಿಸಿಕೊಂಡು, ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿಕೊಂಡು, ಸಾಂಸ್ಕೃತಿಕವಾಗಿ ಭಿನ್ನವೆಂದು ತೋರ್ಪಡಿಸಲ್ಪಟ್ಟು ರಾಜ್ಯ ಸ್ಥಾಪಿತ

ಕಾನೂನಿನಡಿ ಬುಡಕಟ್ಟುಗಳೆಂದು ನಮೂದಿಸಲ್ಪಟ್ಟಿವೆಯೋ ಆ ಸಮುದಾಯವನ್ನು, ಹಾಗೂ ಕನಿಷ್ಠ ಮೂರು ತಲೆಮಾರುಗಳ ಜೀವನವನ್ನು ಅರಣ್ಯದಲ್ಲಿಯೇ ಕಳೆದು ಇಂದಿಗೂ ಅರಣ್ಯ ವ್ಯಾಪ್ತಿಯಲ್ಲಿಯೇ ಉಳಿದು ಅರಣ್ಯದ ಜಮೀನು ಇತರೆ ಉತ್ಪನ್ನಗಳನ್ನು ಆಧರಿಸಿ ಅವಲಂಬಿತವಾಗಿರುವ ಬುಡಕಟ್ಟು ಸಮುದಾಯಗಳನ್ನು ಹೊರತು ಪಡಿಸಿ ರಾಜ್ಯ ನಿರ್ದೇಶಿತ ಕಾನೂನಿನಡಿ ಗುರ್ತಿಸಲ್ಪಟ್ಟ ಇತರೆ ಸಮುದಾಯಗಳಾಗಿರುತ್ತವೆ. ಈ ಎರಡು ಅಂಶಗಳನ್ನು ಕ್ರೋಢೀಕರಿಸಿ 'ಅರಣ್ಯವಾಸಿಗಳು' ಎಂದು ಸಂಶೋಧನೆಯಲ್ಲಿ ಬಳಸಿಕೊಳ್ಳುತ್ತಿದ್ದೇನೆ.

ಅಧ್ಯಯನದ ವ್ಯಾಪ್ತಿ (Scope of the study)

ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವ ನಿಟ್ಟಿನಲ್ಲಿ ನಾವು ನೋಡಿದಾಗ ಅಧ್ಯಯನದ ವ್ಯಾಪ್ತಿ ವಿಶಾಲವಾಗಿರುತ್ತದೆಯಾದರೂ, ಅಧ್ಯಯನದ ಉದ್ದೇಶದಿಂದ ಕರ್ನಾಟಕದ ಚಿಕ್ಕಮಗಳೂರು, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ವ್ಯಾಪ್ತಿಯಲ್ಲಿ ವಿಸ್ತರಿಸಿರುವ ಕುದುರೆಮುಖ ರಾಷ್ಟ್ರೀಯ ಉದ್ಯಾನವನವಾಗಿದೆ. ಈ ವ್ಯಾಪ್ತಿಯಲ್ಲಿ ನೆಲೆಸಿರುವ ಆದಿವಾಸಿಗಳಾದ ಗೌಡ್ಲು, ಮಲೆಕುಡಿಯ, ಮರಾಠಿನಾಯ್ಕ ಹಾಗೂ ಇತರೆ ಅರಣ್ಯವಾಸಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಅದರೊಂದಿಗೆ ರಾಷ್ಟ್ರೀಯ ಉದ್ಯಾನವನ ಘೋಷಣೆಯಾದಾಗಿನಿಂದ ಪ್ರಸ್ತುತ ಅವಧಿಯಲ್ಲಿನ ಒಕ್ಕಲೆದ್ದಂತಹ ಪ್ರದೇಶಗಳ ಕುಟುಂಬಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

೩ ಅಧ್ಯಯನದ ಮಹತ್ವ (Importance of the study)

ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಹಲವಾರು ಯೋಜನೆಗಳು ಕಾಯ್ದೆಗಳಾಗಿ ಕಾನೂನುಗಳ ಕ್ರಮಕ್ಕೆ ಹೆಸರಾಗಿ ಜಾರಿಯಾಗಿವೆ. ಅವುಗಳಂತೆ ರಾಷ್ಟ್ರೀಯ ಮಟ್ಟದಲ್ಲಿ ೧೯೮೭ ರಲ್ಲಿ ಕರ್ನಾಟಕವು ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಮತ್ತು ೧೯೭೨ ವನ್ಯಜೀವಿ ಸಂರಕ್ಷಣ ಕಾಯ್ದೆಗಳನ್ನು ಪರಿಸರ ಮತ್ತು ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಅಳವಡಿಸುವ ಮೂಲಕ ಸ್ಥಳಾಂತರ ಮತ್ತು ಪುನರ್ವಸತೀಕರಣ ಕಾರ್ಯವನ್ನು ಚಲಾವಣೆಗೊಳಿಸಿದೆ. ಅಲ್ಲದೆ ಇದು ರಾಷ್ಟ್ರದ ಹಾಗೂ ರಾಜ್ಯದ ವಿವಿಧ ಸ್ಥಳಾಂತರ ಮತ್ತು ಪುನರ್ವಸತೀಕರಣ ಪ್ರಕ್ರಿಯೆಗಳಿಗೆ ಕಾರ್ಯವಾಗಿ ರೂಪುಗೊಂಡಿರುವುದರಿಂದ ಅಧ್ಯಯನಕ್ಕೆ ಮಹತ್ವವನ್ನು ಪಡೆದುಕೊಂಡಿದೆ.

೦೧. ಸ್ಥಳಾಂತರ ಮತ್ತು ಪುನರ್ವಸತೀಕರಣ ಕಾರ್ಯಗಳಲ್ಲಿ ಸರ್ಕಾರವು ಆದಿವಾಸಿಗಳ ಮತ್ತು ಇತರೆ ಸಮುದಾಯಗಳ ಮನ ಒಲಿಸುವಿಕೆಯ ಉದ್ದೇಶಗಳು ಎಷ್ಟರ ಮಟ್ಟಿಗೆ ಸಫಲತೆಯನ್ನು ಪಡೆದಿದೆ ಎಂಬುದನ್ನು ತಿಳಿಯುವ ಸಲುವಾಗಿ ಅಧ್ಯಯನ ಮಹತ್ವ ಪಡೆದಿದೆ.

೦೨. ರಾಷ್ಟ್ರೀಯ ಉದ್ಯಾನವನ ಘೋಷಣೆಯು ಆದಿವಾಸಿಗಳ ಮತ್ತು ಇತರೆ ಸಮುದಾಯದವರ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಮತ್ತು ಶೈಕ್ಷಣಿಕ ಅಂಶಗಳ ಮೇಲೆ ಪ್ರಭಾವ ಬೀರುವುದರಿಂದ ಈ ಸಂಶೋಧನಾ ಅಧ್ಯಯನವು ಮಹತ್ವಪೂರ್ಣವಾಗಿದೆ.

ಪರಿಸ್ಥಿಯಲ್ಲಿ ಆದಿವಾಸಿಗಳ ಹಾಗೂ ಅರಣ್ಯದ ಇತರೆ ವಾಸಿಗಳ ಹಕ್ಕು – ಸಂಘರ್ಷಣೆಗಳನ್ನು ಪ್ರಸ್ತುತದಲ್ಲಿ ಅಧ್ಯಯಿಸಲು ಪ್ರಸ್ತುತತೆಯನ್ನು ಹೊಂದಿದೆ.

ಪ್ರಸ್ತುತ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಕಾಲ ಕಾಲಕ್ಕೆ ತಿದ್ದುಪಡಿಗಳನ್ನು ಮಾಡಿ ಕಾಯ್ದೆ ಹಾಗೂ ಕಾನೂನುಗಳನ್ನು ರೂಪಿಸುವ ಉನ್ನತ ಅಧಿಕಾರವನ್ನು ಹೊಂದಿರುವ ಸರ್ಕಾರಕ್ಕೆ ಸವಾಲಾಗಿ ಮಾರ್ಪಟ್ಟಿರುವ ನಕ್ಸಲರ ಹೋರಾಟದ ನಡುವೆ ಈ ಸ್ಥಳಾಂತರ – ಪುನರ್ವಸತೀಕರಣದ ಪ್ರಕ್ರಿಯೆಗಳು ಆದಿವಾಸಿ ಹಾಗೂ ಇತರೆ ಅರಣ್ಯ ಸಮುದಾಯದವರನ್ನು ತಲುಪವಲ್ಲಿ ಆಗಿರುವ ಕೆಲಸಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸರ್ಕಾರದ ಯಾವುದೇ ಯೋಜನಾ ಕಾರ್ಯಕ್ರಮಗಳು ನಿರ್ದಿಷ್ಟಾವಧಿಯಲ್ಲಿ ಎಂದೂ ಪೂರ್ಣಗೊಂಡಿಲ್ಲ ಎಂಬುದು ಸರ್ವರವಾದ. ಈ ನಿಟ್ಟಿನಲ್ಲಿ ಸಂತ್ರಸ್ಥರು ತಮಗೆ ಅವಶ್ಯಕವಾದ ಮೂಲಭೂತ ಸೌಕರ್ಯಗಳನ್ನು (ವಸತಿ, ಆರೋಗ್ಯ ಸೌಲಭ್ಯ, ಶೈಕ್ಷಣಿಕ ಸೌಲಭ್ಯ, ಹಾಗೂ ಇತರೆಯವುಗಳು) ಪಡೆಯುವಲ್ಲಿ ತೆಗೆದುಕೊಂಡಿರುವ ಸಮಯ ಮತ್ತು ಮಾರ್ಗಗಳನ್ನು ಅಧ್ಯಯಿನಿಸಲು ಪ್ರಯತ್ನಿಸಲಾಗಿದೆ.

೫ ಇಲ್ಲಿಯವರೆಗೆ ನಡೆದ ಅಧ್ಯಯನಗಳ ಪರಾಮರ್ಶೆ (Litreature Review):

ಸಂಶೋಧನೆಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಆಕರಗಳು ಮೂಲಾಂಶಗಳಾದರೆ, ಅವುಗಳನ್ನು ವಿಷಯಕ್ಕೆ ಸಂಬಂಧಿಸಿದಂತೆ ಪೂರ್ಣವಾದ ಚೌಕಟ್ಟಿನಲ್ಲಿ ಬರಹ ರೂಪದಲ್ಲಿ ನಿರೂಪಿಸಿ ಇತರ ಸಂಶೋಧಕರಿಗೆ ಸಹಾಯವಾಗುವ ರೀತಿಯಲ್ಲಿ ಮಾರ್ಪಡಿಸಿದಾಗ ಅದು ದ್ವಿತೀಯ ಆಕರಗಳಾಗಿ ಮಾರ್ಪಡುತ್ತದೆ. ದ್ವಿತೀಯ ಆಕರಗಳಾಗಿ ಮಾರ್ಪಡುವುದು ನಿರ್ದಿಷ್ಟವಾದ ಸಾಹಿತ್ಯದ ರೂಪದಲ್ಲಿ ತಯರಾದಾಗ. ಸಾಹಿತ್ಯ ಆಕರಗಳು ಸಂಶೋಧಕನ ಸಂಶೋಧನೆಯು ನಿರ್ದಿಷ್ಟ ದಾರಿಯಲ್ಲಿ ಹಾಗೂ ಮುಂದಿನ ದಿನಗಳಲ್ಲಿ ಯಾವ ರೀತಿಯಾಗಿ ತನ್ನ ಸಂಶೋಧನಾ ವಿಷಯನವನ್ನು ಮಾರ್ಪಡಿಸಿಕೊಳ್ಳಬೇಕೆಂದು ವಿವರಿಸುತ್ತದೆ. ಅಂತೆಯೇ ನಮ್ಮ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಇದುವರೆಗಿನ ಅಧ್ಯಯನಗಳು ಪುಷ್ಠಿ ನೀಡುತ್ತದೆ.

ಅದರಂತೆ, ಸ್ಥಳಾಂತರ ಮತ್ತು ಪುನರ್ವಸತೀಕರಣ– ಸವಾಲು ಮತ್ತು ಸಾಧ್ಯತೆಗಳ ಬಗ್ಗೆ ತಿಳಿಯಲು ಕೆಳಕಂಡಂತಹ ಸಾಹಿತ್ಯಗಳು ಗಮನವನ್ನು ಕೇಂದ್ರೀಕರಿಸುತ್ತವೆ.

ಕೃತಿ ಕೆ. ಕಾರಂತ್‌ರವರು ನ್ಯಾಷಿನಲ್ ಸ್ಕೂಲ್ ಆಫ್ ಎನ್ವಿರಾನ್‌ಮೆಂಟ್ ಅಂಡ್ ಅರ್ಥ್ ಸೈನ್ಸ್ – ಡ್ಯೂಕ್ ಯುನಿವರ್ಸಿಟಿ ಗೆ ಸಲ್ಲಿಸಿರುವ ಮೇಕಿಂಗ್ ರೀಸೆಟಲ್ಮೆಂಟ್ ವರ್ಕ್ ಭಧ್ರಾ ಪ್ರಾಜೆಕ್ಟ್ ಎಂಬ ಶೀರ್ಷಿಕೆಯಡಿ, ಚಿಕ್ಕಮಗಳೂರು ಜಿಲ್ಲೆಯ ಭಧ್ರಾ ವನ್ಯಜೀವಿ ಸಂರಕ್ಷಣಾ ಯೋಜನೆಯಡಿ ಸ್ಥಳಾಂತರಗೊಂಡ ೧೧ ಹಳ್ಳಿಗಳನ್ನು ಕುರಿತು ನಾಲ್ಕು ವರ್ಷಗಳ ನಂತರ ಸ್ಥಳಾಂತರ ಮತ್ತು ಪುನರ್ವ್ಯವಸ್ಥೆಯ ಕುರಿತಂತೆ ಅಧ್ಯಾಯನ ನಡೆಸಿದ್ದಾರೆ. ಈ ಅಧ್ಯಯನದಲ್ಲಿ ೧೧ ಹಳ್ಳಿಗಳಿಂದ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಎಂ.ಸಿ ಹಳ್ಳಿ ಹಾಗೂ ಮೂಡಿಗೆರೆ ತಾಲೂಕಿನ

ಕೆಳಗೂರು ಗ್ರಾಮಗಳಿಗೆ ಸ್ಥಳಾಂತರಗೊಂಡ ಸಮುದಾಯಗಳ ಕುರಿತಂತೆ ಪುನರ್ವ್ಯವಸ್ಥಾ ಸೌಲಭ್ಯಗಳನ್ನು ಹಾಗೂ ಆರ್ಥಿಕ, ಶೈಕ್ಷಣಿಕ, ಆರೋಗ್ಯ ಮತ್ತು ಈ ಪ್ರಕ್ರಿಯೆಯಿಂದಾಗಿರುವ ಅನುಕೂಲಗಳ ಕುರಿತಂತೆ (ಸರ್ಕಾರ ಮತ್ತು ಇತರೆ ಸಂಸ್ಥೆಗಳ ಪಾತ್ರ) ವಿಷಯ ಅಧ್ಯಯನವನ್ನು ಮಾಡಿರುತ್ತಾರೆ.

ಸ್ವೆಮ್ ಸಂಸ್ಥೆಯು ಮೈಸೂರು ಜಿಲ್ಲೆಯ ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ನಡೆದ ಆದಿವಾಸಿಗಳ ಸ್ಥಳಾಂತರ ಮತ್ತು ಪುನರ್ವ್ಯವಸ್ಥೆಯ ಕುರಿತಂತೆ ಬಿ ಒ ಟಿ ಡಿ ಸಹಕಾರಯುತ ಯೋಜನೆಯೊಂದಿಗೆ ಸ್ಥಳಾಂತರ ಪ್ರಕ್ರಿಯೆಗೆ ಒಳಗಾಗಿರುವ ಆದಿವಾಸಿಗಳ ಕುಟುಂಬಗಳ ಕುರಿತಂತೆ ಹಾಗೂ ಈ ಯೋಜನೆಯಡಿಯಲ್ಲಿ ಸ್ಥಳಾಂತರಗೊಂಡ ಆದಿವಾಸಿ ಸಮುದಾಯಗಳಾದ ಎರವ, ಜೇನುಕುರುಬ ಮತ್ತು ಕಾಡು ಕುರುಬ ಸಮುದಾಯಗಳನ್ನು ಅನುಲಕ್ಷಿಸಿ ಅಧ್ಯಯನ ಮಾಡಿದ್ದಾರೆ. ಈ ವರದಿಯಲ್ಲಿ ಸ್ಥಳಾಂತರಗೊಂಡ ೧,೦೭೩ ಆದಿವಾಸಿಗಳ ಕುಟುಂಬಗಳನ್ನು ಅಧ್ಯಯನಕ್ಕೊಳಪಡಿಸಿ ಪರಿಸರ ಮತ್ತು ಅರಣ್ಯ ಇಲಾಖೆಗಳಿಂದ ದೊರೆಯಬೇಕಿದ್ದ ಸಂಚಿತ ನಿಧಿಗಳು ನಿಲ್ಲಿಸಿರುವ ಹಾಗೂ ಅದಕ್ಕೆ ಹಣಕಾಸು ಇಲಾಖೆಯಿಂದ ಆಗಿರುವ ಆಕ್ಷೇಪಣೆಗಳ ಬಗ್ಗೆ ಅವಲೋಕಿಸಲಾಗಿದೆ. ಮುಂದುವರೆದಂತೆ, ಸರ್ಕಾರ ಸೌಲಭ್ಯಗಳ ಕುರಿತಂತೆ ಆದಿವಾಸಿಗಳ ಅತೃಪ್ತಿ ಅಭಿಪ್ರಾಯಗಳನ್ನು ತಿಳಿಸಿದ್ದಾರೆ.

ಕೆ. ಉಲ್ಲಾಸ್ ಕಾರಂತ್ ಮತ್ತು ಕೃತಿ ಕೆ. ಕಾರಂತ್ ಡ್ಯೂಕ್ ವಿಶ್ವವಿದ್ಯಾಲಯದ ಡಾಕ್ಟರೇಟ್ ಕಾರ್ಯಕ್ರಮದಡಿಯಲ್ಲಿ ಫ್ರೀ ಟು ಮೂವ್: ಕನ್‌ಸರ್ವೇಶನ್ ಅಂಡ್ ವಾಲೆಂಟರಿ ರೀಸೆಟಲ್ಮೆಂಟ್ ಇನ್ ವೆಸ್ಟ್ರನ್ ಘಾಟ್ಸ್ ಆಫ್ ಕರ್ನಾಟಕ, ಇಂಡಿಯಾ ಎಂಬ ವಿಷಯವಾಗಿ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ, ಭದ್ರಾ ವನ್ಯಜೀವಿ ಅಭಯಾರಣ್ಯ ಮತ್ತು ಕುದುರೆಮುಖ ರಾಷ್ಟ್ರೀಯ ಉದ್ಯಾನವನಗಳ ಕುರಿತಾಗಿ ಅಲ್ಲಿರುವ ಪ್ರಾಣಿ ಮತ್ತು ಸಸ್ಯಗಳ ಕುರಿತಾಗಿ ಪರಿಸರ ಅಧ್ಯಯನ ನಡೆಸಿದ್ದಾರೆ. ಆ ಕುರಿತಂತೆ ಹುಲಿ ರಕ್ಷಿತಾರಣ್ಯ ಹಾಗೂ ಪುನರ್ವ್ಯವಸ್ಥೆಯ (ಮಾನವ ಸಾಮಾಜಿಕ) ಕುರಿತಂತೆ ಕೆಲವು ಅಂಶಗಳಲ್ಲಿ ಉಲ್ಲೇಖಿಸಿದ್ದಾರೆ.

೦೧. ನಾಗರಹೊಳೆ ಉದ್ಯಾನವನ ಹಾಗೂ ಭದ್ರಾ ಅಭಯಾರಣ್ಯಗಳಲ್ಲಿ ಆಗಿರುವ ಪುನರ್ವ್ಯವಸ್ಥೆಗಳನ್ನು ಕುರಿತಂತೆ ಕಾಲ ಕಾಲಕ್ಕೆ ಸರ್ಕಾರದ ವತಿಯಿಂದ ದೊರೆತಿರುವ ಸೌಲಭ್ಯಗಳ (ಯೋಜನೆಗಳು) ಕುರಿತು ವಿಶ್ಲೇಷಣೆ ನೀಡಿದ್ದಾರೆ.
೦೨. ಪುನರ್ವ್ಯವಸ್ಥೆಯ ನಂತರದ ಪರಿಸ್ಥಿತಿಗಳನ್ನು ತಿಳಿಯಲು ತುಲನಾತ್ಮಕವಾಗಿ ಅಧ್ಯಯಿಸಿ ಸರ್ಕಾರೇತರ ಸಂಸ್ಥೆಗಳ ಪಾತ್ರಗಳನ್ನು ತಿಳಿಸಿಕೊಟ್ಟಿದ್ದಾರೆ.
೦೩. ಪುನರ್ವ್ಯವಸ್ಥಾ ಫಲನುಭವಿಗಳ ಆಸಕ್ತಿ ಮತ್ತು ಅವರಿಗೆ ನಿತ್ಯ ಜೀವನಕ್ಕೆ ಅವಶ್ಯವಾದ ವಸ್ತುಗಳನ್ನು ಪಡೆಯಲು (ಶೈಕ್ಷಣಿಕ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ) ಸ್ಥಳಾಂತರ ಮತ್ತು ಪುನರ್ವ್ಯವಸ್ಥಾ ಸ್ಥಳಗಳ ಅಧ್ಯಯನವನ್ನು ಕೈಗೊಂಡಿದ್ದಾರೆ.
೦೪. ಕುದುರೆಮುಖ ರಾಷ್ಟ್ರೀಯ ಉದ್ಯಾನವನಕ್ಕೆ ಸಂಬಂಧಿಸಿದಂತೆ ಅವರ ಅಧ್ಯಯನದಲ್ಲಿ ಅಭಯಾರಣ್ಯಗಳ ಸಂರಕ್ಷಣೆಗೆ ಸ್ವಯಂ ಪ್ರೇರಿತ ಪುನರ್ವ್ಯವಸ್ಥಾಗೆ ಉತ್ತೇಜನ ನೀಡಿರುವಂತೆ

ಹಾಗೂ ಸ್ಥಳೀಯ ಸರ್ಕಾರೇತರ ಸಂಸ್ಥೆಗಳ ಮುಖಾಂತರ ಪುನರ್ವ್ಯವಸ್ಥೆಗೆ ಇಂಬು ನೀಡಿದ್ದಾರೆಂದು ತಿಳಿಸಿದ್ದಾರೆ. ಹಾಗೆಯೇ ಕೆಲವು ಕುಟುಂಬಗಳು ಸ್ವಯಂ ಪ್ರೇರಿತವಾಗಿ ಸರ್ಕಾರೇತರ ಸಂಸ್ಥೆ (ಕುದುರೆಮುಖ ವೈಲ್ಡ್ ಲೈಫ್ ಫೌಂಡೇಶನ್) ಮುಖಾಂತರ ಸ್ಥಳಾಂತರ ಹೊಂದಿದ್ದಾರೆಂದು ಈ ಸಂದರ್ಭದಲ್ಲಿ ಅಲ್ಲಿಯ ಕೆಲವು ಕುಟುಂಬಗಳು ಈ ಪ್ರಕ್ರಿಯೆಯನ್ನು ವಿರೋಧಿಸಿದ್ದಾರೆಂದು ವಿವರಿಸಿದ್ದಾರೆ.

ಅಜಿತ್ ಮೆನನ್ (೨೦೦೭) ಇವರು Engaging with the Law on Adivasi Rights ಎಂಬ ಲೇಖನದಲ್ಲಿ ಭಾರತದ ಸಂವಿಧಾನದಲ್ಲಿ ಆದಿವಾಸಿಗಳ ಸಂರಕ್ಷಣೆಗಾಗಿ ಇರುವ ಅವಕಾಶಗಳು, ಆದಿವಾಸಿಗಳ ಸಂರಕ್ಷಣೆಗೆ ಮತ್ತು ಅವರ ಹಕ್ಕುಗಳಿಗಾಗಿ ರಚಿಸಲ್ಪಟ್ಟ ಕಾಯಿದೆಗಳು ಹಾಗೂ ಇತರೆ ಕಾಯಿದೆಗಳಲ್ಲಿ ಆದಿವಾಸಿಗಳಿಗೆ ಕೊಡಮಾಡಲಾಗಿರುವ ಮಾನ್ಯತೆಗಳನ್ನು ಕುರಿತು ಹೇಳಿದ್ದಾರೆ.

ಗೀತಾಂಜಯ್ ಸಾಹು (೨೦೦೮) ಇವರು Mining in the Niyamgiri Hills and Tribal Rights ಎಂಬ ಲೇಖನದಲ್ಲಿ ಒರಿಸ್ಸಾ ಸರ್ಕಾರವು ಬಾಕ್ಸೈಟ್ ಗಣಿಗಾರಿಕೆಗೆ ಅನುವು ಮಾಡಿಕೊಟ್ಟಿದ್ದರಿಂದ, ಅಲ್ಲಿನ ಮೂಲನಿವಾಸಿಗಳಾದ ದೋಗ್ರಾ ಬುಡಕಟ್ಟಿನ ದೈನಂದಿನ ಬದುಕಿನ ಮೇಲೆ ಯಾವ ರೀತಿಯ ಪರಿಣಾಮ ಬೀರಿದೆ. ಮತ್ತು ಪರಿಸರ ಹೇಗೆ ನಾಶವಾಗುತ್ತಿದೆ. ಇತ್ಯಾದಿ ಅಂಶಗಳನ್ನು ದಾಖಲಿಸಲಾಗಿದೆ. ಈ ಎಲ್ಲಾ ಅಂಶಗಳು ಆದಿವಾಸಿಗಳಿಗೆ ಗಣಿಗಾರಿಕೆಯಿಂದ ಯಾವ ರೀತಿಯ ತೊಂದರೆ ಉಂಟಾಗುತ್ತದೆ. ಮತ್ತು ಬಂಡವಾಳಶಾಹಿಗಳು ಹೇಗೆ ಆದಿವಾಸಿಗಳ ಅನ್ನಕ್ಕೆ ಕಲ್ಲಾಕ್ಕಿದ್ದಾರೆ ಎಂಬುದನ್ನು ಅರಿಯಬಹುದಾಗಿದೆ.

ಅಸ್ಮಿತ ಕಬ್ರ (೧೯೯೭) ರವರು Displacement and Rehabilitation of an Adivasi Settlement: Case of Kuno Wildlife Sanctuary, Madhya Pradesh ಈ ಲೇಖನದಲ್ಲಿ 'ಆದಿವಾಸಿಗಳನ್ನು ಸ್ಥಳಾಂತರಿಸಿದಾಗ ಅವರ ಪುನರ್ವಸತಿ ಹೇಗಿರಬೇಕು, ಸರಿಯಾದ ಪುನರ್ವಸತಿ ಮಾಡದಿದ್ದರೆ ಆದಿವಾಸಿಗಳ ಜೀವನೋಪಾಯದ ಮೇಲೆ ಯಾವ ರೀತಿ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂಬುದನ್ನು ದಾಖಲಿಸಿದ್ದಾರೆ. ಇದು ಅಧ್ಯಯನಕಾರರಿಗೆ ಪುನರ್ವಸತಿ ಕಾಲೋನಿಗಳ ಜನರ ಬದುಕು ಮತ್ತು ಬವಣೆಗಳನ್ನು ಅರಿಯಲು ಸಹಕಾರಿಯಾಗಿದೆ. ಪುನರ್ವಸತಿಗೊಂಡ ಆದಿವಾಸಿಗಳು ತುತ್ತಿನ ಚೀಲದ ಮೂಲವೇ ತುಂಡರಿಸಲ್ಪಟ್ಟಾಗ ಕೇವಲ ಆರ್ಥಿಕವಾಗಿಯಲ್ಲದೆ, ಭಾವನಾತ್ಮಕ ಮತ್ತು ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಅನುಭವಿಸುವ ನೋವುಗಳಿಗೆ ಸಹಾನುಭೂತಿಯಿಂದ ಸ್ಪಂದಿಸಲು ಮತ್ತು ರಚನಾತ್ಮಕವಾಗಿ ಆಲೋಚಿಸಿ ಸಲಹೆ-ಸೂಚನೆಗಳನ್ನು ಕಂಡುಕೊಳ್ಳುವಲ್ಲಿ ಪರಿಣಾಮಕಾರಿಯಾಗಿದೆ.

ಮುಜ಼ಾಫರ್ ಅಸ್ಸಾದಿ (೨೦೧೧) ಇವರ 'ಬುಡಕಟ್ಟು ಜನಾಂಗದ ಅತಂತ್ರ ಸ್ಥಳಾಂತರ' ಈ ಲೇಖನದಲ್ಲಿ ಬುಡಕಟ್ಟು ಜನರನ್ನು ಯಾವ ಯಾವ ಉದ್ದೇಶಗಳಿಗೆ ಸ್ಥಳಾಂತರಿಸುತ್ತಾರೆ. ಇಲ್ಲಿ ಒಂದೊಂದು ಬುಡಕಟ್ಟು ನೆಲೆಗಳನ್ನು ಏಳೆಂಟು ಬಾರಿ ಸ್ಥಳಾಂತರಿಸಿರುವ ಉದಾಹರಣೆಗಳನ್ನು

ಶ್ರೀಯುತರಾದ ಮಾಧವ ಗಾಡ್ಗೀಳ್ ಅವರು ಪಶ್ಚಿಮ ಘಟ್ಟ ಪ್ರದೇಶಗಳನ್ನು ಗಮನದಲ್ಲಿರಿಸಿಕೊಂಡು ಅಲ್ಲಿನ ಬೆಟ್ಟ ಪ್ರದೇಶಗಳು, ಅರಣ್ಯ ಹಾಗೂ ಅಣೆಕಟ್ಟು ಪ್ರದೇಶಗಳ ಪ್ರಸ್ತುತ ಬೆಳವಣಿಗೆಗಳನ್ನು ಅಧ್ಯಯಿಸಿ ಆ ಸ್ಥಳಗಳಲ್ಲಾಗಿರುವ ಪಲ್ಲಟಗಳನ್ನು ಕುರಿತಂತೆ ತಾತ್ವಿಕ ಅಂಶಗಳನ್ನು ಉತ್ತಮ ಉದಾಹರಣೆಗಳನ್ನು ನೀಡುವುದರೊಂದಿಗೆ ಸ್ಥಳ ಪರಿಶೀಲನೆ ಮತ್ತು ನಿಸರ್ಗದ ಸ್ಥಿತಿಯಲ್ಲಿ ಅಗಿರುವ ಬದಲಾವಣೆಗಳು ಎಷ್ಟರ ಮಟ್ಟಿಗೆ ಮಾನವನಿಗೆ ಹಾಗೂ ನಿಸರ್ಗಕ್ಕೆ ಅನುಕೂಲ ಹಾಗೂ ಅನಾನುಕೂಲಗಳನ್ನು ಒಡ್ಡಿವೆ ಮತ್ತು ಮುಂದಿನ ಪೀಳಿಗೆಯ ಅವಧಿಯಲ್ಲಿ ಯಾವ ಕೊರತೆಗಳನ್ನು ಆ ಸ್ಥಳಗಳು ಎದುರಿಸುತ್ತವೆ ಎಂಬುದನ್ನು ವಿವರಿಸಿದ್ದಾರೆ.

ಡಿಸ್‌ಪ್ಲೇಸ್‌ಮೆಂಟ್, ರೀಸೆಟಲ್‌ಮೆಂಟ್, ರಿಹ್ಯಾಬಿಲಿಟೇಶನ್, ರೆಪ್‌ರೇಷನ್ ಅಂಡ್ ಡೆವೆಲಪ್‌ಮೆಂಟ್, ನವಂಬರ್ ೨೦೦೦, ಹರ್ಷ ಮಂದೇರ (ಭಾ ಆ ಸೇ) ಮತ್ತು ವಿಜಯ ಕುಮಾರ ನಾಗರಾಜ್, ಫ್ರೀಲೈನ್ಸ್ ರಿಸರ್ಚರ್, ಇಂಡಿಯಾ ಅವರು ವರ್ಲ್ಡ್ ಕಮಿಷನ್ ಆನ್ ಡ್ಯಾಮ್‌ನ ಸೋಷಿಯಲ್ ಇಶ್ಯೂವಿನಲ್ಲಿ ಸ್ಥಳಾಂತರ, ಪುನರ್ವಸತೀಕರಣ, ಪುರ್ನವ್ಯವಸ್ಥೆ ಮತ್ತು ಅಭಿವೃದ್ಧಿ ಕುರಿತಂತೆ ವಿಷಯವನ್ನು ಮಂಡಿಸಿದ್ದಾರೆ. ಈ ದಾಖಲೆಯ ಮುಖಾಂತರ ವಿವಿಧ ರಾಷ್ಟ್ರಗಳಲ್ಲಿ ಸ್ಥಳಾಂತರಗೊಂಡು ಪುನರ್ವಸತೀಕರಣಕ್ಕೆ ಒಳಪಟ್ಟಿರುವ ಹಲವಾರು ವಿಷಯ ಸಂಗತಿಗಳನ್ನು (ಕೇಸ್ ಸ್ಟಡೀಸ್) ಪ್ರಸ್ತಾಪಿಸಿದ್ದಾರೆ. ಆ ಮೂಲಕ ಸ್ಥಳಾಂತರವು ಸ್ವಯಂಪ್ರೇರಿತವಲ್ಲದ ಮತ್ತು ಒತ್ತಡದಿಂದ ಜನರ ಮೇಲೆ ಏರಲ್ಪಡುವ ಹಾಗೂ ನಕಾರಾತ್ಮಕ ಪರಿಣಾಮಗಳನ್ನು ಬೀರುವ ಪರಿಸ್ಥಿತಿಯಾಗಿದೆ. ವಿಶ್ವದಾದ್ಯಂತದ ಅಧ್ಯಯನದ ಪ್ರಕಾರ ವಾರ್ಷಿಕವಾಗಿ ೪೦–೮೦ ಮಿಲಿಯನ್ ಜನರು ಈ ಪ್ರಕ್ರಿಯೆಗೆ ಒಳಪಡುತ್ತಿದ್ದಾರೆ. ವಿಶ್ವ ಬ್ಯಾಂಕ್ ಅಧ್ಯಯನದ ಪ್ರಕಾರ ಬೃಹತ್ ಯೋಜನೆಗಳು ಮತ್ತು ಅಣೆಕಟ್ಟುಗಳ ನಿರ್ಮಾಣದ ಮುಖಾಂತರ (೧೯೨ ಪ್ರಾಜೆಕಟ್ಸ) ೧೯೮೬–೯೩ರ ಅವಧಿಯಲ್ಲಿ ೩೦೦ ಅಣೆಕಟ್ಟು ನಿರ್ಮಾಣಕ್ಕೆ ೪ ಮಿಲಿಯನ್ ಜನರು ಸ್ಥಳಾಂತರ ಪ್ರಕ್ರಿಯೆಗೆ ಒಳಪಟ್ಟಿದ್ದಾರೆ ಎಂದು ದೃಢೀಕರಿಸಿದೆ. ಭಾರತದಲ್ಲಿ (೨೦೦೦ರ ಭಾರತ ರಾಷ್ಟ್ರ ಅಧಯನ) ವಾರ್ಷಿಕವಾಗಿ ೨೧–೪೨ ಮಿಲಿಯನ್ ಜನರು ಬೃಹತ್ ಯೋಜನೆಗಳು ಮತ್ತು ಅಣೆಕಟ್ಟು ನಿರ್ಮಾಣದಿಂದಾಗಿ ಸ್ಥಳಾಂತರಕ್ಕೆ ಒಳಪಟ್ಟಿದ್ದಾರೆಂದು ಅಂದಾಜಿಸಲಾಗಿದೆ.

ಸ್ಥಳಾಂತರ, ಪುನರ್ವಸತೀಕರಣ ಮತ್ತು ಪುನರ್ವ್ಯವಸ್ಥೆಯ ವಿಷಯಗಳಲ್ಲಿ ಮಾನವ ಹಕ್ಕುಗಳು, ಸರ್ಕಾರ ಮತ್ತು ಸರ್ಕಾರದ ಜವಾಬ್ದಾರಿ, ಅಭಿವೃದ್ಧಿ ಇಲ್ಲವೇ ಬೆಳವಣಿಗೆಯಲ್ಲಿ ಭಾಗವಹಿಸುವಿಕೆ ಮತ್ತು ಸ್ವ ಅರಿವು, ಸಂಕೀರ್ಣವಾದ ಪುನರ್ವಸತೀಕರಣದ ಗುರಿಗಳು, ಅವಕಾಶ ಮತ್ತು ಕಾರ್ಯತಂತ್ರಗಳು, ಕಾನೂನು – ನಿಯಮಗಳ ವಿಷಯಗಳು ಅಡಕವಾಗಿರುತ್ತವೆ.

ಡಾ. ಎ.ಎಸ್. ಪ್ರಭಾಕರ ಅವರು ಸಂಪಾದಿಸಿರುವ ಆದಿವಾಸಿ ಆಖ್ಯಾನ ಸಮುದಾಯಗಳ ಅಧ್ಯಯನಕ್ಕೊಂದು ಆಕರ, ಎಂಬ ಈ ಬೃಹತ್ ಗ್ರಂಥ ಬುಡಕಟ್ಟುಗಳ ಅನನ್ಯಲೋಕಕ್ಕೆ ಪ್ರವೇಶಿಸುವವರಿಗೆ ಒಂದು ಸರಳವಾದ ಆಕರ ಗ್ರಂಥವಾಗಿದೆ. ಬುಡಕಟ್ಟಿನ ವಿವಿಧ ಆಯಾಮಗಳನ್ನು ಸರಳವಾಗಿ ಪರಿಚಯಿಸುವ ಪ್ರಸಿದ್ಧ ಲೇಖಕರ ಲೇಖನಗಳನ್ನೊಳಗೊಂಡಿರುವ ಈ ಪುಸ್ತಕ, ಕನ್ನಡದ ಆಕರಗ್ರಂಥಗಳ ಕೊರತೆಯನ್ನು ಸಮರ್ಥವಾಗಿ ತುಂಬುತ್ತದೆ.

ಡಾ॥ ಎ. ರಾಮೇಗೌಡ, ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ದ್ರಾಕ್ಷಾಯಿಣಮ್ಮ ಅವರು ಸಲ್ಲಿಸಿರುವ ಮಲೆಕುಡಿಯ ಮಹಿಳೆಯರ: ಸಮಾಜಶಾಸ್ತ್ರೀಯ ಅಧ್ಯಯನ ಪತ್ರಿಕೆಯನ್ನು ಪರಾಮರ್ಶಿಸಲಾಗಿದೆ. ಈ ಪತ್ರಿಕೆಯಲ್ಲಿ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ, ಬೆಳ್ತಂಗಡಿ, ಮಂಗಳೂರು, ಪುತ್ತೂರು ಮತ್ತು ಸುಳ್ಯಾ ಎಂಬ ೫ ತಾಲ್ಲೂಕುಗಳನ್ನು ಒಳಗೊಂಡಿದ್ದು, ಈ ಅಧ್ಯಯನದಲ್ಲಿ ಬೆಳ್ತಂಗಡಿ ತಾಲೂಕಿನ ನೆರೆಯಾ, ದಿಡುಪೆ, ಚಾರ್ಮುಡಿಯ ಕಕ್ಕಿಂಜೆ, ಶಿಶಿಲ, ನಾರಾವಿ, ಬಳ್ಳಮಂಜ, ಅಡಿಂಜೆ ಮತ್ತು ಅಮಾಂಜಲ ಪ್ರದೇಶಗಳಲ್ಲಿ ವಾಸವಿರುವ ಮಲೆಕುಡಿಯ ಮಹಿಳೆಯರ ಸ್ಥಿತಿಯನ್ನು ಪ್ರಸ್ತಾಪಿಸಿದ್ದಾರೆ.

ಜೋಹಿತ ಘೋಷ್, ೨೦೧೫ ಪುನರ್ವಸತೀಕರಣ ಕರಡು ಮಸೂದೆ, ಪಿ ಆರ್ ಎಸ್ ಲೆಜಿಸ್ಲೇಟಿವ್ ರಿಸರ್ಚ, ೨೪ ಫೆಬ್ರವರಿ ೨೦೧೫: ಎಲ್ ಎ ಆರ್ ಆರ್ ೨೦೧೩ (ಭೂಸ್ವಾಧಿನ, ಪುನರ್ವಸತೀಕರಣ ಮತ್ತು ಪುರ್ನವ್ಯವಸ್ಥೆ ೨೦೧೩ರ ಕರಡು ಮಸೂದೆ ತಿದ್ದುಪಡಿಯನ್ನು ಗ್ರಾಮೀಣಾಭಿವೃದ್ಧಿ ಮಂತ್ರಿ ಶ್ರೀ ಬರೀಂದರ್ ಸಿಂಗ್ ಅವರು ೨೪ ಫೆಬ್ರವರಿ ೨೦೧೫ ರಂದು ಲೋಕಸಭೆಯಲ್ಲಿ ಮಂಡಿಸಿದರು. ಈ ಮಸೂದೆಯಲ್ಲಿ ಸಾರ್ವಜನಿಕ ಹಿತಾಸಕ್ತಿಗಾಗಿ ಭೂಸ್ವಾಧೀನತೆ ಪ್ರಕ್ರಿಯೆಯನ್ನು ನಡೆಸಿದಾಗ ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಬದಲಾವಣೆಯ ಅಂಶಗಳನ್ನು ಮಂಡಿಸಲಾಗಿದೆ.

RAC, Research & Analysis Consultants, 216/A, Sahid Nagar, Bhubaneswar, Odisha. Socio-Economic Survey on Resettlement and Rehabilitation of Project Displaced & Affected Families of Village Raijharan in Angul District: ಓರಿಸ್ಸಾ ರಾಜ್ಯದ ಅಂಗುಲ್ ಜಿಲ್ಲೆಯ ಆರು ತಾಲ್ಲೂಕುಗಳನ್ನು ಪರಿಗಣಿಸಿ ಸ್ಥಳಾಂತರ ಮತ್ತು ಪುನರ್ವಸತೀಕರಣ ಹಾಗೂ ಪುರ್ನವ್ಯವಸ್ಥೆ ಕುರಿತಂತೆ ಅಧ್ಯಯನ ನಡೆಸಲಾಗಿದೆ. ಎಂ.ಇ.ಎಲ್ ಕಾರ್ಖಾನೆ ಮುಖೇನ ಅಂಗುಲ ಜಿಲ್ಲೆಯ ಆರು ತಾಲ್ಲೂಕುಗಳು ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಗಾಗಿ ರಾಯಿಜ ನಗರ ಎಂಬ ಹಳ್ಳಿಯಲ್ಲಿನ ಸಮುದಾಯದ ಜನರನ್ನು ಹಾಗೂ ಅವರ ಆಸ್ತಿಗಳನ್ನು ಯೋಜನೆಗಾಗಿ ಭೂ ಸ್ವಾಧಿನ ಪಡಿಸಿಕೊಳ್ಳಲು ಸರ್ಕಾರದಿಂದ ಅನುಮತಿ ದೊರೆತಿದೆ. ಇದರ ಅನ್ವಯ ಸ್ಥಳಾಂತರ ಮತ್ತು ಪುನರ್ವಸತೀಕರಣ ಪ್ರಕ್ರಿಯಗೆ ಒಳಗಾದ ಸಮುದಾಯದವರ ಕುರಿತು ಸಾಮಾಜಿಕ-ಆರ್ಥಿಕ ಸ್ಥಿತಿಯನ್ನು ವಿಶ್ಲೇಷಿಸಲಾಗಿದೆ.

ಓರಿಸ್ಸಾ ಸರ್ಕಾರ, ಕಂದಾಯ ಮತ್ತು ವಿಪತ್ತು ನಿರ್ವಹಣಾ ಇಲಾಖೆ, ೨೪ ಎಪ್ರಿಲ್ ೨೦೦೮, ಮಾರ್ಗದರ್ಶನ ಸೂಚಿಗಳು, ಸ್ಥಳಾಂತರ ಮತ್ತು ಪುನರ್ವಸತೀಕರಣಗೊಂಡ ಸಮುದಾಯಗಳನ್ನು ಆಧರಿಸಿ:- ಭಾರತ ದೇಶದ ಓರಿಸ್ಸಾ ರಾಜ್ಯದಲ್ಲಿ ಹಲವಾರು ಕಾರ್ಖಾನೆಗಳು ಗಣಿಗಾರಿಕೆ ನಿಟ್ಟಿನಲ್ಲಿ ಸಮುದಾಯಗಳು ವಾಸಿಸುವ ಮತ್ತು ಕೃಷಿ ಕೇಂದ್ರಿತವಾದ ಗ್ರಾಮಗಳ ಜನ ಸಮುದಾಯ ಮತ್ತು ಅವರ ಚರ-ಸ್ಥಿರಾಸ್ತಿಗಳನ್ನು ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಕೇಂದ್ರಿಕರಿಸಿವೆ. ಈ ಅಂಶದಿಂದಾಗಿ ಬೃಹತ್ ಮಾನವ ಪಡೆಯು ಆ ಸ್ಥಳಗಳಿಂದ ತಮ್ಮ ಆವಾಸ ಸ್ಥಾನಗಳನ್ನು ಅನಿವಾರ್ಯವಾಗಿ ಸ್ಥಳಾಂತರಿಸ ಬೇಕಾದ ಪ್ರಸಂಗಗಳು ಬಂದು ಒದಗಿವೆ. ಈ

ನಿಟ್ಟಿನಲ್ಲಿ ಸ್ಥಳೀಯ ಜನ ಸಮುದಾಯಗಳ ನಿಲುವುಗಳನ್ನು ಯೋಜನೆಯ ಅನುಷ್ಠಾನಗೊಳಿಸುವುದಕ್ಕಾಗಿ ಇತರೆ ಸಂಘ ಸಂಸ್ಥೆಗಳಿಂದ ಸಮೀಕ್ಷೆ ನಡೆಸಿ ಅವುಗಳು ಕೋರ್ಟ್‌ಗಳ ಮುಖಾಂತರ ಊರ್ಜಿತವಾಗದ ಸಂದರ್ಭದಲ್ಲಿ, ಸರ್ಕಾರವೇ ನೇರವಾಗಿ ಪುನರ್ವಸತೀಕರಣ ಕುರಿತಂತೆ ಸ್ಥಳೀಯರ ನಿಲುವುಗಳನ್ನು ಪಡೆಯಲು ಸರ್ಕಾರದಿಂದ ರಚಿತವಾದ ಪ್ರಶ್ನಾ ಮಾಲಿಕೆಯನ್ನು ಹಾಗೂ ಸಮೀಕ್ಷೆ ನಡೆಸುವ ಸಿಬ್ಬಂದಿ ವರ್ಗದವರನ್ನು ಪರಿಗಣಿಸಿ ನೀಡಿರುವ ತರಬೇತಿಯ ಕುರಿತು ಈ ವರದಿಯಲ್ಲಿ ತಿಳಿದುಬಂದಿದೆ. ಈ ವರದಿಯು ನಮಗೆ ಪ್ರಶ್ನಾಮಾಲಿಕೆಯನ್ನು ತಯಾರು ಮಾಡುವಲ್ಲಿ ಹೆಚ್ಚಿನ ಮಾರ್ಗದರ್ಶನವನ್ನು ನೀಡಿದೆ.

ಕಲ್ಕುಳಿ ವಿಠಲ್ ಹೆಗ್ಡೆ ಅವರ ಕಾಡು ಕಿರುಕುಳ ಗ್ರಂಥದಲ್ಲಿ ಜಾಗತೀಕರಣದ ಫಲವಾಗಿ ಕಾಡಿನ ನಡುವೆ ಅನುಕೂಲವಾಗಿ ಒಂದಿಷ್ಟು ಕೃಷಿ ಮಾಡಿಕೊಂಡು ನೆಮ್ಮದಿಯಿಂದ ಬದುಕುತ್ತಿದ್ದವರನ್ನು ಕುದುರೆಮುಖ ಗಣಿಗಾರಿಕೆ, ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಘೋಷಣೆಯ ಹಲವು ಸಮಸ್ಯೆಗಳು ಹೇಗೆ ಸ್ಥಳೀಯರನ್ನು ಗೊಂದಲಮಯ ಪರಿಸ್ಥಿತಿಯಲ್ಲಿ ಸಿಲುಕಿಸಿದೆ ಎಂಬ ಅಂಶಗಳನ್ನು ತಿಳಿಯಲು ಸಾಕಷ್ಟು ನೈಜ ಸನ್ನಿವೇಶಗಳಾಧಾರಿತವಾಗಿ ರಚಿಸಿದ್ದಾರೆ. ಈ ಗ್ರಂಥದಿಂದ ಗಣಿಗಾರಿಕೆ ಹಾಗೂ ರಾಷ್ಟ್ರೀಯ ಉದ್ಯಾನವನದ ಹಿಂದೆ ಇರುವ ಅನೇಕ ಹೋರಾಟಗಾರರ ಶ್ರಮ ಹಾಗೂ ಪ್ರತಿಭಟನೆಗಳನ್ನು ಅರಿಯಲು ನಮಗೆ ಸಹಾಯವಾಗುವುದು.

ಡಾ. ನಿ. ಮುರಾರಿ ಬಲ್ಲಾಳ್ ಅವರ ಸಂಪಾದಕೀಯದ 'ಯಾರದೋ ಮುಖ... ಯಾರದೋ ದೇಹ, ಕುದುರೆಮುಖ' ದಲ್ಲಿ ಕುದುರೆಮುಖ ಗಣಿಗಾರಿಕೆ ಮತ್ತು ಆ ಗಣಿಗಾರಿಕೆಯಿಂದ ಸ್ಥಳೀಯ ಪರಿಸರದಲ್ಲಾದ ವ್ಯತ್ಯಾಸಗಳು ಹೇಗೆ ರೈತರ ಮತ್ತು ಸ್ಥಳೀಯ ಪರಿಸರದ ಮೇಲೆ ಪ್ರಭಾವ ಬೀರಿದೆ ಎಂಬ ಅಂಶಗಳನ್ನು ತಿಳಿಯಲು ಅನುವುಮಾಡಿಕೊಡುತ್ತದೆ. ಅಲ್ಲದೆ ಪ್ರಸಿದ್ಧ ಸಾಹಿತಿಗಳಿಂದ ರಚಿತವಾದ ಈ ಸಂಪಾದಕೀಯ ಜಾಗತಿಕ ಜಗತ್ತಿನ ಮುಷ್ಠಿಯಲ್ಲಿ ಕುದುರೆಮುಖ ಪರಿಸರ ಹೇಗೆ ಕರಗಲಾರಂಭಿಸಿತು ಎಂಬ ಮಾಹಿತಿಗಳಿವೆ.

Jagadeesan. S and Dinesh Kumar M, The Sardar Sarovar Project, Assessing Economic and Social Impacts, SAGE publication, (ISBN 978-93-515-0126-8 (HB), 2015. ಸರದಾರ್ ಸರೋವರ ಯೋಜನೆ ಕುರಿತಾದ ಲೇಖನದಿಂದ ಸ್ಥಳಾಂತರ ಮತ್ತು ಪುನರ್ವಸತೀಕರಣ ವ್ಯವಸ್ಥೆಗಳಿಗೆ ಗುಜರಾತ್ ಸರ್ಕಾರ ನೀಡಿರುವ ಕೊಡುಗೆಗಳು ಹಾಗೂ ಫಲಾನುಭವಿಗಳಿಗೆ ದೊರೆತಿರುವ ಸೌಲಭ್ಯಗಳ ಕುರಿತು ಸವಿವರವಾದ ಲೇಖನ ಇದಾಗಿದ್ದು, ನಮ್ಮ ಅಧ್ಯಯನಕ್ಕೆ ಕೇಸ್ ಸ್ಟಡಿಗಳನ್ನು ಕೈಗೊಳ್ಳಲು ಈ ಲೇಖನ ನೆರವಾಗಿದೆ ಹಾಗೂ ಸಾಮಾಜಿಕ, ಆರ್ಥಿಕ, ಪರಿಸರಾತ್ಮಕ ವ್ಯವಸ್ಥೆಯಲ್ಲಿ ಆಗಿರುವ ಬದಲಾವಣೆಯನ್ನು ಪ್ರಮಾಣೀಕೃತವಾಗಿ ಅಧ್ಯಯಿಸುವ ಕ್ರಮವನ್ನು ಈ ಲೇಖನದಲ್ಲಿ ಪ್ರಕಟಿಸಲಾಗಿದೆ.

ವೃತ್ತ ಪತ್ರಿಕೆಗಳು, ದಿನ ಪತ್ರಿಕೆಗಳು ಮತ್ತು ಅಂತರ್ಜಾಲ ಪತ್ರಿಕೆಗಳು

ಔಟ್ ಲುಕ್ ವೃತ್ತ ಪತ್ರಿಕೆ; ದಿ: ೨೪ ಡಿಸೆಂಬರ್ ೨೦೧೪, ಸುಗಾತ ಶ್ರೀನಿವಾಸ ರಾಜು ಅವರ ಲೇಖನ ಪ್ರಕಟಿತದಲ್ಲಿ ಕುದುರೆಮುಖ ಹಾಗೂ ಕರ್ನಾಟಕದ ಹಲವು ಪ್ರದೇಶಗಳಲ್ಲಿ ಆದಿವಾಸಿ ಸಮುದಾಯ ಮತ್ತು ಮಾವೋವಾದಿಗಳು ಚಟುವಟಿಕೆಗಳ ಕುರಿತು ಸಮೀಕ್ಷೆ ಆಧಾರಿತವಾಗಿ ಈ ಲೇಖನ ಪ್ರಕಟಿಸಿದ್ದಾರೆ. ಕರ್ನಾಟಕದ ಪಶ್ಚಿಮ ಘಟ್ಟ ಪ್ರದೇಶ ಕೊಡಗಿನ ಪ್ರಾಂತ್ಯದಿಂದ ಆರಂಭವಾಗಿ ಬೆಳಗಾಂ ಪ್ರಾಂತ್ಯದವರೆಗೆ ಹರಡಿಕೊಂಡಿದ್ದು, ಈ ಪ್ರಾಂತ್ಯದೊಳಗೆ ೫ ರಾಷ್ಟ್ರೀಯ ಉದ್ಯಾನವನಗಳನ್ನು ಸೃಜಿಸಲಾಗಿ, ಅವು ಕ್ರಮವಾಗಿ ಉತ್ತರದಿಂದ ಅಣಶಿ ರಾಷ್ಟ್ರೀಯ ಉದ್ಯಾನವನ – ದಾಂಡೇಲಿ, ಕುದುರೆಮುಖ ರಾಷ್ಟ್ರೀಯ ಉದ್ಯಾನವನ – ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳನ್ನು ಪರಿಗಣಿಸಿ, ಬಂಡೀಪುರ – ಮಡಿಕೇರಿ ಪ್ರಾಂತ್ಯ, ನಾಗರಹೊಳೆ ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ – ಮೈಸೂರು, ಚಾಮರಾಜನಗರ ಪ್ರಾಂತ್ಯ ಮತ್ತು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ – ಆನೇಕಲ್ಲು ಪ್ರಾಂತ್ಯದಲ್ಲಿ ಸೃಜಿಸಲ್ಪಟ್ಟಿವೆ.

ಮಾವೋವಾದಿಗಳು ಮತ್ತು ಅವರ ಪ್ರಭಾವವನ್ನು ವಿವರಿಸುತ್ತಾ, ಕುದುರೆಮುಖ, ಕಾರ್ಕಳ ಮತ್ತು ಶೃಂಗೇರಿ ಸ್ಥಳಗಳನ್ನು ಉಲ್ಲೇಖಿಸುತ್ತಾ, ಆದಿವಾಸಿಗಳಾದ ಗೌಡ್ಲು ಮತ್ತು ಮಲೆಕುಡಿಯ ಸಮುದಾಯಗಳ ಕೃಷಿ ಕಸುಬುಗಳು ಮತ್ತು ಕೆಲವು ಆರ್ಥಿಕ ಅಂಚಿನ ಸಮುದಾಯಗಳು ಪ್ಲಾಂಟೇಷನ್ ಮಾಲಿಕರ ಭೂಮಿಗಳಲ್ಲಿ ದುಡಿಯುವವರಾಗಿ ಅವರು ನೀಡುವ ಕೂಲಿಗಳನ್ನು ಆಧರಿಸಿ ಜೀವನ ನಡೆಸುತ್ತಿರುವ ಚಿತ್ರಣಗಳನ್ನು ನೀಡಿ, ಸರ್ಕಾರವು ೧೯೮೮ ರಿಂದ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಜನಸಮುದಾಯಗಳಿಗೆ ಸ್ಥಳಾಂತರ ಪ್ರಕ್ರಿಯಗೆ ಸೂಚನೆಗಳನ್ನು ನೀಡಿದ್ದಲ್ಲದೆ, ಪುನರ್ವಸತೀಕರಣಕ್ಕೆ ಒತ್ತನ್ನು ನೀಡಿದೆ. ಈ ಪ್ರಕ್ರಿಯೆಯು ಸ್ಥಳೀಯ ಸಮುದಾಯಗಳ ಮೇಲೆ ಒತ್ತಡವನ್ನು ಏರುವ ಮುಖಾಂತರ ನಕ್ಸಲ್ ಚಟುವಟಿಕೆಗಳಿಗೆ ಸ್ಥಳೀಯರು ತುತ್ತಾಗುವಂತೆ ಪ್ರೇರೇಪಿಸಿದೆ. ಸ್ಥಳೀಯರ ಅರಣ್ಯದ ಮೇಲಿನ ಆಚಾರ, ಸಂಪ್ರದಾಯಗಳು ಈ ಪ್ರಕ್ರಿಯೆಯಿಂದ ಮೂಲೆಗುಂಪಾಗುವಿಕೆ ಹೆಚ್ಚಾದುದು ಎಂದು ಪ್ರಕಟಿಸಿದ್ದಾರೆ.

ಪ್ರಜಾವಾಣಿ ದಿನ ಪತ್ರಿಕೆ

ದಿ: ೭ ಜನವರಿ ೨೦೧೫, ಕನ್ನಡಿಗರ ನರಹಂತಕ: ತನಿಕೆಗೆ ನಕಾರ. ಮುಖ್ಯ ಶೀರ್ಷಿಕೆಯಡಿ ಪಶ್ಚಿಮ ಘಟ್ಟ ಸಂರಕ್ಷಣೆ ಕುರಿತು ಡಾ. ಕೆ. ಕಸ್ತೂರಿ ರಂಗನ್ ಸಮಿತಿ ವರದಿಯಲ್ಲಿ ರಾಜ್ಯದ ೧,೬೦೦ ಗ್ರಾಮಗಳನ್ನು ಸೂಕ್ಷ್ಮ ಜೀವವೈವಿಧ್ಯದ ಹೊರದೇಶಗಳೆಂದು ಗುರುತಿಸಿಲಾಗಿದೆ. ಆದರೆ, ಸಂಪುಟ ಉಪಸಮಿತಿ ಇದರ ಪುನರ್‌ಪರಿಶೀಲನೆ ನಡೆಸಲಿದೆ. ಸೂಕ್ಷ್ಮ ಜೀವವೈವಿಧ್ಯ ಗ್ರಾಮಗಳ ಸಂಖ್ಯೆ ೮೦೦ಕ್ಕೆ ಇಳಿಯುವ ಅಂದಾಜಾಗಿದೆ. – ಸಚಿವ ರಮಾನಾಥ್ ರೈ.

ಪ್ರಜಾವಾಣಿ, ಬೆಳಕು ತಂದವರು. ವಿಠಲ್ ಮಲೆಕುಡಿಯಾ, ದಟ್ಟ ಕಾಡಿನ ಕತ್ತಲ ಜಗತ್ತಿನಲ್ಲಿ ಬೆಳಕು ಕಂಡುಹಿಡಿದು ಬಾಳಲ್ಲಿ ಹೊಸತನ ಕಂಡುಕೊಂಡ ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಗ್ರಾಮಸ್ಥರ ಕಥನವನ್ನು ಸವಿಸ್ತಾರವಾಗಿ ತಿಳಿಸಿಕೊಟ್ಟಿದ್ದಾರೆ. ಪೇಟೆ ಪಟ್ಟಣಗಳಿಂದ

ದೂರವಿರುವ ತಲ ತಲಾಂತರದಿಂದ ನೆಲೆ ಕಂಡುಕೊಂಡಿರುವ ಮಲೆಕುಡಿಯ ಸಮುದಾಯಕ್ಕೆ ಸೇರಿದ ಸುಮಾರು ೨೩ ಮನೆಗಳು ಕುತ್ಲೂರು ಪರಿಸರದಲ್ಲಿದೆ. ಸಂಜೆಯಾಗುತ್ತಾ ಕತ್ತಲೆ ಕವಿಯುವ ದಟ್ಟಡವಿಯ ಕಾನನದ ನಡುವೆ ಚಿಮಣಿ ದೀಪ ಬೆಳಕಿಗೆ ಆಧಾರವಾಗಿತ್ತು. ಎಷ್ಟೋ ದಿನಗಳನ್ನು ಅಂಧಕಾರದಲ್ಲಿ ನೂಕಿರುವ ಜನರೀಗ ನೆಮ್ಮದಿ ಉಸಿರಾಡುತ್ತಿದ್ದಾರೆ. ಕಾರಣ ಪಶ್ಚಿಮ ಘಟ್ಟದಿಂದ ಹರಿದು ಬರುವ ನೀರು! ಈ ನೀರು ಈಗ ಗ್ರಾಮದಲ್ಲಿ ಬೆಳಕು ನೀಡಲು ಕಾರಣವಾಗಿದೆ. ಈ ನೀರನ್ನು ಬಳಸಿಕೊಂಡು ೮ ಮನೆಗಳಲ್ಲಿ ಜಲ ವಿದ್ಯುತ್ ಘಟಕ ಸೇರಿಸಿ ಬೆಳಕು ಪಡೆಯಲಾಗುತ್ತಿದೆ. ಸರ್ಕಾರದ ವಿವಿಧ ಯೋಜನೆಗಳು ಕಾಲಕಾಲಕ್ಕೆ ಜಾರಿಯಾದರೂ ಅರಣ್ಯ ಇಲಾಖೆಯವರ ಆಕ್ಷೇಪಣೆಯಿಂದ ಅಭಿವೃದ್ಧಿ ಸಾಧ್ಯವಿಲ್ಲವೆಂದವರೆ ಹೆಚ್ಚು. ದೂರದ ಒಳನಾಡಿನಲ್ಲಿ ನಕ್ಸಲ್ ಪೀಡಿತ ಪ್ರದೇಶಾಭಿವೃದ್ಧಿಗೆ ಬಂಧಿರುವ ಹಣದ ವಿನಿಯೋಗವಾಗದೆ ಇರುವ ಸಂದರ್ಭದಲ್ಲಿ ಇಲ್ಲಿನ ಅರಣ್ಯವಾಸಿಗಳನ್ನು ಹೊರದೂಡಲು ಪ್ರಯತ್ನಿಸಿದವರೇ ಹೆಚ್ಚು. ಅದೆಲ್ಲವನ್ನು ಮೀರಿ ಸ್ವಾವಲಂಬಿಯಾಗಿ ನೆಲೆನಿಂತು ಬದುಕನ್ನು ಕಟ್ಟಿಕೊಂಡವರು ಮಾದರಿ ಜೀವನ ನಡೆಸುತ್ತಿದ್ದಾರೆ, ಎಂಬ ಸಂಗತಿ ವಿಷಯಗಳನ್ನು ವಿವರಿಸಿದ್ದಾರೆ.

ಪ್ರಜಾವಾಣಿ ದಿನಪತ್ರಿಕೆ ೨೭/೦೪/೨೦೧೫, ಕಸ್ತೂರಿ ರಂಗನ್ ವರದಿ: ವರ್ಗೀಕರಣವೇ ಸರಿಯಿಲ್ಲ ಎಂದ ಸರ್ಕಾರ ಹಾಗೂ ಮಾನದಂಡಕ್ಕೆ ರಾಜ್ಯದ ಅಸಮ್ಮತಿ. ರಾಜ್ಯದ ೧,೪೩೮ ಗ್ರಾಮಗಳನ್ನು ಪರಿಸರ ಸೂಕ್ಷ್ಮ ವಲಯಗಳೆಂದು ಘೋಷಿಸುವಂತೆ ಕಸ್ತೂರಿ ರಂಗನ್ ಸಮಿತಿ ಹೇಳಿತ್ತು. ಕರ್ನಾಟಕ ಜೀವವೈವಿಧ್ಯ ಮಂಡಳಿ ಅಧ್ಯಕ್ಷರ ನೇತೃತ್ವದಲ್ಲಿ ರಾಜ್ಯ ಸರ್ಕಾರ ತಜ್ಞರ ಸಮಿತಿ ರಚಿಸಿ, ಈ ಗ್ರಾಮಗಳು ನಿಜಕ್ಕೂ ಪರಿಸರ ಸೂಕ್ಷ್ಮ ವಲಯಗಳೇ ಎಂಬುದನ್ನು ಪರಿಶೀಲಿಸಿ ಹೇಳಿತ್ತು. ಈ ಸಮಿತಿ ಅನ್ವಯ ೧೫೩ ಗ್ರಾಮಗಳನ್ನು ಮಾತ್ರ ಪರಿಸರ ಸೂಕ್ಷ್ಮ ವಲಯಗಳು ಎಂದು ಹೇಳಬಹುದು ಎಂದು ತಜ್ಞರ ವರದಿಯಾಗಿದೆ. ಅಲ್ಲದೆ ತಮ್ಮ ಗ್ರಾಮಗಳನ್ನು ಪರಿಸರದ ಸೂಕ್ಷ್ಮ ವಲಯ ಎಂದು ಘೋಷಿಸುವುದು ಮಲೆನಾಡಿಗರಲ್ಲಿ ಹೆಚ್ಚಿನವರಿಗೆ ಸರಿಕಾಣುತ್ತಿಲ್ಲ ಎಂದು ಸಮಿತಿ ಹೇಳಿದೆ. ಯಾವುದೇ ಪರಿಸರ ಸೂಕ್ಷ್ಮ ವಲಯ ಎಂದು ನಿರ್ಧರಿಸುವ ಮುನ್ನ ಕಸ್ತೂರಿ ರಂಗನ್ ಸಮಿತಿ ಸ್ಥಳಕ್ಕೆ ಭೇಟಿ ನೀಡಿಲ್ಲ. ಉಪಗ್ರಹದಿಂದ ಪಡೆದ ಚಿತ್ರಗಳನ್ನು ಆಧರಿಸಿ ಯಾವುದು ಮಾನವ ನಿರ್ಮಿತ, ಯಾವುದು ನೈಸರ್ಗಿಕ ಅರಣ್ಯ ಪ್ರದೇಶ ಎಂದು ನಿರ್ಧರಿಸಿದೆ. ತಳಮಟ್ಟದಲ್ಲಿ ಯಾವುದೇ ಸಮಾಲೋಚನೆ ನಡೆಸದೆ ಸಮಿತಿ ಇಂಥಹ ತೀರ್ಮಾನ ಕೈಗೊಂಡಿದೆ ಎಂದು ಸಮಿತಿ ಉಲ್ಲೇಖಿಸಿದೆ.

ವಿಜಯ ಕರ್ನಾಟಕ ೦೬/೦೩/೨೦೧೫, ಕುದುರೆಮುಖ ರಾಷ್ಟ್ರೀಯ ಉದ್ಯಾನ: ಪುನರ್ವಸತಿ ಹಣಕ್ಕೆ ಆಗ್ರಹ: ಕುದುರೆಮುಖ ರಾಷ್ಟ್ರೀಯ ಉದ್ಯಾನವನದಿಂದ ರೈತ ಕುಟುಂಬಗಳನ್ನು ಒಕ್ಕಲೆಬ್ಬಿಸುವುದನ್ನು ವಿರೋಧಿಸಿ ಬಹುದೊಡ್ಡ ಹೋರಾಟಗಳು ನಡೆದಿದ್ದು ಇತಿಹಾಸ. ತಲತಲಾಂತರದಿಂದ ತಮ್ಮ ಜೀವನ ಕಟ್ಟಿಕೊಂಡು ಕುದುರೆಮುಖ ನೆಲದಲ್ಲಿ ನೆಲೆ ನಿಲ್ಲಬೇಕೆಂಬ ಕುಟುಂಬಗಳ ಕನಸು ಈಡೇರಲಿಲ್ಲ. ಹೋರಾಟಗಳು ಫಲ ನೀಡಲಿಲ್ಲ. ಒತ್ತಾಯ ಪೂರ್ವಕವಾಗಿ ಯಾರನ್ನೂ ಒಕ್ಕಲೆಬ್ಬಿಸುವುದಿಲ್ಲ ಎಂದು ಸರ್ಕಾರ ನಾಮಫಲಕಗಳನ್ನು ಹಾಕಿದರೂ ಅಲ್ಲಿಂದ ತೆರಳಲೇಬೇಕಾದ ಅಗೋಚರ ಅನಿವಾರ್ಯತೆ ಸೃಷ್ಟಿಯಾಗಿದೆ. ಅರಣ್ಯ ಪ್ರದೇಶದಲ್ಲಿ ಆತಂಕದಲ್ಲಿ

ಜೀವನ ನಡೆಸುವುದಕ್ಕಿಂತ ಸರ್ಕಾರ ಕಲ್ಪಿಸುವ ಪರಿಹಾರದ ಹಣವನ್ನು ಪಡೆದು ಮತ್ತೆಲ್ಲೋ ಬದುಕು ಮಾಡುವುದೇ ಲೇಸು ಎಂದುಕೊಂಡು ಅನೇಕ ಕುಟುಂಬಗಳು ಸರಕಾರದ ಬಳಿ ಪರಿಹಾರ ಪ್ಯಾಕೆಜೆಗೆ ಕೈಯೊಡ್ಡಿವೆ. ಆದರೆ, ಸಕಾಲದಲ್ಲಿ ಪರಿಹಾರ ಕಳಿಸಬೇಕಾದ ಸರ್ಕಾರ ಇಲ್ಲಿಯೂ ವಿಳಂಬ ನೀತಿ ಅನುಸರಿಸಿ ಬಡ ಕುಟುಂಬಗಳ ತಾಳ್ಮೆ ಪರೀಕ್ಷೆ ಮಾಡುತ್ತಿದೆ. ಹಿಂದೆ ಸಲ್ಲಿಸಿರುವ ಅರ್ಜಿಗಳು ದೂಳು ಹಿಡಿಯುತ್ತಿದ್ದರೆ, ಪರಿಹಾರಕ್ಕಾಗಿ ಬಂಧಿರುವ ೧೪ ಕೋಟಿ ಹಣ ಕೂಡ ಉದ್ದೇಶಕ್ಕೆ ಬಳಕೆಯಾಗದೆ ಬ್ಯಾಂಕಿನಲ್ಲೇ ಭದ್ರವಾಗಿದೆ. ಅರಣ್ಯದಿಂದ ಪುನರ್ವಸತಿ ಬಯಸಿ ಫಾರಂ ೫೦-೫೩ ರಲ್ಲಿ ಅರ್ಜಿ ಸಲ್ಲಿಸಿರುವವರು ೩೦% ರಷ್ಟಿದ್ದಾರೆ. ಆದರೆ, ಈವರೆಗೂ ೨೦೧೫ರ ವರೆಗೂ ಯಾವುದೇ ರೀತಿಯ ಪರಿಹಾರ ದೊರಕದೆ ಇರುವುದು ಕುಟುಂಬಗಳನ್ನು ಆತಂಕಕ್ಕೆ ಈಡುಮಾಡಿದೆ.

ಪ್ರಜಾವಾಣಿ ೧೨/೦೩/೨೦೧೫, ಕುದುರೆಮುಖದಲ್ಲಿ ಉಳಿದಿರುವ ಕುಟುಂಬಗಳ ರಕ್ಷಣೆಗೆ ಒತ್ತಾಯ, ಪುನರ್ವಸತಿಗೆ ಅಗತ್ಯ ಕ್ರಮಕ್ಕೆ ಆಗ್ರಹ- ಚಿಕ್ಕಮಗಳೂರು ಜಿಲ್ಲಾ ಪರಿಸರ ಸಂಘಟನೆಗಳು ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ನೆಲೆಸಿರುವವರ ಪುನರ್ವಸತಿ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ನೇತೃತ್ವದ ಜಿಲ್ಲಾ ಪುನರ್ವಸತಿ ಸಮಿತಿಯನ್ನು ಸೌಲಭ್ಯಕ್ಕಾಗಿ ಒತ್ತಾಯಿಸಿವೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಸುಮಾರು ೧೩೦೦ ಕುಟುಂಬಗಳು ಆವಾಸಸ್ಥಾನ ಹೊಂದಿದ್ದು ಆ ಪೈಕಿ ಸುಮಾರು ೫೦೦ ಕುಟುಂಬಗಳು ಸ್ವಯಂ ಪ್ರೇರಿತವಾಗಿ ಪುನರ್ವಸತಿ ಹೊಂದಲು ಅರ್ಜಿಯನ್ನು ಸಲ್ಲಿಸಿದ್ದು, ಪರಿಹಾರಕ್ಕಾಗಿ ಕಾಯುತ್ತಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ೨೦೦೫ ರಲ್ಲಿ ರಾಜ್ಯ ಸರ್ಕಾರ ಭೂರಹಿತ ಕೂಲಿಕಾರ್ಮಿಕರನ್ನು ಪುನರ್ವಸತಿ ವ್ಯವಸ್ಥೆಯಲ್ಲಿ ಒಳಗೊಳ್ಳುವಂತೆ ಹಾಗೂ ಅವರಿಗೂ ಸೂಕ್ತ ಪರಿಹಾರ ನೀಡುವಂತೆ ಸೂಚನೆ ನೀಡಿತ್ತಾದರೂ ಈ ವರೆಗೂ ಯಾವುದೇ ರೀತಿಯ ವ್ಯವಸ್ಥೆಗಳು ದೊರೆತಿಲ್ಲ. ಈಗಾಗಿ ಪುನರ್ವತಿ ಕೋರಿ ಕುಟಂಬಗಳು ಸಲ್ಲಿಸಿದ್ದ ಅರ್ಜಿ ಸರಿಯಾದ ಕ್ರಮಕ್ಕೆ ಒಳಗೊಳ್ಳದೇ ಅತ್ತ ಕಾಡಿನೊಳಗೂ ವಾಸಿಸದೆ ಇತ್ತ ಬೇರೆಡೆಗೆ ಹೋಗಲಾರದೆ ಕಂಗಾಲಾಗಿವೆ. ಕಳೆದ ಮಾರ್ಚ ೧೨ರಂದು ಜಿಲ್ಲಾ ಸಭೆಯಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪುನರ್ವಸತಿಗಾಗಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯೊಂದಿಗೆ ಅಲ್ಲಿನ ಪರಿಸರಗಳ ಹಾಗೂ ಕುಟುಂಬಗಳ ವ್ಯಾಪ್ತಿಯ ಪರಿಸ್ಥಿತಿಗಳ ಅವಲೋಕನದೊಂದಿಗೆ ಶೀಘ್ರವಾಗಿ ನೆಲೆಗೊಂಡಿರುವ ಕಟ್ಟಡ, ಜಮೀನು ಹಾಗೂ ವ್ಯಾಪ್ತಿಯನುಸಾರಾವಾಗಿ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸಲು ಮಹತ್ವದ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ ಎಂದು ಚಿಕ್ಕಮಗಳೂರು ಜಿಲ್ಲಾಧಿಕಾರಿ ಸಭೆಯಲ್ಲಿ ವಿವರಿಸಿದ್ದಾರೆ. ಅಂಕಿ ಅಂಶಗಳ ಪ್ರಕಾರ ಒಟ್ಟು ೮೭೬ ಕುಟುಂಬಗಳು ಉದ್ಯಾನವನ ವ್ಯಾಪ್ತಿಯಲ್ಲಿವೆ, ೩೪೫ ಕುಟುಂಬಗಳು ಸೌಲಭ್ಯ ಕೋರಿ ಅರ್ಜಿ ಸಲ್ಲಿಸಿವೆ ಹಾಗೂ ೩೫ ಕುಟುಂಬಗಳು ಚಿಕ್ಕಮಗಳೂರು ವ್ಯಾಪ್ತಿಯಲ್ಲಿ ಸೌಲಭ್ಯವನ್ನು ಪಡೆದುಕೊಂಡಿವೆ.

ಪ್ರಜಾವಾಣಿ, ದಿ:೧೬/೧೨/೨೦೧೬, ಹುಲಿ ಸಂರಕ್ಷಿತ ಪ್ರದೇಶದಿಂದ ಸ್ವಯಂ ಪ್ರೇರಿತ ಸ್ಥಳಾಂತರ - ಗಿರಿಜನ ಪುನರ್ವಸತಿ ಪ್ಯಾಕೇಜ್ ಸ್ವರೂಪ ಪರಿಷ್ಕರಣೆಗೆ ಆಗ್ರಹ: ಹುಲಿ ಸಂರಕ್ಷಿತ ಪ್ರದೇಶ ಹಾಗೂ ರಾಷ್ಟ್ರೀಯ ಉದ್ಯಾನವನದಿಂದ ಸ್ವಯಂ ಪ್ರೇರಿತವಾಗಿ ಸ್ಥಳಾಂತರಗೊಳ್ಳುವ ಪ್ರತಿ

ಕುಟುಂಬಕ್ಕೆ ನೀಡುವ ಪುನರ್ವಸತಿ ಪ್ಯಾಕೇಜ್‌ನ ಸ್ವರೂಪದಲ್ಲಿ ಪರಿಷ್ಕರಣೆ ಮಾಡಬೇಕು ಎಂದು ವೈಲ್ಡ್‌ಲೈಫ್ ಫಸ್ಟ್ ಆಗ್ರಹಿಸಿದೆ. ಗಿರಿಜನ ಕುಟುಂಬಗಳಿಗೆ ವಿವಿಧ ಸವಲತ್ತು ಒದಗಿಸುವ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಮಾರ್ಗಸೂಚಿ ಅನ್ವಯ ನಿಗದಿಪಡಿಸಿದ ರೂ ೧೦ ಲಕ್ಷ ಪುನರ್ವಸತಿ ಪ್ಯಾಕೇಜ್ ಮೊತ್ತವನ್ನು ಅರಣ್ಯ ಇಲಾಖೆ ಜನವರಿ ೫ ರಂದು ೧೫ ಲಕ್ಷಕ್ಕೆ ಏರಿಸಿತು. ಈ ಪ್ಯಾಕೇಜ್‌ನಲ್ಲಿ ಕೃಷಿ ಭೂಮಿ ಖರೀದಿ ಮತ್ತು ಅಭಿವೃದ್ಧಿಗೆ ೪೦% ಭೂಮಿ ಹಕ್ಕು ಮಾನ್ಯ ಮಾಡಿಕೊಳ್ಳಲು ೧೫%, ಮನೆ ನಿರ್ಮಾಣಕ್ಕೆ ೩೦%, ಪ್ರೋತ್ಸಾಹಕಧನವಾಗಿ ೫% ಹಾಗೂ ಸಮುದಾಯ ಅಭಿವೃದ್ಧಿಗಾಗಿ ೧೦% ಹಣ ವಿನಿಯೋಗಿಸಲು ಅನುಮತಿ ನೀಡಲಾಗಿತ್ತು. ಪ್ಯಾಕೇಜ್ ಮೊತ್ತದ ೫ಲಕ್ಷ ಹೆಚ್ಚಾಗಿದೆ. ಆದರೆ, ಇದರಿಂದ ಗಿರಿಜನರಿಗೆ ಹೆಚ್ಚಿನ ಲಾಭ ಆಗುವುದಿಲ್ಲ. ಈ ಹಿಂದೆ ಭೂಮಿ ಹಕ್ಕು ಮಾನ್ಯ ಮಾಡಿಕೊಳ್ಳಲು ೩೦% ನೀಡಲಾಗುತ್ತಿತ್ತು. ಈಗ ಅದನ್ನು ೧೫%ಗೆ ಇಳಿಸಲಾಗಿದೆ. ಒಂದು ವೇಳೆ ೩೦% ನೀಡಿದರೆ ಭೂಮಿ ಹಕ್ಕು ಮಾನ್ಯ ಮಾಡಿಕೊಳ್ಳಲು ಪ್ರತಿ ಕುಟುಂಬಕ್ಕೆ ೪.೫ ಲಕ್ಷ ಸಿಗುತ್ತಿತ್ತು ಎಂದು ಕೆ.ಎಂ. ಚೆನ್ನಪ್ಪ ಹಾಗೂ ಪ್ರವೀಣ್ ತಿಳಿಸಿದ್ದಾರೆ.

ಪ್ರಜಾವಾಣಿ, ಮಾರ್ಚ್ ೧೮,೨೦೧೭. ಚಿಕ್ಕಮಗಳೂರು, ಉದ್ಯಾನವನದ ಪುನರ್ ವಸತಿ ಪ್ಯಾಕೇಜ್‌ನ ಫಲಾನುಭವಿಗಳ ತೋಟಕ್ಕೆ ಅಧಿಕಾರಿಗಳ ಭೇಟಿ. ಸ್ಥಳೀಯರ ಅಹವಾಲು ಆಲಿಸಿದ ಡಿಸಿ. ತಾಲ್ಲೂಕಿನ ಕೆರೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಪುನರ್ವಸತಿ ಪ್ಯಾಕೇಜ್ ಯೋಜನೆಯಡಿ ಬರುವ ಫಲಾನುಭವಿಗಳ ತೋಟಗಳಿಗೆ ಜಿಲ್ಲಾಧಿಕಾರಿ ಭೇಟಿ ನೀಡಿ ಸಮಸ್ಯೆಗಳನ್ನು ಆಲಿಸಿದರು. ಫಲಾನುಭವಿ ಸುಧಾಕರ ಅವರು ಮಾತನಾಡಿ ಈ ಹಿಂದೆ ತೋಟಗಳಲ್ಲಿ ಅಡಿಕೆ ಮರ, ಸೀಬೆ ಮತ್ತು ಇತರೆ ಹಣ್ಣಿನ ಗಿಡಗಳು ಬೆಳೆದಿದ್ದವು, ಆ ಸಂದರ್ಭದಲ್ಲಿ ಇಲಾಖೆಯವರು ಸರ್ವೆ ನಡೆಸಿಕೊಂಡು ಹೋಗಿದ್ದರು, ಆದರೆ ಮರು ಪರಿಶೀಲನೆ ಪ್ರಸ್ತುತವಾಗಿ ನಡೆದಾಗ ಕಾಡು ಪ್ರಾಣಿಗಳ ಹಾವಳಿಗೆ ಅವುಗಳು ಹಾಳಾಗಿವೆ. ಹಳೆಯ ಸಂದರ್ಭದ ಸರ್ವೆ ಪ್ರಕಾರ ತಮಗೆ ಅನುಧಾನ ನೀಡಬೇಕೆಂದು ಡಿಸಿ ಅವರಿಗೆ ಮನವಿ ಮಾಡಿಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ ಡಿಸಿ ಅವರು ಅಧಿಕಾರಿಗಳು ಸರ್ವೆ ಕಾರ್ಯಕ್ಕೆ ತೆರಳಿದಾಗ ಫಲಾನುಭವಿಗಳು ಸರಿಯಾದ ಮಾಹಿತಿಯನ್ನು ನೀಡಿ ಸಹಕರಿಸಿ ಹಾಗೂ ಅಧಿಕಾರಿಗಳು ಫಲಾನುಭವಿಗಳ ಸ್ವತ್ತುಗಳನ್ನು ಸರಿಯಾದ ಕ್ರಮದಲ್ಲಿ ಪರಿಶೀಲಿಸಿ ನೀಡಿ ಎಂದು ತಿಳಿಸಿದರು. ಪ್ರತಿ ಸರ್ವೆ ಕಾರ್ಯವು ಅರಣ್ಯ ಮತ್ತು ತೋಟಗಾರಿಕೆ ಇಲಾಖೆಯ ಜಂಟಿ ಸಂಯೋಜನೆಯಲ್ಲಿ ನಡೆಯ ಬೇಕು ಎಂದು ತಾಕೀತು ಮಾಡಿದರು. ಇದು ಜನ ಪರ ಪ್ಯಾಕೇಜ್ ಆಗಿದ್ದು ಯಾವ ಫಲಾನುಭವಿಗೂ ಕೂಡ ಅನ್ಯಾಯವಾಗಬಾರದೆಂದು ತಿಳಿಸಿದರು.

ಮೇಲ್ಕಂಡ ಅಧ್ಯಯನಕ್ಕಿಂತ ಪ್ರಸ್ತುತ ಅಧ್ಯಯನವು ಆದಿವಾಸಿಗಳ ಹಕ್ಕುಗಳ ಸಂಘರ್ಷಣೆ, ಹೋರಾಟಗಳು, ಇತರೆ ಅರಣ್ಯವಾಸಿಗಳೊಂದಿಗಿನ ಸಂಬಂಧಗಳು (Flore & Fauna) ಗಳ ಆಧಾರವಾಗಿ ಪ್ರಸ್ತುತ ಇತರೆ ಸ್ಥಳಗಲ್ಲಿ ಪುನರ್ವಸತೀಕರಣ ಪ್ರಕ್ರಿಯಗಳಿಗೆ ಒಳಗಾಗಿರುವ ಗ್ರಾಮಗಳ ಹಾಗೂ ಈ ಹಿಂದೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಾದ ಪುನರ್ವಸತೀಕರಣ ಪ್ರಕ್ರಿಯೆಯ ಗ್ರಾಮಗಳ ಕುರಿತಂತೆ ಆದಿವಾಸಿ ಮತ್ತು ಇತರೆ ಸಮುದಾಯಗಳನ್ನು ಅಧ್ಯಯಿಸುವುದಾಗಿದೆ. ಜೊತೆಯಲ್ಲಿ ಅರಣ್ಯ ಕಾನೂನುಗಳು ಆದಿವಾಸಿಗಳ ಹಾಗೂ ಇತರೆ ಅರಣ್ಯವಾಸಿಗಳ ಹಕ್ಕುಗಳನ್ನು ಸಂರಕ್ಷಿಸುವಲ್ಲಿ ಯಾವ ಆಯಾಮಗಳನ್ನು(ಶೈಕ್ಷಣಿಕ, ರಾಜಕೀಯ,

ಆರ್ಥಿಕ, ಸಾಮಾಜಿಕ ಮತ್ತು ಆರೋಗ್ಯ, ಉದ್ಯೋಗ)ಅನುಸರಿಸಿದೆ ಎಂದು ಸಮಾಜಕಾರ್ಯ ವಿಷಯದ ಚೌಕಟ್ಟಿನಲ್ಲಿ ಅಧ್ಯಯಿಸುವುದಾಗಿದೆ.

೬ ಮಹಾಪ್ರಬಂಧದ ಅಧ್ಯಾಯಗಳ ಸಂಕ್ಷಿಪ್ತ ಪರಿಚಯ

ಮೊದಲನೇ ಅಧ್ಯಾಯದಲ್ಲಿ ಪ್ರಸ್ತಾವನೆ, ಅಧ್ಯಯನದ ಉದ್ದೇಶಗಳು, ಅಧ್ಯಯನದ ವಿಧಾನ, ಮಿತಿಗಳು ಮತ್ತು ವ್ಯಾಪ್ತಿ, ಮಹತ್ವ, ಅಧ್ಯಯನದ ಪ್ರಸ್ತುತತೆ, ಸಂಶೋಧನಾ ವಿನ್ಯಾಸ ಮತ್ತು ಅಧ್ಯಯನದ ಸಾಹಿತ್ಯ ಪರಾಮರ್ಶೆಯನ್ನು ಹಾಗೂ ಮಹಾಪ್ರಬಂಧದ ಅಧ್ಯಾಯಗಳ ಸಂಕಷಿಪ್ತ ಪರಿಚಯ ನೀಡಲಾಗಿದೆ.

ಎರಡನೇ ಅಧ್ಯಾಯ 'ಅರಣ್ಯವಾಸಿಗಳು, ಸಂರಕ್ಷಣೆ, ಸ್ಥಳಾಂತರ ಮತ್ತು ಪುನರ್ವಸತೀಕರಣ'. ಈ ಅಧ್ಯಾಯದಲ್ಲಿ ಅರಣ್ಯವಾಸಿಗಳ ಕುರಿತಾದ ವಿವರಣೆಗಳು, ಅರಣ್ಯ ಸಂರಕ್ಷಣೆ ಪ್ರಕಾರಗಳು, ಸ್ಥಳಾಂತರ ಮತ್ತು ಪುನರ್ವಸತೀಕರಣದ ವಿವರಣೆಗಳನ್ನು, ತಾತ್ವಿಕ ಸಿದ್ಧಾಂತ ಮಾದರಿಗಳು, ಭಾರತದಲ್ಲಿ ಮತ್ತು ಕರ್ನಾಟಕದಲ್ಲಿನ ಸ್ಥಳಾಂತರ ಮತ್ತು ಪುನರ್ವಸತೀಕರಣ ಹಾಗೂ ಪರಿಣಾಮಗಳನ್ನು ವಿವರಿಸಲಾಗಿದೆ.

ಮೂರನೇ ಅಧ್ಯಾಯ 'ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಸ್ಥಳಾಂತರ ಮತ್ತು ಪುನರ್ವಸತೀಕರಣ ಕಾರ್ಯಕ್ರಮ'. ಈ ಅಧ್ಯಾಯವು ಕರ್ನಾಟಕ ರಾಜ್ಯದ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಮೂರು ಜಿಲ್ಲೆಗಳಿಗೆ ವಿಸ್ತಾರವಾಗಿ ಹರಡಿಕೊಂಡಿರುವ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಘೋಷಣೆ, ಸ್ಥಳಾಂತರಕ್ಕಾಗಿ ಉಲ್ಲೇಖಿಸಲ್ಪಟ್ಟ ಗ್ರಾಮಗಳು, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಕಾರ್ಯ ಚಟುವಟಿಕೆಗಳನ್ನು ಉಲ್ಲೇಖಿಸಲಾಗಿದೆ.

ನಾಲ್ಕನೆ ಅಧ್ಯಾಯದಲ್ಲಿ ವರ್ತಮಾನದ ವಿಶ್ಲೇಷಣೆಗಳನ್ನು ಸ್ಥಳಿಯವಾಗಿ ನೆಲೆಸಿರುವ ಮತ್ತು ಸ್ಥಳಾಂತರಗೊಂಡು ಬೇರೆಡೆ ನೆಲೆಸಿರುವವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಆರೋಗ್ಯ ಸ್ಥಿತಿಗತಿಗಳ ಕುರಿತು ಸಾಂಖ್ಯಿಕ ವಿಧಾನದ ಮುಖಾಂತರ ವಿಸ್ತೃತವಾಗಿ ವಿಶ್ಲೇಷಿಸಲಾಗಿದೆ.

ಐದನೇ ಅಧ್ಯಾಯ 'ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿನ ಸ್ಥಳಾಂತರ ಮತ್ತು ಪುನರ್ವಸತೀಕರಣ: ವಿಶ್ಲೇಷಣೆ' ಇಲ್ಲಿ ಸ್ಥಳಾಂತರ ಮತ್ತು ಪುನರ್ವಸತೀಕರಣಕುರಿತಂತೆ ಅನುಷ್ಠಾನಕ್ಕೆ ಎದುರಾಗಿರುವ ಸವಾಲುಗಳು, ಅವುಗಳನ್ನು ಸಾಕಾರಗೊಳಿಸುವಲ್ಲಿನ ಸಾಧ್ಯತಾ ಕ್ರಮಗಳನ್ನು, ಸ್ಥಳಾಂತರ ಮತ್ತು ಪುನರ್ವಸತೀಕರಣ ಕುರಿತಂತೆ ಸ್ಥಳಿಯರ, ಪರಿಸರ ತಜ್ಞರ, ಇಲಾಖಾ ಅಧಿಕಾರಿಗಳ, ರಾಜಕಾರಣಿಗಳ ನಿಲುವುಗಳನ್ನು ಮಂಡಿಸಲಾಗಿದೆ. ಹಾಗೂ ಪ್ರಮುಖವಾಗಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಹೋರಾಟಗಳ ನೆಲೆಗಳಲ್ಲಿ ಕಂಡುಬಂದಿದ್ದು ಆ ದಿಕ್ಕಿನಲ್ಲಿ ಕೆಲವು ಹೋರಾಟಗಾರರು ಹೋರಾಟ ನಡೆಸಿದ ಸ್ವರೂಪ ಮತ್ತು ಅದರ ಪರಿಣಾಮ, ಭಾರತ

ಮತ್ತು ಕರ್ನಾಟಕದ ಪ್ರಾದೇಶಿಕತೆಯಲ್ಲಿ ಗತಿಸಿರುವ ವಿವಿಧ ಸ್ಥಳಾಂತರ ಮತ್ತು ಪುನರ್ವಸತೀಕರಣ ಪ್ರಕ್ರಿಯೆಯ ತೌಲನಿಕ ವಿಮರ್ಶೆಗಳನ್ನು ವ್ಯಕ್ತಪಡಿಸಲಾಗಿದೆ.

'ಸಮಾರೋಪ' ಇಲ್ಲಿ ಅಧ್ಯಯನದಿಂದ ಕಂಡುಕೊಂಡ ಪ್ರಮುಖ ಫಲಿತಗಳನ್ನು ನಮೂದಿಸಿದೆ. ಮತ್ತು ಸಲಹೆಗಳನ್ನು ಸೂಚಿಸಲಾಗಿದೆ. ಜೊತೆಗೆ ಅಧ್ಯಯನದ ಸಮಾರೋಪ ಮಾಡಲಾಗಿದೆ.

ಸಮಾರೋಪ

ಸ್ಥಳಾಂತರ ಮತ್ತು ಪುನರ್ವಸತೀಕರಣಕ್ಕೆ ಸಂಬಂಧಿಸಿದಂತೆ ಆದಿವಾಸಿಗಳು ಮತ್ತು ಇತರೆ ಅರಣ್ಯವಾಸಿಗಳು ಇಂದು ಗ್ರೀನ್ ಹೌಸ್ಪೀಸ್‌ಗಳಾಗಿ ಅರಣ್ಯದ ಪ್ರದೇಶಗಳಿಂದ ಹೊರಬರುತ್ತಿರುವುದು ಶೋಚನೀಯವಾಗಿದೆ. ಏಕೆಂದರೆ, ಆದಿ ಕಾಲದಿಂದಲೂ ಅರಣ್ಯಗಳೊಂದಿಗೆ ಅವಿನಾಭಾವ ಸಂಬಂಧಗಳನ್ನು ಬೆಳೆಸಿಕೊಂಡು ಅರಣ್ಯ ಸಂಪನ್ಮೂಲಗಳನ್ನು ಹಾಗೂ ವನ್ಯ ಜೀವಿಗಳ ಸಂಪತ್ತಿನೊಂದಿಗೆ ಜೀವ ವೈವಿಧ್ಯತೆಯಲ್ಲಿ (ಬಯೋ ಡೈವರ್‌ಸಿಟಿ) ಸಮತೋಲನವನ್ನು ಕಾಯ್ದುಕೊಂಡು ಬರುವುದರೊಂದಿಗೆ, ನಾಗರೀಕ ಸಮಾಜಗಳಿಗೆ ಅರಣ್ಯ ಉತ್ಪನ್ನಗಳನ್ನು ಸಕಾಲದಲ್ಲಿ ಒದಗಿಸುತ್ತಿದ್ದಂತಹ ಸೇತುವೆಗಳು. ಆದರೆ, ಅನ್ಯ ರಾಷ್ಟ್ರಗಳು ಬೇರೆಡೆಯಲ್ಲಿ ಕುಳಿತು ಅವರಿಗೆ ಅಶ್ಯಕವಾದ ಸಂಪನ್ಮೂಲಗಳನ್ನು ದೊರಕಿಸಿಕೊಳ್ಳುವುದಕ್ಕೆ ನಮ್ಮ ಭಾರತ ದೇಶದಂತಹ ಬಡ ಜನರಿಂದ ಕೂಡಿದ ಶ್ರೀಮಂತ ದೇಶಗಳನ್ನು ಹಾಗೂ ಅಲ್ಲಿರುವ ಅಪಾರ ಸಂಪನ್ಮೂಲಗಳನ್ನು ತನ್ನೆಡೆಗೆ ಸೆಳೆಯಲು ಪ್ರಯತ್ನಿಸಿ ಸ್ಥಳೀಯ ಸರ್ಕಾರಗಳ ಮೂಲಕ ರಚಿತವಾದ ಪ್ರೋಟೋಕಾಲ್, ಕಾಯ್ದೆಗಳು ಮತ್ತು ಕಾನೂನುಗಳನ್ನು ರಚಿಸಿ ತಮ್ಮ ಹಿಡುವಳಿಯಲ್ಲಿರುವಂತೆ ನೋಡಿಕೊಳ್ಳುತ್ತಿವೆ. ಇದರ ಫಲವಾಗಿ ಇಂದು ನಮ್ಮ ದೇಶದಲ್ಲಿ ಜಾಗತಿಕ ವಿಶ್ವ ಬ್ಯಾಂಕ್ ಬಿಲಿಯನ್ ನಷ್ಟು ಹಣವನ್ನು ಹಾಗೂ ಪ್ರಖ್ಯಾತ ಹೆಸರುಗಳನ್ನು ಪ್ರದೇಶಗಳಿಗೆ ನೀಡುವುದರ ಮುಖಾಂತರ ತನ್ನ ಹಿಡುವಳಿಯನ್ನು ಹಿಂಬಾಗಿಲ ಮುಖಾಂತರ ಸಾಧಿಸಿದೆ. ಇದರ ಫಲವಾಗಿ ಇಂದು ನಾವು ರಕ್ಷಿತಾರಣ್ಯಗಳು, ವನ್ಯ ಮೃಗ ಸಂರಕ್ಷಣೆ, ರಾಷ್ಟ್ರೀಯ ಉದ್ಯಾನವನ ಹಾಗೂ ಸೆಂಚುರೀಸ್‌ಗಳಂತಹ ಕಾಯ್ದಿರಿಸಿದ ಅರಣ್ಯಗಳ ಹೆಸರುಗಳನ್ನು ಕೇಳುವಂತಾಗಿದೆ.

ಸ್ಥಳೀಯ ಸರ್ಕಾರಗಳು ಇವುಗಳ ಸಂರಕ್ಷಣೆಗಾಗಿ ರೂಪಿಸುವ ಕಾನೂನುಗಳಿಂದ ಆದಿವಾಸಿಗಳು ಮತ್ತು ಇತರೆ ಅರಣ್ಯ ನಿವಾಸಿಗಳು ಇರುವ ಸ್ಥಳಗಳನ್ನು ತೊರೆದು ಸರ್ಕಾರಗಳು ರೂಪಿಸುವ ಅನ್ಯ ಸ್ಥಳಗಳಿಗೆ ಸ್ಥಳಾಂತರಗೊಳ್ಳಲು ಪ್ರಚೋದಿಸಿವೆ. ಇದರ ಹಿಂದೆ ಅರಣ್ಯ ಸಂರಕ್ಷಣೆಯ ಗುರಿ ಮುಖ್ಯವಾಗಿದ್ದರೂ ಕೂಡ ಅದು ಅವರ ಸ್ವತಂತ್ರ ಹಕ್ಕಿನೊಂದಿಗೆ ಆಗಲಿರುವ ಸಂಘರ್ಷವಾಗಿದೆ.

ಇಂತಹ ಸಂಘರ್ಷಗಳ ನಡುವೆ ಅವರಿಗೆ ಸರ್ಕಾರವು ಕಲ್ಪಿಸುವ ಪುನರ್ವಸತೀಕರಣ ಸೌಲಭ್ಯಗಳೂ ಕಾಗದ ಮೇಲೆ ಮುದ್ರಿಸಿದ ಕಾನೂನಿನ ರೂಪದಲ್ಲಿ ಮಾತ್ರ. ಅವುಗಳು ಸ್ಥಳಾಂತರಗೊಂಡು ಬಹುಕಾಲವಾದರೂ ಜಾರಿಗೆ ಬರುವುದು ಕನಿಷ್ಟ ಒಂದು ಇಲ್ಲವೆ ಎರಡು

ತಲೆಮಾರುಗಳು ಗತಿಸಿದ ನಂತರವಷ್ಟೆ ಈ ರೂಪದ ಪ್ರಕ್ರಿಯೆಗಳಿಂದ ಸ್ಥಳಾಂತರ ಮತ್ತು ಮನರ್ವಸತೀಕರಣ ಪ್ರತಿಬಾರಿಯೂ ಸಾಧ್ಯವಾಗುವುದಕ್ಕಿಂತ ಸವಾಲಾಗಿ ಮಾರ್ಪಡುವುದೇ ಹೆಚ್ಚು.

ಅನ್ಯ ದೇಶಗಳು ರೂಪಿಸುವ ಕಾನೂನುಗಳಿಗಿಂತ ನಮ್ಮ ಸ್ಥಳೀಯ ಸರ್ಕಾರಗಳೇ ಪ್ರಸ್ತುತ ಪ್ರದೇಶಗಳನ್ನು ಅಧ್ಯಯಿಸುವುದರ ಮುಖಾಂತರ ಅಲ್ಲಿಯ ಸಂಪನ್ಮೂಲಗಳೇನೆಂದು ತಿಳಿದುಕೊಂಡು ಸ್ಥಳೀಯ ಜನರ ಬೆಂಬಲದೊಂದಿಗೆ ಅವರ ಮುಖೇನ ಕಾನೂನು ಕಾಯ್ದೆಗಳನ್ನು ರೂಪಿಸುವುದು ಒಳಿತಾಗುವುದು. ಇದರಿಂದ ಜನರು ಸ್ಥಳಾಂತರಗೊಳ್ಳುವ ಸಂದರ್ಭದಲ್ಲಿ ತಮಗೆ ಅವಶ್ಯವಿರುವ ವಾಸ ಸ್ಥಳಗಳನ್ನು, ಜೀವಿಸಲು ಅವಶ್ಯವಿರುವ ತರಬೇತಿಗಳನ್ನು ಮತ್ತು ಕುಟುಂಬದವರ ಶ್ರೇಯೋಭಿವೃದ್ಧಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಚಿಂತನೆಗೆ ಪೂರ್ಣ ಬೆಂಬಲ ನೀಡಿದಂತಾಗುವುದು. ಪ್ರಕೃತಿಯಲ್ಲಿ ಸಂಪನ್ಮೂಲದ ಸಮತೋಲನ ಬಹು ಮುಖ್ಯವಾದುದು. ಅರಣ್ಯಗಳಿಗೆ ಕಾನೂನು ರೂಪಿಸಿ ಮಾನವರ ಚಟುವಟಿಕೆಗಳನ್ನು ನಿಯಂತ್ರಿಸಿದರೆ ಅರಣ್ಯ ಉಳಿಯುವುದು ಎನ್ನುವುದು ಸರ್ಕಾರದ ವಿವೇಚನೆ. ಆದರೆ ಕಾಲ ಕಾಲಕ್ಕೆ ಅನುಗುಣವಾಗಿ ಅರಣ್ಯಗಳಲ್ಲಿ ತರುಗು ಬೆಂಕಿಗಳನ್ನು ಹಾಕುತ್ತಾ, ಅವಶ್ಯವಿಲ್ಲದ ಮರಗಳನ್ನು ವಿಲೇವಾರಿ ಮಾಡುವಂತಹ ಸಾಮಾನ್ಯ ಮಾನವ ಪ್ರಕ್ರಿಯೆಯು ಇಲ್ಲವಾದರೆ ಅರಣ್ಯಗಳ ಬೆಳವಣಿಗೆ ಸಲ್ಲದು ಎನ್ನುವುದು ಆದಿವಾಸಿಗಳ ಕಾಲಜ್ಞಾನದ ವಿವೇಚನೆ.

ಅರಣ್ಯಗಳನ್ನು ಹಾಗೂ ಅದರ ಸಂಪನ್ಮೂಲಗಳನ್ನು ಪೋಷಿಸಿ, ಬೆಳೆಸುವುದು ಎಷ್ಟು ಮುಖ್ಯವೋ ಅದೇ ರೀತಿಯಲ್ಲಿ ಅರಣ್ಯವಾಸಿಗಳನ್ನು ಹಾಗೂ ಆದಿವಾಸಿಗಳನ್ನು ಅವರ ಹಕ್ಕುಗಳನ್ನು ಪೋಷಿಸಿ ಬೆಳೆಸುವುದು ಸೂಕ್ತ. ಜೀವ ವೈವಿಧ್ಯತೆಯಲ್ಲಿ ಯಾವುದೇ ಅಂಶವು ಕಡಿಮೆ ಎಂದು ಕಂಡುಬಂದರೆ, ಅದು ಸಮತೋಲನ ಎಂದು ಹೇಳಲಾಗದು. ಅದಕ್ಕಾಗಿ ಆದಿವಾಸಿಗಳು ಹಾಗೂ ಇತರೆ ಸಂಪನ್ಮೂಲಗಳನ್ನು ಇರುವಲ್ಲಿಯೇ ಪೋಷಿಸಿ ಬೆಳಸಿದರೆ ಅರಣ್ಯ ಸಂಪನ್ಮೂಲಗಳಿಲ್ಲದೆ ಬರಿದಾಗುವ ನಾಡು ಹಸಿರಿನ ಬೀಡಾಗುವುದು ದೇಶವು ಪ್ರಖ್ಯಾತಿಯಾಗುವುದು. ಎಂ. ಗೋಪಾಲ ಕೃಷ್ಣ ಅಡಿಗರ ಕವಿತೆಯಂತೆ ಕಟ್ಟುವೆವು ನಾಡೊಂದ ರಸದ ಬೀಡೊಂದನ್ನು ಎಂಬಂತೆ ಸ್ಥಳೀಯರು ಮತ್ತು ಕಾನೂನು ರೂಪಿಸುವವರು ಜೊತೆಯಲ್ಲಿ ಸಾಗುವುದರಿಂದ ಕಟ್ಟಬಹುದು ಒಳ್ಳೆಯ ನಾಡೊಂದನ್ನು ಹಾಗೂ ಉತ್ತಮೋತ್ತಮರ ನೆಲೆಯ ಆವಾಸವನ್ನು.

ಅಡಿ ಟಿಪ್ಪಣಿಗಳು

೦೧. Krishnaswamy O.M, Ranganatham M, Methodology Of Research In Social Science, Himalaya Publishing House, 2011.

೦೨. ಪ್ರಭಾಕರ ಎ.ಎಸ್, ಬುಡಕಟ್ಟು ಬದುಕಿನ ಸ್ಥಿತ್ಯಾಂತರಗಳು, ಪ್ರಸಾರಂಗ: ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೩. ಪ್ರಭಾಕರ ಎ.ಎಸ್.,(ಸಂ) ಆದಿವಾಸಿ ಆಖ್ಯಾನ, ಸಿದ್ಧಾರ್ಥ ಪ್ರಕಾಶನ: ಹೊಸಪೇಟೆ.

೦೪. ತಾರಿಹಳ್ಳಿ ಹನುಮಂತಪ್ಪ.,(ಸಂ), ಕರ್ನಾಟಕದ ಬುಡಕಟ್ಟು ಸಮುದಾಯಗಳು, ಪ್ರಸಾರಂಗ, ಕನ್ನಡವಿಶ್ವವಿದ್ಯಾಲಯ, ಹಂಪಿ. ೨೦೧೦,

೦೫. D.K Lal Das, Practice Of Social Research, 2010. Rawat Publication.

೦೬. Vasant Saberwal, Mahesh Rangrajan and Ashish Kothari, People, Parks and Wildlife, Towards Coexistence, Orient Longman Private Limited, 2001.

ಅಧ್ಯಾಯ ೨

ಅರಣ್ಯವಾಸಿಗಳು, ಸಂರಕ್ಷಣೆ, ಸ್ಥಳಾಂತರ ಮತ್ತು ಪುನರ್ವಸತಿಕರಣ

ವಿಷಯಗಳು

೦೧. ಅರಣ್ಯವಾಸಿಗಳು

೦೨. ಸಂರಕ್ಷಣೆ

೦೩. ಬ್ರಿಟೀಷ್ ವಸಹತು ಕಾಲದಲ್ಲಿ ಭಾರತದ ಅರಣ್ಯಗಳು

೦೪. ವಸಹತ್ತೋತ್ತರ ಭಾರತದಲ್ಲಿ ಅರಣ್ಯಗಳು

೦೫. ಭಾರತದಲ್ಲಿ ವನ್ಯಜೀವಿ ಸಂರಕ್ಷಣೆ

೦೬. ಸ್ಥಳಾಂತರ ಮತ್ತು ಪುನರ್ವಸತೀಕರಣ

೦೭. ತಾತ್ವಿಕ ಸಿದ್ಧಾಂತದ ಮಾದರಿಗಳು

೦೮. ಭೂ ಸ್ವಾದೀನ ಕಾಯ್ದೆ, ರಾಷ್ಟ್ರೀಯ ಹೆದ್ದಾರಿ ಕಾಯ್ದೆ ಮತ್ತು ಕರ್ನಾಟಕ ರಾಜ್ಯದ ಪುನರ್ವ್ಯವಸ್ಥೆಗೆ ಸಂಬಂಧಿಸಿದ ಕಾಯ್ದೆ ಮತ್ತು ತಿದ್ದುಪಡಿಗಳು

೦೯. ಭಾರತ ಮತ್ತು ಕರ್ನಾಟಕ ರಾಜ್ಯದಲ್ಲಿನ ಸ್ಥಳಾಂತರ ಮತ್ತು ಪುನರ್ವಸತೀಕರಣ, ಸ್ಥಳಾಂತರ ಮತ್ತು ಪುನರ್ವಸತೀಕರಣದ ಪರಿಣಾಮಗಳು

ಸಮಾರೋಪ

Nature is man's inorganic body, that is to say, nature in so far as it is not the human body. Man lives from nature, i.e. nature is his body, and he must maintain a continuing dialogue with it if he is not to die. To say man's physical and mental life is linked to nature simply means that nature is linked to itself, for man is a part of nature.

Karl Marx and Engels.......

ಅಧ್ಯಾಯ ೨

ಅರಣ್ಯವಾಸಿಗಳು, ಸಂರಕ್ಷಣೆ, ಸ್ಥಳಾಂತರ ಮತ್ತು ಪುನರ್ವಸತೀಕರಣ

ಮಾನವ ಸಂಘ ಜೀವಿ. ಸಂಘದೊಂದಿಗೆ ಸಮಾಜದ ಅಂಗವಾಗಿಯೂ ಆತ ಜೀವಿಸುತ್ತಿದ್ದಾನೆ. ಈವೆರಡು ಅಂಶಗಳು ಪರಿಸರದ ನಂಟಿನೊಂದಿಗೆ ಬೆಸೆದುಕೊಂಡಿರುವುದರಿಂದ ಮಾನವ ಪರಿಸರದ ಕೂಸಾಗಿದ್ದಾನೆ. ಅಂತೆಯೇ ಆ ಜೀವಿಯ ವಿಕಾಸಕ್ಕೆ ತಕ್ಕ ಪರಿಸರ ಅವಶ್ಯಕ. ಪ್ರಶಸ್ತ ಪರಿಸರರಹಿತ ಜೀವಿಯ ವಿಕಾಸ ಕಷ್ಟಸಾಧ್ಯ?. ಈ ನಿಟ್ಟಿನಲ್ಲಿ ಮಾನವ ಪರಿಸರದ ಅಂಶವಾಗಿ ತನ್ನ ಬೆಳವಣಿಗೆಗೆ ಅದರ ಮೇಲೆಯೇ ಅವಲಂಬಿತವಾಗಿದ್ದಾನೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಇಲ್ಲಿ ನಾವು ಪರಿಸರದ ಕುರಿತಾಗಿ ಪ್ರಸ್ತಾಪಿಸುತ್ತಿರುವುದರಿಂದ ಪರಿಸರ ಎಂದರೇನು? ಎಂದು ತಿಳಿಯುವುದು ಸೂಕ್ತ. ಪರಿಸರ ಎಂಬ ಶಬ್ಧವನ್ನು ಅತಿ ಸರಳವಾಗಿ ವಿವರಿಸುವುದಾದರೆ, ನಮ್ಮ ಸುತ್ತ ಮುತ್ತಲಿನಲ್ಲಿ ನಮಗೆ ಕಂಡುಬರುವ ವಾತಾವರಣ, ಗಾಳಿ, ಬಿಸಿಲು, ರಸ್ತೆ, ಮರಗಿಡಗಳು, ಪ್ರಾಣಿ ಮತ್ತು ಪಕ್ಷಿಗಳನ್ನೆಲ್ಲ ಪರಿಸರವೆಂದು ಹೇಳಬಹುದು. ಈ ಎಲ್ಲಾ ಅಂಶಗಳು ನಮಗೆ ಕಾಣಸಿಗುವುದು ಮೂಲವಾಗಿ ಅರಣ್ಯ ಪರಿಸರದಲ್ಲಿ. ಅರಣ್ಯವು ಪರಿಸರದ ಒಂದು ಭಾಗವಾಗಿದ್ದರೂ ಕೂಡ, ಪರಿಸರವೆಂದಾಕ್ಷಣ ನಾವು ಅರ್ಥೈಸಿಕೊಳ್ಳುವುದು ಅರಣ್ಯವನ್ನೆ. ಭೂಮಿಯ ಮೇಲೆ ಜನಿಸಿದ ಮಾನವ ಪರಿಸರದೊಂದಿಗೆ ತನ್ನ ಬದುಕು ಕಟ್ಟಿಕೊಳ್ಳಬೇಕಾದಂತಹ ಅನಿವಾರ್ಯತೆಯನ್ನು ಹೊಂದಿದ್ದಾನೆ. ಈ ದಾರಿಯಲ್ಲಿ ಪರಿಸರದ ಒಂದು ಭಾಗವಾದ 'ಅರಣ್ಯವು' ಆತನ ಸರ್ವತೋಮುಖ ಬೆಳವಣಿಗೆಗೆ ಸಾಕಷ್ಟು ಸಹಕಾರಿಯಾಗಿದೆ ಎಂದರೆ ಅದು ಅತಿಶಯೋಕ್ತಿಯಾಗಲಾರದು. ಮಾನವ ಮೂಲತಃ ಅಲೆಮಾರಿಯಾಗಿದ್ದವನು. ಅಲೆಮಾರಿಯಾಗಿ ಜೀವನ ನೆಡೆಸುತ್ತಿದ್ದವನು, ಒಂದೆಡೆ ನೆಲೆ ಕಂಡುಕೊಂಡು ಕುಟುಂಬದೊಂದಿಗೆ ವಾಸಿಸತೊಡಗಿದನು. ಕುಟುಂಬದ ನಿರ್ವಹಣೆಗಾಗಿ ಆತ ಪರಿಸರದ ಅಂಗವಾದ ಅರಣ್ಯವನ್ನು ಆಶ್ರಯಿಸತೊಡಗಿದನು. ಆಶ್ರಿತ ಮಾನವನು ಬೆಳೆಯುತ್ತ ನಾಗರೀಕತೆಯೆಡೆ ವಾಲ ತೊಡಗಿದ. ನಾಗರೀಕತೆಯ ಮಡುವಿನಲ್ಲಿ ಹೊಸ ಹೊಸ ಪ್ರಪಂಚಕ್ಕೆ ತನ್ನನ್ನು ತಾನು ಮುಕ್ತವಾಗಿಸಿಕೊಳ್ಳುತ್ತಾ, ಅರಣ್ಯದ ಒಡಲಿಂದ ಕೆಲವರು ಹೊರ ಬಂದರು. ಆದರೆ, ನಾಗರೀಕತೆಯ ಹಂಗನ್ನು ತೊರೆದು ಮೂಲ ಪರಿಸರವನ್ನೇ ಆಶ್ರಯಿಸಿದವರು, ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದವರು ಅರಣ್ಯವಾಸಿಗಳಾದರು. ಅರಣ್ಯವಾಸಿಗಳು ಅರಣ್ಯಗಳನ್ನು ತಮ್ಮ ದೈನಂದಿನ ಜೀವನದ ಭಾಗವಾಗಿ ಹೊಂದಿದರೂ ಕೂಡ ಎಂದಿಗೂ ಅದನ್ನು ಅನುಭೋಗಿಯ ದೃಷ್ಟಿಕೋನದಲ್ಲಿ ಗ್ರಹಿಸಲಿಲ್ಲ. ಅರಣ್ಯಗಳ ಮುಖಾಂತರ ತಮ್ಮ ಜೀವನಕ್ಕೆ ಬೇಕಾದ ಅಗತ್ಯ ವಸ್ತುಗಳನ್ನು ಪಡೆದುಕೊಳ್ಳುವುದು, ವನ್ಯಜೀವಿಗಳೊಂದಿಗೆ ಜೀವಿಸಿದರು ಅವುಗಳ ಉಪಟಳದಿಂದ ಎಂದಿಗೂ ಬೇಸರವಾಗದೆ, ಪೂರ್ವಜರ ಆಚರಣೆ, ಆದರ್ಶ ಮತ್ತು ಸಂಪ್ರದಾಯಗಳನ್ನು ತಮ್ಮ ಪೀಳಿಗೆಗು ಮತ್ತು ಮುಂದಿನ ಪೀಳಿಗೆಗೂ ಉಳಿಸಿಕೊಂಡು ಬೆಳಸಿಕೊಂಡು ಹೋಗುವ ನಿಟ್ಟಿನಲ್ಲಿ ಅರಣ್ಯವಾಸಿಗಳು ಸುಸಂಸ್ಕೃತರಾಗಿದ್ದಾರೆ. ನಾಗರೀಕರೆಂದು ಕರೆಸಿಕೊಳ್ಳವವರ ವಿವೇಚನೆಗೆ ಹೋಲಿಕೆ ಮಾಡಿ

ನೋಡಿದ್ದಲ್ಲಿ ಒಂದು ಹೆಚ್ಚಿನ ತೂಕದ ವೈಚಾರಿಕತೆ ಮತ್ತು ವಿವೇಚನೆ ಈ ಆದಿವಾಸಿ ಮತ್ತು ಅರಣ್ಯವಾಸಿ ಸಮುದಾಯಗಳಲ್ಲಿ ಕಂಡುಬರುತ್ತಿದೆ.

ಸಾಮಾಜಿಕವಾಗಿ ಇತರೆ ಸಮುದಾಯಗಳಿಗಿಂತ ಅರಣ್ಯವಾಸಿ ಗಿರಿಜನ ಸಮುದಾಯಗಳು ಭಿನ್ನತೆಯನ್ನು ಹೊಂದಿವೆ. ತಮ್ಮಲ್ಲಿರುವ ವಿಶೇಷವಾದ ಹೊಂದಾಣಿಕೆ ಜ್ಞಾನದ ಭಾಗವಾಗಿ, ಸಂಘರ್ಷಗಳಾದಾಗ ಅವುಗಳನ್ನು ತಮ್ಮ ಸಾಮಾಜಿಕ ಗುಂಪಿನಲ್ಲಿಯೇ ಪರಿಹರಿಸುವುದು, ತಪ್ಪಿತಸ್ಥರನ್ನು ಶಿಕ್ಷಿಸುವುದು ಹೊಂದಾಣಿಕೆಯಿಂದ ಜೀವನ ನಡೆಸುವಂತೆ ಮಾರ್ಗದರ್ಶಿಸುವುದು, ಎಂತಹ ಸಂದರ್ಭವೇ ಎದುರಾಗಲಿ ಅವರ ನಾಯಕರನ್ನು ಹೊರತು ಪಡಿಸಿ ಸಂವಹನ ಮಾಡುವ ಕಾರ್ಯವನ್ನು ಎಂದಿಗೂ ನಡೆಸಿಲ್ಲ. ಸಾಂಸ್ಕೃತಿಯ ವಿಚಾರವು ಅವರ ಸಾಮಾಜಿಕ ಕೊಡುಗೆಯಾಗಿದ್ದು, ಗುರುಹಿರಿಯರಿಗೆ ಗೌರವವನ್ನು ಸೂಚಿಸುವುದು, ಶಿಶುಗಳ ಶುಶ್ರೂಷೆ, ಆರೈಕೆ ಮತ್ತು ವೈವಾಹಿಕ ವ್ಯವಸ್ಥೆಗಳು ಎಲ್ಲವೂ ಕೂಡ ಭಿನ್ನವಾಗಿಯೇ ಇವೆ. ಇವುಗಳೆಲ್ಲವೂ ಅವರ ಜೀವನದ ಸಾರವಾಗಿವೆ. ಅರಣ್ಯಗಳಿಂದ ಉತ್ಪತ್ತಿಯಾಗುವ ಕಿರು ಉತ್ಪನ್ನಗಳನ್ನು ಬಳಸಿಕೊಂಡು ಅವರ ಆರ್ಥಿಕತೆಯನ್ನು ಕಂಡುಕೊಂಡಿದ್ದಾರೆ. ಆದರೆ ಅರಣ್ಯಗಳಿಗೆ ಮೋಸವನ್ನು ಮಾಡಿ ಎಂದಿಗೂ ಅವರು ಹಣವನ್ನು ಸಂಪಾದಿಸಿಲ್ಲ. ಉದಾಹರಣೆಗೆ: ಅರಣ್ಯಗಳಲ್ಲಿ ಮರಗಳೂ ಕಾಲಕಾಲಕ್ಕೆ ಬಿಡುವ ಹಣ್ಣುಗಳನ್ನು ಅವು ಮಾಗುವ ಮುನ್ನ ಎಂದಿಗೂ ಬಿಡಿಸಿಕೊಂಡಿಲ್ಲ ಬದಲಾಗಿ ಪ್ರಾಣಿ ಮತ್ತು ಪಕ್ಷಿಗಳಿಗೆ ಆಹಾರವಾಗಿ ಉಳಿದನಂತರ ಅವುಗಳನ್ನು ಬಳಸಿಕೊಂಡಿದ್ದಾರೆ. ಈ ಅಂಶಗಳು ಅವರು ತಮ್ಮ ಜೀವನದೊಂದಿಗೆ ಇತರೆ ಪ್ರಾಣಿಗಳ ಅವಲಂಬನೆಯ ಜೀವನಗಳ ಸಹಬಾಳ್ವೆಯೆನ್ನು ಪೋಷಿಸಿಕೊಂಡು ಬೆಳೆಸಿದ್ದಾರೆ. ಈ ಶಿಕ್ಷಣವನ್ನು ನಮಗೆ ಯಾವ ವಿಶ್ವವಿದ್ಯಾಲಯವು ಕಲಿಸುವುದಿಲ್ಲ. ಕಲಿಸಲಿಕ್ಕೆ ಅದು ಪಠ್ಯದ ಚಟುವಟಿಕೆಯೂ ಆಗಿಲ್ಲ. ಇದು ಅವರ ಜೀವನಾರ್ಥಕ ಆಚರಣೆಗಳಾಗಿ ಪೀಳಿಗೆ ಮುಖಾಂತರ ಮುಂದುವರೆದಿದೆ. ಅರಣ್ಯವಾಸಿ ಗಿರಿಜನ ಮತ್ತು ಇತರೆ ಸಮುದಾಯಗಳು ಶಿಕ್ಷಣದಿಂದ ದೂರವಿರಬಹುದು ಆದರೆ, ಯಾವ ಕಾಲೇಜು, ಶಿಕ್ಷಣ ಮಂದಿರಗಳು, ವಿಶ್ವವಿದ್ಯಾಲಯಗಳು ಕಲಿಸದೆ ಇರುವ ಪಾಠವನ್ನು ನೈಜವಾಗಿ ನಿಸರ್ಗದಿಂದಲೇ ಕಲಿತಿದ್ದಾರೆ. ಯಾವ ಋತುಮಾನಕ್ಕೆ ಯಾವ ಪರಿಯ ಆಹಾರ ಉತ್ಪಾದನೆಯಾಗುತ್ತದೆ ಮತ್ತು ಯಾವ ದಾನ್ಯಗಳನ್ನು ಬಳಕೆ ಮಾಡಿಕೊಳ್ಳಬೇಕು, ಯಾವ ಖಾಯಿಲೆಗೆ ಯಾವ ಸಸ್ಯದ ಮುಖಾಂತರ ಔಷಧಿಯನ್ನು ಸಿದ್ಧಪಡಿಸಿಕೊಳ್ಳಬೇಕು, ಎಷ್ಟು ದಿನಗಳ ಕಾಲ ತೆಗೆದುಕೊಳ್ಳಬೇಕು ಮತ್ತು ಹೇಗೆ ಅದನ್ನು ಬಳಸಿಕೊಳ್ಳಬೇಕು ಎಂಬ ಎಲ್ಲಾ ನೈಸರ್ಗಿಕ ಜ್ಞಾನವು ಅವರ ವೈಚಾರಿಕ ಜಾಣ್ಮೆಯಲ್ಲಿದೆ.

ಅಭಿವೃದ್ಧಿಯ ವ್ಯಾಪಕತೆಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಸಾಮ್ರಾಜ್ಯಶಾಹಿ ಬಂಡವಾಳಗಾರರ ಪ್ರಕಲ್ಪಗಳಿಗೆ ಇಂದು ರತ್ನಗಂಬಳಿ ಮುಖಾಂತರ ಸ್ವಾಗತವನ್ನು ಕೋರಲಾಗುತ್ತಿದೆ. ಇದರ ಪರಿಣಾಮವಾಗಿ ಅನೇಕ ಪೀಳಿಗೆಗಳಿಂದ ಅರಣ್ಯದಲ್ಲಿ ತಮ್ಮ ನೆಲೆಗಳನ್ನು ಕಂಡುಕೊಂಡಿದ್ದ ಆದಿವಾಸಿ ಗಿರಿಜನ ಮತ್ತು ಇತರೆ ಅರಣ್ಯವಾಸಿಗಳು ಸ್ಥಳಾಂತರವೆಂಬ ಭೂತಕ್ಕೆ ಬಲಿಯಾಗುತ್ತಿದ್ದಾರೆ. ಈ ಮೂಲಕ ಆದಿ ಕಾಲದಿಂದಲೂ ಸಾಮಾಜಿಕ ಸಂಘಟನೆಯೊಂದಿಗೆ ಬಾಳಿ ಬದುಕಿಕೊಂಡು

ಬಂದಿದ್ದ ಸಾಮಾಜಿಕ ಗುಂಪುಗಳು ವಿಘಟನೆಗೆ ಒಳಪಡುವುದರ ಮುಖಾಂತರ ಕುಟುಂಬಗಳಲ್ಲಿ ಒಡಕು ಮೂಡುತ್ತಿವೆ. ಸಂಪ್ರದಾಯಗಳು, ಗುರುಹಿರಿಯರ ರಕ್ಷಣೆ, ಆಚರಣೆಗಳು ಅನ್ಯ ಸಾಮಾಜಿಕ ನೆಲೆಗಳಲ್ಲಿ ಬದುಕುವ ಗೋಜಿನಲ್ಲಿ ಮರೀಚಿಕೆಯಾಗಿ ಕಾಣದಾಗುತ್ತಿವೆ. ಇಂದು ತಮ್ಮ ತನವನ್ನು ಉಳಿಸಿಕೊಳ್ಳುವುದು ಬಹಳ ದೊಡ್ಡ ಸವಾಲಾಗಿ ಪರಿಣಮಿಸಿದೆ. ಈ ಪರಿಯ ಸ್ಥಳಾಂತರದ ಚಟುವಟಿಕೆಗಳು ಅಭಿವೃದ್ಧಿ ಪ್ರಕಲ್ಪಗಳ ಅನುಷ್ಠಾನಕ್ಕಾಗಿಯೇ ಗತಿಸುತ್ತಾ ಬಂದರೆ, ಮುಂದಿನ ಪೀಳಿಗೆಗಳಿಗೆ ಅವರ ಸಂಸ್ಕೃತಿಗಳು ಇಲ್ಲವಾಗುವುದರೊಂದಿಗೆ ಆ ಸಾಮಾಜಿಕ ಸಂಘಟನೆಗಳು ತಮ್ಮ ಅಸ್ತಿತ್ವವನ್ನೇ ಉಳಿಸಿಕೊಳ್ಳಲಾರವು.

೧. ಅರಣ್ಯವಾಸಿಗಳು

'ಅರಣ್ಯವಾಸಿಗಳು' ಮೂಲತಃ ಅರಣ್ಯದಲ್ಲೇ ನೆಲೆಕಂಡವರು. ಸಾಮಾನ್ಯವಾಗಿ ಅರಣ್ಯವಾಸಿಗಳೆಂದರೆ, ನಾಗರೀಕತೆಯಿಂದ ದೂರ ಉಳಿದವರು, ಹಿಂದುಳಿದವರು, ಅನಾಗರೀಕರು, ಜಗತ್ತಿನ ಸಂಪರ್ಕದಿಂದ ಹೊರಗುಳಿದವರು, ಗೆಡ್ಡೆ ಗೆಣಸನ್ನು ತಿಂದು ಬದುಕುತ್ತಿರುವ ಸಮುದಾಯದವರು ಎಂದೆನಿಸಬಹುದು. ಆದರೆ, ಈ ಮಾತು ವ್ಯಕ್ತಿಯು ದೃಷ್ಟಿಸುವ ವೈಯಕ್ತಿಕ ವಿವೇಚನೆಗೆ ಬಿಟ್ಟಂತಹ ವಿಚಾರವಾಗಿದೆ. ನಮ್ಮನ್ನು ಆಳುವ ಪ್ರಭುತ್ವವು ಸಾಮಾನ್ಯವಾಗಿ ತನ್ನ ಎಲ್ಲೆಯೊಳಗೆ ಪ್ರತಿಯೊಂದು ಸಂಪನ್ಮೂಲದ ಮೇಲೆ ಪರಮಾಧಿಕಾರವನ್ನು ಹೊಂದಿರುತ್ತದೆ. ಪರಮಾಧಿಕಾರದ ಹಿನ್ನೆಲೆಯಲ್ಲಿ ಆಡಳಿತದ ಭಾಗವಾಗಿ ಕಾನೂನುಗಳು ರೂಪುಗೊಳ್ಳುತ್ತವೆ. ಕಾನೂನುಗಳು ಶ್ವೇತ ವರ್ಣದ ಕಾಗದದ ಮೇಲೆ ಕಪ್ಪು ಇಲ್ಲ ನೀಲಿ ಶಾಹಿಯ ಮುಖಾಂತರ ರಚಿತವಾಗಿ ಮುಖ್ಯಸ್ಥನ ಸಹಿ ಹಾಗೂ ಪ್ರಭುತ್ವದ ಮೊಹರಿನೊಂದಿಗೆ ಕಾರ್ಯಕಾರಿಣಿ ಮುಖಾಂತರ ಎಲ್ಲೆಯೊಳಗೆ ಅನುಷ್ಠಾನಗೊಳ್ಳುತ್ತವೆ. ಕಾನೂನು ರಚನೆಗಳು ಪ್ರಜೆಗಳಿಂದ ಚುನಾಹಿತರಾದ ಪ್ರತಿನಿಧಿಗಳಿಂದ ಅನುಮೋಧನೆ ದೊರೆತು ಕಾಯ್ದೆಗಳು ಕೂಡ ಆಗುತ್ತವೆ. ಕಾಯ್ದೆಗಳು ನಿರ್ದಿಷ್ಟ ವಿಷಯದ ಮೇಲೆ ಬೆಳಕು ಚೆಲ್ಲುವುದಲ್ಲದೆ ಕಾರ್ಯಗಳು ಹಾಗೂ ಅದರ ಒಳ ಮತ್ತು ಹೊರ ಪರಿಧಿಗಳು ಹೀಗೆ ನಡೆಯಬೇಕೆನ್ನುವ ಶಿಸ್ತುಬದ್ಧತೆಯನ್ನು ಒಳಗೊಂಡಿರುತ್ತದೆ. ಈ ನಿಟಿನಲ್ಲಿ ಅರಣ್ಯವಾಸಿಗಳೆಂದು ಉಲ್ಲೇಖಿಸುವೆಡೆ ಪ್ರಭುತ್ವವು ರಚಿಸಿದ ಕಾಯ್ದೆಯ ಅವಲೋಕನವು ಅಷ್ಟೆ ಉಚಿತವಾದುದು. ಆ ಪ್ರಕಾರ ಅರಣ್ಯವಾಸಿಗಳೆಂದು ಈ ಕೆಳಕಂಡವರನ್ನು ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, ೨೦೦೭. (೨೦೦೭ ರ ಅಧಿನಿಯಮ ಸಂ.೨) [೨೫ನೇ ಏಪ್ರಿಲ್, ೨೦೧೧ ರಂದು ಜಾರಿಯಲ್ಲಿದ್ದಂತೆ][೨]. ಅಧ್ಯಾಯ–೧ ಪ್ರಾರಂಭಿಕ (ಸಿ) "ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳು" ಎಂದರೆ, ಪ್ರಧಾನವಾಗಿ ಅರಣ್ಯಗಳಲ್ಲಿ ವಾಸಿಸುವ ಮತ್ತು ವಾಸ್ತಿಕ ಜೀವನೋಪಾಯ ಅವಶ್ಯಕತೆಗಳಿಗಾಗಿ ಅರಣ್ಯಗಳಲ್ಲಿ ವಾಸಿಸುತ್ತಿರುವ ಅಥವಾ ಅರಣ್ಯ ಜಮೀನುಗಳ ಮೇಲೆ ಅವಲಂಬಿತವಾಗಿರುವ ಮತ್ತು ಅನುಸೂಚಿತ ಬುಡಕಟ್ಟು ಸದಸ್ಯರು ಅಥವಾ ಸಮುದಾಯ ಎಂದು ಅರ್ಥ; ಮತ್ತು ಇದರಲ್ಲಿ ದನಗಾಹಿ ಸಮುದಾಯಗಳನ್ನು ಒಳಗೊಂಡಿರುವ ಅನುಸೂಚಿತ ಬುಡಕಟ್ಟಿನವರು ಸೇರುತ್ತಾರೆ.

(ಒ) "ಇತರ ಪಾರಂಪರಿಕ ಅರಣ್ಯವಾಸಿ" ಎಂದರೆ ೨೦೦೫ರ ಡಿಸೆಂಬರ್ ೧೩ ಕ್ಕಿಂತ ಮುಂಚೆ ಕೊನೆ ಪಕ್ಷ ಮೂರು ತಲೆಮಾರಿನವರೆಗೆ ಪ್ರಧಾನವಾಗಿ ಅರಣ್ಯಗಳಲ್ಲಿ ವಾಸಿಸಿದ ಮತ್ತು ವಾಸ್ತವಿಕ ಜೀವನೋಪಾಯದ ಅವಶ್ಯಕತೆಗಳಿಗಾಗಿ ಅರಣ್ಯದ ಅಥವಾ ಅರಣ್ಯಗಳ ಜಮೀನಿನ ಮೇಲೆ ಅವಲಂಬಿತರಾಗಿರುವ ಯಾರೇ ವ್ಯಕ್ತಿ ಅಥವಾ ಯಾವುದೇ ಸಮುದಾಯ; (ವಿವರಣೆ:– ಈ ಖಂಡದ ಉದ್ದೇಶಕ್ಕಾಗಿ, "ತಲೆಮಾರು" ಎಂದರೆ, ಇಪ್ಪತ್ತೈದು ವರ್ಷಗಳನ್ನು ಒಳಗೊಂಡಿರುವ ಒಂದು ಅವಧಿ; ಈ ಅಧಿನಿಯಮದ ಆಧಾರಿತವಾಗಿ ಉಲ್ಲೇಖಿಸಲ್ಪಟ್ಟ ಸಮುದಾಯಗಳನ್ನು (ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳು) ಆಧರಿಸಿ 'ಅರಣ್ಯವಾಸಿ'ಗಳೆಂದು ಪರಿಗಣಿಸಬಹುದು.

ಯಾವ ಸಮುದಾಯದ ಜನರು ಅರಣ್ಯಗಳನ್ನೇ ತಮ್ಮ ದೈವಿ ಸ್ಥಾನವೆಂದು ಪರಿಗಣಿಸಿ, ನಾಗರೀಕತೆಯ ಹಂಗಿನಲ್ಲಿ ತೇಲದೆ, ತಮ್ಮದೇ ಆದ ವಿಭಿನ್ನ ಸಂಸ್ಕೃತಿಯನ್ನು, ಸಾಮಾಜಿಕ ಸಂಘಟನೆಯನ್ನು, ಆಧ್ಯಾತ್ಮಿಕ ಚಿಂತನೆ (ಕಾಡು ಪೂಜೆ, ಹಿರಿಯರಲ್ಲಿ ನಂಬಿಕೆ, ಗಾಳಿ ಪೂಜೆ ಇತ್ಯಾಧಿ)ಮತ್ತು ನಾಗರೀಕ ಸಮುದಾಯದಲ್ಲಾಡುವ ಭಾಷೆಗಿಂತ ವಿಭಿನ್ನ ಭಾಷೆಯನ್ನು ತಮ್ಮ ಸಂವಹನ ಕಲೆಯಾಗಿ ಬಳಸಿಕೊಂಡರೋ ಮತ್ತು ಅರಣ್ಯದಲ್ಲೇ ವಾಸಿಸುತ್ತಿರುವ ಸಮುದಾಯಗಳು ಅರಣ್ಯವಾಸಿ ಬುಡಕಟ್ಟು ಸಮುದಾಯಗಳಾಗಿ ಗುರುತಿಸಿಕೊಂಡವು. ಬುಡಕಟ್ಟು ಸಮುದಾಯಗಳನ್ನು 'ಆದಿವಾಸಿ' ಸಮುದಾಯಗಳು ಎಂದು ಕೂಡ ಕರೆಯುತ್ತಾರೆ.'ಆದಿವಾಸಿ' ಎಂಬುದು ಭಾರತೀಯ ಮೂಲದ ಶಬ್ಧವಾಗಿದ್ದು ಅದಕ್ಕೆ 'ಮೂಲ ನಿವಾಸಿಗಳು' ಎಂಬ ಅರ್ಥವಿದೆ [೩]. 'ಟ್ರೈಬ್', 'ಶೆಡ್ಯೂಲ್ಡ್ ಟ್ರೈಬ್' ಮತ್ತು 'ಆದಿವಾಸಿ' ಎಂಬ ಪರಿಕಲ್ಪನೆಗಳು ಇಂಗ್ಲೀಷ್ ಪದವಾಗಿರುವ 'ಟ್ರೈಬ್' ಶಬ್ದವು ಲ್ಯಾಟಿನ್ ಭಾಷೆಯ 'ಟ್ರೈಬಸ್' ಎಂಬ ಮೂಲಪದದಿಂದ ಉತ್ಪತ್ತಿ ಹೊಂದಿದೆ. ಬ್ರಿಟೀಷ್ ಆಡಳಿತಾವಧಿಯಲ್ಲಿ ನಿಯುಕ್ತಿಗೊಂಡಿದ್ದ 'ಸೈಮನ್' ಕಮಿಷನ್ –೧೯೨೮ ಎಂಬ ಸಮಿತಿ ಮೊದಲಬಾರಿಗೆ ಪರಿಚಯಿಸಿದ 'ಷೆಡ್ಯೂಲ್ ಟ್ರೈಬ್' ಎಂಬ ಪದವನ್ನು ಭಾರತ ಇಂದಿಗೂ ಬಳಸತೊಡಗಿದೆ. ಭಾರತ ಸಂವಿಧಾನದ ೩೧೮ನೇ ಕಲಂನಲ್ಲಿ ಆದಿವಾಸಿಗಳನ್ನು 'ಪರಿಶಿಷ್ಟ ಪಂಗಡಗಳು' ಎಂಬರ್ಥದಲ್ಲಿ 'ಶೆಡ್ಯೂಲ್ಡ್ ಟ್ರೈಬ್ಸ್' ಎಂದು ಉಲ್ಲೇಖಿಸಿದ್ದು ಹೆಚ್ಚು ಬಳಕೆಯಲ್ಲಿದೆ. ಆದಿವಾಸಿಗಳ ಕುರಿತು ಅವರೊಂದಿಗೆ ಜೀವನ ನೆಡೆಸಿ ಅಧ್ಯಯನಗೈದ 'ವೆರಿಯರ್ ಎಲ್ವಿನ್' ಅವರು ಆದಿವಾಸಿಗಳನ್ನು 'ಎಬೊರ್ಜಿನಲ್ಸ್' – ಮೂಲನಿವಾಸಿಗಳೆಂದು, 'ಸರ್ ಬೈನ್ಸ್' ಎಂಬ ಜನಗಣತಿ ಅಧಿಕಾರಿಯೂ 'ಹಿಲ್ ಟ್ರೈಬ್ಸ್' ಎಂದು, ಡಾ.ಹಟ್ಟನ್ 'ಪ್ರಿಮೇಟಿವ್ ಟ್ರೈಬ್ಸ್' ಎಂದು, ಠಕ್ಕರ್ ಬಾಪಾ ಎಂಬ ಸಮಾಜ ಸುಧಾರಕರು 'ಆದಿಪ್ರಜಾ' ಎಂದು ಕರೆದಿದ್ದಾರೆ. ಆದಿವಾಸಿ ಸಮುದಾಯವನ್ನು ಕುರಿತು ಮಾನವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ವ್ಯಾಖ್ಯೆಗಳನ್ನು ಪ್ರತಿಪಾದಿಸಿದ್ದಾರೆ.

ಎಸಿ. ದುಬೆ: 'ಆದಿವಾಸಿ ಸಮೂಹವು ವಿಶಾಲ ವ್ಯಾಪ್ತಿಯ ಸಾಂಸ್ಕೃತಿಕ ಲಕ್ಷಣಗಳನ್ನು ಸಾಮಾನ್ಯವಾಗಿ ಹಂಚಿಕೊಂಡಿರುವ, ವಾಸ್ತವಿಕವಾದ ಅಥವಾ ವಾಸ್ತಕವಿಕವೆಂದು ಪ್ರತೀತಿಯಿರುವ

ವಂಶಾವಳಿಯನ್ನು ಹೊಂದಿದ್ದು ಮತ್ತು ಸಾಮೂಹಿಕ ಸ್ವರೂಪವನ್ನು ಹೊಂದಿರುವ[ಜನಾಂಗೀಯ ಅಥವಾ] ಮಾನವ ಬುಡಕಟ್ಟಾಗಿದೆ' ೬.

ಭಾರತದ ಇಂಪೀರಿಯಲ್ ಗೆಜೆಟಿಯರ್: 'ಒಂದೇ ಹೆಸರನ್ನು ಹೊಂದಿರುವ, ಒಂದೇ ಭಾಷೆಯನ್ನು ಮಾತನಾಡುವ, ಒಂದೇ ಸ್ಥಳದಲ್ಲಿ ವಾಸಮಾಡುವ ಅಥವಾ ವಾಸಿಸಲು ಉದ್ಯುಕ್ತವಾಗಿರುವ ಈ ಮೊದಲು ಒಳಪಂಗಡ ವಿವಾಹ ಪದ್ಧತಿಗೆ ಬದ್ದವಾಗಿದ್ದಿರಬಹುದಾದರೂ ಈಗ ಹಾಗಿಲ್ಲದ ಕುಟುಂಬಗಳ ಸಮೂಹವನ್ನು ಆದಿವಾಸಿ ಸಮುದಾಯ' (A tribe, as we find it in India, is a collection of families, or groups of families, bearing a common name which, as a rule, does not denote any specific occupation ; generally claiming common descent from a mythical or historical ancestor and occasionally from an animal, but in some parts of the country held together rather by the obligations of bloodfeud than by the tradition of kinship; usually speaking the same language; and occupying, or claiming to occupy, a definite tract of country.[೩]) ಎನ್ನಬಹುದು.

ಒಟ್ಟಿನಲ್ಲಿ ಆದಿವಾಸಿ ಅಥವಾ ಅನುಸೂಚಿತ ಅರಣ್ಯವಾಸಿ ಬುಡಕಟ್ಟುಗಳು ಸಾಮಾನ್ಯ ಭೂಪ್ರದೇಶದಲ್ಲಿ ನಾವು–ನಮ್ಮವರು ಎಂಬ ಭಾವನೆಯಿಂದ, ವಿಶಿಷ್ಟವಾದ ಹೆಸರುಗಳನ್ನಿಟ್ಟುಕೊಂಡು, ಅವರದೇ ಆದ ಭಾಷೆ, ರಕ್ತ ಸಂಬಂಧದ ಬಾಂಧವ್ಯವನ್ನು ಹೊಂದಿಕೊಂಡು, ಧಾರ್ಮಿಕ ನಂಬುಗೆಗಳ ಮೇಲೆ (ಕುಲದೇವಾತಾರಾಧನೆ, ಆತ್ಮವಾದ, ಪ್ರಕೃತಿ ಮತ್ತು ಪಿತೃ ಪೂಜೆ) ನಂಬಿಕೆಗಳನ್ನಿಟ್ಟುಕೊಂಡು, ತಮ್ಮದೇ ಆದ ರಾಜಕೀಯ ವ್ಯವಸ್ಥೆಯಡಿ ಒಂದಾಗಿ ಜೀವಿಸುತ್ತಿರುವ ಸಮೂಹಗಳಾಗಿವೆ.

ಇತರೆ ಪಾರಂಪರಿಕ ಅರಣ್ಯವಾಸಿಗಳು, ಬುಟಕಟ್ಟು ಅಥವಾ ಆದಿವಾಸಿ ಸಮುದಾಯಗಳನ್ನು ಹೊರತುಪಡಿಸಿ, ತಮ್ಮ ಜೀವನಕ್ಕಾಗಿ ಅರಣ್ಯದಲ್ಲಿ ಜೀವಿಸುತಿದ್ದು, ತಲಾಂತರದ ಅನುಭವಗಳನ್ನು ಅರಣ್ಯ ಜಮೀನುಗಳ ಮೇಲೆ ಇಟ್ಟುಕೊಂಡು, ಅರಣ್ಯ ಪ್ರದೇಶದ ಉತ್ಪನ್ನಗಳ ಮೇಲೆ ಆಧರಿಸಿ ತಮ್ಮ ಜೀವನವನ್ನು ನೆಡೆಸುತ್ತಿರುವ ಸಮುದಾಯಗಳಾಗಿವೆ. ಭಾರತದ ಬಹುಪಾಲು ಅರಣ್ಯವಾಸಿಗಳು ಸ್ವಾತಂತ್ರ್ಯ ಪೂರ್ವದಿಂದಲೂ ಅನೇಕ ರೀತಿಗಳಲ್ಲಿ ಸವಾಲು ಮತ್ತು ಸಮಸ್ಯೆಗಳನ್ನು ಎದುರುಗೊಳ್ಳುತ್ತಾ ಸಾಗಿ ಬಂದವರೆ ಹೆಚ್ಚು. ಬ್ರಿಟೀಷ್ ಕಾಲದಿಂದಲೂ ಒಂದಲ್ಲ ಒಂದು ರೀತಿಯಾಗಿ ಅರಣ್ಯವಾಸಿಗಳಿಂದ ಅರಣ್ಯ ಪ್ರದೇಶಗಳನ್ನು ಕಿತ್ತುಕೊಳ್ಳುವ ಯೋಜನೆಗಳು ಜಾರಿಗೆ ಬರುತ್ತಲೆ ಇವೆ. ಸುಂದರ ಅರಣ್ಯಗಳ ನಡುವೆ ಗೂಡು ಕಟ್ಟಿಕೊಂಡು ಸಹಬಾಳ್ವೆಯನ್ನು ನಡೆಸಿಕೊಂಡು ಬಂದಂತಹ ಸಮುದಾಯಗಳು ಅರಣ್ಯದ ರಕ್ಷಣೆಯನ್ನು ಕೂಡ ಮಾಡಿದ್ದಾರೆ. ಆದರೆ ಅರಣ್ಯವನ್ನು ಪ್ರಭುತ್ವವು ಸಂಪನ್ಮೂಲವನ್ನಾಗಿ ಪರಿಗಣಿಸಿದ ಮೇಲಂತೂ ಲಾಭಕ್ಕಾಗಿ ಬೆಕಾಬಿಟ್ಟಿ ನಾಶ ಮಾಡುತ್ತಲೆ ಬಂದಿದೆ. ಹಾಗಾಗಿ ಕಾಡಿನ ನಾಶಕ್ಕೆ ಮುಖ್ಯ ಕಾರಣ ನಮ್ಮನ್ನಾಳುವ ಪ್ರಭುತ್ವವೇ ಹೊರತು ಕಾಡಿನ ನಂಟಿನೊಂದಿಗೆ ತಮ್ಮ ಜೀವನವನ್ನು ಕಂಡುಕೊಂಡ ಈ

ಅರಣ್ಯವಾಸಿಗಳೆಲ್ಲ, ಜಾಗತೀಕರಣದ ಫಲವಾಗಿ ಕಾಡಿನ ನಡುವೆ ಅನುಕೂಲವಾದ ಅಲ್ಪಮಟ್ಟಿನ ಕೃಷಿ ಮಾಡಿಕೊಂಡು ಬದುಕುತ್ತಿದ್ದ ಅರಣ್ಯವಾಸಿಗಳು ಒತ್ತುವರಿ ಹೆಸರಿನಲ್ಲಿ ಕೋರ್ಟ ಆದೇಶದನ್ವಯ ತೆರವುಗೊಳಿಸಬೇಕಾದಂತಹ ಸ್ಥಿತಿ ಎದುರಾಗಿದೆ. ಈ ನಿಟ್ಟಿನಲ್ಲಿ ಅರಣ್ಯವಾಸಿಗಳಾದ ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳು ಅರಣ್ಯ ಪ್ರದೇಶದಿಂದ ಹೊರಬರುವಂತಹ ಸ್ಥಿತಿಗಳು ಎದುರಾಗಿವೆ. ಈ ಪರಿಸ್ಥಿತಿಯು 'ತಲೆಕಾಯ್ದವನ ತಲೆದಂಡ' ಎಂಬ ಸ್ಥಿತಿಗೆ ಬಂದು ನಿಂತಿದೆ. ಒಂದು ಕಾಲದಲ್ಲಿ ಬಲವಿದ್ದವರಿಗೆ ಅರಣ್ಯವನ್ನು ಬಳಸಿಕೊಳ್ಳಲು ಅನುವು ಮಾಡಿಕೊಟ್ಟು, ಅರಣ್ಯಗಳ ಕ್ಷೀಣಿಸುವಿಕೆಗೆ ಕಾರಣವಾದ ಪ್ರಭುತ್ವವು ಇಂದು 'ಸಂರಕ್ಷಣೆ' ಯ ಸಂಕೋಲೆಯಲ್ಲಿ ಅರಣ್ಯ ನಾಶವಾಗುವಿಕೆಯನ್ನು ತಡೆಯಲು ಮುಂದಾಗಿದ್ದು, ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುವ ಸಂದರ್ಭವನ್ನೊಡ್ಡಿದೆ. ಈ ದಿಶೆಯಲ್ಲಿ ಅರಣ್ಯ ಬೆಳೆಸುವಿಕೆಗೆ ಹಾಗೂ ರಕ್ಷಣೆಗೆ ಅತ್ಯಾವಶ್ಯಕವಾಗಿದ್ದ ಅರಣ್ಯವಾಸಿಗಳು ತಮ್ಮ ದೈವಿ ಸ್ಥಾನಗಳನ್ನು ತೊರೆದು ಕಾಂಕ್ರೀಟ್ ಕಾಡಿನತ್ತ ಪಯಣ (ವಿಶಾಲ ಸಮುದ್ರದಲ್ಲಿ ಆನಂದದಿಂದ ಜೀವಿಸುತ್ತಿದ್ದ ಮತ್ಸ್ಯವನ್ನು ಅಕ್ವೇರಿಯಂ ಎಂಬ ಸಂಕುಚಿತ ಸಂಕೋಲೆಯಲ್ಲಿ ಬಂಧಿಸಿಡುವ) ಬೆಳೆಸುವಂತಾಗಿದೆ. ಅರಣ್ಯದೊಳಗೆ ತನ್ನದೇ ಆದ ಸಂಸ್ಕೃತಿಯನ್ನು (ಆಚರಣೆಗಳು, ಉಡುಪು, ದೈವಗಳ ಪೂಜೆ, ಹಿರಿಯರ ಪೂಜೆ, ಸಂಪ್ರದಾಯಗಳು) ಹುಟ್ಟಿನಿಂದ ಬೆಳಸಿಕೊಂಡು ಬಂಧಿರುವ ಸಮುದಾಯಗಳ ಸಂಸ್ಕೃತಿ ವಿಘಟನೆ ಒಂದೆಡೆ, ಸಾಮಾಜಿಕವಾಗಿ ಸಂಘಟಿತವಾಗಿ ಎಲ್ಲಾ ಸಂದರ್ಭದಲ್ಲೂ ವಿವಿಧ ಸಮಸ್ಯೆಗಳನ್ನೆದುರಿಸಿ ತಮ್ಮ ತನವನ್ನು ಉಳಿಸಿಕೊಂಡ ಸಾಮಾಜಿಕ ಹೊಂದಾಣಿಕೆಯ ವಿಘಟನೆ, ಅವಿಭಕ್ತ ಕುಟುಂಬಗಳಾಗಿ ಹಿಡಿ ಹಿಡಿಯಾಗಿ ಬದುಕಿದ ಜೀವ ಸಂಕುಲಗಳು, ಅರಣ್ಯದಿಂದ ಹೊರ ಹೋಗುವ ಸಂದರ್ಭದಲ್ಲಿ ಕೌಟುಂಬಿಕ ವಿಘಟನೆ ಮತ್ತು ತನ್ನವರನ್ನೆಲ್ಲ ತೊರೆದು ಬೇರೆಡೆ ನೆಲೆ ಕಂಡುಕೊಳ್ಳುವೆಡೆ ಮಾನಸಿಕ ತೊಳಲಾಟ ಇವೆಲ್ಲದರ ನಡುವೆ ಆರೋಗ್ಯದಲ್ಲಿನ ಏರು ಪೇರುಗಳು ಅರಣ್ಯವಾಸಿ ಸಮುದಾಯಗಳು ಎದುರುಗೊಳ್ಳಬೇಕಾದ ಅನಿವಾರ್ಯತೆಯನ್ನು 'ಸಂರಕ್ಷಣೆ' ಎಂಬ ಆದೇಶ ಹೊರದೂಡಲು ಸಿದ್ಧವಾಗಿನಿಂತಿದೆ. ಹಾಗಾದರೆ ಏನಿದು 'ಸಂರಕ್ಷಣೆ'? ಯಾವುದಕ್ಕಾಗಿ 'ಸಂರಕ್ಷಣೆ'? ಅದರ ಅನಿವಾರ್ಯತೆ ಏನು? ಅದರಿಂದಾಗುವ ಪರಿಣಾಮ ಮತ್ತು ಪ್ರಯೋಜನಗಳೇನು? ಎಂಬ ಅಂಶಗಳು ನಮ್ಮ ಮನದಲ್ಲಿ ಮೂಡಬಹುದು. ಈ ನಿಟ್ಟಿನಲ್ಲಿ 'ಸಂರಕ್ಷಣೆ' ಕುರಿತಂತೆ ಮುಂದಿನ ಕ್ರಮಣಿಕೆಯಲ್ಲಿ ಸವಿಸ್ತಾರವಾಗಿ ಚರ್ಚಿಸೋಣ.

೨. 'ಸಂರಕ್ಷಣೆ'

ಸಾಮಾನ್ಯವಾಗಿ 'ಸಂರಕ್ಷಣೆ' ಎಂಬ ಪದವನ್ನು ನಿತ್ಯ ಜೀವನದಲ್ಲಿ ಅನೇಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಬಳಕೆ ಮಾಡಿರುವುದನ್ನು ನಾವು ಕಾಣುತ್ತೇವೆ. ಉದಾಹರಣೆಗೆ, ದ್ವಿಚಕ್ರ ವಾಹನದಲ್ಲಿ ನಾವು ಬೇರೊಂದು ಸ್ಥಳಕ್ಕೆ ಕ್ರಮಿಸುವಾಗ ಮಳೆ ಬರುವ ಸೂಚನೆಗಳು ಕಂಡುಬಂದರೆ, ಆ ಸಂದರ್ಭದಿಂದ ರಕ್ಷಿಸಿಕೊಳ್ಳಲು ವಿವಿಧ ಪರಿಕರಗಳನ್ನು ಬಳಸಿಕೊಳ್ಳುತ್ತೇವೆ. ಇದರ ಅರ್ಥವೇನೆಂದರೆ, ಜೋಪಾನ ಇಲ್ಲವೆ ಆ ಪರಿಸ್ಥಿತಿಯಿಂದ ರಕ್ಷಣೆಯನ್ನು ಪಡೆದುಕೊಳ್ಳುವುದಾಗಿದೆ. ಇದಲ್ಲದೆ ನಾವು ನಮ್ಮ ಮನೆಗಳಲ್ಲಿ ಚಿಕ್ಕಮಕ್ಕಳಿದ್ದರೆ ಅವರನ್ನು ಎಲ್ಲಾ ಸಂದರ್ಭಗಳಿಂದ ಹಾರೈಕೆ

ಮಾಡಲು ರಕ್ಷಣೆಯೆಂಬ ನುಡಿಯನ್ನು ಬಳಸುತ್ತೇವೆ. ಇದು ಕೇವಲ ವ್ಯಕ್ತಿಯ ಕುಟುಂಬಕ್ಕೆ ಸೀಮಿತವಾಗಿರದೆ, ಸ್ಥಳೀಯ ಸಮುದಾಯ, ಸಮಾಜ, ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದವರೆಗೂ ಎಲ್ಲಾ ಸಂದರ್ಭಗಳಲ್ಲಿ ಈ ಪದವು ಬಳಸಲ್ಪಡುತ್ತದೆ. ಅಂತೆಯೇ ನಮ್ಮ ದೇಶವನ್ನು ಗಡಿ ಭಾಗಗಳಲ್ಲಿ ಉಗ್ರವಾದಿಗಳ ನುಸುಳುವಿಕೆಯಿಂದ ಸಂರಕ್ಷಿಸುತ್ತಿರುವ ಭಾರತೀಯ ಸೈನಿಕರು, ದೇಶದ ಆಂತರಿಕ ಭದ್ರತೆಯನ್ನು ಸಂರಕ್ಷಿಸುತ್ತಿರುವ ಪೋಲಿಸರು, ಕೆಲವು ಸಂದರ್ಭಗಳಲ್ಲಿ ಪ್ರಜೆಗಳ ಮೂಲಭೂತ ಹಕ್ಕುಗಳು ಉಲ್ಲಂಘನೆಯಾದಾಗ ಅವುಗಳನ್ನು ಪ್ರಶ್ನಿಸುವಂತಹ ಸಂವಿಧಾನಿಕ ರಕ್ಷಣಾತ್ಮಕ ಹಕ್ಕುಗಳು ಹೀಗೆ ತರಾವರಿಯಾಗಿ ವಿವಿಧ ರೂಪಗಳಲ್ಲಿ 'ಸಂರಕ್ಷಣೆ' ಎಂಬ ಪದವನ್ನು ಬಳಸುವುದುಂಟು. ಪ್ರಸ್ತುತವಾಗಿ ಈ ನನ್ನ ಸಂಶೋಧನೆಯಲ್ಲಿ 'ಸಂರಕ್ಷಣೆ' ಎಂಬ ಪದವನ್ನು ಮೂಲತಃ ಅರಣ್ಯಗಳನ್ನು ಜೋಪಾನ ಮಾಡಿ ಅವುಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಹಾಗೂ ಸಂರಕ್ಷಣೆಯ ನೆಪದಲ್ಲಿ ಅರಣ್ಯವಾಸಿಗಳ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಚರ್ಚಿಸಲು ಮಾತ್ರ ಬಳಸಿಕೊಳ್ಳುತ್ತಿದ್ದೇನೆ. ಸಂರಕ್ಷಣೆ ಎಂಬುದು ಇಂದಿನ ಆವಿಷ್ಕಾರದ ಪದವೇನಲ್ಲ ಎಂದು ನಮಗನಿಸುತ್ತದೆ. ಮಾತಿನ ಸಂವಹನವನ್ನು ಕಲಿಯದೇ ಇದ್ದ ಆದಿ ಮಾನವರ ಯುಗದಲ್ಲೂ ಕೂಡ ಸಂರಕ್ಷಣೆ ಎಂಬುದು ಮೂಕ ಸಂಜ್ಞೆಯ ಮುಖಾಂತರವಾದರೂ ಇದ್ದೀತು ಎಂಬ ಭಾವನೆ ಇದೆ. 'ಸಂರಕ್ಷಣೆ' ಎಂಬ ಪದವು ವಾಸ್ತವಿಕ ಪ್ರಪಂಚದಲ್ಲಿ ಬಹು ದೊಡ್ಡ ಚರ್ಚಾ ವಿಷಯವಾಗಿ ಹೊರಹೊಮ್ಮುತ್ತಿದೆ. ಕಾರಣ, ಮಾನವನಿಗೆ ಅವಶ್ಯವೆನಿಸಿದ ಸಂಪನ್ಮೂಲಗಳು ಅವನ ಕುಹುಕ ದೃಷ್ಟಿಗೆ ಹಾಗೂ ಬಂಡವಾಳ ಶಾಹಿಯ ಅನುಭೋಗಕ್ಕೆ ತುತ್ತಾಗಿ ಬರಿದಾಗುತ್ತಾ ಸಾಗುತ್ತಿರುವುದು. ಈ ಪರಿಸ್ಥಿತಿ ಮುಂದಿನ ದಿನ ಮಾನಗಳಲ್ಲಿ ಎಷ್ಟೇ ಹಣದ, ಇಲ್ಲವೆ ಇತರ ರೂಪದಲ್ಲಿ ಅದನ್ನು ನಿಸರ್ಗದತ್ತವಾಗಿ ಪಡೆದುಕೊಳ್ಳಲು ಸಾಧ್ಯವಾಗದೇ ಇರುವಂತಹ ಪರಿಸ್ಥಿತಿಯನ್ನು ಇಂದೇ ಕಾಣುವಂತಾಗಿದೆ. ಈ ಸ್ಥಿತಿಯು ಮಾನವನನ್ನು ಮುಂದಿನ ಪೀಳಿಗೆಯ ಸರ್ವತೋಮುಖ ಬೆಳವಣಿಗೆ ಹೇಗೆ ಎಂಬಂತಹ ಪ್ರಶ್ನೆಯನ್ನು (?) ಉತ್ತರವನ್ನು ಹುಡುಕಿ ತೆಗೆಯಲಾರದಂತಹ ಸ್ಥಿತಿಗೆ ದೂಡಲಾರಂಭಿಸಿದೆ. ಕಾರಣ ನೈಸರ್ಗಿಕ ಸಂಪತ್ತಿನ ಪ್ರಮಾಣ ಅದರಲ್ಲಿಯೂ ಅರಣ್ಯ ಸಂಪತ್ತಿನ ಪ್ರಮಾಣ ಕಡಿಮೆಯಾಗಿರುವುದು ಪ್ರಮುಖವಾದುದಾಗಿದೆ. ಅರಣ್ಯ ಸಂಪತ್ತಿನ ಕಡಿಮೆ ಪ್ರಮಾಣದಿಂದಾಗಿ ಮಾನವನನಿಗೆ ತನ್ನ ದೈನಂದಿನ ದೇಹದ ಕಾರ್ಯಚರಣೆಗೆ ಅಗತ್ಯವಿರುವ ಕುಡಿಯುವ ನೀರಿನ ಪ್ರಮಾಣವು ಸಹ ದಕ್ಕದ ಸ್ಥಿತಿ ಮುಂದೆ ಬರಬಹುದೆಂಬ ಆತಂಕ ಮನೆ ಮಾಡಿದೆ. www.bbc.com ಅಧ್ಯಯನದ ಕ್ರಮದಲ್ಲಿ ೭೦% ನೀರು ಈಡೀ ಭೂಮಂಡಲವನ್ನು ಆಕ್ರಮಿಸಿದೆ. ಆದರೆ ಅದರಲ್ಲಿ ೯೭.೫% ನೀರು ಸಮುದ್ರದಿಂದ ಕೂಡಿದ್ದು, ಕುಡಿಯುವುದಕ್ಕೆ ಯೋಗ್ಯವೆನಿಸಿಲ್ಲ. ಜನಸಂಖ್ಯಾ ಸ್ಫೋಟದೊಂದಿಗೆ ಜಾಗತಿಕ ತಾಪಮಾನದಲ್ಲಾಗುತ್ತಿರುವ ಏರಿಕೆ ಮಾನವನಿಗೆ ಅಗತ್ಯವಿರುವ ಕುಡಿಯುವ ನೀರಿನ ಅವಶ್ಯಕತೆಯನ್ನ ಕಠೋರ ಸ್ಥಿತಿಗೆ ತಂದು ನಿಲ್ಲಿಸುತ್ತಿದ್ದು, ಇಂದು ಜಾಗತಿಕ ಮಟ್ಟದಲ್ಲಿ ಕುಡಿಯುವ ನೀರಿನ ಅವಶ್ಯಕತೆ ೨೦೦೦ ದಿಂದ ೨೦೫೦ ರ ವೇಳೆಗೆ ೫೫% ಏರಿಕೆಯಾಗಲಿದೆ.[೬] ಇದು ಸಂದಿಗ್ಧ ಪರಿಸ್ಥಿತಿಯನ್ನು ಎದರು ನೋಡುವಂತೆ ಮಾಡಿದೆ. ಜಾಗತಿಕ ಜಗತ್ತಿನಲ್ಲಿ ೧೯೯೦ರ ವೇಳೆಯಲ್ಲಿ ೩೧.೮% ಇದ್ದಂತಹ ಅರಣ್ಯ ಪ್ರದೇಶವು ೨೦೧೪ ರ ವೇಳೆಗೆ ೩೦.೮% ಗೆ ಇಳಿಕೆಯಾಗಿದೆ [೭]. ಭಾರತ ದೇಶದ ಅರಣ್ಯ ಪ್ರದೇಶವನ್ನು ಅವಲೋಕಿಸಿದ ಯು.ಎನ್ ನ ಆಹಾರ ಮತ್ತು ಕೃಷಿ ಸಂಘಟನೆ ವರದಿ

ಅನುಸಾರವಾಗಿ ೨೦೧೦ ರಲ್ಲಿ ೨೨% ಇದ್ದಂತಹ ಅರಣ್ಯ ಭೂಮಿ ೨೦೧೫ ರ ವೇಳೆಗೆ ೨೩.೮% ಹೆಚ್ಚುವರಿಯಾಗಿ ಬೆಳವಣಿಗೆಯಾಗಿದೆ [೮]. ಆದರೂ ಇನ್ನು ಹೆಚ್ಚುವರಿ ಅರಣ್ಯ ಪ್ರದೇಶದ ಸಂರಕ್ಷಣೆ ಆಗ ಬೇಕೆನ್ನುವುದು ಕೆಲವರ ವಾದವಾಗಿದೆ. ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ವಿಷಯವೇನೆಂದರೆ, ನಾವು ಪರಿಸರವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಹಾಗೆಯೇ ಪರಿಸರ ಸಂರಕ್ಷಣೆ ಎಲ್ಲರ ಹೊಣೆಯೂ ಕೂಡ ಆಗಿದೆ. ವಾಸ್ತವಿಕ ಜಗತ್ತಿನಲ್ಲಿ ಇಂದು ಅರಣ್ಯನಾಶದ ಪರಿಣಾಮವಾಗಿ ಜಾಗತಿಕ ತಾಪಮಾನದ ಏರಿಕೆಯೊಂದಿಗೆ ಹಸಿರು ಮನೆ ಪರಿಣಾಮವೂ ಸಂಭವಿಸಿದೆ. ವಾತಾವರಣದಲ್ಲಿನ ಕಾರ್ಬನ್ ಡೈ ಆಕ್ಸೈಡ್ ಅನಿಲ (CO_2 liberation) ಅತಿ ಹೆಚ್ಚು ಬಿಡುಗಡೆಯಿಂದಾಗಿ ತಾಪಮಾನ ಏರಿಕೆಯಾಗುತ್ತದೆ, ವರ್ಷದಿಂದ ವರ್ಷಕ್ಕೆ ತಾಪಮಾನವು ಏರಿಕೆಯಾಗುತ್ತಿದ್ದು, ವಾರ್ಷಿಕವಾಗಿ ಮಳೆಯ ಪ್ರಮಾಣ ಕಡಿಮೆಗೊಂಡು ಆಹಾರ ಧಾನ್ಯಗಳ ಸಂಗ್ರಹಣೆಯು ಕಷ್ಟಸಾಧ್ಯವಾಗುತ್ತಿದೆ, ಬರಗಾಲ ಹಾಗೂ ಕುಡಿಯುವ ನೀರಿಗೆ ಬವಣೆಯು ಹೆಚ್ಚಾಗುತ್ತಿರುವುದನ್ನು ಇತ್ತೀಚಿನ ಪತ್ರಿಕೆಗಳ ವರದಿ ಅನುಸಾರ ತಿಳಿಯಬಹುದು. ಇದನ್ನು ಪರಿಣಾಮಕಾರಿಯಾಗಿ ತಡೆಯಲು ಅರಣ್ಯಗಳ ಪ್ರಮಾಣದಲ್ಲಿ ಹೆಚ್ಚಳವನ್ನು ಮಾಡಬೇಕು ಹಾಗೂ ಕಾರ್ಬನ್ ಡೈಆಕ್ಸೈಡ್ ಅನಿಲ ಬಿಡುಗಡೆಯ ಮೇಲೆ ನಿಯಂತ್ರಣವೂ ಆಗಬೇಕು. ಜಾಗತಿಕ ಜಗತ್ತಿನ ಇರುವ ಪರಿಸ್ಥಿತಿಯನ್ನು ಸುಧಾರಿಸಲು ಅರಣ್ಯ ಸಂರಕ್ಷಣೆಯು ಅನಿವಾರ್ಯತೆಯಾಗಿದೆ.

ಭಾರತ ದೇಶದ ಸಂದರ್ಭವನ್ನು ಅನುಲಕ್ಷಿಸಿದಾಗ, ಭೌಗೋಳಿಕವಾಗಿ ನಮ್ಮ ಭಾರತದೇಶ ಅದ್ಭುತವಾದಂತಹ ವೈವಿಧ್ಯಮಯ ಭೂಪ್ರದೇಶವನ್ನು ಹೊಂದಿದೆ. ಉತ್ತರದಲ್ಲಿ ಮಂಜಿನಿಂದಾವೃತವಾಗುವ ಹಿಮಾಲಯದ ಭದ್ರ ಕೋಟೆ, ದಕ್ಷಿಣದಲ್ಲಿನ ದಖನ್ ಪ್ರಸ್ತಭೂಮಿಯ ಉಷ್ಣವಲಯದ ಮಳೆ ಆಶ್ರಿತ ಅರಣ್ಯ ಪ್ರದೇಶಗಳು, ಪೂರ್ವದಲ್ಲಿ ನೀರಾರಿದ ಮರುಭೂಮಿ ಮತ್ತು ಪಶ್ಚಿಮದಲ್ಲಿ ಮೆಕ್ಕಲು ಮಣ್ಣಿನ ಪ್ರವಾಹದ ಭೂಮಿಗಳು, ಇದರೊಂದಿಗೆ ಭಾರತವು ತನ್ನ ಆರ್ಥಿಕ ಬೆನ್ನೆಲುಬಿನ ಸಂಸ್ಕೃತಿಯಾದ ಕೃಷಿ ಚಟುವಟಿಕೆಯ ವಾತಾವರಣ ಮತ್ತು ಸಸ್ಯ ವಲಯವನ್ನು ಹೊಂದಿದೆ. ಭಾರತದಲ್ಲಿ ಅರಣ್ಯ ಪ್ರದೇಶಕ್ಕೆ ಸಾಂಪ್ರದಾಯಿಕ ಹಿನ್ನೆಲೆ ಇದ್ದು, ಈ ಪ್ರದೇಶಗಳು ಋಷಿ ಮುನಿಗಳಿಗೆ, ಆಚಾರ್ಯರರಿಗೆ, ಭಿಕ್ಷುಗಳಿಗೆ ನಿವಾಸ ಸ್ಥಾನವಾಗಿತ್ತು. ನದಿ ಹಂಚಿನ ಪ್ರದೇಶಗಳಲ್ಲಿ ಅರಣ್ಯಗಳ ಸಮೂಹವನ್ನೇ ವೃದ್ಧಿಸಿದ್ದರು. ಆದ್ದರಿಂದ ಅರಣ್ಯ ಪ್ರದೇಶವನ್ನು ಪೂಜ್ಯನೀಯ ಸ್ಥಾನದಲ್ಲಿ ಪೂರ್ವಿಕರು ಕಾಣುತ್ತಾ, 'ದೇವಿ' ಇಲ್ಲವೆ 'ತಾಯಿ' ಎಂದು ಪರಿಗಣಿಸುತ್ತಿದ್ದರು.

ಕ್ರಿ.ಶ ೫ನೇ ಶತಮಾನದಲ್ಲಿ 'ಯಜ್ಞವಲ್ಕ್ಯ ಸ್ಮೃತಿ' ಆಧಾರವಾಗಿ ಮರಗಳನ್ನು ಕಡಿದವರಿಗೆ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು ಎಂಬ ಉಲ್ಲೇಖವಿದೆ. ಅದೇ ಪ್ರಕಾರವಾಗಿ ಚಂದ್ರಗುಪ್ತ ಮೌರ್ಯ ನ ಕಾಲದಲ್ಲಿ ಅರಣ್ಯ ಸಂರಕ್ಷಣೆಯನ್ನು ವನಪಾಲಕರು ಮತ್ತು ಕುಪಾಧ್ಯರು ನೋಡಿಕೊಳ್ಳುತ್ತಿದ್ದರು ಎಂಬ ಉಲ್ಲೇಖವಿದೆ [೯]. ಹಾಗೆಯೇ ದೇವನಾಂಪ್ರಿಯ ಎಂದೇ ಪ್ರಸಿದ್ಧಿಯಾಗಿದ್ದ ಅಶೋಕ ಚಕ್ರವರ್ತಿ ತಾನು ನಿರ್ಮಿಸಿದ ಸ್ತಂಭಗಳಲ್ಲಿ (The Edicts of King Asoka - The state had a responsibility not just to protect and promote the welfare of its people but also its wildlife. Hunting certain species of wild animals was banned, forest and wildlife reserves were established and

cruelty to domestic and wild animals was prohibited. (Dhammika, ೧೯೯೩)[೧೦] ರಾಜ್ಯಕ್ಕೆ ಪ್ರಜೆಗಳ ರಕ್ಷಣೆ ಮತ್ತು ಅವರ ಕಲ್ಯಾಣದ ಜೊತೆಗೆ ಅಲ್ಲಿರುವ ವನ್ಯಜೀವಿಗಳ ಸಂರಕ್ಷಣೆ ಜವಾಬ್ದಾರಿ ಇದೆ ಎಂದು. ಹಾಗೂ ಖಚಿತವಾದ ಕೆಲವು ವನ್ಯಜೀವಿಗಳನ್ನು ಬೇಟೆಯಾಡದಂತೆ ಮತ್ತು ಆ ಪ್ರದೇಶಗಳನ್ನು ಕಾಯ್ದಿರಿಸಿ ನಾಡ ಪ್ರಾಣಿ ಹಾಗೂ ವನ್ಯಜೀವಿಗಳಿಂದ ನಿರ್ಬಂಧಿಸಬೇಕು ಎನ್ನುವ ಸಾರಾಂಶವನ್ನು ಉಲ್ಲೇಖಿಸಲಾಗಿದೆ. ಇಲ್ಲಿ ಸರ್ವರಿಗೂ ಸಮಪಾಲಿನ ಅವಕಾಶ ಹಾಗೂ ಬದುಕುವ ಹಕ್ಕು ಎಲ್ಲರಿಗೂ ಇದೆ ಎಂಬ ಸಂದೇಶವೆಂದರೆ ಅದು ತಪ್ಪಾಗಲಾರದು. ಆ ಕಾಲದ ವೇಳೆಯಲ್ಲಿ ರಾಜ ಮಹರಾಜರೇ ತಾವಾಳುವ ರಾಜ್ಯದಲ್ಲಿ ಸಂರಕ್ಷಣಾ ದೃಷ್ಟಿಯಿಂದ ಎಲ್ಲವನ್ನು ಸಮಾನ ದೃಷ್ಟಿಯಲ್ಲಿ ಕಂಡರು. ಆದರೆ ಕಾಲ ಕಳೆದಂತೆ ಈ ವ್ಯವಸ್ಥೆಯು ವ್ಯಾಪಾರಕ್ಕಾಗಿ ಅನುಮತಿ ಕೋರಿ ಬಂದ ಸಾಮ್ರಾಜ್ಯಶಾಹಿ ಕುಹಿಕ ರಾಜಕಾರಣದ ಬ್ರಿಟೀಷ್ ವ್ಯವಸ್ಥೆಯಲ್ಲಿ ಬೇರೆ ರೀತಿಯ ಪರಿಸ್ಥಿತಿಗಳನ್ನು ಪ್ರಜೆಗಳು ಕಾಣುತ್ತಾ ಹೋದರು.

೩. ಬ್ರಿಟೀಷ್ ವಸಾಹತು ಕಾಲದಲ್ಲಿ ಭಾರತದ ಅರಣ್ಯಗಳು

ಬ್ರಿಟೀಷ್ ವಸಾಹತು ಕಾಲದಲ್ಲಿ ಭಾರತದಲ್ಲಿದ್ದ ಅರಣ್ಯ ಪ್ರದೇಶಗಳಲ್ಲಿ ಬೆಳೆಯುತ್ತಿದ್ದ ಪ್ರಮುಖ ಸಂಪನ್ಮೂಲಗಳಾದ ತೇಗ, ಬೀಟೆಯಂತಹ ಮರಗಳನ್ನು ಯುದ್ಧ ಸಾಮಗ್ರಿಗಳ ತಯಾರಿಕೆಗಾಗಿ ಹೆಚ್ಚು ಹೆಚ್ಚು ಬಳಕೆ ಮಾಡಲಾಯಿತು. ೧೯ನೇ ಶತಮಾನದ ಆರಂಭದಲ್ಲಿ ಬೆಲೆಬಾಳುವ ತೇಗದ ಮರಗಳಿಂದ 'ರಾಯಲ್ ನೇವಿ' ಹಡಗುಗಳನ್ನು ನಿರ್ಮಾಣ ಮಾಡಿಕೊಂಡು ಆಂಗ್ಲೋ-ಫ್ರೆಂಚ್ ಕದನಗಳಲ್ಲಿ, ತದನಂತರ ವ್ಯಾಪಾರ ವಹಿವಾಟುಗಳಿಗೆ ಬಳಸಿಕೊಳ್ಳಲಾಯಿತು. ಈ ಪ್ರಕಾರದ ಲಾಭವನ್ನು ಪಡೆಯುವುದಕ್ಕಾಗಿಯೇ ೧೮೦೬ರಲ್ಲಿ ಕೇರಳದ 'ಮಲಬಾರ್' ಅರಣ್ಯ ಪ್ರದೇಶವನ್ನು ಮೀಸಲಾಗಿ ಮಾಡಿಕೊಂಡರು. ತರುವಾಯದ ಕಾಲದಲ್ಲಿ ಅರಣ್ಯದಲ್ಲಿರುವ ಬೃಹತ್ ಸಂಪನ್ಮೂಲವನ್ನು ಲೂಟಿ ಮಾಡುವ ಸಲುವಾಗಿ ತಂತ್ರಜ್ಞಾನ ಆಧಾರಿತ ರೈಲ್ವೆ ಜಾಡುಗಳನ್ನು ಸ್ಥಾಪಿಸಕೊಂಡರು[೧೧]. ಇವುಗಳ ಮೂಲಕ ಬಂದರು ಪ್ರದೇಶಗಳಿಗೆ ಸಾಂಬಾರು ಪದಾರ್ಥಗಳನ್ನು ಸಾಗಿಸಲು ಹಾಗೂ ಉತ್ತಮ ಸಂಪನ್ಮೂಲಗಳನ್ನು ಕೊಂಡೊಯ್ಯಲು ರಹದಾರಿಗಳನ್ನು ಕಂಡುಕೊಂಡರು. ಇದರ ಫಲವಾಗಿ ೧೮೬೦ ರಿಂದ ೧೯೨೦ರ ವೇಳೆಗೆ ೧,೩೪೯ ಕಿ.ಮೀ ಇಂದ ೫೧,೬೫೮ ಕಿ.ಮೀಗೆ ರೈಲ್ವೆ ಹಾದಿಗಳು ವಿಸ್ತಾರಗೊಂಡವು. ೧೮೬೨ರ ವೇಳೆಯಲ್ಲಿ ಭಾರತದ ಅರಣ್ಯ ಪ್ರದೇಶಗಳು 'ಅಕ್ಷಯ ಪಾತ್ರೆ' ಗಳಂತೆ ಕಾಣತೊಡಗಿದವು. ಇವುಗಳ ಮೇಲೆ ನಿಯಂತ್ರಣಗಳನ್ನು ಹೊಂದುವ ಸಲುವಾಗಿ ಗರ್ವನರ್ ಜನರಲ್ ಲಾರ್ಡ ಡಾಲ್ ಹೌಸಿಯು 'ಅರಣ್ಯ ಸಂರಕ್ಷಣೆ'ಗೆ ಅಡಿಪಾಯ ಹಾಕಿದನು. ತರುವಾಯ ೧೮೬೫ರಲ್ಲಿ ಅರಣ್ಯ ಕಾಯ್ದೆಯನ್ನು ಜಾರಿ ತರಲಾಯಿತು. ಈ ಕಾಯ್ದೆ ಅನ್ವಯ ಯಾವ ಅರಣ್ಯ ಪ್ರದೇಶಗಳನ್ನು ಆಶ್ರಯಿಸಿ ಸುಗಮವಾದ ಜೀವನವನ್ನು ಸಾಗಿಸುತ್ತಿದ್ದ ಅರಣ್ಯವಾಸಿಗಳಿಗೆ ದಿನವಹಿ ಕಾರ್ಯ ಚಟುವಟಿಕೆಗೆ ಅಗತ್ಯವಿರುವ ಉರುವಲುಗಳು, ಆಹಾರ ಪದಾರ್ಥಗಳನ್ನು ಹಾಗೂ ಸಾಂಸ್ಕೃತಿಕವಾಗಿ ಆಚರಿಸುವ ಸಂಪ್ರದಾಯಗಳನ್ನು ಆಚರಿಸದಂತೆ ನಿರ್ಬಂಧಗಳನ್ನು ಏರತೊಡಗಿದರು. ತರುವಾಯ ೧೮೬೫ ರಲ್ಲಿ ಏಕಸ್ವಾಮ್ಯದ ಪರಮಾಧಿಕಾರವನ್ನು ಸ್ಥಾಪಿಸಿಕೊಂಡು ೧೮೭೮ರ ವೇಳೆಗೆ ಮೊದಲ

"ಭಾರತೀಯ ಅರಣ್ಯ ಕಾಯ್ದೆ" ಯನ್ನು ಜಾರಿ ತಂದರು. ಈ ಕಾಯ್ದೆ ಕೇವಲ ಭಾರತ ಅರಣ್ಯ ಪ್ರದೇಶಕ್ಕೆ ಸೀಮಿತಗೊಳ್ಳದೆ ಬ್ರಿಟೀಷ್ ವಸಾಹತು ಪ್ರದೇಶಗಳಿಗೂ ಕೂಡ ಅನ್ವಯಗೊಂಡಿತು. ಈ ವೇಳೆಯಲ್ಲಿಯೇ ಮೊದಲ ಇನ್‌ಸ್ಪೆಕ್ಟರ್ ಜರ್ನಲ್ ಆಫ್ ಫಾರೆಸ್ಟ್ "ಭಾರತದ ಅರಣ್ಯಗಳ ಪಿತಾಮಹಾ" (Father of Indian Forestry- Dietrich Brandis) ಡೆಟ್ರಿಚ್ ಬ್ರಂಡಿಸ್‌ನ ನೇಮಕವಾಯಿತು. ಬ್ರಂಡಿಸ್ ಭಾರತಕ್ಕೆ ಆಧುನಿಕ ಅರಣ್ಯ ವ್ಯವಸ್ಥೆಗೆ ಬುನಾದಿಯನ್ನು ಹಾಕಿದನು. ಈತ ಮೂಲತಃ ಜರ್ಮನಿಯ ಬೂನ್ ವಿಶ್ವವಿದ್ಯಾಲಯದಲ್ಲಿ ಸಸ್ಯಶಾಸ್ತ್ರ ವಿಭಾಗದಲ್ಲಿ ಪದವಿ ಪಡೆದಿದ್ದವನು. ಬ್ರಂಡಿಸ್ ವೇಳೆಯಲ್ಲಿಯೇ ಭಾರತದಲ್ಲಿ ಮೂರು ರೀತಿಯ ಅರಣ್ಯಗಳನ್ನು ಗುರುತು ಮಾಡಿಸಿ ಅವುಗಳನ್ನು ವಿಂಗಡಿಸಲಾಯಿತು. ಅದರ ಪ್ರಕಾರ 'ಕಾಯ್ದಿರಿಸಿದ', 'ಸಂರಕ್ಷಿತ' ಮತ್ತು 'ಗ್ರಾಮ ಅರಣ್ಯ' ಪ್ರದೇಶಗಳೆಂದು ವಿಭಾಗಿಸಲಾಗಿ ನಿಯಂತ್ರಣವನ್ನು ಹೇರಲಾಗಿತ್ತು. ಅರಣ್ಯ ಪ್ರದೇಶಗಳಲ್ಲಿನ ಜನರ ಮೇಲೆ ನಿಯಂತ್ರಣಗಳನ್ನು ಏರಲು ಕೆಲವು ಅರಣ್ಯ ವಾಸಿತ ಸಮುದಾಯಗಳನ್ನು ಅವುಗಳ ಚಟುವಟಿಕೆಗಳನ್ನು ಹತೋಟಿಯಲ್ಲಿಡಲು ೧೨ ಅಕ್ಟೋಬರ್ ೧೮೭೧ ರಲ್ಲಿ "ಕ್ರಿಮಿನಲ್ ಟ್ರೈಬ್ ಕಾಯ್ದೆ" ಯನ್ನು ಜಾರಿಗೊಳಿಸಲಾಯಿತು, ಈ ಕಾಯ್ದೆಯು ಪ್ರಾರಂಭದಲ್ಲಿ ಉತ್ತರ ಭಾರತದಲ್ಲೂ, ೧೮೭೬ರ ವೇಳೆಗೆ ಬಂಗಾಳ ಪ್ರಾಂತ್ಯಕ್ಕೂ ಮತ್ತು ೧೯೧೧ ರ ವೇಳೆಗೆ ಮದ್ರಾಸ್ ಪ್ರಾಂತ್ಯಕ್ಕೂ ವಿಸ್ತರಣೆಗೊಂಡಿತು. ಪಶ್ಚಿಮ ರಾಜ್ಯಗಳಾದ ಅಸ್ಸಾಂ ಪ್ರಾಂತ್ಯಗಳಲ್ಲಿ ಗಾರೋ ಬೆಟ್ಟ ಪ್ರದೇಶಗಳನ್ನು ಆವರಿಸಿದ ಅರಣ್ಯ ಪ್ರದೇಶಗಳು ಹೇರಳವಾದ ಸಂಪತ್ತನ್ನು ಹೊಂದಿದ ಪ್ರದೇಶಗಳಾಗಿದ್ದವು. ಗಾರೋ ಬೆಟ್ಟ ಸಾಲುಗಳ ಆದಿವಾಸಿ ಪ್ರಜೆಗಳು ಅರಣ್ಯ ಕಾಯ್ದೆಯ ವ್ಯಾಪ್ತಿಗೆ ಒಳಪಟ್ಟು ತಮ್ಮ ಆವಾಸ ಸ್ಥಾನಗಳ ಮೇಲೆ ಬ್ರಿಟೀಷ್ ಸಾಮ್ರಾಜ್ಯಶಾಹಿ ನಿಯಂತ್ರಣವನ್ನು ಒಪ್ಪಿಕೊಳ್ಳದೆ ಪ್ರತಿಭಟಿಸತೊಡಗಿದರು, ಆ ಸಮಯದಲ್ಲಿ ಗಾರೋ ಆದಿವಾಸಿಗಳನ್ನು ಹೊರತು ಪಡಿಸಿ ಅರಣ್ಯ ಪ್ರದೇಶಗಳಿಂದ ಸಂಪನ್ಮೂಲವನ್ನು ಹೊರ ತರಲು ಸಾಧ್ಯವಿಲ್ಲವೆಂಬ ಸತ್ಯವನ್ನು ಅರಿತ ಅಧಿಕಾರಿಗಳು ವೈಸ್‌ರಾಯ್ ಅವರೊಂದಿಗೆ ಚರ್ಚಿಸಿ ಹೊಸತೊಂದು ಕಾನೂನು ಜಾರಿಗೆ ವ್ಯವಸ್ಥೆಗೊಳಿಸಲಾಯಿತು. ೧೯೨೭ ರಲ್ಲಿ 'ಭಾರತೀಯ ಅರಣ್ಯ ಕಾಯ್ದೆ'ಯನ್ನು ೧೮೭೮ರ ಅರಣ್ಯ ಕಾಯ್ದೆಯಲ್ಲಿದ್ದ ಲೋಪ ದೋಷಗಳನ್ನು ಸರಿಪಡಿಸಲು ಹಾಗೂ ಆಡಳಿತಾತ್ಮಕವಾಗಿ ನಿಯಂತ್ರಣ ಹಾಗೂ ಕಾರ್ಯ ಚಟುವಟಿಕೆಗಳನ್ನು ಸರಾಗವಾಗಿಸಲು ಅನುಕೂಲವಾಗುವಂತೆ ತಿದ್ದುಪಡಿಯೊಂದಿಗೆ ಜಾರಿಗೆ ತರಲಾಯಿತು. ಭಾರತ ಸ್ವಾತಂತ್ರ್ಯಗೊಂಡು ೧೯೫೨ರಲ್ಲಿ ಅರಣ್ಯ ನೀತಿ ಜಾರಿ ತರುವವರೆಗೂ ಈ ಕಾಯ್ದೆ ಅಸ್ತಿತ್ವದಲ್ಲಿತ್ತು.

೧೯೨೭ ರ ಭಾರತೀಯ ಅರಣ್ಯ ಕಾಯ್ದೆಯ ಪ್ರಮುಖಾಂಶಗಳು

೧೮೬೫ ಮತ್ತು ೧೮೭೮ರ ಅರಣ್ಯ ಕಾಯ್ದೆಯಲ್ಲಿದ್ದ ಲೋಪ ದೋಷಗಳನ್ನು ಹೊರತುಪಡಿಸಿದೆ. ೧೯೨೭ ರ ಕಾಯ್ದೆ ಸಮುದಾಯಗಳಿಗೆ ನೀಡಿದ್ದ ಅರಣ್ಯ ಹಕ್ಕುಗಳನ್ನು ಮೊಟುಕುಗೊಳಿಸಿತು. ಅದರ ಅನ್ವಯ ಅರಣ್ಯದಲ್ಲಿ ದೊರೆಯುವ ಸಸ್ಯ ಜನ್ಯ ಅಂಶಗಳು, ಪ್ರಾಣಿ ಸಂಬಂಧಿತ ಚರ್ಮ, ಕೊಂಬು,ಮೂಳೆ, ಜೇನು, ನದಿ ಪ್ರದೇಶ ಮತ್ತು ಅವುಗಳ ಝರಿಗಳು, ಮರದ ದಿಮ್ಮಿಗಳು ಇತ್ಯಾದಿಗಳೆಲ್ಲವೂ ರಾಜ್ಯಾಂಗದ ಆಡಳಿತಕ್ಕೆ ಒಳಪಟ್ಟವು ಎಂದು ಘೋಷಿಸಲ್ಪಟ್ಟಿತು. ಬ್ರಿಟೀಷರ ದಮನಕಾರಿ ನೀತಿಗಳು, ಸಾಮ್ರಾಜ್ಯ ವಿಸ್ತಾರತೆಯ ಹಪಹಪಿಸುವಿಕೆ,

ಉತ್ತರದಿಂದ ದಕ್ಷಿಣದವರೆಗೆ – ಪೂರ್ವದಿಂದ ಪಶ್ಚಿಮದವರೆಗೆ ತಮ್ಮ ಹಿಂಬದಿಯ ರಾಜಕಾರಣದ ಮುಖಾಂತರ ಸ್ಥಳೀಯವಾಗಿ ನೆಲೆಯೂರಿದ್ದ ರಾಜಮನೆತನಗಳ ಮೇಲೆ ಹಿಡಿತ ಸಾಧಿಸಿ ಹತೋಟಿಯಲ್ಲಿಡಲು ಒಡೆದು ಆಳುವ ನೀತಿಯನ್ನು ಪ್ರಾರಂಭಿಸಿ ಇಬ್ಬರ ಜಗಳದಲ್ಲಿ ಮೂರನೇಯವನಿಗೆ ಲಾಭವೆಂಬಂತೆ ಲಾಭಕೋರತನಕ್ಕೆ ನಾಂದಿ ಹಾಡಿದರು. ಅರಣ್ಯಗಳಿಂದ ಕೊಳ್ಳೆ ಹೊಡೆದ ಅರಣ್ಯದ ಕಚ್ಚಾ ಸಾಮಗ್ರಿಗಳಿಂದ ಸಿದ್ಧ ಸಾಮಗ್ರಿಗಳನ್ನು ತಯಾರು ಮಾಡಿ ನಮ್ಮ ನಾಡಿನ ವಸ್ತುಗಳನ್ನು ನಾವೇ ದುಬಾರಿ ಬೆಲೆಗೆ ಕೊಳ್ಳುವಂತಹ ಸ್ಥಿತಿಗೆ ವರ್ಗಾಯಿಸಿಟ್ಟರು. ಈ ರೀತಿ ಸಂಪೂರ್ಣವಾಗಿ ಆದಿವಾಸಿ ಮತ್ತು ಇತರೆ ಅರಣ್ಯವಾಸಿಗಳನ್ನು ಹಾಗೂ ಅವರ ಅರಣ್ಯ ಹಕ್ಕುಗಳನ್ನು ಮೊಟಕುಗೊಳಿಸಿ ಪ್ರವೇಶವನ್ನು ನಿರ್ಬಂಧಿಸಿದರು.

೪. ವಸಾಹತ್ತೋತ್ತರ ಭಾರತದಲ್ಲಿ ಅರಣ್ಯಗಳು.

ಭಾರತವು ೧೯೪೭ರಲ್ಲಿ ಬ್ರಿಟೀಷ್ ಆಡಳಿತ ವ್ಯವಸ್ಥೆಯಿಂದ ಸ್ವತಂತ್ರ್ಯಗೊಂಡು ಆಡಳಿತ ಆರಂಭಕ್ಕೆ ಚುಕ್ಕಾಣಿ ಹಿಡಿಯಿತು. ವಸಾಹತ್ತೋತ್ತರ ಭಾರತದಲ್ಲಿ ಮೊಟ್ಟ ಮೊದಲಿಗೆ ಅಭಿವೃದ್ಧಿಯ ಹಾದಿಯಲ್ಲಿ ಯಶಸ್ಸುಗಳನ್ನು ಸಾಧಿಸಲು 'ಪಂಚವಾರ್ಷಿಕ' ಯೋಜನೆಗಳನ್ನು ಜಾರಿತರಲಾಯಿತು. ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ 'ಆಹಾರ ಮತ್ತು ಭದ್ರತೆ' ಗೆ ಹೆಚ್ಚು ಒತ್ತನ್ನು ಕೊಡಲಾಯಿತು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ 'ಕಾರ್ಖಾನೆಗಳ' ಸ್ಥಾಪನೆಗೆ ಹೆಚ್ಚು ಒತ್ತನ್ನು, ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ 'ಸಾರಿಗೆ ಸಂಪರ್ಕ'ಕ್ಕೆ ಒತ್ತನ್ನು ನೀಡಲಾಯಿತು. ಪರಿಣಾಮವಾಗಿ ಚುರುಕುಗೊಂಡ ಅಭಿವೃದ್ಧಿ ಕಾರ್ಯಗಳಿಗೆ ಇಂಬು ನೀಡುವಂತೆ ಕಾರ್ಖಾನೆಗಳ ಸ್ಥಾಪನೆಯಲ್ಲಿ ಏರಿಕೆ ಕಂಡಿತು, ಇದಕ್ಕೆ ಪೂರಕವಾಗಿ ರಸ್ತೆ, ರೈಲು ಮಾರ್ಗಗಳು ನಿರ್ಮಾಣಗೊಂಡವು. ಈ ನಿಟ್ಟಿನಲ್ಲಿ ಕಾರ್ಖಾನೆಗಳ ಸ್ಥಾಪನೆ ಹಾಗೂ ರಸ್ತೆ ನಿರ್ಮಾಣದ ವೇಳೆಗೆ ಪ್ರಭುತ್ವವೇ ಅರಣ್ಯ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿತು. ೧೯೫೫ ರಿಂದ ೧೯೭೦ರ ವೇಳೆಯಲ್ಲಿ ಹೊಸ ಹೊಸ ಕಾನೂನುಗಳು ಜಾರಿಯಾದವು, ಇದರೊಂದಿಗೆ ಕಾರ್ಖಾನೆಗಳಿಗೆ ಪರವಾನಗಿ ನೀಡುತ್ತಾ ಅರಣ್ಯಗಳಿಂದ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಅನುಮತಿಯನ್ನು ನೀಡಿತು. ಈ ವ್ಯವಸ್ಥೆಯು ರಾಜಕಾರಿಣಿಗಳ ಬೊಕ್ಕಸವನ್ನು ತುಂಬಿತಲ್ಲದೆ, ಅರಣ್ಯ ಇಲಾಖೆಯನ್ನು ಕುರುಡನಾಗಿ (ಅಂಧನ ಕೈಗೆ ಕನ್ನಡಿ) ಇರುವ ಸ್ಥಿತಿಗೆ ತಂದು ನಿಲ್ಲಿಸಿತು. ಕಾಲಾಂತರದಿಂದ ಬೆಳೆದು ಬಂದಿದ್ದ ಅರಣ್ಯದ ಸಂಪನ್ಮೂಲಗಳು ಅಭಿವೃದ್ಧಿಯ ನಡಿಗೆಯಲ್ಲಿ ವಿನಾಶದ ಅಂಚಿಗೆ ಬರಲಾರಂಬಿಸಿತು. ೧೯೮೦ ರಲ್ಲಿ ಅರಣ್ಯಗಳ ಸಮೀಕ್ಷಾ ಕಾರ್ಯಗಳನ್ನು ನೆಡೆಸಿ ಅವುಗಳ ಪ್ರಮಾಣ ಕ್ಷೀಣಿಸುವಿಕೆಯನ್ನು ಮನಗಂಡ ಪ್ರಭುತ್ವವು 'ಅರಣ್ಯ ಸಂರಕ್ಷಣಾ ಕಾಯ್ದೆ' ಯನ್ನು ಜಾರಿಗೆತರಲಾಯಿತು. ಈ ಕಾಯ್ದೆಯಲ್ಲೂ ಕೂಡ ಅರಣ್ಯವಾಸಿತ ಆದಿವಾಸಿ ಮತ್ತು ಇತರೆ ಪಾರಂಪರಿಕ ವಾಸಿಗಳಿಗೆ ಯಾವುದೇ ರೀತಿಯ ಅನುಕೂಲಕರವಾದಂತಹ ಕಾನೂನುಗಳು ರಚನೆಯಾಗದೆ ಹಾಗೂ ಅರಣ್ಯ ಸಂರಕ್ಷಣೆಯ ಒಂದೇ ಗುರಿಯಲ್ಲಿ ಅರಣ್ಯವಾಸಿತ ಕುಟುಂಬಗಳು ಗೌಣವಾದವು.

೧೯೮೦ರ 'ಅರಣ್ಯ ಸಂರಕ್ಷಣಾ ಕಾಯ್ದೆ' ಯ ಮುಖ್ಯಾಂಶಗಳು

೧.ಅಭಿವೃದ್ಧಿಯ ನಡೆಯಲ್ಲಿ ರಾಜ್ಯವು ಸ್ವೇಚ್ಛಾಚಾರವಾಗಿ ಅರಣ್ಯವನ್ನು ಬಳಸುವಂತಿಲ್ಲ.

೨.ಆದಿವಾಸಿ ಸಮುದಾಯಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಕೃಷಿ ಹಾಗೂ ಕಿರು ಅರಣ್ಯ ಉತ್ಪತ್ತಿ ಅವಲಂಬಿತವಾಗಿ ವಲಸೆ ಹೋಗುವುದನ್ನು ನಿರ್ಬಂಧಿಸಲಾಯಿತು. ಭಾರತದ ಯೋಜನಾ ಆಯೋಗದ ಮುಖಾಂತರ ಪಂಚವಾರ್ಷಿಕ ಯೋಜನೆಗಳಲ್ಲಿ ಅರಣ್ಯ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದರೊಂದಿಗೆ ನವೀನ ರೀತಿಯ ಕಾರ್ಯತಂತ್ರಗಳ ಅನುಷ್ಠಾನಕ್ಕೆ ಪ್ರಭುತ್ವವು ಹಸಿರು ನಿಶಾನೆಯನ್ನು ತೋರಿತು. ಅದರಂತೆ, ಪಂಚವಾರ್ಷಿಕ ಯೋಜನೆಗಳಲ್ಲಿ ಅರಣ್ಯಗಳ ಸಂರಕ್ಷಣೆ ಮತ್ತು ಬೆಳವಣಿಗೆಗಳ ಕುರಿತು ಒಂದು ಕಿರು ನೋಟ:

ಮೊದಲ ಪಂಚವಾರ್ಷಿಕ ಯೋಜನೆ (೧೯೫೦ – ೫೬): ಬ್ರಿಟೀಷ್ ಸಾಮ್ರಾಜ್ಯದ ನೀತಿಗಳಿಂದ ಸ್ವತಂತ್ರ್ಯಗೊಂಡ ಭಾರತ ಎರಡು ಮಹಾಯುದ್ಧಗಳಿಂದ ಆದ ಆರ್ಥಿಕ ನಷ್ಟವನ್ನು ಭರಿಸಲು ಹಾಗೂ ರಾಷ್ಟ್ರದ ಪ್ರಜೆಗಳ ಹಿತವನ್ನು ಕಾಪಾಡಲು ಸಾಕಷ್ಟು ಉದ್ಯೋಗವಕಾಶ ಹಾಗೂ ಕೃಷಿ ಮೂಲಕ ಆಹಾರ ಉತ್ಪಾದನೆಯನ್ನು ದ್ವಿಗುಣಗೊಳಿಸಲು ಅರಣ್ಯ ಪ್ರದೇಶಗಳ ಮೇಲೆ ಹೆಚ್ಚು ಅವಲಂಬಿತವಾಯಿತು.

ಎರಡನೇ ಪಂಚವಾರ್ಷಿಕ ಯೋಜನೆ (೧೯೫೬–೬೧): ಸಮೀಕ್ಷಾ ಕಾರ್ಯಗಳನ್ನು ಹಮ್ಮಿಕೊಳ್ಳುವುದರೊಂದಿಗೆ ವಿನಾಶವಾದ ಅರಣ್ಯ ಪ್ರದೇಶಗಳನ್ನು ಪುನರ್ವಸತಿ ಕಾರ್ಯಕ್ಕೆ ನಾಂದಿ ಹಾಡಿತು ಹಾಗೂ ಮಣ್ಣು ಸವಕಳಿ, ಸೇನೆ ಮತ್ತು ರೈಲ್ವೆ ಅಭಿವೃದ್ಧಿಗಾಗಿ ಅರಣ್ಯ ಪ್ರದೇಶಗಳ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿತು.

ಮೂರನೇ ಮತ್ತು ನಾಲ್ಕನೆ ಪಂಚವಾರ್ಷಿಕ ಯೋಜನೆಯಡಿ ಅರಣ್ಯಗಳನ್ನು ವೇಗವಾಗಿ ಬೆಳೆಸುವ ಸಸ್ಯಗಳ ಪ್ರಭೇದಗಳನ್ನು ಬೆಳೆಸಲು ಯೋಜನೆ ರೂಪಿಸಲಾಯಿತು. ನಾಲ್ಕನೇ ಯೋಜನೆಯಲ್ಲಿ ೧೯೭೬ ರಲ್ಲಿ ನ್ಯಾಷಿನಲ್ ಕಮಿಷನ್ ಆಫ್ ಅಗ್ರಿಕಲ್ಚರ್ ವರದಿಯ ಆಧಾರಿತವಾಗಿ 'ಸಾಮಾಜಿಕ ಅರಣ್ಯ' ಬೆಳೆಸುವಿಕೆಗೆ ಬುನಾದಿಯನ್ನು ಹಾಕಲಾಯಿತು.

ಐದನೇ ಮತ್ತು ಆರನೇ ಯೋಜನೆಯಡಿಯಲ್ಲಿ 'ಸಾಮಾಜಿಕ ಅರಣ್ಯ' ಅಭಿವೃದ್ಧಿಗೆ ವಿಶ್ವಬ್ಯಾಂಕ್, ಯು ಎಸ್ ಏಜೆನ್ಸಿಗಳ ನಿಧಿ ಬಳಸಿಕೊಂಡು ಅಭಿವೃದ್ಧಿಪಡಿಸುವಿಕೆಗೆ ಪ್ರೋತ್ಸಾಹಿಸಲಾಯಿತು.

ಏಳನೇ ಯೋಜನೆಯಡಿ ಬಂಜರು ಭೂಮಿಯನ್ನು ಅರಣ್ಯವಾಗಿ ಪರಿವರ್ತಿಸಲು ಶ್ರಮಿಸುವುದರೊಂದಿಗೆ ಜೀವವೈವಿಧ್ಯತಾ ತಾಣಗಳನ್ನು ಕಾಯ್ದಿರಿಸಲಾಯಿತು.

ಎಂಟನೇ ಯೋಜನೆಯಡಿ ಅರಣ್ಯ ಪ್ರದೇಶಗಳ ಬೆಳವಣಿಗೆಗಾಗಿ ಸರ್ಕಾರೇತರ ಸಂಸ್ಥೆ ಮತ್ತು ಸಾರ್ವಜನಿಕರ ಸಹಕಾರ ಕೋರುತ್ತಾ 'ಸಹಭಾಗಿತ್ವದ ಮುಖಾಂತರ ಅರಣ್ಯಗಳನ್ನು ಬೆಳೆಸುವಿಕೆಗೆ' ಮುಂದಡಿಯಿಡಲಾಯಿತು.

೫. ಭಾರತದಲ್ಲಿ ವನ್ಯಜೀವಿ ಸಂರಕ್ಷಣೆ

'ಸಂರಕ್ಷಣೆ' ಭಾರತದಲ್ಲಿ ಅರಣ್ಯಕ್ಕೆ ಮಾತ್ರ ಸೀಮಿತವಾಗಿಲ್ಲ ಬದಲಿಗೆ ಅರಣ್ಯದೊಳಗಿನ 'ವನ್ಯಜೀವಿ'ಗಳನ್ನು ಆಧರಿಸಿ 'ಸಂರಕ್ಷಣೆ' ಕಾಯ್ದೆಗಳು ಜಾರಿಯಲ್ಲಿವೆ. ಸಂರಕ್ಷಣೆಯ ನಿಟ್ಟಿನಲ್ಲಿ ನಾವು ವಿವೇಚಿಸುವುದಾದರೆ, ಅಳಿವಿನ ಹಂಚಿನಲ್ಲಿರುವ ವನ್ಯಜೀವಿಗಳ ಸಮೂಹದ ಪಟ್ಟಿಯೇ ತಯಾರಾಗುತ್ತದೆ. ಒಂದು ಕಾಲದಲ್ಲಿ ಹೊರ ರಾಷ್ಟ್ರಗಳಲ್ಲಿ ನಮ್ಮ ನಾಡಿನಲ್ಲಿದ್ದ ವನ್ಯಜೀವಿಗಳ ಚರ್ಮಕ್ಕೆ, ಮೂಳೆ ಹಾಗೂ ಮಾಂಸಕ್ಕೆ ಬೇಡಿಕೆಗಳು ಅಪಾರ. ಈ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ವನ್ಯಜೀವಿಗಳ ಸಂಕುಲ ಒಂದು ಪ್ರಕಾರದಲ್ಲಿ ಪ್ರಮಾಣದ ಇಳಿಕೆಯಾಗಿತ್ತು. ಪಟ್ಟಭದ್ರ ಹಿತಾಸಕ್ತಿಯ ಬೆಂಬಲದೊಂದಿಗೆ ಅರಣ್ಯದ ಒಳವಲಯದಲ್ಲಿ ವನ್ಯಜೀವಿಗಳು ಸಂಚರಿಸುವ ಮಾರ್ಗಗಳನ್ನು ನಿರ್ಬಂಧಿಸಿ ಅಲ್ಲಿ ಕಾಫೀ, ಟೀ, ಏಲಕ್ಕಿ ಪ್ಲಾಂಟೇಷನ್‌ಗಳನ್ನು ನಿರ್ಮಿಸಿದ ಬಂಡವಾಳಗಾರರು, ಬೆಳೆಗಳಿಗೆ ವನ್ಯಜೀವಿಗಳು ಹಾನಿ ಮಾಡುತ್ತವೆ ಎಂದು ಮನಗಂಡು ಅವುಗಳನ್ನು ವಿದ್ಯುತ್ ಸ್ಪರ್ಶಕ್ಕೆ ಒಳಪಡಿಸಿ ಕೊಂದಿರುವ ಹಲವಾರು ಉದಾಹರಣೆಗಳು ಇಂದಿಗೂ ನಮ್ಮ ಪತ್ರಿಕೆ, ದೃಶ್ಯ ಮಾಧ್ಯಮಗಳಲ್ಲಿ ದಿನವಹಿ ವಾರ್ತೆಗಳಾಗಿ ಪ್ರಕಟವಾಗುತ್ತವೆ. ಭಾರತದ ರಾಷ್ಟ್ರೀಯ ಪ್ರಾಣಿ ಮತ್ತು ಪಕ್ಷಿಯಾದ 'ಹುಲಿ' ಹಾಗೂ 'ನವಿಲು' ಅಳಿವಿನಂಚಿನಲ್ಲಿ ಇಂದಿಗೂ ಇವೆ. ವೈಜ್ಞಾನಿಕವಾಗಿ ಪರಿಸರದಲ್ಲಿ ಸಮತೋಲನ ಇರಬೇಕಾದುದು ಉಚಿತ. ಆದರೆ, ಯಾವುದೇ ಅಂಶವು ಹೆಚ್ಚಾದರೂ ಇಲ್ಲವೆ ಕಡಿಮೆಯಾದರೂ ಅದು ಅಸಮತೋಲನವಾಗುತ್ತದೆ. ಅರಣ್ಯದಲ್ಲಿ ಜಿಂಕೆ ಮತ್ತು ಕಾಡಿನ ಎಮ್ಮೆಗಳ ಸಂತತಿಯೇ ಹೆಚ್ಚಾದರೆ ಅವುಗಳು ತಮ್ಮ ಹಸಿವನ್ನು ನೀಗಿಸಿಕೊಳ್ಳಲು ಅರಣ್ಯದಂಚಿನ ಹುಲ್ಲುಗಾವಲುಗಳನ್ನು ಹಾಗೂ ರೈತರ ಕೃಷಿ ಭೂಮಿಯನ್ನು ಆಶ್ರಯಿಸುವುದು ಸಹಜ ಪ್ರಕ್ರಿಯೆಯೇ ಹೌದು. ಅವುಗಳ ನಿಯಂತ್ರಣ ಹುಲಿ, ಸಿಂಹ ಇಲ್ಲವೆ ಚಿರತೆ ಅಂತಹ ಮಾಂಸ ಭಕ್ಷಕ ಪ್ರಾಣಿಗಳಿಂದ ಪ್ರಕೃತಿ ಸಹಜವಾಗಿಯೇ ನಡೆದು ಹೋಗುತ್ತದೆ. ಆದರೆ, ಯಾವ ಬಂಡವಾಳ ಶಾಹಿಗಳು ಪಟ್ಟಭದ್ರ ಹಿತಾಸಕ್ತಿಗಳ ಬೆಂಬಲದಿಂದ ಮಾನವೀಯ ಚಟುವಟಿಕೆಗಳನ್ನು ಅವುಗಳ ಪ್ರದೇಶದಲ್ಲಿ ಜರುಗಿಸಲು ಮುಂದಾಗುತ್ತಾರೋ ಅಲ್ಲಿ ಪರಿಸರದ ಅಸಮತೋಲನ ಕಟ್ಟಿಟ್ಟ ಬುತ್ತಿ. ಉದಾಹರಣೆಗೆ ಇಂದಿನ ಜಾಗತಿಕ ಜಗತ್ತಿನಲ್ಲಿಯ ತಾಪಮಾನ ಏರಿಕೆಗೆ ಬಹು ಮುಖ್ಯ ಕಾರಣ, ಮಾನವನ ಪರಿಸರ ವಿರುದ್ಧದ ಚಟುವಟಿಕೆಗಳು. ಇಂದಿನ ಅವಸಾನದ ಪರಿಸ್ಥಿತಿ ಹಾಗೂ ಪರಿಸರದ ಸಮತೋಲನ ಕಾಪಾಡುವಿಕೆಯೆಡೆ ಮಾನವನು ಬಹು ಎಚ್ಚರಿಕೆಯಿಂದ ಹೆಜ್ಜೆಗಳನ್ನಿಡಬೇಕು. ವನ್ಯಜೀವಿ ಸಂಕುಲ ಕೇವಲ ಮಾನವನ ಅನುಭೋಗಕ್ಕೆ ಇಲ್ಲವೆ ಅವುಗಳ ಚಟುವಟಿಕೆಗಳನ್ನು ವೀಕ್ಷಿಸಿ, ಸರ್ಕಸ್ ಕಂಪನಿಗಳಲ್ಲಿ ಮನೋರಂಜನೆಗೆ ಮಾತ್ರ ಸೀಮಿತವಗುವುದಕ್ಕಿಂತ ಪರಿಸರ ಸಮತೋಲನದೆಡೆ ಅವುಗಳ ಪಾತ್ರವು ಇದೆ ಎಂಬುದು ಸ್ಪಷ್ಟವಾಗಬೇಕಿದೆ. ಇಲ್ಲವಾದರೆ ಮಾನವನ ಮುಂದಿನ ಪೀಳಿಗೆಯ ಸಂಕುಲಕ್ಕೆ ವನ್ಯಜೀವಿಗಳನ್ನು ಕೇವಲ ಗೋಡೆಗೆ ನೇತುಹಾಕುವ ಭಾವಚಿತ್ರದಲ್ಲಿ ಇಲ್ಲವೆ ಮಾಧ್ಯಮಗಳು ಜಾಹಿರಾತಿಗಾಗಿ ಬಳಸುವ ದೃಶ್ಯ ತುಣುಕುಗಳಲ್ಲಿ ಮಾತ್ರ ವೀಕ್ಷಿಸಲು ಸಾಧ್ಯವಾಗುತ್ತವೆ. ಈ ಮೇಲಿನ ಅಂಶಗಳನ್ನೆಲ್ಲ ಪರಿಗಣಿಸಿ ಭಾರತ ಸರ್ಕಾರವು ೧೯೭೨ ರಲ್ಲಿ 'ವನ್ಯಜೀವಿ (ರಕ್ಷಣಾ) ಅಧಿನಿಯಮವನ್ನು ಜಾರಿಗೆತಂದಿದೆ. ಆ ಅಧಿನಿಯಮದಂತೆ;

ಪ್ರಾರಂಭಿಕ ಅಧ್ಯಾಯ ೧ ರ (೧೫) "ಆವಾಸ" ಎಂಬುದು, ಯಾವುದೇ ವನ್ಯಪ್ರಾಣಿಯು ಸ್ವಾಭಾವಿಕವಾಗಿ ವಾಸಿಸುವ ಭೂಮಿ, ನೀರು ಅಥವಾ ಸಸ್ಯಗಳನ್ನು ಒಳಗೊಳ್ಳುತ್ತದೆ; [೧೨]

(೧೬) "ಬೇಟೆಯಾಡುವುದು" ಎಂಬುದು, (ಎ) ಯಾವುದೇ ವನ್ಯಪ್ರಾಣಿಯನ್ನು ಅಥವಾ ಬಂಧನದಲ್ಲಿರುವ ಪ್ರಾಣಿಯನ್ನು ಕೊಲ್ಲುವುದು ಅಥವಾ ವಿಷ ಹಾಕುವುದು ಮತ್ತು ಹಾಗೆ ಮಾಡಲು ಕೈಗೊಳ್ಳುವ ಪ್ರತಿಯೊಂದು ಪ್ರಯತ್ನ;

(ಬಿ) ಯಾವುದೇ ವನ್ಯಪ್ರಾಣಿಯನ್ನು ಅಥವಾ ಬಂಧನದಲ್ಲಿರುವ ಪ್ರಾಣಿಯನ್ನು ಬಂಧಿಸುವುದು, ಬೇಟೆಯಾಡುವುದು, ಉರುಲು ಹಾಕುವುದು, ಬಲೆಗೆ ಬೀಳಿಸುವುದು, ಅಟ್ಟಿಸಿಕೊಂಡು ಹೋಗುವುದು ಅಥವಾ ಪೀಡಿಸುವುದು ಮತ್ತು ಹಗೆ ಮಾಡಲು ಕೈಗೊಳ್ಳುವ ಪ್ರತಿಯೊಂದು ಪ್ರಯತ್ನ;

(ಸಿ) ಅಂಥ ಯಾವುದೇ ಪ್ರಾಣಿಯನ್ನು ಗಾಯಗೊಳಿಸುವುದು ಅಥವಾ ನಾಶಪಡಿಸುವುದು ಅಥವಾ ಅದರ ದೇಹದ ಯಾವುದೇ ಭಾಗವನ್ನು ತೆಗೆಯುವುದು ಅಥವಾ ವನ್ಯಪಕ್ಷಿಗಳ ಅಥವಾ ಸರೀಸೃಪಗಳ ಸಂಬಂಧದಲ್ಲಿ, ಅಂತ ಪಕ್ಷಿಗಳ ಅಥವಾ ಸರೀಸೃಪಗಳ ಮೊಟ್ಟೆಗಳನ್ನು ಅಥವಾ ಗೂಡುಗಳನ್ನು ಕದಲಿಸುವುದು ಇವುಗಳನ್ನು ಒಳಗೊಳಗೊಳ್ಳುತ್ತದೆ.

(೨೧) "ರಾಷ್ಟ್ರೀಯ ಉದ್ಯಾನ" ಎಂದರೆ, ಈ ಅಧಿನಿಯಮದ ೩೫ನೇ ಅಥವಾ ೩೮ನೇ ಪ್ರಕರಣದ ಅಡಿಯಲ್ಲಿ ರಾಷ್ಟ್ರೀಯ ಉದ್ಯಾನವನವೆಂದು ಘೋಷಿತವಾದ ಅಥವಾ ೬೬ನೇ ಪ್ರಕರಣದ (೩)ನೇ ಉಪಪ್ರಕರಣದ ಅಡಿಯಲ್ಲಿ ಹಾಗೆಂದು ಘೋಷಿತವಾಗುವುದೆಂದು ಭಾವಿಸಲಾದ ಪ್ರದೇಶ; (೧) ಅಭಯಾರಣ್ಯದೊಳಗೆ ಇರುವ ಅಥವಾ ಇಲ್ಲದಿರುವ ಯಾವುದೇ ಪ್ರದೇಶವು ಪರಿಸರದ, ಪ್ರಾಣಿ ಸಂಪತ್ತಿನ, ಸಸ್ಯ ಸಂಪತ್ತಿನ, ಭೂ ಸ್ವರೂಪದ ಅಥವಾ ಪ್ರಾಣಿ ವರ್ಗದ ಸಂಬಂಧದ ಅಥವಾ ಮಹತ್ವದ ಕಾರಣದಿಂದಾಗಿ, ಅದರಲ್ಲಿರುವ ವನ್ಯಜೀವಿಯನ್ನು ಅಥವಾ ಅದರ ಪರಿಸರವನ್ನು ರಕ್ಷಿಸಲು ಅದರ ಸಂತಾನವನ್ನು ಅಭಿವೃದ್ಧಿಗೊಳಿಸಲು ಅಥವಾ ಅದರ ಸಂಖ್ಯೆಯನ್ನು ಹೆಚ್ಚಿಸಲು ಅದನ್ನು ರಾಷ್ಟ್ರೀಯ ಉದ್ಯಾನವನವನ್ನಾಗಿ ರೂಪಿಸುವುದು ಅವಶ್ಯವೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದಲ್ಲಿ, ಅಂಥ ಪ್ರದೇಶವನ್ನು ಒಂದು ರಾಷ್ಟ್ರೀಯ ಉದ್ಯಾನವನ್ನಾಗಿ ರೂಪಿಸುವ ಆಶಯವನ್ನು ಅಧಿಸೂಚನೆಯ ಮೂಲಕ ಘೋಷಿಸಬಹುದು.

(೨೪ಎ) " ರಕ್ಷಿತ ಪ್ರದೇಶ" ಎಂದರೆ, ಅಧಿನಿಯಮದ ೧೮, ೩೫, ೩೬ಎ ಮತ್ತು ೩೬ಸಿ ಪ್ರಕರಣಗಳ ಅಡಿಯಲ್ಲಿ ಅಧಿಸೂಚಿಸಿದ ರಾಷ್ಟ್ರೀಯ ಉದ್ಯಾನ, ಅಭಯಾರಣ್ಯ,ಸಂರಕ್ಷಣಾ ಮೀಸಲು ಅಥವಾ ಸಮುದಾಯ ಮೀಸಲು ಪ್ರದೇಶ;

(೨೫ಬಿ) "ಮೀಸಲು ಅರಣ್ಯ" ಎಂದರೆ, ಭಾರತ ಅರಣ್ಯ ಅಧಿನಿಯಮ, ೧೯೨೭ರ (೧೯೨೭ರ ೧೬) ೨೦ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಮೀಸಲಿಡಲಾಗಿದೆಯೆಂದು ಘೋಷಿಸಲಾದ ಅಥವಾ ಯಾವುದೇ ಇತರ ರಾಜ್ಯ ಅಧಿನಿಯಮದ ಮೇರೆಗೆ ಹಾಗೆಂದು ಘೋಷಿಸಲಾದ ಅರಣ್ಯ;

(೨೬) "ಅಭಯಾರಣ್ಯ" ಎಂದರೆ, ಈ ಅಧಿನಿಯಮದ ೪ನೇ ಅಧ್ಯಾಯದ ಉಪಬಂಧ ಅಡಿಯಲ್ಲಿ ಅಧಿಸೂಚನೆಯ ಮೂಲಕ ಅಭಯಾರಣ್ಯವೆಂದು ಘೋಷಿಸಲಾದ ಪ್ರದೇಶ ಮತ್ತು ಇದು ೬೬ನೇ ಪ್ರಕರಣದ (೪)ನೇ ಉಪ ಪ್ರಕರಣದ ಅಡಿಯಲ್ಲಿ ಭಾವಿತವಾದ ಅಭಯಾರಣ್ಯವನ್ನು ಸಹ

ಒಳಗೊಳ್ಳುತ್ತದೆ. (೧) ವನ್ಯಜೀವಿಗಳನ್ನು ಅಥವಾ ಅವುಗಳ ಪರಿಸರವನ್ನು ರಕ್ಷಿಸುವ, ಅವುಗಳ ಸಂತಾನ ಅಭಿವೃದ್ಧಿಗೊಳಿಸುವ ಅಥವಾ ಅವುಗಳ ಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶಕ್ಕಾಗಿ ಯಾವುದೇ ಮೀಸಲು ಅರಣ್ಯ ಅಥವಾ ರಾಜ್ಯಕ್ಷೇತ್ರೀಯ ಸಾಗರಖಂಡದೊಳಗೆ ಇರುವ ಪ್ರದೇಶವನ್ನು ಹೊರತುಪಡಿಸಿ ಯಾವುದೇ ಪ್ರದೇಶವು ಪರಿಸರ, ಪ್ರಾಣಿವರ್ಗ, ಸಸ್ಯವರ್ಗ, ಭೂ ರೂಪ, ನೈಸರ್ಗಿಕ ಅಥವಾ ಪ್ರಾಣಿ ವೈಶಿಷ್ಟ್ಯಗಳು ಇವುಗಳ ದೃಷ್ಟಿಯಿಂದ ಸಾಕಷ್ಟು ಮಹತ್ವಪೂರ್ಣವಾದ ಪ್ರದೇಶವೆಂದು ರಾಜ್ಯಸರ್ಕಾರವು ಪರಿಗಣಿಸುವಲ್ಲಿ, ಆ ಪ್ರದೇಶವನ್ನು ಅಭಯಾರಣ್ಯವೆಂದು ರಚಿಸುವ ಉದ್ದೇಶವನ್ನು ಅಧಿಸೂಚನೆಯ ಮೂಲಕ ಘೋಷಿಸಬಹುದು. ಈ ಮೇಲಿನ ಉಲ್ಲೇಖಿತ ಅಧಿನಿಯಮದ ಆಧಾರಿತವಾಗಿ ರಾಜ್ಯ ಸರ್ಕಾರವು ಪ್ರಾಣಿ ಸಂಕುಲ, ಸಸ್ಯ ಸಂಕುಲ, ಪಕ್ಷಿ ಸಂಕುಲ, ನದಿ, ಝರಿ ಇತ್ಯಾದಿಗಳನ್ನು ಪರಿಗಣಿಸಿ ಆ ಪ್ರದೇಶಗಳನ್ನು ಅಭಯಾರಣ್ಯ, ಇಲ್ಲವೆ ರಾಷ್ಟ್ರೀಯ ಉದ್ಯಾನವನ, ಇಲ್ಲವೆ ಮೀಸಲು ಅರಣ್ಯ, ಇಲ್ಲವೆ ಕಾಯ್ದಿರಿಸಿದ ಅರಣ್ಯವೆಂದು ಘೋಷಿಸುವ ಎಲ್ಲಾ ಪರಮಾಧಿಕಾರವನ್ನು ಹೊಂದಿರುತ್ತದೆ. ಇದರೊಂದಿಗೆ ಈ ಪ್ರಕ್ರಿಯೆಯನ್ನು ಏಕ ರೂಪವಾಗಿ ಸೂಚಿಸದೇ ಅಥವಾ ಘೋಷಿಸದೆ ಸ್ಥಳೀಯ ಪ್ರಜೆಗಳ ಇಲ್ಲವೆ ಸ್ಥಳೀಯ ಸಂಸ್ಥೆಗಳ (ಪಂಚಾಯತ್) ಮುಖಾಂತರ ಸೂಚನೆಗಳನ್ನು ಹೊರಡಿಸಿ ಅದಕ್ಕೆ ಸಂಬಂಧಿಸಿದ ಆಕ್ಷೇಪಣೆಗಳು ವ್ಯಕ್ತವಾಗದಿದ್ದಲ್ಲಿ ಪುನರ್ ಸೂಚನೆಗಳನ್ನು ನೀಡಿ ಘೋಷಿಸುವ ಪ್ರಕ್ರಿಯೆಯನ್ನು ಪಾಲಿಸಲೇಬೇಕು. ಪ್ರಸ್ತುತ ನಮ್ಮ ದೇಶವು ಹೊಂದಿರುವ ಭೌಗೋಳಿಕ ಪ್ರದೇಶ – ೩೨,೮೭,೨೬೩ ಕಿ.ಮೀ^{2} (http://knowindia.gov.in/), ಭಾರತದಲ್ಲಿರುವ ಅರಣ್ಯದ ಒಟ್ಟು ಪ್ರದೇಶ (ಎಫ್ ಎಸ್ ಐ, ೨೦೧೫) – ೭,೦೧,೬೭೩ ಕಿ.ಮೀ^{2}, ಒಟ್ಟು ಅರಣ್ಯ ಪ್ರದೇಶ ಶೇಕಡವಾರುವಿನಲ್ಲಿ – ೨೧.೩೪%.

ಕೋಷ್ಟಕ ೧

ಭಾರತವು ಹೊಂದಿರುವ ಸಂರಕ್ಷಿತಾರಣ್ಯಗಳ ವಿವರಗಳು [೧೩]

ಸಂರಕ್ಷಿತ ಅರಣ್ಯಗಳು	ಸಂಖ್ಯೆ	ಒಟ್ಟು ವಿಸ್ತೀರ್ಣ (ಕಿ.ಮಿ.^{೨})	%
ರಾಷ್ಟ್ರೀಯ ಉದ್ಯಾನವನಗಳು	೧೦೩	೪೦೫೦೦.೧೩	೧.೨೩
ವನ್ಯಜೀವಿ ಅಭಯಾರಣ್ಯಗಳು	೫೪೪	೧೧೮೯೩೧.೮೦	೩.೬೨
ಸಂರಕ್ಷಿತ ಅರಣ್ಯಗಳು	೭೬	೨೫೬೭.೯೫	೦.೦೮
ಸಮುದಾಯ ಸಂರಕ್ಷಿತ ಅರಣ್ಯಗಳು	೪೬	೭೨.೬೧	೦.೦೦೨
ರಕ್ಷಿತಾರಣ್ಯಗಳು	**೭೬೯**	೧೬೨೦೭೨.೪೯	೪.೯೩

ಕೋಷ್ಟಕ ೨

ಕರ್ನಾಟಕ ರಾಜ್ಯವು ಹೊಂದಿರುವ ಸಂರಕ್ಷಿತಾರಣ್ಯಗಳ ವಿವರಗಳು

ಸಂರಕ್ಷಿತ ಅರಣ್ಯಗಳು	ಸಂಖ್ಯೆ	ಒಟ್ಟು ವಿಸ್ತೀರ್ಣ (ಕಿ.ಮಿ.²)	ರಾಜ್ಯಕ್ಕೆ ಅನ್ವಯಿಸುವಂತೆ %
ರಾಷ್ಟ್ರೀಯ ಉದ್ಯಾನವನಗಳು	೫	೨೭೯೫.೭೬	೧.೪೬
ವನ್ಯಜೀವಿ ಅಭಯಾರಣ್ಯಗಳು	೩೦	೬೭೭೪.೮೧	೩.೫೩
ಸಂರಕ್ಷಿತ ಅರಣ್ಯಗಳು	೧೪	೬೫೭೧೬	–
ಸಮುದಾಯ ಸಂರಕ್ಷಿತ ಅರಣ್ಯಗಳು	೧	೩.೧೨	–
ರಕ್ಷಿತಾರಣ್ಯಗಳು	**೫೦**	**೧೦.೨೩೦.೮೫**	–

ಭಾರತೀಯ ಸಂದರ್ಭದಲ್ಲಿ ಅರಣ್ಯಗಳ ಸಂರಕ್ಷಣೆ ಕಾರ್ಯಗಳು ವಾಸ್ತವದ ಮಟ್ಟಿಗೆ ಬಹು ಶಿಸ್ತು ಬದ್ಧವಾಗಿ ಕಾಯ್ದೆಗಳ ಅನುಸಾರವಾಗಿ ನೆರವೇರಲ್ಪಟ್ಟಿದೆ. ಬ್ರಿಟೀಷ್ ಸಾಮ್ರಾಜ್ಯಶಾಹಿಯ ವಸಾಹತು ಕಾಲದಲ್ಲಿ ಅರಣ್ಯ ಸಂಪನ್ಮೂಲಗಳಲ್ಲಿ ಆದಂತಹ ದುಪ್ಪಟ್ಟು ನಷ್ಟವನ್ನು ಹಾಗೂ ಇಂದಿನ ಪ್ರತಿಕೂಲ ಪರಿಸರದ ನಿರ್ವಹಣೆ, ಅಭಿವೃದ್ಧಿ ಪಥದತ್ತ ಸಾಗುತ್ತಿರುವ ಕಾರ್ಖಾನೆಗಳ ಬೆಳವಣಿಗೆಗೆ ಅಗತ್ಯವಿರುವ ವಿದ್ಯುತ್ ಶಕ್ತಿ ಉತ್ಪಾದನೆಗೆ, ಕುಡಿಯುವ ನೀರಿನ ನಿರ್ವಹಣೆಗೆ ಮತ್ತು ಅತಿ ವೇಗವಾಗಿ ಬೆಳವಣಿಗೆಯಾಗುತ್ತಿರುವ ಕಾಂಕ್ರೀಟ್ ಕಾಡುಗಳಾದ ಮಹಾನಗರಗಳ ನಿರ್ವಹಣೆಗಾಗಿ ಕೂಡ ಅರಣ್ಯ ಮೂಲದ ಸಂಪನ್ಮೂಲಗಳೇ ಮೂಲವಾಗಿರುವುದರಿಂದ ಹಾಗೂ ಅಳಿವಿನಂಚಿನಲ್ಲಿರುವ ವನ್ಯಜೀವಿ ಪ್ರಭೇದಗಳ ರಕ್ಷಣೆಯೂ ಅವಶ್ಯವಿರುವುದರಿಂದ 'ಸಂರಕ್ಷಣೆ' ಅವಶ್ಯವಾದುದು. ಆದರೆ ಇದರ ಹಿಂದೆ ಬಂಡವಾಳಶಾಹಿಗಳ ಕುಹಿಕ ಶಕ್ತಿಗಳ ಪ್ರಭಾವದಿಂದ ಮಂದಗತಿಯಲ್ಲಿ ತಮ್ಮ ಮುಷ್ಠಿಯಲ್ಲಿ ಬಂಧಿಸಿಡುವ ಯೋಜನೆಗಳು ಕಾಲ ಕಾಲಕ್ಕೆ ಸರ್ಕಾರೇತರ ಸಂಸ್ಥೆಗಳು (ಕೆಲವನ್ನು ಹೊರತುಪಡಿಸಿ) ಪ್ರಭುತ್ವದ ಮೇಲೆ ಒತ್ತಡ ತರುವುದರ ಮೂಲಕ ಭೌದ್ಧಿಕ ಹಾಗೂ ಕಪಿಮುಷ್ಠಿಯ ಸ್ವಾಮ್ಯತೆಯನ್ನು ಹೊಂದುವ ನಿಟ್ಟಿನಲ್ಲಿ 'ಅರಣ್ಯವಾಸಿಗಳ' ಸರ್ವತೋಮುಖ ಬೆಳವಣಿಗೆಗೆ ಮಾರಕವಾಗಿ ಪರಿಣಮಿಸುತ್ತಿವೆ. 'ಅರಣ್ಯಗಳ ಸಂರಕ್ಷಣೆ' ಯಿಂದ ಎಷ್ಟು ಅನುಕೂಲಗಳಿವೆಯೋ ಅದರ ಹಿಂದೆ ಅಷ್ಟೇ ಮಾರಕವಾದಂತಹ ಪರಿಣಾಮಗಳನ್ನು 'ಅರಣ್ಯವಾಸಿಗಳು (ಬುಡಕಟ್ಟು ಸಮುದಾಯ ಮತ್ತು ಪಾರಂಪರಿಕ ಅರಣ್ಯವಾಸಿಗಳು)' ಎದುರುಗೊಳ್ಳುವಂತಾಗಿದೆ. ಭಾರತೀಯ ಸಂದರ್ಭವನ್ನೇ ಅವಲೋಕಿಸುವುದಾದರೆ ಎಲ್ಲಾ ಸಂರಕ್ಷಿತ ಪ್ರದೇಶಗಳಿಂದ ಬಹುಪಾಲು ಕಾಣದ ರೀತಿಯಲ್ಲಿ ಕುಟುಂಬಗಳ ನಿರ್ವಹಣೆ ಮೇಲೆ, ಸಮುದಾಯಗಳ ಮೇಲೆ ಹಾಗೂ ಕೆಲವು ಪರಿಸರಗಳ ಮೇಲೆ ಪ್ರತಿಕೂಲದ ಪರಿಣಾಮಗಳುಂಟಾಗಿವೆ ಎಂದರೆ, ಅದು ಅತಿಶಯೋಕ್ತಿಯಾಗಲಾರದು. ಅದಕ್ಕೆ ಪೂರಕವಾಗಿ ಉದಾಹರಣೆಯೆಂಬಂತೆ ಪ್ರಸಿದ್ಧ ಪರಿಸರ ತಜ್ಞರಾಗಿರುವ ಪ್ರೊ. ಶ್ರೀ ಚಂದ್ರಶೇಖರ್ ಕೆ. ಆರ್ (ಸಸ್ಯಶಾಸ್ತ್ರ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾಲಯ) ಅವರು ವಿಶ್ಲೇಷಿಸಿರುವಂತೆ ಅರಣ್ಯ

ಇಲಾಖೆಯವರು ಕಳೆದ ೨೫ ವರ್ಷಗಳಿಂದ 'ಅಕೇಶಿಯ' ಮರಗಳನ್ನು ಬೆಳೆಸುತ್ತಿದ್ದಾರೆ. ಆದರೆ ಈ ಜಾತಿಯ ಮರ ಬೆಳೆಸುವಿಕೆಯಿಂದ 'ಪರಿಸರದ ವಿಪತ್ತು' ಸಂಭವಿಸುತ್ತಿದೆ ಎಂಬ ಅಂಶವನ್ನು ನಿರೂಪಿಸಿದ್ದಾರೆ. ಅಕೇಶಿಯ ಮರಗಳ ಮೇಲಿನ ವೈಜ್ಞಾನಿಕ ಅಧ್ಯಯನದಲ್ಲಿ ಅವರು ಗ್ರಹಿಸಿರುವ ಅಂಶವೆಂದರೆ, ಅಕೇಶಿಯ ಮರವು ವೇಗವಾಗಿ ಬೆಳವಣಿಗೆಯಾಗುತ್ತದೆ. ಆದರೆ ಅದರ ಎಲೆಗಳು ಭೂ ಸ್ಪರ್ಶಕ್ಕೆ ಒಳಪಡುತ್ತಿದ್ದಂತೆ ಮಣ್ಣಿನ ಮೇಲೆ ಸಾಕಷ್ಟು ಪ್ರತಿಕೂಲ ಪರಿಣಾಮವನ್ನು ಬೀರುವುದರಿಂದ ಮಣ್ಣು ತನ್ನಲ್ಲಿಯ ಸತ್ವಗಳನ್ನು ಕಳೆದುಕೊಳ್ಳುತ್ತದೆ. ಅಲ್ಲದೆ ಈ ಪ್ರದೇಶದಲ್ಲಿ ಇತರೆ ದೇಶಿ ಜಾತಿಯ ಯಾವುದೇ ಸಸ್ಯಗಳು ವೃದ್ಧಿಯಾಗುವುದಿಲ್ಲ ಮತ್ತು ಅತಿ ವೇಗದ ಬೆಳವಣಿಗೆಯಿಂದಾಗಿ ಅಂತರ್ ಜಲದಲ್ಲಿನ ಮಟ್ಟ ಕುಸಿಯುತ್ತಿದೆ ಎಂಬ ಅಂಶವನ್ನು ತಿಳಿಸಿದ್ದಾರೆ. (The leaves are rich in phenolic and lignin, which slowed down decay by natural microorganisms found here. "Through the decay process, the leaves release these compounds making the soil acidic. Native species cannot grow well in this soil," he said. With the tree, naturally found in arid conditions, draws water in plenty in the tropical conditions here reducing the groundwater level, he added. "Moreover, seeds of the tree disperse over a larger area, making its growth in the area faster. When you have acacias in an ecosystem, no other species will survive," Mr. Chandrashekar said.[೧೪]) (M.Rao, MANGALORE:, AUGUST 21, 2012).

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಕೆಂಗನಕೊಂಡ ಗ್ರಾಮದಲ್ಲಿ ನೆಲೆಸಿರುವ ರೈತರು ಮತ್ತು ಗಣಿಗಾರಿಕೆ ವಿರುದ್ಧ ಸಾಕಷ್ಟು ಹೋರಾಟ ನಡೆಸಿದ ಶ್ರೀ ಸುರೇಶ್ ಭಟ್ಟರು ಕೂಡ – ಅಕೇಶಿಯ ಮರವು ಆಸ್ಟ್ರೇಲಿಯಾದ ಮರುಭೂಮಿ ಪ್ರದೇಶಗಳಲ್ಲಿ ಬೆಳವಣಿಗೆಯಾಗುವಂತಹ ಸಸ್ಯ ಜಾತಿಯಾಗಿದ್ದು ನಮ್ಮ ಕುದುರೆಮುಖ ಅಂತಹ ಪ್ರದೇಶಕ್ಕೆ ಬಹಳ ಪ್ರತಿಕೂಲ ಪರಿಣಾಮವನ್ನುಂಟು ಮಾಡಿದೆ. ಅದರ ವೇಗದ ಬೆಳವಣಿಗೆ ಅಂತರ್ಜಲ ಮತ್ತು ಗುರುತ್ವಾಕರ್ಷಿತ ಹರಿಯುವ ನೀರನ್ನು ಸಹ ಸೆಳೆದುಕೊಳ್ಳುತ್ತದೆ ಹಾಗೂ ಅದು ಬೇಸಿಗೆಯಲ್ಲೂ ಕೂಡ ಹಚ್ಚ ಹಸಿರಿನಿಂದ ಗೋಚರಿಸುವ ಏಕೈಕ ಜಾತಿಯ ಸಸ್ಯವಾಗಿದೆ ಮತ್ತು ಯಾವುದೇ ದೇಶಿಯ ಸಸ್ಯಗಳು ಆ ಪ್ರದೇಶದಲ್ಲಿ ಬೆಳವಣಿಗೆಯಾಗಲು ಸಾಧ್ಯವಿಲ್ಲ. ಸಸ್ಯಗಳನ್ನು ಆಧರಿಸಿ ಭಕ್ಷಿಸುವ ಪ್ರಾಣಿಗಳ ಆರೋಗ್ಯದಲ್ಲಿ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ ಎಂದು ಅಭಿಪ್ರಾಯಿಸಿದ್ದಾರೆ.

ಸಂರಕ್ಷಣೆಯ ನಿಟ್ಟಿನಲ್ಲಿ ಮುಂದುವರೆದ ಭಾಗವಾಗಿ ಉದ್ಭವಿಸುವ ಅಂಶವೆಂದರೆ, ಅದು ವನ್ಯಜೀವಿಗಳ ರಕ್ಷಣೆ. ವನ್ಯಜೀವಿಗಳು ಜೀವವೈವಿಧ್ಯದ ಅಂಶವೂ ಕೂಡ ಹೌದು. ಪರಿಸರ ಸಮತೋಲನಕ್ಕೆ ಅವುಗಳದೇ ಆದ ಕೊಡುಗೆಗಳನ್ನು ನೀಡುತ್ತವೆ. ಆದರೆ, ಸಂಘರ್ಷ ಎಂಬುದು ಇಂದು ನೆನ್ನೆಯ ಅಂಶವಾಗಿ ಉಳಿದಿಲ್ಲ ಅದು ಪರಿಸರದಲ್ಲಿನ ಜೀವ ವಿಕಾಸ ತತ್ವದಿಂದಲೂ ಆರಂಭವಾದುದೆ. ಪರಿಸರದಲ್ಲಿ ಯಾವುದು ಬಲಯುತವಾಗಿ ತನ್ನ ಉಳುವಿಗಾಗಿ ಹೋರಾಟ ನಡೆಸುತ್ತದೋ ಅದು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತಾ ಸಾಗುತ್ತದೆ ಎಂಬುದನ್ನು ಪರಿಸರವು

ನಮಗೆ ತಿಳಿಸಿಕೊಟ್ಟಿರುವ ಪಾಠ. ಪರಿಸರದ ಅಂಶವಾಗಿ ಇರುವ ವನ್ಯಪ್ರಾಣಿ ಸಂಕುಲ ಇಂದು ಅಳಿವಿನಂಚಿನಲ್ಲಿರುವುದು ಎಲ್ಲರಿಗೂ ತಿಳಿದಿರುವ ವಿಷಯ ಹಾಗೂ ಅವುಗಳ ಸಂರಕ್ಷಣೆಯೂ ಅಷ್ಟೆ ಉಚಿತವಾದುದು ಕೂಡ. ಈ ನಿಟ್ಟಿನಲ್ಲಿ ಮಾನವ ಮತ್ತು ವನ್ಯಜೀವಿಗಳು ಅನೇಕ ಶತಮಾನಗಳಿಂದಲೂ ಸಂಘರ್ಷದ ಹಾದಿಯಲ್ಲಿಯೇ ನಡೆದು ಬಂದಿರುವುದು ಹಾಗೂ ಅದರಲ್ಲಿ ಮಾನವ ಮೇಲುಗೈ ಸಾಧಿಸಿರುವುದು ಹೌದು. ಆದರೆ, ಯಾವ ಮೂಲಗಳಿಂದ ಮೇಲುಗೈ ಸಾಧಿಸಿದ್ದಾನೆಂಬ ಸತ್ಯದ ಹುಡುಕಾಟದ ಗೋಜಿಗೇ ಹೋಗದೆ, ಸಂರಕ್ಷಣೆಯ ಅಂಧತೆಯಲ್ಲಿ ತಲತಲಾಂತರದಿಂದ ಅರಣ್ಯ ಪ್ರದೇಶಗಳಲ್ಲಿ ನೆಮ್ಮದಿಯಿಂದ ಇದ್ದ 'ಅರಣ್ಯವಾಸಿಗಳನ್ನು' 'ಮಾನವ ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷಣೆ', 'ಅಭಿವೃದ್ಧಿ' ಮತ್ತು ಸೋ ಕಾಲ್ಡ್ 'ಸಂರಕ್ಷಣೆ' ಎಂಬ ಕನ್ನಡಿಯಿಡಿದು ಒಕ್ಕಲೆಬ್ಬಿಸುವ ಪ್ರಯತ್ನಗಳು ನಿರಂತರವಾಗಿ ಸಾಗುತ್ತಿದೆ. ರಾಜ್ಯಗಳು ಶಾಸಕಾಂಗ ಸಭೆಯಲ್ಲಿ ರೂಪಿಸುವ ಶಾಸನಗಳು ತಳಪಾಯವಿಲ್ಲದ (ಸ್ಥಳೀಯ ಪ್ರದೇಶದ ಪರಿಸ್ಥಿತಿ) ಕಾಯ್ದೆಗಳಾಗಿ, ತಿದ್ದುಪಡಿಯ ನೆಪದಲ್ಲಿ ಕಾಲಾಂತರವನ್ನು ಮಾಡುತ್ತಾ ಮತ್ತೊಂದು ಮಗದೊಂದು ಪೂರಕ ಕಾಯ್ದೆಗಳ ಜಾರಿ, ಅಂತಿಮದಲ್ಲಿ ಯಾವ ಕಾಯ್ದೆ ಏನನ್ನು ಹೇಳುತ್ತಿದೆ? ಎಂಬ ಪ್ರಶ್ನೆಯ ನಡುವೆ ಅರಣ್ಯವಾಸಿಗಳನ್ನು ಕತ್ತರಿ ನಡುವೆ ಸಿಲುಕಿದ ಅಡಿಕೆಯಾಗಿ ಅತ್ತಲು ಇಲ್ಲದ ಇತ್ತಲು ಇಲ್ಲದ ಕಾಲಹರಣದ ನಡುವೆ ಗತಿಸಿ ಹೋಗುತ್ತಿವೆ. ಇದು ಅಂತಿಮವಾಗಿ ಬರೀ ಕಾಯ್ದೆಗಳಿಂದ ಕಾಯ್ದೆಗಳಿಗಾಗಿ ಕಾಯ್ದೆಗಳ ಜಾರಿ, ತಿದ್ದುಪಡಿ, ಗೊಂದಲ ಎಂಬ ಅಂಶದಲ್ಲಿಯೇ ಜೀವನ ನಶಿಸಿ ಹೋಗುತ್ತದೆ. ಸಂರಕ್ಷಣೆಯ ಹಾದಿಯಲ್ಲಿ ಉದ್ಯಾನವನಗಳು, ಅಭಯಾರಣ್ಯಗಳು, ಕಾಯ್ದಿರಿಸಿದ ಪ್ರದೇಶಗಳು, ಸಮುದಾಯ ಅರಣ್ಯ ಪ್ರದೇಶಗಳು ಎಂಬ ನಾಮಕರಣ ಹಾಗೂ ಗಡಿ ವಿಸ್ತರಣೆ ಕಾರ್ಯಗಳು ಅರಣ್ಯ ಪ್ರದೇಶಗಳಿಂದ ಅರಣ್ಯವಾಸಿಗಳು 'ಒಕ್ಕಲೇಳುವ' ಹಾಗೂ 'ಒಕ್ಕಲೆದ್ದಿರುವ' ಸಂದರ್ಭಗಳನ್ನು ಪ್ರಭುತ್ವವು ತನ್ನ ದೃಷ್ಟಿಯಲ್ಲಿ 'ಸ್ಥಳಾಂತರ' ಎಂದೂ, ಅದಕ್ಕೆ ಪೂರಕವಾಗಿ ಕಲ್ಪಿಸುವ ಪರಿಹಾರವನ್ನು 'ಪುನರ್ವಸತೀಕರಣ' ಎಂಬ ಪಟ್ಟಿಯನ್ನು ಪ್ರಭುತ್ವವು ನಾಮಾಂಕಿತಗೊಳಿಸಿದೆ. ಈ ಅಂಶಗಳಿಗೆ ಪೂರಕವೆಂಬಂತೆ ಮುಂದಿನ ಭಾಗಗಲ್ಲಿ 'ಸ್ಥಳಾಂತರ' ಮತ್ತು 'ಪುನರ್ವಸತೀಕರಣ'ಗಳ ಕುರಿತಾಗಿ ತಿಳಿಯೋಣ.

೬. ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಮತ್ತು ಪುನರ್ವಸತೀಕರಣ

"Nature is man's inorganic body, that is to say, nature in so far as it is not the human body. Man lives from nature, i.e. nature is his body, and he must maintain a continuing dialogue with it if he is not to die. To say man's physical and mental life is linked to nature simply means that nature is linked to itself, for man is a part of nature". (Writes Marx on the relationship between nature and humanity)[೧೫].

Karl Marx.......

"A blinkered vision of development, complete apathy towards those who are highly adversely affected by the development process and a cynical unconcern for the enforcement of the laws lead to a situation where the rights and benefits promised and guaranteed under the Constitution hardly ever reach the most marginalised citizens"[೧೬].

" Dr. B.R. Ambedkar in the Constituent Assembly on November 25, 1949

ಕಾರ್ಲ್‌ಮಾರ್ಕ್ಸ್ ಮತ್ತು ಡಾ. ಅಂಬೇಡ್ಕರ್ ಜಗತ್ತು ಕಂಡ ಅದ್ವಿತೀಯ ಚಿಂತಕರುಗಳು. ಅವರುಗಳು ಹೇಳಿರುವ ಮೇಲಿನ ಎರಡು ಚಿಂತನೆಗಳು ಇಂದಿನ ವಾಸ್ತವವನ್ನು ಅಕ್ಷರ ಸಹ ಸತ್ಯವನ್ನಾಗಿಸುತ್ತಿವೆ. ಪ್ರಸ್ತುತದ ಸಂಶೋಧನೆಯ ಮೂಲ ತಿರುಳುಗಳು ಈ ಇಬ್ಬರು ದಿಗ್ಗಜರ ಹೇಳಿಕೆಗಳ ಮೇಲೆಯೇ ಸಾಗುತ್ತದೆ ಎಂದರೆ ಅದು ಅತಿಶಯೋಕ್ತಿಯಾಗಲಾರದು.

ಕಾರ್ಲ್‌ಮಾರ್ಕ್ಸ್ ಅವರ ಚಿಂತನೆಯಲ್ಲಿ 'ಮಾನವ ಪ್ರಕೃತಿಯ ಒಳಗಿರುವವನೆ ಹೊರತು, ಅದರಿಂದ ಬೇರ್ಪಟ್ಟಿಲ್ಲ ಹಾಗೂ ಅವನು ಪ್ರಕೃತಿಯ ಒಂದು ಭಾಗವೂ ಕೂಡ ಆಗಿರುವನು' ಎಂದು.

ಡಾ. ಅಂಬೇಡ್ಕರ್ ಅವರ ಚಿಂತನೆಯಲ್ಲಿ ' ಅಂಚಿನ ಸಮುದಾಯದವರಿಗೆ ಸಂವಿಧಾನಾತ್ಮಕವಾಗಿ ರಚಿಸಲ್ಪಟ್ಟಿರುವ ಕಾನೂನುಗಳು, ಹಕ್ಕುಗಳು ಮತ್ತು ಹಿತಕಾಯುವ ಅಂಶಗಳು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ನಿರಾಸಕ್ತಿಯುತವಾಗಿ ಕೇವಲ ಸನ್ನೆ ಮಾಡುವಂತಾಗಿರುತ್ತವೆ'.

ಸೂಚಿತ ಎರಡು ಅಂಶಗಳನ್ನು ಪರಿಗಣಿಸಿ, ಆರ್ಥಿಕ ಸ್ಥಿತಿಯ ಬೆಳವಣಿಗೆಗಳ ದಿಕ್ಕಿನಲ್ಲಿ ಪ್ರಕೃತಿಯ ಸಹಜ ಕೂಸಾಗಿದ್ದ ಮಾನವ ತನ್ನನ್ನು ತಾನು ಮರೆತು ಪರಿಸರದಿಂದ ದೊರೆತ ಕೊಡುಗೆಗಳನ್ನು ಸರ್ವರ ಹಿತಕ್ಕಾಗಿ ಬಳಕೆ ಮಾಡಬೇಕಾದ್ದುದ್ದನ್ನು ಸ್ವಾರ್ಥ ಪೂರಕವಾಗಿ ಬಳಕೆ ಮಾಡುವ ನಿಟ್ಟಿನಲ್ಲಿ, ಹಾಗೂ ಅನುಭೋಗಿ ತನದ ಜಾಡಿನಲ್ಲಿ ಪರಿಸರವನ್ನು ಶೋಷಿಸತೊಡಗಿದ. ಅದು ನಗರಗಳ ವಿಸ್ತರಣೆಗೆ ಭೂಮಿಯ ಬಳಕೆ, ಕಾರ್ಖಾನೆಗಳಿಗೆ ಅಗತ್ಯವಿರುವ ಕಚ್ಚಾವಸ್ತುಗಳಿಗೆ, ಕೃಷಿಗೆ ಅವಶ್ಯವಿರುವ ಪೂರಕ ಪರಿಕರಗಳಿಗಾಗಿ ಮತ್ತು ತನ್ನ ವಿಲಾಸಿ ವೈಭವೀಕೃತ ಜೀವನವನ್ನು ಹೆಚ್ಚಿಸಿಕೊಂಡು ಬೀಗುವುದಕ್ಕಾಗಿ. ಇದರ ಪ್ರತಿಫಲವಾಗಿ ಪರಿಸರದಿಂದ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಬೇಕಾದಂತಹ ಸ್ಥಿತಿ ಎದುರಾಗಿದೆ. ಬಂಡವಾಳ ಶಾಹಿಯ ಕಪಿಮುಷ್ಠಿ ಅತಿಕ್ರಮಣದ ಧಮನಕಾರಿ ಧೋರಣೆಗಳು ಅಗತ್ಯಕ್ಕಿಂತ ಹೆಚ್ಚಿನ ಅಂಶವನ್ನು ಶೇಖರಿಸಿಡುವ ಪ್ರವೃತ್ತಿ ನಿಸರ್ಗವನ್ನು ಬರಿದು ಮಾಡುವ ವಿನಾಶಕಾರಿ ಕಾಲವಾಗಿ ಪರಿಣಮಿಸಿದೆ. ಆದರೆ, ಮುಂದಿನ ಪೀಳಿಗೆಗೆ ಪರಿಸರ ಸಮತೋಲನವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ, ಒಂದು ಕಾಲದಲ್ಲಿ ಬಂಡವಾಳ ಶಾಹಿಗಳಿಗೆ ರತ್ನಗಂಬಳಿ ಹಾಸಿ ಆಹ್ವಾನವಿತ್ತು ಸಂಪನ್ಮೂಲವನ್ನು ಕಬಳಿಸಲು ಅವಕಾಶ ಕಲ್ಪಿಸಿದ್ದ ಪ್ರಭುತ್ವವು, ಪರಿಸರದಲ್ಲಿ ಹಾಗೂ ಜೀವವೈವಿಧ್ಯತೆಯಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳಲು 'ಸಂರಕ್ಷಣೆ'ಯ ಪ್ರಮುಖ ಹಾದಿಯನ್ನು ಆರಿಸಿಕೊಂಡಿದೆ. ಇದರ ಫಲವಾಗಿ ಪರಿಸರದ ಮಕ್ಕಳಾಗಿ ಕಾಲಾಂತರದಿಂದ ಇದೇ ನಮ್ಮ ನಾಡು ಎಂದು ಬದುಕು ಸಾಗಿಸಿದ 'ಅರಣ್ಯವಾಸಿಗಳು' (ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳು) ತಮ್ಮ ಪವಿತ್ರ ದೈವಿ ಆವಾಸ ಸ್ಥಾನಗಳನ್ನು ತೊರೆದು ಒಕ್ಕಲೇಳುವ ಸಂದರ್ಭವನ್ನು ಕಾಣುತ್ತಾ ತಮ್ಮ ಆತ್ಮೀಯತೆಯನ್ನು ಪ್ರಶ್ನಿಸಿಕೊಳ್ಳುವಂತಾಗಿದೆ. ಕಳೆದ

೩ ದಶಕಗಳಲ್ಲಿ ಅರಣ್ಯವಾಸಿಗಳು ಅಭಿವೃದ್ಧಿಯ ಹೆಸರಲ್ಲಿ ಅಣೆಕಟ್ಟು ನಿರ್ಮಾಣ, ನೀರಾವರಿ ಯೋಜನೆಗಳು, ವನ್ಯಜೀವಿ ಧಾಮಗಳು, ಅಭಯಾರಣ್ಯ, ರಾಷ್ಟ್ರೀಯ ಉದ್ಯಾನವನ ಮತ್ತು ಮೀಸಲು ಅರಣ್ಯಗಳ, ರಸ್ತೆ ವಿಸ್ತರಣೆ, ಇತರೆ ಮಾರ್ಗಗಳು, ಏರ್ಪೋರ್ಟ್, ಕಾರ್ಖಾನೆ ಸ್ಥಾಪನೆ ಮುಂತಾದವುಗಳ ನೆಲೆಯೂರಿಕೆಗೆ ಪ್ರಭುತ್ವದ ಮುಖೇನ ಸೂಚಿತವಾಗಿ ಪರಿಭಾವಿಸಲ್ಪಟ್ಟಿರುವ 'ಸ್ಥಳಾಂತರ'ದ ಪರಿಕಲ್ಪನೆಯಡಿ ಒತ್ತಡ ಪೂರ್ವಕವಾಗಿ ಇಲ್ಲವೆ ಸ್ವತಂತ್ರದ ಇಚ್ಚೆಗೆ ಒಳಪಟ್ಟು ಸ್ವಂತ ಸ್ಥಳಗಳನ್ನು ತೊರೆದು 'ಪುನರ್ವಸತೀಕರಣದ' ವ್ಯವಸ್ಥೆಯಡಿ ಪರಸ್ಥಳಗಳಲ್ಲಿ ಬಂದು ನೆಲೆಸುವ ಸಂದಿಗ್ಧತೆಯಲ್ಲಿ ಸಿಲುಕಿದ್ದಾರೆ. ಹಾಗಾದರೆ ಸ್ಥಳಾಂತರ ಎಂದರೇನು? ಪುನರ್ವಸತೀಕರಣ ಎಂದರೇನು? ಅದರಿಂದಾಗುವ ಪರಿಣಾಮಗಳೇನು ಎಂದು ತಿಳಿಯೋಣ.

ಸ್ಥಳಾಂತರ ಎಂದರೆ, ಸಾಮಾನ್ಯ ಅರ್ಥದಲ್ಲಿ ವಾಸ್ತವದ ಸ್ಥಿತಿಯನ್ನು ತೊರೆದು ಬೇರೊಂದು ಸ್ಥಿತಿಗೆ ಒಳಪಡಿಸಿಕೊಳ್ಳುವಿಕೆ ಅಣಿಯಾಗುವುದು ಎಂದರ್ಥವಿದೆ. ಅಂದರೆ, ಒಬ್ಬ ಸಾಮಾನ್ಯ ರೈತನು ತನ್ನ ಅನುಭೋಗದಲ್ಲಿರುವ ವಾಸಿತ ಮನೆ, ಜೀವನೋಪಾಯಕ್ಕಾಗಿ ಅವಲಂಬಿಸಿರುವ ಜಮೀನು, ಸಮುದಾಯದ ಸಾಮಾಜಿಕವಾದ ಸಾಂಘಿಕ ಜೀವನವನ್ನು, ಅಭಿವೃದ್ಧಿಯ ಕಾರಣಕ್ಕಾಗಿ ಪ್ರಭುತ್ವಕ್ಕೆ ಇಲ್ಲವೆ ಬಂಡವಾಳಗಾರನ ಬಂಡವಾಳಕ್ಕೆ ಬಿಟ್ಟುಕೊಟ್ಟು ಪೂರ್ವ ನಿಯೋಜಿತ ಇಲ್ಲವೆ ಮುಕ್ತವಾದ ಪ್ರದೇಶದಲ್ಲಿ ತನ್ನ ಉಳಿದ ಬದುಕನ್ನು ಕಟ್ಟಿಕೊಳ್ಳಲು ಒಕ್ಕಲೇಳುವುದಾಗಿದೆ. ಅಂತೆಯೇ ಸ್ಥಳಾಂತರವು ಸಂದರ್ಭಕ್ಕೆ ಅನುಸಾರವಾಗಿ ಸಂಭವಿಸುವಂತದ್ದು, ಅದರ ಪ್ರಕಾರವಾಗಿ ಸ್ಥಳಾಂತರವು ಈ ಮೂರು ಪ್ರಕಾರಗಳಿಗಾಗಿ ಏರ್ಪಡುವುದು.

೦೧.ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ: ಅಭಿವೃದ್ಧಿಯ ಬೆಳವಣಿಗೆಯಲ್ಲಿ ಉದ್ದೇಶಿತ ಯೋಜನೆಗಳನ್ನು ಜಾರಿಗೊಳಿಸುವಿಕೆಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಳ್ಳಲು (ಭೂ ಪ್ರದೇಶ, ನೀರು, ಗಾಳಿ ಮತ್ತು ಪರಿಸರ) ಸ್ಥಳೀಯವಾಗಿ ವಾಸವಿರುವ ಮಾನವ ಸಮುದಾಯವನ್ನು ಒಕ್ಕಲೆಬ್ಬಿಸುವುದು.

೦೨. ಪ್ರಕೃತಿ ಸಹಜ ಪ್ರಕ್ರಿಯೆ: ಮಾನವನನ್ನು ಹೊರತುಪಡಿಸಿ ಪ್ರಕೃತಿದೆಸೆಯಿಂದ ಸಂಭವಿಸಿದಂತಹ ವಿಪತ್ತುಗಳಿಂದ ಆಯಾ ಸ್ಥಳದ ಸಮುದಾಯವನ್ನು ಸುರಕ್ಷಿತ ಸ್ಥಳಗಳಿಗೆ ಕೊಂಡೊಯ್ಯುವ ಪ್ರಕ್ರಿಯೆಯಾಗಿದೆ.

೦೩. ಮಾನವ ಸಂಘರ್ಷಗಳು: ಮಾನವರ ನಡುವಿನ ಸಂಘರ್ಷಗಳಿಂದಾಗಿ ಪ್ರಕ್ಷುಬ್ಧತೆ ಉಂಟಾದ ಸ್ಥಳಗಳಿಂದ ಸಮುದಾಯಗಳನ್ನು ಇರುವ ಸ್ಥಳಗಳಿಂದ ತೆರವುಗೊಳಿಸಿ ಇತರೆ ಸ್ಥಳಗಳಲ್ಲಿ ನಿಯುಕ್ತಗೊಳಿಸುವುದು.

ಮೇಲಿನ ಮೂರು ವಾಕ್ಯಗಳನ್ನು ಪರಿಗಣಿಸಿ ಸ್ಥಳಾಂತರವು ಮೂಲತಃ ಈ ಸಂಶೋಧನೆಯಲ್ಲಿ ಅಭಿವೃದ್ಧಿಯ ಮತ್ತು ಬೆಳವಣಿಗೆಯ ದಿಶೆಯಲ್ಲಿ ಅರಣ್ಯ ಪ್ರದೇಶಗಳನ್ನು ಕೇಂದ್ರವಾಗಿರಿಸಿಕೊಂಡು ಆಗುವಂತಹ ಸ್ಥಳಾಂತರ (ಒಕ್ಕಲೇಳುವಿಕೆ) ಮತ್ತು ಪುನರ್ವಸತೀಕರಣ ಪ್ರಕ್ರಿಯೆಯನ್ನು ಕುರಿತು ಮಾತ್ರ ಸೀಮಿತಗೊಳಿಸಿಕೊಳ್ಳಲಾಗಿದೆ.

ಸ್ಥಳಾಂತರದ ಪರಿಕಲ್ಪನೆ ಮತ್ತು ಪರಿಣಾಮಗಳು

ದ ಕಾನ್ಸೆಪ್ಟ್ ಆಫ್ ಡಿಸ್‌ಪ್ಲೇಸ್‌ಮೆಂಟ್‌ನಲ್ಲಿ Cernea, ಅವರ ಅಭಿಪ್ರಾಯವನ್ನು ಉಲ್ಲೇಖಿಸಿರುವಂತೆ, ಸ್ಥಳಾಂತರವೆಂಬುದು ಸ್ಥಳೀಯ ಪ್ರದೇಶಗಳ ನಿವಾಸಿತ ಜನರಿಗೆ ಭೌತಿಕವಾಗಿ ಒಕ್ಕಲೇಳುವ ಮೊದಲೇ ಕಾನೂನಾತ್ಮಕವಾಗಿ ಕಟ್ಟಡ ನಿರ್ಮಾಣಕ್ಕೆ, ಉತ್ಪಾದನಾಂಗ ವ್ಯವಸ್ಥೆಗೆ ಹಣ ತೊಡಗಿಸುವಿಕೆಯನ್ನು ಮತ್ತು ಸಾರ್ವಜನಿಕವಾಗಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ನಿರ್ಬಂಧಿಸುವುದು. ಈ ವ್ಯವಸ್ಥೆಯು ಅವರನ್ನು ದಾರಿದ್ರ್ಯಕ್ಕೆ ತುತ್ತಾಗುವಂತೆ ಮಾಡಲಾಗುವಂತದ್ದು[೧೭].

ಸೆರೆನಾ ಮತ್ತು ಕನಬ್ರೂ ಅಭಿಪ್ರಾಯದಂತೆ, ಸ್ಥಳಾಂತರತೆಯು ಅಭಿವೃದ್ಧಿಯ ಪ್ರಕ್ರಿಯೆಗಾಗಿ ಅಲ್ಪ ಪ್ರಮಾಣದ ಲಾಭಾಂಶಕ್ಕೆ ಭಾವನಾತ್ಮಕವಾಗಿ ವೃದ್ಧಿಯಾಗಿದ್ದ ಸಾಮಾಜಿಕ ಭಾಂದವ್ಯಗಳನ್ನು, ನೆಲ, ಜಲ ಮತ್ತು ಪರಿಸರವನ್ನು ಒತ್ತಡ ಪೂರ್ವಕವಾಗಿ ಏಕ ವ್ಯಕ್ತಿ ಇಲ್ಲವೆ ಸಮುದಾಯವೇ ತೊರೆದುಕೊಳ್ಳುವ ಅನುಭವವೇ ಸ್ಥಳಾಂತರವಾಗಿದೆ.

ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ಏರ್ಪಡುವ ಸ್ಥಳಾಂತರದ (ಒಕ್ಕಲೇಳುವಿಕೆ) ಸನ್ನಿವೇಶಗಳು ವಿಶ್ವವ್ಯಾಪಿಯಾಗಿ ಪ್ರತಿಯೊಂದು ರಾಷ್ಟ್ರದಲ್ಲಿನ ಚರ್ಚಿತ ವಿಷಯವಾಗಿದೆ. ಕಾರಣ ಈ ಪ್ರಕ್ರಿಯೆಯು ಬಹಳ ಸಂಕೀರ್ಣವಾದ ಸ್ಥಿತಿಯನ್ನು ಹೊಂದಿರುವುದೇ ಆಗಿದೆ. ಅದನ್ನರಿಯಲು ಸ್ಥಳಾಂತರದ ಸ್ಥಿತಿಯ ಪರಿಣಾಮಗಳೇನು? ಎಂಬುದನ್ನು ತಿಳಿಯೋಣ.

ಸ್ಥಳಾಂತರದ ಪರಿಣಾಮಗಳು

ಸ್ಥಳಾಂತರದ ಮೂಲಭೂತವಾದ ಲಕ್ಷಣಗಳೆಂದರೆ, ಅಭೇದಿಸಲಾಗದ ಸಾಮಾಜಿಕ ಸಂಘಟನೆಗಳ ಮೇಲೆ ತನ್ನ ದೃಷ್ಟಿಯನ್ನು ಹಾಯಿಸುವ ಮೂಲಕ ಉತ್ಪಾದನಾಂಗಗಳನ್ನು ಭಗ್ನಗೊಳಿಸುವುದು, ಪೂರ್ವ ಕಾಲದಿಂದಲೂ ಸಂಘಟಿತವಾಗಿ ಜೀವನ ಸಾಗಿಸಿಕೊಂಡು ಬಂದಂತಹ ಸಮುದಾಯಗಳು ಅಸಂಘಟಿತವಾಗುವವು, ಭಾಂದವ್ಯದ ಸಂಬಂಧದಲ್ಲಿ ಲೀನವಾಗಿದ್ದ ಕುಟುಂಬಗಳು ಚದುರಿ ಹೋಗುವವು, ಸುಸ್ಥಿರವಾದ ಜೀವನಕ್ಕೆ ಊರುಗೋಲುಗಳಾಗಿದ್ದ ಸಾಮಾಜಿಕ ಜಾಲಗಳು ನಿಷ್ಪ್ರಯೋಜಕವಾಗುವವು, ವ್ಯಾಪಾರ ವಹಿವಾಟಿನ ಸಂಬಂಧಗಳು ಕಡಿದುಕೊಳ್ಳುವವು, ಔಪಚಾರಕವಾಗಿ – ಅನೌಪಚಾರಿಕವಾಗಿದ್ದ ಸಂಘಟನೆಗಳು ಮತ್ತು ಸ್ವ ಸಹಾಯ ಸಂಘಗಳು ಕಾರ್ಯ ನಿರ್ವಹಿಸದೆ ಚದುರಿಹೋಗುವವು, ಪೂರ್ವಜರು ಬೆಳೆಸಿದ ಸಾಂಪ್ರದಾಯಿಕ ನಾಯಕತ್ವವು ಬಲ ಕಳೆದುಕೊಳ್ಳುವವು, ಆದಿ ಕಾಲದಿಂದಲೂ ಪರಿಸರದೊಂದಿಗೆ (ಜಲ, ಶಿಖರಗಳು, ದೇವಸ್ಥಾನಗಳು) ಬೆಳೆಸಿಕೊಂಡು ಬಂಧಿದ್ದ ಮಾನೋ–ಸಾಮಾಜಿಕ ಸಂಬಂಧಗಳು ಕಡಿದುಕೊಂಡು ಸಾಂಸ್ಕೃತಿಕ ಮೂಲ ಪರಂಪರೆ ನಶಿಸುವುದು, ಈ ಮೂಲಕ ಸಮುದಾಯಗಳ ಸಾಮಾಜಿಕ ಚೌಕಟ್ಟಿನ ಸಮುಚ್ಚಯವನ್ನು ಭಗ್ನಗೊಳಿಸುತ್ತದೆ.

ಒಂದೆಡೆ ಸಾಮಾಜಿಕವಾಗಿ ಸಂಘಟಿತವಾಗಿದ್ದ ವ್ಯವಸ್ಥೆಗಳನ್ನು ಶಿಥಿಲಗೊಳಿಸಿದ ಸ್ಥಳಾಂತರವು ತದನಂತರದ ವ್ಯವಸ್ಥೆಯಲ್ಲಿಯೂ ಕೂಡ ಅವ್ಯವಸ್ಥೆಯ ಸೋಪಾನವನ್ನು ಈ ಕೆಳಗಿನ ಆಯಾಮಗಳಲ್ಲೂ ಮುಂದುವರೆಸುತ್ತದೆ. ಅವುಗಳೆಂದರೆ, ಭೂ ರಹಿತರಾಗುವುದು, ಆಶ್ರಯ ರಹಿತರಾಗುವುದು, ಉದ್ಯೋಗರಹಿತರಾಗುವುದು, ಮಗದೊಂದು ಸಮುದಾಯದ ಎದುರು ಅಂಚಿಗೆ ತಳ್ಳಲ್ಪಡುವುದು, ಆಹಾರ ಕೊರತೆ ಎದುರಿಸುವುದು, ಆರೋಗ್ಯ ಕ್ಷೀಣಿಸುವಿಕೆ, ಮರಣ ಪ್ರಮಾಣ ಹೆಚ್ಚಾಗುವಿಕೆ ಮತ್ತು ಸಾಮಾಜಿಕವಾಗಿ ವಿಭಜನೆಯಾಗುವಿಕೆಯ ಅವ್ಯವಸ್ಥೆಗಳುಂಟಾಗುವುದು. ಈ ಮೂಲಕವಾಗಿ ಸ್ಥಳಾಂತರವಾದಂತಹ ಕುಟುಂಬಗಳು ಮತ್ತು ಸಮುದಾಯಗಳಲ್ಲಿ ಮುಂದಿನ ದಿನಮಾನಗಳಲ್ಲಿ ಆದಾಯ ಮಟ್ಟದಲ್ಲಿ ಇಳಿಕೆಯನ್ನು ಕಾಣುತ್ತವೆ, ಆಸ್ತಿಗಳು ನಷ್ಟವಾಗುವುದರೊಂದಿಗೆ ಜೀವನೋಪಾಯ ಮತ್ತು ಉತ್ಪಾದನಾಂಗಗಳಲ್ಲಿ ಕಡಿಮೆ ಬೆಳವಣಿಗೆ, ಇವುಗಳಿಂದಾಗಿ ಮಹಿಳೆಯರು, ಮಕ್ಕಳು ಮತ್ತು ವೃದ್ಧರು ಮಾನವ ಹಕ್ಕುಗಳಿಂದ ವಂಚಿತರಾಗುವರು. ಇದಕ್ಕೆ ಪೂರಕವಾಗಿ Robinson points out that displacement is associated with increased vulnerability including impoverishment, elevated morbidity and mortality, loss of social and economic rights and in many cases abuse of human rights [೧೮]. ವಿವರಾರ್ಥ: ಸ್ಥಳಾಂತರ ಅಥವಾ ಒಕ್ಕಲೇಳುವಿಕೆಯು ದುರ್ಬಲತೆಯೊಂದಿಗೆ ದಾರಿದ್ರ್ಯವನ್ನು ಬೆಸೆದುಕೊಳ್ಳುವುದರೊಂದಿಗೆ ಅನಾರೋಗ್ಯ ಸ್ಥಿತಿ ಮತ್ತು ಮರಣ ಪ್ರಮಾಣವನ್ನು ಏರಿಕೆ ಮಾಡುವ ಮೂಲಕ ಸಾಮಾಜಿಕ-ಆರ್ಥಿಕ ಹಕ್ಕುಗಳೊಂದಿಗೆ ಮಾನವ ಹಕ್ಕುಗಳನ್ನು ದುರುಪಯೋಗ ಪಡಿಸುವುದು.

ಪುನರ್ವಸತೀಕರಣ

ಅಭಿವೃದ್ಧಿ ಮತ್ತು ಸಂರಕ್ಷಣೆಯ ಎರಡು ಭೀಕರವಾದ ಚಹರೆಗಳೆಂದರೆ, ಅದು ಸ್ಥಳಾಂತರ (ಒಕ್ಕಲೇಳುವಿಕೆ) ಮತ್ತು ಪುನರ್ವಸತೀಕರಣ. ಒಕ್ಕಲೇಳುವಿಕೆಯು ಎತ್ತಂಗಡಿಯನ್ನು ಪ್ರೋತ್ಸಾಹಿಸಿದರೆ, ಪುನರ್ವಸತೀಕರಣವು ಜೀವನ ಸಾಗುವ ನಿಟ್ಟಿನಲ್ಲಿ ದಿಕ್ಕುಗಳನ್ನು ಹಾಗೂ ಗುರಿಗಳನ್ನು ಬದಲಾಯಿಸಿಬಿಡುತ್ತದೆ. ಪುನರ್ವಸತೀಕರಣವು ತನ್ನೊಂದಿಗೆ ಪುರ್ನವ್ಯವಸ್ಥೆಯ ಆಯಾಮವನ್ನು ಸೇರಿಸಿಕೊಂಡು ಒಕ್ಕಲೆದ್ದವರನ್ನು ಆಕರ್ಷಿಸುವ ಅಂಶವಾಗಿ ಪ್ರಜ್ವಲಿತವಾಗುತ್ತದೆ. ಈ ಪ್ರಜ್ವಲಿತವಾಗುವ ಅಂಶದ ವಾಸ್ತವದಲ್ಲಡಗಿರುವುದೇ 'ಮಿಸಿಂಗ್ ಲಿಂಕ್'. ಹಾಗಾದರೆ ಸ್ಥಳಾಂತರ(ಒಕ್ಕಲೇಳುವಿಕೆ)ದ ನಂತರದ ಭಾಗವಾಗಿರುವ ಪುನರ್ವಸತೀಕರಣದ ಕುರಿತು ತಿಳಿಯೋಣ.

ಪುನರ್ವಸತೀಕರಣ: ಒಬ್ಬ ವ್ಯಕ್ತಿ ಅಪಘಾತಕ್ಕೀಡಾದಾಗ ಇಲ್ಲವೇ ತೀವ್ರತರವಾದ ಖಾಯಿಲೆಗಳಿಗೆ ಒಳಗಾದಾಗ ಅವುಗಳಿಂದ ಹೊರಬಂದು ಮೊದಲಿನ ಸ್ಥಿತಿಯಲ್ಲಿ ತನ್ನ ಜೀವನ ಶೈಲಿಯನ್ನು ಬೆಳೆಸಿಕೊಳ್ಳುವಂತೆ ಕಾರ್ಯರೂಪಕ್ಕೆ ತರುವ ಕ್ರಮವಾಗಿದೆ. ಪುನರ್ವಸತೀಕರಣದ ಗುರಿಯು ಒಬ್ಬ ವ್ಯಕ್ತಿ ನಿಯಮಿತ ಕಾಲದಲ್ಲಿ ಅಥವಾ ತತ್ಕಾಲದಲ್ಲಿ ಆಗಿರುವ ತೊಂದರೆಗಳಿಂದ ವಿಮುಕ್ತಿ ಹೊಂದಿ ಸ್ವಾತಂತ್ರವಾಗಿ ಜೀವಿಸುವಂತೆ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸುವುದು.

ಇದಕ್ಕೆ ಪೂರಕವಾಗಿ ಪುನರ್ವ್ಯವಸ್ಥೆಯು ನಿರಂತರವಾದ ಪ್ರಕ್ರಿಯೆಯಾಗಿದ್ದು, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಯೋಜನಾ ಉದ್ದೇಶಿತವಾಗಿ ಇಲ್ಲವೆ, ಪ್ರಾಕೃತಿಕವಾಗಿ ಸಂಭವಿಸುವ ಅಪಘಾತ ಅಥವಾ ಅವಘಡಗಳಿಂದಾಗಿ ಬೇರೆಡೆಗೆ ಸ್ಥಳಾಂತರಗೊಂಡ ನಂತರ ಏರ್ಪಡುವ ಕಾರ್ಯವಾಗಿದೆ. ಅರ್ಥಿಯು (ಕ್ಲೈನ್ಸ್) ಕಲಿಕೆಯ ತಿರುವಿನಲ್ಲಿದ್ದಾಗ ಆತನ ಜೀವನೋಪಾಯಕ್ಕಾಗಿ ವಸತಿ ಇಲ್ಲವೆ ಕೃಷಿ ಭೂಮಿಯನ್ನು ಆರ್ಥಿಕ ಬೆಂಬಲಕ್ಕಾಗಿ ನೀಡುವುದು. ಇದರ ಮುಖೇನ ಆತನು ಮುಂದಿನ ದಿನಮಾನಗಳಲ್ಲಿ ತನ್ನ ಆದಾಯ ಮಟ್ಟದಲ್ಲಿ ಚೇತರಿಕೆಕಂಡು ಜೀವನಶೈಲಿಯಲ್ಲಿ ಬದಲಾವಣೆ ಕಾಣುವನು.

ಸ್ಥಳಾಂತರ (ಒಕ್ಕಲೇಳುವಿಕೆ)ದ ಮುಂದುವರೆದ ಭಾಗವಾಗಿರುವ ಪುನರ್ವಸತೀಕರಣವು ಸ್ಥಳ, ಕಾಲ ಮತ್ತು ಸಂದರ್ಭಗಳನ್ನು ಆಧರಿಸಿ ಏರ್ಪಡುವಂತದ್ದಾಗಿದ್ದು, ನಿರ್ದಿಷ್ಟವಾದ ಚೌಕಟ್ಟಿನೊಳಗೆ ಗತಿಸುವುದು ಬಹಳ ಪ್ರಯಾಸದ ಕಾರ್ಯ. ಅಭಿವೃದ್ಧಿಯ ಸಂಕಲ್ಪದಲ್ಲಿ ಪುನರ್ವಸತೀಕರಣವು ಪ್ರಮುಖವಾದ್ದರಿಂದ ಸಂಪನ್ಮೂಲಗಳ ಕ್ರೋಡೀಕರಣ ಅವಶ್ಯವಾದುದು. ಈ ನಿಟ್ಟಿನಲ್ಲಿ ಪುನರ್ವಸತೀಕರಣವು ಏರ್ಪಡುವ ರಾಜ್ಯ ಇಲ್ಲವೆ ರಾಷ್ಟ್ರದಲ್ಲಿ ದೊರೆಯುವ ಇಲ್ಲವೆ ಕೊಡಮಾಡಲ್ಪಡುವ ಸಂಪನ್ಮೂಲಗಳ ಆಧಾರಿತವಾಗಿ ಉತ್ತಮವೋ, ಮಧ್ಯಮವೋ ಇಲ್ಲವೇ ಅಪ್ರಯೋಜಕವೋ ಎಂಬುದು ನಿರ್ಧಾರವಾಗುತ್ತದೆ.

ಪುನರ್ವಸತೀಕರಣದ ವಿಧಗಳು: ವಿಶ್ಲೇಷಣೆಯ ಆಧಾರಿತವಾಗಿ ೩ ಪ್ರಕಾರಗಳಲ್ಲಿ ಸ್ಥಳಾಂತರದಿಂದಾದ ಪುನರ್ವಸತೀಕರಣವ್ಯವಸ್ಥೆಯನ್ನು ಕಾಣಬಹುದು. ಈ ಪ್ರಕ್ರಿಯೆಯು ವ್ಯಕ್ತಿಯ/ಕುಟುಂಬದ/ಸಮುದಾಯಗಳ ಸಮ್ಮತಿಯ ಆಧಾರಿತವಾಗಿ ಸಂಭವಿಸುವಂತಹದ್ದು.

೦೧. ಸ್ವಯಂ ಪ್ರೇರಿತವಾಗಿ ಸ್ಥಳಾಂತರ ಹೊಂದುವುದು: ಅಭಿವೃದ್ಧಿಯ ಮತ್ತು ಸಂರಕ್ಷಣೆಯ ಸ್ಥಿತಿ ಎದುರಾದಾಗ, ಅದರಿಂದ ಭವಿಷ್ಯತ್ತಿನಲ್ಲಿ ಸಂಭವಿಸುವ ಘಟನೆಗಳನ್ನು ಅರಿವಿಗೆ ತಂದುಕೊಂಡು ಯಾರ ಒತ್ತಡಕ್ಕೂ ಮಣಿಯದೆ ತಮ್ಮ ಸ್ವ ಇಚ್ಚೆಗೆ ಒಳಪಟ್ಟು ಪ್ರಕಲ್ಪಗಳು ಅನುಷ್ಠಾನಗೊಳ್ಳುವಿಕೆಗೆ ಅನುವುಮಾಡಿಕೊಟ್ಟು, ಒಕ್ಕಲೇಳುವುದು.
೦೨. ಒತ್ತಡ ಪೂರಕವಾಗಿ: ಅಭಿವೃದ್ಧಿ ಮತ್ತು ಸಂರಕ್ಷಣಾ ಪ್ರಕಲ್ಪಗಳು ಅನುಷ್ಠಾನಗೊಳ್ಳುವಿಕೆಗೆ ಸ್ಥಳಿಯರಿಂದ ವಿರೋದಗಳು ವ್ಯಕ್ತವಾದಾಗ ಅವರನ್ನು ಕಾರ್ಯಚರಣೆಗಳ(ನಿರ್ಬಂಧ) ಮುಖಾಂತರ ಸನ್ನಿವೇಶಗಳನ್ನು ಬಿಗಿಗೊಳಿಸಿ ಒತ್ತಾಯ ತರುವಿಕೆಯ ಮುಖಾಂತರ ಒಕ್ಕಲೆಬ್ಬಿಸುವುದು.
೦೩. ಪ್ರೇರಿತವಾಗಿ: ಪ್ರಕಲ್ಪಗಳು ಅನುಷ್ಠಾನಗೊಳ್ಳುವಿಕೆಗೆ ಅವುಗಳ ಪ್ರಯೋಜನೆಗಳನ್ನು ಹಾಗೂ ಆಗು ಹೋಗುಗಳನ್ನು ತಿಳಿದು ಪ್ರಚೋದಿತಗೊಂಡು ಒಕ್ಕಲೇಳುವುದು/ಲೆಬ್ಬಿಸುವುದು.

ಪುನರ್ವಸತೀಕರಣದ ಸ್ವರೂಪಗಳು: ಅಭಿವೃದ್ಧಿಯ ನೆಪದಲ್ಲಿ ಪ್ರಕಲ್ಪಗಳ ಅನುಷ್ಠಾನಕ್ಕಾಗಿ ಭೂ ಪ್ರದೇಶವೊಂದರ ನಿವಾಸಿಗಳನ್ನು (ಒಕ್ಕಲೇಳಿಸುವ) ಸ್ಥಳಾಂತರದ ಪ್ರಕ್ರಿಯಗೆ ಚಾಲನೆ ನೀಡಿದ ಸಂದರ್ಭದಲ್ಲಿ ನಿವಾಸಿಗಳು ಸಂತ್ರಸ್ತರಾಗುವ ಅವಕಾಶಗಳೇ ಹೆಚ್ಚಾಗಿರುತ್ತವೆ. ಸ್ಥಳಾಂತರವಾಗುವ (ಒಕ್ಕಲೇಳಿಸುವ) ನಿವಾಸಿಗಳಿಗೆ ಪೂರಕವಾದ ವಾತಾವರಣವನ್ನು ಪುನರ್ವಸತೀಕರಣಗೊಳಿಸುವ

ಮೂಲಕ, ಪ್ರಕಲ್ಪ ತಯಾರಿಕೆಯ ಮೂಲದವರು ನಡೆಸಿಕೊಡಬೇಕಾದುದು ಅನಿವಾರ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಪುನರ್ವಸತೀಕರಣದ ಸ್ವರೂಪಗಳನ್ನು ಕುರಿತು ತಿಳಿಯೋಣ.

ಪುನರ್ವಸತೀಕರಣದ ಹೆಸರೇ ಸೂಚಿಸುವಂತೆ ಮರು ವ್ಯವಸ್ಥೆಗಳನ್ನು ಕಲ್ಪಿಸುವುದು. ಅಂದರೆ, ಮೊದಲಿನ ಸ್ಥಿತಿಗತಿಗಳನ್ನು ಯತಾವತ್ತಾಗಿ ಜೀವನೋಪಾಯಕ್ಕಾಗಿ ಕಲ್ಪಿಸುವ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯು ಸ್ಥಳಾಂತರ (ಒಕ್ಕಲೇಳಿಸುವಿಕೆ)ದ ಪೂರಕ ವ್ಯವಸ್ಥೆಯಾಗಿ ಪ್ರವಹಿಸಲ್ಪಡುವುದು. ಈ ಪೂರಕ ವ್ಯವಸ್ಥೆಯು ಈ ಕೆಳಕಂಡ ಪ್ರಕಾರದ ಸ್ವರೂಪಗಳನ್ನು ಹೊಂದಿರುವುದು.

೦೧. ಸ್ವತ್ತುಗಳ ಮೌಲ್ಯೀಕರಣ ಸ್ವರೂಪವಾಗಿ: ವ್ಯಕ್ತಿ/ಕುಟುಂಬ/ಸಮುದಾಯವು ಪ್ರಕಲ್ಪಗಳ ಅನುಷ್ಠಾನಕ್ಕಾಗಿ ತನ್ನ ಪೂರ್ವಜರಿಂದ ಪಡಿದಿರುವ ಹಾಗೂ ತನ್ನ ಸ್ವ ಅನುಭವದಲ್ಲಿದ್ದ ಪಕ್ಷದಲ್ಲಿ ಅದರ ಒಟ್ಟು ಮೌಲ್ಯವನ್ನು ಪ್ರಸ್ತುತದ ಮಾರುಕಟ್ಟೆ ಬೆಲೆಗಳನ್ನು ಆಧರಿಸಿ ನಿರ್ಧರಿಸುವ ಸಂಪೂರ್ಣ ಹಕ್ಕನ್ನು ಹೊಂದಿರುತ್ತಾನೆ. ಈ ಪ್ರಕ್ರಿಯೆಯಲ್ಲಿ ಆತನು ಹೊಂದಿರುವ ಯಾವ ಸ್ವತ್ತುಗಳು ಪ್ರಕಲ್ಪದ ಸ್ಥಳಗಳಿಗೆ ವಿನಿಯೋಗವಾಗುತ್ತದೆ, ಎಷ್ಟು ಪ್ರಮಾಣದ ಅವಶ್ಯಕತೆಗಳಿವೆ ಎಂಬುದನ್ನು ಪರಿಗಣಿಸಿ ಅದರಲ್ಲಿ ವಾಸಿತ ಮನೆಗಳಾದರೆ, ಬೆಳೆ ಬೆಳೆಯುವ ಹೊಲ, ಗದ್ದೆ, ತೋಟ, ಜೀವನೋಪಾಯಕ್ಕಾಗಿ ತೊಡಗಿಸಿಕೊಂಡಿರುವ ಯಂತ್ರೋಪಕರಣಗಳು, ವ್ಯವಹಾರದ ಅಂಗಡಿಗಳೋ, ಕೊಳವೆ ಬಾವಿಗಳೋ, ಶಾಲೆ, ರಸ್ತೆ ನಿರ್ಮಾಣ ವಿದ್ಯುತ್ ಶಕ್ತಿಯ ಕಂಬಗಳೋ, ಆಶ್ರಿತವಾಗಿರುವ ಪಶು-ಪ್ರಾಣಿಗಳೋ ಎಂಬ ಎಲ್ಲಾ ಅಂಶಗಳನ್ನು ಆಧರಿಸಿ ಮೌಲ್ಯಗಳು ನಿರ್ಧಾರಿತವಾಗುತ್ತದೆ. ಈ ನಿರ್ಧಾರಿತ ಮೌಲ್ಯಗಳನ್ನು ಒಟ್ಟಾರೆಯ ಹಣದ ರೂಪದಲ್ಲಿ ಪಡೆದುಕೊಂಡು ಪುನರ್ವಸತೀಕರಣವನ್ನು ಹೊಂದಬಹುದು.

೦೨. ಭೂಪ್ರದೇಶದ ಆಧಾರಿತವಾಗಿ ಇಲ್ಲವೆ ನಗದಿನ ಸ್ವರೂಪವಾಗಿ: ಭೂ ಪ್ರದೇಶಗಳು ಸ್ಥಿರಾಸ್ಥಿಗಳಾಗಿದ್ದು, ಭಾರತದ ಸರ್ವ ರೈತರ ಜೀವನೋಪಾಯದ ಆರ್ಥಿಕ ಮೂಲಗಳು ಕೂಡ ಆಗಿವೆ. ಈ ಮೂಲಗಳಿಂದ ವಾರ್ಷಿಕವಾಗಿ ಉತ್ಪಾದನೆಯಾಗುವ ಉತ್ಪತ್ತಿಗಳು ಒಂದೆಡೆ ಅವರ ಕುಟುಂಬದ ಮೂಲವನ್ನು ಸಂತೈಸುತ್ತಿದೆ. ಮತ್ತೊಂದೆಡೆ ಕುಟುಂಬದ ನಿರ್ವಹಣೆಗಾಗಿ ಪೂರೈಕೆಯಾಗಿ ಉಳಿದ ಧಾನ್ಯ ಸಂಪತ್ತನ್ನು ಮಾರುಕಟ್ಟೆಯಲ್ಲಿ ಮಾರುವ ಮೂಲಕ ಕೃಷಿಯೇತರ ಕುಟುಂಬಗಳನ್ನು ಎಲೆಮರೆಯ ಕಾಯಿಯಂತೆ ಕಾಣದ ಕೈ ಯಂತೆ ಪೂರೈಕೆ ಮಾಡುತ್ತಿವೆ. ಇಂತಹ ಮೂಲಗಳು ಕೆಲವೊಮ್ಮೆ ನಗರ ಪ್ರದೇಶಗಳ ಸಮೀಪದಲ್ಲಿರುವ ಸಂದರ್ಭದಲ್ಲಿ ನಗರಗಳ ವಿಸ್ತರಣೆಯ ಅವಧಿಗಳು ಎದುರಾದಾಗ ಆ ಭೂ ಪ್ರದೇಶಗಳನ್ನು ನಿವೇಶನಗಳನ್ನಾಗಿಯೂ ಕೂಡ ಮಾರ್ಪಡಿಸಲಾಗಿರುತ್ತದೆ. ಒಟ್ಟಾರೆಯಾಗಿ ಭೂ ಪ್ರದೇಶಗಳು ಪ್ರಕಲ್ಪಗಳ ಅನುಷ್ಠಾನಕ್ಕಾಗಿ ಸಮೀಕ್ಷೆಗೆ ಒಳಪಟ್ಟಾಗ ಅಂತಹ ಭೂಪ್ರದೇಶಗಳ ಬಳಕೆ ಅನಿವಾರ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಪ್ರಕಲ್ಪಗಳ ನಿಯೋಜಕರು ಆ ಭೂಪ್ರದೇಶದ

ಮಾಲೀಕರ ಅನುಮತಿ ಹಾಗೂ ಭೂ ಪ್ರದೇಶದ ಮೌಲ್ಯೀಕರಣಗೊಂಡ ಮೇಲೆ ಅದಕ್ಕೆ ಅಷ್ಟೇ ಮೌಲ್ಯದ ಬೇರೊಂದು ಭೂ ಪ್ರದೇಶವನ್ನು ಆ ಭೂ ಪ್ರದೇಶಕ್ಕೆ ಬದಲಾಗಿ ನೀಡಬಹುದು. ಇಲ್ಲವೆ ನಗದಿನ ರೂಪದಲ್ಲಿ ಮಾರಕಟ್ಟೆಯ ಬೆಲೆಯ ಆಧಾರಿತವಾಗಿಯೂ ಪುನರ್ವಸತೀಕರಣಗಳುಂಟಾಗುವವು. ಇದಕ್ಕೆ ಪೂರಕವೆಂಬಂತೆ, ೨೦೧೫ ರಿಂದ ೨೦೧೭ರ ವೇಳೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನಿಂದ ಚಿತ್ರದುರ್ಗದ ಮೂಲಕ್ಕೆ ಭದ್ರಾ ನದಿ ನೀರನ್ನು ಹರಿಸುವ ಸಲುವಾಗಿ ಮುಕ್ತ ಕಾಲುವೆಗಳನ್ನು ನಿರ್ಮಿಸಲು ನೂರಾರು ಎಕರೆ ಕೃಷಿ ಭೂ ಪ್ರದೇಶವನ್ನು ಬಳಸಿಕೊಳ್ಳಲಾಗಿ, ಮಾರುಕಟ್ಟೆ ಮೌಲ್ಯದಂತೆ ನಗದು ರೂಪದಲ್ಲಿ ಪರಿಹಾರವನ್ನು ನೀಡುವ ಮೂಲಕ ಪುನರ್ವಸತೀಕರಣವೇರ್ಪಡುತ್ತದೆ.

೦೩. ಉದ್ಯೋಗದ ಸ್ವರೂಪದಲ್ಲಿ: ಉದ್ಯೋಗವು ಒಂದು ಕುಟುಂಬದ ಆರ್ಥಿಕ ಮೂಲ. ಉದ್ಯೋಗವು ವ್ಯಕ್ತಿಯು ತಾನು ಪಡೆದಿರುವ ಪದವಿಗಳ ಆಧಾರಿತವಾಗಿ ದೊರೆಯುವಂತಹದ್ದು. (ಅದರಲ್ಲಿ ರಾಜಕೀಯ ಕ್ಷೇತ್ರವನ್ನು ಹೊರತುಪಡಿಸಿ), ನಿಯೋಜಿತ ಪ್ರಕಲ್ಪಗಳು ಅನುಷ್ಠಾನಗೊಳ್ಳುವೆಡೆ ಕೆಲವು ಭೂ ಪ್ರದೇಶಗಳ ಸ್ವಾಧೀನತೆ ಅನಿವಾರ್ಯವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಭೂ ಪ್ರದೇಶಗಳ ಕುಟುಂಬಸ್ಥರಿಗೆ ಮನೆಯ ಯಾರಾದರೊಬ್ಬ ಸದಸ್ಯರಿಗೆ ಪರಿಹಾರವಾಗಿ ಉದ್ಯೋಗವನ್ನು ನೀಡುವ ಮೂಲಕ ಪುನರ್ವಸತೀಕರಣವೇರ್ಪಡುತ್ತದೆ.

೦೪. ಸೌಲಭ್ಯಗಳನ್ನು ರೂಪಿಸಿಕೊಡುವುದು: ಸರ್ಕಾರ ಮೂಲಕ ಇಲ್ಲವೆ ಇತರೆ ಸಂಸ್ಥೆಗಳ ಮೂಲಕ ಉದ್ದೇಶಿತ ಪ್ರಕಲ್ಪಗಳು ಜಾರಿಯಾಗುವಾಗ ಅದರಿಂದ ತೊಂದರೆಗೆ ಒಳಗಾಗುವ ಕುಟುಂಬಸ್ಥರಿಗೆ/ಸಮುದಾಯದವರಿಗೆ ಅನ್ಯ ಸ್ಥಳಗಳಲ್ಲಿ ಜೀವನವನ್ನು ಕಂಡುಕೊಳ್ಳಲು ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಂಡು ಜೀವನ ಸಾಗಿಸಲು ಎಲ್ಲಾ ಆಯಾಮಗಳಲ್ಲೂ ಅಂದರೆ, ಮನೆ, ನಿವೇಶನ, ನೀರಿನ ಸೌಲಭ್ಯ, ಶಾಲೆ, ಆಸ್ಪತ್ರೆ, ಸಮುದಾಯ ಭವನಗಳು, ಕೃಷಿ ಭೂ ಹಿಡುವಳಿಗಳನ್ನು ನಿಯುಕ್ತಗೊಳಿಸುವ ಮೂಲಕ ಪುನರ್ವಸತೀಕರಣವೇರ್ಪಡುತ್ತದೆ. ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯ ಮುತ್ತೂಡಿ ಅರಣ್ಯ ಪ್ರಾಂತ್ಯದಲ್ಲಿ ಇದ್ದಂತಹ ಅರಣ್ಯವಾಸಿತ ಸಮುದಾಯಗಳಿಗೆ (೨೯೯ ಕುಟುಂಬಗಳು) ರಾಷ್ಟ್ರೀಯ ಹುಲಿ ಯೋಜನೆಯಡಿ ಭದ್ರಾ ಅಭಯಾರಣ್ಯದಿಂದ ಸ್ಥಳಾಂತರ (ಒಕ್ಕಲೇಳಿಸುವಿಕೆ)ವಾದ ಎಲ್ಲಾ ಕುಟುಂಬಗಳಿಗೂ ಅವರು ಹೊಂದಿದ್ದ ಸ್ವತ್ತಿನ ಆಧಾರದ ಮೇಲೆ ತರೀಕೆರೆ ತಾಲ್ಲೂಕು ಮಳಲಿ ಚನ್ನೇನಹಳ್ಳಿಯಲ್ಲಿ ಕಾಲೋನಿಗಳನ್ನು ನಿರ್ಮಿಸುವ ಮೂಲಕ ಎಲ್ಲಾ ಆಯಮಗಳ ಸೌಲಭ್ಯಗಳನ್ನು ನೀಡಿ ಪುನರ್ವಸತೀಕರಣಗೊಳಿಸಲಾಗಿದೆ.

೦೫. ತರಬೇತಿಗಳ ಆಯೋಜನೆ ಮತ್ತು ಆರ್ಥಿಕ ಸಹಾಯ: ವ್ಯಕ್ತಿಯ ಇಲ್ಲವೆ ಕುಟುಂಬದ ಪುನರ್ವಸತೀಕರಣದ ಆಯಾಮದಲ್ಲಿ ಹೆಚ್ಚು ಉಪಯುಕ್ತವಾದ ಸ್ವರೂಪದ್ದೆಂದರೆ, ತರಬೇತಿಗಳನ್ನು ಆಯೋಜಿಸಿ ಪರಿಪಕ್ವತೆಗಾಗಿ ತಯಾರುಮಾಡಿ ಅವಶ್ಯಕ ಸಾಮಗ್ರಿಗಳನ್ನು

ಕೊಳ್ಳಲು ಆರ್ಥಿಕ ಸಹಾಯವನ್ನು ಕಲ್ಪಿಸುವುದು. ತರಬೇತಿ ಎಂಬುವುದು ವ್ಯಕ್ತಿಯು ತಾನು ಇಚ್ಚಿಸಿರುವ ಇಲ್ಲವೆ ಹೊಸದಾಗಿ ಕೌಶಲ್ಯಗಳನ್ನು ಕಲಿಯುವ ದಿಕ್ಕಿನಲ್ಲಿ ಅಗತ್ಯವಾದ ಪೂರಕಾಂಶಗಳನ್ನು ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳು ಅಣಿಯಾಗಿಸುವುದು. ಈ ಮೂಲಕ ವ್ಯಕ್ತಿ ಇಲ್ಲವೆ ಕುಟುಂಬದವರು ಜೀವನೋಪಾಯಕ್ಕಾಗಿ ಅವಲಂಬಿತರಾಗದೆ ಸ್ವಯಂ ಉದ್ಯೋಗಸ್ಥರಾಗುವ ಮುಖಾಂತರ ತಮ್ಮ ಆರ್ಥಿಕ ಸ್ಥಿತಿಗಳನ್ನು ಉತ್ತಮಪಡಿಸಿಕೊಳ್ಳುತ್ತಾರೆ ಹಾಗೂ ಪುನರ್ವಸತೀಕರಣದ ಅರ್ಥವೂ ಸ್ವಲ್ಪ ಮಟ್ಟಿನ ಯಶಸ್ಸನ್ನು ಕಾಣುವುದು.

ಸ್ಥಳಾಂತರದ (ಒಕ್ಕಲೇಳಿಸುವಿಕೆ) ಪ್ರಕ್ರಿಯೆಯಿಂದ ಸಂತ್ರಸ್ತರಾಗುವವರ ಅಭಿವೃದ್ಧಿ ಮತ್ತು ಬೆಳವಣಿಗೆಗಳಿಗಾಗಿ ತಾತ್ವಿಕವಾದಂತಹ ಚಿಂತನೆಗಳನ್ನು ಕೆಲವು ಚಿಂತಕರು ಪ್ರತಿಪಾಧಿಸಿದ್ದಾರೆ. ಅವುಗಳ ಮುಖಾಂತರ ಪುನರ್ವಸತೀಕರಣಪ್ರಕ್ರಿಯೆಯನ್ನು ಯಾವ ದಿಕ್ಕಿನಲ್ಲಿ ಕೊಂಡೊಯ್ದರೆ ಯಶಸ್ಸನ್ನುಗಳಿಸಬಹುದೆಂದು ಈ ಕೆಳಗೆ ನಮೂದಿಸಿರುವ ಚಿಂತಕರ ತಾತ್ವಿಕತೆಯ ದೃಷ್ಟಿಯಿಂದ ತಿಳಿದುಕೊಳ್ಳೋಣ.

೭. ತಾತ್ವಿಕ ಸಿದ್ಧಾಂತದ ಮಾದರಿಗಳು

೧೯೮೦ರ ಅಂಚಿನಲ್ಲಿ ಸ್ವಯಂ ಪ್ರೇರಿತವಾಗಿ ಪುರ್ನವ್ಯವಸ್ಥೆ ಹೊಂದಿರುವವರೊಂದಿಗೆ ವ್ಯವಹರಿಸಿದಾಗ, ಸ್ಕುಡರ್ ಮತ್ತು ಕಾಲಸನ್ ೪ ಹಂತದ ತಾತ್ವಿಕ ಮಾದರಿಯನ್ನು 'ಪುರ್ನವ್ಯವಸ್ಥೆಗೆ ಜನರು ಮತ್ತು ಅವರ ಸಾಮಾಜಿಕ-ಸಾಂಸ್ಕೃತಿಕ' ಅಂಶಗಳು ಹೇಗೆ ಪ್ರತಿಕ್ರಿಯಿಸುತ್ತವೆ ಎಂಬುದನ್ನು ಗ್ರಹಿಸಿದರು. ಅದಕ್ಕಾಗಿ ೪ ಹಂತಗಳಾದ ನೇಮಕ, ಪರಿವರ್ತನೆ, ಸಾಮರ್ಥ್ಯ ಅಭಿವೃದ್ಧಿ ಮತ್ತು ಏಕೀಕರಣ ಎಂಬ ಹಂತಗಳನ್ನು ಬಳಸಿಕೊಂಡರು. ನೇಮಕದ ಹಂತದಲ್ಲಿ ಸ್ಥಳಾಂತರ (ಒಕ್ಕಲೇಳುವಿಕೆ) ಹೊಂದುವವರಿಗೆ ಯಾವುದೇ ವಿಷಯವನ್ನು ಅರಿವಿಗೆ ತರದೆ ಕಾನೂನು ಮತ್ತು ನೀತಿ ನಿಯಮಗಳನ್ನು ರೂಪಿಸುವವರು ಪುರ್ನವ್ಯವಸ್ಥೆಯ ಯೋಜನೆಯನ್ನು ಅಭಿವೃದ್ಧಿ ಪಡಿಸಿರುತ್ತಾರೆ. ಪರಿವರ್ತನೆ ಅಥವಾ ಸಂಕ್ರಮಣ ಹಂತದಲ್ಲಿ (ಸ್ಥಳಾಂತರಕ್ಕೆ ಒಳಪಡುವ) ಭವಿಷ್ಯತ್ತಿನಲ್ಲಿ ಸ್ಥಳಾಂತರಗೊಳ್ಳುವಿಕೆ (ಒಕ್ಕಲೇಳುವಿಕೆ) ಸಂದರ್ಭದಲ್ಲಿ ಒತ್ತಡವನ್ನು ಅನುಭವಿಸುತ್ತಾರೆ. ಸಾಮರ್ಥ್ಯ ಅಭಿವೃದ್ಧಿ ಸಂಭವಿಸುವುದು ಭೌತಿಕವಾಗಿ ಸ್ಥಳಾಂತರಗೊಂಡ ನಂತರ, ಹಾಗೂ ಸ್ಥಳಾಂತರದ ಮುಖಾಂತರ ಹೊಸದಾದ ಆರ್ಥಿಕ-ಸಾಮಾಜಿಕ ಜಾಲಬಂಧಗಳು ರೂಪುಗೊಳ್ಳುವುದು. ಏಕೀಕರಣ ಹಂತದಲ್ಲಿ ಸ್ಥಳೀಯ ಉತ್ಪಾದಕತೆ ಮತ್ತು ಸಮುದಾಯ ನಾಯಕತ್ವ ಬೆಳವಣಿಗೆಯಾಗುವುದಲ್ಲದೆ ಎರಡನೇ ಹಂತದಲ್ಲಿ ಪೀಳಿಗೆಯು ಸಮುದಾಯದವರು ನಮ್ಮವರೆಂಬ ಭಾವನೆ ಬೆಳೆಯುವುದು. ಒಮ್ಮೆ ಏಕೀಕರಣ ಹಂತವು ವಿಕಸನಗೊಂಡಾಗ(ಒಕ್ಕಲೆದ್ದಂತಹ ಸಮುದಾಯದವರು ಮಗದೊಂದು ಸಮುದಾಯದ ಸ್ಥಳಗಳಲ್ಲಿ ನೆಲೆಸಿ) ಪುನರ್ವ್ಯವಸ್ಥೆಯು ಸಫಲಗೊಳ್ಳುವುದು. ಎಂಬ ಮಾದರಿಯನ್ನು ವಿವರಿಸಿದ್ದಾರೆ (Stanley)[೧೯].

ಸ್ಕುಡರ್ ಮತ್ತು ಕಲಸನ್ ಅವರ ತಾತ್ವಿಕ ಸಿದ್ಧಾಂತದ ಮಾದರಿಯನ್ನು ಮೊದಲು ಸ್ವಯಂ ಪ್ರೇರಿತವಾಗಿ ಸ್ಥಳಾಂತರ ಹೊಂದಿದವರ ಮೇಲೆ ಅನ್ವಯಿಸಲಾಯಿತು. ಅದರಿಂದ ಸಫಲತೆಯನ್ನು ಕಂಡುಕೊಂಡ ನಂತರ ಒತ್ತಡ ಪೂರಕವಾಗಿ ಸ್ಥಳಾಂತರಗೊಂಡವರನ್ನು ಆಧರಿಸಿ ಮಾದರಿಯನ್ನು ಅನ್ವಯಿಸಲಾಯಿತು. ಸ್ವಯಂ ಪ್ರೇರಿತ ಸ್ಥಳಾಂತರದ ಸನ್ನಿವೇಶಗಳಲ್ಲಿ ದೊರೆತಂತಹ ಫಲಿತಾಂಶಗಳು, ಒತ್ತಡ ಪೂರಕವಾಗಿ ಸ್ಥಳಾಂತರಗೊಂಡವರ ಅವಲೋಕನದ ಸಂದರ್ಭದಲ್ಲಿ ಧನಾತ್ಮಕ ಫಲಿತಾಂಶವನ್ನು ನೀಡುವೆಡೆ ಈ ಮಾದರಿಯು ವಿಫಲವಾಯಿತು. ಆ ಸಂದರ್ಭಕ್ಕೆ ಹೊಸತೊಂದು ತಾತ್ವಿಕ ಸಿದ್ಧಾಂತದ ಮಾದರಿಯು ಒತ್ತಡ ಪೂರಕ ಸನ್ನಿವೇಶದ ಸ್ಥಳಾಂತರಕ್ಕೆ ಅಗತ್ಯವೆಂಬುದನ್ನು ತಿಳಿಯಲಾಯಿತು.

Michael M. Cernea, Impoverishment Risks, Risk Management, and Reconstruction: A Model for Population Displacement and Resettlement. ಸೆರೆನಿಯ ಅವರು ಈ ತಾತ್ವಿಕ ಸಿದ್ಧಾಂತದ ಮಾದರಿಯನ್ನು ವಿಶ್ವಬ್ಯಾಂಕ್ ಪ್ರಯೋಜಿತದ ೨೦೦ ಪ್ರಕಲ್ಪಗಳನ್ನು ೧೯೯೦ ರಿಂದ ೧೯೯೪ ರ ಅವಧಿಯವರೆಗೆ ಅಧ್ಯಯನ್ನು ನೆಡೆಸಿ ಅದರಿಂದ ಕಂಡುಕೊಂಡ ಸತ್ಯಾಂಶದ ಆಧಾರಿತವಾಗಿ 'ಮಾನವರನ್ನು ಒತ್ತಡ ಪೂರಕ ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಮತ್ತು ಪುನರ್ವ್ಯವಸ್ಥೆ' ಅಂಶಗಳನ್ನು ಅವಲಂಬಿಸಿ ಅದರಿಂದುಂಟಾಗುವ ದಾರಿದ್ರ್ಯಕ್ಕೆ ತಳ್ಳಲ್ಪಡುವ ಅಪಾಯ, ಅಪಾಯಗಳ ನಿರ್ವಹಣೆ ಮತ್ತು ಜೀವನೋಪಾಯಗಳ ಮರು ರಚನೆ ಕುರಿತಂತೆ ಐ ಆರ್ ಆರ್ ಎಂಬ ತಾತ್ವಿಕ ಸಿದ್ಧಾಂತವನ್ನು ರಚಿಸಿದ್ದಾರೆ.[೨೦]

ಒತ್ತಡ ಪೂರಕ ಸನ್ನಿವೇಶಗಳಿಂದ ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಪ್ರಕ್ರಿಯೆಗೆ ಒಳಪಡುವ ಸಮುದಾಯಗಳಲ್ಲಿ/ಕುಟುಂಬಗಳಲ್ಲಿ ಬೇರೊಂದು ನಿಯೋಜಿತ ಸ್ಥಳಗಳಲ್ಲಿ ಎದುರಾಗುವ ಸಮಸ್ಯಾ ಸ್ಥಿತಿಗಳಾದ ಭೂರಹಿತರಾಗುವುದು, ವಸತಿ ರಹಿತರಾಗುವುದು, ಉದ್ಯೋಗ ರಹಿತರಾಗುವುದು, ಅಂಚಿನ ಸ್ಥಿತಿಗಳಿಗೆ ತಳಲ್ಪಡುವುದು, ಆಹಾರದ ಅಭದ್ರತೆ ಕಾಡುವಿಕೆ, ಸ್ಥಳೀಯಸಂಪನ್ಮೂಲಗಳನ್ನು ಬಳಸುವಿಕೆಗೆ ನಿಷೇದತೆ, ಅನಾರೋಗ್ಯ ಸ್ಥಿತಿಗಳು ಹೆಚ್ಚಾಗುವುದು ಮತ್ತು ಸಾವಿನ ಪ್ರಮಾಣದಲ್ಲಿ ಏರಿಕೆಯಾಗುವಿಕೆ, ಈ ಹಿಂದೆ ಸಂಘಟನೆಯಾಗಿದ್ದ ಸಮುದಾಯಗಳು ವಿಭಜನೆಯಾಗುವಿಕೆ: ಸಾಮಾಜಿಕ ಅಭದ್ರತೆಯು ಸಂಭವಿಸುವುದು. ಇವುಗಳೊಂದಿಗೆ ಸಾರ್ವಜನಿಕ ಸೌಲಭ್ಯಗಳನ್ನು ಪಡೆಯುವಲ್ಲಿ ವಂಚಿತರಾಗುವಿಕೆ, ಅಗತ್ಯ ಶಿಕ್ಷಣ ಸೌಲಭ್ಯದಿಂದ ದೂರ ಉಳಿಯುವಿಕೆ ಮತ್ತು ನಾಗರೀಕ ಹಾಗೂ ಮಾನವ ಹಕ್ಕುಗಳು ದೊರೆಯದೆ ಸಂದಿಗ್ಧತೆಯುಂಟಾಗುತ್ತದೆ. ಈ ಪ್ರಕಾರದ ಸನ್ನಿವೇಶಗಳು ಪ್ರತಿಯೊಂದು ಕುಟುಂಬಕ್ಕೂ ಒತ್ತಡ ಪೂರಕ ಸ್ಥಳಾಂತರದ ಪ್ರಕ್ರಿಯೆಯಲ್ಲಿ ಸಂಭವಿಸುತ್ತವೆ ಎಂದು ಹೇಳಲಾಗದು.

ಒತ್ತಡ ಪೂರಕ ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಪ್ರಕ್ರಿಯೆಯಿಂದ ಪುನರ್ವ್ಯವಸ್ಥೆಗೊಳ್ಳುವ ಸಂದರ್ಭದಲ್ಲಿ ಕಾನೂನು ರಚನಾ ಸಮಿತಿಯವರು ತೆಗೆದುಕೊಳ್ಳುವ ಮುಂಜಾಗೃತ ಕ್ರಮಗಳಿಂದ ಸಂತ್ರಸ್ಥರಿಗೆ ಭವಿಷ್ಯದಲ್ಲಿ ಎದುರಾಗುವ ಉಲ್ಲೇಖಿತ ಕ್ಷೇತ್ರ ಸಮಸ್ಯೆಗಳಿಂದ ಒಳಿತನ್ನು ಮಾಡಬಹುದೆಂದು ಕೆಲವು ಕಾರ್ಯತಂತ್ರಗಳನ್ನು ಮನಗಾಣಲಾಗಿದೆ ಅವುಗಳಲ್ಲಿ ೧. ಭೂರಹಿತರಿಗೆ

ಭೂಮಿಯ ವಿತರಣೆ, ೨. ಉದ್ಯೋಗ ರಹಿತರಿಗೆ ಉದ್ಯೋಗ ನೀಡುವುದು, ೩. ನಿರಾಶ್ರಿತರಿಗೆ ಆಶ್ರಯ ಕಲ್ಪಿಸುವುದು, ೪. ಅಂಚಿನ ಸ್ಥಿತಿಯಲ್ಲಿರುವವರನ್ನು ಸಾಮಾಜಿಕ ಅಂಶಗಳಿಗೆ ಸೇರ್ಪಡೆಗೊಳಿಸುವುದು, ೫. ಉತ್ತಮ ಆರೋಗ್ಯ ಚಿಕಿತ್ಸಾ ಸೇವೆಗಳನ್ನು ನೀಡುವ ಮೂಲಕ ಆರೋಗ್ಯದ ಸುಸ್ಥಿತಿ ಕಾಪಾಡಬಹುದು, ೬. ಆಹಾರದ ಅಭದ್ರತೆ ಹೊರತಾಗಿ ಪೌಷ್ಠಿಕ ಆಹಾರ ಸೌಲಭ್ಯ ನೀಡುವುದು, ೭ ಸಾಮಾಜಿಕ ಭಾಂದವ್ಯವನ್ನು ವೃದ್ಧಿ ಮಾಡುವ ಮುಖಾಂತರ ಸ್ಥಳೀಯಸಮುದಾಯದೊಂದಿಗೆ ಜಾಲಬಂಧವನ್ನು ಏರ್ಪಡಿಸುವುದು. ಈ ಮೂಲಕವಾಗಿ ಒತ್ತಡ ಪೂರಕ ಸ್ಥಳಾಂತರದ ಸಂತ್ರಸ್ಥರಿಗೆ ಪುನರ್ವ್ಯವಸ್ಥೆಯನ್ನು ಕಲ್ಪಿಸಿದಾಗ ಯೋಜನೆ/ಪ್ರಕಲ್ಪಗಳು ಸಫಲವಾಗುವವು.

ಶ್ರೀ ಎಲ್. ಕೆ ಮಹಾಪ್ರತ್ ಭಾರತದಲ್ಲಿ ೧೯೪೭ ರಿಂದ ೧೯೯೯ರ ವರಗೆ ಸಂಭವಿಸಿರುವ ಸ್ಥಳಾಂತರ (ಒಕ್ಕಲೆಬ್ಬಿಸುವಕೆ) ದ ಕುರಿತು ಮಾಧ್ಯಮಿಕ ಆಕರಗಳನ್ನು ಪರಮಾರ್ಶಿಸಲಾಗಿ, ಐ ಆರ್ ಆರ್ ತಾತ್ವಿಕ ಸಿದ್ಧಾಂತದ ಮಾದರಿಯ ಅಂಶಗಳನ್ನು ತುಲನಾತ್ಮಕವಾಗಿ ಅಧ್ಯಯಿಸಿ ಒಪ್ಪಿಕೊಂಡು ಲೇಖನಗಳನ್ನು ಪ್ರಕಟಿಸಿದ್ದಾರೆ. ಅಂತೆಯೇ ಶ್ರೀ ಪರುಶುರಾಮನ್ (೧೯೯೯) ಈ ಮಾದರಿ ಅನ್ವಯ ಭಾರತದಲ್ಲಿನ ಸ್ಥಳಾಂತರ ಸನ್ನಿವೇಶಗಳನ್ನು ಅಧ್ಯಯಿಸಿ ಭಾರತದಲ್ಲಿ ದಾರಿದ್ರ್ಯಕ್ಕೆ ತಳ್ಳಲ್ಪಡುವ ಅಪಾಯವು ಹೆಚ್ಚಾಗಿ ಪೂರಕ ಸ್ಥಳಾಂತರ ಸನ್ನಿವೇಶದಲ್ಲಿಯೇ ಹೆಚ್ಚಾಗಿದೆ ಎಂದು ಉಲ್ಲೇಖಿಸಿದ್ದಾರೆ.

ಈ ಅಧ್ಯಾಯದಲ್ಲಿ ಉಲ್ಲೇಖಿಸಿರುವ ಎರಡು ತಾತ್ವಿಕ ಸಿದ್ಧಾಂತದ ಮಾದರಿಗಳನ್ನು ಅನ್ವಯಿಕ ರೂಪದಲ್ಲಿ ಅಧ್ಯಯನಗೈದಾಗ ಸಿಗುವ ಫಲಿತಾಂಶಗಳು:

೦೧. ಸ್ಥಳಾಂತರಕ್ಕೂ ಮೊದಲು ಅದರಿಂದಾಗುವ ಸಮಸ್ಯೆಗಳನ್ನು ಅರಿತು ಕಾನೂನು ರೂಪಕರು ಎಚ್ಚೆತ್ತುಕೊಂಡು ಪ್ರಕಲ್ಪಗಳನ್ನು ಆಯೋಜಿಸುವ ಹಾಗೂ ಪುನರ್ವಸತೀಕರಣಗೊಳಿಸುವ ಯೋಜನೆಯನ್ನು ರೂಪಿಸಕೊಳ್ಳಬೇಕು.

೦೨. ಸ್ವಯಂ/ಒತ್ತಡ ಪೂರಕ ಸ್ಥಳಾಂತರಕ್ಕೆ ಒಳಪಟ್ಟರೂ ಕೂಡ ಪುನರ್ವಸತೀಕರಣದ ಎಲ್ಲಾ ಆಯಾಮಗಳನ್ನು ಪೂರ್ವದಲ್ಲಿಯೇ ಸಂತ್ರಸ್ಥರ ಅರಿವಿಗೆ ತರಬೇಕು.

೦೩. ಪುನರ್ವಸತೀಕರಣಗೊಂಡ ನಂತರದ ಸಮಯದಲ್ಲಿ ಸಂತ್ರಸ್ಥರ ಜೀವನ ಸಾಗುವ ದಿಕ್ಕನ್ನು ಅನುಸರಣೆ ಮುಖಾಂತರ ಪ್ರಕಲ್ಪ ಯೋಜಕರು ಕಾರ್ಯಗತ ಮಾಡಿಕೊಳ್ಳಬೇಕು. ಹಾಗೂ ಕೆಲವು ಸನ್ನಿವೇಶದಲ್ಲಿ ಮರು ವ್ಯವಸ್ಥೆಗಳನ್ನು ಕೂಡ ಶಿಕ್ಷಣ ಮತ್ತು ತರಬೇತಿ ನೀಡುವುದರ ಮೂಲಕ ಅವರನ್ನು ವೃದ್ಧಿಗೊಳಿಸಬೇಕು.

೦೪. ಮೊದಲ ಮಾದರಿಯು ಸ್ವಯಂ ಪ್ರೇರಿತರಾಗಿ ಸ್ಥಳಾಂತರ ಹೊಂದಿದವರ ಕುರಿತು ೪ ಹಂತಗಳ ಆಧಾರವಾಗಿ ಸಂತ್ರಸ್ಥರ ಸಾಮಾಜಿಕ-ಆರ್ಥಿಕ ಅಂಶಗಳ ಮೇಲೆಯೇ ಹೆಚ್ಚು ಬೆಳಕನ್ನು ಚೆಲ್ಲುತ್ತದೆ. ಇದರಲ್ಲಿ ಪರಿವರ್ತನಾ ಸಾಮರ್ಥ್ಯ ವೃದ್ಧಿ ಮತ್ತು ಏಕೀಕರಣ ಹಂತಗಳಲ್ಲಿ ಸಂತ್ರಸ್ಥರು ಯಾವ ರೀತಿಯಾಗಿ ಪ್ರತಿಕ್ರಿಯಿಸುತ್ತಾರೆ ಎಂಬುವ ಸಾಮರ್ಥ್ಯವನ್ನು ಕ್ಷೇತ್ರದಲ್ಲಿ ಅನ್ವಯಿಸಲು ನಿರಂತರ ಅನುಸರಣೆಯು ಪ್ರಮುಖವಾಗಿ ಕಂಡುಬರುತ್ತದೆ.

ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಮತ್ತು ಪುನರ್ವಸತೀಕರಣಕ್ಕೆ ಅನ್ವಯಿಸುವಂತೆ ತಾತ್ವಿಕ ಸಿದ್ಧಾಂತದ ಮಾದರಿಗಳನ್ನು ಉಲ್ಲೇಖಿಸಲಾಗಿದೆ. ಪುನರ್ವಸತೀಕರಣವ್ಯವಸ್ಥೆಗೆ ಅನ್ವಯಿಸುವಂತೆ ಭಾರತ ದೇಶದಲ್ಲಿನ ಭೂ ಸ್ವಾಧೀನ ಕಾಯ್ದೆ, ಪುನರ್ವಸತೀಕರಣಮತ್ತು ಪುರ್ನವ್ಯವಸ್ಥೆಯ ನೀತಿಗಳನ್ನು ತಿಳಿಯುವುದು ಸೂಕ್ತವೆನಿಸುತ್ತದೆ. ಈ ದಿಶೆಯಲ್ಲಿ ಭೂಸ್ವಾಧೀನ ಕಾಯ್ದೆ ಮತ್ತು ಪುನರ್ವಸತೀಕರಣಹಾಗೂ ಅದಕ್ಕೆ ಸಂಬಂಧಿಸಿದ ನೀತಿಗಳ ಮರು ತಿದ್ದುಪಡಿ ಕುರಿತಂತೆ ಒಂದು ನೋಟ.

೮. ಭೂ ಸ್ವಾಧೀನ, ರಾಷ್ಟ್ರೀಯ ಹೆದ್ದಾರಿ ಮತ್ತು ಕರ್ನಾಟಕ ರಾಜ್ಯದ ಪುನರ್ವ್ಯವಸ್ಥೆಗೆ ಸಂಬಂಧಿಸಿದ ಕಾಯ್ದೆ, ತಿದ್ದುಪಡಿಗಳು

ಭೂ ಸ್ವಾಧೀನ ಕಾಯ್ದೆ ೧೮೮೪, ಪ್ರಕ್ರಿಯೆ ಮತ್ತು ಮಿತಿಗಳು

ಸಾರ್ವಜನಿಕ ಉದ್ದೇಶಿತ ಕಾರ್ಯಯೋಜನೆಗಳನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಭೂಮಿಯನ್ನು ಯೋಜನೆಗಳು ಒಳಗೊಳ್ಳುವ ವ್ಯಾಪ್ತಿಯನ್ನು ಪರಿಗಣಿಸಿ ಸುಪರ್ಧಿಗೆ ಒಳಪಡಿಸುವುದು, ಈ ಪ್ರಕ್ರಿಯೆಯೇ ಭೂ ಸ್ವಾಧೀನತೆ. ಒಂದರ್ಥದಲ್ಲಿ ಈ ಪ್ರಕ್ರಿಯೆಯನ್ನು ಅಪಹರಿಸುವುದು ಅಥವಾ ಕಿತ್ತುಕೊಳ್ಳುವುದು ಹಾಗೂ ಆ ಪ್ರದೇಶಗಳನ್ನು ನಿರ್ಜನ ಪ್ರದೇಶವನ್ನಾಗಿ ಮಾಡುವುದೆಂದರೆ ತಪ್ಪಾಗಲಾರದು.

ಭೂ ಸ್ವಾಧೀನತೆಯ ಪ್ರಕ್ರಿಯೆ

೦೧. ಪ್ರಾಥಮಿಕ ಹಂತದ ಸೂಚನೆ (ಸೆಕ್ಷನ್ ೪)
೦೨. ಪ್ರಕಟಿಸಿದ ಅಥವಾ ಘೋಷಿಸಲ್ಪಟ್ಟ ಸೂಚನೆಗಳು (ಸೆಕ್ಷನ್ ೬)
೦೩. ಯಾವ ವ್ಯಕ್ತಿಯು ಮೇಲಿನ ಸೂಚನೆಗಳ ನಂತರ ಸ್ವಯಂ ಆಸಕ್ತಿಯುತವಾಗಿ ಬೇರೆಡೆ ತೆರಳಲು ಸಿದ್ಧವಿದ್ದವರಿಗೆ ಸೂಚನೆಗಳು (ಸೆಕ್ಷನ್ ೯)
೦೪. ತನಿಖೆ ಮತ್ತು ನಿರ್ಣಯಗಳು ಪ್ರದೇಶಗಳಿಗನುಗುಣವಾಗಿ (ಸೆಕ್ಷನ್ ೧೧)
೦೫. ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳುವುದು. (ಪೊಸೆಷನ್ – ಸೆಕ್ಷನ್ ೧೬)

೧೮೯೪ರ ಭೂ ಸ್ವಾಧೀನ ಕಾಯ್ದೆಯ ಪ್ರಕಾರ, ಭೂಮಿ ಹಾಗೂ ನಿರ್ಮಾಣ ಗೃಹಗಳ ಪರಿಹಾರವಾಗಿ ಆ ಸ್ಥಳದ ಮಾರುಕಟ್ಟೆಯ ಮೌಲ್ಯವನ್ನು ಪ್ರಾಥಮಿಕ ಹಂತದ ಸೂಚನೆಯನ್ನು ತಿಳಿಸಿದ ದಿನಾಂಕದಿಂದ, ಆ ಸ್ಥಳದ ಪರೀಕ್ಷೆ ನಡೆದ ನಂತರ ೧೫% ನಿಶ್ಚಯಿತ ಮಾರುಕಟ್ಟೆಯ ಮೌಲ್ಯದ ಹಣವನ್ನು ಮಾತ್ರ ನೀಡಲಾಗುತ್ತಿತ್ತು. ಒಂದು ವೇಳೆ ಯಾವ ವ್ಯಕ್ತಿ ನಿರಾಸಕ್ತಿಯಿಂದ ಭೂ ಸ್ವಾಧೀನತೆಗೆ ಒಪ್ಪಿಕೊಳ್ಳದಿದ್ದರೆ ಅವರ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆಯುವುದರ ಮುಖಾಂತರ ೫% ಮಾರುಕಟ್ಟೆ ಮೌಲ್ಯದ ಹಣವನ್ನು ಮಾತ್ರ ನೀಡುತ್ತಿದ್ದರು.

ಕಾಯ್ದೆಗಳ ಮಿತಿಗಳು

೦೧. ಭೂರಹಿತ ಕೂಲಿಕಾರರಿಗೆ, ಕಸುಬುದಾರರಿಗೆ ಮತ್ತು ಕಾನೂನು ಬದ್ಧವಾಗಿ ನೊಂದಾಯಿತವಾಗದೇ ಉಳುಮೆಗೆ ಒಳಪಟ್ಟಂತಹ ಜಮೀನುಗಳಿಗೆ ಪರಿಹಾರ ನೀಡಲು ಒಪ್ಪುವುದಿಲ್ಲ.

೦೨. ಸೆಕ್ಷನ್ ೪(೧)ರ ಪ್ರಕಾರದಂತೆಯೇ ಸೂಚನೆ ಪ್ರಕಟಿಸಿದ ದಿನದಂತ್ಯಕ್ಕೆ ನಿಗದಿಯಾಗುವ ಮಾರುಕಟ್ಟೆ ಮೌಲ್ಯವೇ ಅಂತಿಮವಾಗಿ ನಿಗಧಿಯಾಗುತ್ತದೆ.

೦೩. ಪ್ರಕಲ್ಪಗಳ ಪ್ರಾಧಿಕಾರ ಮತ್ತು ಜಮಿನ್ದಾರರ ನಡುವೆ ನ್ಯಾಯಾಲಯಗಳ ಮಧ್ಯಸ್ಥಿಕೆಯನ್ನು ನಿಗ್ರಹಿಸಲು ಸಾಂಖಿಕ ಮಾದರಿಯಲ್ಲಿ ಮೌಲ್ಯ ನಿಗದಿಗೊಳಿಸಿ ಸ್ವಾಧೀನಕ್ಕೆ ಪಡೆದುಕೊಳ್ಳುವುದು.

೦೪. ಬುಡಕಟ್ಟು ಕೇಂದ್ರಿತ ಅರಣ್ಯಗಳಲ್ಲಿ ವಾಸಿಸುವ ಹಾಗೂ ವ್ಯವಸಾಯಕ್ಕಾಗಿ ಭೂಮಿಯನ್ನು ಸಾಗುವಳಿ ಮಾಡಿದ್ದಲ್ಲಿ ಆ ಸ್ಥಳಗಳಿಗೆ ಪರಿಹಾರ ನಿಗದಿಯಾಗುವುದಿಲ್ಲ.

೦೫. ಭೂ ಸ್ವಾಧೀನ ಪ್ರಕ್ರಿಯೆಯು ಸುಧೀರ್ಘಾವಧಿಯನ್ನು ತೆಗೆದುಕೊಳ್ಳುವುದಲ್ಲದೆ ಹೊಂದಿಕೆಯಲ್ಲದ, ಅಸಂಬದ್ಧವಾದ, ಮೂಲಾವಶ್ಯಕತೆಗಳ ಕೊರತೆಯನ್ನು ಪ್ರಮುಖವಾಗಿ ಹೊಂದಿರುವುದು.

ರಾಷ್ಟ್ರೀಯ ಹೆದ್ದಾರಿ ಕಾಯ್ದೆ ೧೯೫೬

೧೮೯೪ರ ಭೂಸ್ವಾದೀನ ಕಾಯ್ದೆ ಅನುಸಾರವಾಗಿ ಭೂ ಸ್ವಾಧೀಕ್ಕೆ ಪಡೆದುಕೊಳ್ಳುವ ಮುನ್ನ ವ್ಯಕ್ತಿಗೆ ಸೂಚನೆ, ಪರಿಹಾರವನ್ನು ನೀಡಬೇಕೆಂಬುದನ್ನು ಕಾಲ ಕಾಲಕ್ಕೆ ಕಾಯ್ದೆಗಳಲ್ಲಿ ಹೊಸ – ಹೊಸ ಅಂಶಗಳನ್ನು ತಿದ್ದುಪಡಿಗೆ ಒಳಪಡಿಸುವುದರ ಮುಖಾಂತರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ವಿಷಯಕ್ಕೆ ಸಂಬಂಧಿಸಿದಂತೆ ೧೯೫೬ ರಲ್ಲಿ ರಾಷ್ಟ್ರೀಯ ಹೆದ್ದಾರಿ ಭೂ ಸ್ವಾಧೀನ ಕಾಯ್ದೆ ಜಾರಿತರಲಾಗಿದೆ. ಈ ಕಾಯ್ದೆಯಲ್ಲಿ 'ಧಕ್ಷ ಕಾರ್ಯಕ್ಷಮತೆಯುಳ್ಳ ಪ್ರಾಧಿಕಾರವನ್ನು' ಗೆಜೆಟಿಯರ್ ನಲ್ಲಿ ಪ್ರಕಟಿಸುವುದರ ಮುಖಾಂತರ ಹೆದ್ದಾರಿ ಪ್ರಕ್ರಿಯೆಗಳನ್ನು ನಿರ್ವಹಿಸಲು ಅನುವು ಮಾಡಿಕೊಟ್ಟಿದೆ.

ಕಾಯ್ದೆಯಡಿಯಲ್ಲಿ ಭೂಸ್ವಾಧೀನ ಪ್ರಕ್ರಿಯಾ ಹಂತಗಳು

೦೧. ಸೆಕ್ಷನ್ ೩ಎ – ಭೂ ಸ್ವಾಧೀನತೆಯ ಉದ್ದೇಶ ಪ್ರಕಟಣೆ

೦೨. ಸೆಕ್ಷನ್ ೩ಬಿ – ಸಂಬಂಧಿತ ಸ್ಥಳದ ಸಮೀಕ್ಷೆ ನಡೆಸುವ ಅಧಿಕಾರ

೦೩. ಸೆಕ್ಷನ್ ೩ಸಿ – ಮನವೀದಾರರ ತಕರಾರು ಆಲಿಸುವಿಕೆ

೦೪. ಸೆಕ್ಷನ್ ೩ಡಿ – ಸಂಬಂಧಿತ ಸ್ಥಳದ ಸ್ವಾಧೀನತೆ ದೃಡಪಡಿಸಿಕೊಳ್ಳುವಿಕೆಗೆ

೦೫. ಸೆಕ್ಷನ್ ೩ಇ – ಸ್ಥಳವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಅಧಿಕಾರ

೦೬. ಸೆಕ್ಷನ್ ೩ಎಫ್ – ಕೇಂದ್ರ ಸರ್ಕಾರ ಗುರ್ತಿಸಲ್ಪಟ್ಟ ಭೂಮಿ ಹಾಗೂ ಅದರ ಸ್ವಾದೀನತೆ

೦೭. ಸೆಕ್ಷನ್ ೩ಜಿ – ಪರಿಹಾರ ನೀಡುವುದು

೦೮. ಸೆಕ್ಷನ್ ೩ಹೆಚ್ – ಠೇವಣಿ ಇಡುವುದು ಮತ್ತು ಪರಿಹಾರ ನಿಧಿ ಸಂದಾಯಕ್ಕೆ ಸಂಬಂಧಿಸಿದಂತೆ

ಮೇಲೆ ನಮೂದಿಸಿದ ಅಂಶಗಳನ್ನು ಅದರಲ್ಲಿ ಮೊದಲಿನ ಎರಡು ಅಂಶಕ್ಕೆ ಸಂಬಂಧಿಸಿದಂತೆ ೩ಎ ಮತ್ತು ೩ಬಿ ಗುರ್ತಿಸಲ್ಪಟ್ಟ ಸ್ಥಳದ ಮಾಹಿತಿಯನ್ನು ಒಂದು ವರ್ಷದ ಅವಧಿಯೊಳಗಾಗಿ ಪೂರೈಸಿ

ವರಧಿಯನ್ನು ಕೇಂದ್ರ, ರಾಜ್ಯ ಮತ್ತು ಹೆದ್ದಾರಿ ಪ್ರಾಧಿಕಾರಕ್ಕೆ ಸಂಬಂದ ಪಟ್ಟ ಅಧಿಕಾರಿಗಳು ಸಲ್ಲಿಸಬೇಕು.

ಕರ್ನಾಟಕ ರಾಜ್ಯದ ಪುನರ್ವ್ಯವಸ್ಥೆಗೆ ಸಂಬಂಧಿಸಿದ ಕಾಯ್ದೆ, ತಿದ್ದುಪಡಿಗಳು

೧೯೮೭ ರಲ್ಲಿ ಕರ್ನಾಟಕ ರಾಜ್ಯದ ಪುನರ್ವ್ಯವಸ್ಥೆಗೆ ಸಂಬಂಧಿಸಿದ ಕಾಯ್ದೆ ತಿದ್ದುಪಡಿಗಳನ್ನುಜಾರಿ ತರಲಾಯಿತು. ಆದರೆ, ಈ ಕಾಯ್ದೆಗೆ ೭ ವರ್ಷಗಳ ನಂತರ ೧೯೯೪ ರಲ್ಲಿ ರಾಷ್ಟ್ರಪತಿಗಳ ಅನುಮೋದನೆ ಪಡೆಯಿತು. ಅದು 'ಯೋಜನೆಯಿಂದಾಗಿ ಸ್ಥಳಾಂತರಿತ ವ್ಯಕ್ತಿಗಳ ಪುನರ್ವ್ಯವಸ್ಥೆಯ ಅಧಿನಿಯಮ – ೧೯೮೭ (೧೯೯೪ ರ ೨೪)' ಎಂದು ಪೂರ್ಣ ತಿದ್ದುಪಡಿ ಮಾಡಲಾಗಿ. ಈ ಕಾಯ್ದೆಯನ್ನು ಮಹಾರಾಷ್ಟ್ರದ ಪುನರ್ವ್ಯವಸ್ಥೆ ನೀತಿಗಳ ಅನುಸಾರವಾಗಿ ರಚಿಸಲಾಗಿದೆ ಹಾಗೂ ಅನ್ವಯಿಸಲಾಗಿದೆ.

ಕಾಯ್ದೆ/ನಿಯಮಗಳ ಉದ್ದೇಶ

೦೧. ನಿರಾಶ್ರಿತನಾದ ವ್ಯಕ್ತಿಗೆ ಉಳುಮೆಗಾಗಿ ಭೂಮಿಯನ್ನು ನಿಯೋಜನೆಗೊಳಿಸುವುದು.

೦೨. ನಿವೇಶನಗಳನ್ನು ಗೃಹ ನಿರ್ಮಾಣಕ್ಕೆ ಹಂಚುವುದು.

೦೩. ಸ್ಥಳಾಂತರ ಪ್ರದೇಶಗಳ ವಿಸ್ತರಣೆ.

೦೪. ಸ್ಥಳಾಂತರತೆಗೆ ವಿಸ್ತರಿಸಲ್ಪಟ್ಟ ಪ್ರದೇಶಗಳಲ್ಲಿ ಪೌರಸಂಬಂಧಿ ಅಂಶಗಳಿಗೆ ಆಧ್ಯತೆ ನೀಡುವುದು.

೦೫. ಪ್ರಕಲ್ಪಗಳ ಆಯವ್ಯಯದಲ್ಲಿಯೇ ಮೇಲೆ ತಿಳಿಸಿರುವ ಅಂಶಗಳ ವೆಚ್ಚಗಳು ಪೂರ್ಣಗೊಳ್ಳುವಂತೆ ಗಮನ ವಹಿಸುವುದು.

೧೯೮೯ರ ಮಾರ್ಪಾಡುಗಳು ಕಾಯ್ದೆಗೆ ಸಂಬಂಧಿಸಿದಂತೆ

೦೧. ಈ ಕಾಯ್ದೆಯು ಪ್ರಾಥಮಿಕವಾಗಿ ರಾಜ್ಯದ ಒಳಭಾಗದ ನೀರಾವರಿ ಯೋಜನೆಗೆ ಮಾತ್ರ ಸಂಬಂಧಿಸಿದ್ದಾಗಿರುತ್ತದೆ ವಿನಃ, ಅಂತ:ರಾಜ್ಯಕ್ಕೆ ಸೀಮಿತವಾಗಿರುವುದಲ್ಲ. (ಸೂಚನೆಗಳನ್ನು ಸರ್ಕಾರದ ಗಮನಕ್ಕೆ ತರುವುದು).

೦೨. ಪ್ರಕಲ್ಪಗಳನ್ನು ಅನುಷ್ಠಾನಗೊಳಿಸುವ ಸಂಸ್ಥೆ ಇಲ್ಲವೆ ಸರ್ಕಾರದ ಸಂಸ್ಥೆಗಳು ಸ್ಥಳಾಂತರಗೊಳ್ಳುವ ಸ್ಥಳೀಕರಿಗೆ ಸೂಚನೆ ನೀಡುವುದು.

೦೩. ಸಾಗುವಳಿ ಭೂಮಿಯ ಮಾಲೀಕ, ಕೃಷಿ ಕೂಲಿಕಾರ್ಮಿಕರು, ಮತ್ತು ವ್ಯಕ್ತಿಗಳು ಸೂಚನೆಗಳು ಪ್ರಕಟಗೊಳ್ಳುವ ಅವಧಿಯಲ್ಲಿ ೫ ವರ್ಷಕ್ಕಿಂತ ಮುಂಚಿತವಾಗಿ ಆ ಸ್ಥಳದಲ್ಲಿ ವಾಸಿಸುತ್ತಿದ್ದರೆ ಮಾತ್ರ ಅವರನ್ನು ಅರ್ಜಿದಾರ ಅಥವಾ ಮನವಿದಾರನೆಂದು ಪರಿಗಣಿಸಲಾಗುವುದು.

೦೪. ಅರ್ಜಿದಾರ ಅಥವಾ ಮನವಿದಾರರ ಒಪ್ಪಿಗೆ, ನಿರಾಕರಣೆಗಳನ್ನು ಆಧರಿಸಿ ಅಧಿಕಾರಿಗಳು ಪುನರ್ವ್ಯವಸ್ಥೆಯ ನೀತಿಯನ್ನು ರೂಪಿಸುವುದು.

೦೫. ಅರ್ಜಿದಾರರಿಗೆ ಅಥವಾ ಮನವಿದಾರರಿಗೆ ಈ ಕೆಳಕಂಡ ಲಾಭಾಂಶವನ್ನು ನೀಡುವುದು.

- ಸ್ವಾಧೀನ ಪಡಿಸಿಕೊಂಡ ಭೂಮಿಯ ಪರ್ಯಾಯವಾಗಿ ಭೂಮಿಯನ್ನು ನೀಡುವುದು.

* ಸೌಲಭ್ಯಗಳಿಗೆ ಪ್ರಾಶಸ್ತ್ಯತೆ (ಉದ್ಯೋಗ)
* ಪುನರ್ವ್ಯವಸ್ಥೆಗೊಂಡ ಸ್ಥಳಗಳಲ್ಲಿ ಪೌರಸಂಬಂಧಿ ಸೌಲಭ್ಯಗಳನ್ನು ನೀಡುವುದು.

೨೦೦೩ ರ ಪುನರ್ವಸತೀಕರಣದ ತಿದ್ದುಪಡಿಯ ಮುಖ್ಯ ಲಕ್ಷಣಗಳು

ಮೊದಲಿನ ಪುನರ್ವಸತೀಕರಣದ ನೀತಿಗಳಿಗೆ ಸಂಬಂಧಿಸಿದಂತೆ ಕಾಲಾಂತರದಲ್ಲಿ ತಿದ್ದುಪಡಿಗಳಿಗೆ ಒಳಪಡಿಸಿ ೨೦೦೩ ರ ನೀತಿಯಲ್ಲಿ ಯೋಜನೆಗೆ ಸಂಬಂಧಿಸಿದಂತೆ ಅನುಷ್ಠಾನ, ಪರಿವೀಕ್ಷಣೆ ಮತ್ತು ಅನುಸರಣಾ ಪ್ರಕ್ರಿಯೆಗಳನ್ನು ಅಳವಡಿಸಲಾಗಿದೆ.

೦೧. ಅರ್ಜಿದಾರರಿಗೆ ಸ್ಥಳಾಂತರತೆ ಹಾಗೂ ಪುನರ್ವಸತೀಕರಣದ ವಿವಿಧ ಹಂತಗಳ ಕುರಿತು ಮಾಹಿತಿ ನೀಡುವುದು.
೦೨. ಅರ್ಜಿದಾರರ ಹಕ್ಕುಗಳನ್ನು ಹಾಗೂ ಅವರ ಅವಶ್ಯಕತೆಗಳನ್ನು ಗುರ್ತಿಸುವುದು, ಅವಶ್ಯಕತೆಗಳನ್ನು ನಿಯಮದಲ್ಲಿ ನಮೂದಿಸುವುದು.
೦೩. ಲಿಂಗ ತಾರತಮ್ಯತೆಗೆ ಆಸ್ಪದ ನೀಡದೆ ಸಮಾನತೆಯನ್ನು ಕಾಪಾಡಲು ನಿರ್ದೇಶಿಸಿರುವುದು.
೦೪. ಖಾಸಗಿ ಜಮೀನುಗಳನ್ನು ಕೊಂಡುಕೊಳ್ಳಲು ಸ್ಥಳಾಂತರ ಜನರಿಗೆ ಅವಕಾಶ ಕಲ್ಪಿಸುವುದು.
೦೫. ಪ್ರಕಲ್ಪಗಳ ಆಯ ವ್ಯಯ ವೆಚ್ಚದಲ್ಲಿಯೇ ಪುನರ್ವಸತೀಕರಣವು ಸಫಲಗೊಳ್ಳಬೇಕು.
೦೬. ಅರ್ಜಿದಾರರಿಗೆ ಸ್ಥಳಾಂತರ ಪ್ರಕ್ರಿಯೆಯ ದಾಖಲೆಗಳ ಮುಖಾಂತರ ಗಮನಕ್ಕೆ ತರುವುದು ಹಾಗೂ ಪ್ರಾಧಿಕಾರಕ್ಕೆ ಅವುಗಳ ನಕಲುಗಳನ್ನು ತಲುಪಿಸುವುದು.
೦೭. ಮೇಲಿನ ಅಂಶಗಳ ಆಧಾರವಾಗಿ ಅನುಸರಣಾ ನೀತಿಯನ್ನು ಅನುಸರಿಸುವುದು.

೨೦೦೭ ರ ಪುನರ್ವಸತೀಕರಣದ ತಿದ್ದುಪಡಿಯ ಮುಖ್ಯ ಲಕ್ಷಣಗಳು

೨೦೦೩ ರ ಪುನರ್ವಸತೀಕರಣದ ನಿಯಮಗಳಲ್ಲಿ ಕೆಲವು ಅಂಶಗಳನ್ನು ಸೇರ್ಪಡೆಮಾಡಲಾಗದ ಕಾರಣ ೨೦೦೭ ರಲ್ಲಿ ಹಲವಾರು ಅಂಶಗಳನ್ನು ನಮೂದಿಸಲಾಗಿದೆ.

೦೧. ಸ್ಥಳಾಂತರ ಪ್ರಕ್ರಿಯೆ ಒತ್ತಾಯ ಪೂರ್ವಕವಾಗಿರುವಂತಿಲ್ಲ ಎಂಬುದು.
೦೨. ಸಾಮಾಜಿಕ ಸ್ಥಿತಿಗತಿಗಳ ಮೇಲೆ ಪರಿಶೀಲನೆ ಮತ್ತು ಪರಿಣಾಮಗಳನ್ನು ಮನಗಾಣುವುದು. ೪೦೦/೨೦೦ ಕ್ಕಿಂತ ಹೆಚ್ಚಿನ ಕುಟುಂಬಗಳ ಸ್ಥಳಾಂತರತೆಯಲ್ಲಿ (ಅನುಸೂಚಿತ/ಆದಿವಾಸಿ/ ಸಾಮಾನ್ಯ/ಬೆಟ್ಟಪ್ರದೇಶಗಳನ್ನು) ಆಧರಿಸಿ.
೦೩. ಗ್ರಾಮ ಸಭೆ ಮತ್ತು ಸಮೂಹ ಹೇಳಿಕೆಗಳನ್ನು ಗಮನಿಸಬೇಕು.
೦೪. ಪುನರ್ವಸತೀಕರಣತತ್ವದ ಕುರಿತಾಗಿ ಮೊದಲೇ, ಸ್ಥಳಾಂತರಗೊಳ್ಳುವ ಪ್ರದೇಶದಲ್ಲಿ ತಿಳಿಸಿರಬೇಕು.
೦೫. ಅವಶ್ಯಕತೆಗೆ ಅನುಸಾರವಾಗಿ ಸಾಗುವಳಿ ಭೂಮಿಯ ಬದಲಾಗಿ ಬೇರೆಡೆ ಸಾಗುವಳಿ ಭೂಮಿಯ ಖರೀದಿಗೆ ಮಾನ್ಯತೆ.

೦೬. ಕೌಶಲ್ಯಾಧರಿತ ಕಸುಬುದಾರರ ಗುರ್ತಿಸುವಿಕೆ, ಪ್ರೋತ್ಸಾಹ, ಹಾಗೂ ಆ ಪ್ರಕಲ್ಪಗಳಲ್ಲಿಯೇ ವೃತ್ತಿಯನ್ನು ನೀಡುವುದು.

೦೭. ಗೃಹ ನಿರ್ಮಾಣದ ಸಕಲ ಸೌಕರ್ಯಗಳನ್ನು ಒದಗಿಸುವುದು.

೦೮. ಪಿಂಚಣಿ ವ್ಯವಸ್ಥೆ – ವಿಕಲ ಚೇತನರಿಗೆ, ವಿಧವೆಯರಿಗೆ, ಅನಾಥರಿಗೆ ಹಾಗೂ ಮದುವೆಯಾಗದ ಹೆಣ್ಣು ಮಕ್ಕಳಿಗೆ.

ಎಲ್ ಎ ಆರ್ ಆರ್ ೨೦೧೩ (ಭೂಸ್ವಾಧಿನ, ಪುನರ್ವಸತೀಕರಣಮತ್ತು ಪುರ್ನವ್ಯವಸ್ಥೆ ೨೦೧೩ರ ಕರಡು ಮಸೂದೆ ತಿದ್ದುಪಡಿ: ಗ್ರಾಮೀಣಾಭಿವೃದ್ಧಿ ಮಂತ್ರಿ ಶ್ರೀ ಬರೀಂದರ್ ಸಿಂಗ್ ಅವರು ೨೪ ಫೆಬ್ರವರಿ ೨೦೧೫ ರಂದು ಲೋಕಸಭೆಯಲ್ಲಿ ಮಂಡಿಸಿದರು. ಈ ಮಸೂದೆಯಲ್ಲಿ ಸಾರ್ವಜನಿಕ ಹಿತಾಸಕ್ತಿಗಾಗಿ ಭೂಸ್ವಾಧೀನತೆ ಪ್ರಕ್ರಿಯೆಯನ್ನು ನಡೆಸಿದಾಗ ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಬದಲಾವಣೆಯ ಅಂಶಗಳನ್ನು ಮಂಡಿಸಲಾಗಿದೆ. (Ghose, ೨೦೧೫)[೨೧]

೦೧. ಸೇನೆ, ಗ್ರಾಮೀಣಾಭಿವೃದ್ಧಿ ಯೋಜನೆ, ವಸತಿ ವ್ಯವಸ್ಥೆ, ಕಾರ್ಖಾನೆಗಳ ಸ್ಥಾಪನೆ ಮತ್ತು ಖಾಸಗಿ ಮತ್ತು ಸಾರ್ವಜನಿಕ ಸಹಭಾಗಿತ್ವದಲ್ಲಿ ಭೂ ಬಳಕೆಯ ಕುರಿತಂತೆ ವಿಷಯವನ್ನು ಮಂಡಿಸಲಾಗಿದೆ.

೦೨. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸ್ಥಳೀಯ ಕುಟುಂಬಗಳ ಮೇಲೆ ಆಗಿರುವ ಪರಿಣಾಮ ಮತ್ತು ಅವುಗಳ ಪೂರೈಕೆಗಾಗಿ ಕೈಗೊಂಡಿರುವ ಪುನರ್ವಸತೀಕರಣರೂಪು ರೇಷೆಗಳನ್ನು ವಿವರಿಸುವುದು ಕುರಿತಂತೆ,

೦೩. ವ್ಯವಸಾಯಕ್ಕೆ ಒಳಪಟ್ಟಿರುವ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದನ್ನು ನಿರ್ಬಂಧಿಸುತ್ತದೆ.

೦೪. ಮರಳಿ ನೀಡುವಿಕೆ: ಎಲ್ ಎ ಆರ್ ಆರ್ ಕಾಯ್ದೆ, ೨೦೧೩ ಯಾವುದೇ ಭೂಮಿಯನ್ನು ಪಡೆದು ೫ ವರ್ಷಗಳವರೆಗೆ ಉಪಯೋಗವನ್ನು ಮಾಡಿಕೊಳ್ಳದಿದ್ದಲ್ಲಿ, ಅಂತಹ ಭೂಮಿಯನ್ನು ಅದರ ಮೂಲ ಮಾಲೀಕ ಇಲ್ಲವೆ ಭೂ ಬ್ಯಾಂಕ್‌ಗೆ ವರ್ಗಾಯಿಸಿಕೊಡಬೇಕು. (೧) ಕನಿಷ್ಟ ೫ ವರ್ಷ, (೨). ಉಲ್ಲೇಖಿತ ಪತ್ರದಲ್ಲಿ ಕೋರಿದ ಸಮಯದ ಅನುಸಾರವಾಗಿ ಸಫಲವಾಗದಿದ್ದಲ್ಲಿ. ಮೂಲ ಮಾಲೀಕರಿಗೆ ನೀಡಬೇಕು.

೦೫. ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿರುವವರು ಸಲ್ಲಿಸಿರುವ ಅರ್ಜಿಯನುಸಾರವಾಗಿ ಅವರಿಗೆ ಸಲ್ಲಬೇಕಾದ ಅಂಶಗಳ ಕುರಿತಂತೆ ಕನಿಷ್ಟ ಮೂರು ವರ್ಷಗಳ ಒಳಗಾಗಿ ಪೂರೈಸುವಂತೆ ತಿಳಿಸುತ್ತದೆ.

೦೬. ಕೋರ್ಟ್ ಆದೇಶ, ಸರ್ಕಾರದ ಆದೇಶಗಳನ್ನು ಹೊರತುಪಡಿಸಿ ಯಾವುದೇ ಅಧಿಕಾರಿ ಪುನರ್ವಸತೀಕರಣಸೌಲಭ್ಯವನ್ನು ನೀಡುವಲ್ಲಿ ಫಲಪ್ರದವಾಗದಿದ್ದರೆ ಅಂತಹ ಅಧಿಕಾರಿಯನ್ನು ಅಮಾನತ್ತಿನಲ್ಲಿಡುವುದು ಕುರಿತಂತೆ ಕಾಯ್ದೆಯನ್ನು ಮಂಡಿಸಲಾಗಿದೆ.

೯. ಭಾರತ ಮತ್ತು ಕರ್ನಾಟಕ ರಾಜ್ಯದಲ್ಲಿನ ಸ್ಥಳಾಂತರ ಮತ್ತು ಪುನರ್ವಸತೀಕರಣ ಅರಣ್ಯವಾಸಿ– ಬುಡಕಟ್ಟುಗಳು ಮತ್ತು ಇತರೆಯವರನ್ನು ಅವಲೋಕಿಸಿ

ಭಾರತ ದೇಶದಲ್ಲಿನ ಸ್ಥಳಾಂತರ ಪ್ರಕ್ರಿಯೆಗೆ ಪ್ರಚೋದನೆ ನೀಡಿರುವ ಪ್ರತಿನಿಧಿಕ ಅಂಶಗಳೆಂದರೆ, ಅಭಿವೃದ್ಧಿ ಪ್ರಕಲ್ಪಗಳ ಅಳವಡಿಕೆ, ರಾಜಕೀಯ ಸಂಘರ್ಷಗಳು, ಅರಣ್ಯ ಸಂರಕ್ಷಣೆ ಮತ್ತು ನೈಸರ್ಗಿಕ ವಿಕೋಪಗಳು. ಕಳೆದ ೫೦ ವರ್ಷಗಳಿಂದ ಭಾರತದಲ್ಲಿ ಅಭಿವೃದ್ಧಿ ಕಾರಣಗಳಿಗಾಗಿ ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಗೊಂಡವರು ೫೦ ಮಿಲಿಯನ್ ಪ್ರಜೆಗಳು ಎಂದು ಅಂತರಾಷ್ಟ್ರೀಯ ಸ್ಥಳಾಂತರ ಮೇಲ್ವಿಚಾರಣಾ ಕೇಂದ್ರದವರು ೨೦೦೭ರಲ್ಲಿ ಪ್ರಕಟಗೊಳಿಸಿದ್ದಾರೆ. ಅಂದಾಜಿನ ಮೂಲದ ಪ್ರಕಾರ ೬೧೬,೧೪೦ ಜನರು ಆಂತರಿಕವಾಗಿ ವಿವಿಧ ಸಂಘರ್ಷಗಳಿಂದ ಸ್ಥಳಾಂತರ ಹೊಂದಿದ್ದಾರೆ. ನೈಸರ್ಗಿಕ ವಿಪತ್ತುಗಳಿಂದ ೩,೪೨೮,೦೦೦ ಜನರು ಸ್ಥಳಾಂತರ ಹೊಂದಿದ್ದಾರೆ ೨೨.

೧೯೫೦ ಮತ್ತು ೧೯೬೦ ರಲ್ಲಿ ಭಾರತದ ಮೊದಲ ಸ್ಥಳಾಂತರವು ಪಶ್ಚಿಮ ಬಂಗಾಳದ ದುರ್ಗಾಪುರ ಸ್ಟೀಲ್ ಪ್ಲಾಂಟ್ ನಲ್ಲಿ ಭಾರತ ಸರ್ಕಾರದ ವತಿಯಿಂದ ಜಾರಿಯಾದದ್ದು. ಈ ಸ್ಥಳಾಂತರದಲ್ಲಿ ೧೨೫,೦೦೦ ಜನರು ಸ್ಥಳಾಂತರ ಪ್ರಕ್ರಿಯೆಗೆ ಒಳಪಟ್ಟಿದ್ದಾರೆ. ದುರ್ಗಾಪುರ ಒಂದು ಕ್ಷೇತ್ರದಲ್ಲಿಯೇ ವಿವಿಧ ಸಮುದಾಯಗಳ 'ಸಮುದಾಯಗಳ ೩೩,೦೦೦ ಜನರು ಸ್ಥಳಾಂತರ ಹೊಂದಿದ್ದಾರೆ. ಎರಡನೆಯದಾಗಿ ಮಹಾರಾಷ್ಟ್ರದ ಜವಹರಲಾಲ್ ನೆಹರು ಬಂದರನ್ನು ವಿಸ್ತಾರಗೊಳಿಸುವುದಕ್ಕಾಗಿ ಮುಂಬಾಯಿ ಕ್ಷೇತ್ರದಿಂದ ೧೨,೦೦೦ ಜನರು ಸ್ಥಳಾಂತರ ಹೊಂದಿದ್ದಾರೆ. ಬೊಲಾನಿ ಕಬ್ಬಿಣ ಅದಿರು ಕಂಪನಿಯ ಸ್ಥಾಪನೆಯಿಂದ ಓಡಿಶಾದ ಗಣಿ ನಿಕ್ಷೇಪ ಸ್ಥಳಗಳಿಂದ ೨೨,೦೦೦ ಜನರು ಸ್ಥಳಾಂತರ ಹೊಂದಿದ್ದಾರೆ.

ಭಾರತದ ಇತಿಹಾಸದಲ್ಲಿ ವಿವಾದಾತ್ಮಕ ಯೋಜನೆಗಳಲ್ಲಿ ಸರ್ದಾರ್ ಸರೋವರ ಪ್ರಾಜೆಕ್ಟ್ ಮುಖ್ಯ ಸ್ಥಾನದಲ್ಲಿ ನಿಲ್ಲುವುದು. ಈ ಯೋಜನೆಯು ವಿಶ್ವಬ್ಯಾಂಕ್ ಪ್ರಾಯೋಜಕತ್ವದಲ್ಲಿ ಭಾರತದ ನಾಲ್ಕು ರಾಜ್ಯಗಳಾದ ಗುಜರಾತ್, ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ರಾಜಸ್ಥಾನ ಒಳಗೊಂಡಂತೆ ಕುಡಿಯುವ ನೀರಿಗಾಗಿ, ಕೃಷಿ ಉಪಯೋಗಕ್ಕಾಗಿ, ಕಾರ್ಖಾನೆಗಳಿಗಾಗಿ ಮತ್ತು ಜಲವಿದ್ಯುತ್ ಉತ್ಪಾದನೆಗಾಗಿ ಸ್ಥಾಪಿಸಲಾಯಿತು. ಈ ಯೋಜನೆಯಿಂದ ೧೩೧ ನಗರ ಪ್ರದೇಶ ಮತ್ತು ೯,೬೩೩ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ಪೂರೈಕೆ, ೧.೮ ಮಿಲಿಯನ್ ಕೃಷಿ ನೀರಾವರಿ ಪ್ರದೇಶ ಮತ್ತು ೧,೪೫೦ ಮೆ. ವ್ಯಾ ವಿದ್ಯುತ್ ಶಕ್ತಿಯನ್ನು ವಾರ್ಷಿಕವಾಗಿ ಉತ್ಪಾದಿಸುತ್ತದೆ. ಈ ಯೋಜನೆಗೆ ಗುಜರಾತ್ ನಲ್ಲಿ ಸರ್ದಾರ್ ಸರೋವರ ಮತ್ತು ನರ್ಮದಾ ಸಾಗರ ಮಧ್ಯಪ್ರದೇಶ ಮತ್ತು ಗುಜರಾತ್ ನಡುವೆ ನಿರ್ಮಿಸಲಾಗಿದೆ. ಈ ಯೋಜನೆಯ ಅನುಷ್ಠಾನದಿಂದ ಸರ್ಕಾರದ ದಾಖಲೆಗಳ ಅನುಸಾರವಾಗಿ ೪೦,೦೦೦ ಜನರು ಸ್ಥಳಾಂತರವಾಗಿದ್ದಾರೆ. ನರ್ಮದಾ ಬಚಾವೋ ಆಂದೋಲನದ ಮೂಲದವರ ಪ್ರಕಾರ ೮೨,೦೦೦ ಜನರು ಸ್ಥಳಾಂತರವಾಗಿದ್ದಾರೆಂದು ಉಲ್ಲೇಖಿಸುತ್ತಿದ್ದಾರೆ. ಇಂದಿಗೂ ಕೂಡ ಗುಜರಾತ್ ರಾಜ್ಯದಲ್ಲಿ ಈ ಯೋಜನೆಯಿಂದ ಸ್ಥಳಾಂತರಗೊಂಡ ಸಂತ್ರಸ್ಥರಿಗೆ ಪೂರ್ಣ ಪ್ರಮಾಣದ ಪುನರ್ವಸತೀಕರಣಲಭ್ಯವಾಗಿಲ್ಲ. (Kumar,

೨೦೧೫)[೨೩]. ೧೯ ಗ್ರಾಮ ಪ್ರದೇಶಗಳ ಜನರು ೧೭೫ ಪುನರ್ವಸತಿ ಶಿಬಿರಗಳಲ್ಲಿ ಚದುರಿ ಹೋಗಿದ್ದಾರೆ ಎಂಬುದನ್ನು ಅರುಂದತಿರಾಯ್ ಅವರ ಲೇಖನಗಳಲ್ಲಿ ಕಾಣಸಿಗುವುದು.

ಕೇರಳ ರಾಜ್ಯವು ಹಲವು ಸಾಮಾಜಿಕ ಅಂಶಗಳ ಆಧಾರಿತವಾಗಿ ಗುರ್ತಿಸಲ್ಪಟ್ಟಿರುವ ರಾಜ್ಯ. ತನ್ನಲ್ಲಿರುವ ಮಾನವ ಸಂಪತ್ತಿನ ಆಧಾರಿತವಾಗಿ ಕಡಿಮೆ ಭೂ ಪ್ರದೇಶವನ್ನು ಹೊಂದಿರುವ ರಾಜ್ಯವಾಗಿದ್ದು, ೪% ತನ್ನ ಭೌಗೋಳಿಕ ಪ್ರದೇಶಗಳನ್ನು ಹಲವಾರು ಯೋಜನೆಗಳನ್ನು ಜಾರಿತರುವ ಸಲುವಾಗಿ ಉಪಯೋಗಿಸಿಕೊಳ್ಳುತ್ತಿದೆ. ಎರ್ಲಾಕುಲಂ ಜಿಲ್ಲೆ ಹೆಚ್ಚು ಕಾರ್ಖಾನೆಗಳನ್ನು ಹೊಂದಿರುವ ಜಿಲ್ಲೆಯಾಗಿದ್ದು ೫೫.೦೫% ಭೂ ಪ್ರದೇಶವನ್ನು ಕಾರ್ಖಾನೆಗಳಿಗಾಗಿ ಹೊಂದಿದೆ. ಖಾಯಂಕುಲಂ ಪ್ರದೇಶವು ರಾಷ್ಟ್ರೀಯ ಹುಲಿ ಯೋಜನೆ ಅಡಿ ೪೮೫.೮೩ ಎಕ್ಟೇರ್ ಪ್ರದೇಶವನ್ನು ಸ್ವಾದೀನ ಪಡಿಸಿಕೊಂಡಿದೆ. ಇಡುಕ್ಕಿ ಯೋಜನೆಯಲ್ಲಿ ೧೩೩೪ ಆದಿವಾಸಿ ಕುಟುಂಬಗಳು ತಮ್ಮ ಆವಾಸಸ್ಥಾನವನ್ನು ಕಳೆದುಕೊಂಡಿವೆ. ವೈನಾಡು ಪ್ರದೇಶದಲ್ಲಿ ವನ್ಯಜೀವಿ ಅಭಯಾರಣ್ಯಕ್ಕಾಗಿ ೫೩,೪೭೨ ಆದಿವಾಸಿಗಳು ಸ್ಥಳಾಂತರಗೊಂಡಿದ್ದವು. ಆದರೆ ೨೦೦೩ ರಲ್ಲಿ ೮೪೩ ಆದಿವಾಸಿಗಳಿ ಮಾತ್ರ ಪುನರ್ವಸತೀಕರಣಸೌಲಭ್ಯವನ್ನು ಕಲ್ಪಿಸಲಾಗಿದೆ.

ಕರ್ನಾಟಕದ ರಾಷ್ಟ್ರೀಯ ಉದ್ಯಾನವನಗಳಾದ ನಾಗರಹೊಳೆಯ ರಾಜೀವ್ ಗಾಂಧೀ ರಾಷ್ಟ್ರೀಯ ಉದ್ಯಾನವನ – ೬೪೩.೩೬ ಚ.ಕೀಮಿ ವ್ಯಾಸದ ಮೈಸೂರು, ಮತ್ತು ಕೊಡಗು ಜಿಲ್ಲೆಗಳನ್ನು ಆಧರಿಸಿ ವಿಶ್ವ ಬ್ಯಾಂಕ್ ಹಾಗೂ ಜಾಗತಿಕ ಪರಿಸರ ಸೌಲಭ್ಯಗಳ ಸಂಸ್ಥೆಯ ಸಹಾಯದಲ್ಲಿ ಅರಣ್ಯ ಸಂರಕ್ಷಣೆಗೆ ಮುಂದಾಗಿದ್ದು, ಈ ಸಂದರ್ಭದಲ್ಲಿ ಪ್ರಸ್ತುತ ಪ್ರದೇಶಗಳಲ್ಲಿ ವಾಸಿಸುತ್ತಿರುವ, ಪೂರ್ವ ಕಾಲದಿಂದಲೂ ನೆಲೆಗೊಂಡಿರುವ ಬೆಟ್ಟ ಕುರುಬ, ಕುರುಬ ಮತ್ತು ಎಳವರ ಹಾಡಿಗಳನ್ನು ನಾಗರಹೊಳೆ ಸಮೀಪದ ನಾಗಾಪುರ ಹಳ್ಳಿಗೆ ೧,೦೭೩ ಆದಿವಾಸಿ ಸಮುದಾಯದ ೪೦ ಹಾಡಿಗಳನ್ನು (೬,೫೭೯ ಏಕವ್ಯಕ್ತಿ) ೨೦೦೩ ರ ಒಳಗಾಗಿ ಸ್ಥಳಾಂತರಗೊಳಿಸಲು ನಿರ್ಧರಿಸಿದ್ದರು. ಅದರಂತೆ ಬಿ ಓ ಟಿ ಡಿ – ಬೆನಿಪಿಷಿಯರಿ ಓರಿಯನ್ಟೆಡ್ ಟ್ರೈಬಲ್ ಡೆವೆಲಪ್ ಮೆಂಟ್ ಯೋಜನೆಯ ಮುಖಾಂತರ ಭಾರತ ಸರ್ಕಾರದ ಅರಣ್ಯ ಪರಿಸರ ಅಭಿವೃದ್ದಿ ಸಹಾಯದೊಂದಿಗೆ ಅರಣ್ಯವಾಸಿಗಳನ್ನು ಅರಣ್ಯದಿಂದ ೨ ತಂಡಗಳಾಗಿ ವಿಂಗಡಿಸಿ ೨೦೫ ಕುಟುಂಬಗಳನ್ನು, ಮೊದಲ ಹಂತದಲ್ಲಿ ೫೦ ಕುಟುಂಬಗಳನ್ನು ೧೯೯೪ ರಲ್ಲಿ ಮತ್ತು ಎರಡನೇ ಹಂತದಲ್ಲಿ ಆಗಸ್ಟ್ ೨೦೦೦ರ ವೇಳೆಗೆ ೧೫೫ ಕುಟುಂಬಗಳನ್ನು ನಾಗಪುರ ಹಳ್ಳಿಗೆ ಸ್ಥಳಾಂತರಿಸಿಲಾಗಿದೆ. ಆದರೂ ಇಂದಿಗೂ ಕೂಡ ಆದಿವಾಸಿಗಳಿಗೆ ಸರ್ಕಾರದಿಂದ ಬಿಓಟಿಡಿ ಯೋಜನೆಯ ಮುಖಾಂತರ ದೊರೆಯಬೇಕಿದ್ದ ಎಲ್ಲಾ ಸೌಲಭ್ಯವೂ ಲಭ್ಯವಾಗಿಲ್ಲದಿರುವುದು ಅವರನ್ನು ಪುನಃ ಕಾಡಿನತ್ತ ಪಯಣಿಸಲು ಮನನೊಂದವರ ಆಸೆ.

ಕರ್ನಾಟಕ ರಾಜ್ಯವು ೧೯೬೦ ರಿಂದ ೨೦೦೧ರ ವರೆಗೂ ತನ್ನ ವ್ಯಾಪ್ತಿಯಲ್ಲಿ ಹಲವಾರು ನೀರಾವರಿ ಯೋಜನೆಗಳನ್ನು ಸ್ವಾತಂತ್ರ ಪೂರ್ವದಲ್ಲಿ ಹಾಗೂ ನಂತರದಲ್ಲಿ ಜಾರಿತಂದಿದೆ. ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಮುಖ್ಯವಾದ ಬೃಹತ್ ಯೋಜಿತ ನೀರಾವರಿ ಯೋಜನೆಗಳ ಬಗ್ಗೆ ಹಾಗೂ ಅವುಗಳ ಪುನರ್ವಸತೀಕರಣಗಳ ಬಗ್ಗೆ ತಿಳಿಯೋಣ. ಅವುಗಳು ಬಾಗಲಕೋಟ

ಜಿಲ್ಲೆಯ ಆಲಮಟ್ಟಿ ಜಲಾಶಯ:- ಕರ್ನಾಟಕ ರಾಜ್ಯದ ಉತ್ತರಕ್ಕಿರುವ ಬಾಗಲಕೋಟ ಜಿಲ್ಲೆಯ ಆಲಮಟ್ಟಿ ಸ್ಥಳದಲ್ಲಿ ೧೯೯೯ ರಲ್ಲಿ ಜಲಾಶಯವನ್ನು ಕಟ್ಟಲಾಗಿದೆ. ಈ ಜಲಾಶಯವನ್ನು ಕೃಷ್ಣ ಮೇಲ್ದಂಡೆ ಯೋಜನೆಯಾಗಿ ಕೃಷ್ಣ ನದಿಗೆ ಬೃಹತ್ ವಿವಿಧ ಉದ್ದೇಶಗಳಿಗಾಗಿ ನಿರ್ಮಿಸಲಾಗಿದೆ. ಈ ಯೋಜನೆಯಲ್ಲಿ ನೀರಾವರಿ ಯೋಜನೆ, ವಿದ್ಯುತ್ ಉತ್ಪಾದನೆ ಮತ್ತು ಕುಡಿಯುವ ನೀರಿನ ಸೌಲಭ್ಯಕ್ಕಾಗಿ ನಿರ್ಮಿಸಲಾಗಿದೆ. ಈ ನದಿಯ ವ್ಯಾಪ್ತಿಯು ಬಿಜಾಪುರ, ಬಾಗಲಕೋಟ, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳನ್ನು ಕೇಂದ್ರವಾಗಿರಿಸಿಕೊಂಡು, ಅತ್ಯಲ್ಪ ಮಳೆ ಮತ್ತು ಬರಪೀಡಿತ ಪರಿಸ್ಥಿತಿಗಳ ಕಾರಣ ಜಲಾಶಯವನ್ನು ನಿರ್ಮಿಸಲಾಗಿದೆ. ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಮೊದಲ ಹಂತದಲ್ಲಿ ೧೭೬ ಹಳ್ಳಿಗಳು, ಎರಡನೇ ಹಂತದಲ್ಲಿ ೧೩೬ ಹಳ್ಳಿಗಳನ್ನು ಸ್ಥಳಾಂತರಿಸಲಾಗಿದೆ, ಅವು ಕ್ರಮವಾಗಿ ನಾರಾಯಣ ಪುರದಲ್ಲಿ ಫೇಸ್ ೧ - ೪೦ ಹಳ್ಳಿ, ಆಲಮಟ್ಟಿ - ೧೩೬ ಹಳ್ಳಿಗಳು. ಫೇಸ್ ೨ ರಲ್ಲಿ ನಾರಾಯಣಪುರ - ೩೪ ಹಳ್ಳಿಗಳು ಮತ್ತು ಆಲಮಟ್ಟಿಯಲ್ಲಿ ೧೦೨ ಹಳ್ಳಿಗಳನ್ನು ಪುನರ್ವಸತೀಕರಣಪ್ರಕ್ರಿಯೆಯಲ್ಲಿ ವಿಲೀನಗೊಳಿಸಲಾಗಿದೆ.

ಕ್ರಸಂ	ಸ್ಥಳ	ಕುಟುಂಬ	ಜನರು
೧	ನಾರಾಯಣ ಪುರ	೧೧,೭೪೪	೫೮,೭೨೦
೨	ಆಲಮಟ್ಟಿ ಹಿನ್ನೀರು ಪ್ರದೇಶದಿಂದ	೫೮,೪೩೨	೨,೯೨,೧೬೦

ಅಣಶಿ ರಾಷ್ಟ್ರೀಯ ಉದ್ಯಾನವನವು ೧,೧೧೬,೬೭ ಚ. ಕೀಮಿ ವ್ಯಾಸದಲ್ಲಿ ದಾಂಡೇಲಿ ಅರಣ್ಯವನ್ನು ೪೭೫.೦೧೮ ಮತ್ತು ಅಣಶಿಯ ೩೩೯.೮೬ ಚ.ಕೀಮಿ ವ್ಯಾಸದಲ್ಲಿ ಭಾಗವಾಗಿ ಹೊಂದಿದೆ. ಈ ಪ್ರದೇಶದಲ್ಲಿ ೫೬ ಗ್ರಾಮಗಳ ೫೦೦ ಕುಟುಂಬಗಳನ್ನು ಮೊದಲ ಹಂತದಲ್ಲಿ ೩೨೦ ಮತ್ತು ಎರಡನೇ ಹಂತದಲ್ಲಿ ೧೮೦ ಕುಟುಂಬಗಳನ್ನು ಜೋಯ್ಡ ಮತ್ತು ಸಮೀಪದ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

ಭದ್ರಾ ಅಭಯಾರಣ್ಯ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳ ೪೯೨.೪೬ ಚ.ಕಿಮೀ ಪ್ರದೇಶದ ವ್ಯಾಪ್ತಿಯಲ್ಲಿ ಹರಡಿದ್ದು, ಭದ್ರಾ ಅಭಯಾರಣ್ಯ ಘೋಷಣೆಯ ಆರಂಭದ ಅಧಿಸೂಚನೆಯನ್ನು ರಾಜ್ಯ ಸರ್ಕಾರವು ಸಂ. ಎ.ಎಫ್.ಡಿ ೨೫ಎಫ್ ಡಬ್ಲ್ಯೂಎಲ್ ೭೪ ದಿ ೬.೯.೧೯೭೪ ಸರ್ಕಾರಿ ಆದೇಶದಲ್ಲಿ ಹೊರಡಿಸಿತು. ಅಂತಿಮ ಅಧಿಸೂಚನೆಯನ್ನು ಸಂ.ಎಫ್.ಈ ೫೮ ಎಫ್ ಡಬ್ಲ್ಯೂಎಲ್ ೯೬ ದಿ ೯.೩.೯೮ರ ಸರ್ಕಾರಿ ಆದೇಶದಲ್ಲಿಹೊರಡಿಸಲಾಯಿತು. ಈ ಆದೇಶದನ್ವಯ ಪ್ರಾಣಿ ಸಂಕುಲವನ್ನು ಪೋಷಿಸುವ ಅದರ ಸಾಮರ್ಥ್ಯವನ್ನು ಮನಗಂಡು, ಭಾರತ ಸರ್ಕಾರವು ೧೯.೧೧.೧೯೯೮ ರಲ್ಲಿ ಹುಲಿ ಯೋಜನೆ ಅಭಯಾರಣ್ಯವಾಗಿ ಮೇಲ್ದರ್ಜೆಗೇರಿಸಿತು. ಭದ್ರಾ ಅಭಯಾರಣ್ಯದಲ್ಲಿ ೭೩೬ ಕುಟುಂಬ ಹೊಂದಿರುವ ೧೬ ಗ್ರಾಮಗಳಿವೆ. ಈ ಗ್ರಾಮದ ೮೬೧ ಎಕರೆ ಕಂದಾಯ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಅಭಯಾರಣ್ಯದ ಹೊರಗೆ ಅವರನ್ನು ೧೨.೭೬ ಕೋಟಿ ರೂ ಅಂದಾಜು ವೆಚ್ಚದಲ್ಲಿ ಪುನರ್ವಸತಿಗೊಳಿಸುವ ಬಗ್ಗೆ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಗಳು ೧೯೯೨ರಲ್ಲಿ ಯೋಜನೆಯೊಂದನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಅದರ ಪ್ರಕಾರ ಪುನರ್ವಸತಿ ಫಲಾನುಭವಿಗಳ ಕುಟುಂಬದ ಸಂಖ್ಯೆ ೭೩೬ ಮತ್ತು ಸ್ವಾಧೀನ ಪಡಿಸಿಕೊಳ್ಳಲಾದ ಕಂದಾಯ ಭೂಮಿ ೮೬೧.೨೯ ಎಕರೆಗಳು.

ಕರ್ನಾಟಕ ರಾಜ್ಯದ ಕರಾವಳಿ ತೀರ ಪ್ರದೇಶದ ಉತ್ತರಕನ್ನಡ ಜಿಲ್ಲೆಯ ಕಾರವಾರ ಮತ್ತು ಅಂಕೋಲ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಕಳೆದ ೨೪ ವರ್ಷಗಳಲ್ಲಿ ಏಷ್ಯಾ ಖಂಡದ ಬಹು ದೊಡ್ಡ ಪ್ರಕಲ್ಪವಾಗಿರುವ ಸೀ ಬರ್ಡ್ ಸಮುದ್ರ ಸೇನೆ ಸ್ಥಾಪಿತಗೊಂಡಿದೆ. ಕಂದಾಯ ದಾಖಲಾತಿಯ ಅನುಸಾರವಾಗಿ ೪,೧೧೧ ಕುಟುಂಬಗಳ ಪೈಕಿ ೩,೩೧೫ ಕುಟುಂಬಗಳು ಒಂದು ಎಕರೆಗಿಂತ ಕಡಿಮೆ ಪ್ರದೇಶದಲ್ಲಿ ಕೃಷಿ ಚುಟುವಟಿಕೆಯನ್ನು ಆಶ್ರಿಯಿಸಿದ್ದರು, ೮೫೬ ಕುಟುಂಬಗಳು ಮೀನುಗಾರಿಕಾ ವೃತ್ತಿಯನ್ನು ಅವಲಂಬಿಸಿಕೊಂಡು ೧೨ ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ೧೯೮೯ ರ ವೇಳೆಯಿಂದಲೂ ಸ್ಥಳೀಯ ನಿವಾಸಿಗಳನ್ನು ಸ್ಥಳಾಂತರ ಪ್ರಕ್ರಿಯೆಗೆ ಒಳಪಡಿಸಲಾಗಿದೆ, ಆದರೆ ಪುನರ್ವಸತೀಕರಣವ್ಯವಸ್ಥೆಯು ಅವ್ಯವಸ್ಥೆಯಾಗಿದೆ. ೧೯೯೮ರಲ್ಲಿ ಡಿಫೆನ್ಸ್ ಮಿನಿಸ್ಟರಿ ಆಫ್ ಸ್ಟೇಟ್ ಗರ್ವನಮೆಂಟ್ ಮೂಲಕ ೧೨೬ ಕೋಟಿಗಳು ನಿಲುಗಡೆಗೊಂಡಿದ್ದು, ಪ್ರತಿ ಕುಟುಂಬವು ೫೦,೦೦೦ ರೂಗಳ ಪ್ಯಾಕೇಜ್‌ನೊಂದಿಗೆ ಪುನರ್ವಸತಿ ಕೇಂದ್ರದಲ್ಲಿ ಒಂದು ಮನೆ ಪಡೆದುಕೊಂಡಿದ್ದಾರೆ ಎಂದು ತಿಳಿಸಲಾಗಿದೆ. ಈ ಮೂಲಕ ಪ್ರಸ್ತುತವಾಗಿ ಪುನರ್ವಸತಿ ಕಲ್ಪಿಸಿರುವ ಸ್ಥಳಗಳಲ್ಲಿ ಯಾವುದೇ ವ್ಯವಸ್ಥೆಗಳಿಲ್ಲದೆ ಅವ್ಯವಸ್ಥೆಯ ಗೂಡಾಗಿದ್ದು, ನಮಗೆ ಬೇರೊಂದು ವ್ಯವಸ್ಥೆಯನ್ನು ಜೀವನೋಪಾಯಕ್ಕಾಗಿ ಕಲ್ಪಿಸಿ ಎಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ. ಬೇಲೆಕೇರಿ ಪುನರ್ವಸತಿ ವ್ಯಾಪ್ತಿಯ ನಾಗೂ ಬಿಚ್ಚೂ ಗೌಡ ಅವರು ಮೊದಲು ಒಂದೆಕರೆಗಿಂತ ಕಡಿಮೆ ಜಾಗದಲ್ಲಿ ಭತ್ತ, ತೆಂಗು, ಅಡಿಕೆ ಮತ್ತು ಗೋಡಂಬಿಗಳನ್ನು ಬೆಳೆದು ಜೀವನ ಸಾಗಿಸುತ್ತಿದ್ದೆವು, ಆದರೆ ಈಗ ನೀಡಿರುವ ಜಾಗದಲ್ಲಿ ಉಳುಮೆಗೂ ಯೋಗ್ಯವಿಲ್ಲದ ಸ್ಥಳಗಳಾಗಿವೆ ಎಂಬ ಅಳಲನ್ನು ತೋಡಿಕೊಂಡಿದ್ದಾರೆ[೨೪].

ನಾಗಾರ್ಜುನ ಸಾಗರ – ಶ್ರೀಶೈಲಂ ವನ್ಯಜೀವಿ ಮತ್ತು ಹುಲಿ ಸಂರಕ್ಷಿತ ಅಭಯಾರಣ್ಯ ೧೯೭೮ರಲ್ಲಿ ಮೊದಲ ಹಂತದಲ್ಲಿ ನಾಗಾರ್ಜುನ ಸಾಗರ ವನ್ಯಜೀವಿ ಅಭಯಾರಣ್ಯವಾಗಿ ಘೋಷಿತವಾಯಿತು. ೧೯೮೨ ರಲ್ಲಿ ಶ್ರೀಶೈಲಂ ಹುಲಿ ಸಂರಕ್ಷಣಾ ಅಭಯಾರಣ್ಯ ಘೋಷಿತವಾಯಿತು. ಈ ಪ್ರಾಂತ್ಯದಲ್ಲಿನ ೧೬ ಗ್ರಾಮಗಳ ಆದಿವಾಸಿ ಸಮುದಾಯಗಳು ಸ್ಥಳಾಂತರಗೊಂಡಿದ್ದರು, ಇದುವರೆಗೂ ಇದರ ಮಾಹಿತಿ ಇಲಾಖೆಗೆ ಲಭ್ಯವಾಗಿಲ್ಲ.

ಗೀರ್ ರಾಷ್ಟ್ರೀಯ ಉದ್ಯಾನವನ ಗುಜರಾತ್ ರಾಜ್ಯದಲ್ಲಿದ್ದು, ೧೯೭೫ ರಲ್ಲಿ ಏಷ್ಯಾದ ಸಿಂಹಧಾಮವನ್ನಾಗಿ ಗುರ್ತಿಸಲಾಗಿದೆ. ಈ ವ್ಯಾಪ್ತಿಯಲ್ಲಿ ನೆಲೆಸಿದ್ದ ೫೮೦ ಮಾಲ್ದಾರಿ ಕುಟುಂಬಗಳನ್ನು ೧೪ ಪುನರ್ವಸತಿ ಕೇಂದ್ರದ ಹಳ್ಳಿಗಳಿಗೆ ಸ್ಥಳಾಂತರಿಸಲಾಗಿದೆ. ಈ ಸ್ಥಳಾಂತರವು ಒತ್ತಡ ಪೂರಕವಾಗಿದ್ದು, ಕುರಿಗಾಯಿಗಳನ್ನು ವ್ಯವಸಾಯ ಕ್ಷೇತ್ರಕ್ಕೆ ತಳ್ಳಲ್ಪಟ್ಟಿದ್ದು, ಅದರ ಜ್ಞಾನವೇ ಇಲ್ಲದವನು ಹೇಗೆ ಕೃಷಿ ಮಾಡುವನು ಎಂಬ ಪ್ರಶ್ನೆ ಎದುರಾಗಿದೆ. ಇದರೊಂದಿಗೆ ಇನ್ನು ೫೪ ಹಾಡಿಗಳು ಉದ್ಯಾನವನದೊಳಗೆ ನೆಲೆಸಿವೆ.

ಕನ್ಹ ರಾಷ್ಟ್ರೀಯ ಉದ್ಯಾನವನ ಮತ್ತು ಹುಲಿ ಸಂರಕ್ಷಿತ ಪ್ರದೇಶ; ಮಧ್ಯಪ್ರದೇಶ ರಾಜ್ಯದಲ್ಲಿರುವ ಈ ಉದ್ಯಾನವನವನ್ನು ೧೯೫೫, ೧೯೬೪ ಮತ್ತು ೧೯೭೦ ರಲ್ಲಿ ಮೂರು ಹಂತಗಳ ಆಧಾರಿತವಾಗಿ ಘೋಷಣೆ ಮಾಡಲಾಯಿತು. ಹುಲಿ ಸಂರಕ್ಷಿತ ಪ್ರದೇಶವೆಂದು ೧೯೭೩-೭೪ ರಲ್ಲಿ ಘೋಷಿಸಲಾಯಿತು. ಭಾರತದ ಮೊದಲ ಸಹಭಾಗಿತ್ವದ ಪುನರ್ವಸತೀಕರಣಯೋಜನೆ ಎಂದು ಘೋಷಿಸಲ್ಪಟ್ಟಿದ್ದು, ಉದ್ಯಾನವನದ ೨೪ ಗ್ರಾಮಗಳಲ್ಲಿ ೬೫೦ ಕುಟುಂಬಗಳನ್ನು ಉದ್ಯಾನವನದ ಗಡಿ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ. ಈ ಯೋಜನೆಗೆ ಎಲ್ಲಾ ಕುಟುಂಬಗಳು ಸ್ವಯಂ ಪ್ರೇರಿತವಾಗಿ ಪುನರ್ವಸತಿಗೆ ಸಮ್ಮತಿಯನ್ನು ಸೂಚಿಸಿವೆ.

ಕುನ್ಹೋ ವನ್ಯಜೀವಿ ಅಭಯಾರಣ್ಯ, ಮಧ್ಯಪ್ರದೇಶ: ೧೯೮೧ ರಲ್ಲಿ ಘೋಷಿತವಾದ ಈ ಪ್ರದೇಶದಲ್ಲಿ ಏಷ್ಯಾ ಸಿಂಹಗಳ ಅಭಯಾರಣ್ಯವಿದೆ. ೧೯೯೬ ರಿಂದ ೨೦೦೨ ರ ವೇಳೆಯಲ್ಲಿ ಅಭಯಾರಣ್ಯದ ೨೪ ಹಳ್ಳಿಗಳಲ್ಲಿದ್ದ ಶರಿಯ ಆದಿವಾಸಿ ಸಮುದಾಯದ ೧,೪೦೦ ಕುಟುಂಬಗಳನ್ನು ಅಭಯಾರಣ್ಯದ ಹೊರ ಭಾಗಕ್ಕೆ ಸ್ಥಳಾಂತರಿಸಲಾಗಿದೆ. ಸರ್ಕಾರದ ಮೂಲದಿಂದ ಬಹು ಶಿಸ್ತಿನಿಂದ ಧನಾತ್ಮಕ ಸಮ್ಮತಿಗಳ ಮೂಲಕ ಪುನರ್ವಸತೀಕರಣಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ[೨೫]. ಆದರೆ ಅಶ್ಮಿತ ಕಾಬ್ರಾ ಮತ್ತು ಶರ್ಮ ಅವರು ಪುನರ್ವಸತಿ ಕೇಂದ್ರಗಳಿಗೆ ಬೇಟಿ ನೀಡಿದಾಗ ಇದು ಸ್ವಯಂ ಪ್ರೇರಿತ ಮತ್ತು ಒತ್ತಡ ಪೂರಕವಾದ ಪುನರ್ವಸತೀಕರಣವೆಂದು ತಿಳಿದುಬಂಧಿದೆ. ಇದರೊಂದಿಗೆ ಸಾಮಾಜಿಕ-ಆರ್ಥಿಕ ಜೀವನಶೈಲಿ ಮೇಲೆ ಪ್ರತಿಕೂಲವಾದ ಸನ್ನಿವೇಶಗಳು ಎದುರಾಗಿದ್ದು, ಅರಣ್ಯ ಆಧಾರಿತ ಜೀವನೋಪಾಯಕ್ಕಿಂತ ಕೃಷಿ ಬದುಕು ಕ್ಷೀಣಿಸಲ್ಪಟ್ಟಿದೆ.

ಮಾಲೇಘಾಟ್ ಅಭಯಾರಣ್ಯ: ಮಹಾರಾಷ್ಟ್ರ ರಾಜ್ಯದಲ್ಲಿರುವ ಈ ಅಭಯಾರಣ್ಯವು ೧೯೬೭ ರಲ್ಲಿ ಅಭಯಾರಣ್ಯವಾಗಿ ಘೋಷಿತವಾಗಿ, ೧೯೭೩ ರಲ್ಲಿ ಹುಲಿ ಸಂರಕ್ಷಿತ ಪ್ರದೇಶವೆಂದು ಮರು ಘೋಷಿತವಾಯಿತು. ೧೯೯೯ ರಿಂದ ೨೦೦೨ ರ ವೇಳೆಯಲ್ಲಿ ಮೂರು ಆದಿವಾಸಿ ಗ್ರಾಮಗಳಾದ ಬೋರಿ, ಕೋಹ ಮತ್ತು ಕನ್ಡ್ ಪ್ರದೇಶಗಳಿಂದ ೬೨ ಕುಟುಂಬಗಳು ಸ್ವಯಂ ಪ್ರೇರಿತವಾಗಿ ಸ್ಥಳಾಂತರ ಹೊಂದಲು ಸಮ್ಮತಿಸಿ ಸಹಭಾಗಿತ್ವದೊಂದಿಗೆ ಉತ್ತಮವಾದ ಪುನರ್ವಸತೀಕರಣವ್ಯವಸ್ಥೆಯನ್ನು ಪಡೆದಿವೆ. ಮತ್ತೊಂದು ವರದಿಯಲ್ಲಿ ಪುನರ್ವಸತಿ ಕಲ್ಪಿಸಿರುವ ಪ್ರದೇಶದಲ್ಲಿ ಸಾಕಾಗುವಷ್ಟು ನೀರಿನ ಸೌಲಭ್ಯ ಮತ್ತು ಶೌಚಾಲಯಗಳ ಸಮಸ್ಯೆಗಳಿವೆ ಎಂದು ಉಲ್ಲೇಖಿಸಲಾಗಿದೆ.

ಡಮ್ಪಾ ಆಭಯಾರಣ್ಯ: ಮಿಜೋರಂ: ೧೯೮೫ ರಲ್ಲಿ ವನ್ಯಜೀವಿ ಅಭಯಾರಣ್ಯವಾಗಿ ಹಾಗೂ ೧೯೭೪ ರಲ್ಲಿ ಹುಲಿ ಸಂರಕ್ಷಿತ ಪ್ರದೇಶವಾಗಿ ಘೋಷಿಸಲ್ಪಟ್ಟಿತು. ಚಕಮ ಮತ್ತು ರೆಂಗ್ಮಾ ಆದಿವಾಸಿ ಸಮುದಾಯದಗಳಿರುವ ಪ್ರದೇಶವಾಗಿದ್ದು, ೧೨ ಹಾಡಿಗಳಿಂದ ಕುಟುಂಬಗಳನ್ನು ಅರಣ್ಯದಂಚಿನ ಪ್ರದೇಶಗಳಿಗೆ ಒತ್ತಡ ಪೂರಕವಾಗಿ ಸ್ಥಳಾಂತರಿಸಲಾಗಿದೆ.

ಸಿಮ್ಲಿಪಾಲ್ ರಾಷ್ಟ್ರೀಯ ಉದ್ಯಾನವನ: ಮಿಜೋರಾಂ: ಭಾರತದ ಮೊದಲ ವನ್ಯಜೀವಿ ಅಭಯಾರಣ್ಯವಾಗಿ ೧೯೭೦ ರಲ್ಲಿ ಘೋಷಿತವಾಯಿತು. ೧೯೭೩ ರಲ್ಲಿ ಹುಲಿ ಸಂರಕ್ಷಿತ

ಪ್ರದೇಶವಾಗಿ ಘೋಷಿಸಲ್ಪಟ್ಟಿತು. ೭೨ ಕುಟುಂಬಗಳು ಸ್ಥಳಾಂತರ ಪ್ರಕ್ರಿಯೆಗೆ ಒಳಪಟ್ಟಿದ್ದವು. ಆದರೆ, ಅವುಗಳಿಗೆ ನೀಡಿದ ಪುನರ್ವಸತಿ ವ್ಯವಸ್ಥೆಯ ಭೂಮಿಗಳಲ್ಲಿ ಬೆಳೆಗಳನ್ನು ಬೆಳೆಯಲು ಯೋಗ್ಯವಲ್ಲವೆಂಬ ಸತ್ಯ ಬಹಿರಂಗವಾಗಿದ್ದು. ಈ ವ್ಯವಸ್ಥೆಯು ಸಮರ್ಪಕವಾಗಿಲ್ಲವೆಂದು ವರದಿಯಾಗಿದೆ.

ರಣತಂಬೂರ್ ರಾಷ್ಟ್ರೀಯ ಉದ್ಯಾನವನ ಮತ್ತು ಹುಲಿ ಸಂರಕ್ಷಿತ ಪ್ರದೇಶ: ೧೯೫೫ ರಲ್ಲಿ ಸ್ವಾಯಿ ಮದೋಪುರ ಅಭಯಾರಣ್ಯವೆಂದು ಹಾಗೂ ೧೯೭೩ ರಲ್ಲಿ ಹುಲಿ ಸಂರಕ್ಷಿತ ಪ್ರದೇಶವೆಂದು ಘೋಷಿಸಲ್ಪಟ್ಟಿತು. ೧೯೫ ಕುಟುಂಬಗಳನ್ನು ಈ ವ್ಯಾಪ್ತಿಯಿಂದ ಸ್ಥಳಾಂತರಗೊಳಿಸಲಾಗಿದೆ.

ಸಾರಿಸ್ಕಾ ರಾಷ್ಟ್ರೀಯ ಉದ್ಯಾನವನ ಮತ್ತು ಹುಲಿ ಸಂರಕ್ಷಿತ ಪ್ರದೇಶ: ರಾಜಸ್ಥಾನ: ೨೯೫೫ ರಲ್ಲಿ ಅಭಯಾರಣ್ಯವಾಗಿ, ೧೯೭೩ ರಲ್ಲಿ ಹುಲಿ ಸಂರಕ್ಷಿತ ಪ್ರದೇಶವಾಗಿ, ೧೯೮೦ರಲ್ಲಿ ರಾಷ್ಟ್ರೀಯ ಉದ್ಯಾನವಾಗಿ ಘೋಷಿತವಾಗಿದೆ. ಹುಲಿಯೊಂದಿಗಿನ ಮಾನವ ಸೆಣಸಾಟದ ಕಾರಣದಿಂದ ೭೧ ಕುಟುಂಬಗಳನ್ನು ಸ್ಥಳಾಂತರಿಸಲಾಗಿತ್ತು. ಆದರೆ, ಪುನರ್ವಸತೀಕರಣದ ವ್ಯವಸ್ಥೆಯು ಅಪಹೊಂದಾಣಿಕೆ ಕಾರಣ ಮೂಲ ನಿವಾಸಿಗಳು ಮರಳಿ ಮೂಲ ಸ್ಥಳಗಳಿಗೆ ಬಂದು ನೆಲೆಸಿದ್ದಾರೆ. ಬಾಕಿ ಉಳಿದಿರುವ ೨೪ ಕೋರ್ ಪ್ರದೇಶದ ಗ್ರಾಮಗಳು ಮತ್ತು ೨೪೬ ಬಫರ್ ಜೋನ್ ಗ್ರಾಮಗಳಲ್ಲಿನ ಕುಟುಂಬಗಳ ಪುನರ್ವಸತಿಗೆ ಯೋಜನೆ ರೂಪುಗೊಂಡಿದ್ದು ಶೀಘ್ರದಲ್ಲಿ ಅದರ ಅನುಷ್ಠಾನಕ್ಕೆ ಸಹಭಾಗಿತ್ವದ ಸಮ್ಮತಿ ದೊರೆತಿದೆ ಎಂದು ವರದಿಗಳಲ್ಲಿ ಉಲ್ಲೇಖಿಸಲಾಗಿದೆ.

ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನ: ಉತ್ತರಖಾಂಡ: ಭಾರತದ ಮೊದಲ ರಾಷ್ಟ್ರೀಯ ಉದ್ಯಾನವನವಾಗಿ ೧೯೩೬ ರಲ್ಲಿ ಘೋಷಿಸಲ್ಪಟ್ಟಿತು. ೧೯೭೩ ರಲ್ಲಿ ಹುಲಿ ಆವಾಸಿತ ಅಭಯಾರಣ್ಯವಾಗಿಯೂ ಘೋಷಿತವಾಗಿತ್ತು. ಈ ವ್ಯಾಪ್ತಿಯಿಂದ ೨೦೦೧ ರ ವೇಳೆಗೆ ೪ ಹಳ್ಳಿಗಳಿಂದ ೪೧೧ ಕುಟುಂಬಗಳನ್ನು ಸ್ಥಳಾಂತರಿಸಲಾಗಿದೆ. ಕ್ರಿಟಿಕಲ್ ವೈಲ್ಡ್ ಹಾಬಿಟೇಟ್ ಆಗಿರುವುದರಿಂದ ಮೊದ ಮೊದಲು ಜನರ ಸ್ಥಳಾಂತರ ಕಷ್ಟವಾಯಿತು ಎಂದು ಉಲ್ಲೇಖಿಸಲಾಗಿದೆ.

ಸ್ಥಳಾಂತರ ಮತ್ತು ಪುನರ್ವಸತೀಕರಣದ ಪರಿಣಾಮಗಳು

ಭಾರತೀಯ ಅರಣ್ಯ ಸಮುದಾಯಗಳ ಸಂದರ್ಭದಲ್ಲಿ, ಸಂರಕ್ಷಣೆಯ ಕಾರಣವಾಗಿ ಅರಣ್ಯವಾಸಿ ಸಮುದಾಯಗಳು ತಮ್ಮ ಜೀವನಕ್ಕಾಗಿ ಆಶ್ರಯಿಸಿಕೊಂಡ ಮನೆ, ಉತ್ಪಾದಿತ ಆಸ್ತಿಗಳು, ಜೀವನೋಪಯಕ್ಕಾಗಿ ಆಶ್ರಯ ಪಡೆದ ಪರಿಸರದಿಂದ ಕರಗತಮಾಡಿಕೊಂಡ ಕೌಶಲ್ಯಗಳನ್ನು ಹಾಗೂ ನಾವು ನಮ್ಮವರೆಂಬ ಭಾವನೆಗಳನ್ನು ತೊರೆದು ಅರಿವೇ ಇಲ್ಲದ ಸ್ಥಳಗಳಲ್ಲಿ ನೆಲೆಸುವಂತಹ ಸ್ಥಿತಿ ಬಂದೊದಗಿದೆ. ಸ್ಥಳಾಂತರದ ಪ್ರಕ್ರಿಯೆಯಿಂದಾಗಿ ಬೇರೆಡೆ ಬಂದು ನೆಲೆಸುವ ಸಮುದಾಯಗಳ ಎದುರು ಸಾಮಾಜಿಕ-ಆರ್ಥಿಕ ಅಂಶಗಳ ಆಧಾರಿತವಾಗಿ ಹಲವಾರು ಸಮಸ್ಯೆಗಳು ಎದುರುಗೊಳ್ಳುತ್ತವೆ. ಈ ಸಮಸ್ಯೆಗಳ ಸಿಲುಕುವ ಕುಟುಂಬಗಳು/ಸಮುದಾಯಗಳು ಈ ಕೆಳಕಂಡಂತಹ ಪರಿಣಾಮಗಳನ್ನು ಎದುರಿಸುತ್ತವೆ.

ಮಹಿಳೆಯರು, ಮಕ್ಕಳು ಮತ್ತು ವೃದ್ಧರ ಮೇಲಾಗುವ ಪರಿಣಾಮಗಳು: ಸ್ಥಳಾಂತರದ (ಒಕ್ಕಲೇಳಿಸುವಿಕೆ) ಪ್ರಕ್ರಿಯೆಯಿಂದಾಗಿ ಅನ್ಯ ಸ್ಥಳಕ್ಕೆ ಅನಿವಾರ್ಯವಾಗಿ ಬಂದು ನೆಲೆಸುವ ಆದಿವಾಸಿ ಸಮುದಾಯಗಳ ಮಹಿಳೆಯರಿಗೆ ಪೂರ್ವ ಸ್ಥಳದಲ್ಲಿ ಇದ್ದಂತಹ ವಾತಾವರಣವು ಈ ಪ್ರದೇಶಗಳಲ್ಲಿ ಸಿಗದಾಗುವುದು. ಈ ಮೂಲಕ ತಮ್ಮ ಸಾಮಾಜಿಕ ಸಂಘ ಪರಿವಾರದೊಂದಿಗಿನ ಭದ್ರತೆಯ ಕೊಂಡಿಯಿಂದ ಮುಕ್ತವಾಗುವ ಪರಿಣಾಮ ಏಕಾಂಗಿಯ ಭಾವನೆಗಳು ಎದುರಾಗುವವು. ಇದರೊಂದಿಗೆ ಮಹಿಳೆಯರ ಮನಸ್ಥಿತಿಗಳು ಸ್ಥಿರತೆಯ ಸೀಮೀತತೆಯನ್ನು ಕಳೆದುಕೊಳ್ಳುವುದರೊಂದಿಗೆ ಕ್ರಮಬದ್ಧವಾದ ನಿರ್ಣಯಗಳನ್ನು ತೆಗೆದುಕೊಳ್ಳುವಿಕೆಯಲ್ಲಿ ವಿಫಲವಾಗುತ್ತಾರೆ. ಒಮ್ಮೇಲೆ ಆಗುವ ಇಂತಹ ಪ್ರಸಂಗಗಳು ಆಳವಾದ ಮಾನಸಿಕ ಗಾಯಗಳನ್ನು ನಿರ್ಮಿಸಿಬಿಡುತ್ತವೆ. ಪರಿಸರದ ಬದಲಾವಣೆಗಳಿಂದಾಗಿ ಅನ್ಯ ಪ್ರದೇಶಗಳಲ್ಲಿ ಎದುರಾಗುವ ಆರೋಗ್ಯ ಸಮಸ್ಯೆಗಳಿಂದಾಗಿ ಅವರ ಸಂತಾನೋತ್ಪತ್ತಿ ಫಲಿತಗಳ ಮೇಲೆ ಪ್ರಭಾವ ಬೀರುವುದರೊಂದಿಗೆ ಬಂಜೆತನಕ್ಕೂ ಕಾರಣವಾಗಬಹುದು. ಇದರೊಂದಿಗೆ ಕ್ರಮಬದ್ಧವಾದ ಮೂಲ ಸೌಕರ್ಯಗಳಾದ ಜೀವನೋಪಾಯಕ್ಕೆ ಉದ್ಯೋಗ, ಆಹಾರ, ಸಾಮಾಜಿಕ ಭದ್ರತಾ ಸೌಲಭ್ಯಗಳು ದೊರೆಯದೆ ಅತಂತ್ರ ಸ್ಥಿತಿಗಳು ಎದುರಾಗುವುದರ ಮೂಲಕ ಪರರ ಮೇಲೆಯೇ ಅವಲಂಬಿತರಾಗುವ ಸ್ಥಿತಿಗಳುಂಟಾಗುತ್ತದೆ. ಗ್ರೇಟರ್ ಬ್ಯೂರಟ್‌ನಲ್ಲಿ ನಡೆಸಿದ ಅಧ್ಯಯನವೊಂದರ ಪ್ರಕಾರ ಸ್ಥಳಾಂತರ ಹೊಂದಿರುವ ಮಹಿಳೆಯರ ಆರೋಗ್ಯದ ಸ್ಥಿತಿಯು ಸ್ಥಳಾಂತರ ಹೊಂದದೆ ಇರುವ ಮಹಿಳೆಯರ ಆರೋಗ್ಯಕ್ಕಿಂತ ಹೆಚ್ಚು ಅನಾರೋಗ್ಯಕೀಡಾಗಿದೆ ಎಂದು ಉಲ್ಲೇಖಿಸಲಾಗಿದೆ. ಅದರ ಪ್ರಕಾರ ೬೭೫ ಮಹಿಳೆಯರನ್ನು ಪರೀಕ್ಷೆಗೆ ಒಳಪಡಿಸಿದಾಗ ೨೭೩ ಮಹಿಳೆಯರು (೨೮.೮%) ಅನಾರೋಗ್ಯ ಸ್ಥಿತಿಯಲ್ಲಿದ್ದಾರೆ[೨೬]. ಉದ್ಯೋಗವನ್ನರಸಿ ತೆರಳುವ ಮಹಿಳೆಯರಿಗೆ ಸಾಮಾನ್ಯವಾಗಿ ಒಬ್ಬ ಪುರುಷನಿಗೆ ನೀಡುವ ಕೂಲಿಯನ್ನು ನೀಡುವುದಿಲ್ಲ. ಆಕೆಗೆ ಕಡಿಮೆ ಕೂಲಿಗಾಗಿ ಉದ್ಯೋಗವನ್ನು ಅವಲಂಬಿಸಬೇಕಾಗುತ್ತದೆ.

ಪರಿಸರದ ಮೂಲದಲ್ಲಿದ್ದ ವೃದ್ಧರು ಮತ್ತು ಮಕ್ಕಳಿಗೂ ಕೂಡ ವಾತಾವರಣದ ಬದಲಾವಣೆಯಿಂದಾಗಿ ಆರೋಗ್ಯದಲ್ಲಿ ವ್ಯತ್ಯಾಸಗಳುಂಟಾಗಿ ಚೇತರಿಕೆ ಕಾಣದಾಗುವ ಸಂಭವಗಳಿರುತ್ತದೆ ಮತ್ತು ಮಕ್ಕಳು ಅನಾರೋಗ್ಯದ ಸ್ಥಿತಿಯ ಕಾರಣ ಶಾಲೆಗಳಿಂದ ಹೊರಗುಳಿದು ಶಿಕ್ಷಣದಿಂದ ವಂಚಿತರಾಗುತ್ತಾರೆ. ಬಹು ಮುಖ್ಯವಾಗಿ ಪೌಷ್ಟಿಕ ಆಹಾರದ ಕೊರತೆ ಎದುರಾಗುವುದರಿಂದ ಅಪೌಷ್ಟಿಕತೆ ಹೆಚ್ಚಾಗಿ ಕ್ಷೀಣನೆಗೆ ಒಳಗಾಗುತ್ತಾರೆ. ಓಡಿಶಾ ರಾಜ್ಯ ದೇಶದಲ್ಲಿಯೇ ಹೆಚ್ಚು ಖನಿಜಾಂಶಗಳನ್ನು ಹೊಂದಿರುವ ರಾಜ್ಯವಾಗಿದೆ. ಹಾಗೂ ಅತಿ ಹೆಚ್ಚು ಆದಿವಾಸಿ ಸಮುದಾಯಗಳನ್ನು ಹೊಂದಿರುವ ರಾಜ್ಯವೂ ಕೂಡ. ಅದಿರು ನಿಕ್ಷೇಪಗಳಿಗಾಗಿ ಆದಿವಾಸಿ ಸಮುದಾಯಗಳನ್ನು ಸ್ಥಳಾಂತರಗೊಳಿಸಿದ ನಂತರ ಅವರು ಜೀವನೋಪಾಯಕ್ಕಾಗಿ ಅದಿರು ನಿಕ್ಷೇಪ ಸ್ಥಳಗಳಲ್ಲಿ ಉದ್ಯೋಗ ಕಂಡುಕೊಂಡು ಜೀವನ ಸಾಗಿಸುತ್ತಿದ್ದಾರೆ. ಆದರೆ, ಅದಿರು ನಿಕ್ಷೇಪಗಳಿಂದ ಹೊರ ಬರುವ ಅಪಾಯಕಾರಿ ಅನಿಲ ಮತ್ತು ಜಲ ಅಕ್ಕ ಪಕ್ಕದ ನದಿ ನೀರನ್ನು ಕಲುಷಿತಗೊಳಿಸುತ್ತಿದೆ. ಈ ನದಿಗಳನ್ನು ಆಶ್ರಿಯಿಸಿರುವ ಆದಿವಾಸಿಗಳು ಕೃಷಿ ಮತ್ತು ದೈನಂದಿನ ಚಟುವಟಿಕೆಗಳಿಗಾಗಿ ಬಳಸಿಕೊಂಡಿದ್ದಾರೆ. ಸ್ವಲ್ಪ ಕಾಲದ ನಂತರ ಅವರ ಆರೋಗ್ಯ ಸ್ಥಿತಿಯಲ್ಲಿ ಏರು

ಪೇರುಗಳುಂಟಾಗಿ ಆಮಶಂಕಿ, ಕುರುಡುತನ, ಮಲೇರಿಯಾ, ಕ್ಷಯ ರೋಗಗಳು ಕಾಡುತ್ತಿವೆ. ಜೊತೆಯಲ್ಲಿ ಕ್ರಮಬದ್ಧವಾದ ಪೌಷ್ಟಿಕ ಆಹಾರದ ಮತ್ತು ನೈರ್ಮಲ್ಯದ ಕೊರತೆಯಿಂದಾಗಿ ಆರೋಗ್ಯವು ಕ್ಷೀಣಿಸುತ್ತಿದೆ.

ಪರಿಸರದಲ್ಲಿನ ಪರಿಣಾಮ: ಅಭಿವೃದ್ಧಿಯ ಕಾರಣಗಳಿಗಾಗಿ ಅರಣ್ಯ ಪ್ರದೇಶಗಳ ಅಂಚಿನಲ್ಲಿ ಇಲ್ಲವೆ ಮಧ್ಯಭಾಗದಲ್ಲಿ ಗಣಿಗಾರಿಕೆ, ಅಣೆಕಟ್ಟು, ಕಾರ್ಖಾನೆಗಳ ಸ್ಥಾಪನೆಗಳಿಂದ ಹಾಗೂ ವನ್ಯಜೀವಿ ಅಭಯಾರಣ್ಯ ಸಂರಕ್ಷಣೆ ಯೋಜನೆಗಳು ಅನುಷ್ಠಾನಗೊಂಡ ಸಂದರ್ಭಗಳು, ವಿಶಾಲವಾದ ಅರಣ್ಯ ಪ್ರದೇಶದಲ್ಲಿ ಗಡಿಯ ಹಂಗಿಲ್ಲದೆ ಅರಣ್ಯ ಉತ್ಪತ್ತಿಗಳನ್ನಾಧರಿಸಿ ಜೀವನೋಪಾಯವನ್ನು ಕಂಡುಕೊಂಡ ಅರಣ್ಯ ಸಮುದಾಯದವರು. ಈ ಯೋಜನೆಗಳ ಅನುಷ್ಠಾನದಿಂದಾಗಿ ಅರಣ್ಯ ಪ್ರದೇಶಗಳಿಂದ ಸ್ಥಳಾಂತರ ಹೊಂದುವ ಸ್ಥಿತಿಯಿಂದಾಗಿ ಹಾಗೂ ತಮ್ಮ ಆರ್ಥಿಕ ಮೂಲದ ಜೀವನೋಪಾಯವನ್ನು ಕಂಡುಕೊಳ್ಳುವಿಕೆಗಾಗಿ ಆ ಪ್ರದೇಶ ಅದಿರು ಕಂಪನಿಗಳಿಗೆ ಇಲ್ಲವೆ ಅಣೆಕಟ್ಟು ನಿರ್ಮಾಣದಂತಹ ಕಾರ್ಯಗಳಿಗೆ ಸೀಮಿತವಾಗಬೇಕಾಗುತ್ತದೆ. ಅಲ್ಲದೆ ಕಾರ್ಖಾನೆಗಳು ನದಿಗಳಿಗೆ ಹೊರ ಬಿಡುವ ಕಲುಷಿತವಾದ ನೀರುನ್ನು ಆ ಸೀಮೆಯಲ್ಲಿಯ ಸಮುದಾಯಗಳು ಬಳಸುವಿಕೆಯ ಪರಿಣಾಮ, ಇರುವ ಒಂದೆಕರೆ ಜಮೀನಿನಲ್ಲೂ ಸರಿಯಾದ ಇಳುವರಿ ಸಿಗದೇ ಹೋಗಬಹುದು. ಹಾಗೂ ಅದಿರು ನಿಕ್ಷೇಪಗಳಲ್ಲಿ ಕಾರ್ಯ ನಿರ್ವಹಿಸುವವರು ಅನೇಕ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುವ ಸಂಭವ ಹೆಚ್ಚಿರುತ್ತದೆ. ಭಾರತದ ಓಡಿಶಾ ರಾಜ್ಯದ ದಾಮೋದರ ನದಿ ಅತಿ ಹೆಚ್ಚು ಕಲುಷಿತವಾದ ನೀರನ್ನು ಹೊಂದಿದ್ದು, ಅದಕ್ಕೆ ಕಾರಣ ನದಿ ದಡದ ಪ್ರದೇಶದಲ್ಲಿರುವ ಕಲ್ಲಿದ್ದಲು ಕಂಪನಿಯು ದಿನಕ್ಕೆ ೪೦ ಟನ್ ಪರಿಶುದ್ಧವಾದ ಕಲ್ಲಿದ್ದಲನ್ನು ಉತ್ಪಾಧಿಸುವ ಸಲುವಾಗಿ ಕಲ್ಲಿದ್ದಲನ್ನು ಶುದ್ಧೀಕರಿಸಿದ ನೀರನ್ನು ಹೊರಬಿಡುತ್ತದೆ. ಇಂತಹ ೧೨ ಕಲ್ಲಿದ್ದಲು ಕಂಪನಿಗಳು ೨೦.೫೨ ಮಿಲಿಯನ್ ಟನ್ ವಾರ್ಷಿಕವಾಗಿ ಉತ್ಪಾದಿಸುವೆಡೆ ಬಳಕೆಯಾಗುವ ನೀರು ಕಲುಷಿತವಾಗಿ ಸಂತಾಲ ಆದಿವಾಸಿ ಸಮುದಾಯಗಳಿರುವ ಪ್ರದೇಶದ ಮುಖಾಂತರ ಬಂಗಾಳ ಕೊಲ್ಲಿಯನ್ನು ಸೇರುತ್ತದೆ. (Singh, ೨೦೧೫)[೨೨], ಕೃಷಿಗಾಗಿ ಬಳಸುವ ಈ ನೀರು ಮೊದಲೇ ಮಲಿನವಾದ ಕಾರಣ ಬೆಳೆಗಳಲ್ಲಿ ಹೆಚ್ಚು ಉತ್ಪಾನೆಯು ಕಷ್ಟಸಾಧ್ಯವಾಗುತ್ತದೆ. ಅಲ್ಲದೆ ದಿನವಹಿ ಬಳಕೆಯಿಂದ ಆರೋಗ್ಯದಲ್ಲಿ ಅನಾರೋಗ್ಯ ಸ್ಥಿತಿವುಂಟಾಗುತ್ತದೆ.

ಕೃಷಿ ಆಧಾರಿತ ಭೂಹಿಡುವಳಿಗಳ ನಷ್ಟ: ಆದಿವಾಸಿಗಳ ಮೂಲ ಕಸುಬು ಕೃಷಿ ಮತ್ತು ಹೈನುಗಾರಿಕೆ. ಇದರೊಂದಿಗೆ ತಮ್ಮ ಜೀವನೋಪಾಯಕ್ಕಾಗಿ ಅರಣ್ಯಾಧಾರಿತ ಉತ್ಪನ್ನಗಳನ್ನು ಆಶ್ರಯಿಸಿರುತ್ತಾರೆ. ಕೃಷಿಯಿಂದ ತಮ್ಮ ಬದುಕನ್ನು ಕಟ್ಟಿಕೊಂಡಿರುವ ಆದಿವಾಸಿಗಳು, ಅದರಿಂದ ಬರುವ ಉತ್ಪತ್ತಿ ಆಧಾರಿತವಾಗಿ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡಿರುತ್ತಾರೆ. ಆದರೆ ಒಮ್ಮೆಲೆ ಪ್ರಕಲ್ಪಗಳು ಆಯೋಜನೆಗೊಂಡು ಅನುಷ್ಠಾನಗೊಳ್ಳುವಿಕೆಗೆ ಒಕ್ಕಲೆಬ್ಬಿಸಿದರೆ, ಅದಕ್ಕೆ ಪಡೆಯುವ ಪರಿಹಾರ ಮೊತ್ತವು, ಅರಣ್ಯ ಪ್ರದೇಶದ ಅಂಚಿನಲ್ಲಿರುವ ಜಮೀನುಗಳಿಗೆ ಸಿಗುವ ಅರ್ಧ ಮಾರುಕಟ್ಟೆಯ ಬೆಲೆಯು ದೊರೆಯುವುದಿಲ್ಲ. ಇಂತಹ ಸಂದರ್ಭದಲ್ಲಿ ಆ ಸ್ಥಳಗಳಿಂದ ಸ್ಥಳಾಂತರ ಹೊಂದಿದವರು ಸಿಗುವ ಮೂರ್ನಾಲ್ಕಾಣೆಗೆ ಹೊಸತೊಂದು ಜಮೀನು ಹೇಗೆ ಕ್ರಯಕ್ಕೆ ತೆಗೆದುಕೊಳ್ಳಲಾಗುತ್ತದೆ. ಇದರೊಂದಿಗೆ ನದಿ ಆಶ್ರಿತ ಸಮುದಾಯಗಳಾಗಿರುವುದರಿಂದ ಹೊರ

ಭಾಗದಲ್ಲಿ ನೀರಿನ ಕೊರತೆವುಂಟಾಗುವುದರಿಂದ ವರ್ಷಕ್ಕೆ ಒಂದು ಬೆಳೆಯನ್ನು ತೆಗೆಯದೆ ಇರುವ ಸ್ಥಿತಿ ಎದುರಾಗುವುದು. ಪ್ರಸ್ತುತ ಕುದುರೆಮುಖ ಅರಣ್ಯ ಪ್ರದೇಶದ ಕೆರೆಕಟ್ಟೆ ಗ್ರಾಮದ ತುಂಗಾ ನದಿ ನೀರಿನ ಅಂಚಿನಲ್ಲಿರುವ ಶೀರ್ಲು ಸುತ್ತುಗಟ್ಟೆಯ ಗೌಡಲು ಆದಿವಾಸಿಗಳ ಅಭಿಪ್ರಾಯ ಮೇಲೆ ಉಲ್ಲೇಖಿಸಿದ ಸಂದರ್ಭವನ್ನೇ ಹೋಲುತ್ತದೆ.

ಉದ್ಯೋಗ ನಷ್ಟತೆ: ಕೃಷಿಯ ಮುಖ್ಯ ಚಟುವಟಿಕೆ ಮತ್ತು ಅರಣ್ಯ ಕಿರುಉತ್ಪನ್ನಗಳನ್ನು ಸಂಗ್ರಹಿಸುವ ಉದ್ಯೋಗದ ಮುಖಾಂತರ ತಮ್ಮ ಬದುಕನ್ನು ಕಟ್ಟಿಕೊಂಡಿದ್ದ ಆದಿವಾಸಿಗಳು, ಸ್ಥಳಾಂತರದ ಮುಖಾಂತರ ಇರುವ ಭೂ ಹಿಡುವಳಿಯನ್ನು ಕಳೆದುಕೊಂಡು, ಬೇರೆ ಸ್ಥಳಗಳಿಗೆ ವರ್ಗಾಯಿತರಾಗುತ್ತಾರೆ. ಅಂತಹ ಸ್ಥಳಗಳಲ್ಲಿ ಪೂರ್ವ ಸಮಯದಲ್ಲಿ ಭೂ ಹಿಡುವಳಿಗೆ ದೊರೆತ ಸಂಭಾವನೆ ಅಥವಾ ಪರಿಹಾರ ಮುಖೇನ ಯಾವುದೇ ಕೃಷಿ ಭೂ ಹಿಡುವಳಿಯನ್ನು ಕ್ರಯಕ್ಕೆ ತೆಗೆದುಕೊಳ್ಳುವುದು ಅಸಾಧ್ಯವಾಗುತ್ತದೆ. ಸಣ್ಣ ಪ್ರಮಾಣದ ಆದಿವಾಸಿ ರೈತರಿಗೆ ಅರಣ್ಯ ಪ್ರದೇಶದ ಹೊರ ವಲಯದಲ್ಲಿ ಭೂ ಹಿಡುವಳಿಯನ್ನು ಕೊಂಡುಕೊಳ್ಳುವುದು ಬಹು ದೂರದ ವಿಷಯವಾಗಿ ಗೌಣವಾಗುವ ಮೂಲಕ, ತಮ್ಮನ್ನು ಕೂಲಿ ಕಾರ್ಮಿಕತೆಗೆ ಒಳಪಡಿಸಿಕೊಳ್ಳುತ್ತಾರೆ. ಅಲ್ಲಿ ಸಿಗುವ ಅಲ್ಪ ಕೂಲಿಗೆ ದಿನವಹಿ ಕಾರ್ಯನಿರ್ವಹಿಸಬೇಕಾಗುತ್ತದೆ. ಹಾಗೂ ಹೊರ ವಲಯದಲ್ಲಿ ಕೃಷಿ ಹೊರತು ಪಡಿಸಿ ಬೇರೆ ಉದ್ಯೋಗದ ಜ್ಞಾನರಹಿತವಾಗಿರುವ ಕಾರಣ ಸ್ಪರ್ಧಾತ್ಮಕ ಜಗತ್ತಿನಲ್ಲಿ ಉದ್ಯೋಗ ಕಂಡುಕೊಳ್ಳುವಿಕೆ ಕಷ್ಟಸಾಧ್ಯವಾಗುತ್ತದೆ. ಓಡಿಶಾದ ತಾಲ್‌ಚೇರ್ ಆದಿವಾಸಿ ಗ್ರಾಮದಲ್ಲಿ ಸಮೀಕ್ಷೆಯನ್ನು ಕೈಗೊಂಡಾಗ ತಿಳಿದು ಬಂದಿರುವ ವರದಿ ಅನುಸಾರವಾಗಿ, ಆದಿವಾಸಿಗಳ ಪ್ರಾಥಮಿಕ ಮೂಲ ವೃತ್ತಿಗಳಿಂದ ಸ್ಥಳಾಂತರಗೊಂಡ ಮೇಲೆ ೯% ರಿಂದ ೪೩.೬% ನಿರುದ್ಯೋಗಿಗಳು ಹೆಚ್ಚಾಗಿದ್ದು, ಗಳಿಕೆಯಲ್ಲಿ ೫೦% ರಿಂದ ೮೦%ಗೆ ಕುಸಿತವನ್ನು ಕಂಡಿದೆ (ಪಾಂಡೆ, ೧೯೯೬)[೨೮].

ನಿರಾಶ್ರಿತರಾಗುವಿಕೆ: ಕಾಲಮಿತಿಯೊಳಗೆ ಒತ್ತಡ ಪೂರಕವಾಗಿ ಸ್ಥಳಾಂತರವಾಗುವ ಸಮುದಾಯಗಳಲ್ಲಿ ಆರ್ಥಿಕ ಸ್ಥಿತಿಗತಿಯು ಉತ್ತಮವಾಗಿಲ್ಲದ ಸಂದರ್ಭ ಮತ್ತು ಪುನರ್ವಸತೀಕರಣಗೊಳ್ಳುವ ಸಂದರ್ಭದಲ್ಲಿ ದೊರೆಯಬೇಕಾದ ಸಂದಾಯದ ಹಣ ಸಿಗದಿದ್ದ ಸಂದರ್ಭದಲ್ಲಿ ಒಮ್ಮೆಲೆಯೇ ಒತ್ತಡ ಪೂರಕ ಸನ್ನಿವೇಶಗಳು ಎದುರಾದಾಗ ಸ್ಥಳಾಂತರತೆ ಅನಿವಾರ್ಯವಾಗಿರುತ್ತದೆ. ಅನ್ಯ ಸ್ಥಳಗಳಿಗೆ ಸ್ಥಳಾಂತರಗೊಂಡ ಮೇಲೆ ತಾತ್ಕಾಲಿವಾಗಿ ಆಶ್ರಯ ಪಡೆಯುವುದಕ್ಕೂ ಹಣದ ಅವಶ್ಯವಿರುತ್ತದೆ. ಆದರೆ ಕಾಲದ ಸಂದಿಗ್ಧತೆಯಲ್ಲಿ ಸಿಕ್ಕಂತಹ ಜಾಗಗಳಲ್ಲಿ ಆಶ್ರಿತರಾಗುವ ಸಮಯ ಹೆಚ್ಚು. ಕಾಲ ಕಳೆದಂತೆ ಸಂದಾಯವಾಗಬೇಕಾದ ಹಣ ಸಂದಾಯವಾಗದಿದ್ದಲ್ಲಿ ಆಶ್ರಯಕ್ಕೆ ವಸತಿ ಕಲ್ಪಿಸಿಕೊಳ್ಳುವುದಕ್ಕೆ ನಿವೇಶನ ಮತ್ತು ಮನೆ ನಿರ್ಮಾಣದ ಹಂತವು ತಪ್ಪಿ ಹೋಗುವ ಸಂಭವವಿರುತ್ತದೆ. ಕರ್ನಾಟಕದ ಕೃಷ್ಣಾ ನದಿಗೆ ಆಲಮಟ್ಟಿ ಜಲಾಶಯ ನಿರ್ಮಾಣದ ವೇಳೆ ಸಂತ್ರಸ್ಥರಾದವರು ನಿರಾಶ್ರಿತರಾದರು. ಸರ್ಕಾರವು ತಾತ್ಕಾಲಿಕವಾಗಿ ನಿರ್ಮಿಸಿದ ಕೇಂದ್ರಗಳಲ್ಲಿ ಸಂದಾಯವಾಗ ಬೇಕಿದ್ದ ಹಣ ಸಂದಾಯವಾಗುವವರೆಗೂ, ಕೆಲವರು ೨ ವರ್ಷ ಮತ್ತು ಕೆಲವರು ೪ ವರ್ಷಗಳ ನಂತರ ವಸತಿ ವ್ಯವಸ್ಥೆಗಳನ್ನು ಕಂಡುಕೊಂಡಿದ್ದಾರೆ. ಮಹಾರಾಷ್ಟ್ರದ ಕುಕ್ಕಾಡಿ ಕೃಷ್ಣಾ ಜಲನಯನ ಯೋಜನೆಯಲ್ಲಿ ೧೦ ರಿಂದ ೧೫ ವರ್ಷಗಳ ಕಾಲ ನಿರಾಶ್ರಿತರಾಗಿ

ತಾತ್ಕಾಲಿಕ ಟೆಂಟುಗಳಲ್ಲಿ ಜೀವನ ನಡೆಸಿದ್ದಾರೆ. (ಜೋಸೆಫ್, ೧೯೯೮). ನಿರಾಶ್ರಿತರಾಗುವಿಕೆಯ ಮುಂದಿನ ಹಂತಗಳೇ ಉದ್ಯೋಗರಹಿತರಾಗುವುದು, ಅನಾರೋಗ್ಯದ ಸ್ಥಿತಿಯತ್ತ ವಾಲುವಿಕೆ.

ಅಲ್ಪವಾಗಿ ಕಾಣುವುದು: ಕುಟುಂಬದ ಆದಾಯದ ಗಳಿಕೆಯಲ್ಲಿ ಇಳಿಕೆಗಳು ಕಂಡಾಗ, ಸ್ಥಳಾಂತರ ಪ್ರದೇಶದಲ್ಲಿ ಅನ್ಯರೆಂದು ಭಾವಿಸುವ ಮೂಲಕ ಈ ಸನ್ನಿವೇಶವು ಸಂಭವಿಸಬಹುದು. ಸ್ಥಳಾಂತರಗೊಂಡು ಅನ್ಯ ಸ್ಥಳದಲ್ಲಿ ನೆಲೆ ಕಂಡ ತಕ್ಷಣವೇ ಅವರ ಕೌಶಲ್ಯಗಳನ್ನು ಪ್ರದರ್ಶಿಸುವುದು ವಿರಳ. ಆಮೂಲಕ ಸಾಮಾಜಿಕ ಸಂಘಟನೆಯ– ಸಮುದಾಯದ ಬಲವಿಲ್ಲದಿದ್ದಾಗ ಸಾಮಾನ್ಯವಾಗಿ ಮಾನಸಿಕವಾಗಿ ಕುಪಿತರಾಗುವುದು ಸಹಜ. ಈ ನಿಟ್ಟಿನಲ್ಲಿ ದುರ್ಬಲರೆನಿಸಿ ಆತ್ಮವಿಶ್ವಾಸವನ್ನು ಕಳೆದುಕೊಳ್ಳುವ ಭೀತಿಯಲ್ಲಿ ಸಾಮಾಜಮುಖಿಯಾಗುವುದು ಕಷ್ಟಸಾಧ್ಯವಾಗುವ ಮೂಲಕ ತಾರತಮ್ಯತೆಗೆ ಒಳಗಾಗುತ್ತಾರೆ. ಈ ಮೂಲಕ ಪೂರ್ವ ಸನ್ನಿವೇಶದಲ್ಲಿದ್ದ ಜೀವನ ಶೈಲಿಯನ್ನು ಹೊಸ ಪ್ರದೇಶದಲ್ಲಿ ಸ್ಥಳಾಂತಗೊಂಡವರು ಒಳಗೊಳ್ಳುವುದು ಸಾಧ್ಯವಿಲ್ಲ. ರಾಜ್ಯದ ಚಿಕ್ಕಮಗಳೂರು ಜಿಲ್ಲೆಯ ಮುತ್ತೂಡಿ ಅರಣ್ಯ ಪ್ರದೇಶದಿಂದ ರಾಷ್ಟ್ರೀಯ ಹುಲಿ ಸಂರಕ್ಷಣೆ ಯೋಜನೆ ಅಡಿ ತರೀಕರೆ ತಾಲೂಕಿನ ಮಳಲಿಚನ್ನೇನಹಳ್ಳಿಗೆ ಸರ್ಕಾರದ ವತಿಯಿಂದ ಪುನರ್ವಸತಿಗೊಂಡಾಗ, ಆರಂಭದ ಕಾಲದಲ್ಲಿ ಸ್ಥಳೀಯ ನಿವಾಸಿಗಳು ನಮ್ಮೊಡನೆ ಸಂವಹನವನ್ನು ಮಾಡುತ್ತಿರಲಿಲ್ಲ. ಕೆಲವು ಸಂದರ್ಭಗಳು ನಮ್ಮ ಮತ್ತು ಸ್ಥಳೀಯರ ನಡುವೆ ಸಂಘರ್ಷಕ್ಕೂ ಎಡೆಮಾಡಿಕೊಟ್ಟಿದ್ದವು. ಆದರೆ, ಅಧಿಕಾರಿಗಳ ಸಮಯೋಚಿತ ನಿರ್ಧಾರ ಮತ್ತು ಸರ್ಕಾರದ ವತಿಯಿಂದ ಬಂದಂತಹ ಆಜ್ಞೆಗಳಿಗನುಸಾರವಾಗಿ ಸಂಘರ್ಷಗಳು ದೂರವಾದವುರ್ೆ. ಹೊರಸ್ಥಳದಿಂದ ಬಂದಂತವರನ್ನು ಸ್ಥಳೀಯ ಸಮುದಾಯವು ಬೇಗನೆ ಒಪ್ಪಿಕೊಳ್ಳುವುದು ಕಷ್ಟದ ಮಾತು. ಎಂದು ಮುಯ್ಯುದ್ಧೀನ್ ಅವರ ಮನದಾಳದ ಮಾತು.

ಆಹಾರದ ಅಭದ್ರತೆ: ಒತ್ತಡ ಪೂರಕ ಸನ್ನಿವೇಶದ ಸ್ಥಳಾಂತರದಲ್ಲಿ ಈ ವ್ಯವಸ್ಥೆಯನ್ನು ಹೆಚ್ಚು ಕಾಣಬಹುದು. ಯಾವುದೇ ವ್ಯಕ್ತಿ ಕ್ಯಾಲೊರಿಯುಕ್ತ ಪ್ರೋಟೀನ್ ಆಹಾರ ಸೇವನೆ ಮಾಡದ ಸಂದರ್ಭದಲ್ಲಿ ಆತನಲ್ಲಿ ಆರೋಗ್ಯ ಪೂರ್ಣ ಪ್ರಮಾಣದಲ್ಲಿ ಬೆಳವಣಿಗೆಯಾಗುವುದಿಲ್ಲ. ಒತ್ತಡ ಪೂರಕವಾಗಿ ಸ್ಥಳಾಂತರಗೊಂಡಂತಹ ಸಂದರ್ಭಗಳಲ್ಲಿ ಯಾವುದೇ ರೀತಿಯ ಕ್ರಮಬದ್ಧವಾದ ಆಹಾರ ಸೇವನೆ ಸಾಮಾನ್ಯವಾಗಿ ಕಷ್ಟಸಾಧ್ಯ. ಕಾರಣ ಒಮ್ಮೆಲೆಯೇ ಸ್ಥಳಗಳನ್ನು ಬದಲಾವಣೆ ಮಾಡುವಿಕೆಯು ಸುಭದ್ರವಾದ ಆಹಾರ ಪದಾರ್ಥಗಳ ಶೇಖರಣೆ ಅಸಾಧ್ಯ. ಅನ್ಯ ಸ್ಥಳಗಳಲ್ಲಿ ಆರ್ಥಿಕ ಸ್ಥಿತಿ ಉತ್ತಮವಾಗಿದ್ದರೆ ಮಾತ್ರ ಉತ್ತಮ ಆಹಾರ ಪಡೆದು ಕೊರತೆಯನ್ನು ನೀಗಿಸಬಹುದು. ಆದರೆ, ಏಕಾಏಕಿ ಸ್ಥಳಾಂತರಗೊಳ್ಳುವಿಕೆಯಿಂದಾಗಿ ಅನ್ಯ ಸ್ಥಳಗಳಲ್ಲಿ ನೆಲೆಯೂರಿ ಆಹಾರ ಭದ್ರತೆಯನ್ನು ಕಂಡುಕೊಳ್ಳಲು ಕಾಲಾವಕಾಶ ಬೇಕು ಹಾಗೂ ಆ ಸಮಯದೊಳಗಾಗಿ ಸಾಕಷ್ಟು ಆರೋಗ್ಯದ ಸ್ಥಿತಿಯಲ್ಲಿ ಏರು ಪೇರುಗಳುಂಟಾಗುವ ಮೂಲಕ ಸಾಕಷ್ಟು ಪೌಷ್ಟಿಕ ಆಹಾರದ ಕೊರತೆಯ ಸಮಸ್ಯೆಯು ಎದುರಾಗುವುದು. ಗುಜರಾತ್ ರಾಜ್ಯದ ವಾಸವ ಆದಿವಾಸಿ ಸಮುದಾಯಗಳಲ್ಲಾದ ಸ್ಥಳಾಂತರ ಪ್ರಕ್ರಿಯೆಯಿಂದಾಗಿ ಆದ ಆಹಾರದ ಕೊರತೆಯನ್ನು ಕುರಿತು ೨೦೦೦ ರಲ್ಲಿ ಹಕೀಮ್ ಅವರು ಅಧ್ಯಯಿನಿಸಿ ನೀಡಿದ ಕಾರಣವೆಂದರೆ, ಆಹಾರಕ್ಕಾಗಿ ಶೇಖರಿಸಿದ್ಧ ಧಾನ್ಯಗಳನ್ನು ಹಣಕ್ಕಾಗಿ ಮಾರಾಟ ಮಾಡಲಾಯಿತು. ಈ ಮುಖೇನ ಆ ಸಂದರ್ಭದಲ್ಲಿ ಸಕಾಲಕ್ಕೆ

ಬಾರದ ಮಳೆಯಿಂದಾಗಿ ಧಾನ್ಯಗಳ ಬೆಳೆ ಬೆಳೆಯಲು ಅನುವಾಗದೆ ಪೌಷ್ಟಿಕ ಆಹಾರದ ಕೊರತೆ ಎದುರಿಸುವಂತಾಯಿತು.

ಅನಾರೋಗ್ಯ ಮತ್ತು ಮರಣ ಪ್ರಮಾಣದಲ್ಲಿ ಏರಿಕೆ: ಅಧಿಕ ಪ್ರಮಾಣದ ಜನಸಂಖ್ಯೆಯಾಧಾರಿತವಾಗಿ ಸ್ಥಳಾಂತರವಾಗುವ ಸಂದರ್ಭದಲ್ಲಿ ಈ ಸನ್ನಿವೇಶವು ಸಂಭವಿಸುವುದು. ಸಾಮಾಜಿಕವಾದಂತಹ ಒತ್ತಡ ಏರಿಕೆಯಾಗುವುದರ ಮುಖಾಂತರ ಮಾನಸಿಕವಾಗಿಯೂ ಕೂಡ ಸನ್ನಿವೇಶಗಳನ್ನು ಎದುರಿಸುವ ಶಕ್ತಿಯು ಕುಂದುವಿಕೆಯೊಂದಿಗೆ, ವಿಪತ್ತು ನಿರ್ವಹಣ ಪುನರ್ವಸತೀಕರಣದ ಸ್ಥಳಗಳಲ್ಲಿ ಈ ಸನ್ನಿವೇಶವು ಏರ್ಪಡುವುದು. ಈ ಮೂಲಕ ಸಾಂಕ್ರಾಮಿಕ ರೋಗಗಳಾದ ಮಲೇರಿಯಾ, ಕ್ಷಯ, ಅತಿಸಾರ ಭೇದಿ, ವಿಷಮ ಶೀತ ಜ್ವರದಂತಹ ಬಾಧೆಗಳು ಹೆಚ್ಚಾಗುವಿಕೆ ಮುಖಾಂತರ ಸಾವಿನ ಪ್ರಮಾಣದಲ್ಲೂ ಹಾಗೂ ಅನಾರೋಗ್ಯತೆಯ ಪ್ರಮಾಣದಲ್ಲೂ ಏರಿಕೆಗಳು ಸಾಧ್ಯ. ಇದಕ್ಕೆ ಮುಖ್ಯ ಕಾರಣ ಕ್ರಮಬದ್ಧವಾದ ಕುಡಿಯುವ ನೀರಿನ ಸಮಸ್ಯೆ, ವಾತಾವರಣ, ಶೌಚಾಲಯಗಳ ನಿರ್ಮಾಣದಲ್ಲಿ ವಿಳಂಬ, ಗಂಜಿ ಕೇಂದ್ರದಲ್ಲಿನ ಶುಚಿತ್ವತೆ ಕೊರತೆ ಮುಂತಾದವುಗಳಿಂದ ಇವು ಸಂಭವಿಸುತ್ತದೆ. ಸ್ಥಳಾಂತರಗೊಂಡ ಸಮುದಾಯದ ಜನರು ನಿರಾಶ್ರಿತರಾದ ಸಂದರ್ಭದಲ್ಲೂ ಮಕ್ಕಳು ಮತ್ತು ವೃದ್ಧರು ನೆಲೆ ಕಂಡ ಪರಿಸರದಲ್ಲಿ ಆಗುವ ವಾತಾವರಣ ಬದಲಾವಣೆಯಿಂದಾಗಿ ಆರ್ಥಿಕ ಸ್ಥಿತಿಯಲ್ಲೂ ಹಾಗೂ ಆಹಾರದ ಅಭದ್ರತೆಯಿಂದಾಗಿ ಕ್ರಮಬದ್ಧವಾದ ಚಿಕಿತ್ಸೆಗಳು ಸಾಧ್ಯವಾಗುವುದಿಲ್ಲ. ಈ ಮೂಲಕ ಅನಾರೋಗ್ಯತೆ ಮತ್ತು ಮರಣ ಪ್ರಮಾಣದಲ್ಲಿ ಏರಿಕೆ ಸಂಭವಿಸುತ್ತದೆ.

ಸಮುದಾಯ ಮತ್ತು ಕುಟುಂಬ ಸಂಬಂಧದಲ್ಲಿ ವಿಘಟನೆ: ಸ್ಥಳಾಂತರದ ಭೀಕರತೆ ಎಂದರೆ, ಸಾಮಾಜಿಕ ಭದ್ರತೆಯ ಮೂಲಾಂಶಗಳನ್ನು ಛಿದ್ರಗೊಳಿಸುವುದು. ಸ್ವಯಂ ಪ್ರೇರಿತ ಸ್ಥಳಾಂತರದಿಂದಾಗಿ ಒಂದೇ ಸಮುದಾಯದಲ್ಲಿ ನೆಲೆಸಿದ (ಹಾಡಿಗಳಲ್ಲಿ) ಹಲವಾರು ಕುಟುಂಬಗಳು ಸಾಮಾಜಿಕ ಸಂಬಂಧವನ್ನು ಕಡಿದುಕೊಳ್ಳುವುದು ಹಾಗೂ ಕುಟುಂಬದಲ್ಲಿನ ಭಿನ್ನಾಭಿಪ್ರಾಯಗಳಿಂದ ಒಡಕುಗಳು ಸಂಭವಿಸಿ ಅವಿಭಕ್ತ ಕುಟುಂಬವು ವಿಭಕ್ತ ಕುಟುಂಬಗಳಾಗಿ ವಿಘಟನೆ ಹೊಂದುವವು. ಈ ಮೂಲಕ ತಮ್ಮ ಜೀವನಾಡಿಯಾಗಿದ್ದ ಪರಿಸರದ ಮೂಲಗಳನ್ನು, ಸಾಂಸ್ಕೃತಿಕ ಅಂಶಗಳಾದ – ದೈವ, ಪೂಜೆ, ಪೂರ್ವಜರ ಆಸ್ತಿಗಳನ್ನು ತೊರೆಯುವ ಮೂಲಕ ಸಮುದಾಯದ ಮೂಲದಿಂದಲೇ ಹೊರಬರುವ ಸ್ಥಿತಿಗಳಾಗುತ್ತವೆ.

ಲಿಂಗ ಅಭದ್ರತೆ: ಸ್ಥಳಾಂತರದ ಮುಖಾಂತರ ಸಮುದಾಯಗಳಿಂದ ಹಾಗೂ ಕುಟುಂಬಗಳ ವಿಘಟನೆಗಳಿಂದ ಹೊರ ಬರುವ ಮಹಿಳೆಯರು, ಅನ್ಯ ಸ್ಥಳಗಳಲ್ಲಿ ಅಭದ್ರತಾ ಸಂದರ್ಭವನ್ನು ಎದುರುಗೊಳ್ಳಬೇಕಾಗುತ್ತದೆ. ಪ್ರಮುಖವಾಗಿ ಮಹಿಳಾ ಪ್ರಾಧಾನ್ಯತೆಯ (ವಿಧವಾ ಕುಟುಂಬ) ಕುಟುಂಬಗಳಲ್ಲಿ ಆಕೆ ಪ್ರತಿಯೊಂದು ಕಾರ್ಯವನ್ನು ತಾನೇ ನೆರವೇರಿಸುವ ಕ್ಷಣಗಳು ಎದುರಾಗುವ ಮೂಲಕ ಉದ್ಯೋಗ ಸ್ಥಳಗಳಲ್ಲಿ ಇಲ್ಲವೆ ಸೌಲಭ್ಯಗಳನ್ನು ಪಡೆಯುವ ಸಂದರ್ಭಗಳಲ್ಲಿ, ಅನಾರೋಗ್ಯ ಸ್ಥಿತಿಯಲ್ಲಿ ಆಕೆ ಲಿಂಗ ಅಭದ್ರತಾ ಸನ್ನಿವೇಶವನ್ನು ಎದುರಿಸಬೇಕಾಗುತ್ತದೆ.

ಇತರೆ ಸಂಪನ್ಮೂಲಗಳ ನಷ್ಟ: ಆದಿವಾಸಿ ಸಮುದಾಯಗಳು ಸದಾಕಾಲ ಸಂಪನ್ಮೂಲಗಳೊಂದಿಗೆ ಜೀವಿಸುವವರು. ತಾವಿರುವ ಸ್ಥಳದಲ್ಲಿ ಜೀವ ಕೇಂದ್ರಿತವಾದ ಪರಿಸರ ಮತ್ತು ಪರಿಸರದ ಜೀವಿಗಳೊಂದಿಗೆ ನಂಟನ್ನು ಉಳಿಸಿಕೊಂಡು ಜೀವನ ನಡೆಸಿದವರು. ಕೃಷಿ ಆಧಾರಿತ ಕಸುಬುಗಳಲ್ಲಿ ಎತ್ತುಗಳನ್ನು ಹಾಗೂ ಹಾಲು ಉತ್ಪಾದಕತೆ ಮತ್ತು ಹಾಲಿನ ಸಂಕರಣದ ಪದಾರ್ಥಗಳ ಬಳಕೆಗಾಗಿ ಹಸು ಇಲ್ಲವೆ ಎಮ್ಮೆಗಳನ್ನು ಮತ್ತು ಪೌಷ್ಟಿಕ ಆಹಾರದ ಆಧಾರಿತವಾಗಿ ಮೊಟ್ಟೆಗಳನ್ನು ಸಂಪನ್ಮೂಲಗಳಾಗಿ ಬಳಸುವುದರೊಂದಿಗೆ, ಅರಣ್ಯ ಮೂಲದ ಪದಾರ್ಥಗಳಾದ ಜೇನು, ಪತ್ರೆ ಹಾಗೂ ಔಷಧಿಯುತ ಸಸ್ಯಗಳ ಬಳಕೆಗಳಿಂದಾಗಿ ಹೆಚ್ಚು ಆರೋಗ್ಯವಂತರು ಕೂಡ ಆಗಿರುತ್ತಾರೆ. ಈ ಅವಿನಾಭಾವ ಸಂಬಂಧವು ಒತ್ತಡ ಪೂರಕ ಸ್ಥಳಾಂತರಗಳಿಂದಾಗಿ ಬೇರೆಡೆ ಅವುಗಳನ್ನು ನಿರ್ವಹಿಸುವ ಮೂಲಗಳು ದೊರೆಯದೆ ಅನಿವಾರ್ಯವಾಗಿ ಅವುಗಳನ್ನು ಮಾರುವ ಇಲ್ಲವೆ ಪೂರ್ವ ಸ್ಥಳದಲ್ಲಿಯೇ ಬಿಟ್ಟು ಬರುವ ಸ್ಥಿತಿಗಳುಂಟಾಗುವವು. ಈ ಮೂಲಕ ಇತರೆ ಸಂಪನ್ಮೂಲಗಳು ಕೂಡ ಸ್ಥಳಾಂತರದಿಂದಾಗಿ ನಂಟನ್ನು ಕಳೆದುಕೊಂಡು ನಷ್ಟವಾಗುವವು.

ಆರ್ಥಿಕ ಮೂಲದ ಮಾರುಕಟ್ಟೆಗಳ ನಷ್ಟ: ಅರಣ್ಯಗಳಲ್ಲಿ ದೊರೆಯುವ ಕಿರುಉತ್ಪನ್ನಗಳು, ಹೈನುಗಾರಿಕೆಯಿಂದ ದೊರೆಯುವ ಹಾಲಿನ ಪದಾರ್ಥಗಳು, ಕೃಷಿ ಚಟುವಟಿಕೆಯಿಂದ ದೊರೆಯುವ ಉತ್ಪನ್ನಗಳನ್ನು ಸಂಗ್ರಹಿಸಿ, ಅವುಗಳನ್ನು ತಮಗೆ ಅನುಸರಿಸಿದ ಬೆಲೆಗೆ ಮಾರುತ್ತಾ, ನಿಗದಿತವಾದ ಮಾರುಕಟ್ಟೆಯನ್ನು ಅವಲಂಬಿಸಿರುತ್ತಾರೆ. ಈ ಮೂಲಕ ಅದರಿಂದ ಬರುವ ಒಟ್ಟಾರೆ ಆದಾಯಗಳ ಮುಖಾಂತರ ಆರ್ಥಿಕ ಸ್ಥಿತಿಗಳನ್ನು ನಿರ್ವಹಿಸುತ್ತಾರೆ. ಸ್ಥಳಾಂತರದ ಪ್ರಕ್ರಿಯೆಯಿಂದಾಗಿ ತಮ್ಮ ಜೀವನೋಪಾಯಕ್ಕೆ ಅನುವು ಮಾಡಿಕೊಂಡಿದ್ದ ಎಲ್ಲಾ ಸಂಪನ್ಮೂಲಗಳನ್ನು ತೊರೆದು ಅನ್ಯ ಸ್ಥಳಗಳಿಗೆ ಸ್ಥಾನಾಂತರವಾಗುವಿಕೆಯಿಂದ ಕಾಲಾಂತರದಿಂದ ಬೆಳೆಸಿಕೊಂಡು ಬಂಧಿದ್ದ ಜಾಲ ಬಂಧಗಳು, ಆರ್ಥಿಕ ಮೂಲದ ಜೀವನಾಂಶಗಳು ನಷ್ಟಕ್ಕೆ ತುತ್ತಾಗುವ ಮೂಲಕ ನಷ್ಟಕ್ಕೆ ಒಳಗಾಗುವ ಸಂದರ್ಭವೇ ಹೆಚ್ಚು. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ (ಮಲ್ಲೇಶ್ವರ) ಕುದುರೆಮುಖ ಕಂಪನಿಯ ಮಾರುಕಟ್ಟೆ, ಸುತ್ತಮುತ್ತಲ ಆದಿವಾಸಿ ಸಮುದಾಯಗಳಿಗೆ ಆದಾಯದ ಮೂಲವಾಗಿತ್ತು. ಪಶು ಸಂಗೋಪನೆ ಮುಖಾಂತರ ಹಾಲು, ಮೊಸರು, ತುಪ್ಪ ಮತ್ತು ಕೃಷಿ ಆಧಾರಿತವಾಗಿ ತರಕಾರಿಗಳು ಹಾಗೂ ಧಾನ್ಯಗಳನ್ನು ಈ ಮಾರುಕಟ್ಟೆಯಲ್ಲಿ ಕಂಪನಿಯ ಉದ್ಯೋಗಿಗಳಿಗೆ ನೀಡಿ ಆದಾಯದ ಮೂಲವನ್ನು ಹೆಚ್ಚಿಸಿಕೊಂಡಿದ್ದರು. ಆದರೆ, ರಾಷ್ಟ್ರೀಯ ಉದ್ಯಾನವನ ಘೋಷಣೆಯ ನಂತರ ಹಾಗೂ ಕಂಪನಿಯು ಕಾರ್ಯವನ್ನು ಸ್ಥಗಿತಗೊಳಿಸಿದ ಬಳಿಕೆ ಆದಾಯದ ಮೂಲಗಳಲ್ಲಿ ಆದಂತಹ ಬದಲಾವಣೆ ಮತ್ತು ಹುಲಿ ಯೋಜನೆ ಅನುಷ್ಠಾನಗೊಳ್ಳುವ ದೃಷ್ಟಿಯಿಂದ ಭಗವತಿ ಮತ್ತು ಆವಂತಿ ಸುತ್ತುಗಟ್ಟಿಗಳಿಂದ ಆದಿವಾಸಿಗಳು ಸ್ವಯಂ ಪ್ರೇರಿತವಾಗಿ ಸ್ಥಳಾಂತರಗೊಂಡರು. ಎನ್ನುವ ಸತ್ಯವನ್ನು ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯ ಬಿಳಿಗಲ್ ವಾಸಿತ ಶ್ರೀ ಕೃಷ್ಣ, ಅವರು. ತಿಳಿಸಿಕೊಟ್ಟರು.

ಮಾನವ ಹಕ್ಕುಗಳ ಸಂಘರ್ಷ: ೧೯೪೮ ರಲ್ಲಿ ವಿಶ್ವ ಮಾನವ ಹಕ್ಕುಗಳನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಮುಖಾಂತರ ಡಿಸೆಂಬರ್ ೧೦, ೧೯೪೮ ರಲ್ಲಿ ಜಾರಿತರಲಾಯಿತು. ಆ ಮೂಲಕ ಮಾನವರ ಸರ್ವ ಹಕ್ಕುಗಳನ್ನು ಸಂರಕ್ಷಿಸುವ ಸಲುವಾಗಿ ವಿಶ್ವದಾದ್ಯಂತ ಪ್ರತಿ ರಾಷ್ಟ್ರಗಳು

ಈ ಪ್ರಸ್ತಾವನೆಯನ್ನು ಅಳವಡಿಸಿಕೊಂಡಿವೆ. ಆದರೆ ಇಂದು ಅಭಿವೃದ್ಧಿ ಮತ್ತು ಸಂರಕ್ಷಣೆಯ ಮುಖವಾಡದಲ್ಲಿ ಸ್ಥಳಾಂತರ (ಒಕ್ಕಲೇಳಿಸುವಿಕೆ)ದ ಪ್ರಕ್ರಿಯೆ ಜಾಗತಿಕ ಮಟ್ಟದಲ್ಲಿನ ಮಾನವ ಹಕ್ಕುಗಳ ಸಂಘರ್ಷ ಮತ್ತು ಪರಿಸರದ ವಿಪತ್ತಿನ ಸಂದಿಗ್ಧತೆಯಾಗಿ ಮಾರ್ಪಡುತ್ತಿದೆ. ಆದಿವಾಸಿ ಸಮುದಾಯಗಳು ಸ್ಥಳಾಂತರ (ಒಕ್ಕಲೇಳಿಸಿದ)ದ ಬೆನ್ನಲ್ಲೇ ತಮ್ಮ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಐತಿಹಾಸಿಕ ಜಾಲ ಬಂಧಗಳ ಕೊಂಡಿಗಳನ್ನು ಕಳಚಿಕೊಂಡು, ಅರಿವೆ ಇಲ್ಲದ ಪ್ರದೇಶಗಳಲ್ಲಿ ತಮ್ಮ ಕುಟುಂಬ/ಸಮುದಾಯ ಪರಿವಾರದೊಂದಿಗೆ ನೆಲೆಯೂರುವ ಕಾಲಘಟ್ಟದಲ್ಲಿ ಎದುರಾಗುವ ಆಹಾರ ಅಭದ್ರತೆ, ಸಾಮಾಜಿಕ ವಿಭಜನೆ, ನಿರುದ್ಯೋಗತೆ, ಸಾಮಾಜಿಕ-ಆರ್ಥಿಕ ಮೂಲಗಳಲ್ಲಿ ಅಡಚಣೆ, ಜೀವನೋಪಾಯಗಳಲ್ಲಿ ವಿಘಟನೆಗಳು ಹಾಗೂ ಇತರೆ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡು ಹೊರಬರಲು ಆಗದ ಸ್ಥಿತಿಗಳಲ್ಲಿ ಅವರ ಹಕ್ಕುಗಳು ಉಲ್ಲಂಘನೆಯಾಗುತ್ತವೆ. ಮಹಿಳೆಯರ, ಮಕ್ಕಳ ಮತ್ತು ವೃದ್ಧರ ಸ್ಥಿತಿಗಳಲ್ಲಿ ಯಾವ ಮಟ್ಟಿನ ಬದಲಾವಣೆಗಳಾಗುವವು ಎಂಬುದನ್ನು ಗ್ರಹಿಸಲು ಕೂಡ ಸಾಧ್ಯವಾಗದು. ಈ ನಿಟ್ಟಿನಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಶ್ನೆಯೊಂದಿಗೆ ಬದುಕುವ ಹಕ್ಕಿನ ಪ್ರಾಮುಖ್ಯತೆ ಸಂಘರ್ಷದ ಹಾದಿಯಲ್ಲಿಯೇ ಕಳೆದುಹೋಗುತ್ತದೆ. ಯಾವ ಮೂಲವನ್ನು ಕೆದಕಿದರೆ ಹಕ್ಕುಗಳು ಸಂರಕ್ಷಿತವಾಗುತ್ತವೆ? ಹೇಗೆ? ಎಂಬ ಪ್ರಶ್ನೆಗಳಲ್ಲಿ ಮೂಲಗಳೇ ಗೌಣವಾಗುತ್ತಾ ಸಮಾಧಿಯಾಗಿಬಿಡುತ್ತವೆ.

ಸಮಾರೋಪ

'ಅರಣ್ಯವಾಸಿ' (ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳು) ಸಮುದಾಯಗಳು ವಾಸ್ತವ ನೆಲೆಗಟ್ಟಿನಲ್ಲಿ ಅಭಿವೃದ್ಧಿ ಮತ್ತು ಸಂರಕ್ಷಣೆಯ ಕಾರಣಗಳಿಂದಾಗಿ ಒಕ್ಕಲೆಬ್ಬಿಸುವಿಕೆ ಮತ್ತು ಪುನರ್ವಸತೀಕರಣದ ಪ್ರಕ್ರಿಯೆಯ ನಡುವೆ ಪರಿಸರದೊಂದಿಗಿನ ಹಲವಾರು ಸಂಬಂಧಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಒಕ್ಕಲೇಳುವಿಕೆಗೆ ಕಾರಣವಾಗುವ ಕಾನೂನು ಮತ್ತು ನೀತಿ ರೂಪಕರು ಕ್ಷೇತ್ರದ ವಾಸ್ತವ ಪರಿಸ್ಥಿತಿಗಳನ್ನರಿಯದೇ ಪ್ರಕಲ್ಪಗಳನ್ನು ತಯಾರು ಮಾಡಿ ಅನುಷ್ಠಾನಕ್ಕೆ ಒಳಪಡಿಸುವ ವೇಳೆಯನ್ನು ಮಾತ್ರ ನಿಗಧಿಗೊಳಿಸಿಕೊಳ್ಳುತ್ತಾರೆ. ಆದರೆ ಪ್ರಕಲ್ಪಗಳಿಂದ ನಿಯೋಜಿತ ಪ್ರದೇಶಗಳಲ್ಲಿ ಏರ್ಪಡುವ ಪರಿಣಾಮಗಳನ್ನು ಯಾವ ಅಧಿಕಾರಿಗಳು ಸಹ ಕೊಂಚವೂ ಯೋಚಿಸದ ಸ್ಥಿತಿಯಲ್ಲಿರುತ್ತಾರೆಯೇ? ಎಂಬ ಪ್ರಶ್ನೆ ಮೂಡತೀರದು. ಒಂದು ವೇಳೆ ಅಧಿಕಾರಿಗಳು ಯೋಚಿಸಿದರೂ ಕೂಡ ಬಂಡವಾಳಗಾರನ ಬಂಡವಾಳದ ಮುಂದೆ ಎಲ್ಲಾ ಸನ್ನಿವೇಶಗಳು ಮೂಕ ಸ್ತಬ್ಧವಾಗಿ ನಿಂತುಬಿಡುತ್ತದೆ. ಎಲ್ಲವನ್ನು ಪ್ರಶ್ನೆಮಾಡುವ ಅಧಿಕಾರ ಸ್ಥಳೀಯ ಸಮುದಾಯಗಳಿಗಿದೆ. ಆದರೆ ಆ ಪ್ರಶ್ನೆಗಳು ಪ್ರಭುತ್ವದ ದಪ್ಪ ಚರ್ಮ ಹೊಂದಿರುವ ಜನಪ್ರತಿನಿಧಿಗಳಿಗೆ ಮುಖ್ಯವಾದದ್ದೇ ಎಂಬ ಸತ್ಯವನ್ನು ಸಹ ತಿಳಿಯಲು ಪ್ರಯತ್ನಸದಿರುವುದು ಶೋಚನೀಯ ವ್ಯವಸ್ಥೆಗೆ ಒಂದು ಉತ್ತಮ ಉದಾಹರಣೆಯಾಗಿ ನಿಲ್ಲುತ್ತದೆ. ಹಾಗಾದರೆ, ಕಾನೂನುಗಳಿರುವುದು ಕೇವಲ ಪತ್ರದಲ್ಲಿ ಮಾತ್ರ ಹಾಗೂ ಉಳ್ಳವರ ಕಿಸೆಯಲ್ಲಿ ಎಂಬ ಮಾತುಗಳು ಅಕ್ಷರ ಸಹ ಸತ್ಯವಾದುದಾಗುತ್ತದೆ. ಭಾರತದಲ್ಲಿ ಅಭಿವೃದ್ಧಿಯ ಎರಡು ಬೀಕರ ಚಹರೆಗಳಾದ ಸ್ಥಳಾಂತರ ಮತ್ತು ಪುನರ್ವಸತೀಕರಣಪ್ರಶ್ನಾತೀತ ಪ್ರಕರಣಗಳೇ ಆಗಿ ಆಳವಾದ ಬೇರುಗಳನ್ನೂರಿ ಹೆಮ್ಮರವಾಗಿ ಬೆಳೆದುನಿಂತಿದೆ. ಅಭಿವೃದ್ಧಿ ಕಡೆ

ಸಾಗುತ್ತಿರುವ ನಾವುಗಳು ಒಮ್ಮೆ ಪರಿಸರವನ್ನು ರಕ್ಷಿಸಬೇಕೆನ್ನುವ ಮತ್ತು ಅಭಿವೃದ್ಧಿಯು ಬೇಕೆನ್ನುವ ಎರಡು ದೋಣಿಗಳ ಮೇಲಿನ ಪ್ರಯಾಣ ಗುರಿ ಇಲ್ಲದೆ ಯಾವ ದಿಕ್ಕಿನಡೆ ಸಾಗುತ್ತಿದ್ದೇವೆ ಎಂಬ ಪ್ರಶ್ನೆಯನ್ನು ನಾವು ಹಾಕಿಕೊಳ್ಳಬೇಕಿದೆ.

ಅಡಿ ಟಿಪ್ಪಣಿಗಳು

೦೧. ಮೈತ್ರಿ ಕೆ.ಎಂ. ಬುಡಕಟ್ಟು ಕುಲಕಸುಬುಗಳು. ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ೨೦೦೨. ಪ್ರಸ್ತಾವನೆ ವಿಶ್ವ ಮೂಲಿಗರ ವಿಕಸನದ ಚರಿತ್ರೆ

೦೨. ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, ೨೦೦೭. (೨೦೦೭ ರ ಅಧಿನಿಯಮ ಸಂ.೨) [೨೫ನೇ ಏಪ್ರಿಲ್, ೨೦೧೧ ರಂದು ಜಾರಿಯಲ್ಲಿದ್ದಂತೆ], ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ. ೨೦೧೧.

೦೩. ಶಂಕರ್‌ರಾವ್ ಚ.ನ. ಭಾರತೀಯ ಸಮಾಜದ ಅಧ್ಯಯನ. ಸಂಪುಟ ೨, ಜೈಭಾರತ ಪ್ರಕಾಶನ, ಮಂಗಳೂರು. ೧೯೯೮. ಪು. ಸಂ ೧೯೦, ೧೯೧.

೦೪. ಶಂಕರ್‌ರಾವ್ ಚ.ನ. ಭಾರತೀಯ ಸಮಾಜದ ಅಧ್ಯಯನ. ಸಂಪುಟ ೨, ಜೈಭಾರತ ಪ್ರಕಾಶನ, ಮಂಗಳೂರು. ೧೯೯೮. ಪು. ಸಂ ೧೯೨.

೦೫. Henry Frowde, The Imperial Gazetteer of India, The Indian Empire Vol I, Oxford Press, 1909. (Social devisions: The Tribe. Page No 308).

೦೬. http://www.bbc.com/future/story/20170412-is-the-world-running-out-of-fresh-water

೦೭. https://data.worldbank.org/indicator/AG.LND.FRST.ZS?end=2015&start=1990&view=chart

೦೮. https://en.wikipedia.org/wiki/Forestry_in_India#Forestry_in_India_from_1947_to_1990

೦೯. https://en.wikipedia.org/wiki/Conservation_in_India.

೧೦. https://web.archive.org/web/20140328144411/http://www.cs.colostate.edu/~malaiya/ashoka.html

೧೧. http://shodhganga.inflibnet.ac.in/bitstream/10603/61801/8/08_chapter%202.pdf

೧೨. ಭಾರತ ಸರ್ಕಾರದ ಪರವಾಗಿ, ಕರ್ನಾಟಕ ಸರ್ಕಾರದಿಂದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ. ೨೦೧೧. ವನ್ಯಜೀವಿ (ರಕ್ಷಣಾ) ಅಧಿನಿಯಮ, ೧೯೭೨ (೧೯೭೨ ರ ಅಧಿನಿಯಮ ಸಂಖ್ಯೆ ೫೩) [೧ನೇ ಮೇ, ೨೦೧೧ ರಂದು ಜಾರಿಯಲ್ಲಿದ್ದಂತೆ] (ಪು.. ಸಂ ೨,೩೪,೧೪,೨೧)

೧೩. http://www.wiienvis.nic.in/Database/Protected_Area_854.aspx

೧೪. http://www.thehindu.com/todays-paper/tp-national/tp-karnataka/a-mere-ban-on-acacia-is-not-enough- greens/article3801621.ece

೧೫. Chris Williams, Marxism and the environment, An expert from the new Ecology and Socialism. International Socialist Review. (https://isreview.org/issue/72/marxism-and-environment).

೧೬. http://shodhganga.inflibnet.ac.in/bitstream/10603/126508/7/07_introduction.pdf

೧೭. http://shodhganga.inflibnet.ac.in/bitstream/10603/42080/16/16_chapter3.pdf

೧೮. http://shodhganga.inflibnet.ac.in/bitstream/10603/42080/16/16_chapter3.pdf, The Impact of Displacement (page no 74).

೧೯. http://forcedmigration.org/research-resources/expert- guides/development-induced-displacement-and- esettlement/fmo022.pdf

೨೦. https://commdev.org/wp-content/uploads/2015/06/Impoverishment-Risks-Risk-Management-and-Reconstruction.pdf

೨೧. http://www.prsindia.org/uploads/media/Land%20and%20R%20and%20R/Bill%20Summary%20-%20LARR%20Bill%202015.pdf

೨೨. www.deccma.com (History of resettlement and rehabilitation in India)

೨೩. Jagadeesan S. and Dinesh kumar M., The Sardar Sarovar Project, Foreword.

೨೪. RAVI SHARMA, Despair of the displaced, Volume 20 - Issue 26, December 20, 2003 - January 02, 2004, India's National Magazine, from the publishers of THE HINDU.

೨೫. Antoine Lasgorceix, Ashish Kothari, Displacement and Relocation of Protected Areas: A Synthesis and Analysis of Case Studies

೨೬. https://www.ncbi.nlm.nih.gov/pmc/articles/PMC2241754/ (DISPLACEMENT AND HEALTH STATUS IN LOW INCOME WOMEN: FINDINGS FROM A POPULATION-BASED STUDY IN GREATER BEIRUT Nathalie UChoueiry, MSc and Marwan Khawaja, PhD

೨೭. Dr. M. Romesh Singh, Mining and Its Impact on Tribals in India: Socio - Economic and Environmental Risks, International Journal of Social Science and Humanities Research, Vol. 3, Issue 2, pp: (429-439), Month: April - June 2015,

೨೮. Michael M. Cernea, Impoverishment Risks, Risk Management, and Reconstruction: A Model of Population Displacement and Resettlement.

೨೯. ಸಂದರ್ಶನ: ಶ್ರೀ ಮುಯ್ಯುದ್ಧೀನ್, ಮುತ್ತೂಡಿ ಅರಣ್ಯ ಪ್ರದೇಶದಿಂದ ರಾಷ್ಟ್ರೀಯ ಹುಲಿ ಯೋಜನೆ ಅಡಿ, ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕು, ಎಂ.ಸಿ ಹಳ್ಳಿಗೆ ಸ್ಥಳಾಂತರಗೊಂಡವರು.

ಅಧ್ಯಾಯ ೩

ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಸ್ಥಳಾಂತರ ಮತ್ತು ಪುನರ್ವಸತೀಕರಣ ಕಾರ್ಯಕ್ರಮ

ವಿಷಯಗಳು

೦೧. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಇತಿಹಾಸ
೦೨. ಪರಿಸರ ಮತ್ತು ವನ್ಯಜೀವಿಗಳು
೦೩. ಮಾನವರ ವಾಸಸ್ಥಾನ ಮತ್ತು ಆರ್ಥಿಕತೆ
೦೪. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಆಡಳಿತ
೦೫. ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಅಭಿವೃದ್ಧಿ ಯೋಜನೆ ಸೂಕ್ಷ್ಮ ಯೋಜನೆ
೦೬. ಕುದುರೆಮುಖ ಗಣಿಗಾರಿಕೆ
೦೭. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಪುನರ್ವಸತೀಕರಣ ಯೋಜನೆ ಅನುಷ್ಠಾನ
೦೮. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಘೋಷಣಾ ಸಮಸ್ಯೆ
೦೯. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ
೧೦. ಪುನರ್ವಸತೀಕರಣ ಯೋಜನೆಯ ಅನುಷ್ಠಾನದ ಕರ್ತೃಗಳು
೧೧. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಯೋಜನೆಯ ಅನುಷ್ಠಾನದಲ್ಲಿ ಸ್ಥಳಾಂತರ ಮತ್ತು ಪುನರ್ವಸತೀಕರಣದ ಸವಾಲುಗಳು
೧೨. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸ್ಥಳಾಂತರ ಮತ್ತು ಪುನರ್ವಸತೀಕರಣದ ಸಾಂಖಿಕ ವಿವರಗಳು.
ಸಮಾರೋಪ

A blinkered vision of development, complete apathy towards those who are highly adversely affected by the development process and a cynical unconcern for the enforcement of the laws lead to a situation where the rights and benefits promised and guaranteed under the Constitution hardly ever reach the most marginalized citizens.

" Dr. B.R. Ambedkar in the Constituent Assembly on November 25, 1949.

ಅಧ್ಯಾಯ ೩

ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಸ್ಥಳಾಂತರ ಮತ್ತು ಪುನರ್ವಸತೀಕರಣ ಕಾರ್ಯಕ್ರಮ

ವಿಶ್ವವ್ಯಾಪಿಯಾಗಿ ಆವರಿಸಿರುವ ಜಾಗತೀಕರಣದ ಪರಿಣಾಮ ಈಗ ಎಲ್ಲಾ ರೈತರನ್ನು ತಟ್ಟುತ್ತಿದೆ. ಕಾಡಿನ ನಡುವೆ ಒಂದಿಷ್ಟು ಕೃಷಿ ಮಾಡಿಕೊಂಡು ನೆಮ್ಮದಿಯಿಂದ ಬದುಕುತ್ತಿದ್ದ ರೈತರನ್ನು ಒಂದಲ್ಲಾ ಒಂದು ಸಮಸ್ಯೆ ಕಾಡುತ್ತಾ ಬರುತ್ತಿದೆ. ಕುದುರೆಮುಖ ಗಣಿಗಾರಿಕೆ, ಕುದುರೆಮುಖ ರಾಷ್ಟ್ರೀಯ ಉದ್ಯಾನವನ ರಚನೆ ಹೀಗೆ ಹಲವು ಸಮಸ್ಯೆಗಳು ಮೇಲಿಂದ ಮೇಲೆ ಆರಂಭವಾಗುವುದರೊಂದಿಗೆ ದಿನವಹಿ ಜೀವನದ ಸಾಗುವಿಕೆ ಆತಂಕದಲ್ಲಿ ದೂಡುವ ಪರಿಸ್ಥಿತಿಯನ್ನು ಅವಲಂಬಿಸಿದೆ. ಅಂದು ಜೀವನೋಪಾಯಕ್ಕಾಗಿ ಅರಣ್ಯ ಪ್ರದೇಶಗಳನ್ನು ಆಶ್ರಯಿಸಿಕೊಂಡು ಬದುಕು ಕಟ್ಟಿಕೊಂಡವರು, ಜಾಗತೀಕರಣದ ಫಲವಾಗಿ ಇಂದು ಒತ್ತುವರಿಯನ್ನು ತೆರವುಗೊಳಿಸುವ ಆದೇಶವನ್ನು ನ್ಯಾಯಲಯಗಳಿಂದ ಪಡೆಯುವಂತಾಗಿದೆ. ಇದರ ಸಮಗ್ರ ಉದ್ದೇಶ ಇಷ್ಟೆ 'ಅರಣ್ಯಗಳನ್ನು ಕಸಿದುಕೊಳ್ಳುವುದು'. ಅರಣ್ಯವನ್ನು ಕಸಿದುಕೊಳ್ಳುವುದು ಇಂದಿಗೆ ಹೊಸತಾಗಿಲ್ಲದಿದ್ದರೂ, ನಮ್ಮನ್ನ ಆಳಿದ ಬ್ರಿಟೀಷ್ ಕಾಲದಿಂದಲೂ ಒಂದಲ್ಲ ಒಂದು ಯೋಜನೆ ಜಾರಿಗೆ ತರುವ ಮುಖಾಂತರ ನಿಯಂತ್ರಣಕ್ಕೆ ತಂದಿಡುವ ಉನ್ನಾರಗಳು ನಡೆದುಕೊಂಡು ಬಂದಿವೆ. ಅರಣ್ಯಗಳ ನಡುವೆ ವಾಸವಾಗಿರುವ ಜನರು ಅರಣ್ಯಗಳೊಂದಿಗೆ ಸಹಬಾಳ್ವೆಯನ್ನು ನಡೆಸಿಕೊಂಡು ಬಂದಿದ್ದಾರೆ. ಅತಣ್ಯವನ್ನು ರಕ್ಷಣೆ ಮಾಡಿದ್ದಾರೆ. ಆದರೆ, ಅರಣ್ಯವನ್ನು ಸಂಪನ್ಮೂಲದಂತೆ ನೋಡಿದ ಪ್ರಭುತ್ವ ತನ್ನ ಲಾಭಕ್ಕಾಗಿ ಬೇಕಾಬಿಟ್ಟಿ ಕಾಡು ನಾಶಮಾಡಿದ್ದನ್ನು ಇತಿಹಾಸದಿಂದ ತಿಳಿಯಬಹುದು. ಇಂದು ಅಭಿವೃದ್ಧಿಯ ಪಥದೆಡೆ ಸಾಗುತ್ತಿರುವ ನಾವು ಅರಣ್ಯ ನಾಶವನ್ನು ನೇರವಾಗಿ ಕಾಣಲುಬಹುದು. ಈ ವನಗಳ ನಾಶಕ್ಕೆ ಕಾರಣ ಪ್ರಭುತ್ವವೇ ಹೊರತು, ಅರಣ್ಯಗಳ ಸಂರಕ್ಷಣೆ ಮಾಡಿಕೊಂಡು, ಜೀವನದ ಬದುಕು ಕಟ್ಟಿಕೊಂಡಿರುವ ಅರಣ್ಯವಾಸಿಗಳಲ್ಲ.

ಆದಿ ಕಾಲದಿಂದಲೂ ತಲಾಂತರದಿಂದ ಅರಣ್ಯ ಪ್ರದೇಶಗಳನ್ನು ಆಶ್ರಯಿಸಿ ಬದುಕು ಕಟ್ಟಿಕೊಂಡಿರುವ ಅರಣ್ಯವಾಸಿಗಳಿಗೆ ಪ್ರಭುತ್ವದ ವತಿಯಿಂದ ಸರಿಯಾದ ದಾಖಲೆಗಳನ್ನು ನೀಡದೆ ವಂಚಿಸಲಾಗಿದೆ. ಅರಣ್ಯ ಇಲಾಖೆ ತನ್ನ ಜಾಗದ ಗಡಿಯನ್ನು ಸರಿಯಾಗಿ ಗುರುತಿಸದೇ ಜನರನ್ನು ವಂಚಿಸಿದೆ. ಅರಣ್ಯದ ಮಧ್ಯ ಪ್ರದೇಶಗಳಲ್ಲಿ ಜನರು ವಾಸವಿದ್ದರೂ, 'ಇಲ್ಲಿ ಜನವಸತಿ ಇಲ್ಲ' ಎಂದು ಹೇಳಿ ದಾಖಲೆ ಸೃಷ್ಟಿಸಿದೆ. ಸರಿಯಾದ ನಕ್ಷೆಗಳನ್ನು ದಾಖಲೆಗಳನ್ನು ತಯಾರಿಸದೆ ಈಗ ದೊಡ್ಡ ಸಮಸ್ಯೆಯನ್ನು ಸೃಷ್ಟಿಸಿದೆ. '೧೯೭೭ರ ಕ್ಕಿಂತ ಹಿಂದೆ ಒತ್ತುವರಿ ಮಾಡಿಕೊಂಡವರಿಗೆ ಜಾಗ ಮಂಜೂರುಮಾಡಬೇಕೆಂದು ಸುಪ್ರೀಂ ಕೋರ್ಟ್ ಆದೇಶ ನೀಡಿದ್ದರೂ ಅದನ್ನು ಸರ್ಕಾರವೇ ಉಲ್ಲಂಘಿಸಿ, ಭೂಮಿಯನ್ನೇ ನಂಬಿದ್ದ ಜನರಿಗೆ ಭೂಮಿ ದೊರೆಯದಂತೆ ಮಾಡಿದೆ. ಇಂದು ಈ ಸಮಸ್ಯೆಯು ಬೃಹದಾಕಾರವಾಗಿ ಬೆಳೆಯಲು, ಸರಿಯಾಗಿ ಹಕ್ಕು ಪತ್ರ ನೀಡದೇ ಇರುವುದು ಮತ್ತು ಭೂಮಿತಿ ಕಾಯಿದೆಯನ್ನು ಜಾರಿಗೆ ತಂದಿರುವುದೇ ಕಾರಣ[೧]. ಒಟ್ಟಾರೆಯಾಗಿ ಜಾಗತೀಕರಣದ ಫಲವಾಗಿ ಇಂದು ನಮ್ಮ ದೇಶದ ಅರಣ್ಯವಾಸಿ ಸಮುದಾಯಗಳು ಅನೇಕ ಸಮಸ್ಯೆಗಳಲ್ಲಿ

ಸಿಲುಕಿಕೊಂಡಿವೆ. ಪ್ರಜಾಪ್ರಭುತ್ವದ ಹಾದಿಯಲ್ಲಿ ಪ್ರಜೆಗಳಿಂದ, ಪ್ರಜೆಗಳಿಗಾಗಿ ಮತ್ತು ಪ್ರಜೆಗಳಿಗೋಸ್ಕರ ಸಿದ್ಧವಾಗಬೇಕಿದ್ದ ಕಾನೂನುಗಳು, ಸಾಮಾಜಿಕ–ಸಾಂಸ್ಕೃತಿಕ ತಳಹದಿಯೇ ತಿಳಿಯದಿರದ ಅನ್ಯ ದೇಶಿಗರ ಬಂಡವಾಳಕ್ಕೆ ಸೋತು ಅವರು ನಿರ್ಣಯಿಸಿದ ಕಾನೂನುಗಳನ್ನು ಜಾರಿ ತರಲು ಮುಂದಾಗಿರುವುದು ಸೋಜಿಗದ ಸಂಗತಿಯಾಗಿದೆ.

ಭೂ ಹಿಡುವಳಿ ಕುರಿತಂತೆ ಭೂಮಿಯ ಹಕ್ಕಿಗಾಗಿ ಹಿಂದಿನಿಂದಲೂ ಹಲವಾರು ಬಗೆಯ ಹೋರಾಟಗಳು ನಮ್ಮ ಭಾರತೀಯ ಇತಿಹಾಸದಲ್ಲಿ ಗತಿಸಿದೆ. ತಲತಲಾಂತರದಿಂದಲೂ ಅರಣ್ಯಗಳನ್ನು ಆಶ್ರಯಿಸಿಕೊಂಡು ಬಂದಿರುವ ಅರಣ್ಯವಾಸಿಗಳ ಬಹುಪಾಲು ಜೀವನವು ಭೂ ಹಕ್ಕನ್ನು ತನ್ನದಾಗಿಸಿಕೊಳ್ಳುವ ನಿಟ್ಟಿನಲ್ಲಿಯೇ ಸಾಗಿ ಹೋಗಿದೆ ಮತ್ತು ಸಾಗುತ್ತಿದೆ. ಅರಣ್ಯ ವ್ಯಾಪ್ತಿ ಪ್ರದೇಶಗಳಲ್ಲಿ ವಾಸವಿರುವ ಅರಣ್ಯವಾಸಿಗಳು ಬಗರ್ ಹುಕುಂ ಸಾಗುವಳಿಯನ್ನು ಪೂರ್ವಜರ ಕಾಲದಿಂದಲೂ ವಂಶ ಪರಂಪರೆಯಲ್ಲಿ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಆದರೆ, ಪ್ರಭುತ್ವದ ಮುಖೇನ ಇಂತಹ ಸಾಗುವಳಿದಾರರಿಗೆ ಹಕ್ಕುಪತ್ರವನ್ನು ನೀಡವೇಕಾಗಿರುವುದು ಸಾಮಾಜಿಕ ನ್ಯಾಯದ ಕರ್ತವ್ಯವಾಗಿದೆ. ಈ ಕರ್ತವ್ಯವನ್ನು ಮಾಡದೆ ಅರಣ್ಯವಾಸಿಗಳ ಹಕ್ಕನ್ನೇ ಕಸಿದುಕೊಳ್ಳಲು ಮುಂದಾಗಿರುವ ಪ್ರಭುತ್ವದ ವಿರುದ್ಧ ಹೋರಾಟ ಮಾಡಬೇಕಾಗಿರುವುದು ಅನಿವಾರ್ಯತೆಯಾಗಿದೆ.

ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಯ ನಿಟ್ಟಿನಲ್ಲಿ ವಿದೇಶಿ ನಿಧಿಗಳನ್ನು ಬಳಸಿಕೊಂಡು ಹಲವಾರು ಎನ್‌ಜಿಓಗಳು ಅರಣ್ಯ ವ್ಯಾಪ್ತಿಯಲ್ಲಿ ಅರಣ್ಯವಾಸಿಗಳನ್ನು ವಿವಿಧ ಆಮಿಷಗಳನ್ನು ಒಡ್ಡಿ ಒಕ್ಕಲೇಳಿಸುವ ಹುನ್ನಾರವನ್ನು ನಡೆಸುತ್ತಿವೆ. ಇದರೊಂದಿಗೆ ಪ್ರಭುತ್ವವೇ ನಿರ್ಧರಿಸದ ಅನೇಕ ರೀತಿಯ ಸಂರಕ್ಷಣಾ ನೀತಿಯನ್ನು ಮತ್ತು ಯೋಜನೆಗಳನ್ನು ಸ್ವಯುತ್ತವಾಗಿ ಜಾರಿಗೆ ತರುವುದರೊಂದಿಗೆ, ಅಲ್ಲಿನ ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುತ್ತಿವೆ. ಒಕ್ಕಲೆದ್ದ ಅರಣ್ಯವಾಸಿಗಳು ಅನಿವಾರ್ಯವಾಗಿ ಬೇರೆ ಸ್ಥಳಗಳಿಗೆ ಸ್ಥಾನೀಕರಣಗೊಳ್ಳುವುದರೊಂದಿಗೆ ಅಲ್ಲಿನ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಲಾರದೆ, ಸಾಮಾಜಿಕ ವಿಘಟನೆಯ ಸನ್ನಿವೇಶಗಳಲ್ಲಿ ನಿಲ್ಲುವಂತಾಗಿದೆ. ಅರಣ್ಯದಲ್ಲಿ ದೊರೆಯುವ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ, ಮಳೆ ಆಧಾರಿತ ಕೃಷಿಯಲ್ಲಿ ದೊರೆಯುವ ಅಲ್ಪ ಹಣದ ಮುಖಾಂತರ ತಮ್ಮ ಆರ್ಥಿಕತೆಯನ್ನು ಹೆಚ್ಚಿಸಿಕೊಂಡಿದ್ದ ಅರಣ್ಯವಾಸಿಗಳು, ಹೊರ ಪ್ರಪಂಚದಲ್ಲಿ ಕೂಲಿಗಾಗಿ ಕೈ ಒಡ್ಡುವ ಸ್ಥಿತಿಯನ್ನು ಹೊಂದುವಂತಾಗಿದೆ. ಈ ನಿಟ್ಟಿನಲ್ಲಿ ವಿವೇಚನಯುಕ್ತವಾದ ಸಾಂಘಿಕ ಹೋರಾಟ ಅರಣ್ಯವಾಸಿಗಳಿಗೆ ಇಂದು ಅನಿವಾರ್ಯವಾಗಿ ಪರಿಣಮಿಸಿದೆ.

ಭಾರತ ದೇಶವು ಹೊಂದಿರುವ ಸಂಪನ್ಮೂಲಗಳಲ್ಲಿ ಅತ್ಯಮೂಲ್ಯವಾದ ನೈಸರ್ಗಿಕ ಕೊಡುಗೆಗಳೆಂದರೆ, ಅದು ಅರಣ್ಯ ಪ್ರದೇಶಗಳು. ಪ್ರಪಂಚದಲ್ಲಿ ಅಮೂಲ್ಯವಾದ ಜೀವವೈವಿಧ್ಯತೆಗೆ ಹೆಸರಾದ ೧೮ ಕ್ಷೇತ್ರಗಳಲ್ಲಿ ಭಾರತ ದೇಶದ ನಮ್ಮ ನಾಡಿನ "ಪಶ್ಚಿಮ ಘಟ್ಟ" ಪ್ರದೇಶವೂ ಒಂದು ಎಂಬುದನ್ನು ವಿಶ್ವ ವನ್ಯಜೀವಿ ನಿಧಿ ಸಂಸ್ಥೆ ಗುರುತಿಸಿದೆ. ಈ ಪ್ರದೇಶಗಳು ಸದಾ ಹಚ್ಚ ಹಸಿರಾದ ಮಳೆಯ ಕಾಡಿಗೆ, ಎತ್ತರದ ಹುಲ್ಲುಗಾವಲುಗಳಿಗೆ, ವೈವಿಧ್ಯಮಯ ಸಸ್ಯ ಪ್ರಭೇದಗಳಿಗೆ, ಅಪರೂಪದ ಕೀಟ, ಪಕ್ಷಿ ಮತ್ತು ಕಾಡು ಪ್ರಾಣಿಗಳಿಗೆ ಆವಾಸಸ್ಥಾನವಾಗಿದೆ. ಅಂತವುಗಳಲ್ಲಿ ಕೆಲವು ಪ್ರಪಂಚದ

ಯಾವ ಪ್ರದೇಶದಲ್ಲೂ ದೊರೆಯದ, ಪಶ್ಚಿಮ ಘಟ್ಟ ಪ್ರದೇಶದಲ್ಲಿ ಮಾತ್ರ ದೊರಕುವ ಪ್ರಭೇದಗಳು. ಈ ಪ್ರದೇಶದಲ್ಲಿರುವ ನಿತ್ಯ ಹರಿದ್ವರ್ಣ ಕಾಡುಗಳು, ಶೋಲಾ ಕಾಡುಗಳು ಮತ್ತು ಹುಲ್ಲುಗಾವಲುಗಳು, ಇಲ್ಲಿ ದೊಡ್ಡ ಪ್ರಮಾಣದಲ್ಲಿ ಬೀಳುವ ಮಳೆಯ (ವರ್ಷಕ್ಕೆ ೮೫೦೦ ಮಿ.ಮೀ) ನೀರನ್ನು ಹಿಡಿದಿಟ್ಟುಕೊಂಡು ಸಾವಿರಾರು ಝುರಿಗಳಿಗೆ, ತುಂಗಾ, ಭದ್ರಾ ಮತ್ತು ನೇತ್ರಾವತಿ ನದಿಗಳಿಗೆ ನೀರನ್ನು ತುಂಬಿಕೊಡುತ್ತದೆ. ಲಕ್ಷಾಂತರ ಜನಗಳು ಈ ನೀರನ್ನು ಅವಲಂಬಿಸಿ ತಮ್ಮ ಜೀವವನ್ನು ನಡೆಸುತ್ತಿದ್ದಾರೆ. (Murari Ballal (E), Dr. Nagraj A.N, ೨೦೦೨)[೨].

ಕುದುರೆಮುಖ ಅರಣ್ಯ ಪ್ರದೇಶ ಕರ್ನಾಟಕ ರಾಜ್ಯದ ಪಶ್ಚಿಮಘಟ್ಟಗಳ ಹೃದಯ, ನಮ್ಮ ರಾಜ್ಯದ ಬಹುಮುಖ್ಯವಾದ ಎಲ್ಲಾ ಜೀವನದಿಗಳಿಗೂ ಪಶ್ಚಿಮಘಟ್ಟಗಳ ಅತಿ ಸೂಕ್ಷ್ಮವಾದ ಜೈವಿಕಾರಣ್ಯ ಪ್ರದೇಶಗಳಲ್ಲಿ ಉದ್ಭವವಾಗುತ್ತವೆ. ಈ ಪ್ರದೇಶದಲ್ಲಿ ಭದ್ರಾ, ತುಂಗ ಮತ್ತು ನೇತ್ರಾವತಿ ಈ ಮೂರು ನದಿಗಳೂ ಕರ್ನಾಟಕದ ಜೀವಾಳವಾಗಿದೆಯಲ್ಲದೆ ತಮ್ಮದೇ ಆದ ಸಾಂಸ್ಕೃತಿಕ ಹಿನ್ನೆಲೆಯಿಂದಲೂ, ಪಾವಿತ್ರ್ಯತೆಯಿಂದಲೂ ಕೂಡಿವೆ. ಈ ಪ್ರದೇಶವು ೭೦೦೦ ಮಿ.ಮೀ ನಿಂದ ೯-೧೦ ಸಾವಿರ ಮಿ.ಮೀ ಮಳೆ ಧಾರಾಕಾರವಾಗಿ ಬೀಳುವಂತಹ ಪ್ರದೇಶವಾಗಿದೆ. ಈ ಮಳೆ ನೀರು ಈ ಪ್ರದೇಶದ ಭೂಮಿಯ ಮೇಲೆ ಬೀಳುವಾಗ ಅತಿ ವೇಗವಾಗಿ, ಧಾರಾಕಾರವಾಗಿ ದಿನಗಟ್ಟಲೆ ಸುರಿಯುತ್ತಿದೆ. ಈ ಮಳೆಯ ರಭಸವನ್ನು ತಡೆದು ನೀರನ್ನು ಹಿಂಗಿಸಿ ಜೀವನದಿಗಳಾಗಿ ಮಾರ್ಪಡಿಸತಕ್ಕ ಅದ್ಭುತವಾದಂತಹ, ಇಲ್ಲಿನ ಜೈವಿಕ ವ್ಯವಸ್ಥೆ ನೈಸರ್ಗಿಕವಾದುದು[೩].

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಕರ್ನಾಟಕ ರಾಜ್ಯದ ಐದು ರಾಷ್ಟ್ರೀಯ ಉದ್ಯಾನಗಳಲ್ಲಿ ಒಂದಾಗಿರುವ ಈ ಪ್ರದೇಶವು ೧೯೮೭ ರಲ್ಲಿ ರಾಷ್ಟ್ರೀಯ ಉದ್ಯಾನವನವೆಂದು ಘೋಷಣೆಯಾಗುವುದರೊಂದಿಗೆ ೬೦೦.೩೨ ಕಿ.ಮೀ^{೨} ನಲ್ಲಿ ವಿಸ್ತರಣೆಗೊಂಡಿದೆ. ಈ ಉದ್ಯಾನವನವು ರಾಜ್ಯದ ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ತಾಲ್ಲೂಕುಗಳಲ್ಲಿ ಗಡಿಗಳನ್ನು ವಿಸ್ತರಿಸಿಕೊಂಡಿದೆ.

STATEMENT SHOWING THE LEGAL STATUS OF NATIONAL PARKS/WILDLIFE SANCTUARIES/CONSERVATION & COMMUNITY RESERVES OF KARNATAKA AS ON September - 2012 FINAL NOTIFICATION STAGES OF NATIONAL PARKS / WILDLIFE SANCTUARIES[4].

ಕುದುರೆಮುಖ ರಾಷ್ಟ್ರೀಯ ಉದ್ಯಾನವನ್ನು, G.O.No.AHFF.42.FWG.87, ೧೯೭೨ ರ ವನ್ಯಜೀವಿ (ರಕ್ಷಣಾ) ಅಧಿನಿಯಮದ ಪ್ರಕಾರ ಸೆಕ್ಷನ್ ೩೫ (೧), ೦೨-೦೯-೧೯೮೭ ರಲ್ಲಿ ಪ್ರಾಥಮಿಕ ಸೂಚನೆಯನ್ನು ೬೦೦.೫೭೦, ಸೆಕ್ಷನ್ ೩೫ (೪) ೦೯-೦೧-೨೦೦೭ ರಲ್ಲಿ ಎರಡನೇ ಬಾರಿಗೆ ಹಾಗೂ G.O.No. FEE.270.FWL.99, ಸೆಕ್ಷನ್ ೩೫ (೮) ರಂತೆ ೧೬-೦೬-೨೦೦೧ ರಂತೆ ಅಂತಿಮ ಸೂಚನೆ ನೀಡುವ ಮುಖಾಂತರ ರಾಷ್ಟ್ರೀಯ ಉದ್ಯಾನವನವೆಂದು ಘೋಷಿಸಲಾಗಿದೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ಉತ್ತರ ದಿಕ್ಕಿಗೆ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಯ ಗಡಿಗಳು ಹಾದು ಹೋಗುವ ಪ್ರದೇಶವಾದ ನರಸಿಂಹ ಪರ್ವತ ಅರಣ್ಯ ಪ್ರದೇಶವು ತುಂಗಭದ್ರಾ ಅರಣ್ಯ ಪ್ರದೇಶದ ಗಡಿಗಳಲ್ಲಿ ಸಂಧಿಸಿಕೊಂಡು ವಿಸ್ತಾರಗೊಂಡಿದೆ. ಪಶ್ಚಿಮ ದಿಕ್ಕಿನಲ್ಲಿ ನಾರಾವಿ ರಾಜ್ಯ ಅರಣ್ಯ ಪ್ರದೇಶದೊಂದಿಗೆ ತುಂಗಭದ್ರಾ ರಾಜ್ಯ ಅರಣ್ಯ ಪ್ರದೇಶ ಮತ್ತು ಭದ್ರಾ ರಾಜ್ಯ ಅರಣ್ಯ ಪ್ರದೇಶಗಳೊಂದಿಗೆ ವಿಸ್ತರಿಸಿಕೊಂಡಿದೆ. ದಕ್ಷಿಣ ದಿಕ್ಕಿನಲ್ಲಿ ನಾರಾವಿ ರಾಜ್ಯ ಅರಣ್ಯ ಪ್ರದೇಶವು, ಪೂರ್ವ ದಿಕ್ಕಿನಲ್ಲಿ ನಾರಾವಿ ರಾಜ್ಯ ಅರಣ್ಯದೊಂದಿಗೆ ಪೂರ್ವದ ಅಂಡಾರು ಕಾಯ್ದಿರಿಸಿದ ಅರಣ್ಯ ಪ್ರದೇಶ ಮತ್ತು ಸುಳಿಗೊಡ್ಲು ಹೊಳೆ ಮತ್ತು ಆರಂಭ ಗಡಿವರೆಗೂ ವಿಸ್ತರಿಸಿಕೊಂಡಿದೆ. ಈ ಉದ್ಯಾನವನವು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ನಾರಾವಿ ಮತ್ತು ಅಂಡಾರು ರಾಜ್ಯ ಅರಣ್ಯ ಪ್ರದೇಶ ಮತ್ತು ಚಿಕ್ಕಮಗಳೂರು ಜಿಲ್ಲೆಯ ನರಸಿಂಹ ಪರ್ವತ ಅರಣ್ಯ ಪ್ರದೇಶ, ತುಂಗಭದ್ರಾ ರಾಜ್ಯ ಅರಣ್ಯ ಪ್ರದೇಶ ಮತ್ತು ಭದ್ರಾ ರಾಜ್ಯ ಅರಣ್ಯ ಪ್ರದೇಶಗಳನ್ನು ಒಳಗೊಂಡಿದ್ದು, ಚಿಕ್ಕಮಗಳೂರು ಜಿಲ್ಲೆ ವ್ಯಾಪ್ತಿಯ ೩೨೦೩.೫೫ ಹೆಕ್ಟೇರ್ ಕುದುರೆಮುಖ ಕಬ್ಬಿಣ ಅದಿರು ಕಂಪನಿಯ ಹಳೆಯ ಪರವಾನಗಿ ಪ್ರದೇಶಗಳನ್ನೊಳಗೊಂಡಂತೆ ಉ ೧೩° ೧೫' ೦೦" ೪೭೪೫.೯ ಮಿ ಇಂದ ಉ ೧೩° ೧೩' ೨೩" ಪೂ ೭೫° ೧೨' ೫೦" , ೬೫೭೪.೯ ಮಿ, ಉ ೧೩° ೧೦' ೧೦", ಪೂ ೭೫° ೧೪' ೦೦", ಈ ಬಿಂದುವಿನಿಂದ ೪೨೧೦.೩ ಮಿ ಇಂದ ಉ ೧೩° ೯' ೪೪", ಪೂ ೭೫° ೧೬' ೨೨" ಈ ಬಿಂದುವಿನಿಂದ ೫೪೦೦.೯ ಮಿ ಇಂದ ಬಿಂದು ಉ ೧೩° ೧೨' ೩೩", ಪೂ ೭೫° ೧೭' ೦೦" ಬಿಂದುವಿನಿಂದ ಮೊದಲ ಬಿಂದು ೫೭೨೧.೧ ಮೀ (೪೬೦೫ ಹೆಕ್ಟೇರ್) ಮತ್ತು ಲಕ್ಯಾ ಅಣೆಕಟ್ಟು ಪ್ರದೇಶದ (೫೦೦ ಹೆಕ್ಟೇರ್) ಒಟ್ಟು ೫೧೦೫ ಹೆಕ್ಟೇರ್ ಪ್ರದೇಶವನ್ನು ಒಳಗೊಂಡಿದೆ[೫].

೧. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಇತಿಹಾಸ

ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ತನ್ನಲ್ಲಿ ಒಳಗೊಂಡಿರುವ ಹಲವಾರು ಕುರಹುಗಳ ಆಧಾರಿತವಾಗಿ ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಒಳಭಾಗದಲ್ಲಿ ದೊರೆತಿರುವ ಕೆಲವು ವೀರಗಲ್ಲುಗಳು ರಾಜ ಮಹಾರಾಜರ ಆಳ್ವಿಕೆ ಇತ್ತೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಮೂಲತಃ ಉದ್ಯಾನವನ ರಚನೆಯಾಗುವುದಕ್ಕೂ ಪೂರ್ವದಲ್ಲಿ ವಿವಿಧ ಜಿಲ್ಲೆಗಳ ಗಡಿ ಭಾಗದಲ್ಲಿ ಹಂಚಿ ಹೋಗಿತ್ತು. ಆ ಕಾಲದಲ್ಲಿ ಜೈನ ಪರಂಪರೆಯನ್ನು ಸಾರುವ ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಭಾಗಗಳನ್ನು ಆಧರಿಸಿ ಈಗಲು ಜೈನ ಬಸದಿಗಳನ್ನು ಅಂತರಾಳದಲ್ಲಿ ಕಾಣಬಹುದು. ಪಶ್ಚಿಮ ಘಟ್ಟ ಪ್ರದೇಶವು ತನ್ನ ಪ್ರಾಕೃತಿಕ ಸೌಂದರ್ಯದಿಂದ ಹೆಚ್ಚು ಆಕರ್ಷಿತವಾದ ಪ್ರದೇಶವಾಗಿದ್ದು, ಕರಾವಳಿ ತೀರ ಪ್ರದೇಶಗಳ ನಂಟಿನೊಂದಿಗೆ ಇಲ್ಲಿ ಬೆಳವಣಿಗೆಯಾಗುತ್ತಿದ್ದ ತೇಗ, ಹೊನ್ನೆ, ಬೀಟೆ ಮತ್ತು ಮಧುಕಾಮಿನಿ ಮರಗಳಿಗೆ ಹೊರ ರಾಷ್ಟ್ರಗಳಾದ ಅರೇಬಿಯ, ಪರ್ಷಿಯಗಳಿಗೆ ಬೇಡಿಕೆ ಹೆಚ್ಚಿತ್ತು. ಅಂದಿನ ಕಾಲದಲ್ಲಿ ಅರಣ್ಯಗಳ ಮೇಲೆ ಹೆಚ್ಚು ಅಧಿಕಾರವನ್ನು ಹೊಂದಿದ್ದವರು ಜಮೀನ್ದಾರರು ಮತ್ತು ಬ್ರಿಟೀಷ್ ಆಡಳಿತದ ಕಾಲಾವದಿ ವರೆಗೂ ಅರಣ್ಯಗಳ ನಾಶವು ಹೆಚ್ಚಾಗಿ ಕಂಡುಬಂಧಿರಲಿಲ್ಲ. ಕುಮರಿ ಬೇಸಾಯದ ಪದ್ಧತಿ ಅತಿ ಹೆಚ್ಚು ರೂಢಿಯಲ್ಲಿದ್ದ ಕಾರಣದಿಂದ ಅಲ್ಲಲ್ಲೇ ಕಾಡುಗಳನ್ನು ಸುಟ್ಟು ಬೇಸಾಯ ಮಾಡುತ್ತಿದ್ದ ಕುರುಹುಗಳಾದ

ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ಉತ್ತರ ದಿಕ್ಕಿಗೆ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಯ ಗಡಿಗಳು ಹಾದು ಹೋಗುವ ಪ್ರದೇಶವಾದ ನರಸಿಂಹ ಪರ್ವತ ಅರಣ್ಯ ಪ್ರದೇಶವು ತುಂಗಭದ್ರಾ ಅರಣ್ಯ ಪ್ರದೇಶದ ಗಡಿಗಳಲ್ಲಿ ಸಂದಿಸಿಕೊಂಡು ವಿಸ್ತಾರಗೊಂಡಿದೆ. ಪಶ್ಚಿಮ ದಿಕ್ಕಿನಲ್ಲಿ ನಾರಾವಿ ರಾಜ್ಯ ಅರಣ್ಯ ಪ್ರದೇಶದೊಂದಿಗೆ ತುಂಗಭದ್ರಾ ರಾಜ್ಯ ಅರಣ್ಯ ಪ್ರದೇಶ ಮತ್ತು ಭದ್ರಾ ರಾಜ್ಯ ಅರಣ್ಯ ಪ್ರದೇಶಗಳೊಂದಿಗೆ ವಿಸ್ತರಿಸಿಕೊಂಡಿದೆ. ದಕ್ಷಿಣ ದಿಕ್ಕಿನಲ್ಲಿ ನಾರಾವಿ ರಾಜ್ಯ ಅರಣ್ಯ ಪ್ರದೇಶವು, ಪೂರ್ವ ದಿಕ್ಕಿನಲ್ಲಿ ನಾರಾವಿ ರಾಜ್ಯ ಅರಣ್ಯದೊಂದಿಗೆ ಪೂರ್ವದ ಅಂಡಾರು ಕಾಯ್ದಿರಿಸಿದ ಅರಣ್ಯ ಪ್ರದೇಶ ಮತ್ತು ಸುಳಿಗೊಡ್ಲು ಹೊಳೆ ಮತ್ತು ಆರಂಭ ಗಡಿವರೆಗೂ ವಿಸ್ತರಿಸಿಕೊಂಡಿದೆ. ಈ ಉದ್ಯಾನವನವು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ನಾರಾವಿ ಮತ್ತು ಅಂಡಾರು ರಾಜ್ಯ ಅರಣ್ಯ ಪ್ರದೇಶ ಮತ್ತು ಚಿಕ್ಕಮಗಳೂರು ಜಿಲ್ಲೆಯ ನರಸಿಂಹ ಪರ್ವತ ಅರಣ್ಯ ಪ್ರದೇಶ, ತುಂಗಭದ್ರಾ ರಾಜ್ಯ ಅರಣ್ಯ ಪ್ರದೇಶ ಮತ್ತು ಭದ್ರಾ ರಾಜ್ಯ ಅರಣ್ಯ ಪ್ರದೇಶಗಳನ್ನು ಒಳಗೊಂಡಿದ್ದು, ಚಿಕ್ಕಮಗಳೂರು ಜಿಲ್ಲೆ ವ್ಯಾಪ್ತಿಯ ೩೨೦೩.೫೫ ಹೆಕ್ಟೇರ್ ಕುದುರೆಮುಖ ಕಬ್ಬಿಣ ಅದಿರು ಕಂಪನಿಯ ಹಳೆಯ ಪರವಾನಗಿ ಪ್ರದೇಶಗಳನ್ನೊಳಗೊಂಡಂತೆ ಉ ೧೩° ೧೫' ೦೦" ೪೭೪೫.೯ ಮಿ ಇಂದ ಉ ೧೩° ೧೩' ೨೩" ಪೂ ೭೫° ೧೨' ೫೦" , ೬೫೭೪.೯ ಮಿ, ಉ ೧೩° ೧೦' ೧೦", ಪೂ ೭೫° ೧೪' ೦೦", ಈ ಬಿಂದುವಿನಿಂದ ೪೨೧೦.೩ ಮಿ ಇಂದ ಉ ೧೩° ೯' ೪೪", ಪೂ ೭೫° ೧೬' ೨೨" ಈ ಬಿಂದುವಿನಿಂದ ೫೪೦೦.೯ ಮಿ ಇಂದ ಬಿಂದು ಉ ೧೩° ೧೨' ೩೩", ಪೂ ೭೫° ೧೭' ೦೦" ಬಿಂದುವಿನಿಂದ ಮೊದಲ ಬಿಂದು ೫೭೨೧.೧ ಮೀ (೪೬೦೫ ಹೆಕ್ಟೇರ್) ಮತ್ತು ಲಕ್ಯಾ ಅಣೆಕಟ್ಟು ಪ್ರದೇಶದ (೫೦೦ ಹೆಕ್ಟೇರ್) ಒಟ್ಟು ೫೧೦೫ ಹೆಕ್ಟೇರ್ ಪ್ರದೇಶವನ್ನು ಒಳಗೊಂಡಿದೆ[೫].

೧. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಇತಿಹಾಸ

ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ತನ್ನಲ್ಲಿ ಒಳಗೊಂಡಿರುವ ಹಲವಾರು ಕುರಹುಗಳ ಆಧಾರಿತವಾಗಿ ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಒಳಭಾಗದಲ್ಲಿ ದೊರೆತಿರುವ ಕೆಲವು ವೀರಗಲ್ಲುಗಳು ರಾಜ ಮಹಾರಾಜರ ಆಳ್ವಿಕೆ ಇತ್ತೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಮೂಲತಃ ಉದ್ಯಾನವನ ರಚನೆಯಾಗುವುದಕ್ಕೂ ಪೂರ್ವದಲ್ಲಿ ವಿವಿಧ ಜಿಲ್ಲೆಗಳ ಗಡಿ ಭಾಗದಲ್ಲಿ ಹಂಚಿ ಹೋಗಿತ್ತು. ಆ ಕಾಲದಲ್ಲಿ ಜೈನ ಪರಂಪರೆಯನ್ನು ಸಾರುವ ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಭಾಗಗಳನ್ನು ಆಧರಿಸಿ ಈಗಲು ಜೈನ ಬಸದಿಗಳನ್ನು ಅಂತರಾಳದಲ್ಲಿ ಕಾಣಬಹುದು. ಪಶ್ಚಿಮ ಘಟ್ಟ ಪ್ರದೇಶವು ತನ್ನ ಪ್ರಾಕೃತಿಕ ಸೌಂದರ್ಯದಿಂದ ಹೆಚ್ಚು ಆಕರ್ಷಿತವಾದ ಪ್ರದೇಶವಾಗಿದ್ದು, ಕರಾವಳಿ ತೀರ ಪ್ರದೇಶಗಳ ನಂಟಿನೊಂದಿಗೆ ಇಲ್ಲಿ ಬೆಳವಣಿಗೆಯಾಗುತ್ತಿದ್ದ ತೇಗ, ಹೊನ್ನೆ, ಬೀಟೆ ಮತ್ತು ಮಧುಕಾಮಿನಿ ಮರಗಳಿಗೆ ಹೊರ ರಾಷ್ಟ್ರಗಳಾದ ಅರೇಬಿಯ, ಪರ್ಷಿಯಗಳಿಗೆ ಬೇಡಿಕೆ ಹೆಚ್ಚಿತ್ತು. ಅಂದಿನ ಕಾಲದಲ್ಲಿ ಅರಣ್ಯಗಳ ಮೇಲೆ ಹೆಚ್ಚು ಅಧಿಕಾರವನ್ನು ಹೊಂದಿದ್ದವರು ಜಮೀನ್ದಾರರು ಮತ್ತು ಬ್ರಿಟೀಷ್ ಆಡಳಿತದ ಕಾಲಾವದಿ ವರೆಗೂ ಅರಣ್ಯಗಳ ನಾಶವು ಹೆಚ್ಚಾಗಿ ಕಂಡುಬಂಧಿರಲಿಲ್ಲ. ಕುಮರಿ ಬೇಸಾಯದ ಪದ್ಧತಿ ಅತಿ ಹೆಚ್ಚು ರೂಢಿಯಲ್ಲಿದ್ದ ಕಾರಣದಿಂದ ಅಲ್ಲಲ್ಲೇ ಕಾಡುಗಳನ್ನು ಸುಟ್ಟು ಬೇಸಾಯ ಮಾಡುತ್ತಿದ್ದ ಕುರುಹುಗಳಾದ

ಬಂಡೆಗಳನ್ನು ಸ್ಥಾಪಿಸಿರುವುದು ಇಂದಿಗೂ ಕಾಣುತ್ತವೆ. ನದಿಗಳು ಹರಿಯುವ ಕಾರಣದಿಂದಾಗಿ ಕೊಂಕಣ ಸೀಮೆಯಿಂದ ಬಂದ ವ್ಯವಸಾಯಗಾರರು ನದಿ ಮುಖಜ ಭೂಮಿಯ ಭಾಗದಲ್ಲಿ ಕುಮರಿ ಬೇಸಾಯವನ್ನು ಮಾಡಿಕೊಂಡು ಜೀವನ ಸಾಗಿಸುತ್ತಾ ಬಂದ ಪೀಳಿಗೆಯವರು ಇಂದಿಗೂ ವಾಸಿಸುತ್ತಿದ್ದಾರೆ. ಆ ಕಾಲದಲ್ಲಿ ಅರಣ್ಯಗಳ ಮೇಲೆ ಅಧಿಕಾರವುಳ್ಳ ರಾಜರ ಭಂಟರು ಮರಗಳನ್ನು ಸಂರಕ್ಷಿಸಿ ಅವುಗಳನ್ನು ಬಳಸಲು ಬೇರೆಯವರು ಕಾಡುಗಳನ್ನು ಕಡಿಯುವುದನ್ನು ನಿಷೇದಿಸಿದ್ದರು. ಮತ್ತು ಉತ್ತಮವಾದ ಮರಗಳನ್ನು ಮಾರಾಟ ಮಾಡುವುದಕ್ಕೆ ತಮ್ಮದೇ ಆದ ವ್ಯಾಪಾರ ಹಾಗೂ ವ್ಯಾಪಾರ ಸಂಬಂಧಗಳನ್ನು ವೃದ್ಧಿಸಿಕೊಂಡಿದ್ದರು. ಟಿಪ್ಪು ಸುಲ್ತಾನ್ ಕಾಲದಲ್ಲಿಯೂ ಕೂಡ ಇಲ್ಲಿನ ಪ್ರದೇಶಗಳನ್ನು ಗುರುತಿಸಿಕೊಳ್ಳುವುದರ ಮೂಲಕ ಕಾಯ್ದಿರಿಸಿದ ಅರಣ್ಯ ಪ್ರದೇಶಗಳನ್ನಾಗಿಸಿ ತೇಗ, ಬೀಟೆ ಮತ್ತು ಗಂಧದ ಮರಗಳನ್ನು ಸಂರಕ್ಷಿಸಿಕೊಂಡಿದ್ದ ಪ್ರತೀತಿ ಇದೆ. (Arekal, ೨೦೦೩)[೬] ಬ್ರಿಟೀಷ್ ಆಡಳಿತ ಆರಂಭಕಾಲದಿಂದ ವಸಾಹತ್ತೋತ್ತರ ಕಾಲದವರೆಗೂ ಈ ಅರಣ್ಯ ಪ್ರದೇಶದಲ್ಲಿದ್ದ ಮರ ಸಂಪನ್ಮೂಲಗಳನ್ನು ರೈಲು ಮಾರ್ಗ ನಿರ್ಮಾಣಕ್ಕಾಗಿ ಬಳಕೆ ಮಾಡಿಕೊಂಡಿದ್ದಾರೆ. ಬ್ರಿಟೀಷ್ ಕಾಲದಲ್ಲಿಯೇ ಈ ವ್ಯಾಪ್ತಿಯ ಪ್ರದೇಶಗಳನ್ನು ನೋಟಿಫೈಡ್ ಏರಿಯಾಗಳನ್ನಾಗಿಸಿ ಮಾರ್ಪಡಿಸಿರುವುದಕ್ಕೆ ಮದ್ರಾಸ್ ಫಾರೆಸ್ಟ್ ಆಕ್ಟ್ ೧೮೯೨, ಮೈಸೂರು ಗೆಜೆಟ್ ಮತ್ತು ಮೈಸೂರು ಫಾರೆಸ್ಟ್ ರೆಗ್ಯುಲೇಷನ್ ಆಕ್ಟ್ ೧೯೧೬ ಸಾಕ್ಷಿಗಳಾಗುತ್ತವೆ.

ಕೋಷ್ಟಕ ೩

ಕಾಯ್ದಿರಿಸಿದ ಅರಣ್ಯಗಳ ಪಟ್ಟಿ

Sl No	Name of the District	Name of the reserved forest	Notification no & date	Extent (in acres)	Remarks
1	Udupi	Andar Reserved Forest	G.O.No.26 Rev., dated : 14-03-1891	19445.22	U/S 16 of Madras Forest Act, 1891
2	Udupi & Dakshina Kannada	Naravi Reserved Forest	G.O.No.96 Rev., dated : 28-02-1900	58954.85	
3	Chikmagalur	South Bhadra State Forest	R.1777-80-FT-87- 13-14, dated : 29- 08-1914	20914.78	U/S 17 of Mysore Forest Regulation, 01-09-1914
4	Chikmagalur	Tunga	G.O.No.R.296-	49838.60	U/S 17 of

		Bhadra State Forest	9-FR.96-15-6, dated : 07-07-1916		Mysore Forest Regulation, 01-08-1916
5	Chikmagalur	Narasimhaparvatha State Forest	R-8426-29-FR 94-15, dated : 01-03-1916	16745.00	U/S 17 of Mysore Forest Regulation, 01-05-1916
		Total		**165898.45**	

ದಾಖಲೆಯ ಮೂಲ: Anita S. Arekal, Deputy Conservator of Forests, Kudremukh Wildlife Division, KARKALA. REVISED MANAGEMENT PLAN FOR KUDREMUKH. (2003-13), REPORT TO KARNATAKA FOREST DEPARTMENT. (ಪು.ಸಂ ೯)

೧೮ ಮತ್ತು ೧೯ ನೇ ಶತಮಾನದ ಆರಂಭದಲ್ಲಿ ಭಾಗದಲ್ಲಿ ಬ್ರಿಟೀಷ್ ವಸಾಹತು ಆಡಳಿತದಡಿ ಪಶ್ಚಿಮಘಟ್ಟ ಅರಣ್ಯ ಪ್ರದೇಶಗಳಲ್ಲಿ ಬೆಳೆಯುವ ಗಟ್ಟಿ ಮುಟ್ಟಾದ ಮರಗಳು ಹಡಗು ನಿರ್ಮಾಣಕ್ಕೆ ಹಾಗೂ ರೈಲು ಕೋಚ್‌ಗಳ ನಿರ್ಮಾಣಕ್ಕೆ ಹೆಚ್ಚು ಬಳಕೆಯಾಗಲ್ಪಟ್ಟಿತು. ಇದರೊಂದಿಗೆ ವಿಶ್ವದ ಎರಡೂ ಮಹಾಸಮರಗಳಿಗೂ ಕೂಡ ಹಡಗು ಮತ್ತು ಇತರೆ ಉಪಕರಣಗಳ ತಯಾರಿಕೆಗಾಗಿ ಮರಗಳ ಕಟಾವು ಮತ್ತು ರಫ್ತುಗಳ ಕಾರ್ಯ ಭರದಿಂದ ಸಾಗಿತ್ತು. ಈ ಕಾರಣಗಳಿಂದಾಗಿ ವಸಾಹತು ಆಡಳಿತ ವ್ಯವಸ್ಥೆಯಲ್ಲಿ ಅರಣ್ಯಗಳ ವೃದ್ಧಿಗೆ ಅಷ್ಟೊಂದು ಕ್ರಮಗಳನ್ನು ತೆಗೆದುಕೊಳ್ಳಲಾಗಲಿಲ್ಲ. ೧೯ನೇ ಶತಮಾನದ ಮಧ್ಯಭಾಗದಲ್ಲಿ ಮುಂಬಯಿ ಮತ್ತು ಕರಾಚಿ ಹಾಗೂ ಇತರೆ ರಾಷ್ಟ್ರಗಳಿಗೆ ಮರಗಳ ನಾಟಗಳಿಗೆ ಹೆಚ್ಚು ಬೇಡಿಕೆಗಳು ಉದ್ಭವಿಸಿದವು ಇಂತಹ ವೇಳೆಯಲ್ಲಿ ಮದ್ರಾಸ್ ಪ್ರೆಸಿಡೆನ್ಸಿ ಮತ್ತು ಹಳೆಯ ಮೈಸೂರು ಪ್ರಸಿಡೆನ್ಸಿಗಳ ಕಾಲದಲ್ಲಿ ಮರಗಳನ್ನು ಗುರುತಿಸುವ ಹಾಗೂ ಕಾಯ್ದಿರಿಸಿದ ಪ್ರದೇಶಗಳನ್ನಾಗಿಸುವ ಸಮೀಕ್ಷೆ ಕಾರ್ಯಗಳು ಆರಂಭವಾದವು. ಚಿಕ್ಕಮಗಳೂರು ವಿಭಾಗದಲ್ಲಿ ಕಾಫಿ ವಾಣಿಜ್ಯ ಬೆಳೆಯ ಕೃಷಿ ಚಟುವಟಿಗಳು ಗರಿಗೆದರಿ ಬೇಡಿಕೆಗಳು ಹೆಚ್ಚಾದ ಪರಿಣಾಮ ಕಾಫಿ ಬೆಳೆಗಳ ಕೃಷಿಗಾಗಿ ಅರಣ್ಯಗಳ ಒತ್ತುವರಿ ಕಾರ್ಯಗಳು ಹೆಚ್ಚಾದವು. ಅರಣ್ಯಗಳ ಪ್ರಮಾಣದಲ್ಲಿ ಕ್ಷೀಣಿಸುವಿಕೆ ಏರಿಕೆಯಾದ ಪರಿಣಾಮ ಎಸ್ಟೇಟ್‌ಗಳ ರಚನಾ ಕಾರ್ಯ ಆರಂಭವಾದವು. ೨೦ನೇ ಶತಮಾನದ ಆರಂಭದಲ್ಲಿ ವಿಶ್ವ ಸಮರ ಹಾಗೂ ಭಾರತ ಸ್ವಾತಂತ್ರ ನಂತರದಲ್ಲಿ ಅಭಿವೃದ್ಧಿ ಮತ್ತು ಕಾರ್ಖಾನೆಗಳ ಸ್ಥಾಪನೆ ಹಾಗೂ ಕೃಷಿ ಚಟುವಟಿಕೆಗಳ ಏರಿಕೆಗಳಿಂದಾಗಿ ಕ್ಷೀಣಿಸಿದ ಅರಣ್ಯಗಳ ಸಂರಕ್ಷಣೆಗೆ ಒತ್ತನ್ನು ನೀಡುವುದರ ಮುಖಾಂತರ "ಸಂರಕ್ಷಣೆ" ಕಾರ್ಯವನ್ನು ಹಾಗೂ ವನ್ಯಜೀವಿಗಳ ರಕ್ಷಣೆಗಾಗಿ ಅಭಯಾರಣ್ಯ ಸ್ಥಾಪನೆ ಕಾರ್ಯಗಳನ್ನು ಆರಂಭಿಸಲಾಯಿತು. ಇದರ ಪರಿಣಾಮವಾಗಿ ಅರಣ್ಯ ಪ್ರದೇಶಗಳ ಬಿಗಿ

ಸಂರಕ್ಷಣೆಯ ನಡೆಯಲ್ಲಿ ರಾಷ್ಟ್ರೀಯ ಉದ್ಯಾನವನಗಳು, ಕಾಯ್ದಿರಿಸಿದ ಪ್ರದೇಶಗಳು, ಅಭಯಾರಣ್ಯಗಳಾಗಿ ಮಾರ್ಪಟ್ಟು ಪ್ರಮಾಣಗಳಲ್ಲಿ ಏರಿಕೆಯಾಗುತ್ತಿವೆ.

೨. ಪರಿಸರ ಮತ್ತು ವನ್ಯಜೀವಿಗಳು

ಪಶ್ಚಿಮ ಘಟ್ಟ ಪ್ರದೇಶ ತಾಣಗಳಲ್ಲಿ ಗುರ್ತಿಸಲ್ಪಟ್ಟಿರುವ ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ಮಳೆಯಾಶ್ರಿತ ಕಾಡು ಪ್ರದೇಶಗಳನ್ನು ಹೊಂದಿದ್ದು, ಮಡಿಕೆ ಪರ್ವತ ಶ್ರೇಣಿಗಳಿಂದಾವೃತವಾದ ಪ್ರದೇಶವಾಗಿದೆ. ಕಪ್ಪು ಮಿಶ್ರಿತ ಮಣ್ಣಿನ ಪ್ರದೇಶದಿಂದ ಕೂಡಿದ್ದು ಸಂಪತ್ಭರಿತವಾದ ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೊಂದಿದೆ. ಮುಂಗಾರಿನ ಆರಂಭದಲ್ಲಿ ಕರಾವಳಿ ತೀರ ಪ್ರದೇಶಗಳಿಂದ ಆವೃತವಾಗುವ ಮೋಡಗಳ ಆಕರ್ಷಣೆಯಿಂದಾಗಿ ಮಳೆಯ ಪ್ರಮಾಣ ಅಧಿಕವಾಗುತ್ತಾ ಹೋಗುತ್ತದೆ. ತದನಂತರದ ಕಾಲದಲ್ಲಿ ಡಿಸೆಂಬರ – ಫೆಬ್ರವರಿ ಸಮಯದಲ್ಲಿ ಹೆಚ್ಚು ಚಳಿಯ ವಾತಾವರಣ ಹಾಗೂ ನಂತರದ ಕಾಲಕ್ಕೆ ಬೇಸಿಗೆಯ ಬಿಸಿ ವಾತಾವರಣವನ್ನು ಹೊಂದಿಕೊಳ್ಳುವುದರೊಂದಿಗೆ ನಿತ್ಯ ಹರಿದ್ವರ್ಣ ಮತ್ತು ಎಲೆ ಉದುರುವ ಕಾಡುಗಳು ಇಲ್ಲಿ ಕಂಡು ಬರುತ್ತವೆ. ಸಾಮಾನ್ಯವಾಗಿ ನೈರುತ್ಯ ಮಾನ್‌ಸೂನ್ ಮಾರುತಗಳ ಪ್ರಭಾವದಿಂದ ೧೨೫ – ೧೩೫ ದಿನಗಳವರೆಗೆ ಮಳೆಯ ಅವಧಿಯಾಗಿದ್ದು, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಅತಿ ಹೆಚ್ಚು ಪ್ರಮಾಣದ ಮಳೆಯು ಧಾವಿಸುತ್ತದೆ. ಕೆಲವು ಅವಧಿಗಳಲ್ಲಿ ಒಂದೇ ದಿನ ೪೫ ಸೆಂ.ಮೀ ಮಳೆಯಾಗಿರುವ ಉದಾಹರಣೆಗಳು ಇವೆ. ಮುಂಗಾರು ಮಳೆಯ ಆರಂಭದಲ್ಲಿ ೩೫° ಸೆ, ಚಳಿಗಾಲದಲ್ಲಿ ೧೦° ಸೆ ಮತ್ತು ಸಾಮಾನ್ಯ ದಿನ ಮಾನಗಳಲ್ಲಿ ೧೮° ಯಿಂದ ೩೦° ಸೆ ಉಷ್ಣಾಂಶವನ್ನು ಹೊಂದಿರುತ್ತದೆ.

ನದಿ ಮೂಲಗಳು: ಈ ಪರಿಸರದಲ್ಲಿ ಝರಿಗಳಿಂದಾವೃತವಾದ ಹೊಳೆಗಳು ಮೂಲ ನದಿಗಳೊಂದಿಗೆ ಸಂಗಮ ಹೊಂದುವವು. ಮುಖ್ಯವಾಗಿ ಗಂಗಾ ಮೂಲದಲ್ಲಿ ಭದ್ರಾ, ತುಂಗ, ನೇತ್ರಾವತಿ, ಗುರುಪುರ ಮತ್ತು ಸ್ವರ್ಣ ನದಿಗಳು ಜೀವನದಿಗಳಾಗಿ ಹರಿಯುತ್ತವೆ. ಮುಂಗಾರು ಮಳೆ ಆರಂಭದಿಂದ ಡಿಸೆಂಬರ್ ಅಂತ್ಯದವರೆಗೆ ಝರಿಗಳು ಮತ್ತು ನದಿಗಳು ಮೈದುಂಬಿ ಹರಿಯುತ್ತವೆ. ನಂತರದ ಮಾರ್ಚ್ ತಿಂಗಳ ಕಾಲದಲ್ಲಿ ಝರಿಗಳು ಬತ್ತಲಾರಂಭಿಸುತ್ತವೆ ಹಾಗೂ ನದಿಗಳಲ್ಲಿನ ನೀರು ಹರಿಯುವಿಕೆ ಪ್ರಮಾಣವು ಇಳಿಕೆ ಮಟ್ಟಕ್ಕೆ ಬರುತ್ತದೆ. ಉದ್ಯಾನವನದ ಒಳ ಭಾಗದಲ್ಲಿರುವ ರೈತರು ತಮ್ಮ ಬೆಳೆಗಳಿಗೆ ಮಾರ್ಚ್ ವೇಳೆಗೆ ಗುರುತ್ವಾಕರ್ಷಣೆ ಮೂಲಕ ಹರಿಯುವ ನೀರನ್ನು ಬಳಸಿಕೊಳ್ಳಲು ಅನುವು ಮಾಡಲಾಗಿದ್ದು, ಸ್ವಂತ ಟರ್ಬೈನ್ ಬಳಸಿಕೊಳ್ಳುವುದರ ಮೂಲಕ ಅಗತ್ಯ ವಿದ್ಯುತ ಶಕ್ತಿಯನ್ನು ಬಳಸಿಕೊಳ್ಳುತ್ತಾರೆ.

ಪ್ರಾಣಿಗಳು: ಪರಿಸರ ಸಮತೋಲನದ ಅಂಗವಾಗಿ ಮರ – ಗಿಡ, ಬಳ್ಳಿಗಳೊಂದಿಗೆ ಪ್ರಾಣಿಗಳು ತಮ್ಮ ಆವಾಸ ಸ್ಥಾನವನ್ನು ಈ ವ್ಯಾಪ್ತಿಯಲ್ಲಿ ಹೊಂದಿವೆ. ಈ ಉದ್ಯಾನವನದ ಪ್ರಾಣಿ ಪ್ರಭೇದಗಳಲ್ಲಿ ಮುಖ್ಯವಾಗಿ ಕಂಡುಬರುವ ಪ್ರಾಣಿಗಳೆಂದರೆ, ಸಿಂಹ ಬಾಲದ ಮಂಗ (Lion

Tailed Macaques) ಅಳಿವಿನಂಚಿನಲ್ಲಿದೆ, ಹುಲಿ, ಚಿರತೆ, ಕಾಡು ನಾಯಿ, ಆನೆ, ಕಾಡು ಹಂದಿ, ಜಿಂಕೆ ತಳಿ, ಕಾಡು ಎಮ್ಮೆ, ಕಾಡು ಕೋಣ, ದೊಡ್ಡ ಅಳಿಲು, ಹೆಬ್ಬಾವು ಇತರೆ.

೩. ಮಾನವರ ವಾಸಸ್ಥಾನಗಳು ಮತ್ತು ಆರ್ಥಿಕತೆ

ವಾಸಸ್ಥಾನಗಳು: ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ೧,೩೦೦ ಮಾನವ ಕುಟುಂಬಗಳನ್ನು ಹೊಂದಿದ್ದು, ೯೮ ಮಾನವ ಆವಾಸ ಸ್ಥಾನಗಳೊಂದಿಗೆ ೬,೨೫೦ ಜನರು ಒಳ ಭಾಗದಲ್ಲಿ ನೆಲೆಸಿದ್ದಾರೆ. ಉದ್ಯಾನವನದ ಮಾನವ ವಾಸಿತ ಪ್ರದೇಶಗಳ ೯೦% ಮನೆಗಳು ಮಂಗಳೂರು ಇಟ್ಟಿಗೆಗಳಿಂದ ಕಟ್ಟಡ ಹಾಗೂ ಜಾರುವಿಕೆಯ ಮೇಲ್ಛಾವಣಿಗಳನ್ನು ಹಂಚಿನಿಂದ ನಿರ್ಮಿಸಿಕೊಂಡಿದ್ದಾರೆ. ಇಲ್ಲಿನ ನಿವಾಸಿಗಳು ೯೫% ಕೃಷಿ ಚಟುವಟಿಕೆಯನ್ನೇ ಮೂಲ ಜೀವನೋಪಾಯ ಕಸುಬನ್ನಾಗಿ ಅನುಸರಿಸಿದ್ದಾರೆ. ಕೃಷಿ ಭೂಮಿಯು ತಲಾ ೦.೧೮ ಹೆಕ್ಟೇರ್ ಇದ್ದು, ಪಶು ಸಾಕಾಣಿಕೆ ೧೦೦೦ ಜನರಿಗೆ >೧ ಇದೆ. ಇಲ್ಲಿ ವಾಸಿಸುವರಲ್ಲಿ ಜೈನ್ಸ್, ಬಂಡ್ಸ್, ಬಿಲ್ಲವಾಸ್, ಬ್ರಾಹ್ಮಣರು ಜಮೀನ್ದಾರರಾಗಿದ್ದಾರೆ. ಮಿಕ್ಕುಳಿದವರು ಕೃಷಿ ಕೂಲಿ ಕಾರ್ಮಿಕರಾಗಿದ್ದು ಕಳೆದ ೨ ದಶಕಗಳಲ್ಲಿ ಉಳುಮೆ ಮಾಡುವ ಕೃಷಿ ಭೂಮಿಯನ್ನು ಪಡೆದಿದ್ದಾರೆ. ಉಳಿದಂತೆ ಆದಿವಾಸಿಗಳಾದ ಗೌಡಲು ಸಮುದಾಯದವರು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಶೃಂಗೇರಿ ಮತ್ತು ಕೊಪ್ಪ ವ್ಯಾಪ್ತಿಯಲ್ಲಿ, ಮಲೆಕುಡಿಯರು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಬೆಳ್ತಂಗಡಿ ಮತ್ತು ಕಾರ್ಕಳತಾಲ್ಲೂಕುಗಳಲ್ಲಿ ಮತ್ತು ಮರಾಠಿನಾಯ್ಕ ಸಮುದಾಯದವರು ವಿರಳ ಜನಸಂಖ್ಯೆಯಲ್ಲಿ ಅಲ್ಲಲ್ಲೇ ಚದುರಿದಂತೆ ಕಾಣುವರು[೭]. ಕೃಷಿ ಭೂ ಹಿಡುವಳಿಗಳನ್ನು ಕಳೆದ ೨ ದಶಕಗಳಿಂದ ಆದಿವಾಸಿ ಸಮುದಾಯದವರು ಒತ್ತುವರಿ ಮಾಡಿಕೊಂಡಿದ್ದ ಭಾಗಗಳೆಲ್ಲ ಪಟ್ಟಗಳಾಗಿ ಹಾಗೂ ಅರಣ್ಯ ಹಕ್ಕು ಅಧಿನಿಯಮದಡಿ ಮಂಜರಾತಿಯಾಗಿದೆ. ಇದರೊಂದಿಗೆ ಅರಣ್ಯ ಕಿರು ಉತ್ಪನ್ನಗಳನ್ನು ಸಂಗ್ರಹಿಸಿಕೊಂಡು ತಮ್ಮ ಜೀವನೋಪಾಯವನ್ನು ಕಂಡುಕೊಂಡಿದ್ದಾರೆ.

ಆದಿವಾಸಿ ಸಮುದಾಯಗಳು

ಕರ್ನಾಟಕದ ವಿಶಿಷ್ಟವಾದ ಪರಂಪರೆಯಲ್ಲಿ ಇತರೆ ಸಮುದಾಯಗಳಂತೆ ಸಾಮಾನ್ಯವಾಗಿ ಗುರುತಿಸಿಕೊಳ್ಳದೇ, ತಮ್ಮದೇ ಆದ ವಿಶಿಷ್ಟ ಆಚರಣೆಯೊಂದಿಗೆ ಗುರುತಿಸಿಕೊಂಡಿರುವ ಸಮುದಾಯಗಳೇ 'ಆದಿವಾಸಿ' ಸಮುದಾಯಗಳು. ಅರಣ್ಯ ಮೂಲದಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡು 'ಅರಣ್ಯಗಳೇ 'ದೈವ' ಎಂದು ಆರಾಧಿಸಿದವರು ಆದಿವಾಸಿಗಳು. ವಿಶೇಷ ಸಂದರ್ಭಗಳಲ್ಲಿ, ಶುಭ ಕಾರ್ಯ ನಡೆಯುವಾಗ 'ಅರಣ್ಯಗಳಿಗೆ ಎದುರಾಗಿ ನಿಂತು' ಅರಣ್ಯವನ್ನು ಪೂಜಿಸುತ್ತಾರೆ. ಕಷ್ಟದಲ್ಲಾಗಲಿ ಸುಖದಲ್ಲಾಗಲಿ ಅರಣ್ಯವನ್ನು ಎಂದಿಗೂ ಕೀಳಾಗಿ ಕಂಡವರಲ್ಲ. ತಮ್ಮ ಬದುಕಿನ ಅಸ್ತಿತ್ವಕ್ಕಾಗಿ ಇಂದಿಗೂ ಅರಣ್ಯವನ್ನು ಉಳಿಸಿಕೊಂಡು ಬೆಳಸಿದ್ದಾರೆ ಆದಿವಾಸಿಗಳು.

ಆದಿವಾಸಿಗಳನ್ನು ಗಿರಿಜನರು, ಮೂಲ ನಿವಾಸಿಗಳು, ಹಿಂದುಳಿದವರು, ಆದಿ ಪ್ರಜಾ, ಬುಡಕಟ್ಟು ಸಮುದಾಯ ಈಗೆ ಹಲವಾರು ಹೆಸರುಗಳಿಂದ ಉಲ್ಲೇಖಿಸುವುದುಂಟು. ಸಾಮಾನ್ಯವಾಗಿ ನಮ್ಮ ಒಳನಾಡುಗಳಲ್ಲಿ ಆದಿವಾಸಿ ಸಮುದಾಯಗಳನ್ನು ಗಿರಿಜನರು ಎಂಬುದಾಗಿ

ಸಂಭೋಧಿಸುವುದನ್ನು ಕಾಣುತ್ತೇವೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಆದಿವಾಸಿ ಪದಕ್ಕಿಂತ ಹೆಚ್ಚು ಪ್ರಸಿದ್ಧವಾದುಉ ಕಾಡು ಮಕ್ಕಳು ಇಲ್ಲವೆ ಗಿರಿಜನರು. ಮಲೆನಾಡಿನ ಘಟ್ಟ ಪ್ರದೇಶದ ಗಿರಿಜನರಿಗೆ 'ಗೌಡಲು' ಎಂತಲೂ, ಅದೇ ಘಟ್ಟ ಪ್ರದೇಶದ ಕರಾವಳಿ ಭಾಗದಲ್ಲಿ ಕಂಡುಬರುವ ಗಿರಿಜನರಿಗೆ 'ಮಲೆಕುಡಿಯ' ಎಂತಲೂ ಕರೆಯುತ್ತಾರೆ. ಈ ಎರಡು ಸಮುದಾಯಗಳನ್ನು ಬೇರೆ ಬೇರೆ ಹೆಸರುಗಳಿಂದ ಉಲ್ಲೇಖಿಸಿದರೂ, ಮೂಲತಃ ಒಂದೇ ಸಮುದಾಯದವರು ಎಂಬುದು ಹಲವರ ವಾದವಾಗಿದೆ. ಗೌಡಲು ಮತ್ತು ಮಲೆಕುಡಿಯರ ಜೀವನ ಶೈಲಿ, ಆಚರಣೆಗಳು, ಉಡುಗೆ ತೊಡುಗೆಗಳು ಭಿನ್ನವಾಗಿಯೇ ಇದೆ. ಆದರೆ ಕೆಲವೊಂದು ಆಚರಣೆಗಳು ಮಾತ್ರ ಮಲೆಕುಡಿಯರ ಆಚರಣೆಗಳನ್ನು ಹೋಲುತ್ತವೆ. ಘಟ್ಟದ ಮೇಲಿನ ಗೌಡಲುಗಳ ಭಾಷೆ ಮತ್ತು ಉಡುಗೆ ತೊಡುಗೆಗಳು ಇಲ್ಲಿನ ಒಕ್ಕಲಿಗರಿಂದ ಪ್ರೇರಿತವಾಗಿದೆ. ಆದರೆ ಅವರೇ ರೂಪಿಸಿಕೊಂಡಿರುವ ಜೀವನ ಶೈಲಿಯಂತೂ ವಿಭಿನ್ನವಾದುದು. ಬುಡಕಟ್ಟು ಸಂಸ್ಕೃತಿಯ ಎಲ್ಲಾ ಮೌಲ್ಯಗಳನ್ನು ಇವರಲ್ಲಿ ಕಾಣಬಹುದು.

ಇಂದು ತಂದ ನೀರು ನಾಳೆಗೆ ಹಳಸುತ್ತದೆ ಎಂಬುದು ಈ ಗಿರಿಜನರ ನಂಬಿಕೆ. ಆದ್ದರಿಂದಲೇ ನೀರಿನ ಮೂಲಗಳನ್ನೇ ಹುಡುಕಿ ಅಲ್ಲಿಯೇ ವಾಸಿಸುತ್ತಾರೆ. ಒಂದು ಕುಟುಂಬವು ಬಳಸುವ ನೀರಿನ ಮೂಲವನ್ನು ಇನ್ನೊಂದು ಕುಟುಂಬವು ಬಳಸಬಾರದೆಂದು, ದಟ್ಟ ಅಡವಿಗಳ ನಡುವೆ ಅಲ್ಲಲ್ಲಿಯೇ ವಾಸವಿರುತ್ತಾರೆ. ಅತಿ ಸರಳವಾಗಿ ಬದುಕುವ ಇವರು, ಆಧುನಿಕ ಜೀವನಶೈಲಿಯಿಂದ ಬಹಳ ದೂರ ಉಳಿದವರು[೮]. ಅಂತೆಯೇ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಕಂಡುಬರುವ ಆದಿವಾಸಿ ಮತ್ತು ಇತರೆ ಸಮುದಾಯಗಳನ್ನು ಆಧರಿಸಿ ವಿಸ್ತೃತ ವಿವರಣೆಗಳನ್ನು ರಚಿಸಲಾಗಿದೆ.

ಗೌಡಲು ಸಮುದಾಯ: ಕರ್ನಾಟಕ ರಾಜ್ಯದ ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣಕನ್ನಡ, ಬೆಂಗಳೂರು, ಕೋಲಾರ, ತುಮಕೂರು, ಮಂಡ್ಯ, ಹಾಸನ, ಚಿತ್ರದುರ್ಗ, ಬಳ್ಳಾರಿ ಮತ್ತು ಮೈಸೂರು ಜಿಲ್ಲೆಗಳಲ್ಲಿ ಪಸರಿಸಿದ್ದಾರೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನಕ್ಕೆ ಸೀಮಿತವಾಗಿ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಮೂಡಿಗೆರೆ ಮತ್ತು ಕೊಪ್ಪ ತಾಲ್ಲೂಕುಗಳಲ್ಲಿ ಹಂಚಿಕೆಯಾಗಿದ್ದಾರೆ. ಗೌಡಲು ಎಂಬ ಹೆಸರು 'ಗೋವಾ' ಎಂಬುದರಿಂದ ಉಗಮವಾಗಿದ್ದು, ಗೋವು ಎಂದರೆ ಗೋವ ಪಾಲಕನೆಂದರ್ಥ. 'ಗೋ' ಎಂದರೆ ಆಕಳು, ಗೋವುಗಳ ರಕ್ಷಕ ಗೋವನಾಗುವನು. ಹೀಗೆ ಗೋವು ಪಾಲಕರೇ ಗೌಡಲು ಆದರೆಂದು ಅರ್ಥೈಸಲಾಗುತ್ತದೆ [೯]. ಗೌಡಲು ಬುಡಕಟ್ಟುಗಳು ಐದು ಪಂಗಡಗಳನ್ನು ಹೊಂದಿದ್ದು, ಅದರಲ್ಲಿ ತುಳು ಗೌಡಲು, ನಾಮಧಾರಿ ಗೌಡಲು, ಮಲೆ ಗೌಡಲು, ಕುಂಬ್ರಿ ಗೌಡಲು ಮತ್ತು ಕಬ್ಬಿನ ಮಲೆಯವರು. ಇವರಲ್ಲಿ ನಾಮಧಾರಿ ಗೌಡಲು ಉಳಿದ ಪಂಗಡಗಳಿಗಿಂತ ಶ್ರೇಷ್ಠರು ಎಂದು ಪರಿಗಣಿಸಲ್ಪಡುವರು. ಹಣೆಯ ಮೇಲೆ ನಾಮ ಧರಿಸಿ ವಿಷ್ಣು ದೇವರನ್ನು ಆರಾಧಿಸಿವುದರಿಂದ ಈ ಹೆಸರು ಬಂಧಿದೆ. ಮಲೆ ಗೌಡಲುಗಳು ಕುದುರೆಮುಖದಂತಹ ಮಲೆ ಪ್ರದೇಶಗಳಲ್ಲಿ ವಾಸಿಸುವದರಿಂದ ಇವರನ್ನು ಮಲೆ ಗೌಡಲು ಎಂದು ಕರೆಯುತ್ತಾರೆ. ಕುಂಬ್ರಿ ಗೌಡಲು ಇವರು ಅರಣ್ಯವನ್ನು ಬೆಂಕಿಯಿಂದ ಶುಚಿಗೊಳಿಸಿ ಬೇಸಾಯ ಮಾಡುವುದು ವಾಡಿಕೆ. ಈ ಬೇಸಾಯವನ್ನು ಕುಂಬ್ರಿ ಬೇಸಾಯವೆಂದು ಉಲ್ಲೇಖಿಸುವ ಕಾರಣ ಇವರನ್ನು ಕುಂಬ್ರಿ

ಗೌಡಲುಗಳೆಂದು ಕರೆಯಲ್ಪಡುವರು. ಇನ್ನುಳಿದ ಕಬ್ಬಿನ ಗೌಡಲುಗಳು ಕಬ್ಬು ಬೆಳೆಗಾರರಾಗಿದ್ದರು. ಕಬ್ಬಿನ ಮತ್ತು ಕುಂಬ್ರಿ ಗೌಡಲು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಮಲೆಕುಡಿಯ ಬುಡಕಟ್ಟಿಗೆ ಸೇರಿದವರು ಎಂದು ಹೇಳಲಾಗುತ್ತದೆ.

ಬಳಿ (Clans) ಗಳಲ್ಲಿ: ತೋಳಾರ (ತೋಳ), ಬಾಳೆ(ಲೆ)(ಮಗು), ಶೆಟ್ಟಿ, ಕಂಡಾಲ, ಅಮೃತ ಮತ್ತು ಗಂಗರು ಎಂಬ ಬಳಿಗಳಿವೆ. ಸಮ ಬಳಿಗಳಲ್ಲಿ ಸೋದರತ್ವ ಮತ್ತು ಬೆಸ ಬಳಗಳಲ್ಲಿ ಬಂಧುತ್ವದ ಭಾವನೆಯಿರುವುದರಿಂದ ಸಾಮಾಜಿಕ ಸಂಘಟನೆ ಬಿಗಿಯಾಗಿದೆ. ಇವರು ಶೈವ ಮತ್ತು ವೈಷ್ಣವ ಮತವಾಲಂಬಿಗಳಾಗಿದ್ದು ವೆಂಕಟರಮಣ, ಲಕ್ಷ್ಮಿ ಮತ್ತು ಕೈಲಾಶೇಶ್ವರ ದೇವರುಗಳನ್ನು ಆರಾಧಿಸುತ್ತಾರೆ. ಇವರು ಹಿಂದೂ ಧರ್ಮಾವಲಂಬಿಗಳಾಗಿದ್ದು, ಯುಗಾದಿ, ದಸರಾ, ದೀಪಾವಳಿ ಇತ್ಯಾದಿ ಹಬ್ಬಗಳನ್ನು ಆಚರಿಸುತ್ತಾರೆ. (ಮೈತ್ರಿ, ೨೦೦೨).

ಕುಲಕಸುಬುಗಳು: ಕ್ಷೇತ್ರಾಧ್ಯಯನದಲ್ಲಿ ಅವಲೋಕಿಸಿರುವ ಪ್ರಕಾರ ಬೇಟೆಗಾರಿಕೆ ಮತ್ತು ಪಶುಪಾಲನೆ ಇವರ ಮೂಲ ಕಸುಬುಗಳು. ಕೃಷಿಯನ್ನು ಅರಣ್ಯ ಸಾಗುವಳಿ ಮುಖಾಂತರ ಕುಂಬ್ರಿ ಬೇಸಾಯ ಪದ್ಧತಿಯ ಮಾದರಿಯಲ್ಲಿ ಕಂಡುಕೊಂಡಿದ್ದಾರೆ. ಉದ್ಯಾನವನ ವ್ಯಾಪ್ತಿಯಲ್ಲಿ ಕೃಷಿ ಮತ್ತು ಹೈನುಗಾರಿಕೆಯೊಂದಿಗೆ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆಯ ಕಾರ್ಯವನ್ನು ಕಸುಬನ್ನಾಗಿ ಅವಲಂಬಿಸಿದ್ದಾರೆ. ಪ್ರಸ್ತುತವಾಗಿ ಸಣ್ಣ ಪ್ರಮಾಣದ ರೈತರಾಗಿದ್ದ ಗೌಡಲು ಸಮುದಾಯದವರು ಉದ್ಯಾನವನ ಯೋಜನೆ ಅಡಿ ಪುನರ್ವಸತೀಕರಣಗೊಂಡು ಉದ್ಯಾನವನದ ಹೊರ ಭಾಗದಲ್ಲಿ ತಮಗೆ ದೊರಕಿದ ಪರಿಹಾರದ ಆಧಾರಿತವಾಗಿ ಕೃಷಿ ಭೂಮಿಯನ್ನು ಮತ್ತು ಕೆಲವರು ಅಡಿಕೆ ಕೃಷಿಯ ಕೂಲಿ ಕಾರ್ಮಿಕರಾಗಿಯೂ ಜೀವನೋಪಾಯವನ್ನು ಕಂಡುಕೊಂಡಿದ್ದಾರೆ.

ಜನಸಂಖ್ಯೆ : ೨೦೧೧ರ ಜನಗಣತಿ ಆಧಾರಿತವಾಗಿ ರಾಜ್ಯದಲ್ಲಿ ಒಟ್ಟು ೮೬೧೭ ಜನಸಂಖ್ಯೆ ಇದ್ದು, ಪುರುಷರು (೪,೨೮೨) ೪೯.೬೯% , ಮಹಿಳೆಯರು (೪,೩೩೫) ೫೦.೩೦%ರಷ್ಟಿದ್ದಾರೆ. ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ೭,೭೧೮ ಜನರಿದ್ದು, ಅದರಲ್ಲಿ ಪುರುಷರು (೩,೮೦೪) ೪೯.೨೮% ಮತ್ತು ಮಹಿಳೆಯರು (೩,೯೧೪) ೫೦.೭೧% ರಷ್ಟಿದ್ದಾರೆ. ರಾಜ್ಯದ ನಗರ ಪ್ರದೇಶದಲ್ಲಿ ಒಟ್ಟು ೮೯೯ ಜನರಿದ್ದು, ಅದರಲ್ಲಿ ಪುರುಷರು (೪೭೮) ೫೩.೧೭% ಮತ್ತು ಮಹಿಳೆಯರು (೪೨೧) ೪೬.೮೨% ರಷ್ಟಿದ್ದಾರೆ. ರಾಜ್ಯದ ಚಿಕ್ಕಮಗಳೂರು ಜಿಲ್ಲಾ ವಿಭಾಗವನ್ನು ಪರಿಗಣಿಸುವುದಾದರೆ, ಒಟ್ಟು ೩,೭೩೮ ಜನರಿದ್ದು, ಪುರುಷರು (೩,೭೩೮) ೪೯.೧೭% ಮತ್ತು ಮಹಿಳೆಯರು (೩,೮೬೪) ೫೦.೮೨% ರಷ್ಟಿದ್ದಾರೆ. ಚಿಕ್ಕಮಗಳೂರಿನ ಗ್ರಾಮೀಣ ಪ್ರದೇಶಕ್ಕೆ ಅನುಸಾರವಾಗಿ ಒಟ್ಟು ೭,೫೩೪ ಜನರಿದ್ದು, ಪುರುಷರು (೩,೭೦೮) ೪೯.೨೧% ಮತ್ತು ಮಹಿಳೆಯರು (೩,೮೨೬) ೫೦.೭೮% ರಷ್ಟಿದ್ದಾರೆ. ನಗರ ಪ್ರದೇಶದಲ್ಲಿ ಒಟ್ಟು ೬೮ ಜನರಿದ್ದು, ಪುರುಷರು (೩೦) ೪೪.೧೧% ಮತ್ತು ಮಹಿಳೆಯರು (೩೮) ೫೫.೮೮% ರಷ್ಟಿದ್ದಾರೆ[೧೦].

ಮಲೆಕುಡಿಯ ಸಮುದಾಯ: ಮಲೆಕುಡಿ ಅಥವಾ ಮಲೈಕುಡಿ ಬುಡಕಟ್ಟನ್ನು ಮಲಯೆಕಂಡಿ ಮತ್ತು ಮೆಲೇರು ಎಂತಲೂ ಅಧ್ಯಯಿಸಲಾಗಿದೆ. ಇವರು ಕೇರಳದ ಕಣ್ಣನೂರು, ಕಾಸರಗೋಡು, ಕರ್ನಾಟಕದ ಸಹ್ಯಾದ್ರಿ ಪರ್ವತ ಶ್ರೇಣಿ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಭಾಗದಲ್ಲಿ

ನೆಲೆಸಿದ್ದಾರೆ. ಮಲೈಕುಡಿ ಎಂದರೆ, ಮಲೆಯ ಮಕ್ಕಳು, ಮಲೆ ಎಂದರೆ ಬೆಟ್ಟ, ಕುಡಿ ಎಂದರೆ ಎತ್ತರ ಅಥವಾ ಮಗು ಎಂದರ್ಥ. ಕುಡಿಯ, ಮಲೆಕುಡಿಯ. ಮಲೈಕುಡಿ, ಮಲಯೇಕಂಡಿ ಹಾಗೂ ಮಲೇರು ಬುಡಕಟ್ಟುಗಳೆಲ್ಲ ಒಂದೇ ಕುಟುಂಬ ವರ್ಗಕ್ಕೆ ಸೇರಿದವರಾಗಿರಬಹುದು. ಮಲೆಕುಡಿಯ ಆದಿವಾಸಿ ಸಮುದಾಯದವರು ದ್ರಾವಿಡ ಮೂಲದ ತುಳು ಮಾತೃಭಾಷೆಯನ್ನು ಹೊಂದಿದ್ದು, ಕನ್ನಡ ಲಿಪಿ ಹಾಗೂ ಭಾಷೆಯನ್ನು ವ್ಯವಹಾರಿಕವಾಗಿ ಬಳಸುವರು. ಈ ಸಮುದಾಯದಲ್ಲಿ ಊರುಮಲೆ ಹಾಗೂ ನಾಲುಮಲೆ ಎಂಬ ಪ್ರಭೇದಗಳಿವೆ. ಊರುಮಲೆ ಮಲೈಕುಡಿಯರಲ್ಲಿ ಹದಿನೆಂಟು ಹೊರಬಾಂಧವ್ಯದ ಬಳಿಗಳಿವೆ ಅವು: ಬಂಗಾರದನ್ನೆ, ಗುಜ್ಜರದನ್ನೆ, ಸಾಲಯನ್ನ, ಕಂಬರನ್ನೆ, ಇತ್ಯಾದಿಗಳು. ಇವರಲ್ಲಿ ಧರ್ಮಸ್ಥಳದ ಮಂಜುನಾಥ ಮತ್ತು ಕುಕ್ಕೆಯ ಸುಬ್ರಮಣ್ಯ ಪ್ರಧಾನ ದೇವರುಗಳು. ವಿಶು, ಸಂಕ್ರಮಣ, ನಾಗರ ಪಂಚಮಿ, ಕದಿರು ಹಬ್ಬ ಮತ್ತು ದೀಪಾವಳಿ ಹಬ್ಬಗಳನ್ನು ಆಚರಿಸುವರು. ಶಿವ – ಪಾರ್ವತಿಯನ್ನು ಮೂಲ ದೇವರು ಕೂಡ ಎನ್ನುವರು. (ಮೈತ್ರಿ, ೨೦೦೨).

ಕುಲಕಸುಬುಗಳು: ಮಲೈಕುಡಿಯರು ಬಹಳ ಹಿಂದಿನಿಂದಲೂ ಕಾಡು ಯಾಲಕ್ಕಿ ಬೆಳೆಯುವ ಹಕ್ಕುಳ್ಳವರಾಗಿದ್ದಾರೆ. ಇವರಿಗೆ ಈ ಹಕ್ಕು ಮಹಾಭಾರತದ ಪಾಂಡವರಿಂದ ಲಭ್ಯವಾಗಿರುವುದಾಗಿ ತಿಳಿದುಬಂದಿದೆ. ಬೇಟೆ ಮತ್ತು ಕೃಷಿ ಮೂಲ ಕಸುಬುಗಳು. ಇದರೊಂದಿಗೆ ಹೈನುಗಾರಿಕೆಯ ವೃತ್ತಿಯನ್ನು ಇತ್ತೀಚಿನ ದಿನಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಊರುಮಲೆ ಮಲೈಕುಡಿಯರಲ್ಲಿ ಹಲವರು ಭೂಮಾಲಿಕತ್ವವನ್ನು ಹೊಂದಿ ಕೃಷಿಕರಾಗಿದ್ದಾರೆ. ಉಳಿದವರು ಕೃಷಿ ಹಾಗೂ ಅರಣ್ಯದ ಕೂಲಿಗಳಾಗಿದ್ದಾರೆ. ನಾಲುಮಲೆ ಮಲೈಕುಡಿಯರು ಭೂ ಮಾಲಿಕತ್ವಹೊಂದಿ ಕಾಫೀ ತೋಟಗಳನ್ನು ಬೆಳೆಯುತ್ತಿದ್ದಾರೆ. ಕಿರು ಅರಣ್ಯ ಉತ್ಪತ್ತಿ ಸಂಗ್ರಹ ಆರ್ಥಿಕ ಅಭಿವೃದ್ಧಿಯ ಮೂಲವಾಗಿದೆ.

ಜನಸಂಖ್ಯೆ: ೨೦೧೧ರ ಜನಗಣತಿ ಆಧಾರವಾಗಿ ರಾಜ್ಯದಲ್ಲಿ ಒಟ್ಟು ೯,೨೩೬ ಜನಸಂಖ್ಯೆಯಿದ್ದು, ಪುರುಷರು (೪,೫೩೫) ೪೯.೧೦% ಮತ್ತು ಮಹಿಳೆಯರು (೪,೭೦೧) ೫೦.೮೯% ರಷ್ಟಿದ್ದಾರೆ. ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ೯,೦೦೦ ಜನಸಂಖ್ಯೆಯಿದ್ದು, ಪುರುಷರು (೪,೪೧೭) ೪೯.೦೭% ಮತ್ತು ಮಹಿಳೆಯರು (೪,೫೮೩) ೫೦.೯೨% ರಷ್ಟಿದ್ದಾರೆ. ನಗರ ಪ್ರದೇಶದಲ್ಲಿ ಒಟ್ಟು ೨೩೬ ಜನಸಂಖ್ಯೆಯಿದ್ದು ಪುರುಷರು (೧೧೮) ೫೦% ಮತ್ತು ಮಹಿಳೆಯರು (೧೧೮) ೫೦% ರಷ್ಟಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ೫೫೦ ಜನಸಂಖ್ಯೆಯಿದ್ದು ಪುರುಷರು (೨೭೪) ೪೯.೮೧% ಮತ್ತು ಮಹಿಳೆಯರು (೨೭೬) ೫೧.೦೨% ರಷ್ಟಿದ್ದಾರೆ, ಗ್ರಾಮೀಣ ಪ್ರದೇಶದಲ್ಲಿ ಒಟ್ಟು ೫೨೭ ಜನಸಂಖ್ಯೆಯಿದ್ದು, ಪುರುಷರು (೨೬೪) ೫೦.೦೯% ಮತ್ತು ಮಹಿಳೆಯರು (೨೬೩) ೪೯.೯೦% ಹಾಗೂ ನಗರ ಪ್ರದೇಶದಲ್ಲಿ ಒಟ್ಟು ೨೩ ಜನಸಂಖ್ಯೆಯಿದ್ದು ಪುರುಷರು (೧೦) ೪೩.೪% ಮತ್ತು ಮಹಿಳೆಯರು (೧೩) ೫೬.೫೨% ರಷ್ಟಿದ್ದಾರೆ. ಉಡುಪಿ ಜಿಲ್ಲೆಯಲ್ಲಿ ಒಟ್ಟು ೧,೬೬೨ ಜನಸಂಖ್ಯೆಯಿದ್ದು ಪುರುಷರು (೮೧೪) ೪೯.೯೭% ಮತ್ತು ಮಹಿಳೆಯರು (೮೪೮) ೫೧.೦೨% ರಷ್ಟಿದ್ದಾರೆ, ಗ್ರಾಮೀಣ ಪ್ರದೇಶದಲ್ಲಿ ಒಟ್ಟು ೧,೬೪೪ ಜನಸಂಖ್ಯೆಯಿದ್ದು, ಪುರುಷರು (೮೦೯) ೪೯.೨೦%, ಮಹಿಳೆಯರು (೮೩೫) ೫೦.೭೯% ರಷ್ಟಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಜ್ಯದಲ್ಲಿಯೇ ಅತಿ ಹೆಚ್ಚು ಜನಸಂಖ್ಯೆ ಹೊಂದಿದ್ದು, ಒಟ್ಟು

೬, ೮೩೪ ಜನಸಂಖ್ಯೆಯಿದ್ದು ಪುರುಷರು (೩,೩೫೫) ೪೯.೦೯% ಮತ್ತು ಮಹಿಳೆಯರು (೩,೪೭೯) ೫೦.೯೦% ರಷ್ಟಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ೬,೬೯೪ ಜನಸಂಖ್ಯೆಯಿದ್ದು, ಪುರುಷರು (೩,೨೮೧) ೪೯.೦೧%, ಮಹಿಳೆಯರು (೩,೪೧೩) ೫೦.೯೮%, ನಗರ ಪ್ರದೇಶದಲ್ಲಿ ಒಟ್ಟು ೧೪೦ ಜನಸಂಖ್ಯೆಯಿದ್ದು, ಪುರುಷರು (೭೪) ೫೨.೮೫ ಮತ್ತು ಮಹಿಳೆಯರು (೬೬) ೪೭.೧೪% ರಷ್ಟಿದ್ದಾರೆ.

ಮರಾಠಿ ಸಮುದಾಯ: ಮರಾಠ ಎಂತಲೂ ಕರೆಯಲ್ಪಡುವ ಮರಾಠಿ ಆದಿವಾಸಿಗಳು ಮೂಲತಃ ಮಹಾರಾಷ್ಟ್ರ ಮತ್ತು ಗೋವಾ ಪ್ರದೇಶದವರು. ಕೊಂಕಣಿ ಮಿಶ್ರಿತ ಮರಾಠಿ ಇವರ ಮಾತೃಭಾಷೆಯಾಗಿದ್ದು, ತಮ್ಮನ್ನು ಕ್ಷತ್ರಿಯ ಕುಲದವರೆಂದು ಗುರುತಿಸಿಕೊಳ್ಳುವರು. ಹಿಂದೆ ಸೈನ್ಯದಲ್ಲಿದ್ದವರು ಕಾರಣಾಂತರಗಳಿಂದ ಕರ್ನಾಟಕ ಮತ್ತು ಕೇರಳ ರಾಜ್ಯಗಳತ್ತ ಬಂದು ನೆಲೆನಿಂತು ಬುಡಕಟ್ಟುಕರಣಕ್ಕೊಳಗಾದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆಸಿದವರನ್ನು ಮರಾಠಿಗಳೆಂದು ಹಾಗೂ ಕೊಡಗು ಜಿಲ್ಲೆಯಲ್ಲಿ ನೆಲೆಸಿದವರನ್ನು ಮರಾಠರೆಂದು ೧೯೫೬ರ ಮೈಸೂರು ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪರಿಷ್ಕೃತ ಆದೇಶ ಪಟ್ಟಿಯ ಭಾಗ III, ಭಾಗ VII ಕ್ರ.ಸಂ ೬ ಮತ್ತು ೭(೪) ಪ್ರಕಾರ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಲ್ಪಟ್ಟರು. ಗೋವೆಯ ಪೋರ್ಚುಗೀಸರ ಸ್ವಾಧೀನವಾದಾಗ ಅಲ್ಲಿಯ ಜನರನ್ನು ಓಡಿಸಿದರು. ಓಡಿಸಲ್ಪಟ್ಟವರಲ್ಲಿ ಮರಾಠಿಯವರು ಸೇರಿದರು. ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಸುಮಾರು ೧೪ನೇ ಶತಮಾನದಲ್ಲಿ ಬಂದವರೆಂದು ಇತಿಹಾಸ ಸಾಕ್ಷಿಯಾಗಿರುವುದು.

ಬಳಿಗಳು: ಮರಾಠಿ ಸಮುದಾಯದವರಲ್ಲಿ ಹನ್ನೆರಡು ಬಳಿಗಳಿವೆ. ಅವುಗಳಲ್ಲಿ ಅಸಲ್, ಕುಲೀನ, ಲೆವುಕಾವಳಿ, ಕರಾಚಿ ಅಥವಾ ಸಿಂಧೆ ಇತ್ಯಾಧಿಗಳು. ಇವರಲ್ಲಿ ಸಮ ಬಳಿಗಳಲ್ಲಿ ವಿವಾಹ ನಿಷೇದವಿದ್ದು, ಬೆಸ ಬಳಿಗಳಲ್ಲಿ ವಿವಾಹ ಮಾನ್ಯವಿರುವುದು. ಇವರು ಬಾಳಸಂತು ಮತ್ತು ಗೋಂಧಳ ಎಂಬ ಎರಡು ಬಗೆಯ ಪೂಜೆಗಳನ್ನು ಆಚರಿಸುವರು. ಇವರ ಮೂಲ ದೇವರುಗಳು ಮಹಾದೇವಿಯೊಂದಿಗೆ ಖಂಡೋಬ, ಶಿವನನ್ನು ಆರಾಧಿಸುವರು. ಹಿಂದೂ ಪರಂಪರೆಯ ಮೂಲದವರಾಗಿದ್ದು, ಯುಗಾದಿ, ದಸರಾ, ದೀಪಾವಳಿ, ಬಾಳಸಂತು, ಗೊಂದಳ ಹಬ್ಬಗಳನ್ನು ಆಚರಿಸುವರು.

ಕುಲಕಸುಬುಗಳು: ಹಿಂದೆ ಮರಾಠಿಗಳು ಬೇಟೆಗಾರರಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಗಿರಿಕಂದರಗಳಲ್ಲಿ ಕುಮರಿ ಬೇಸಾಯ ಮಾಡುವವರಾಗಿದ್ದರು. ಹಾಗಾಗಿ ಕೃಷಿ ಇವರ ಕಸುಬಾಯಿತು. ಪ್ರಸ್ತುತವಾಗಿ ಮರಾಠಿಯವರು ಕೃಷಿ ಮತ್ತು ಕೃಷಿ ಕೂಲಿಯನ್ನು ಅವಲಂಬಿಸಿರುವುದು ಹಾಗೂ ಅರಣ್ಯಗಳಲ್ಲಿ ದೊರೆಯುವ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹ ಮತ್ತು ಮಾರಾಟಗಳಿಂದ ಜೀವನೋಪಾಯವನ್ನು ಕಂಡುಕೊಂಡಿದ್ದಾರೆ.

ಜನಸಂಖ್ಯೆ: ೨೦೧೧ ರ ಜನಗಣತಿ ಆಧಾರವಾಗಿ ಮರಾಠಿ ಸಮುದಾಯದವರು ರಾಜ್ಯದಲ್ಲಿ ಒಟ್ಟು ೮೨,೪೪೭ ಜನಸಂಖ್ಯೆಯಿದ್ದು, ಪುರುಷರು (೪೦,೯೫೪) ೪೯.೬೭% ಮತ್ತು ಮಹಿಳೆಯರು (೪೧,೪೯೩) ೫೦.೩೨% ರಷ್ಟಿದ್ದಾರೆ. ರಾಜ್ಯದ ದಕ್ಷಿಣ ಕನ್ನಡ ವೃತ್ತವನ್ನು ಅವಲೋಕಿಸಿದಾಗ

ಉಡುಪಿ ಜಿಲ್ಲೆಯಲ್ಲಿ ೩೩,೮೩೩ ಜನಸಂಖ್ಯೆಯಿದ್ದು, ಪುರುಷರು (೧೬,೮೨೩) ೪೯.೭೨% ಮತ್ತು ಮಹಿಳೆಯರು (೧೭,೦೧೦) ೫೦.೨೭% ರಷ್ಟಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ೪೮,೬೧೪ ಜನಸಂಖ್ಯೆಯಿದ್ದು, ಪುರುಷರು (೨೪,೧೩೧) ೪೯.೬೩% ಮತ್ತು ಮಹಿಳೆಯರು (೨೪,೪೮೩) ೫೦.೩೬% ರಷ್ಟಿದ್ದಾರೆ.

ಇತರೆ ಸಮುದಾಯದವರು: ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಆದಿವಾಸಿ ಗಿರಿಜನರನ್ನು ಹೊರತುಪಡಿಸಿ ಇತರೆ ಸಮುದಾಯದವರಲ್ಲಿ ಜೈನರು, ಬಂಡ್ಸ್, ಬಿಲ್ಲವರು ಮತ್ತು ಬ್ರಾಹ್ಮಣರು ನೆಲೆಸಿದ್ದಾರೆ. ಈ ಕೆಳಕಂಡ ಕೋಷ್ಟಕದ ಆಧಾರಿತವಾಗಿ ಉದ್ಯಾನವನ ವ್ಯಾಪ್ತಿಯಲ್ಲಿರುವ ಸಮುದಾಯಗಳ ವಿವರಗಳನ್ನು ತಿಳಿಯಬಹುದು.

ಕೋಷ್ಟಕ ೪

ಕುದುರೆಮುಖ ರಾಷ್ಟ್ರೀಯ ಉದ್ಯಾನದ ಚಿಕ್ಕಮಗಳೂರು, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಗ್ರಾಮ ಮತ್ತು ಸುತ್ತುಗಟ್ಟ ವಿವರ

ಕ್ರ ಸಂ	ರಕ್ಷಿತ ಅರಣ್ಯಗಳು	ವಲಯಗಳು	ಗ್ರಾಮಗಳು	ಹಾಡಿಗಳು	ಕುಟುಂಬಗಳ ಸಂಖ್ಯೆ	ಜನಸಂಖ್ಯೆ			
						ಪ.ಜಾ	ಪ.ಪಂ	ಇತರೆ	ಒಟ್ಟು
1	ಕುದುರೆಮುಖ ರಾಷ್ಟ್ರೀಯ ಉದ್ಯಾನ	ಕಾರ್ಕಳ ವನ್ಯಜೀವಿ ವಲಯ	೧೦	೨೭	೨೪೩	೧೩	೪೮೧	೬೫೧	೧೧೪೫
೨		ಬೆಳ್ತಂಗಡಿ ವನ್ಯಜೀವಿ ವಲಯ	೧೦	೫೨	೨೬೩	೦	೧೧೨	೧೫೧	೨೬೩
೩		ಕುದುರೆ ಮುಖ ವನ್ಯಜೀವಿ ವಲಯ	೦೩	೧೧	೩೩೫	೫೨	೩೬೭	೧೧೫೩	೧೫೭೨
೪		ಕೆರೆಕಟ್ಟೆ ವನ್ಯಜೀವಿ ವಲಯ	೧೯	೧೯	೫೪೧	೪೯	೯೯೦	೧೧೫೮	೨೧೯೭
ಒಟ್ಟು			೪೨	೧೦೯	೧೩೮೨	೧೧೪	೨೬೫೫	೩೪೭೫	೬೨೪೪

ಮೂಲ: ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ವನ್ಯಜೀವಿ ವಲಯ. ಕಾರ್ಕಳ. ೨೦೧೭.

ಆದಿವಾಸಿಗಳ ಜಾತ್ರೆ ಮತ್ತು ವಿಶೇಷ ಹಬ್ಬಗಳು:

ರಾಜ್ಯವಾರುಗಳಲ್ಲಿ ಸಮಾನ್ಯವಾಗಿ ಕಂಡುಬರುವ ಹಬ್ಬಗಳಂತೆ ರಾಷ್ಟ್ರೀಯ ಉದ್ಯಾನವನದಲ್ಲೂ ಗೋಚರಿಸಲ್ಪಡುತ್ತವೆ. ಮುಂಗಾರು ಮಳೆಯ ಸಿಂಚನದಿಂದಾಗಿ ಆಗಸ್ಟ್ ನಂತರದ ಅವದಿಯಲ್ಲಿ ಹೆಚ್ಚಾಗಿ ಬೆಳೆದಿರುವ ಚಿಗುರು ಮತ್ತು ಹಸಿರು ಹಾಸುಗಳು ದೀಪಾವಳಿಯ ಸಂಭ್ರಮಾಚರಣೆಗೆ ಹೆಚ್ಚು ಒತ್ತನ್ನು ಈ ಪ್ರಾಂತ್ಯದಲ್ಲಿ ನೀಡಿದೆ. ಇದರೊಂದಿಗೆ ಬೇಟೆ ಬಹು ಮುಖ್ಯ ಸಂಪ್ರದಾಯವಾಗಿದ್ದ ಕಾಲ ಇತಿಹಾಸವಾಗಿ ಇಂದಿಗೆ ಇದು ಹೆಚ್ಚು ಪ್ರಚಲಿತವಾಗಿಲ್ಲ.

ಸಮುದಾಯಗಳ ಜಾತ್ರಾ ವಿಶೇಷತೆ:

ಸ್ಥಳೀಯ ಬುಡಕಟ್ಟು ಮತ್ತು ಇತರೆ ಸಮುದಾಯಗಳು ಫೆಬ್ರವರಿ ಮತ್ತು ಏಪ್ರಿಲ್ ಮಾಹೆಗಳಲ್ಲಿ ಜಾತ್ರೆಗಳನ್ನು ಆಚರಿಸುತ್ತಾರೆ. ಕಿಗ್ಗಾ ಮತ್ತು ಕಜೂರ್‌ದರ್ಗಾ ವುರ್ಫ್ ಪ್ರಮುಖ ಜಾತ್ರಗಳು. ಕಿಗ್ಗಾ ಜಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯ ಜನರು ಭಾಗವಹಿಸುವುದರೊಂದಿಗೆ ಸಾಂಪ್ರದಾಯಿಕವಾಗಿ ಬೇಟೆ ಆಚರಣೆಗೆ ಮಾನ್ಯತೆ ನೀಡಲಾಗಿದೆ. ಕಾಡಿನಲ್ಲಿರುವ ಪಶುವಿನ ಭೇಟೆಯಾಡಿ ಮುಂಡ ಅಥವಾ ಶವ (ಕಾರ್‌ಕಾಸ್)ವನ್ನು ಅರ್ಪಿಸುವ ಸಾಂಪ್ರದಾಯಿಕ ಆಚರಣೆ ನಡೆದುಕೊಂಡು ಬಂಧಿದೆ. ಕಜೂರ ಆಚರಣೆಯಲ್ಲಿ ಹಬ್ಬವು ರಾಷ್ಟ್ರೀಯ ಉದ್ಯಾನವನದ ಹೊರ ಭಾಗದಲ್ಲಿ ಜರುಗಿದರೂ ಕೂಡ ಮನರಂಜನೆಗಾಗಿ ಉದ್ಯಾನವನದ ನಡುವಿನಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ. ಗಂಗಾಮೂಲ ಸ್ಥಳ, ಈ ಸ್ಥಳವು ನದಿಗಳ ಉಗಮದ ಸ್ಥಳವಾಗಿ ಹೆಚ್ಚು ಹೆಸರುವಾಸಿಯಾಗಿದೆ. ಎಳ್ಳು ಅಮಾವಾಸ್ಯೆ ಸಮಯದಲ್ಲಿ ಗಂಗಾಮೂಲ ಪ್ರದೇಶವು ಹೆಚ್ಚು ಪೂಜೆ ಮತ್ತು ಆಚರಣೆಗಳಿಂದ ಮೈದುಂಬಿಕೊಂಡಿರುತ್ತದೆ. ಈ ಪ್ರದೇಶದಲ್ಲಿ ನಾಗತಿರ್ಥ, ವರಹಿತೀರ್ಥ ಮತ್ತು ಗಂಗಾಕೊಲ್ಲಿ ದೇವರುಗಳ ಪೂಜೆ ನಡೆಯುವುದರೊಂದಿಗೆ ಜಾತ್ರೆಗಳು ಜರುಗುವುವು.

ಆರ್ಥಿಕತೆ: ಆರ್ಥಿಕ ಅಪೇಕ್ಷೆಯೇ ಮನುಷ್ಯನು ನೆಲೆ ನಿಲ್ಲುವುದಕ್ಕೆ ಕಾರಣ. ಈ ಅಪೇಕ್ಷೆಗಾಗಿ ಮನುಷ್ಯ ಹೇಗೆ ದೈಹಿಕವಾಗಿ ಚಲಿಸುತ್ತಾನೋ, ಮಾನಸಿಕವಾಗಿಯೂ ಚಲಿಸುತ್ತಾನೆ. (ಕಟ್ಟೆ, ೨೦೦೮)[೧೧]. ಈ ನಿಟ್ಟಿನಲ್ಲಿ ಅವನು ಜೀವನೋಪಾಯಕ್ಕಾಗಿ ಕಂಡುಕೊಳ್ಳುವ ವೃತ್ತಿಯೂ ಅವನ ಸಾಮಾಜಿಕ-ಆರ್ಥಿಕ ಸ್ಥಾನವನ್ನು ಹಾಗೂ ನೆಲೆಯನ್ನು ಪ್ರತಿನಿಧಿಸುತ್ತದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿರುವ ಜನ ಸಮುದಾಯವು ಕೃಷಿ ಕ್ಷೇತ್ರವನ್ನೇ ಅವಲಂಬಿಸಿದೆ. ೮೦% ಜನಸಂಖ್ಯೆಯು ಸಣ್ಣ ರೈತರಾಗಿದ್ದಾರೆ. ಪ್ರತಿ ಕುಟುಂಬವು ಕೃಷಿಗೆ ಮೊದಲ ಪ್ರಾಧಾನ್ಯತೆಯನ್ನು ನೀಡಿದೆ. ಇದರೊಂದಿಗೆ ಆಹಾರ ಬೆಳೆಗಳಿಗೆ ಹೆಚ್ಚು ಒತ್ತನ್ನು ನೀಡಿದ್ದಾರೆ. ಕೆಲವು ಕುಟುಂಬದವರು ಆಹಾರ ಧಾನ್ಯಗಳಿಗಿಂತ ಹೆಚ್ಚು ವಾಣಿಜ್ಯ ಬೆಳೆಗಳು ಮತ್ತು ಆರ್ಥಿಕತೆ ಹೆಚ್ಚುವ ಮೂಲವನ್ನು ಅವಲಂಬಿಸಿದ್ದಾರೆ. ಉದ್ಯಾನದೊಳಗಿರುವ ಜನಸಂಖ್ಯೆಯಲ್ಲಿ ಕೆಲವು ಜನರು ಹತ್ತಿರದ ಪಟ್ಟಣಗಳಿಗೆ ಕೂಲಿಗಾಗಿ ಪ್ರಯಾಣ ಬೆಳಸುತ್ತಾರೆ ಮತ್ತು ಅಲ್ಪ ಪ್ರಮಾಣದ ತಮ್ಮ ಕೃಷಿ ಸ್ಥಳಗಳಲ್ಲಿ ಮಳೆಯ ಆರಂಭದ ಕಾಲದೊಳಗೆ ಆಹಾರ ಸಂಗ್ರಹಣೆ ಮತ್ತು ಮಳೆಗಾಲದಲ್ಲಿ ಬೆಳಗಳ ಬೆಳವಣಿಗೆಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಾರೆ. ಉಳಿದಂತೆ ಅರಣ್ಯದಿಂದ ದೊರೆಯುವ ಕಿರು ಉತ್ಪನ್ನಗಳನ್ನು ಸಂಗ್ರಹಿಸಿ ಹತ್ತಿರದ ಆದಿವಾಸಿಗಳ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಂಘಗಳಲ್ಲಿ ಮಾರಾಟ ಮಾಡುತ್ತಾರೆ.

೪. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಆಡಳಿತ

ಅರಣ್ಯಗಳ ಸಂಪನ್ಮೂಲ ಸದ್ಬಳಕೆ, ಅರಣ್ಯ ಪ್ರಮಾಣದಲ್ಲಿ ಏರಿಕೆಯಾಗುವಿಕೆ, ವನ್ಯಜೀವಿಗಳ ಸಂರಕ್ಷಣೆ ಮತ್ತು ಪರಿಸರ ನೈರ್ಮಲ್ಯತೆಯನ್ನು ಕಾಪಾಡುವುದು ನಿರ್ವಹಣೆಯೇ ಸರಿ. ಅರಣ್ಯಗಳ ನಿರ್ವಹಣೆಯ ಇತಿಹಾಸಗಳನ್ನು ಅಧ್ಯಯಿಸುವಾಗ ರಾಜ ಮಹಾರಾಜರ ಕಾಲದಿಂದಲೂ ಆಡಳಿತವಿತ್ತೆಂಬುದಕ್ಕೆ ಪುಷ್ಠಿ ನೀಡಲು ಸಾಕಷ್ಟು ಆಧಾರಗಳು ದೊರೆಯುವವು. ಅಂತೆಯೇ ೨ ನೇ ಅಧ್ಯಾಯದಲ್ಲಿ ಅಶೋಕ ಚಕ್ರವರ್ತಿ ಹಾಗೂ ಮೌರ್ಯರ ಕಾಲದಲ್ಲಿ ಅರಣ್ಯ ನಿರ್ವಹಣೆಗೆ ಆಡಳಿತ ವ್ಯವಸ್ಥೆಯನ್ನು ಕಲ್ಪಿಸಿದ್ದರೆಂದು ಉಲ್ಲೇಖಗಳಿವೆ. ಆದರೆ, ಬ್ರಿಟೀಷ್ ಆಡಳಿತ ಶಾಹಿ ವ್ಯವಸ್ಥೆಯಲ್ಲಿ ಮೊದ ಮೊದಲು ಅರಣ್ಯ ಸಂಪನ್ಮೂಲಗಳ ಬಳಕೆ ಹೆಚ್ಚಿನ ಪ್ರಮಾಣದ್ದಾಗಿದ್ದು, ತದನಂತರ ಅರಣ್ಯ ಅವಶ್ಯಕತೆಗಳನ್ನು ಆಧರಿಸಿ ಅವುಗಳ ನಿರ್ವಹಣೆಗೆ ಹಲವಾರು ಯೋಜನೆಗಳನ್ನು ರೂಪಿಸಿಕೊಟ್ಟರು, ಮುಂದುವರೆದಂತೆ ಸ್ವತಂತ್ರ ಭಾರತದ ಆಡಳಿತದಲ್ಲಿ ಸ್ವಲ್ಪ ಕಾಲದವರೆಗೆ ಅಭಿವೃದ್ಧಿಯ ನೆಪದಲ್ಲಿ ಅರಣ್ಯಗಳ ಬಳಕೆಯ ಪ್ರಮಾಣ ಹೆಚ್ಚಾಗಿಯೇ ಮುಂದುವರೆಯಿತು. ಜಾಗತಿಕ ಜಗತ್ತಿನಲ್ಲಿ ಆಗುತ್ತಿರುವ ಪ್ರತಿಕೂಲದ ವಾತವರಣದ ಪ್ರಭಾವಗಳಿಂದ ಎಚ್ಚೆತ್ತುಕೊಂಡಿರುವ ಭಾರತವು ಕೂಡ ಅರಣ್ಯ ಸಂರಕ್ಷಣೆಗೆ ಹೆಚ್ಚು ಒತ್ತನ್ನು ನೀಡುವುದರೊಂದಿಗೆ ಅರಣ್ಯ ಕಾಯ್ದೆಗಳು, ಅಳಿವಿನಂಚಿನಲ್ಲಿರುವ ವನ್ಯಜೀವಿ ಪ್ರಭೇದಗಳ ನಶಿಸುವಿಕೆಯನ್ನು ತಡೆಯಲು ೧೯೭೨ ವನ್ಯಜೀವಿ ರಕ್ಷಣಾ ಅಧಿನಿಯಮಗಳನ್ನು ಹಾಗೂ ಅರಣ್ಯವಾಸಿತ ಸಮುದಾಯಗಳ ಅರಣ್ಯ ಬಳಕೆ ಮತ್ತು ಹಕ್ಕುಗಳನ್ನು ಪ್ರತಿಪಾಧಿಸಲು ೨೦೦೬ರಲ್ಲಿ ಅರಣ್ಯ ಹಕ್ಕು ಅಧಿನಿಯಮ ಮುಂತಾದ ಕಾಯ್ದೆಗಳ ಅನುಸಾರವಾಗಿ ನಿರ್ವಹಣೆಯನ್ನು ಕೈಗೊಳ್ಳಲಾಗಿದೆ.

ನಿರ್ವಹಣೆ ಎಂದ ಮೇಲೆ ಅದಕ್ಕೆ ಪೂರಕವಾಗಿ ಸಿಬ್ಬಂದಿಗಳ ಪೂರೈಕೆ ಅವಶ್ಯವಾಗಿರುತ್ತದೆ. ಅದರಂತೆ, ಅರಣ್ಯ ರಕ್ಷಣೆಗಾಗಿ ಅರಣ್ಯ ಇಲಾಖೆಗೆ ಕೇಂದ್ರೀಯ ಅರಣ್ಯ ಮತ್ತು ಪರಿಸರ ಇಲಾಖೆ ವತಿಯಿಂದ ಕಾನೂನು ರಚನೆಯ ಮೂಲಕ ಆಡಳಿತ ಸಿಬ್ಬಂದಿಗಳನ್ನು ಹೊಂದಲು ಕಾನೂನು ರಚಿಸಲಾಗಿದೆ. ಅದರಂತೆ, ರಾಜ್ಯ ಮಟ್ಟಕ್ಕೆ ಅನ್ವಯಿಸುವಂತೆ ನಿರ್ವಹಣಾ ಕಾರ್ಯಕ್ಕಾಗಿ ಎರಡು ರೀತಿಯ ಆಡಳಿತ ವ್ಯವಸ್ಥೆಗಳನ್ನು ಆದೇಶಿಸಲಾಗಿದೆ. ಅವುಗಳಲ್ಲಿ ವನ್ಯಜೀವಿಗಳ ವಲಯಗಳನ್ನು ಆಧರಿಸಿ ವನ್ಯಜೀವಿ ಅರಣ್ಯ ನಿರ್ವಹಕರನ್ನು ಮತ್ತು ಪ್ರಾದೇಶಿಕ ಅರಣ್ಯ ಎಂಬ ಆಡಳಿತ ವಿಭಾಗಗಳ ಮುಖಾಂತರ ಅರಣ್ಯ ಸಂರಕ್ಷಣೆಯ ಕಾರ್ಯಗಳು ನಡೆಯುತ್ತಿವೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ವನ್ಯಜೀವಿಗಳ ತಾಣ ಕೂಡ ಆಗಿರುವುದರಿಂದ ಇದರ ನಿರ್ವಹಣೆಯನ್ನು ವನ್ಯಜೀವಿ ವಲಯವು ನಿರ್ವಹಿಸಿ ನಿರ್ದೇಶಿಸುತ್ತದೆ. ಅದರಂತೆ ಈ ಕೆಳಕಂಡ ರೀತಿಯಲ್ಲಿ ಆಡಳಿತ ಶ್ರೇಣಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ ವಿಭಾಗ) – ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಮಂಗಳೂರು ವೃತ್ತ)–ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕುದುರೆಮುಖ ರಾಷ್ಟ್ರೀಯ ಉದ್ಯಾನವನ. ಕಾರ್ಕಳ. – ಸಹಾಯಕ ಉಪ ಅರಣ್ಯ ಸಂರಕ್ಷಣಾಧಿಳಕರಿಗಳು– ಪ್ರಾದೇಶಿಕ ಅರಣ್ಯ ಸಂರಕ್ಷಣಾಧಿಕಾರಿಗಳು (ಬೆಳ್ತಂಗಡಿ, ಕಾರ್ಕಳ, ಕೆರೆಕಟ್ಟೆ ಮತ್ತು ಕುದುರೆಮುಖ

ವಲಯಗಳಲ್ಲಿ). ಪ್ರತಿ ವಲಯಗಳಲ್ಲಿ ೨ ಅರಣ್ಯಾಧಿಕಾರಿಗಳು, ೪ ಅರಣ್ಯ ರಕ್ಷಕರು ಮತ್ತು ಇತರೆ ಸಿಬ್ಬಂಧಿ. ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

೫. ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಅಭಿವೃದ್ಧಿ ಯೋಜನೆ ಸೂಕ್ಷ್ಮ ಯೋಜನೆ

ಅರಣ್ಯ ಸಂಪತ್ತನ್ನು ಸಂರಕ್ಷಿಸಲು ಅರಣ್ಯ ಇಲಾಖೆಯು ರಾಷ್ಟ್ರೀಯ ಅರಣ್ಯ ನೀತಿ ೧೯೮೮ ರ ಅಡಿಯಲ್ಲಿ ಸಹಭಾಗಿತ್ವ (ಸಾರ್ವಜನಿಕರು ಮತ್ತು ಇಲಾಖೆ) ಮಾರ್ಗದ ಮುಖಾಂತರ ಅರಣ್ಯ ರಕ್ಷಣೆ ಮತ್ತು ವೃದ್ಧಿಗೆ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದ ವತಿಯಿಂದ ೧೯೯೦ ರಲ್ಲಿ ಮಾರ್ಗದರ್ಶನವನ್ನು ನೀಡಿದೆ. ರಾಷ್ಟ್ರೀಯ ಉದ್ಯಾನವನಗಳು ಮತ್ತು ವನ್ಯಜೀವಿ ಅಭಯಾರಣ್ಯಗಳು ಜೆ ಎಫ್ ಎಂ ಅಡಿಯಲ್ಲಿ ಬರುವುದಿಲ್ಲ. ಆದಾಗ್ಯೂ ಇ ಡಿ ಸಿ ಗಳ ಜೊತೆ ಅರಣ್ಯ ಉತ್ಪನ್ನಗಳ ಹಂಚಿಕೆ ಇಲ್ಲದ ರಕ್ಷಿತಾರಣ್ಯಕ್ಕಾಗಿ ಪರಿಸರ – ಅಭಿವೃದ್ಧಿ ಸಮಿತಿಗಳನ್ನು ರಚಿಸಬಹುದು.

ಸರ್ಕಾರವು ಸಾರ್ವಜನಿಕರ ನೈಜ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಮತ್ತು ಅವನತಿ ಹೊಂದಿದ ಅರಣ್ಯ ಪ್ರದೇಶ 'ಸಿ' ಮತ್ತು 'ಬಿ' ವರ್ಗದ ಜಮೀನುಗಳು, ರಸ್ತೆ ಬದಿ, ಕಾಲುವೆ ಬದಿ, ಕೆರೆ ಅಂಗಳ ಪ್ರದೇಶಗಳ ಅರಣ್ಯ ರಕ್ಷಣೆ ಅಭಿವೃದ್ಧಿ ಮತ್ತು ಸಂರಕ್ಷಣೆ ಇವುಗಳನ್ನು ಜನರ ಸಹಭಾಗಿತ್ವದೊಂದಿಗೆ ನಿರ್ವಹಿಸಿ ಪಾಲು ಹಂಚಿಕೊಳ್ಳುವ ವ್ಯವಸ್ಥೆಯುಳ್ಳ 'ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ' ಎಂಬ ಕಾರ್ಯಕ್ರಮವನ್ನು ನಿರೂಪಿಸಿ, ಇಂತಹ ವ್ಯವಸ್ಥೆಗೆ ಜನ ಸಮುದಾಯವು ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಬೇಕಾಗಿರುವುದರಿಂದ ಈ ಕಾರ್ಯ ವಿಧಾನಗಳನ್ನೊಳಗೊಂಡಂತೆ ಸರ್ಕಾರಿ ಆದೇಶ ಸಂ ಎ ಹೆಚ್ ಎಫ್ ೨೩೨ ಎಫ್ ಎ ಪಿ ೮೭ ದಿನಾಂಕ ೧೨-೦೪-೯೩ ರ ಪ್ರಕಾರ ಸದರಿ ಯೋಜನೆಯನ್ನು ಜಾರಿಗೆ ತರಲಾಗಿದೆ.

೦೧ ವಲಯ ಅರಣ್ಯಾಧಿಕಾರಿಗಳೊಂದಿಗೆ ಸಮಿತಿ ರಚಿಸಿ ಒಪ್ಪಂದವನ್ನು ಮಾಡಿಕೊಳ್ಳಲಾಗುತ್ತದೆ.

೦೨ ಕಾರ್ಯವ್ಯಾಪ್ತಿ: ನಡುತೋಪು ಮತ್ತು ಸ್ವಾಭಾವಿಕ ಅರಣ್ಯ, ಜಂಟಿ ಅರಣ್ಯ ಯೋಜನೆ ಮತ್ತು ಕಾರ್ಯ ನಿರ್ವಹಣೆ ಯೋನೆಯಲ್ಲಿ ಅನುಮೋದಿತ ಕಾರ್ಯನಿರ್ವಹಣಾ ಯೋಜನೆಯಂತೆ ನಿರ್ವಹಿಸಲು ತರಲಾಗಿದೆ. ಅನುಬಂಧ ೨ ರಲ್ಲಿ ತೋರಿಸಲಾದ ಸರಕಾರಿ ಪ್ರದೇಶ (ಯೋಜನೆಗೆ ಹೊಂದಿಕೊಂಡಿರುವ ಪ್ರದೇಶ)

೦೩ ಅವಧಿ: ಈ ಸೌಹಾರ್ದ ಒಡಂಬಡಿಕೆಯು ೫ ವರ್ಷಗಳವರೆಗೆ ಊರ್ಜಿತದಲ್ಲಿರುತ್ತದೆ. ಸಾಮಾನ್ಯವಾಗಿ ಈ ಅವಧಿಯ ಕಾರ್ಯ ನಿರ್ವಹಣಾ ಯೋಜನೆ ಅವಧಿಗೆ ಸಮನಾಗಿರುತ್ತದೆ. ಆದರೆ ಈ ಮಧ್ಯೆ ಅವಧಿಯ ನಂತರ ಪರಸ್ಪರ ಒಪ್ಪಿಗೆಯಿಂದ ಅಥವಾ ಕಾನೂನಿಗೆ ಅನುಗುಣವಾಗಿ ಒಪ್ಪಂದವನ್ನು ಪರಿಷ್ಕರಿಸಬಹುದು.

೦೪ ಅರಣ್ಯಾಧಿಕಾರಿಗಳ ಜವಾಬ್ದಾರಿ: ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆಗೆ ಒಳಪಟ್ಟಿರುವ ಪ್ರದೇಶಗಳನ್ನು ಜೆ ಎಫ್ ಎಂ ಅರಣ್ಯಗಳಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಸೂಚಿಸತಕ್ಕದ್ದು. ಈ ಪ್ರದೇಶಗಳು ಕರ್ನಾಟಕ ಅರಣ್ಯ ಅಧಿನಿಯಮಗಳ ಪ್ರಬಂಧಗಳ ಮೇರೆಗೆ

ವಿಧಿಬದ್ಧವಾಗಿ ಪರಿಪಾಲಿತವಾಗಿ ಮುಂದುವರೆಯುವುದು. ೪.೩ ಪಶ್ಚಿಮ ಘಟ್ಟ ಅರಣ್ಯೀಕರಣ ಮತ್ತು ಪರಿಸರ ಯೋಜನೆ. ವಿಶ್ವ ಬ್ಯಾಂಕ್ ಒ ಡಿ ಎ ಅನುದಾನಿತ ಸಾಮಾಜಿಕ ಅರಣ್ಯ ಎನ್ ಆರ್ ಇ ಜಿ, ಆರ್ ಎಲ್ ಇ ಜಿ ಪಿ, ಡಿ ಪಿ ಎ ಮತ್ತು ಜೆ ಆರ್ ವೈ ಮುಂತಾದ ಯೋಜನೆಗಳ ಅಡಿಯಲ್ಲಿ ಅಭಿವೃದ್ಧಿಪಡಿಸಿರುವ ಪ್ರದೇಶಗಳು ಮತ್ತು ವಿವಿಧ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ ಬೆಳೆಸಲಾದ ನಡುತೋಪುಗಳನ್ನು ಸಹ ಜೆ ಎಫ್ ಎಂ ಅರಣ್ಯಗಳಾಗಿ ಅಧಿಸೂಚಿಸಬಹುದು. ಅವುಗಳನ್ನು ಜಂಟಿ ನಿರ್ವಹಣೆಗಾಗಿ ಒಳಪಡಿಸುವ ಮೊದಲು ಉಪ ಅರಣ್ಯ ಸಂರಕ್ಷಣಾಧಿಕಾರಿ ಕರ್ನಾಟಿಕ ಭೂ ಕಂದಾಯ ಅಧಿನಿಯಮದ ಉಪಬಂದನೆಗೆ ಅನುಸಾರವಾಗಿ “ರಕ್ಷಿತ ಪ್ರದೇಶಗಳೆಂದು ಸಹ ಏಕ ಕಾಲದಲ್ಲಿ ಅಧಿಸೂಚಿಸುವುದು. ೪.೪ ಜಂಟಿ ಅರಣ್ಯ ಯೋಜನೆ ಮತ್ತು ಕಾರ್ಯ ನಿರ್ವಹಣೆಗೆ ಒಳಪಟ್ಟು ಯಾವುದೇ ಪ್ರದೇಶಗಳಲ್ಲಿ ಜಾನುವಾರು ಮೇಯಿಸುವುದನ್ನು ನಿರ್ಭಂದಿಸಿದಾಗ ಅರಣ್ಯ ಇಲಾಖೆ ಸಾಧ್ಯವಾದಷ್ಟು ಮಟ್ಟಿಗೆ ಜಾನುವಾರುಗಳನ್ನು ಮೇಯಿಸಲು ಬದಲಿ ವ್ಯವಸ್ಥೆ ಮಾಡುವುದು. ೪.೫ ಜೆ ಎಫ್ ಎಂ ಭೂಮಿಯನ್ನು ನಿರ್ವಹಿಸಲು ಸಮುದಾಯದೊಡನೆ ಅರ್ಥಪೂರ್ಣ ಪಾಲುಗಾರಿಕೆ ಹೊಂದಿರುವ ರೀತಿಯಲ್ಲಿ ಸಂಘಟಿಸುವುದು ಮತ್ತು ತರಬೇತಿಯನ್ನು ನೀಡುವುದು. ೪.೬ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅವರಿಗಿಂತ ಮೇಲ್ದರ್ಜೆಯ ಹಿರಿಯ ಅಧಿಕಾರಿಗಳು ೬ ತಿಂಗಳಿಗೊಮ್ಮೆ ಪ್ರತಿಯೊಂದು ಗ್ರಾಮ ಅರಣ್ಯ ಸಮಿತಿಯ ಕನಿಷ್ಟ ಒಂದು ಸಭೆಗೆ ಹಾಜಾರಾಗುವುದು. ಗ್ರಾಮ ಅರಣ್ಯ ಸಮಿತಿಗಳು ಕಾರ್ಯ ನಿರ್ವಹಿಸುವೆಡೆ ಸಮಸ್ಯೆಗಳುಂಟಾದಾಗ ವಲಯ ಅರಣ್ಯಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾದ್ಯವಾದಷ್ಟು ಬೇಗ ಇತ್ಯರ್ಥ ಪಡಿಸುವುದು. ೪.೮ ಇಲಾಖೆಯು ಗ್ರಾಮ ಅರಣ್ಯ ಸಮಿತಿಗೆ ಮಾಹಿತಿ ಒದಗಿಸಲು ಮತ್ತು ಅರಣ್ಯ ನಿರ್ವಹಣೆಯ ಎಲ್ಲಾ ಅಂಶಗಳ ಬಗ್ಗೆ ಸದಸ್ಯರಿಗೆ ಸರಿಯಾದ ತರಬೇತಿ ಕೊಡಲು ಎಚ್ಚರಿಕೆ ವಹಿಸುವುದು. ಅದ್ಭುತ ಯಶಸ್ಸುಪಡೆದಿರುವ ಅರಣ್ಯ ಸಮಿತಿ ಸದಸ್ಯರುಗಳ ಬೇಟಿಯನ್ನು ಮಾಡಿಸುವುದು ಮತ್ತು ಸ್ವಂತ ಮೌಲ್ಯಮಾಪನ ಮಾಡಿಸುವುದು. ೪.೯ ವಲಯ ಅರಣ್ಯಾಧಿಕಾರಿಗಳು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರುಗಳು ಜೆ ಎಪ್ ಎಂ ಅರಣ್ಯಗಳನ್ನು ಏಕಕಾಲಕ್ಕೆ ಪರಿಶೀಲಿಸಿ ಗ್ರಾಮ ಅರಣ್ಯ ಸಮಿತಿಯು ತೆಗೆದುಕೊಳ್ಳಬೇಕಾದ ಅವಶ್ಯಕ ಕಾರ್ಯಕ್ರಮಗಳ ಬಗ್ಗೆ ಸೂಚಿಸುವುದು.

ಗ್ರಾಮ ಅರಣ್ಯ ಸಮಿತಿ ಕರ್ತವ್ಯಗಳು ಮತ್ತು ಜವಾಬ್ದಾರಿಗಳು

೦೧. ಯೋಜನೆಗಳನ್ನು ತಯಾರಿಸಲು ಅರಣ್ಯ ಇಲಾಖೆಗೆ ಸಹಾಯ ಕಲ್ಪಿಸುವುದು.

೦೨. ಸಮಿತಿ ಅನುಮೋದಿಸುವ ನಿರ್ವಹಣಾ ಯೋಜನೆ ಪ್ರಕಾರ ಕಾರ್ಯ ನಿರ್ವಹಣಾ ಕಾರ್ಯದಲ್ಲಿ ಇಲಾಖೆಗೆ ಸಹಾಯ ಮಾಡುವುದು.

೦೩. ಯೋಜನೆಯಲ್ಲಿ ಗುರುತಿಸಿರುವ ಪ್ರದೇಶಗಳನ್ನು ಸಂಪೂರ್ಣವಾಗಿ ರಕ್ಷಣೆ ಮಾಡಿ ಸಂರಕ್ಷಿಸುವುದು.

೦೪. ಅರಣ್ಯ ಒತ್ತುವರಿ ಪ್ರದೇಶಗಳನ್ನು ತಡೆಗಟ್ಟುವುದು, ಅರಣ್ಯಕ್ಕೆ ಬೆಂಕಿ ಬೀಳುವುದನ್ನು ತಡೆಗಟ್ಟುವುದು, ಅಕ್ರಮ ಮರ ಕಡಿಯುವಿಕೆ, ಅರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆ ತಡೆಗಟ್ಟುವುದು. ವನ್ಯ ಪ್ರಾಣಿಗಳ ಬೇಟೆಯನ್ನು ತಡೆವುದು.

೦೫. ಅರಣ್ಯಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಗೋಬರ್ ಗ್ಯಾಸ್, ಹೊಗೆ ರಹಿತ ಒಲೆ, ಸೌರ ಶಕ್ತಿ ಘಟಕ ಇತ್ಯಾಧಿಗಳನ್ನು ಉಪಯೋಗಿಸಲು ಜನರನ್ನು ಪ್ರೇರೇಪಿಸುವುದು.

೦೬. ಸಮಿತಿಯ ಸದಸ್ಯರಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

೦೭. ಜಂಟಿ ಅರಣ್ಯ ಯೋಜನಾ ನಿರ್ವಹಣೆಯ ವ್ಯಾಪ್ತಿಯ ಪ್ರದೇಶದಲ್ಲಿ ನಡೆತೋಪು ಸಂರಕ್ಷಣೆ, ರಕ್ಷಣೆ, ಸುಧಾರಣೆ, ಅಭಿವೃದ್ಧಿ ಮತ್ತು ನಿರ್ವಹಣೆ ವೆಚ್ಚವನ್ನು ಅರಣ್ಯ ಇಲಾಖೆಯು ಪ್ರಾರಂಭಿಕ ವೆಚ್ಚ ಸಹಿತ ೩ ವರ್ಷಗಳವರೆಗೆ ಬರಿಸುವುದು. ತದ ನಂತರ ಅರಣ್ಯ ಇಲಾಖೆಯು ಸಮಿತಿಗೆ ಸೂಕ್ತ ಮಾರ್ಗದರ್ಶನ ನೀಡಿ ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳುವುದು.

ಸಮಿತಿಯ ಆಡಳಿತ

೦೧. ನಿರ್ವಹಣಾ ಸಮಿತಿ ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು, ಹಾಗೂ ಕಾರ್ಯದರ್ಶಿ ಇದನ್ನು ಸಂಯೋಜಿಸತಕ್ಕದ್ದು.

೦೨. ನಡಾವಳಿ ಪುಸ್ತಕವನ್ನು ನಿರ್ದೇಶಿಸುವುದು ಅದರಲ್ಲಿ ಸಮಿತಿಯ ಸಭೆಗಳನ್ನು ಮತ್ತು ಸದಸ್ಯರ ಸಭೆಗಳ ವ್ಯವಹಾರಗಳನ್ನು ದಾಖಲಾಯಿಸುವುದು ಇದರೊಂದಿಗೆ ಕಾರ್ಯಕಾರಿ ಸಮಿತಿ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳ ಸಹಿ ಹಾಕಿಸುವುದು ಮತ್ತು ಇದನ್ನು ವಲಯ ಅರಣ್ಯಾಧಿಕಾರಿಗಳಿಗೆ ಕಳುಹಿಸುವುದು.

೦೩. ಸಮಿತಿಯು ಉಚಿತವಾಗಿ ಸಂಗ್ರಹಿಸಿಕೊಳ್ಳಲು ಅನುಮತಿಸಿರುವ ಅರಣ್ಯ ಉತ್ಪನ್ನಗಳ ವಿವರಗಳು. ಕೈಗೆತ್ತಿಕೊಳ್ಳಲಾದ ಎಲ್ಲಾ ಕೆಲಸಗಳ ಮತ್ತು ಮಾಡಲಾದ ಎಲ್ಲಾ ವೆಚ್ಚಗಳ ಸಂಪೂರ್ಣ ಕ್ರಮಬದ್ಧ ಲೆಕ್ಕ ಪತ್ರಗಳನ್ನು ಇಡುವುದು. ಅರಣ್ಯ ಉತ್ಪನ್ನ ಪಾಲುಗಾರರು ಪಡೆದ ಉತ್ಪನ್ನಗಳ ವಿವರ ಹಾಗೂ ಮಾರಾಟ ಮಾಡಿದ ಅರಣ್ಯ ಉತ್ಪನ್ನಗಳ ಪ್ರತಿಯೊಂದು ವಿವರಗಳನ್ನು ದಾಖಲುಮಾಡಿ ಅದರ ಪ್ರತಿಯೊಂದನ್ನು ನಿಗದಿತ ನಮೂನೆಯಲ್ಲಿ ಮೂರು ತಿಂಗಳಿಗೊಮ್ಮೆ ವಲಯ ಅರಣ್ಯಾಧಿಕಾರಿಗಳಿಗೆ ನೀಡುವುದು.

ಸದಸ್ಯತ್ವ ರದ್ದತಿ, ಸಮಿತಿಗಳ ವಿಸರ್ಜನೆ, ಮೇಲ್ಮನವಿಗಳು

೦೧ ಕಾರ್ಯಕಾರಿ ಸಮಿತಿಯ ಯಾರೇ ಸದಸ್ಯರು ಸಮಿತಿಯ ಮೂರು ಕ್ರಮಾನುಗತ ಸಭೆಗಳಿಗೆ ಹಾಜರಾಗಲು ತಪ್ಪಿದ್ದಲ್ಲಿ ಸಂಬಂಧ ಪಟ್ಟ ಸದಸ್ಯನಿಗೆ ತನ್ನ ಅಹವಾಲು ಹೇಳಿಕೆಗೆ ಅವಕಾಶ ನೀಡಿದ ನಂತರ ಸದಸ್ಯ ಕಾರ್ಯದರ್ಶಿ ಶಿಫಾರಸ್ಸಿನ ಮೇಲೆ ವಲಯ ಅರಣ್ಯ ಅಧಿಕಾರಿಯು ಅವನನ್ನು ಸದಸ್ಯತ್ವದಿಂದ ತೆಗೆದುಹಾಕಬಹುದು.

೦೨. ಅರಣ್ಯ ಮತ್ತು ಯೋಜನೆಯ ಪ್ರದೇಶಗಳ ಸರಿಯಾದ ನಿರ್ವಹಣೆಯ ಹಿತದೃಷ್ಟಿಯಿಂದ ಮತ್ತು ಸಮಿತಿಯ ಸರಿಯಾಗಿ ಕಾರ್ಯನಿರ್ವಹಿಸುವ ದೃಷ್ಟಿಯಿಂದ ಹಾಗೇ ಮಾಡುವುದು

ಅವಶ್ಯವೆಂದು ಕಂಡುಬಂದಲ್ಲಿ ನಿರ್ವಹಣಾ ಸಮಿತಿಯ ಶಿಫಾರಸ್ಸಿನ ಮೇಲೆ ಯಾವುದೇ ಸದಸ್ಯನು ಖಾಯಂ ಆಗಿ ಅಥವಾ ಒಂದು ನಿರ್ದಿಷ್ಟ ಅವಧಿಗೆ ಅನರ್ಹಗೊಳಿಸಲು ವಲಯಾರಣ್ಯಾಧಿಕಾರಿ ಶಿಫಾರಸ್ಸು ಮಾಡುವುದು.

೦೩. ಸಮಿತಿ ಸದಸ್ಯನು ಅತಿಕ್ರಮಣ, ಶ್ರೀಗಂಧ ಅಥವಾ ನಾಟಾಗಳ ಕಳ್ಳ ಸಾಗಾಣಿಕೆ, ವನ್ಯ ಪ್ರಾಣಿಗಳನ್ನು ಬೇಟೆಯಾಡುವುದು, ಅರಣ್ಯಕ್ಕೆ ಬೆಂಕಿ ಇಡುವುದು, ಸರ್ಕಾರಿ ಅರಣ್ಯ ಪ್ರದೇಶಗಳಿಂದ ಕಳ್ಳಸಾಗಾಣಿಕೆ ಮಾಡುವುದು ಅಥವಾ ಅರಣ್ಯ ಅಪರಾಧಗಳಲ್ಲಿ ಶಾಮಿಲಾದರೆ ಅಂತಹ ಸದಸ್ಯತ್ವವನ್ನು ಅರಣ್ಯ ಅಪರಾಧ ಮಾಡಿದ ದಿವಸದಿಂದ ನಿರ್ವಹಣಾ ಸಮಿತಿಯ ಅವಧಿಯ ಸಮನಾದ ಅವಧಿವರೆಗೂ ಅನರ್ಹಗೊಳಿಸುವುದು.

೦೪. ಸಮಿತಿಯು ಸರಿಯಾಗಿ ಕಾರ್ಯನಿರ್ವಹಿಸಲು ತಪ್ಪಿದ್ದಲ್ಲಿ ಅಥವಾ ಆರ್ಥಿಕ ಅಕ್ರಮಗಳು, ದುರುಪಯೋಗ ಅಥವಾ ಯಾವುದೇ ನಿಯಮಗಳ ಉಲ್ಲಂಘನೆಯ ಸಂದರ್ಭಗಳಿದ್ದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ವಿಭಾಗೀಯ ಮಟ್ಟದ ನಿಯಂತ್ರಣ ಸಮಿತಿಯ ಶಿಫಾರಸ್ಸು ಮೇರೆಗೆ ನಿರ್ವಹಣಾ ಸಮಿತಿಯನ್ನು ರದ್ದುಪಡಿಸಬಹುದು. ಅಂತಹ ರದ್ಧತಿಗೆ ಮೊದಲು ಮಾಡಿರುವ ಯಾವುದೇ ಕೆಲಸಕ್ಕೆ ಯಾವುದೇ ಪರಿಹಾರ ಸಂದಾಯ ಮಾಡಬೇಕಾಗಿರುವುದಿಲ್ಲ.

೦೫. ಮೇಲೆ ತಿಳಿಸಲಾದ ಕಂಡಿಕೆಯ ಮೇರೆಗೆ ತೆಗೆದುಕೊಂಡ ಯಾವುದೇ ದಂಡ ಕ್ರಮದ ವಿರುದ್ಧ ಮೇಲ್ಮನವಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮೇಲ್ಮನವಿಯನ್ನು ವಿಭಾಗೀಯ ನಿಯಂತ್ರಣ ಸಮಿತಿಗೆ ಪರಿಶೀಲನೆ ಕೊಟ್ಟು ಅದರಿಂದ ತರಿಸಿಕೊಂಡು ಮಾಡಿದ ಆಜ್ಞೆಯು ಅಂತಿಮ ಮತ್ತು ಸಂಬಂಧಪಟ್ಟವರು ಇದಕ್ಕೆ ಬದ್ಧರಾಗಬೇಕು.

ಲೆಕ್ಕಪತ್ರಗಳು

೦೧. ಸದಸ್ಯ ಕಾರ್ಯದರ್ಶಿ ಮುಖ್ಯವಾಗಿ ಗ್ರಾಮ ಅರಣ್ಯ ಸಮಿತಿಯ ಮತ್ತು ಗ್ರಾಮ ಅರಣ್ಯ ಅಭಿವೃದ್ಧಿಯ ನಿಗಮದ ಪುಸ್ತಕ ಮತ್ತು ಇತರೆ ಲೆಕ್ಕ ಪತ್ರಗಳೊಂದಿಗೆ ಎಲ್ಲಾ ದಾಖಲೆಗಳನ್ನು ಮುಕ್ತವಾಗಿ ನಿರ್ವಹಿಸಲು ಜವಾಬ್ದಾರನಾಗಿರತಕ್ಕದ್ದು.

೦೨. ಅಧಿಕಾರ ಕ್ಷೇತ್ರವುಳ್ಳ ವಲಯ ಅರಣ್ಯಾಧಿಕಾರಿಗಳು ಗ್ರಾಮ ಅರಣ್ಯ ಅಭಿವೃದ್ಧಿ ನಿಧಿಯ ಪರಿಶೋಧಿತ ಲೆಕ್ಕ ಪತ್ರಗಳನ್ನು ವರ್ಷಕ್ಕೆ ಒಂದು ಬಾರಿ ಪರಿಶೀಲಿಸಿ ಅಭಿಪ್ರಾಯಗಳನ್ನು ವರದಿ ಮಾಡತಕ್ಕದ್ದು.

೦೩. ಸಮಿತಿಯು ಸದಸ್ಯ ಕಾರ್ಯದರ್ಶಿಯಿಂದ ತಯಾರಿಸುವ ಗ್ರಾಮ ಅರಣ್ಯ ಸಮಿತಿಯು ಮಾರ್ಚ ೩೧ಕ್ಕೆ ಅಂತ್ಯಗೊಳ್ಳುವ ಲೆಕ್ಕ ಪತ್ರಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ವ್ಯವಸ್ಥೆಗೊಳಿಸಿದ ರೀತಿಯಲ್ಲಿ ಪರಿಶೋಧನೆಮಾಡಿಸಿ ಅದನ್ನು ಪ್ರತಿ ವರ್ಷ ಜೂನ್ ೩೦ ರೊಳಗೆ ಮಹಾಮಂಡಳಿಯ ಮುಂದೆ ಮಂಡಿಸತಕ್ಕದ್ದು.

೦೪. ಗ್ರಾಮ ಅರಣ್ಯ ಸಮಿತಿಯ ಪ್ರಾರಂಭಿಕ ಖರ್ಚು ವೆಚ್ಚಗಳಿಗೆ ಅವಶ್ಯವಾದ ಮೂಲಧನವನ್ನು ಅರಣ್ಯ ಇಲಾಖೆ ಒದಗಿಸುವುದು.

ನಿಬಂಧನೆಗಳು

೦೧. ಯಶಸ್ವಿ ಜಂಟಿ ಅರಣ್ಯ ಯೋಜನೆ ಮತ್ತು ಕಾರ್ಯ ನಿರ್ವಹಣೆ ಸಲುವಾಗಿ ಸರ್ಕಾರಿ ಆದೇಶ ದಿನಾಂಕ: ೧೨–೦೪–೧೯೯೩ ಕ್ಕೆ ತಿದ್ದುಪಡಿ ಆದಾಗ ಮತ್ತು ಅನುಮೋದಿತ ನಿರ್ವಹಣೆ ಯೋಜನೆಗೆ ಮಾರ್ಪಾಡು ಅವಶ್ಯವೆನಿಸಿದಾಗ ಅಗತ್ಯ ತಿದ್ದುಪಡಿಗಳನ್ನು ಅಳವಡಿಸಿ ಪೂರಕ ಒಪ್ಪಂದ ಪತ್ರವನ್ನು ಮಾಡಿಕೊಳ್ಳುವುದು.

೦೨. ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಸಮಿತಿ ಯಾವುದೇ ಸಮಯದಲ್ಲಿ ಪರಸ್ಪರ ಒಪ್ಪಿ, ಈ ಒಪ್ಪಂದ ಪತ್ರ ನಿಬಂಧನೆಗಳನ್ನು ಮಾರ್ಪಾಡು ಮಾಡುವುದು.

೦೩. ಸಮಿತಿಯ ಯೋಜನೆಗೆ ಒಳಪಡಿಸಿರುವ ಭೂಮಿಯಲ್ಲಿ ಅರಣ್ಯೇತರ ಬೆಳೆಗಳ ವ್ಯವಸಾಯ ಅಥವಾ ಸಾಗುವಳಿ ಮಾಡತಕ್ಕದ್ದಲ್ಲ.

೦೪. ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣಾ ಯೋಜನೆಗೆ ಸಂಬಂಧಿಸಿದ ನೀತಿ ನಿಯಮಗಳ ವಿಚಾರದಲ್ಲಿ ಸಮಸ್ಯೆ ಉಂಟಾದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ತೀರ್ಮಾನವೇ ಅಂತಿಮವಾಗಿರುತ್ತದೆ.

ಕೋಷ್ಟಕ ೫

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಇ ಡಿ ಸಿ ಗಳ ವಿವರ [೧೨]

ಕ್ರಸಂ	ವಲಯ	ಇ ಡಿ ಸಿ ಹೆಸರು	ಸದಸ್ಯರು
೧	ಕೆರೆಕಟ್ಟೆ (ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ)	ಶೀರ್ಲು	೪೫
		ಭಲೇಕಡಿ	೪೮
		ಗುಲಗಂಜಿಮನೆ	೬೪
		ಮುಡುಬಾ	೩೫
೨	ಕಾರ್ಕಳ (ಉಡುಪಿ ಜಿಲ್ಲೆ)	ಈದು	೧೨
		ನೂರಾಳ್ ಬೆಟ್ಟು	೧೨
೩	ಬೆಳ್ತಂಗಡಿ (ದಕ್ಷಿಣ ಕನ್ನಡ ಜಿಲ್ಲೆ)	ನಡ	೧೦೧
		ಸವಣಾಲು	೬೮
		ಎಳನೀರು	೩೧
		ಮಾಳಿಗೆ	೬೩
೪	ಕುದುರೆಮುಖ (ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ)	ಬಿಳಗಲ್	೨೦
		ಶುಂಠಿಕುಮ್ರಿ	೨೦
		ಮುಳ್ಳೋಡಿ	೨೦

ಮೂಲ: ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕುದುರೆಮುಖ ರಾಷ್ಟ್ರೀಯ ಉದ್ಯಾನವ (ವನ್ಯಜೀವಿ ವಲಯ). ಕಾರ್ಕಳ.

ಜಂಟಿ ಅರಣ್ಯ ನಿರ್ವಹಣಾ ಕಾರ್ಯಕ್ರಮದಡಿ ಅರಣ್ಯಗಳ ಅಭಿವೃದ್ಧಿಗಾಗಿ ಸ್ಥಳೀಯ ಜನರೊಡನೆ ಸಮಿತಿಯ ರಚನೆಯೊಂದಿಗೆ ಇಲಾಖೆಯ ಮುತುವರ್ಜಿ, ಸಹಕಾರ ಹಾಗೂ ಸಹಭಾಗಿತ್ವದೊಂದಿಗೆ ವಲಯವಾರು ಪ್ರದೇಶಗಳಲ್ಲಿ ಸ್ಥಾಪನೆ ಮಾಡಲಾಗಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಪ್ರತಿ ವಲಯದ ವಿಸ್ತೀರ್ಣಗಳ ಆಧಾರದ ಮೇಲೆ ಅವಶ್ಯವಿರುವ ಸಂಖ್ಯೆಗಳಷ್ಟು ಸಮಿತಿಗಳನ್ನು ರಚಿಸಲಾಗಿದೆ, ಹಾಗೂ ಇಂದಿಗೂ ಕಾರ್ಯಚಟುವಟಿಕೆಗಳಲ್ಲಿ ಮುಂದುವರೆಯುತ್ತಿದೆ. ಈ ಪ್ರಕಾರದ ಸಮಿತಿ ರಚನೆಯಿಂದ ಅರಣ್ಯಗಳಲ್ಲಿ ಸಂಭವಿಸುವ ಅವಘಡಗಳಾದ ಅಗ್ನಿ ಅನಾಹುತ, ಮರಗಳ ಕಳ್ಳ ಸಾಗಾಣಿಕೆ, ವನ್ಯಜೀವಿಗಳ ಭೇಟೆ, ಅರಣ್ಯ ಕಿರು ಉತ್ಪನ್ನಗಳ ಕಳ್ಳ ಸಾಗಾಣಿಕೆ ಮೇಲೆ ನಿಯಂತ್ರಣವನ್ನು ಸಾಧಿಸಿದಂತಾಗುವುದು. ಒಂದೆಡೆ ಸಾರ್ವಜನಿಕರಿಂದ ಅರಣ್ಯ ಸಂರಕ್ಷಣೆ ಮತ್ತು ಇಲಾಖೆಯಿಂದ ಸಹಕಾರದ ಒಲವು ಅರಣ್ಯವನ್ನು ಹಲವು ಸಂದರ್ಭದಲ್ಲಿ ಸಂರಕ್ಷಿಸಲು ಸಾಧ್ಯವಾಗಿದೆ ಎಂಬುದನ್ನು ತಿಳಿಸಿದರು. – ಶ್ರೀ ಸುರೇಶ್ ಭಟ್ಟರು, ಕೆಂಗನಕೊಂಡ. ಕುದುರೆಮುಖ ವಲಯ.

೬. ಕುದುರೆಮುಖ ಗಣಿಗಾರಿಕೆ

ಭಾರತ ದೇಶವು ಅಗಾಧವಾದ ಜೈವಿಕ, ಪ್ರಾಕೃತಿಕ ಮತ್ತು ಖನಿಜ ಸಂಪನ್ಮೂಲವನ್ನು ಹೊಂದಿರುವ ರಾಷ್ಟ್ರವಾಗಿದೆ. ಸಂಪನ್ಮೂಲಗಳು ದೇಶದ ಆಸ್ತಿಗಳು, ಅವುಗಳನ್ನು ಉಳಿಸುವ ಹಾಗೂ ಅಳಿಸುವೆಡೆ ಪ್ರಭುತ್ವದ ಆಡಳಿತ, ಮಹತ್ವದ ಪಾತ್ರವನ್ನು ವಹಿಸುತ್ತದೆ. ಈ ಹಿನ್ನೆಲೆಯಲ್ಲಿ ವಸಾಹತ್ತೋತ್ತರ ಭಾರತವು ಅಭಿವೃದ್ಧಿಯ ದಿಶೆಯಲ್ಲಿ ಮುನ್ನಡೆಯುವ ಸಂದರ್ಭದಲ್ಲಿ ತನ್ನಲ್ಲಿರುವ ಅಗಾಧ ಸಂಪನ್ಮೂಲಗಳನ್ನು ಬಳಸಿಕೊಂಡಿದ್ದು ಇತಿಹಾಸವೂ ಕೂಡ ಹಾಗೂ ಬಳಸಿಕೊಳ್ಳುತ್ತಿರುವುದು ವಾಸ್ತವವೂ ಕೂಡ. ಸಂಪನ್ಮೂಲದ ಬಳಕೆಯಿಂದ ಒಂದೆಡೆ ಯುವಕರಿಗೆ ಉದ್ಯೋಗಾವಕಾಶ ಹೆಚ್ಚುತ್ತದೆ ಇದರಿಂದ ಆರ್ಥಿಕ ಮೂಲದ ಜೀವನೋಪಾಯಗಳ ಅಭಿವೃದ್ಧಿಯಾಗಿ ತಲಾ ಆದಾಯಗಳು ಹೆಚ್ಚಾಗುತ್ತವೆ. ಇದೇ ಸಂಪನ್ಮೂಲ ಬಳಕೆಯಿಂದ ಧರೆಯಲ್ಲಿ ಸಂಪತ್ಭರಿತವಾಗಿ ಬೆಳದಿದ್ದ ಪೂರಕ ಪ್ರಾಕೃತಿಕ ಪರಿಸರದ ಜೀವವೈವಿಧ್ಯತೆ, ಅರಣ್ಯ ಸಂಪನ್ಮೂಲ, ಜೀವ ನದಿಗಳ ಜಾಲ, ಜಲಚರಗಳು, ನದಿ ನೀರು ಆಶ್ರಯಿತ ಸಮುದಾಯಗಳು ಬೆಳೆಯುವ ಬೆಳೆಗಳು ಹೀಗೆ ಜೀವದ ಸರಪಳಿಗಳು ಕೊಂಡಿಗಳನ್ನು ಕಳಚಿಕೊಳ್ಳುತ್ತಾ 'ಮಿಸ್ಸಿಂಗ್ ಲಿಂಕ್' ಗಳಾಗಿ ಹೋಗುತ್ತವೆ. ಲಿಂಕ್‌ಗಳನ್ನು ಯೋಜನೆ ಅನುಷ್ಠಾನಗೊಳಿಸಿದ ಅಲ್ಪ ಕಾಲದಲ್ಲಿಯೇ ಕಳಚಿ ಬಿಡಬಹುದು, ಆದರೆ ಅದೇ ಲಿಂಕ್‌ಗಳನ್ನು ಬೆಳೆಸಲು ಎಷ್ಟು ವರ್ಷಗಳನ್ನು – ಎಷ್ಟು ಪೀಳಿಗೆಯನ್ನು ದಾಟಬೇಕಾಗಬಹುದು ಎಂಬುದನ್ನು ಊಹಿಸಲು ಅಸಾಧ್ಯವಾಗುತ್ತದೆ. ಕಾರ್ಲಮಾರ್ಕ್ಸ್ ಮತ್ತು ಏನ್ಜಲ್ಸ್ ಅವರು ಮಾನವೀಯತೆ ಮತ್ತು ಪ್ರಕೃತಿಯ ನಡುವಿನ ಸಂಬಂಧ ದೃಷ್ಟಿಯಲ್ಲಿ "ಮಾನವನು ಪರಿಸರದಿಂದ ಬೇರ್ಪಟ್ಟಿಲ್ಲ, ಬಂಡವಾಳ ಶಾಹಿಗಳ ಸಾಂಪ್ರದಾಯಿಕ ಅಂಶಗಳು ಅವನನ್ನು ಬೇರ್ಪಡುವಂತೆ ಮಾಡಿದೆ. ಆದರೆ, ಮಾನವನು ಪರಿಸದೊಂದಿಗೆ ದ್ವಂದ್ವೀಯವಾಗಿ ಸಂಬಂಧಿಯಾಗಿದ್ದಾನೆ"[೧೩], ಎಂದು ಉಲ್ಲೇಖಿಸಿದ್ದಾರೆ. ಮಾನವ ಪರಿಸರದ ಕೂಸು ಎಂಬುದು ಕಾಲ ಕಾಲಕ್ಕೂ ಸತ್ಯ. ಆದರೆ ಅನುಭೋಗಿಯ ದೃಷ್ಟಿಯಲ್ಲಿ ತನ್ನನ್ನು ತಾನು ಪರಿಸರದ ಕೂಸೆಂಬುದನ್ನು ಮರೆತು ತನಗೆ ಹಾಲುಣಿಸಿದ ತಾಯಯನ್ನೇ ಕಡೆಗಣಿಸಿ ಬಂಡವಾಳದ ಹುಸಿ

ಪ್ರೀತಿಯ ಸುಳಿಯಲಿ ಸಿಲುಕಿ ತನ್ನ ಅಸ್ತಿತ್ವವನ್ನೇ ಬುಡ ಮೇಲು ಮಾಡಿಕೊಳ್ಳುತ್ತಿದ್ದಾನೆ. ಪರಿಸರದ ಒಡಲೊಳಿರುವ ಸಂಪನ್ಮೂಲವನ್ನು ಬಗೆದು ಜೀವ ಜಾಲಕ್ಕೆ ಹಾಗೂ ಪರಿಸರಕ್ಕೆ ಸಂಚಕಾರವನ್ನು ತಂದೊಡ್ಡಿದ್ದಾನೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದ ಪಶ್ಚಿಮ ಘಟ್ಟ ಪ್ರದೇಶದಲ್ಲಿ ೩ ದಶಕಗಳ ನೆಲೆನಿಂತಂತಹ ಬೃಹತ್ ಸಾರ್ವಜನಿಕ ಉದ್ಯಮವಾದ ಹಾಗೂ ಭಾರತ ಸರ್ಕಾರದ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದ ಅಡಿಯಲ್ಲಿ ಬರುವ ಕೆ.ಐ.ಓ.ಸಿ.ಎಲ್ – ಕುದುರೆಮುಖ ಕಬ್ಬಿಣ ಅದಿರು ಕಂಪನಿ ನಿಗಮದ ಕುರಿತಾಗಿ ಒಂದಿಷ್ಟು ಮಹಿತಿ ತಿಳಿಯೋಣ.

ಅಂದು ೧೯ ನೇ ಶತಮಾನದ ಬ್ರಿಟೀಷ್ ಪ್ರೆಸಿಡೆನ್ಸಿ ಆಡಳಿತದ ಸಮಯದಲ್ಲಿ ಮದ್ರಾಸ್ ಪ್ರಾಂತ್ಯಕ್ಕೆ ಕರ್ನಾಟಕದ ಆಡಳಿತ ಒಳಪಟ್ಟಿತ್ತು. ೧೯೦೨ ರಲ್ಲಿ ಡಾ. ಸ್ಮಿತ್ ಮೈಸೂರು ವಿಭಾಗಕ್ಕೆ ಭೂಗರ್ಭ ಶಾಸ್ತ್ರಜ್ಞರಾಗಿ ನೇಮಕಗೊಂಡಿದ್ದ ಕಾಲದಲ್ಲಿ, ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಭೂಗರ್ಭ ಶಾಸ್ತ್ರದಲ್ಲಿ ಪದವಿ ಪಡೆದ ಪ್ರೊ. ಸಂಪತ್ ಐಯ್ಯಂಗಾರ್ ಅವರು ೧೯೦೧ ರಿಂದ ಸಹಾಯಕರಾಗಿ ನೇಮಕವಾದರು[೪]. ೧೯೧೩ ರಲ್ಲಿ ಕುದುರೆಮುಖ ಪ್ರದೇಶದ ಸಮೀಕ್ಷೆಯನ್ನು ನೆಡೆಸುವ ಸಂದರ್ಭದಲ್ಲಿ ಡಾ. ಸ್ಮಿತ್ ಅವರು ಹಾವು ಕಡಿತಕ್ಕೆ ತುತ್ತಾಗಿ ಸಾವನ್ನಪ್ಪುತ್ತಾರೆ. ಎಂದಿನಂತೆ ಮುಂದುವರೆದ ಸಮೀಕ್ಷಾ ಕಾರ್ಯದಲ್ಲಿ ಕುದುರೆಮುಖ ಪ್ರದೇಶವು ಅತ್ಯುತ್ತಮವಾದ ಕಬ್ಬಿಣದ ಮ್ಯಾಗ್ನಾಟೈಟ್ ಅದಿರು ಹೊಂದಿರುವುದನ್ನು ಕಂಡುಹಿಡಿದರು. ೧೯೨೪ ರ ವೇಳೆಗೆ ಸರ್. ಎಂ. ವಿಶ್ವೇಶ್ವರಯ್ಯ ಅವರು ಪ್ರೊ. ಸಂಪತ್ ಐಯ್ಯಂಗಾರ್ ಅವರನ್ನು ಭಾರತೀಯ ಭೂಗರ್ಭ ಸಮೀಕ್ಷಾ ನಿರ್ದೇಶಕರನ್ನಾಗಿ ನೇಮಿಸಲು ಬ್ರಿಟೀಷ್ ಆಡಳಿತಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿದರು. ತರುವಾಯ ೧೯೨೪ ರಲ್ಲಿ ಭಾರತೀಯ ಭೂಗರ್ಭ ಸಮೀಕ್ಷಾ ನಿರ್ದೇಶಕರನ್ನಾಗಿ ನೇಮಿಸಲಾಯಿತು. ಮುಂದಿನ ದಿನಮಾನಗಳಲ್ಲಿ ಐಯ್ಯಂಗಾರ್ ಅವರು ೩ ಹುದ್ದೆಗಳನ್ನು ಸಮಾನಕಾಲದಲ್ಲಿ ನಿಭಾಯಿಸುವ ಸಂದರ್ಭವು ಬಂದೊದಗಿತು ಅವರು ಪ್ರೊಫೆಸರ್ ಮತ್ತು ಭೂಗರ್ಭಶಾಸ್ತ್ರ ಇಲಾಖೆಯ ನಿರ್ದೇಶಕರಾಗಿ ಮತ್ತು ಛೇರ್‌ಮನ್ ಆಫ್ ನ್ಯಾಚುರಲ್ ಸೈನ್ಸ್ ವಿಭಾಗಕ್ಕೆ ಆಯ್ಕೆಯಾಗಿದ್ದರು. ಪ್ರೊ. ಸಂಪತ್ ಐಯ್ಯಂಗಾರ್ ಅವರು ೧೯೧೩ ರಲ್ಲಿ ತಮ್ಮ ಶೋಧನೆ ಮೂಲಕ ಕರ್ನಾಟಕದ ಕುದುರೆಮುಖ ಭಾಗದಲ್ಲಿರುವ ಕಬ್ಬಿಣ ಅದಿರು ನಿಕ್ಷೇಪವನ್ನು ಕಂಡುಹಿಡಿದ ಮೇಲೆ ೧೯೬೬ರಿಂದ ಭೂಗರ್ಭದಲ್ಲಿರುವ ನಿಕ್ಷೇಪವನ್ನು ಹೊರತೆಗಯಲು ಯೋಜನೆಯೊಂದು ಸಿದ್ಧಗೊಂಡಿತು.

ಎರಡನೇ ಮಹಾಯುದ್ಧದ ನಂತರದಲ್ಲಿ ಬ್ರಿಟೀಷ್ ಆಡಳಿತ ವ್ಯವಸ್ಥೆಯಿಂದ ಏಷ್ಯಾ, ಆಫ್ರಿಕಾ ಮೂಲದ ಅನೇಕ ದೇಶಗಳು ಸ್ವತಂತ್ರಗೊಂಡವು. ಆದರೂ ವಿದೇಶಿ ಬಂಡವಾಳ ಊಡಿಕೆ ನಿಲ್ಲದೆ, ಅಮೇರಿಕಾ, ಜಪಾನ್ ಮತ್ತು ಇನ್ನಿತರ ರಾಷ್ಟ್ರಗಳ ಬಂಡವಾಳ ಭಾರತದತ್ತ ಹರಿಯುವಿಕೆಗೆ ಆರಂಭವಾಯಿತು. ಈ ಸಂದರ್ಭದಲ್ಲಿ ಅದಿರು ನಿಕ್ಷೇಪಗಳ ಮೇಲೆ ತಮ್ಮ ಚಕ್ರಾಧಿಪತ್ಯ ಸ್ಥಾಪನೆಯ ಹಾದಿಯಲ್ಲಿ ಎಂ ಎನ್ ಸಿ ಗಳು ದಾಪುಗಾಲನ್ನು ಹಾಕಿದವು. ಈ ಮೂಲಕ ವಿಶ್ವಸಂಸ್ಥೆಯ ಐ ಎಂ ಎಫ್ ಮತ್ತು ವಿಶ್ವಬ್ಯಾಂಕ್‌ಗಳು ಅಭಿವೃದ್ಧಿಯ ನೆಪದಲ್ಲಿ ತೃತೀಯ ಜಗತ್ತಿನ ದೇಶಗಳೆಲ್ಲ ಇವರ ಇಚ್ಛೆಗೆ ಒಳಪಟ್ಟು ತಮ್ಮ ತನವನ್ನು ಅಥವಾ ಸ್ವಾವಲಂಬನೆಯ ಮೂಲವನ್ನು ನಾಶಗೊಳಿಸ ತೊಡಗಿದವು. ಬಂಡವಾಳವುಳ್ಳ ರಾಷ್ಟ್ರಗಳು ಅಗ್ಗದ ದರದಲ್ಲಿ ಅಧಿಕ ಪ್ರಮಾಣದ ಅದಿರನ್ನು

ಕೊಂಡುಕೊಂಡು ಸಿದ್ಧವಸ್ತುಗಳನ್ನಾಗಿ ಪರಿವರ್ತಿಸಿ ನಮಗೆ ವಾಪಾಸು ಹೆಚ್ಚಿನ ದರಕ್ಕೆ ಮಾರಾಟಮಾಡುತ್ತಿದ್ದವು. ಈ ಮೂಲಕ ಆ ರಾಷ್ಟ್ರಗಳಿಗೆ ವರದಾನವಾದ ಸಂದರ್ಭಗಳೆಂದರೆ, ಇಲ್ಲಿದ್ದ ಅಪಾರ ಪ್ರಮಾಣದ ಅದಿರಿನ ನಿಕ್ಷೇಪ ಮತ್ತು ಅತ್ಯಂತ ಅಗ್ಗವಾದ ಕೂಲಿ ದರ.

೧೯೬೬ ರ ಸುಮಾರಿಗೆ NMDC (ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ)ಕುದುರೆಮುಖ ಪ್ರಾಂತ್ಯದಲ್ಲಿ ಗಣಿಗಾರಿಕೆ ಆರಂಭಿಸಲು ಮರು ಸಮೀಕ್ಷೆಯನ್ನು ನಡೆಸಿ ವರದಿಯೊಂದನ್ನು ಸಿದ್ಧಪಡಿಸಿಕೊಂಡಿತು. ಆ ಮೂಲಕ ಸಾರ್ವಜನಿಕ ಉದ್ದಿಮೆಯ ನಾಮಾಂಕಿತದಲ್ಲಿ ೨೫-೦೭-೧೯೭೯ ರಿಂದ ೨೫-೦೭-೧೯೯೯ರ ವರಗೆ ಕುದುರೆಮುಖ ಕ್ಷೇತ್ರದ ೫೨೧೮ ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುವ ೩೦ ವರ್ಷಗಳ ಲೀಸನ್ನು ಪಡೆದುಕೊಂಡಿತು. ಇದರಲ್ಲಿ ೩೧೦ ಹೆಕ್ಟೇರ್ ನೆಲ್ಲೀಬೀಡು ಪ್ರದೇಶವು ಸೇರಿತ್ತು. ಅಷ್ಟಲ್ಲದೆ ಅಗತ್ಯ ಬಂದಲ್ಲಿ ೧೧೭೪ ಹೆಕ್ಟೇರ್ ಪ್ರದೇಶದ ಗಂಗಡಿಕಲ್ಲು ಪ್ರದೇಶದಲ್ಲಿಯೂ ಗಣಿಗಾರಿಕೆ ನಡೆಸಬಹುದೆಂಬ ಒಪ್ಪಂದ ಮಾಡಿಕೊಂಡಿತ್ತು. ಈ ಯೋಜನೆಗೆ ೬೫೦ ಮಿಲಿಯನ್ ಡಾಲರ್ ಸಹಾಯ ಧನವನ್ನು ಇರಾನ್‌ನ 'ಶಾ' ಸರ್ಕಾರವು ನೀಡಿದ್ದರಿಂದ ಈ ಯೋಜನೆಯು ಆರಂಭವಾಯಿತು. ಯೋಜನೆಯ ಮಧ್ಯಾಂತರದಲ್ಲಿ ಕೆ.ಐ.ಓ.ಸಿ.ಎಲ್‌ಗೆ ಹಸ್ತಾಂತರವಾಯಿತು. ಆ ಸಮಯದಲ್ಲಿ ಕೆ.ಐ.ಓ.ಸಿ.ಎಲ್ ಗೆ ಭೋಗ್ಯಕ್ಕಿದ್ದಿದ್ದು ೪೬೦೫.೦೨ ಹೆಕ್ಟೇರ್‌ಗಳು. ೦೨-೦೪-೧೯೭೬ ರಿಂದ ಕೆ.ಐ.ಓ.ಸಿ.ಎಲ್ ತನ್ನ ಕಾರ್ಯಾರಂಭ ಸಮಯದಲ್ಲೇ ಮಲ್ಲೇಶ್ವರ ಗ್ರಾಮದಲ್ಲಿ ನೆಲೆಸಿದ್ದ ೬೯ ಕುಟುಂಬಗಳು ಸ್ಥಳಾಂತರ ಹೊಂದುವ ಸಮಯ ಎದುರಾಯಿತು. ಈ ಸ್ಥಳಾಂತರವಾದ ಪ್ರದೇಶದಲ್ಲಿಯೇ ಕುದುರೆಮುಖ ಪಟ್ಟಣ ಮತ್ತು ಕಂಪನಿಯು ಸ್ಥಾಪನೆಯಾಯಿತು. ಮುಂದುವರೆದಂತೆ, ೬೯ ಕುಟುಂಬಗಳಿಗೂ ಪುನರ್ವಸತೀಕರಣಸೌಲಭ್ಯವನ್ನು ಕೇಂದ್ರ ಸಕಾರದ ವತಿಯಿಂದ ಕಲ್ಪಿಸಲಾಯಿತು ಮತ್ತು ಮನೆಯ ಒಬ್ಬ ಸದಸ್ಯರಿಗೆ ಕಂಪನಿಯಲ್ಲಿ ದುಡಿಯುವ ಅವಕಾಶವೂ ಕೂಡ ಲಭ್ಯವಾಯಿತು[೧೫]. ಇದೇ ವೇಳೆಗೆ ಇರಾನ್‌ನಲ್ಲಿ ಉಂಟಾದ ದಂಗೆಯಿಂದ ೧೯೭೬ರಲ್ಲಿ 'ಶಾ' ಅಧಿಕಾರ ಕೊನೆಗೊಂಡಿತು, ಪರಿಣಾಮವಾಗಿ ಕೆ.ಐ.ಓ.ಸಿ.ಎಲ್‌ಭವಿಷ್ಯ ತೂಗುಯ್ಯಾಲೆಯಲ್ಲಿ ಮುಂದುವರೆಯಿತು. ೧೯೮೨ ರಲ್ಲಿ ಜಪಾನ್ ರಾಷ್ಟ್ರವು ಸಹಾಯಹಸ್ತ ಚಾಚಿದ್ದರಿಂದ ಕೆ.ಐ.ಓ.ಸಿ.ಎಲ್ ನ ೭೫% ಅದಿರು ಜಪಾನ್, ಕೊರಿಯಾ, ಚೀನಾ, ತೈವಾನ್ ರಾಷ್ಟ್ರಗಳಿಗೆ ರಫ್ತುಗೊಂಡಿತು.

ಗಣಿಗಾರಿಕೆಯ ಪರಿಣಾಮಗಳು

ಕುದುರೆಮುಖ ಗಣಿಗಾರಿಕೆಯು ದೇಶದ ಆರ್ಥಿಕತೆ ಮತ್ತು ಔದ್ಯೋಗಿಕ ಪ್ರಗತಿಯಲ್ಲಿ ಲಾಭಾಂಶವಾಗಿರುವುದು ನಿಜ. ಆದರೆ, ಕೃಷಿ ಪ್ರಧಾನವಾದ ನಮ್ಮಂತಹ ದೇಶದಲ್ಲಿ ಅಭಿವೃದ್ಧಿಯ ದೃಷ್ಟಿಯಿಂದ ವಿವಿಧ ಉದ್ಯಮಗಳ ಅವಶ್ಯಕತೆಯನ್ನು ನಿರಾಕರಿಸಲಾಗದು. ಆದರೆ, ಅಗತ್ಯತೆಯ ದೃಷ್ಟಿಯಿಂದ ಯಾವ ಉದ್ಯಮಗಳನ್ನು ಎಲ್ಲೆಲ್ಲಿ ಸ್ಥಾಪನೆ ಮಾಡಬೇಕೆಂಬ ವಿಚಾರವು ಅವಶ್ಯವಾದದ್ದು. ಕೇವಲ ಲಾಭಾಂಶದ ದೃಷ್ಟಿಯಿಂದ ಮಾತ್ರ ಪರಿಗಣಿಸಿದ ಕಂಪನಿಯ ಕಾರ್ಯವನ್ನು, ಅದರಿಂದಾಗುವ ನಷ್ಟದ ಬಗ್ಗೆ ಏಕೆ ಪ್ರಶ್ನೆಗಳು ಏಳಲಿಲ್ಲ ಎಂಬುದೇ ಮೂಲ ಪ್ರಶ್ನೆ? ಕುದುರೆಮುಖದ ಪ್ರಾಕೃತಿಕ ವಿಶೇಷತೆಗಳ ಕುರಿತು ಅನೇಕ ಅಧ್ಯಯಗಳು ವೈಜ್ಞಾನಿಕ ವಿವೇಚನೆಯಲ್ಲಿ

ನಡೆದಿವೆ. ಅವುಗಳಲ್ಲಿ ಸರ್ಕಾರವೇ ರಚನೆ ಮಾಡಿದ ತಜ್ಞರ ಸಮಿತಿಗಳು ತಮ್ಮ ಅಧ್ಯಯನ ವರದಿಗಳಲ್ಲಿ ಗಣಿಗಾರಿಕೆಯ ಪರಿಣಾಮವನ್ನು ಪರಿಸರವನ್ನು ಉಳಿಸುವ ಧನಾತ್ಮಕ ದೃಷ್ಟಿಯಿಂದ ರಚಿಸಿವೆ ಎಂದರೆ, ಅದು ತಪ್ಪಾಗಲಾರದು. ಒಂದು ವೇಳೆ ಗಣಿಗಾರಿಕೆಯ ಪರವಾಗಿ ವರದಿಗಳು ರಚನೆಯಾಗಿದ್ದರೆ ಇಂದಿಗೆ ಭದ್ರಾ ಮತ್ತು ತುಂಗ ನದಿಯ ಮೂಲಗಳ ಗುರುತುಗಳನ್ನು ಪತ್ತೆ ಹಚ್ಚುವುದಕ್ಕೂ ಅಸಾಧ್ಯವಾಗುತ್ತಿತ್ತು. ಭಾರತೀಯ ವಿಜ್ಞಾನ ಸಂಸ್ಥೆಯು ಪರಿಸರ ಅಧ್ಯಯನ ಸಂಸ್ಥೆಯ ವಿಜ್ಞಾನಿಗಳ ಸಮಿತಿಯ ವರದಿಯ ವೈಜ್ಞಾನಿಕ ವಿಶ್ಲೇಷಣೆ ಯನ್ನು ೨೦೦೧ರಲ್ಲಿ ಕರ್ನಾಟಕ್ಕೆ ಸಲ್ಲಿಸಿತ್ತು [೧೬], ಅದರ ಪ್ರಕಾರ:

೦೧. ಪರಿಸರದ ವನ್ಯಜೀವಿ ವಾಸಸ್ಥಾನದ ಪರಿಪೂರ್ಣತೆಯ ಭಗ್ನತೆ–ಜೀವವೈವಿಧ್ಯತೆಯ ನಾಶವಾಗಿದೆ.
೦೨. ಶೋಲಾ ಕಾಡು, ಹುಲ್ಲುಗಾವಲುಗಳ ನಾಶ.
೦೩. ವಾಯುಗುಣ ಮತ್ತು ಮಳೆಯ ಪ್ರಮಾಣದಲ್ಲಿ ಬದಲಾವಣೆಗಳು
೦೪. ನೀರಿನ ಗುಣಮಟ್ಟದಲ್ಲಿ ಕಬ್ಬಿಣದ ಅಂಶ ಸುರಕ್ಷಿತ ಮಟ್ಟಕ್ಕಿಂತ ಹೆಚ್ಚಾಗಿದ್ದು, ಜಲಚರಗಳ ನಾಶವಾಗಿರುವ ರುಜುವಾತುಗಳಿವೆ.
೦೫. ಅಕೇಶಿಯಾದಿಂದ ಪರಿಸರದ ಪರಿಪೂರ್ಣ ಭಗ್ನತೆ.
೦೬. ಲಕ್ಯಾ ಜಲಾಶಯ ಮತ್ತು ಇತರೆ ಪ್ರದೇಶಗಳಲ್ಲಿ ಗುಡ್ಡೆ ಹಾಕಿರುವ ಉಳಿಕೆ ಮಣ್ಣು ಸುಮಾರು ೧೫೦ ಮಿಲಿಯನ್ ಟನ್‌ಗಳಷ್ಟು, ಈ ಜಲಾಶಯದಲ್ಲಿ ತುಂಬುವ ನೀರಿನ ಭಾರ ಮತ್ತು ಗಣಿಗಾರಿಕೆಗಾಗಿ ಭೂಮಿಯೊಳಗೆ ನಡೆಸುವ ಆಸ್ಫೋಟನೆಗಳು ಭೂಮಿಯ ಅಂತರಾಳದಲ್ಲಿ ಅಭದ್ರತೆಯನ್ನುಂಟು ಮಾಡಬಹುದು. ಎಂಬ ಹಲವಾರು ಮಾಹಿತಿಗಳನ್ನು ಪ್ರಾಯೋಗಿಕವಾಗಿ ಪರೀಕ್ಷಿಸಿ ಕಂಡುಕೊಂಡ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

ಪರಿಸರ ಮತ್ತು ಅರಣ್ಯ ಇಲಾಖೆಯ ಕಾಯ್ದೆಗಳ ಉಲ್ಲಂಘನೆ:

೦೧. ಅರಣ್ಯ ಸಂರಕ್ಷಣಾ ಕಾಯ್ದೆ ೧೯೮೦.
೦೨. ವನ್ಯಜೀವಿ ರಕ್ಷಣಾ ಅಧಿನಿಯಮ ಕಾಯ್ದೆ ೧೯೭೨
೦೩. ಪರಿಸರ ಸಂರಕ್ಷಣಾ ಕಾಯ್ದೆ ೧೯೮೬
೦೪. ಜಲಸಂಪನ್ಮೂಲ (ಮಾಲಿನ್ಯತೆ ನಿಯಂತ್ರಣ ಮತ್ತು ರಕ್ಷಣೆ) ಕಾಯ್ದೆ ೧೯೭೮
೦೫. ಸ್ಫೋಟಕ ನಿಯಂತ್ರಣ ಕಾಯ್ದೆ ೧೮೭೨.
೦೬. ಕರ್ನಾಟಕ ನೀರಾವರಿ ಕಾಯ್ದೆ ೧೯೬೪

ಈ ಮೇಲಿನ ಕಾಯ್ದೆಗಳ ಉಲ್ಲಂಘನೆಯೊಂದಿಗೆ ರಾಷ್ಟ್ರೀಯ ಉದ್ಯಾನವನದಲ್ಲಿನ ಪರಿಸರ ಮಾಲಿನ್ಯವನ್ನು ಪರಿಗಣಿಸಿ, ಇಲಾಖೆ ವತಿಯಿಂದ ಸುಪ್ರೀಂ ಕೋರ್ಟನಲ್ಲೂ ಧಾವೆಯನ್ನು ಊಡಲಾಯಿತು.

ತುಂಗ – ಭದ್ರಾ ಉಳಿಸಿ ಚಳುವಳಿ

ಕೆ.ಐ.ಓ.ಸಿ.ಎಲ್ ಕಂಪನಿಯು ೧೯೬೯ ರಿಂದ ಕುದುರೆಮುಖ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುತಿತ್ತು. ಈ ಕಂಪನಿಯು ೧೯೯೧ ರ ಹೊತ್ತಿಗೆ ತನ್ನ ಗಣಿಗಾರಿಕೆಯನ್ನು ಗಂಗಡಿಕಲ್ಲು ಹಾಗೂ ನೆಲ್ಲಿಬೀಡುವಿನ ಪ್ರದೇಶಗಳಿಗೆ ವಿಸ್ತರಿಸಲು ಯೋಜನೆಯನ್ನು ತಯಾರಿಸಿತು. ೧೯೯೩ ರಷ್ಟರಲ್ಲಿ ಶೃಂಗೇರಿಯ ಪರಿಸರ ಜಾಗೃತ ವೇದಿಕೆ ಮತ್ತು ಕರ್ನಾಟಕ ವಿಮೋಚನಾ ರಂಗದಂತಹ ಪ್ರಗತಿಪರ ಸಂಘಟನೆಗಳು ಪಶ್ಚಿಮಘಟ್ಟಗಳ ವಿನಾಶಕ್ಕೆ ರಹದಾರಿ ತೆರೆಯಲಿದ್ದ ಈ ಗಣಿಗಾರಿಕೆಯ ವಿಸ್ತರಣೆಗೆ ವಿರೋಧವನ್ನು ವ್ಯಕ್ತಪಡಿಸಿದವು. ತುಂಗಾನದಿಗೆ ಬಂದೆರಗಬಹುದಾದ ಅಪಾಯವನ್ನು ನಾಡಿನ ಅವಗಹನೆಗೆ ತರಲು ಶೃಂಗೇರಿಯಿಂದ ಸೈಕಲ್ ಜಾಥವನ್ನು ಆರಂಭಿಸಿದವು. ತುಂಗಾ ಮೂಲ ಉಳಿಸಿ ಘೋಷಣೆಯೊಂದಿಗೆ ಆರಂಭಗೊಂಡ 'ಜಾಥ' ತುಂಗಾ ಮೂಲ ಉಳಿಸಿ ಚಳುವಳಿಗೆ ಪ್ರೇರಣೆಯಾಯಿತು. ಸ್ಪಷ್ಟ ಗ್ರಹಿಕೆಯಿಂದ ಆರಂಭಗೊಂಡ ಚಳುವಳಿಯ ಕುರಿತು ೧೯೯೪ರ ಜುಲೈ ೨೨ರಂದು ಶಿವಮೊಗ್ಗದಲ್ಲಿ ರಂಗಕರ್ಮಿ, ಸಾಹಿತಿ ದಿವಂಗತ ಕೆ.ವಿ ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ಸಮಾಲೋಚನಾ ಸಭೆ ನಡೆಯಿತು[೧೭*]. ತುಂಗಾ ಮೂಲ ಉಳಿಸಿ ಚಳುವಳಿಯನ್ನು ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟದ ಮಾದರಿಯಲ್ಲಿ ಮುಂದುವರೆಸಲು, ತೀರ್ಮಾನ ಕೈಗೊಳ್ಳಲಾಯಿತು.

ಒಕ್ಕೂಟದ ನೇತೃತ್ವದಲ್ಲಿ ನಾಡಿನಾದ್ಯಂತ ಸಭೆ, ವಿಚಾರ ಸಂಕೀರ್ಣ, ಪ್ರತಿಭಟನಾ ಮೆರವಣಿಗೆಗಳನ್ನು ನಡೆಸಲಾಯಿತು. ಶಿವಮೊಗ್ಗದಲ್ಲಿ ನಡೆದ ತುಂಗ ಮೂಲ ಉಳಿಸಿ ಬೃಹತ್ ಸಮಾವೇಶದಲ್ಲಿ ಪರಿಸರವಾದಿ ಸುಂದರ್‌ಲಾಲ್ ಬಹುಗುಣ ಅವರು ಭಾಗವಹಿಸಿ ಮಾತನಾಡಿ ಪ್ರತಿಭಟನೆ ಸೂಚಿಸಿದರು. ಅಕ್ಟೋಬರ್ ೧ನೇ ತಾರೀಖು 'ವಿದೇಶಿ ಲೂಟಿ ವಿರೋಧಿ ದಿನ'ವನ್ನಾಗಿ ಆಚರಿಸಲಾಯಿತು. ೧೯೯೪ ಚುನಾವಣೆಯ ಸಂದರ್ಭದಲ್ಲಿ ನದೀ ತೀರದ ಜನಪ್ರತಿನಿಧಿಗಳಿಗೆ ಷರತ್ತುಗಳನ್ನು ವಿಧಿಸಲಾಯಿತು. ಚಳುವಳಿಯ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಗಣಿಗಾರಿಕೆ ವಿಸ್ತರಣೆಗೆ ಸಮ್ಮತಿಸಿ, ಕೇಂದ್ರಕ್ಕೆ ಕಳುಹಿಸಿದ್ದ ಸಮ್ಮತಿ ಪತ್ರವನ್ನು, ಅರಣ್ಯ ಇಲಾಖೆ ತನ್ನ ಸಮ್ಮತಿ ಪತ್ರವನ್ನು ಹಿಂದಕ್ಕೆ ಪಡೆದವು. ಹಾಗಾಗಿ ಚಳುವಳಿಯ ಮೊದಲ ಹಂತದ ಚಾರಿತ್ರಿಕ ಘಟ್ಟ ಕೊನೆಗೊಂಡಿತು. ಮತ್ತು ನಂತರ ವಿಸ್ತಾರಣಗೊಂಡು ಐತಿಹಾಸಿ ಪರಿಸರ ಚಳುವಳಿಗೆ ಬುನಾದಿಯನ್ನು ಹಾಕಿಕೊಟ್ಟಿತು.

ತುಂಗಾ ತೀರದ ಜನತೆಯ ಹೋರಾಟ ತೀವ್ರ ಸ್ವರೂಪ ಪಡೆದುಕೊಂಡ ಮೇಲೆ ಕಂಪನಿಯು ತನ್ನ ಗಣಿಗಾರಿಕೆ ಪ್ರದೇಶವನ್ನು ವಿಸ್ತರಿಸುವ ಕಾರ್ಯವನ್ನು ಕೈಬಿಟ್ಟಿತು. ಆದರೂ ಮುಂದುವರೆಸುವ ಪ್ರಯತ್ನದಿಂದಲೂ ಹಿಂಜರಿಯಲಿಲ್ಲ. ನಂತರದ ದಿನಗಳಲ್ಲಿ ಗಣಿಗಾರಿಕೆಯಿಂದ ಭದ್ರಾನದಿಗಾಗುತ್ತಿದ್ದ ಅನಾಹುತದ ವಿವರಗಳು ನಾಡಿನ ಗಮನವನ್ನು ಸೆಳೆದು ನದಿ ಪಾತ್ರದ ಜನರ ಆಕ್ರೋಶಕ್ಕೆ ಕಾರಣವಾಗಿತ್ತು. ೧೯೯೮ರ ಏಪ್ರಿಲ್ ಹೊತ್ತಿಗೆ ಗಣಿಗಾರಿಕೆಯ ಸ್ಥಗಿತಕ್ಕೆ ಒತ್ತಾಯಿಸಿ ಪೂರ್ಣ ಪ್ರಮಾಣದ ಚಳುವಳಿ ಆರಂಭಗೊಂಡಿತು. ಈ ವೇಳೆಗೆ ೨೦೦೦ ರ ಜುಲೈ ೨೪ ರ ವರೆಗೆ ಗಣಿಗಾರಿಕೆ ನಡೆಸಲು ಕೇಂದ್ರ ಅನುಮತಿಯನ್ನು ನೀಡಿತು. ಇಲ್ಲಿಂದ ಎರಡನೇ ಹಂತದ ಚಳುವಳಿಯ ಅಬ್ಬರ ಹೆಚ್ಚಾಯಿತು. ೨೦೦೦ ದ ಡಿಸೆಂಬರ್ ವೇಳೆಗೆ ತುಂಗಾ–ಭದ್ರಾ ಉಳಿಸಿ ಹೋರಾಟ ಒಕ್ಕೂಟ ಅಸ್ತಿತ್ವಕ್ಕೆ ಬಂತು. ಅಲ್ಲಿಂದ ಜನವರಿ ೨೦೦೧, ೨ ಶಿವಮೊಗ್ಗದಲ್ಲಿ ಒಂದು

ಸಮಾವೇಶವನ್ನು ನಡೆಸಲಾಯಿತು. ೧೮ ಮೇ ಕುದುರೆಮುಖ ಚಲೋ ಕಾರ್ಯಕ್ರಮ ಮತ್ತು ೨೪ ಮೇ ರಂದು ನದಿ ತೀರದ ಊರುಗಳಲ್ಲಿ ಪ್ರತಿಭಟನೆ ಧರಣಿ, ಬಂದ್‌ಗಳನ್ನು ಹಮ್ಮಿಕೊಳ್ಳಲಾಯಿತು. ಇದೇ ದಿನ ಬೆಂಗಳೂರಿನ 'ಖನಿಜ ಭವನ'ಕ್ಕೂ ಕೂಡ ಮುತ್ತಿಗೆ ಹಾಕಲಾಯಿತು. ಇದೇ ಸಂದರ್ಭದಲ್ಲಿ ಸರ್ಕಾರವು ಜನತೆಯ ಆಶಯವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಧಿಕ್ಕರಿಸಿ ಮರು ಗಣಿಗಾರಿಕೆಗೆ ಅವಕಾಶವನ್ನು ಮೂರು ತಿಂಗಳಿಗೆ ವಿಸ್ತರಿಸಿತು. ಜುಲೈ ೧೩ ರಂದು ದಾವಣಗೆರೆಯಲ್ಲಿ ಐತಿಹಾಸಿಕ ಸಮಾವೇಶವನ್ನು ಹಮ್ಮಿಕೊಳ್ಳಲಾಗಿ, ಸಮಾವೇಶಕ್ಕೂ ಮುನ್ನ ನದಿ ಪಾತ್ರದ ಪ್ರದೇಶಗಳಲ್ಲಿ ಜನಜಾಗೃತಿ ನಡೆಸಲಾಯಿತು. ಈ ಹೋರಾಟವು ಸುಮಾರು ಒಂದೂವರೆ ದಶಕದುದ್ದಕ್ಕೂ ಹಂತ ಹಂತವಾಗಿ ವಿಸ್ತಾರಗೊಂಡು ನಾಡಿನ ಜನತೆಯಲ್ಲಿ ಛಾಪನ್ನು ಮೂಡಿಸಿತು. ಪರಿಸರ ಹೋರಾಟವೆಂದರೆ ಅದು ಮೇಲ್ಮಧ್ಯಮ ವರ್ಗದ ಚಟುವಟಿಕೆ ಎಂಬ ಗ್ರಹಿಕೆಗೆ ಭಿನ್ನವಾಗಿ ನದಿಪಾತ್ರದುದ್ದಕ್ಕೂ ಎಲ್ಲಾ ವರ್ಗದ ಜನತೆ ಚಳುವಳಿಯಲ್ಲಿ ಗುರುತಿಸಿಕೊಂಡು ಜನ ಹೋರಾಟಕ್ಕೆ ಆಯಾಮ ನೀಡಿದರು.

ಪರಿಸರದ ಸಮಸ್ಯೆಗಳನ್ನು ಮೇಲ್ಪದರದಲ್ಲೇ ಗ್ರಹಿಸಿ, ನಿಜವಾದ ಪರಿಸರದ ಶತ್ರುಗಳನ್ನು ತೆರೆಮರೆಯಲ್ಲಿರಿಸಿ, ಅಮೂರ್ತವಾಗಿ ನಡೆಯುತ್ತಿದ್ದ ಚರ್ಚೆಗಳು ಬದಿಗೆ ಸರಿದವು. ಪರಿಸರದ ಸಮಸ್ಯೆ ಕೇವಲ ಮರಗಿಡ, ಪಶು ಪಕ್ಷಿಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಅದು ಜನರ ನಿತ್ಯದ ಬದುಕಿನೊಂದಿಗೆ, ಭವಿಷ್ಯದೊಂದಿಗೆ ಸಂಬಂಧಿಸಿರುವಂತದ್ದು, ನಮ್ಮ ದೇಶದ ಸಂಪನ್ಮೂಲಗಳ ರಕ್ಷಣೆಯ ಕಾಳಜಿಯನ್ನು ಕುರಿತಾದದ್ದು ಎಂಬುದು ಜನಜನಿತವಾಯಿತು. ಬಹುತೇಕ ಪರಿಸರ ಹೋರಾಟಗಳ ಸಂದರ್ಭದಲ್ಲಿ ಯಾವುದೋ ಹಿತಾಸಕ್ತಿಗಳು ಮಧ್ಯೆ ಪ್ರವೇಶಿಸಿ ದಿಕ್ಕು ತಪ್ಪಿಸುವುದು, ತಂತಮ್ಮ ಮೂಗಿನ ನೇರಕ್ಕೆ ಎಳೆಯುವಂತಹ ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ. ವಿದೇಶಗಳಿಂದ ಹಣಪಡೆದು ಪರಿಸರ ಹೋರಾಟದ ಪೋಜು ನೀಡುವ ಎನ್.ಜಿ.ಒಗಳದ್ದು ಇಂತಾದ್ದರಲ್ಲಿ ಮುಂಚೂಣಿ ಪಾತ್ರವಿರುತ್ತದೆ. ಆದರೆ ಒಕ್ಕೂಟ ಜನದ್ರೋಹಿ ರಾಜಕೀಯ ಪಕ್ಷಗಳು, ವಿದೇಶಿ ದಲ್ಲಾಳಿಗಳಾದ ಎನ್.ಜಿ.ಒಗಳನ್ನು ನಿಗ್ರಹಿಸಿ, ಅಪ್ಪಟ ಪ್ರಜಾತಾಂತ್ರಿಕ, ಪ್ರಗತಿಪರ, ರೈತಪರ, ದಲಿತಪರ, ಮಹಿಳಾ ಪರ ದನಿಗಳನ್ನು ಒಗ್ಗೂಡಿಸಿ ವಿಶಾಲವಾದ ಐಕ್ಯ ವೇದಿಕೆಯಾಗಿ ರೂಪುಗೊಳ್ಳುತ್ತಲೇ ಚಳುವಳಿಯನ್ನು ಮುನ್ನಡೆಸಿತು.

೨೦೦೨ ರ ವೇಳೆಯಲ್ಲಿ ಆಗಿನ ಎಸ್. ಎಂ ಕೃಷ್ಣ ಸರ್ಕಾರದಲ್ಲಾದ ರಾಜಕೀಯ ಪರಿಸ್ಥಿತಿಯ ಬದಲಾವಣೆ ಹಿನ್ನೆಲೆಯಲ್ಲಿ ಗಣಿಗಾರಿಕೆಗೆ ಅವಕಾಶ ನೀಡುವುದಿಲ್ಲವೆಂದು ಪ್ರಕಟಗೊಂಡಿತು. ಅಕ್ಟೋಬರ್ ೩೦, ೨೦೦೨ ರಂದು ಸುಪ್ರೀಂ ಕೋರ್ಟ ೨೦೦೫ ಡಿಸೆಂಬರ್ ೩೧ ಕ್ಕೆ ಸಂಪೂರ್ಣ ಗಣಿಗಾರಿಕೆ ಸ್ಥಗಿತಗೊಳಿಸಬೇಕೆಂದು ಆದೇಶವನ್ನು ನೀಡಿತು. ಇದು ಜನತೆಯ ಹೋರಾಟಕ್ಕೆ ಸಂದ ಜಯವಾಗಿತ್ತು. ಸುಪ್ರೀಂಕೋರ್ಟ ನೀಡಿದ ಆದೇಶದನುಸಾರ ಕಂಪನಿಯು ಕಾರ್ಮಿಕರ ಪುನರ್ವಸತಿ ಕಲ್ಪಿಸಲು ಕೂಡ ಮಾರ್ಗಸೂಚಿಯನ್ನು ನೀಡಿತು. ಅದರಂತೆ ಸಿ. ಇ. ಸಿ (ಸೆಂಟ್ರಲ್ ಎಂಪರ್ಡ್ ಕಮಿಟಿ) ರಚನೆಯೊಂದಿಗೆ ಈ ಕೆಳಕಂಡ ಸಲಹೆಗಳನ್ನು ನೀಡಿತು [೧೭].

೦೧. ಗಣಿಗಾರಿಕೆ ಕಾರ್ಯ ಪ್ರದೇಶದಲ್ಲಿ ಪರಿಸರ ಸಮತೋಲನತೆ ಕಾಪಾಡುವ ಯೋಜನೆಯನ್ನು ರೂಪಿಸಬೇಕು.
೦೨. ಪರಿಸರ ಸಮತೋಲನ ಯೋಜನೆಯ ಅನುಷ್ಠಾನಕ್ಕೆ ನಿಧಿಯನ್ನು ಕಂಪನಿಯು ನೀಡುವುದರೊಂದಿಗೆ, ಅನುಷ್ಠಾನವನ್ನು ಪರಿಸರ ಇಲಾಖೆಯ ಉಸ್ತುವಾರಿಯಲ್ಲಿ ನಡೆಸಬೇಕು.
೦೩. ಮುಂದಿನ ೫ ವರ್ಷಗಳಲ್ಲಿ ಕಂಪನಿಯು ಪ್ರತಿ ವರ್ಷ ೫ ಕೋಟಿ ರೂಗಳಂತೆ ಒಟ್ಟು ೨೫ ಕೋಟಿ ರೂಗಳನ್ನು ಕುದುರೆಮುಖ ನ್ಯಾಷನಲ್ ಪಾರ್ಕನ್ನು ಗಟ್ಟಿಗೊಳಿಸಲು ಪ್ರತ್ಯೇಕ ಬ್ಯಾಂಕ್ ಅಕೌಂಟನಲ್ಲಿ ಹಣ ಜಮಾ ಮಾಡಬೇಕು.
೦೪. ಈ ಎಲ್ಲಾ ಯೋಜನೆಯ ಉಸ್ತುವಾರಿ ನೋಡಿಕೊಳ್ಳಲು ಪರಿಸರ ಇಲಾಖೆ ಒಂದು ಸಮಿತಿ ರಚಿಸಬೇಕು. ಆ ಸಮಿತಿಯಲ್ಲಿ ಕೇಂದ್ರ ಪರಿಸರ ಇಲಾಖೆಯ ಪ್ರತಿನಿಧಿ, ಕರ್ನಾಟಕ ಸರ್ಕಾರದ ಪ್ರತಿನಿಧಿ ಇಬ್ಬರೂ ಸರ್ಕಾರದ ಪರಿಣಿತರು ಇರಬೇಕು.
೦೫. ತನ್ನ ಕಾರ್ಯಚರಣೆ ಸಂಪೂರ್ಣವಾಗಿ ಸ್ತಬ್ಧಗೊಳಿಸಿದ ಮೇಲೆ ಕಂಪನಿಯು ಅಲ್ಲಿರುವ ತನ್ನ ಕಟ್ಟಡ ಹಾಗೂ ಮೂಲ ಸೌಕರ್ಯಗಳನ್ನು ಮೂಲ ಬೆಲೆಯಲ್ಲಿ ಕರ್ನಾಟಕ ಅರಣ್ಯ ಇಲಾಖೆಗೆ ಹಸ್ತಾಂತರಿಸಬೇಕು.

ಹೀಗೆ ಸಿ.ಇ.ಸಿ ಯು ಕೆ.ಐ.ಓ.ಸಿ.ಎಲ್ ತನ್ನ ಕಾರ್ಯಚರಣೆಯನ್ನು ನಿಲ್ಲಿಸಬೇಕೆಂದು ಹಾಗೂ ಹಸಿರು ಪ್ರಕೃತಿಯನ್ನು ಹಂತ ಹಂತವಾಗಿ ಮರು ಸಮತೋಲನ ಕಾಪಾಡಿಕೊಳ್ಳಲು ಕ್ರಮವನ್ನು ಕೈಗೊಳ್ಳಬೇಕೆಂದು ಸೂಚಿಸಿದೆ.

ಕುದುರೆಮುಖ ಗಣಿಗಾರಿಕೆ ಸಾರ್ವಜನಿಕ ಉದ್ದಿಮೆಯ ನಾಮಾಂಕಿತದಲ್ಲಿ ಭೂ ಒಡಲೊಳಿದ್ದ ಅದಿರು ನಿಕ್ಷೇಪವನ್ನು ೩ ದಶಕಗಳ ಕಾಲದ ಕಾರ್ಯಾಚರಣೆಯಲ್ಲಿ ಲಾಭಾಂಶಗಳಿಸಿದರೂ ಕೂಡ, ಅದರಿಂದ ಪರಿಸರಕ್ಕೆ ಆದಂತಹ ನಷ್ಟಗಳು ಮಾತ್ರ ಅಪಾರ. ಭದ್ರಾ ಮತ್ತು ತುಂಗ ನದಿ ಪಾತ್ರದ ಜನರ ಮುಖ್ಯ ಕಸುಬು ಕೃಷಿ. ಈ ಕೃಷಿಯೊಂದಿಗೆ ಜೀವನವನ್ನು ಕಂಡುಕೊಂಡ ರೈತ ಸಮುದಾಯವು ಒಂದು ಕಾಲದಲ್ಲಿ ಕಂಪನಿಯ ಸಿಲ್ಟ್ ಸ್ಟೋರೇಜ್‌ಗೆ ಕೊಳವೆಗಳ ಮುಖಾಂತರ ಪ್ರವಹಿಸುತ್ತಿದ್ದ ಕಲುಷಿತ ನೀರು (ಅದಿರನ್ನು ಶುದ್ಧೀಕರಿಸಿದ) ಭದ್ರಾ ನದಿ ನೀರಿನಲ್ಲಿ ಸೋರಿಕೆಯಾಗಿ, ರೈತರ ಗದ್ದೆ ಮತ್ತು ಹೊಲಗಳಿಗೆ ಬಳಸುತ್ತಿದ್ದ ನೀರಿನಲ್ಲಿ ಬೆರೆತು ಇಳುವರಿ ಪ್ರಮಾಣ ಕಡಿಮೆಗೊಳ್ಳುವಂತಾಯಿತು ಹಾಗೂ ಕುಡಿಯುವ ನೀರು ಕಲುಷಿತಗೊಳ್ಳುವುದರೊಂದಿಗೆ ಅನೇಕ ಜಲಚರ ಪ್ರಾಣಿಗಳ ಮರಣಕ್ಕೂ ಕಾರಣವಾಯಿತು. ಈ ಮೂಲಕ ಕಂಪನಿಯ ವಿರುದ್ಧ ಹೋರಾಟಕ್ಕಿಳಿದ ಜನತೆ ಪರಿಸರ ಸಂರಕ್ಷಣೆಗೆ ಆದ್ಯತೆಯನ್ನು ನೀಡುವುದರೊಂದಿಗೆ ಸರ್ಕಾರದ ಕಣ್ಣನ್ನು ತೆರೆಸುವ ಮೂಲಕ ಸುಪ್ರೀಂಕೋರ್ಟ ಪರಿಸರ ಸ್ನೇಹಿ ಆದೇಶ ನೀಡುವ ತನಕ ಹೋರಾಟವನ್ನು ಮುಂದುವರೆಸಿದರು. ಇದರ ಪರಿಣಾಮವಾಗಿ ಇಂದು ಕಂಪನಿ ತನ್ನೆಲ್ಲಾ ಕಾರ್ಯವನ್ನು ಸ್ಥಗಿತಗೊಳಿಸಿ ಕುದುರೆಮುಖ ಪರಿಸರದಲ್ಲಿದ್ದ ತನ್ನ ಎಲ್ಲಾ ಆಸ್ತಿಗಳನ್ನು ಸುಪ್ರೀಂ ಕೋರ್ಟ್ ಆದೇಶದಂತೆ ಹಂತ ಹಂತವಾಗಿ ಪರಿಸರ ಇಲಾಖೆಗೆ ಹಸ್ತಾಂತರಿಸುತ್ತಿದೆ. ಇದರೊಂದಿಗೆ ಜನತೆಯ ಹೋರಾಟಕ್ಕೆ ಸಂದಿರುವ ಜಯದೊಂದಿಗೆ, ಪರಿಸರ ಉಳಿಯುವಿಕೆ ಹಾಗೂ ಸಂರಕ್ಷಣೆಯೆಡೆಗೆ ಒಂದು ದಿಟ್ಟ ಹೆಜ್ಜೆಯನ್ನು ಪಾದಾರ್ಪಣೆ

ಮಾಡಿದಂತಾಗಿದೆ. ಸುಪ್ರೀಂ ಕೋರ್ಟ ಆದೇಶದನ್ವಯ ಕಂಪನಿ ತನ್ನೆಲ್ಲಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿ ತನ್ನಲ್ಲಿ ಉದ್ಯೋಗಿಗಳಾಗಿದ್ದವರನ್ನು ಬೇರೆ ಬೇರೆ ಪ್ಲಾಂಟ್‌ಗಳಿಗೆ ವರ್ಗಾಯಿಸಿದೆ ಹಾಗೂ ಯಾವ ಉದ್ಯೋಗಿಯು ನಿವೃತ್ತಿಗೆ ಸಮೀಪದಲ್ಲಿದ್ದಾರೋ ಅವರಿಗೆ ಸ್ವಯಂ ನಿವೃತ್ತಿಯ ನಿರ್ಣಯವನ್ನು ತೆಗೆದುಕೊಳ್ಳುವ ಅವಕಾಶವನ್ನು ನೀಡಿದೆ. ಒಟ್ಟಿನಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಪ್ರಕೃತಿ ನಾಶ ಸ್ಥಗಿತವಾಗಿದ್ದಲ್ಲದೆ, ನದಿ ಪಾತ್ರದ ಜನರು ಎಂದಿನಂತೆ ತಮ್ಮ ಕೃಷಿ ಆಧಾರಿತ ಜೀವನವನ್ನು ಸಾಗಿಸಲು ಉತ್ತಮವಾದ ಪರಿಸರವನ್ನು ನಿರ್ಮಾಣ ಮಾಡಿದಂತಾಗಿದೆ.

೭. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಪುನರ್ವಸತೀಕರಣಯೋಜನೆ ಅನುಷ್ಠಾನ

ಮದ್ರಾಸ್ ಅರಣ್ಯ ಕಾಯ್ದೆ ೧೮೯೧ ರಲ್ಲಿ ಪಶ್ಚಿಮ ಘಟ್ಟ ಪ್ರದೇಶದ ಅಂಡಾರು ಕಾಯ್ದಿರಿಸಿದ ಅರಣ್ಯ ಪ್ರದೇಶ ೧೯೪೪೫.೨೨ ಎಕರೆ (ಸ.ಆ.ಸಂ ೨೬, ದಿ:೧೪/೦೩/೧೯೮೧, ನಾರಾವಿ ಕಾಯ್ದಿರಿಸಿದ ಅರಣ್ಯ ಪ್ರದೇಶ ೫೮೯೫೪.೮೫ ಎಕರೆ (ಸ.ಆ.ಸಂ, ೯೬, ದಿ:೨೮/೦೨/೧೯೦೦), ಮೈಸೂರು ಅರಣ್ಯ ಕಾಯ್ದೆ ೧೯೧೪ ದಕ್ಷಿಣದ ಭದ್ರಾ ಅರಣ್ಯ ೨೦೯೧೪.೭೮ (ಆರ್ ೧೭೭೭-೮೦-೮೭-೧೩-೧೪, ದಿ:೨೯/೦೮/೧೯೧೪), ಮೈಸೂರು ಅರಣ್ಯ ಕಾಯ್ದೆ ೧೯೧೬ ರ ಅನ್ವಯ ತುಂಗ-ಭದ್ರಾ ಅರಣ್ಯ ಪ್ರದೇಶ ೪೯೮೩೮.೬೦ (ಸ.ಆ.ಸಂ ೨೯೬-೯ ಎಫ್ ಆರ್ ೯೬-೧೫-೬, ದಿ:೦೭/೦೭/೧೯೧೬) ಮತ್ತು ನರಸಿಂಹಪರ್ವತ ೧೬೭೪೫.೦೦ ಎಕರೆ(ಆರ್-೮೪೨೬-೨೯-ಎಫ್ ಆರ್ ೯೪-೧೫, ದಿ:೦೧/೦೩/೧೯೧೬) ಪ್ರದೇಶಗಳನ್ನು ಒಟ್ಟುಗೂಡಿಸಿಕೊಂಡು Government Notification No.AHFF 42 FWL 87 Dated 02/09/1987 in part IV C(i) of the Karnataka Gazette dated 24th September 1987 ರ ಅನ್ವಯ ಕುದುರೆಮುಖ ಪ್ರದೇಶವನ್ನು ವನ್ಯಜೀವಿ ಸಂರಕ್ಷಣೆ ಮತ್ತು ಅರಣ್ಯ ಸಂರಕ್ಷಣೆಯಡಿಯಲ್ಲಿ ರಾಷ್ಟ್ರೀಯ ಉದ್ಯಾನವನವೆಂದು ಉದ್ಘೋಷಿಸಲ್ಪಟ್ಟಿತು. ಈ ಘೋಷಣೆ ಅನ್ವಯ ಎಲ್ ಎನ್ ಡಿ:೨೨:೯೬-೯೭: ದಕ್ಷಿಣ ಕನ್ನಡ ೦೮/೦೨/೧೯೯೮ ಜಿಲ್ಲಾಧಿಕಾರಿಗಳ ಕಛೇರಿಯ ಅಧಿಸೂಚನೆ ಪತ್ರ ಮತ್ತು ಎಲ್ ಎನ್ ಡಿ ಸಿ ಅರ್: ೭೫:೯೭-೯೮: ಚಿಕ್ಕಮಗಳೂರು ೧೦/೦೮/೧೯೯೮ ಜಿಲ್ಲಾಧಿಕಾರಿಗಳ ಕಛೇರಿಯ ಅಧಿಸೂಚನೆ ಪತ್ರದ ಅನ್ವಯ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಗಡಿಗಳನ್ನು ಗುರ್ತಿಸಲು ದಕ್ಷಿಣ ಕನ್ನಡ ಜಿಲ್ಲೆಯ ನಾರಾವಿ, ಉಡುಪಿ ಜಿಲ್ಲೆಯ ಕಾರ್ಕಳಮತ್ತು ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಮೂಡಿಗೆರೆ ಮತ್ತು ಕೊಪ್ಪ ತಾಲ್ಲೂಕುಗಳ ಸೂಚಿತ ಅರಣ್ಯ ಪ್ರದೇಶಗಳ ವಾಸಿತ ಜನರಿಗೆ ಆದೇಶವನ್ನು ಪ್ರಕಟಿಸಿರುತ್ತಾರೆ. ಈ ಆದೇಶದನ್ವಯ ನಮೂನೆ ೮ ರಲ್ಲಿ ತಮ್ಮ ಜಮೀನು ಮತ್ತು ಇತರೆಯವುಗಳ ಮೇಲೆ ಹಕ್ಕು ಭಾದ್ಯತೆಗಳನ್ನು ಗೊತ್ತುವಳಿ ಪಡಿಸುವಂತೆ ಸೂಚಿಸಿರುತ್ತಾರೆ. ಅದರ ಪ್ರಕಾರ ಈ ಕೆಳಕಂಡ ಸ್ಥಳಗಳು ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಗಡಿ ಪ್ರದೇಶದೊಳಗೆ ಬರುವವು ಎಂದು ಘೋಷಣೆ ಮಾಡಿರುತ್ತಾರೆ.

ಕೋಷ್ಟಕ ೬

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಗುರುತಿಸಲ್ಪಟ್ಟ ಚಿಕ್ಕಮಗಳೂರು, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ತಾಲ್ಲೂಕು ಮತ್ತು ಅರಣ್ಯ ವಲಯವಾರು ಗ್ರಾಮಗಳ ವಿವರಗಳು

ಕ್ರಸಂ	ಜಿಲ್ಲೆ	ತಾಲ್ಲೂಕು	ವಲಯ	ಗ್ರಾಮಗಳು
೧	ಚಿಕ್ಕಮಗಳೂರು	ಮೂಡಿಗೆರೆ	ಕುದುರೆಮುಖ ವಲಯ	ಕಳಕೋಡು
				ಹೊರನಾಡು
				ಸಂಸೆ
		ಕೊಪ್ಪ	ಕೆರೆಕಟ್ಟೆ ವಲಯ	ಮೇಗೂರು
				ಕಲ್ಲುಗುಡ್ಡೆ
				ಹರಳಾನೆ
		ಶೃಂಗೇರಿ		ಕೆರೆ
				ಶೀರ್ಲು
				ಗುಲಗಂಜಿಮನೆ
				ಮಾತೊಳ್ಳಿ
				ಸುಂಕದಮಕ್ಕಿ
				ಬಾಳೆಗೆರೆ
				ಹಾದಿಕಿರೂರು
				ಮಲೆನಾಡು
				ಮಸಿಗೆ
				ಮರ್ಕಲ್
				ಭಲೇಕಡಿ
				ಮುಡುಬಾ
೨	ದಕ್ಷಿಣ ಕನ್ನಡ	ಬೆಳ್ತಂಗಡಿ	ಬೆಳ್ತಂಗಡಿ ವಲಯ	ನಾರಾವಿ
				ಕುತ್ಲೂರು
				ನಾವರ
				ಸುಲ್ಕೇರಿಮೊಗ್ರು
				ಶಿರ್ಲಾಲು
				ಲ್ಯಾಲ
				ಸವಣಾಲು
				ನಡ
				ನಾವೂರು

೮. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಘೋಷಣೆಯಲ್ಲಾಗಿರುವ ಸಮಸ್ಯೆ

೧೯೭೨ ರ ವನ್ಯಜೀವಿ ಅಧಿನಿಯದ ವಿಧಿ ೨೪ (೧) ರ ಪ್ರಕಾರ ಅಂತಿಮ ಘೋಷಣೆ ಮಾಡುವ ಮೊದಲು ಸಂಬಂಧಿಸಿದ ರೈತರು, ಆದಿವಾಸಿಗಳು ಮತ್ತು ಅರಣ್ಯವಾಸಿಗಳಿಂದ 'ಆಕ್ಷೇಪಣೆ ಮತ್ತು ತಿರಸ್ಕರಿಸುವ' ಕುರಿತು ಸೆಟಲ್‌ಮೆಂಟ್ಸ್ ಆಫ್ ಕ್ಲೇಮ್ಸ್ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ ಈ ಕ್ರಮಕ್ಕೆ ಅನುಗುಣವಾಗಿ ಯಾವುದೇ ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲವೆಂದು ಸ್ವತಃ ಚಿಕ್ಕಮಗಳೂರು ಉಪ ವಿಭಾಗಾಧಿಕಾರಿಗಳೇ ತಮ್ಮ ೨೦/೦೬/೨೦೦೨ ರ ಪತ್ರದಲ್ಲಿ ಒಪ್ಪಿಕೊಂಡಿರುತ್ತಾರೆ[೧೮]. ಈ ಪ್ರಕಾರದ ಘೋಷಣೆಯು ಪ್ರಭುತ್ವದ ಮಟ್ಟಕ್ಕೆ ಪ್ರಶ್ನೆಯಾಗಿರುವುದರೊಂದಿಗೆ ಅಸಿಂಧುವೆನ್ನುವುದಕ್ಕೂ, ಹಾಗೂ ಸಾರ್ವಜನಿಕ ಸಹಭಾಗಿತ್ವವನ್ನು ಪ್ರೋತ್ಸಾಹಿಸದೇ ಇರುವ ಎಲ್ಲಾ ಸನ್ನಿವೇಶವು ಈ ವ್ಯಾಪ್ತಿಯ ಸಾರ್ವಜನಿಕರಿಗೆ ಅಡ್ಡ ಕತ್ತರಿಯಲ್ಲಿ ಸಿಲುಕುವಂತೆ ಸಮಸ್ಯೆಯನ್ನುಂಟು ಮಾಡಿದೆ. ಪ್ರಸಿದ್ಧ ಪರಿಸರವಾದಿ ಆಶಿಷ್ ಕೊಠಾರಿ ನೇತೃತ್ವದಲ್ಲಿನ ತಂಡ ಈ ವ್ಯವಸ್ಥೆಯನ್ನು ಅವಲೋಕಿಸಿ ರಾಷ್ಟ್ರೀಯ ಉದ್ಯಾನವನದಲ್ಲಿ ಜನರ ಸಹಭಾಗಿತ್ವವನ್ನು ಪ್ರೋತ್ಸಾಹಿಸಿದರೆ ಮಾತ್ರ ಯಶಸ್ವಿ ನಿರ್ವಹಣೆ ಸಾಧ್ಯ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಘೋಷಣೆಯ ಆಧಾರವಾಗಿ ವಾಸ್ತವಾಂಶದಲ್ಲಿ ಏಳುವ ಮೂಲ ಪ್ರಶ್ನೆಯೆಂದರೆ, ಸ್ಥಳೀಯ ಪರಿಸರವನ್ನು ಪರಿಗಣಿಸಿ ಅಧ್ಯಯನ ನಡೆಸದೇ ದೂರದ ಸ್ಥಳದಲ್ಲಿ ಕುಳಿತು ರಚನೆ ಮಾಡುವ ಕಾನೂನುಗಳು ಮತ್ತು ಕಾಯ್ದೆಗಳು, ಅನುಷ್ಠಾನಕ್ಕೂ ಪೂರ್ವದಲ್ಲಿ ಸಾರ್ವಜನಿಕರ ಆಕ್ಷೇಪಣೆ ಮತ್ತು ತಿರಸ್ಕಾರವನ್ನು ಪರಾಮರ್ಶಿಸಿ ಅವಲೋಕಿಸದೆ ಏಕ ಪಕ್ಷೀಯವಾಗಿ ಒಮ್ಮೆಲೆಯೇ ಉದ್ಘೋಷಣೆ ಮಾಡಿರುವ ವ್ಯವಸ್ಥೆಯಾಗಿದೆ. ಸುಪ್ರೀಂಕೋರ್ಟ ಆದೇಶ ಪರಿಪಾಲನೆ ಅವಶ್ಯ, ಅದನ್ನು ಒಪ್ಪಲೇಬೇಕು. ಆದರೆ, ನಮ್ಮನ್ನಾಳುವ ಪ್ರತಿನಿಧಿಗಳು ವಾಸ್ತವಾಂಶದ ಅರಿವಿಲ್ಲದೆಯೇ ಆದೇಶಕ್ಕೆ ಸಹಿ ನೀಡಿರುವುದು ಆಕ್ಷೇಪಣೆಗೆ ಅರ್ಹವಾದುದೆನಿಸುತ್ತದೆ. ಮತದಾನಕ್ಕೆ ಅವಶ್ಯವಿರುವ ಸಾರ್ವಜನಿಕರು ಕಾಯ್ದೆಗಳ ರಚನೆಯಲ್ಲಿ ಸಹಭಾಗಿತ್ವವನ್ನು ಹೊಂದಬಾರದೆ? ಎಂಬ ಮೂಲ ಪ್ರಶ್ನೆಯೊಂದಿಗೆ ಪ್ರಭುತ್ವದ ಹಾಗೂ ಪ್ರತಿನಿಧಿಗಳ ಉದಾಸೀನ ಮನೋಭಾವನೆ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ಇಲ್ಲಿ ನಾವು ಗಮನಿಸಬಹುದು. ಇದರೊಂದಿಗೆ ಉದ್ಯಾನವನದಲ್ಲಿ ವಾಸಿಸುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆಯೊಂದಿಗೆ ಅವರ ಅಸ್ಮಿತತೆಯ ಪ್ರಶ್ನೆ ಎದುರಾಗಿ, ಕಾನೂನು ಮತ್ತು ಹಕ್ಕುಗಳ ನಡುವೆ ಸಂಘರ್ಷಕ್ಕೂ ಎಡೆಮಾಡಿಕೊಟ್ಟಿದೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ರಚನೆ ಕುರಿತು ಚಿಕ್ಕಮಗಳೂರು ಉಪ ವಿಭಾಗಾಧಿಕಾರಿಗಳಿಂದ ಹೊರಡಿಸಲಾದ ೧೦-೦೮-೯೮ ರ ಆದೇಶದ ಅನುಸಾರವಾಗಿ ನಮೂನೆ ೮ ರಲ್ಲಿ ೧೨೧೦ ಅರ್ಜಿ ಕ್ಲೇಮುಗಳು ಸಲ್ಲಿಕೆಯಾಗಿತ್ತು. ಇದರ ಆಧಾರದ ಮೇಲೆ ೨ ಹಂತಗಳಲ್ಲಿ ಪರಿಶೀಲನೆಯನ್ನು ನಡೆಸಲಾಗಿತ್ತು.

೦೧. ಮೊದಲ ಹಂತದಲ್ಲಿ ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದಾರೆ. ಎರಡನೇ ಹಂತದಲ್ಲಿ ೧೭-೧೧-೯೮, ೨೯-೧೨-೯೮, ೧-೧-೯೯ ಮತ್ತು ೨೮-೦೬-೯೯ ರಲ್ಲಿ ಗ್ರಾಮಪಂಚಾಯತ್ ಮತ್ತು ಕೆಲವು ಹಳ್ಳಿಗಳಿಗೆ ಅಧಿಕಾರಿಗಳೇ ಖುದ್ದು

ಬೇಟಿ ನೀಡಿ ಪರಿಶೀಲಿಸಿರುತ್ತಾರೆ ಮತ್ತು ಉಲ್ಲೇಖಿತ ಆದೇಶದ ಅನುಸಾರವಾಗಿ ಸಾರ್ವಜನಿಕ ಸಭೆಯಲ್ಲಿಯೂ ಒಪ್ಪಿಗೆ ಸೂಚಿಸಿರುವುದಿಲ್ಲ.

೦೨. ಸಲ್ಲಿಕೆಯಾದ ಅರ್ಜಿಗಳ ಅನುಸಾರವಾಗಿ ಪರಿಶೀಲನಾ ಸಂದರ್ಭದಲ್ಲಿ ಗ್ರಾಮಪಂಚಾಯತ್ ಸದಸ್ಯರು, ಸಂಘ ಸಂಸ್ಥೆಯವರು ಮತ್ತು ಸಾರ್ವಜನಿಕರು ಖುದ್ದು ಹಾಜರಿದ್ದು ಕುದುರೆಮುಖ ರಾಷ್ಟ್ರೀಯ ಉದ್ಯಾನವನ ರಚನೆಗೆ ಯಾರೂ ಕೂಡ ಒಪ್ಪಿಗೆಯನ್ನು ಮತ್ತು ಸಮ್ಮತಿಯನ್ನು ಸೂಚಿಸಿರುವುದಿಲ್ಲ, ಅಲ್ಲದೆ ಉದ್ಯಾನವನ ರಚನೆಗೆ ಇಚ್ಛೆಯನ್ನು ವ್ಯಕ್ತಪಡಿಸಿರುವುದಿಲ್ಲ.

೦೩. ೨೫-೦೮-೧೯೯೮ ರಲ್ಲಿ ಮೂಡಿಗೆರೆ ತಾಲ್ಲೂಕು ಸಂಸ್ಥೆ ಗ್ರಾಮಪಂಚಾಯತ್‌ನ ಸಾಮಾನ್ಯ ಸಭೆಯ ಕ್ರಮ ಸಂಖ್ಯೆ ೬ ರಲ್ಲಿ ತೆಗೆದುಕೊಂಡ ನಿರ್ಣಯದ ಪ್ರಕಾರ ಜನವಸತಿಯ ೨೦ ಸ್ಥಳಗಳನ್ನು ಮತ್ತು ಸರ್ವೆ ನಂ ೨೨ ರಲ್ಲಿರುವ ೨೦೦೦ ಎಕರೆ ಗೋಮಾಳ ಪ್ರದೇಶವನ್ನು ಉದ್ಯಾನವನ ವ್ಯಾಪ್ತಿಯಿಂದ ಹೊರ ಸೂಚಿಸಬೇಕೆಂದು ನಿರ್ಣಯವನ್ನು ಕೈಗೊಳ್ಳಲಾಗಿತ್ತು.

೦೪. ಶೃಂಗೇರಿ ತಾಲ್ಲೂಕು ಕೆರೆ ಗ್ರಾಮಪಂಚಾಯತ್ ಅಧ್ಯಕ್ಷರು ಕೂಡ ೦೬-೧೧-೧೯೯೯ ರ ಪತ್ರದಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಿಂದ ಕೆರೆ ಗ್ರಾಮಪಂಚಾಯತ್ ನ ಸ್ಥಳಗಳನ್ನು ಹೊರಗಿಡಲು ೦೨-೧೨-೧೯೯೮ ರಂದು ನಡೆದ ಸಾಮಾನ್ಯ ಸಭೆಯಲ್ಲಿ ನಿರ್ಣಯವನ್ನು ಕೈಗೊಂಡಿದ್ದ ಪತ್ರವನ್ನು ಸರ್ಕಾರಕ್ಕೂ ಕೂಡ ಸಲ್ಲಿಸಿರುತ್ತಾರೆ.

೦೫. ೧೭-೦೯-೧೯೯೮ ರಲ್ಲಿ ಚಿಕ್ಕಮಗಳೂರು ಜಿಲ್ಲಾ ಪಂಚಾಯತ್ ಸಭೆಯಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸುತ್ತಲೂ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯಾಗುವುದರಿಂದ ಸುತ್ತಲೂ ವಾಸಿಸುತ್ತಿರುವ ಗಿರಿಜನರಿಗೆ ಅನ್ಯಾಯವಾಗುತ್ತದೆ ಎಂಬ ಕಾರಣದಿಂದ ಪ್ರದೇಶವನ್ನು ಸ್ಥಳ ತನಿಖೆ ಮಾಡಿ ಸರ್ಕಾರಕ್ಕೆ ವರದಿಯನ್ನು ನಿರ್ಣಯದೊಂದಿಗೆ ಕಳುಹಿಸಿಕೊಡಲು ತೀರ್ಮಾನಿಸಿರುತ್ತಾರೆ.

೦೬. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ರಚನೆಯಾದರೆ, ನಾವು ನಿರಾಶ್ರಿತರಾಗುತ್ತೇವೆಂಬ ಭಯದಿಂದ ೨೦-೧೦-೧೯೯೮ ರಂದು ಕೆರೆ ಗ್ರಾಮದ ವಾಸಿ ಶ್ರೀ ಮೂಲ್ಯ ಬಿನ್ ತುಮೂಲ್ಯ ಮತ್ತು ೨೧-೧೧-೧೯೯೮ ರಂದು ಬಾಳೆಗೆರೆ ವಾಸಿತ ಶ್ರೀ ದ್ಯಾಮೇಗೌಡ ಬಿನ್ ವೆಂಕಟಗೌಡ ಎಂಬುವರು ತಿಂಗಳಾಂತರದಲ್ಲಿ ಆತ್ಮಹತ್ಯೆಗೆ ಶರಣಾಗಿರುವ ವರದಿಗಳನ್ನು ಪರಿಶೀಲಿಸಲಾಗಿದೆ.

೦೭. ಇದರೊಂದಿಗೆ ಉದ್ಯಾನವನ ವ್ಯಾಪ್ತಿಯ ಅರ್ಜಿದಾರರು ಮತ್ತು ಸಂಘ ಸಂಸ್ಥೆಯವರು ವಿಚಾರಣೆ ವೇಳೆ ಸಲ್ಲಿಸಿರುವ ಅಂಶಗಳು ಪ್ರಮುಖವಾಗಿ; ೧೯೮೭ ರಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಅಧಿಸೂಚನೆಯನ್ನು ಸಾರ್ವಜನಿಕರ ಹಾಗೂ ಜನ ಪ್ರತಿನಿಧಿಗಳ ಗಮನಕ್ಕೆ ತರದೆ, ಚರ್ಚಿಸದೆ ಏಕಪಕ್ಷೀಯವಾಗಿ ಅರಣ್ಯ ಇಲಾಖೆಯವರು ಘೋಷಿಸಿರುವುದರಿಂದ ಉದ್ಯಾನವನ ರಚನೆಯನ್ನು ಪುನಃ ಪರಿಶೀಲಿಸಬೇಕು, ರಾಷ್ಟ್ರೀಯ ಉದ್ಯಾನವನದ ಗಡಿಗಳ ಗುರ್ತಿಸುವಿಕೆಯು ಗೊಂದಲಮಯವಾಗಿದ್ದು, ಸ್ಪಷ್ಟವಾದ ಗಡಿ ಗುರ್ತಿಸುವಿಕೆಯನ್ನು ಸಾರ್ವಜನಿಕರ ಮುಂದಿಡುವುದು, ಗಿರಿಜನರ ಮೂಲಭೂತ ಹಕ್ಕುಗಳು ಉಲ್ಲಂಘನೆಯಾಗುವುದರಿಂದ ಅವುಗಳನ್ನು ರಕ್ಷಿಸಿ ಈ ಯೋಜನೆಯನ್ನು ಕೈಬಿಡಬೇಕು, ಸಾಗುವಳಿ ಭೂಮಿಯನ್ನು ಹಾಗೂ ಜನವಸತಿ ಪ್ರದೇಶಗಳನ್ನು ಹೊರತು ಪಡಿಸಿ ಗಡಿಗಳನ್ನು

ಗುರುತು ಪಡಿಸಿಕೊಳ್ಳಬೇಕು, ಗ್ರಾಮಪಂಚಾಯತ್ ನ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ತಡೆಯದಂತೆ ಸಾಗುವಿಕೆಗೆ ಅವಕಾಶ ನೀಡಬೇಕು.

೦೮. ಉದ್ಯಾನವನ ಹೆಸರಲ್ಲಿ ಯಾವುದೇ ವ್ಯಕ್ತಿಯನ್ನು ಬಲಾತ್ಕಾರವಾಗಿ, ದೈಹಿಕ ಹಿಂಸೆ ಮತ್ತಿತರ ರೀತಿಯಲ್ಲಿ ಹಿಂಸೆಗೆ ಒಳಪಡಿಸಿ ಹೊರದೂಡಬಾರದು ಹಾಗೂ ಯೋಜನೆಯಲ್ಲಿ ಪರ್ಯಾಯ ವ್ಯವಸ್ಥೆ ಕಲ್ಪಿಸುವುದಾದರೆ, ಯಾವುದೇ ಮಾನದಂಡಗಳನ್ನು ಇಟ್ಟುಕೊಳ್ಳದೆ ಸಣ್ಣ ಹಿಡುವಳಿದಾರರಿಗೂ ಮತ್ತು ಕೂಲಿ ಕಾರ್ಮಿಕರಿಗೂ ಹೆಚ್ಚು ಪರಿಹಾರವನ್ನು ನೀಡಬೇಕು.

೦೯. ಉದ್ಯಾನವನ ಅಧಿಸೂಚನೆ ಹೊರಡಿಸುವಾಗ ೨೦೦೦ ಎಕರೆಯ ಗೋಮಾಳ ಜಮೀನನ್ನು ಸೇರಿಸಿಕೊಂಡು ಘೋಷಣೆ ಮಾಡಲಾಗಿದೆ. ಆದರೆ ಈ ಅಧಿಸೂಚನೆಯಿಂದ ೧೦ ಸಾವಿರ ಜಾನುವಾರು ಮೇವಿಗೆ ಅಡಚಣೆಯುಂಟಾಗಿದ್ದು, ಸದರಿ ಜಮೀನನ್ನು ಉದ್ಯಾನವನದ ವ್ಯಾಪ್ತಿಯಿಂದ ಹೊರಗಿಡುವುದು ಸೇರಿದಂತೆ ಜಮೀನುಗಳಿಗೆ ಅವಶ್ಯವಿರುವ ವಿದ್ಯುತ್ ಜೋಡಣೆಯ ಯೋಜನೆಯನ್ನು ಚಾಲನೆ ನೀಡಬೇಕೆಂದು, ಉದ್ಯಾನವನದ ಒಳ ಭಾಗದಲ್ಲಿರುವ ಗಂಗಾಮೂಲ, ನದಿ ಹರಿಯುವಿಕೆ, ಕೃಷಿಗೆ ಅವಶ್ಯವಿರುವ ನದಿ ನೀರು ಹರಿಯುವಿಕೆಯನ್ನು ಹಾಗೂ ಶಿಖರದ ಮೇಲಿರುವ ಆರೋಗ್ಯಧಾಮ, ನರಸಿಂಹ ಪರ್ವತ ಮತ್ತು ಪ್ರವಾಸಿ ತಾಣಗಳನ್ನು ಉದ್ಯಾನಕ್ಕೆ ಸೇರ್ಪಡೆ ಮಾಡಿದರೆ ನಮ್ಮ ಸ್ವಚ್ಛಂದದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳನ್ನು ಕಿತ್ತುಕೊಳ್ಳುವಂತಾಗುವುದು ಎಂದು ಅರ್ಜಿದಾರರು ಮನವಿ ಮಾಡಿದ್ದಾರೆಂಬ ವರದಿಯನ್ನು ಉಪ ವಿಭಾಗಾಧಿಕಾರಿಗಳು, ಚಿಕ್ಕಮಗಳೂರು. ಅವರು ಜಿಲ್ಲಾಧಿಕಾರಿಗಳಿಗೆ ಮತ್ತು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಗಣಿಸಿ ಕೆಲವು ಸಲಹೆ ಮತ್ತು ಸೂಚನೆಗಳನ್ನು ಉಪ ವಿಭಾಗ ಅಧಿಕಾರಿಗಳು ತಮ್ಮ ವರದಿಯಲ್ಲಿ ಉಲ್ಲೇಖಿಸಿರುತ್ತಾರೆ. ಅವುಗಳೆಂದರೆ, ಅಧಿಸೂಚನೆ ಹೊರಡಿಸಿದ ನಂತರದಲ್ಲಿ ಹಕ್ಕುಗಳನ್ನು ಸಾದರ ಪಡಿಸಲು ೧೨೧೦ ಅರ್ಜಿದಾರರು ನಮೂನೆ ೮ ರಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಹಲವು ಸಭೆಗಳು ಮತ್ತು ನೇರ ಭೇಟಿಗಳಲ್ಲಿ ಅರ್ಜಿದಾರರಿಂದ ಮತ್ತು ಸಂಘ ಸಂಸ್ಥೆಗಳಿಂದ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ರಚನೆಗೆ ಒಪ್ಪಿಗೆಯಾಗಲಿ ಯಾರೊಬ್ಬರು ತಮ್ಮ ಇಚ್ಚೆಯನ್ನು ವ್ಯಕ್ತಪಡಿಸಿಲ್ಲ, ಹಾಗೂ ಗಿರಿಜನ ವಾಸಿತ ಮತ್ತು (೭೮೮-೦೦ ಎಕರೆ)ಕೃಷಿ ಪ್ರದೇಶಗಳು ಹೆಚ್ಚು ಉದ್ಯಾನವನದ ಒಳಭಾಗದಲ್ಲಿ ಬರುತ್ತವೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ೧೯೭೨ರ ವನ್ಯಜೀವಿ ಕಾಯ್ದೆ ಅಡಿ ಇರುವ ಅವಕಾಶ, ಉದ್ಯಾನವನ ವ್ಯಾಪ್ತಿಯಲ್ಲಿ ಪರಿಸರ ಸಂರಕ್ಷಣೆ, ಮೂಲನಿವಾಸಿಗಳು, ಕೃಷಿಕರು ಮತ್ತು ಜನ ಹಿತರಕ್ಷಣೆಯನ್ನು ಗಮನದಲ್ಲಿರಿಸಿಕೊಂಡು ಈ ಕೆಳಗಿನಂತೆ ತೀರ್ಮಾನವನ್ನು ಮತ್ತು ಸಲಹೆಗಳನ್ನು ಮಂಡಿಸಿರುತ್ತಾರೆ[೯]. ಅವುಗಳೆಂದರೆ,

೦೧. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಬರುವ ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕುಗಳಲ್ಲಿ ಹಂಚಿಕೆಯಾಗಿದ್ದು, ವಿಪುಲವಾದ ವನರಾಶಿ, ಜೀವ ಸಂಕುಲಗಳನ್ನು ಹಾಗೂ ಎತ್ತರದ ಶಿಖರಗಳೊಂದಿಗೆ ಮಾರುತಗಳನ್ನು ತಡೆದು ಮಳೆ ಆಕರ್ಷಿಸುವ ನಿತ್ಯಹರಿದ್ವರ್ಣ ಕಾಡುಗಳು,

ಸದಾಕಾಲ ಹರಿಯುವ ನದಿಗಳು, ಎಲ್ಲವನ್ನು ರಕ್ಷಿಸುವ ಅಗತ್ಯವಿದೆ. ಆದುದರಿಂದ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಸಂಸೆ, ಕಡಕೋಳ ಮತ್ತು ಹೊರನಾಡು, ಶೃಂಗೇರಿ ತಾಲ್ಲೂಕಿನ ೧೬ ಗ್ರಾಮಗಳಾದ ಕೆರೆ, ಹಾದಿಕಿರೂರು, ಹಾದಿ, ಗುಲಗಂಜಿಮನೆ, ಭಲೇಕಡಿ, ಬಾಳಗೆರೆ, ಸುಂಕದಮಕ್ಕಿ, ಶೀರ್ಲು, ಮುಡುಬ, ಕೆ.ಮಸಿಗೆ, ಮರ್ಕಲ್, ಎಡದಳ್ಳಿ, ಮಲ್ನಾಡ್, ಮಾತೊಳ್ಳಿ, ನೆಮ್ಮಾರು ಎಸ್ಟೇಟ್ ಹಾಗೂ ಕೊಪ್ಪ ತಾಲ್ಲೂಕಿನ ಹರಳಾನೆ, ಮೇಗೂರು ಮತ್ತು ಕಲ್ಲುಗುಡ್ಡೆ, ಸೌತ್ ಭದ್ರಾ, ತುಂಗಭದ್ರಾ ಮತ್ತು ನರಸಿಂಹ ಪರ್ವತಗಳನ್ನೊಳಗೊಂಡಂತೆ ರಾಷ್ಟ್ರೀಯ ಉದ್ಯಾನವನ ರಚಿಸುವುದು ಸೂಕ್ತವಾಗಿದ್ದು, ಚಿಕ್ಕಮಗಳೂರು ಜಿಲ್ಲೆಯ ೨೨ ಗ್ರಾಮಗಳಲ್ಲಿ ತಲಾಂತರದಿಂದ ವಾಸವಿರುವ ಗಿರಿಜನರ ಕೇಂದ್ರಗಳು ಹೆಚ್ಚಾಗಿದ್ದು, ಅಂತಹ ಜನನಿಬೀಡ ಕೇಂದ್ರಗಳನ್ನು ಎನ್‌ಕ್ಲೇವ್‌ಗಳಾಗಿ ಪರಿಗಣಿಸಿದೆ. ಇಂತಹ ಎನ್‌ಕ್ಲೇವ್ ಪ್ರದೇಶಗಳನ್ನು ಅಳತೆಯ ಸಂದರ್ಭದಲ್ಲಿ ಉದ್ಯಾನವನ ವ್ಯಾಪ್ತಿಯಿಂದ ಹೊರಗಿಡುವುದು.

೦೨. ಕುದುರೆಮುಖ ಕಬ್ಬಿಣ ಅದಿರು ಸಂಸ್ಥೆಯು ಒಂದು ಸಾರ್ವಜನಿಕ ಉದ್ದಿಮೆಯಾಗಿ ೨೫೦೦ ಖಾಯಂ ಉದ್ಯೋಗಸ್ಥರು ಮತ್ತು ೮ ಸಾವಿರ ಜನರು ಪರೋಕ್ಷವಾಗಿ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ೧೯೮೨ ರಿಂದಲೂ ಕುದುರೆಮುಖ ಟೌನ್‌ಶಿಪ್ ನ್ನು ನೋಟಿಫೈಡ್ ಏರಿಯಾ ಎಂತಲೂ ಗುರುತಿಸಿದ್ದು, ಉದ್ಯಾನವನ ವ್ಯಾಪ್ತಿಯಲ್ಲಿ ಈ ನಗರವನ್ನು ತರುವುದಾದರೆ, ಕಂಪನಿಯ ಕಟ್ಟಡಗಳು, ವಸತಿ ಗೃಹಗಳನ್ನು ಹಾಗೂ ೧೧,೫೧೨ ಎಕರೆ ಭೂ ಪ್ರದೇಶವನ್ನು ಸ್ವಾದೀನಪಡಿಸಿಕೊಂಡು ಎನ್‌ಕ್ಲೇವ್ ಆಗಿ ಪರಿಗಣಿಸಿದೆ ಮತ್ತು ಉದ್ಯಾನವನ ವ್ಯಾಪ್ತಿಯಿಂದ ಹೊರಪಡಿಸಿದೆ.

೦೩. ಕೊಪ್ಪ ತಾಲ್ಲೂಕಿನ ಕಲ್ಲುಗುಡ್ಡೆ ಗ್ರಾಮದ ಮೆಣಸಿನಹಾಡ್ಯ ಪ್ರದೇಶದಲ್ಲಿ ೫೨ ಕ್ಕೂ ಹೆಚ್ಚು ಗಿರಿಜನ ಕುಟುಂಬಗಳು ವಾಸವಾಗಿದ್ದು, ಕೃಷಿ ಮತ್ತು ಇತರೆ ಅಭಿವೃದ್ಧಿ ಪ್ರದೇಶವಾಗಿದೆ. ಈ ಗ್ರಾಮದ ಸ.ನಂ ೩೨, ೩೬, ೧೦೨, ೭೭, ೩೭, ೨೪ ಮತ್ತು ೨೫ ರ ಭಾಗಶಃ ಪ್ರದೇಶವನ್ನು ಉದ್ಯಾನವನ ವ್ಯಾಪ್ತಿಯಿಂದ ಹೊರಬಿಟ್ಟು, ಉದ್ಯಾನವನದ ಗಡಿ ಭಾಗವನ್ನು ೨೪ ಮತ್ತು ೨೫ ರ ಅರ್ಧ ಭಾಗಗಳು ಸೇರಿ ಹಾದು ಹೋಗುವಂತೆ ಪುನಃ ರಚಿಸಬೇಕಾಗಿದೆ.

೦೪. ಮಾವಿನ ಕೆರೆ ಗ್ರಾಮದ ಸ.ನಂ ೧೦೦೦ ಮತ್ತು ೧೦೦೧ ದಟ್ಟವಾದ ಅರಣ್ಯದಿಂದ ಕೂಡಿದ ಪ್ರದೇಶವಾಗಿ ಅರಣ್ಯ ಇಲಾಖೆಗೆ ಸೇರಿರುತ್ತದೆ, ಈ ಪ್ರದೇಶದಲ್ಲಿ ೨೦೦ ಎಕರೆ ದಟ್ಟವಾದ ಕಾಡು ಪ್ರದೇಶ ಲಭ್ಯವಾಗುತ್ತದೆ. ಹೊರನಾಡಿನ ಸ.ನಂ ೬೫ರಿಂದ ಪ್ರಸ್ತಾಪಿತ ಸ.ನಂ ಗಳನ್ನು ಸೇರಿಸಿಕೊಂಡು ಕಳಕ್ಕೋಡು ಸ.ನಂ ೬೬ಕ್ಕೆ ಸೇರಿಸಿ ಗಡಿಯನ್ನು ಪುನರ್ ರಚಿಸಿದಲ್ಲಿ ಸಮರ್ಪಕವಾಗುವುದಲ್ಲದೆ, ಉದ್ಯಾನವನದ ಗಡಿಯೂ ವಿಸ್ತಾರಗೊಳ್ಳುತ್ತದೆ. ಆದ್ದರಿಂದ ಮಾವಿನಕೆರೆ ಗ್ರಾಮದ ೧೦೦೦ ಮತ್ತು ೧೦೦೧ ಸ.ನಂ ಜಾಗವನ್ನು ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಗೆ ಸೇರಿಸಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

೦೫. ಜನರು ವಾಸಮಾಡುವ ಪ್ರದೇಶಗಳನ್ನು ಎನ್‌ಕ್ಲೇವ್‌ಗಳಾಗಿ ಗುರುತುಪಡಿಸಿ, ಅವುಗಳನ್ನು ಉದ್ಯಾನವನ ವ್ಯಾಪ್ತಿಯಿಂದ ಹೊರಗುಳಿಸಿ, ಉಳಿದಿರುವ ಪ್ರದೇಶಗಳಲ್ಲಿ ಜನರು

ಕಂಡುಬಂದರೆ, ಉಳಿದ ಮೂಲ ನಿವಾಸಿಗಳು, ಗಿರಿಜನರು ಮತ್ತು ರೈತರನ್ನು ಉದ್ಯಾನವನದ ಹೊರಗಿನ ಭಾಗಕ್ಕೆ ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸುವುದು.

೦೬. ವನ್ಯಜೀವಿ ಇಲಾಖೆಯ ಅಧಿಕಾರಿಗಳ ಹೇಳಿಕೆಯಂತೆ, ಯೋಜಿತ ಉದ್ಯಾನವನ ಮಧ್ಯಭಾಗದಲ್ಲಿ ಬರುವ, ಆದರೆ ರಕ್ಷಿತಾರಣ್ಯಗಳಿಗೆ ಸೇರದಿರುವ ಜಮೀನನ್ನು ಹೊರತುಪಡಿಸಿ ಉಳಿದ ವ್ಯಾಪ್ತಿ ಸೇರಿಸಿದೆ. ಆದರೆ, ಇಂತಹ ಪ್ರದೇಶದಲ್ಲಿ ಜನ ಜಾನುವಾರುಗಳ ಮೇವಿನ ಹಕ್ಕು, ಕೃಷಿಕರಿಗೆ ಸೊಪ್ಪು ಮತ್ತು ದರಗಳನ್ನು ಉಪಯೋಗಿಸುವ ಹಕ್ಕನ್ನು ಕಾಯ್ದಿರಿಸಿದೆ. ೧೦ ಸಾವಿರಕ್ಕಿಂತಲೂ ಮಿಗಿಲಾದ ಜಾನುವಾರುಗಳು ಈ ಉದ್ಯಾನವನದ ವ್ಯಾಪ್ತಿಯ ಒಳಗಡೆ ಬರುವುದರಿಂದ ಗೋಮಾಳದಲ್ಲಿನ ಮೇಯಿಸುವ ಮತ್ತು ಜಾನುವಾರುಗಳನ್ನು ಮೇಯಿಸುವ ಹಕ್ಕನ್ನು ಈ ವ್ಯಾಪ್ತಿಯಲ್ಲಿ ಕಾಯ್ದಿರಿಸಿದೆ.

೦೭. ಕಳಸ ಭಾಗದಿಂದ ಧರ್ಮಸ್ಥಳ–ಬೆಳ್ತಂಗಡಿ–ಕಾರ್ಕಳ–ಉಡುಪಿ ಹಾಗೂ ಶೃಂಗೇರಿ ಮೂಲದಿಂದಲೂ ಪ್ರಯಾಣಿಸುವ ಈ ಮಾರ್ಗವು ಯಾತ್ರಾರ್ಥಿಗಳಿಗೆ, ವ್ಯಾಪಾರಸ್ಥರಿಗೆ ಹತ್ತಿರ ಮಾರ್ಗವು ಆಗಿರುವುದರಿಂದ ಮತ್ತು ಉದ್ಯಾನವನದ ಒಳ ಭಾಗದಲ್ಲಿ ಹಾದುಹೋಗುವುದರಿಂದ ಈ ಮಾರ್ಗವನ್ನು ರದ್ದುಗೊಳಿಸದೆ ಕಾಯ್ದಿರಿಸಬೇಕು.

ಮೇಲ್ಕಾಣಿಸಿದ ಅಂಶಗಳನ್ನು ಪರಿಗಣಿಸಿ ಯೋಜಿತ ರಾಷ್ಟ್ರೀಯ ಉದ್ಯಾನವನದ ರಚನೆ ಬಗ್ಗೆ ಕಲಂ ೩೫(ಎ) ದೊಂದಿಗೆ ಕಲಂ ೨೬(ಬಿ)ಯಂತೆ ಅಧಿಸೂಚನೆಯನ್ನು ಸರ್ಕಾರದ ಕಲಂ ೩೫(೧) ಅನ್ವಯ ಮಾಡಿದ ಪ್ರಥಮ ಅಧಿಸೂಚನೆಯಂತೆ ಎನ್‌ಕ್ಲೇವ್‌ಗಳನ್ನು ಹೊರತುಪಡಿಸಿ, ಗಡಿ ಬದಲಾವಣೆಯೊಂದಿಗೆ ಜನರ ಹಕ್ಕುಗಳನ್ನು ಕಾಯ್ದಿರಿಸಿ, ತುಂಗ–ಭದ್ರಾ ರಾಜ್ಯ ಅರಣ್ಯ, ಸೌತ್ ಭದ್ರಾ ರಾಜ್ಯ ಅರಣ್ಯ ಮತ್ತು ನರಸಿಂಹಪರ್ವತ ರಕ್ಷಿತಾರಣ್ಯ ಒಳಗೊಂಡ ಪ್ರದೇಶವನ್ನು ಕುದುರೆಮುಖ ರಾಷ್ಟ್ರೀಯ ಉದ್ಯಾನವನವೆಂದು ಘೋಷಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ನಿರ್ಧರಿಸಿದೆ ಹಾಗೂ ಗಡಿ ಬದಲಾವಣೆಗಳನ್ನು ಮಾಡಿಯೂ ಜನ ವಾಸಿತ ಎನ್‌ಕ್ಲೇವ್‌ಗಳನ್ನು ಹೊರತುಪಡಿಸಿಯೂ ಕೆಲವು ಚದುರಿದ ವಾಸಸ್ಥಳಗಳು ಮತ್ತು ಕೃಷಿ ಹಿಡುವಳಿಗಳು ಉದ್ಯಾನವನದ ವ್ಯಾಪ್ತಿಯಲ್ಲಿ ಕಂಡುಬರುವವು. ಇಂತಹ ಪ್ರದೇಶಗಳನ್ನು ಭೂ ಸ್ವಾಧೀನ ಪ್ರಕ್ರಿಯೆ ಮುಖಾಂತರ ಸ್ವಾಧೀನ ಪಡಿಸಿಕೊಂಡಲ್ಲಿ ಅಂದಾಜು ೩೧, ೪೧, ೧೯,೦೦೦–೦೦ ಮೊತ್ತ ಭೂಮಿ ಮತ್ತು ಮನೆ ಕಳೆದುಕೊಳ್ಳುವ ಸಂತ್ರಸ್ತರಿಗೆ ಪರಿಹಾರ ರೂಪದಲ್ಲಿ ವಿತರಿಸಬೇಕಾಗುತ್ತದೆ. ಕಾಡಿನ ಮಕ್ಕಳಾದ ಗಿರಿಜನರೇ ಅಧಿಕವಾಗಿರುವ ಇಂತಹ ಕುಟುಂಬಗಳ ಮತ್ತು ಇತರೆ ಹಿಂದುಳಿದ ರೈತರ ಶ್ರೇಯೋಭಿವೃದ್ಧಿಯ ದೃಷ್ಟಿಯಿಂದ ಅವರನ್ನು ಅಲ್ಲಿಯೇ ಉಳಿಸಿಕೊಳ್ಳುವುದು ಅಗತ್ಯವೆಂದು ಅಭಿಪ್ರಾಯಪಡಲಾಗಿದೆ. ಈ ಪರಿಯ ಸನ್ನಿವೇಶ ಚಿಕ್ಕಮಗಳೂರು ಜಿಲ್ಲೆಗೆ ಮಾತ್ರ ಸೀಮಿತವಾಗಿರದೆ, ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಗೆ ವಿಸ್ತರಿಸಿತ್ತು. ಕಾರ್ಕಳ ವನ್ಯಜೀವಿ ವಲಯದಲ್ಲಿ ಮೊದ ಮೊದಲು ಉಪಅರಣ್ಯ ಸಂರಕ್ಷಣಾಧಿಕಾರಿಗಳೆ ಅರಣ್ಯ ಕಿರು ಉತ್ಪನ್ನಗಳ ಸಂಗ್ರಹಕ್ಕೆ ಅನುಮತಿ ನೀಡಿದ್ದರು. ತದನಂತರದ ಕಾಲದಲ್ಲಿ ಈ ಹಕ್ಕುಗಳನ್ನು ಮೊಟುಕುಗೊಳಿಸಿದರು. ಈ ವ್ಯವಸ್ಥೆಯಿಂದಾಗಿ ತಲತಲಾಂತರದಿಂದ ಕಾಡಿನ ಮಕ್ಕಳಾಗಿ ವಾಸಮಾಡುತ್ತಾ ಬಂದ ನಮಗೆ ಸಾಕಷ್ಟು ಸಮಸ್ಯೆಗಳು ಉದ್ಯಾನವನ ವ್ಯಾಪ್ತಿಯಲ್ಲಿ ದಿನೇ ದಿನೇ ಎದುರಾಗಿ ಜೀವನ ಸಮಸ್ಯೆಗಳ

ಸುಳಿಯಲ್ಲಿ ಸಿಲುಕಿದೆ ಎಂದು ಸ್ಥಳೀಯರು ಉಪ ವಿಭಾಗಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿದ್ದಾರೆ. ಜನಸಾಮಾನ್ಯರ ಸಹಭಾಗಿತ್ವದ ಮುಖಾಂತರ ಅನುಷ್ಠಾನವಾಗಬೇಕಾದ ಉದ್ಯಾನವನ ಯೋಜನೆಯು, ರಚನೆಯ ಹಂತದಲ್ಲಿಯೇ ಸಾಕಷ್ಟು ವಿರೋಧಗಳನ್ನು ಎದುರಿಸಬೇಕಾಯಿತು. ಇದರೊಂದಿಗೆ ಜೂನ್ ೧೮, ೨೦೦೧ ರಂದು ಅಂತಿಮ ಘೋಷಣೆಯೊಂದಿಗೆ ಉದ್ಯಾನವನ ರಚನೆಯಾಗಿದೆ.

೯. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಪುನರ್ವಸತೀಕರಣಯೋಜನೆಯ ಅನುಷ್ಠಾನದ ಕರ್ತೃಗಳು

ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ಜೂನ್ ೧೮, ೨೦೦೧ ರಂದು ಅಂತಿಮ ಘೋಷಣೆಯೊಂದಿಗೆ ರಚನೆಯಾಯಿತು. ಸಾಕಷ್ಟು ವಿರೋಧಗಳ ನಡುವೆಯೇ ಅಂತಿಮವಾಗಿ ರಚನೆಗೊಂಡ ಮೇಲೆ ಉದ್ಯಾನವನದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಪನ್ಮೂಲಗಳನ್ನು ರಕ್ಷಿಸುವ ಕಾರ್ಯಕ್ಕೆ ಚಾಲನೆ ದೊರೆಯಿತು. ಇದರಲ್ಲಿ ಬಹು ಮುಖ್ಯವಾಗಿ ಅಳಿವಿನಂಚಿನಲ್ಲಿರುವ ವನ್ಯಜೀವಿಗಳ ಸಂಪತ್ತು, ಅರಣ್ಯ ಸಂರಕ್ಷಣೆ ಇದರೊಂದಿಗೆ ಜಲ ಮೂಲಗಳಾದ ನದಿಗಳು ಮತ್ತು ಝರಿಗಳ ಸಂರಕ್ಷಣೆಯೂ ಸೇರಿದಂತೆ, ಉದ್ಯಾನವನ ವ್ಯಾಪ್ತಿಯಲ್ಲಿ ಮಾನವ ಚಟುವಟಿಕೆ ನಿಯಂತ್ರಣವೂ ಆರಂಭವಾಯಿತು. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಅಂತಿಮ ಘೋಷಣೆಯಾಗುವ ಸಮಯದಲ್ಲಿ ಕೆ.ಐ.ಸಿ.ಓ.ಎಲ್ ಕಂಪನಿಯ ಗುತ್ತಿಗೆ ಅವಧಿ ಮುಗಿದು ನವೀಕರಣಕ್ಕೆ ಅಣಿಯಾಗುತ್ತಿದ್ದ ಕಾಲಕ್ಕೆ, ಗಣಿಗಾರಿಕೆಯ ವಿರುದ್ಧ ಹೋರಾಟಗಳು ಆರಂಭವಾದ ದಿನಗಳು ಕೂಡ ಆಗಿದ್ದವು. ಈ ಸಂದರ್ಭದಲ್ಲಿ ಗಣಿಗಾರಿಕೆ ವಿರುದ್ಧ ಅರಣ್ಯ ಇಲಾಖೆ, ಸರ್ಕಾರೇತರ ಸಂಸ್ಥೆಗಳು ಮತ್ತು ಸಾರ್ವಜನಿಕರು ಏಕರೂಪವಾಗಿ ಕಂಪನಿಯ ಕಾರ್ಯಚಟುವಟಿಕೆಗಳನ್ನು ನಿಲ್ಲಿಸುವಿಕೆಗೆ ಸುಪ್ರೀಂಕೋರ್ಟ್‌ನಲ್ಲಿಯೂ ಹೋರಾಟ ನಡೆಸಿ ಯಶಸ್ಸನ್ನುಗಳಿಸಿಕೊಂಡವು. ಇದು ಪರಿಸರದ ಪರವಾಗಿ ಪಡೆದಂತಹ ಸಾಮೂಹಿಕ ಜಯವಾಗಿತ್ತು. ರಾಷ್ಟ್ರೀಯ ಉದ್ಯಾನವನ ಆರಂಭವಾದಾಗ ಮಾನವ ಸಂಪನ್ಮೂಲಗಳ ನಿಯಂತ್ರಣ ಮತ್ತು ಸ್ಥಳಾಂತರ ಅನಿವಾರ್ಯವಾದ ಪರಿಸ್ಥಿತಿಯನ್ನು ಮನಗಂಡಿದ್ದ ಸರ್ಕಾರವು ಮಾನವ ಪುನರ್ವಸತೀಕರಣಯೋಜನೆ ಅನುಷ್ಠಾನಕ್ಕೆ ಪ್ರಭುತ್ವದ ಮುಖಾಂತರ ಕೊಡಮಾಡಲ್ಪಟ್ಟ ಆದೇಶದನ್ವಯ ಸರ್ಕಾರ ಚಾಲನೆಯನ್ನು ನೀಡಿತ್ತು. ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯ ಮುಖ್ಯ ಗುರಿಯಾದ್ದರಿಂದ ಪರಿಸರ ಮತ್ತು ಅರಣ್ಯ ಇಲಾಖೆ (ಸಹಕಾರಯುತವಾಗಿ ಇತರ ಇಲಾಖೆಗಳು) ಪ್ರಮುಖವಾದದ್ದು. ತದನಂತರದ ಕಾಲದಲ್ಲಿ ಪರಿಸರ ವನ್ಯಜೀವಿ ಸಂರಕ್ಷಣೆಯ ನಾಮಾಂಕಿತದಲ್ಲಿ ಕುದುರೆಮುಖ ಉದ್ಯಾನವನ ಭಾಗದಲ್ಲಿ ಕಾರ್ಯ ನಿರ್ವಹಿಸಿದ್ದ ಸರ್ಕಾರೇತರ ಸಂಸ್ಥೆಗಳು ಕೂಡ ಈ ಕಾರ್ಯದಲ್ಲಿ ತಮ್ಮದೇ ಆದ ಸ್ವರೂಪದಲ್ಲಿ ಕಾರ್ಯ ಚಾಲನೆ ಮಾಡಿದವು. ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಗುರಿ ಉದ್ದೇಶಗಳು ಅಭಿವೃದ್ಧಿಯೇ ಆಗಿದ್ದರು, ಅವುಗಳ ಕಾರ್ಯಚರಣೆಯಲ್ಲಿ ವ್ಯತ್ಯಾಸಗಳಿವೆ. ಈ ವ್ಯತ್ಯಾಸಗಳ ಅನುಗುಣವಾಗಿ ಅವುಗಳ ಕಾರ್ಯಗಳು ಚಾಲನೆಗೊಂಡು ಅನುಷ್ಠಾನಗೊಳ್ಳುವವು. ಅದರಂತೆ, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಕುರಿತು ಇರುವ ಅಂಶಗಳನ್ನು ತಿಳಿಯೋಣ:

'ಸರ್ಕಾರ': ಸಮುದಾಯ ಅಥವಾ ಘಟಕವನ್ನು ಆಳುವ ಜನರ ಸಮೂಹವಾಗಿದೆ. ಇದು ಸಾರ್ವಜನಿಕ ನೀತಿಯನ್ನು ರೂಪಿಸುವ ಮೂಲಕ ಅದನ್ನು ನಿಯಂತ್ರಿಸಿ ನಿರ್ವಹಿಸುತ್ತದೆ ಮತ್ತು ಆಡಳಿತಾತ್ಮಕ, ರಾಜಕೀಯ ಮತ್ತು ಸಾರ್ವಭೌಮ ಅಧಿಕಾರವನ್ನು ಕಾನೂನುಗಳ ಮುಖಾಂತರ ರಾಜ್ಯದಲ್ಲಿ ನಡೆಸುತ್ತದೆ'[೨೦].

ಅಥವಾ

'ರಾಜ್ಯದ ಅಥವಾ ಸಮುದಾಯವನ್ನು ನಿಯಂತ್ರಿಸುವ ವ್ಯವಸ್ಥೆ'ಯಾಗಿದೆ', ಸರ್ಕಾರ[೨೧].

ಇಲಾಖೆಗಳು: ಸರ್ಕಾರದವತಿಯಿಂದ ನಿರ್ದಿಷ್ಟ ಸಂಪನ್ಮೂಲಗಳನ್ನು ಸಂರಕ್ಷಿಸಲು ಹಾಗೂ ನಿರ್ವಹಿಸಲು ಕಾನೂನು ಬದ್ಧವಾಗಿ ರಚಿಸಲ್ಪಟ್ಟ ಮಾನವ ಸಿಬ್ಬಂಧಿಯ ಕ್ರೋಢೀಕೃತ ವ್ಯವಸ್ಥೆಗಳಾಗಿದ್ದು, ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೆ ಪೂರಕವಾದ ಸಹಕಾರವನ್ನು ಕೊಂಡೂಯ್ಯುವ ಸಮೂಹಗಳಾಗಿವೆ. ಉದಾಹರಣೆಗೆ, ಅರಣ್ಯ ಸಂಪನ್ಮೂಲವನ್ನು ನಿರ್ವಹಿಸಲು, ಪರಿಸರ ಮತ್ತು ಅರಣ್ಯ ಇಲಾಖೆ. ರಾಜ್ಯದ ಭೂ ಹಿಡುವಳಿ, ಕಂದಾಯವನ್ನು ನಿರ್ವಹಿಸಲು ಕಂದಾಯ ಇಲಾಖೆ. ಈ ಎರಡು ಇಲಾಖೆಗಳು ಭೂಮಿಯ ಮೇಲಿನ ಸಂಪನ್ಮೂಲಗಳನ್ನು ಇಲಾಖೆಗೆ ಕಾನೂನು ಬದ್ಧವಾಗಿ ನೀಡಿರುವ ನೀತಿಗಳ ಅನುಸಾರವಾಗಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವವು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವಾಗ ಪರಸ್ಪರ ಇಲಾಖೆಗಳ ಸಹಕಾರದೊಂದಿಗೆ ಕಾರ್ಯ ಆಯೋಜನೆಗೊಳ್ಳುವುದು.

ಸರ್ಕಾರೇತರ ಸಂಸ್ಥೆಗಳು: ಸರ್ಕಾರ ರಚಿಸುವ ಕಾನೂನುಗಳಿಗೆ ಒಳಪಟ್ಟು, ಆದರೆ ಸರ್ಕಾರದ ನೇರ ಹಸ್ತಕ್ಷೇಪ ವಿಲ್ಲದ, ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಹಿತದೃಷ್ಟಿಯಿಂದ ಸಂಘಟಿತವಾದ ಸದಸ್ಯರ ಸಮೂಹವೇ ಸರ್ಕಾರೇತರ ಸಂಸ್ಥೆಗಳು. ಎರಡನೇ ವಿಶ್ವ ಸಮರವು ಗತಿಸಿದ ನಂತರದ ಕಾಲದಿಂದ ಸರ್ಕಾರವು ಪ್ರತಿ ಸ್ಥಳದಲ್ಲಿಯೂ ಒಮ್ಮೆಲೆಯೇ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗದೇ ಇರುವಂತಹ ಸಂದರ್ಭದಲ್ಲಿ ಉದ್ದೇಶಿತ ಸದಸ್ಯರು ಒಂದೆಡೆ ಸೇರಿ ನಿರ್ಮಿಸಿಕೊಂಡ ಒಂದು ವ್ಯವಸ್ಥೆಯಾಗಿ ಬೆಳವಣಿಗೆಯಾಗಿದೆ. ಸರ್ಕಾರೇತರ ಸಂಸ್ಥೆಗಳು ಯಾವುದೇ ಫಲಾಪೇಕ್ಷೆ ಇಲ್ಲದೆ ಸಾರ್ವಜನಿಕರ ಕಲ್ಯಾಣಕ್ಕಾಗಿ ವಿವಿಧ ಮೂಲಗಳಿಂದ ದಾನ ಮತ್ತು ನಿಧಿಗಳನ್ನು ಸಂಗ್ರಹಿಸಿ ಅವುಗಳನ್ನು ಅಭಿವೃದ್ಧಿಯ ಪೂರಕವಾಗಿ ಪ್ರವಹಿಸಿಕೊಂಡು ಹೋಗುವ ಕಾರ್ಯವನ್ನು ಮಾಡುವಂತವಾಗಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವದಲ್ಲಿ ಮಾನವ ಪುನರ್ವಸತೀಕರಣಯೋಜನೆಯ ಅನುಷ್ಠಾನದ ಸಂಸ್ಥೆಗಳೆಂದರೆ, 'ಕುದುರೆಮುಖ ವೈಲ್ಡ್ ಲೈಫ್ ಪೌಂಡೇಶನ್' (ವಾಸ್ತವದಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ.), 'ವೈಲ್ಡ್ ಲೈಫ್ ಕನ್‌ಸರ್ವೇಷನ್ ಸೊಸೈಟಿ' ಮತ್ತು 'ಸೆಂಟರ್ ಫಾರ್ ವೈಲ್ಡ್‌ಲೈಫ್ ಸ್ಟಡಿ'.

ಪುನರ್ವಸತೀಕರಣ ಯೋಜನೆಯ ಕಾರ್ಯ ಸ್ವರೂಪಗಳು: ಯಾವುದೇ ಯೋಜನೆಯು ಅನುಷ್ಠಾನಗೊಳ್ಳಲು ಪೂರ್ವ ಯೋಜಿತವಾದ ನಿರ್ದೇಶನಗಳು, ಕಾರ್ಯ ಸೂಚಿಗಳು, ಕಾನೂನುಗಳು ಸಿದ್ಧವಾಗದ ಹೊರತು ಅನುಷ್ಠಾನ ಸಾಧ್ಯವಿಲ್ಲ. ಅಂತೆಯೇ ವ್ಯವಸ್ಥೆಯಡಿಯಲ್ಲಿ ಪುನರ್ವಸತಿ ಹೊಂದುವ ವ್ಯಕ್ತಿ, ಕುಟುಂಬ, ಸಮುದಾಯಗಳನ್ನು ಕಾರ್ಯಸೂಚಿಗಳ ಅಡಿಯಲ್ಲಿ

ಕಾನೂನು ಬದ್ಧವಾಗಿಯೇ ನೆರವೇರಿಸಬೇಕಾದುದು ಸಂಬಂಧಿಸಿದ ಕಾರ್ಯಾಂಗದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕರ್ತವ್ಯವಾಗಿರುತ್ತದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿಯೂ ಕೂಡ ಸರ್ಕಾರದ ನಿರ್ದೇಶಿತ ಕಾರ್ಯಸೂಚಿಗಳ ಅನ್ವಯ ಈ ಯೋಜನೆಯನ್ನು ಅರಣ್ಯ ಮತ್ತು ಇತರ ಇಲಾಖೆಗಳ ಸಹಕಾರದಲ್ಲಿ ಪೂರ್ಣಗೊಳಿಸಲ್ಪಡುತ್ತಿದೆ. ಅದರಂತೆ,

೦೧. ಉದ್ಯಾನವನ ವ್ಯಾಪ್ತಿಯಲ್ಲಿ ಒತ್ತಡ ಇಲ್ಲವೆ ಬಲವಂತದ ಸ್ಥಳಾಂತರ ಪ್ರಕ್ರಿಯೆಗೆ ಅವಕಾಶವನ್ನು ನೀಡದೆ, ಸಂಪೂರ್ಣ ವ್ಯಕ್ತಿ/ಕುಟುಂಬದ ಸ್ವಇಚ್ಛೆಯ (ಸ್ವಂತ ನಿರ್ಧಾರ) ಪುನರ್ವಸತೀಕರಣಕ್ಕೆ ಆಧ್ಯತೆ ನೀಡಿದೆ. ಸ್ವಇಚ್ಛೆ ಮೇರೆಗೆ ಪುನರ್ವಸತೀಕರಣಕ್ಕೆ ಒಳಗಾಗುವ ವ್ಯಕ್ತಿ/ ಕುಟುಂಬದ ಮುಖ್ಯ ಹಿಡುವಳಿದಾರ ತನ್ನ ಒಪ್ಪಿಗೆಯನ್ನು ಸೂಚಿಸದ ಹಸ್ತಾಕ್ಷರದ ಸಹಿಯೊಂದಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಹೆಸರಿಗೆ ಪತ್ರವನ್ನು ಮತ್ತು ಜಮೀನಿನ ದಾಖಲೆ, ವಾಸದ ಮನೆಯ ಹಕ್ಕು ಪತ್ರ (ಹಕ್ಕು ಪತ್ರ, ಅರಣ್ಯ ಹಕ್ಕುಪತ್ರ,)ಗಳ ನಕಲು ಪ್ರತಿಗಳನ್ನು ಮೊದಲು ವಲಯ ಅರಣ್ಯಾಧಿಕಾರಿಗಳ ಕಛೇರಿಗೆ ಸಲ್ಲಿಸಬೇಕು.

೦೨. ವಲಯ ಅರಣ್ಯಾಧಿಕಾರಿಗಳ ಪರಿಶೀಲನೆ ನಂತರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಕಳ ವಿಭಾಗಕ್ಕೆ ವರ್ಗಾಯಿಸಲ್ಪಟ್ಟು, ದಾಖಲೆಗಳ ಸಂಪೂರ್ಣ ಅವಲೋಕನದ ನಂತರ ಭೂ ಸ್ವಾದೀನ ಪ್ರಕ್ರಿಯೆಗೆ ಅನುಮತಿಸಿದ ಚಾಲನೆ ಪತ್ರ ದೊರೆಯುವುದು.

೦೩. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ (ಡಿ. ಎಫ್. ಒ) ಅನುಮೋದನೆ ಮೇರೆಗೆ ವಲಯ ಅರಣ್ಯ ಅಧಿಕಾರಿಗಳ ಕಛೇರಿ ಮುಖಾಂತರ ಜಂಟಿ ಸಮೀಕ್ಷೆಗೆ ಇತರ ಇಲಾಖೆಗಳ (ಕಂದಾಯ, ಕೃಷಿ, ತೋಟಗಾರಿಕೆ ಮತ್ತು ಪಿ ಡಬ್ಲ್ಯೂ ಡಿ ಹಾಗೂ ಗ್ರಾಮಪಂಚಾಯತ್) ಅವಗಹನೆಗೆ ಪ್ರಸ್ತಾವನೆ ಸಲ್ಲಿಕೆಯಾಗುತ್ತದೆ.

೦೪. ಜಂಟಿ ಸಮೀಕ್ಷೆಗೆ ದಿನಾಂಕವು ನಿಗದಿಯಾದ ನಂತರದಲ್ಲಿ ಮೊದಲ ಹಂತದ ಸಮೀಕ್ಷೆ ಕಾರ್ಯ ಜರುಗುವುದು. ಈ ಕಾರ್ಯದಿಂದ ಮುಂದಿನ ಹಂತದ ಸಮೀಕ್ಷೆ ವರೆಗೆ ಅರ್ಜಿದಾರ ಸಮಯ ಕಾಯ್ದುಕೊಳ್ಳಬೇಕು. ಎರಡನೇ ಹಂತದ ಸಮೀಕ್ಷೆ ಜರುಗಿದ ನಂತರ ಸಂಪೂರ್ಣ ವಿವರಗಳೊಂದಿಗೆ ಇಲಾಖಾ ಅಧಿಕಾರಿಗಳ ಸಹಿಯೊಂದಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಗೆ ವರ್ಗಾವಣೆಗೊಂಡು ಅಲ್ಲಿಂದ ಅರ್ಜಿದಾರನು ಪ್ರತಿನಿಧಿಸುವ ಜಿಲ್ಲೆಯ ಜಿಲ್ಲಾಡಳಿತ ಭವನಕ್ಕೆ ವರ್ಗಾಯಿಸಲ್ಪಡುತ್ತದೆ. ಜಿಲ್ಲಾಡಳಿತ ಭವನದಲ್ಲಿ ಅಂತಿಮರೂಪಕ್ಕೆ ತಲುಪಿದ ನಂತರ ಅರ್ಜಿದಾರನಿಗೆ ಸಲ್ಲಬೇಕಾದ ಒಟ್ಟು ಮೌಲ್ಯವು ನಿರ್ಧಾರಗೊಳ್ಳುತ್ತದೆ.

೦೫. ಅಂತಿಮ ಹಂತದಲ್ಲಿ ಅರ್ಜಿದಾರ ತನ್ನೆಲ್ಲಾ ಸ್ವತ್ತುಗಳ ಮೂಲ (ಒರಿಜಿನಲ್) ದಾಖಲೆಗಳನ್ನು ಉಪ ನೊಂದಣೆ ಅಧಿಕಾರಿಗಳು (ಸಂಬಂಧಿಸಿದ ತಾಲ್ಲೂಕು ಕಛೇರಿ) ಅವರ ಕಛೇರಿಯಲ್ಲಿ ಹಕ್ಕುದಾರನು ಸಹಿ ನೀಡುವುದರೊಂದಿಗೆ (ಡಿಜಿಟಲ್ ಸಹಿ ಮತ್ತು ಹೆಬ್ಬೆಟ್ಟು) ಅರಣ್ಯಾಧಿಕಾರಿಗಳ ಮುಖೇನ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಹೆಸರಲ್ಲಿ ಸ್ವತ್ತುಗಳು ನೊಂದಾಯಿಸಲ್ಪಡುತ್ತವೆ.

೦೬. ಸ್ವತ್ತುಗಳು ನೊಂದವಣೆಯಾದ ಮೇಲೆ ನಿಗದಿ ಪಡಿಸಿದ ಮೌಲ್ಯದ ಹುಂಡಿಗಳನ್ನು (ಚೆಕ್) ಹಸ್ತಾಂತರಿಸುತ್ತಾರೆ (ಸಮೀಕ್ಷೆಯಲ್ಲಿ ಇಲಾಖೆಯವರು ನಿಗದಿಪಡಿಸಿದ ಮೌಲ್ಯಕ್ಕೆ). ಇದರೊಂದಿಗೆ ಸ್ಥಳಾಂತರಗೊಳ್ಳುವ ವ್ಯಕ್ತಿ/ಅರ್ಜಿದಾರ ಜಂಟಿ ಹಕ್ಕುದಾರರಾಗಿದ್ದಲ್ಲಿ ಅರ್ಜಿ ಸಲ್ಲಿಸುವ ಸಮಯದಲ್ಲೇ ತಮ್ಮಗಳ ಪೂರ್ವಾನುಮತಿಯನ್ನು ತಿಳಿಸಿ, ನೊಂದಾವಣೆ ಕಛೇರಿಯಲ್ಲಿಯೂ ಸಹ ಹಸ್ತಾಕ್ಷರ ಮತ್ತು ಹೆಬ್ಬೆಟ್ಟನ್ನು ನೀಡಬೇಕು. ಇಲ್ಲದಿದ್ದ ಪಕ್ಷದಲ್ಲಿ ಅದು ಅನೂರ್ಜಿತವಾಗುತ್ತದೆ.

೦೭. ರಾಷ್ಟ್ರೀಯ ಉದ್ಯಾನವನಕ್ಕೆ ಸ್ವತ್ತುಗಳನ್ನು ಬಿಟ್ಟುಕೊಟ್ಟು ಪುನರ್ವಸತೀಕರಣಕ್ಕೆ ಒಳಗಾಗುವ ವ್ಯಕ್ತಿ/ಕುಟುಂಬ ಹಿಡುವಳಿದಾರರು ದೊರೆತ ಮೌಲ್ಯದಲ್ಲಿ ಹಂಚಿಕೆಯನ್ನಾದರೂ ಮಾಡಿಕೊಳ್ಳಬಹುದು. ಅದು ವ್ಯಕ್ತಿಯ ವಿವೇಚನೆಗೆ ಬಿಟ್ಟ ವಿಚಾರವಾಗಿರತ್ತದೆ. ಮುಖ್ಯವಾಗಿ ಗಮನಿಸುವ ಅಂಶವೆಂದರೆ, ಸ್ಥಳಾಂತರಗೊಳ್ಳುವ ವ್ಯಕ್ತಿ ಉದ್ಯಾನದ ಹೊರ ಭಾಗದಲ್ಲಿ ಜಮೀನು ಕೊಳ್ಳುವುದಾದರೆ, ಆತನಿಗೆ ಕಂದಾಯ ಇಲಾಖೆಯಿಂದ ಕ್ರಯಕ್ಕೆ ಕೊಳ್ಳುವ ಜಾಗಕ್ಕೆ ಯಾವುದೇ ರೀತಿಯ ಶುಲ್ಕವನ್ನು ವಿಧಿಸುವುದಿಲ್ಲ ಬದಲಾಗಿ ಸಂಪೂರ್ಣ ಉಚಿತವಾಗಿರುತ್ತದೆ.

೦೮. ಸ್ಥಳಾಂತರ ಮತ್ತು ಪುನರ್ವಸತೀಕರಣಕ್ಕೆ ಒಳಗಾದ ವ್ಯಕ್ತಿ ಇಲ್ಲವೆ ಆತನ ಕುಟುಂಬದವರು ಒಮ್ಮೆ ಈ ಪ್ರಕ್ರಿಯೆಗೆ ಒಳಗಾದನಂತರ ಮರು ಪ್ರವೇಶಗೊಳ್ಳುವುದು ನಿಷಿದ್ದವಾಗಿರುತ್ತದೆ. ಅಲ್ಲದೆ. ಇಲಾಖೆಯಿಂದ ಯಾವುದೇ ರೀತಿಯ ಯೋಜಿತವಾದ ಸೌಲಭ್ಯಗಳು (ಮನೆ, ತೋಟ, ಜಮೀನು, ಇತರೆ) ದೊರೆಯುವುದಿಲ್ಲ ಹಾಗೂ ಪುನರ್ವಸತೀಕರಣಕ್ಕೆ ಒಳಗಾದವರ ಜೀವನ ಶೈಲಿ ಹೇಗಿದೆ ಎಂಬುವ ಅನುಸರಣೆಯೂ ಕೂಡ ಇರುವುದಿಲ್ಲ.

ಮೇಲ್ಕಾಣಿಸಿದ ಪ್ರಕಾರವಾಗಿ ಸರ್ಕಾರದ ವತಿಯಿಂದ ಪುನರ್ವಸತೀಕರಣಯೋಜನೆ ಅನುಷ್ಠಾನಗೊಳ್ಳುವುದು ಹಾಗೂ ಉದ್ಯಾನವನದಿಂದ ಪುನರ್ವಸತಿಗೊಂಡವರಿಗೆ ಸ್ವತ್ತುಗಳ ಮೇಲಿನ ಮೌಲ್ಯದೊಂದಿಗೆ ಸರ್ಕಾರದಿಂದ ವಸ್ತುಗಳನ್ನು ಕೊಂಡೊಯ್ಯುವಿಕೆಗೆ ೫,೦೦೦ ರೂ, ಪರಿಹಾರಕ್ಕೆ ೧,೦೦,೦೦೦ ಲಕ್ಷ, ಜೀವನಾಧಾರ ಪರಿಹಾರ ೧೬,೮೦೦ ರೂ, ಮನೆ ನಿರ್ಮಾಣಕ್ಕೆ ೩೦,೦೦೦ ರೂ ಮತ್ತು ಆದಾಯ ಉತ್ಪತ್ತಿಗಾಗಿ ೨೦,೦೦೦ ರೂ ಒಟ್ಟು ೧,೭೧,೮೦೦ ರೂಗಳನ್ನು ನೀಡುತ್ತಾರೆ. ಈ ಪರಿಹಾರ ಕ್ರಮವು ಕಾಲಾಂತರದಲ್ಲಿ ರೂಪುಗೊಳ್ಳುವ ಎಸ್ ಆರ್ ರೇಟ್‌ಗಳ ಆಧಾರಿತವಾಗಿರುತ್ತದೆ[೨೨].

ಸರ್ಕಾರೇತರ ಸಂಸ್ಥೆಗಳು: ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಸರ್ಕಾರೇತರ ಸಂಸ್ಥೆಗಳು ತಮಗೆ ದೊರೆಯುವ ನಿಧಿಗಳ ಆಧಾರವಾಗಿ ತಮ್ಮದೇ ಆದ ಕಾರ್ಯಸೂಚಿಗಳನ್ನು ಒಳಗೊಂಡು ಪುನರ್ವಸತೀಕರಣಯೋಜನೆಯ ಪ್ರಕ್ರಿಯೆಗೆ ಚಾಲನೆಯನ್ನು ನೀಡಿವೆ. ಅದರಂತೆ ಅವರ ಸಿಬ್ಬಂದಿ ವರ್ಗದವರು ಸ್ಥಳೀಯವಾಗಿ ಕಾರ್ಯವನ್ನು ನಿರ್ವಹಿಸುತ್ತಾರೆ. ಮೊದ ಮೊದಲು ಸರ್ಕಾರೇತರ ಸಂಸ್ಥೆಗಳು ಜನರ ಸ್ಥಳಾಂತರ ಮತ್ತು ಪುನರ್ವಸತೀಕರಣಕ್ಕೆ ಚಾಲನೆ ನೀಡಿ ಯಶಸ್ವಿಯಾದವು. ತದನಂತರ ಸ್ಥಳೀಯ ಹೋರಾಟಗಾರರು ಮತ್ತು ಪುನರ್ವಸತಿಗೊಳ್ಳುವವರಿಂದ ಸಂಪೂರ್ಣ ಸಹಕಾರ ಸಿಗದೆ ಮತ್ತು ಕೆಲವು ಸಂಘರ್ಷಗಳ ಪರಿಣಾಮ ಸರ್ಕಾರೇತರ ಸಂಸ್ಥೆಗಳು

ಈ ಕಾರ್ಯದಲ್ಲಿ ಪ್ರಸ್ತುತದ ಸಂದರ್ಭದಲ್ಲಿ ತೊಡಗಿಸಿಕೊಂಡಿರುವುದು ಕಡಿಮೆ ಪ್ರಮಾಣದಲ್ಲಿದೆ ಎಂದು ಕ್ಷೇತ್ರ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೦೧. ಸ್ಥಳಾಂತರಗೊಳ್ಳುವ ವ್ಯಕ್ತಿಯು ತನ್ನ ಸ್ವಇಚ್ಛೆಯ ಮುಖಾಂತರ ಪುನರ್ವಸತಿ ಹೊಂದಲು ಕೋರಿ ಅರ್ಜಿಯನ್ನು ದಾಖಲೆಗಳೊಂದಿಗೆ ಸಂಸ್ಥೆಯ ನಿಯೋಜಿಸಿರುವ ಸಿಬ್ಬಂದಿ ಮುಖಾಂತರ ಸಲ್ಲಿಸುವುದು.

೦೨. ಸಂಸ್ಥೆಯ ಸಿಬ್ಬಂದಿಗಳ ಮುಖಾಂತರ ಸಲ್ಲಿಕೆಯಾದ ದಾಖಲೆಗಳ ಮುಖಾಂತರ ಹಕ್ಕುದಾರರ ಸಂಪೂರ್ಣ ಹಿಡುವಳಿಗಳ ಪರಿಶೀಲನೆ ಮಾಡಲ್ಪಡುತ್ತದೆ.

೦೩. ಸ್ವತ್ತುಗಳ ಮೇಲಿನ ಮೌಲ್ಯವು ಸರ್ಕಾರದ ಮುಖಾಂತರ ಪುನರ್ವಸತಿಗೊಳ್ಳುವ ಅರ್ಜಿದಾರನಿಗೆ ದೊರೆಯುವ ಸಮೀಕ್ಷಾ ಮೌಲ್ಯದ ರೂಪದಲ್ಲಿರದೆ, ಅದು ಸಂಪೂರ್ಣವಾಗಿ ಒಂದು ಗಂಟಿನ ಮೌಲಕ್ಕೆ ಸೀಮಿತವಾಗಿರುತ್ತದೆ (ಬಲ್ಕ್ ಎಮೌಂಟ್) ಅದು ೨ ಲಕ್ಷ ಇಲ್ಲವೆ ೨೦ ಲಕ್ಷ ಹೆಚ್ಚಿನ ಮೌಲ್ಯಕ್ಕೂ ಒಳಗೊಳ್ಳಬಹುದು.

೦೪. ಸಂಪೂರ್ಣ ಸಮೀಕ್ಷೆ ಮತ್ತು ಮೌಲ್ಯಗಳ ನಿರ್ಧಾರದ ನಂತರ ಉಪ ನೊಂದಾವಣಾಧಿಕಾರಿಗಳ ಕಛೇರಿಯಲ್ಲಿ ೪೦೦ ರೂ ಮೌಲ್ಯದ ಇ ಸ್ಟಾಂಪ್ ಪತ್ರದಲ್ಲಿ ಸೆಂಟರ್ ಫಾರ್ ವೈಲ್ಡ್‌ಲೈಫ್ ಸ್ಟಡಿ ಪ್ರಬಂಧಕರ ಹೆಸರಿಗೆ ನೊಂದಾಯಿಸಲ್ಪಡುತ್ತದೆ.

೦೫. ನೊಂದಾಯಿಸಲ್ಪಡುವ ಸದರಿ ಜಮೀನು ಪ್ರಬಂಧಕರಿಂದ ರಾಷ್ಟ್ರೀಯ ಉದ್ಯಾನವನಕ್ಕೆ ವರ್ಗಾಯಿಸಲ್ಪಡುತ್ತದೆ[೨೩]. ಈ ಮೇಲ್ಕಾಣಿಸಿದ ಅಂಶಗಳ ಆಧಾರವಾಗಿ ಸರ್ಕಾರೇತರ ಸಂಸ್ಥೆಯಲ್ಲಿ ಪುನರ್ವಸತೀಕರಣಯೋಜನೆಯು ಅನುಷ್ಠಾನಗೊಳ್ಳುವುದು. ಸರ್ಕಾರೇತರ ಸಂಸ್ಥೆಯಿಂದ ಸ್ಥಳಾಂತರಗೊಂಡು ಪುನರ್ವಸತಿ ಪರಿಹಾರ ಪಡೆದವರಿಗೆ ಉದ್ಯಾನವನದ ಹೊರವಲಯದಲ್ಲಿ ಅರ್ಥಿಗಳು ಗಳಿಸಿಕೊಂಡ ಪರಿಹಾರದ ಆಧಾರವಾಗಿ ಜಮೀನುಗಳನ್ನು ಸಂಸ್ಥೆಯವರೆ ಅವಲೋಕಿಸಿ ಅರ್ಥಿಗೆ ಒಪ್ಪಿಗೆಯಾದಲ್ಲಿ ಅವರು ಪಡೆದ ಪರಿಹಾರದ ಮೌಲ್ಯದಲ್ಲಿಯೇ ಆ ಜಮೀನುಗಳನ್ನು ಕ್ರಯಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆಗಳಿಗೆ ಸಿಬ್ಬಂದಿ ಚಾಲನೆ ನೀಡುತ್ತಾರೆ ಅಲ್ಲದೆ ಸಂಸ್ಥೆವತಿಯಿಂದ ಸರ್ಕಾರದ ಮೂಲಕ ಪುನರ್ವಸತೀಕರಣಗೊಂಡಿರುವವರಿಗೂ ಕೂಡ ನಡೆಯುವ ಕೆಲವು ಜೀವನೋಪಾಯದ ತರಬೇತಿಗಳಿಗೆ ಇವರನ್ನು ಆಯ್ಕೆ ಮಾಡಿ ಕೌಶಲ್ಯ ಮತ್ತು ಕೃಷಿ ತರಬೇತಿಗಳನ್ನು ಆಯೋಜಿಸುವರು. ಇದರೊಂದಿಗೆ ತರಬೇತಿಯ ಭಾಗವಾಗಿ ಅಲ್ಪ ಪ್ರಮಾಣದ ಸಹಾಯವನ್ನು ಕಲ್ಪಿಸುವುದರೊಂದಿಗೆ ಅನುಸರಣೆಯ ಪ್ರಕ್ರಿಯೆಯನ್ನು ಕೈಗೊಳ್ಳುತ್ತಾರೆ. ಕೃಷಿ ತರಬೇತಿಗಳಾದಲ್ಲಿ ವಾಣಿಜ್ಯ ಬೆಳೆಗಳನ್ನು ನರ್ಸರಿಗಳಿಂದ ಯಾವುದೇ ಖರ್ಚುಗಳಿಲ್ಲದೆ ಅರ್ಥಿಗಳಿಗೆ ಕೊಡಿಸುವುದು ಮತ್ತು ಅವುಗಳ ಬೆಳವಣಿಗೆಗೆ ಬೇಕಾದ ಪೋಷಕಾಂಶಗಳ ಪೂರೈಕೆಯ ಗೊಬ್ಬರಗಳನ್ನು ರಿಯಾಯಿತಿ ದರದಲ್ಲಿ ನೀಡುವ ಕಾರ್ಯವನ್ನು ಮಾಡುತ್ತಿದ್ದಾರೆ. ಕುಟುಂಬದಲ್ಲಿ ಯುವಕರಿದ್ದು ತಕ್ಕ ಮಟ್ಟಿನ ವಿದ್ಯಾಭ್ಯಾಸ ಹೊಂದಿದ್ದಲ್ಲಿ ಅವರಿಗೆ ಕಂಪ್ಯೂಟರ್ ತರಬೇತಿ ಆಯೋಜಿಸಿ ಕೌಶಲ್ಯಯುತರನ್ನಾಗಿಸುತ್ತಿದ್ದಾರೆ[೨೪].

ಪುನರ್ವಸತೀಕರಣವು ಸರ್ಕಾರ ಇಲ್ಲವೆ ಸರ್ಕಾರೇತರ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಂಡರೂ, ಸ್ಥಳಾಂತರಗೊಳ್ಳುವ ವ್ಯಕ್ತಿ/ಕುಟುಂಬ/ಸಮುದಾಯಗಳು ತನ್ನ ಮೂಲ ನಿವಾಸಗಳನ್ನು ತೊರೆದುಕೊಳ್ಳುವುದರಲ್ಲಿ ಹೆಜ್ಜೆ ಹೆಜ್ಜೆಗೂ ಸವಾಲಿನ ನಡಿಗೆಯಲ್ಲಿ ಸಾಗಬೇಕಾಗುವುದು. ಸವಾಲುಗಳು ಕಾಲ, ಸಂದರ್ಭ ಮತ್ತು ಸ್ಥಳಗಳನ್ನು ಆಧರಿಸಿ ಎದುರಾಗುವಂತದ್ದು. ಈ ನಿಟ್ಟಿನಲ್ಲಿ ಕುಟುಂಬದ ಮುಖ್ಯಸ್ಥ ತೆಗೆದುಕೊಳ್ಳುವ ನಿರ್ಧಾರಗಳು ಆತನ ಏಳಿಗೆಯನ್ನು ಅವಲಂಬಿಸಿರುತ್ತದೆ. ಮೇಲೆ ಉಲ್ಲೇಖಿಸಿರುವ ಪ್ರಕಾರವಾಗಿ ಸರ್ಕಾರದ ವತಿಯಿಂದ ಸ್ಥಳಾಂತರಗೊಂಡವರು ಆಯಾ ವರ್ಷದ ಎಸ್ ಆರ್ ನಿಗದಿ ಪಡಿಸಿದ ಮೌಲ್ಯಗಳ ಆಧಾರಿತವಾಗಿ ಎರಡರಿಂದ ಮೂರು ಹಂತದ ವಿವಿಧ ಇಲಾಖೆಗಳ ಸಮೀಕ್ಷೆಯಲ್ಲಿ ಕಾಲಹರಣಗೊಂಡು ಸ್ವತ್ತಿಗೆ ಮೌಲ್ಯವನ್ನು ಪಡೆದುಕೊಳ್ಳಬೇಕು ಮತ್ತು ದಾಖಲೆಗಳು ಸಂಪೂರ್ಣ ಪಕ್ವತೆಯಲ್ಲಿದ್ದಾಗ ಹಾಗೂ ಅಧಿಕಾರಿಗಳ ಮತ್ತು ರಾಜಕಾರಿಣಿಗಳ ಶಿಫಾರಸ್ಸಿನ ಮೇಲೆ ಶೀಘ್ರವಾಗಿ ಜಾರಿಯಾಗುವುದು. ತದನಂತರ ಒಮ್ಮೆ ಮೌಲ್ಯಗಳು ಹುಂಡಿಗಳ (ಚೆಕ್) ಮುಖಾಂತರ ಹಸ್ತಾಂತರವಾದ ನಂತರ ಸರ್ಕಾರದ ಇಲಾಖೆಗಳು ಯಾವ ಅನುಸರಣಾ ಪ್ರಕ್ರಿಯೆಯನ್ನು ನಡೆಸುವುದಿಲ್ಲ. ಸರ್ಕಾರೇತರ ಸಂಸ್ಥೆಗಳು ಕಡಿಮೆ ಮೌಲ್ಯಕ್ಕೆ (ಬಲ್ಕ್ ಎಮೌಂಟ್) ಸ್ವತ್ತುಗಳನ್ನು ಕೊಂಡರೂ ಸಹ ಪುನರ್ವಸತೀಕರಣದ ನಂತರ ಯಾವುದೇ ತಾರತಮ್ಯವಿಲ್ಲದೆ ಸರ್ಕಾರದಿಂದ ಪುನರ್ವಸತಿಗೊಂಡವರಿಗೂ ಮತ್ತು ಸಂಸ್ಥೆಯಿಂದ ಪುನರ್ವಸತಿ ಹೊಂದಿದವರಿಗೂ ಹಲವಾರು ತರಬೇತಿ ಮತ್ತು ನರ್ಸರಿಗಳ ಮುಖಾಂತರ ವಾಣಿಜ್ಯ ಬೆಳೆಗಳ ಸಸಿಗಳನ್ನು ನೀಡಿ ಜೀವನ ಶೈಲಿಯನ್ನು ಉತ್ತಮಪಡಿಸಿಕೊಳ್ಳುವೆಡೆ ತಯಾರು ಮಾಡುತ್ತಿದೆ. ಈ ನಿಟ್ಟಿನಲ್ಲಿ ಸೌಲಭ್ಯ ದೊರಕಿದೆಡೆ ಮೂಲ ಸ್ಥಳದ ಅವಿನಾಭಾವ ಸಂಬಂಧವನ್ನು ದೊರಕಿಸಿದಂತಾಗುವುದಿಲ್ಲ ಎಂಬುದು ಕಾಲಕಾಲಕ್ಕೂ ಅಳಿಸದ ಸತ್ಯ

ಪುನರ್ವಸತೀಕರಣಯೋಜನೆ ಅನುಷ್ಠಾನದ ನಿಧಿಗಳು

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಯೋಜನೆಯ ಘೋಷಣೆಯಾದ ನಂತರ ಉದ್ಯಾನವನ ವ್ಯಾಪ್ತಿಯಲ್ಲಿ ಸಂರಕ್ಷಣೆಯ ಭಾಗವಾಗಿ ಹಲವಾರು ಕಾರ್ಯ ಯೋಜನೆಗಳು ಜಾರಿಗೊಂಡಿವೆ. ಆ ಕಾರ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಿ ಕಾರ್ಯಗತಗೊಳಿಸುವುದಕ್ಕೆ ನಿರ್ದಿಷ್ಟವಾದ ಸಂಚಿತ ನಿಧಿಗಳ ಅವಶ್ಯವಿದೆ. ನಿಧಿಗಳನ್ನು ಕೇಂದ್ರ/ರಾಜ್ಯ ಸರ್ಕಾರಗಳು ತಯಾರು ಮಾಡುವ ವಾರ್ಷಿಕ ಆಯವ್ಯಯದ ಅನುಸಾರ ಹಣಕಾಸು ಸಚಿವಾಲಯದ ಮುಖಾಂತರ ಸಲ್ಲಿಕೆಯಾಗುವ ಶೀರ್ಷಿಕೆಗಳಡಿಯಲ್ಲಿ ಆ ನಿಧಿಗಳನ್ನು ವಿನಿಯೋಗಿಸಬೇಕು. ಅಂತೆಯೇ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಆಯೋಜಿತವಾದ ಜನವಸತಿಗಳ ಸ್ವಇಚ್ಚೆಯ ಸ್ಥಳಾಂತರ ಮತ್ತು ಅವರ ಪುನರ್ವಸತೀಕರಣಕ್ಕೆ ಸಂಬಂಧಿಸಿದಂತೆ ಸಂಚಿತ ನಿಧಿಗಳಿಂದ ಒಕ್ಕಲೇಳುವ/ಲೆಬ್ಬಿಸುವ ಕುಟುಂಬಗಳಿಗೆ (ಜೀವನ ಶೈಲಿಯಲ್ಲಿ ಆಗುವ ಬದಲಾವಣೆಗಳನ್ನು ಹಾಗೂ ಅಭಿವೃದ್ಧಿ) ಪುನರ್ವಸತೀಕರಣಹೊಂದಲು ಈ ಕೆಳಕಂಡ ಯೋಜನೆ ಅಡಿಯಲ್ಲಿ ನಿಧಿಗಳನ್ನು ಬಳಸಿಕೊಳ್ಳಲಾಗುತ್ತಿದೆ. ಅವುಗಳೆಂದರೆ,

ವಿಶೇಷ ಘಟಕ ಯೋಜನೆ (Special Component Plan-SCP): ೭೦ರ ದಶಕದಲ್ಲಿ ವಿಶೇಷ ಘಟಕ ಯೋಜನೆಯ ವಿನ್ಯಾಸಗೊಳಿಸಿರುವುದು ಕೇಂದ್ರ/ರಾಜ್ಯ ಸರ್ಕಾರವು ಜಾರಿ ತರುವ ಸಾಮಾನ್ಯ ಯೋಜನೆಯಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಯೋಜನವನ್ನು ಪಡೆಯುವುದಕ್ಕಾಗಿ ಜಾರಿಮಾಡಲಾಗಿದೆ. ಈ ಯೋಜನೆಯ ಮುಖ್ಯ ಗುರಿ– ಉದ್ದೇಶಗಳು: ೧) ಫಲಾನುಭವಿಯು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸ್ವತ್ತುಗಳನ್ನು ರಚಿಸಿ ಅವುಗಳ ಮುಖಾಂತರ ಆದಾಯವನ್ನು ಹೆಚ್ಚಿಸಿಕೊಳ್ಳುವುದು. ೨) ಗೃಹ ನಿರ್ಮಾಣ, ರಸ್ತೆ ನಿರ್ಮಾಣ, ಕುಡಿಯುವ ನೀರಿನಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. ೩) ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿ ಚಟುವಟಿಕೆಗಳ ವಿಸ್ತರಣೆಗಾಗಿ ಶಾಲೆ, ಆರೋಗ್ಯ ಕೇಂದ್ರ, ವೃತ್ತಿಪರ ಕೇಂದ್ರ ಮತ್ತು ಸಮುದಾಯ ಭವನಗಳ ರಚನೆ. ಈ ಯೋಜನೆಯು ರಾಜ್ಯವು ಹೊಂದಿರುವ ಅನುಸೂಚಿತ ಜಾತಿಗಳ ಜನಸಂಖ್ಯೆಗಳನ್ನು ಆಧರಿಸಿ ಕೇಂದ್ರ ಸರ್ಕಾರದ ವತಿಯಿಂದ 'ವಿಶೇಷ ಕೇಂದ್ರೀಯ ನೆರವು' ಅಡಿಯಲ್ಲಿ ಅಭಿವೃದ್ಧಿಗಾಗಿ ನಿಧಿಗಳನ್ನು ನೀಡಲಾಗುತ್ತದೆ.

ಗಿರಿಜನ ಉಪ ಯೋಜನೆ (Tribal Sub Plan-TSP): ಗಿರಿಜನ ಉಪ ಯೋಜನೆಯು ಬುಡಕಟ್ಟು ಸಮುದಾಯಗಳಿರುವ ಪ್ರದೇಶಗಳ ಸಮಗ್ರ ಬೆಳವಣಿಗೆಯ ದೃಷ್ಟಿಯನ್ನವಲಂಬಿಸಿ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯಲ್ಲಿ ಬುಡಕಟ್ಟು ಪ್ರದೇಶವನ್ನು ರಾಜ್ಯದ ಉಳಿದ ಭಾಗಗಳೊಂದಿಗೆ ಸಮಾನವಾಗಿ ಬೆಳವಣಿಗೆಗೊಳಿಸಲು ಹಾಗೂ ಸಮುದಾಯಗಳ 'ಜೀವನ ಗುಣಮಟ್ಟ ಸುಧಾರಿಸುವಿಕೆಯೊಂದಿಗೆ, ಕುಟುಂಬಗಳು ತಮ್ಮ ವರಮಾನವನ್ನು ವೃದ್ಧಿಸಿಕೊಳ್ಳುವಿಕೆಯೆಡೆ ಅವಕಾಶವನ್ನು ಕಲ್ಪಿಸುವುದು, ಶಿಕ್ಷಣ ಮತ್ತು ತರಬೇತಿಗಳನ್ನು ನೀಡುವುದರೊಂದಿಗೆ ಮೂಲಭೂತ ಸೌಕರ್ಯ ಅಭಿವೃದ್ಧಿಯೊಂದಿಗೆ ಮಾನವ ಸಂಪನ್ಮೂಲ ಅಭಿವೃದ್ಧಿಗೊಳಿಸುವ ಯೋಜನೆಯಾಗಿದೆ. ಈ ಯೋಜನೆಗೆ ವಿಶೇಷ ಕೇಂದ್ರಿಯ ನೆರವುಗಳನ್ನು ನೀಡುವುದರೊಂದಿಗೆ, ಸಂವಿಧಾನದ ೨೭೫(೧) ರ ಅಡಿಯಲ್ಲಿ ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಧನಸಹಾಯವನ್ನು ಕಲ್ಪಿಸಲಾಗುತ್ತದೆ.

ಈ ಮೇಲಿನ ಎರಡು ವ್ಯವಸ್ಥೆಗಳನ್ನು ಕೇಂದ್ರದ ಯೋಜನಾ ಆಯೋಗ ರೂಪಿಸುವ ಮತ್ತು ನಿರ್ದೇಶಿಸುವ ನೀತಿಗಳ ಅನುಸಾರವಾಗಿ ಕಾರ್ಯಗತಗೊಳ್ಳುತ್ತವೆ. ಇದರೊಂದಿಗೆ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಹಾಗೂ ಬುಡಕಟ್ಟು ವ್ಯವಹಾರಗಳ ಸಚಿವಾಲಯವು ಈ ವ್ಯವಸ್ಥೆಗಳ ಮೇಲ್ವಿಚಾರಣೆಯನ್ನು ನಡೆಸುತ್ತವೆ.

ಅನುಸೂಚಿತ ಜಾತಿ (ಎಸ್ ಸಿ ಪಿ) ಮತ್ತು ಬುಡಕಟ್ಟುಗಳ ಉಪಯೋಜನೆಗಳಿಗೆ (ಟಿ ಎಸ್ ಪಿ) ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ಸರ್ವತೋಮುಖ ಬೆಳವಣಿಗೆ ಮತ್ತು ಅಭಿವೃದ್ಧಿಗೆ (ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ) ನಿಧಿಗಳನ್ನು ವಿನಿಯೋಗಿಸಲಾಗುತ್ತದೆ. ಅದರಂತೆ, ಅರಣ್ಯ ಪ್ರದೇಶಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳಿಗೆ ೨೦೧೬–೧೭ ರಲ್ಲಿ ಹಂಚಿಕೆ ಮಾಡಲಾಗಿದೆ[೨೫].

ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರದ (೦೮) ಶೀರ್ಷಿಕೆಯಡಿ ಹಣಕಾಸು ಇಲಾಖೆಯಿಂದ ಹುಲಿ ಮೀಸಲು ಮತ್ತು ರಾಷ್ಟ್ರೀಯ ಉದ್ಯಾನವನಗಳಲ್ಲಿರುವ ಕುಟುಂಬಗಳ ಸ್ವಯಂ ಪ್ರೇರಿತ ಪುನರ್ವಸತಿ, ರಸ್ತೆ ಬದಿಯಲ್ಲಿನ ನಡುತೋಪುಗಳು (ರಾಜ್ಯ ವಲಯ), ಎಸ್ ಸಿ ಗಳ ವಿಶೇಷ ಕಾಂಪೋನೆಂಟ್ ಕಾರ್ಯಕ್ರಮ, ಗಿರಿಜನ ಪ್ರದೇಶ ಉಪಯೋಜನೆ. ಈ ವಿಷಯಗಳ ಆಧಾರಿತವಾಗಿ ರಾಜ್ಯದ ಆಯವ್ಯಯದ ಮಂಡನೆಯಲ್ಲಿ ನಿಧಿಗಳನ್ನು ಮೀಸಲಿರಿಸಲಾಗುತ್ತದೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಉದ್ಯಾನವನ ಘೋಷಣೆ ನಂತರ ಗಿರಿಜನರು, ಕೃಷಿಕರು ಮತ್ತು ಅನುಸೂಚಿತ ಜಾತಿಗಳ ಕುಟುಂಬಗಳಿಗೆ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಗಳ ಮುಖಾಂತರ ಪುನರ್ವಸತೀಕರಣಯೋಜನೆಗೆ ಹಣ ಮಂಜೂರಾತಿ ಮಾಡಲಾಗಿದ್ದು, ಅಧಿಕೃತ ಜ್ಞಾಪನ ಪತ್ರ ಸಂಖ್ಯೆ, ಪ್ರಮುಅಸಂ(ವಜೀ)/ಬಿ೨/ಸಿಆರ್–೧೦/೨೦೧೪–೧೫ ರ ಅನ್ವಯ ರಾಜ್ಯ ಸರ್ಕಾರವು ೨೦೧೪–೧೫ ನೇ ಸಾಲಿಗೆ ಹುಲಿ ಮೀಸಲು ಪ್ರದೇಶ, ರಾಷ್ಟ್ರೀಯ ಉದ್ಯಾನವನ ಮತ್ತು ವನ್ಯಜೀವಿ ಅಭಯಾರಣ್ಯಗಳಲ್ಲಿ ವಾಸಿಸುತ್ತಿರುವ ಕುಟುಂಬಗಳ ಪುನರ್ವಸತಿ ಎಂಬ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ಲೆಕ್ಕ ಶೀರ್ಷಿಕೆ ೨೪೦೬–೦೧–೮೦೦–೦–೧೪ ಇದರ ಉಪ ಲೆಕ್ಕ ಶೀರ್ಷಿಕೆ ೦೫೯ರ ಉಪ ಲೆಕ್ಕ ಶೀರ್ಷಿಕೆ ೪೨೨– ವಿಶೇಷ ಘಟಕ ಯೋಜನೆ (ಎಸ್ ಸಿ ಪಿ) ಹಾಗೂ ಉಪ ಲೆಕ್ಕ ಶೀರ್ಷಿಕೆ ೪೨೩– ಗಿರಿಜನ ಉಪ ಯೋಜನೆ (ಟಿ ಎಸ್ ಪಿ) ಅಡಿಯಲ್ಲಿ ಒಟ್ಟಾರೆ ರೂ ೪೧೦೦.೦೦ ಲಕ್ಷಗಳ ಅನುದಾನ ಮತ್ತು ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ವಾಸಿಸುತ್ತಿರುವ ಕುಟುಂಬಗಳಿಂದ ಜಮೀನನ್ನು ಇಲಾಖೆಗೆ ಪಡೆಯಲು ೨೦೧೪–೧೫ ನೇ ಸಾಲಿನಲ್ಲಿ ರೂ ೫೦೦.೦೦ ಲಕ್ಷಗಳ ಅನುದಾನಕ್ಕೆ ಅನುಮೋದನೆ ನೀಡಿದೆ. ನೋಡಿ (ಅನುಸೂಚಿಗಳು ೨, ಪು ಸಂ:–).

ಉಲ್ಲೇಖಿತವಾದ ಈ ಮೇಲಿನ ದ್ವಿ ಯೋಜನೆಯಡಿ ರಾಷ್ಟ್ರೀಯ ಉದ್ಯಾನವನ ಮತ್ತು ವನ್ಯಜೀವಿಗಳ ಅಭಯಾರಣ್ಯಗಳಿಂದ ಗಿರಿಜನ, ಅನುಸೂಚಿತ ಜಾತಿಗಳು ಮತ್ತು ಇತರೆ ಅರಣ್ಯವಾಸಿಗಳ ಹಕ್ಕುಳ್ಳ ಜಮೀನು ಮತ್ತು ಇತರೆ ಸ್ಥಿರಾಸ್ಥಿಗಳನ್ನು ಉದ್ಯಾನವನದ ಹೆಸರಿನಲ್ಲಿ ಪಡೆಯಲು ಹಾಗೂ ಕುಟುಂಬಗಳು ಇರುವ ಸ್ಥಳದಿಂದ ಪುನರ್ವಸತೀಕರಣಹೊಂದಲು ಬಳಸುವ ಸಂಚಿತ ನಿಧಿಗಳಾಗಿವೆ.

೧೦. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಯೋಜನೆಯ ಅನುಷ್ಠಾನದಲ್ಲಿ ಸ್ಥಳಾಂತರ ಮತ್ತು ಪುನರ್ವಸತೀಕರಣದ ಸವಾಲುಗಳು

ಸಂರಕ್ಷಣೆಯ ಭಾಗವಾಗಿ ಕೇಂದ್ರಿಕೃತವಾಗಿರುವ ಅಭಯಾರಣ್ಯಗಳು, ಅರಣ್ಯಗಳು, ರಾಷ್ಟ್ರೀಯ ಉದ್ಯಾನವನಗಳು ಭಾರತದ ಸಾಮಾಜಿಕ ಸಂದರ್ಭದಲ್ಲಿ ಮೂಲ ನಿವಾಸಿಗಳೆಂದು ಉಲ್ಲೇಖಿಸಲ್ಪಟ್ಟಿರುವ ಗಿರಜನರು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ ನೈಜ ಹಕ್ಕುಗಳನ್ನೇ ಪ್ರಶ್ನಿಸುವಂತಹ ಪರಿಪಾಠವನ್ನು ಬೆಳೆಸಿಕೊಳ್ಳತೊಡಗಿವೆ. ಈ ಮೂಲಕ ಗಿರಿಜನ ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳಿಗೆ ಅರಣ್ಯಗಳ ಮೇಲಿನ ಸಹಜ ಹಕ್ಕುಗಳು ಮೊಟಕುಗೊಳ್ಳತ್ತಾ ಪ್ರಭುತ್ವವು ನೇಮಿಸುವ ಕಾನೂನು ಚೌಕಟ್ಟಿನಲ್ಲಿನ ಅಧಿಕಾರಿಗಳ ನಿರ್ಧಾರದ ಮೇಲೆ ಸಹಜವೆಂಬಂತೆ

ಚಲಿಸತೊಡಗಿವೆ. ಪ್ರಭುತ್ವದಿಂದ ರಚನೆಯಾಗುವ ಯಾವುದೇ ಯೋಜನೆಯು ಜನಹಿತದ ಆಧಾರವಾಗಿರಬೇಕಾದದು ಅವಶ್ಯ ಆದರೆ, ಆರ್ಥಿಕಾಭಿವೃದ್ಧಿಯ ಪಥಸಂಚಲನದಲ್ಲಿನ ಯೋಜನೆಗಳು ಅನುಷ್ಠಾನಗೊಳ್ಳುವೆಡೆ ದ್ವಿ ಮುಖಿಯಾಗಿ (ಎರಡು ಕಡೆಯಿಂದ) ಸಮಸ್ಯೆಗಳನ್ನು ಕಾಲಚಕ್ರದಡಿಯಲ್ಲಿರಿಸಿ ಬಿಗುವಿನ ವಾತಾವರಣವನ್ನು ಸೃಷ್ಟಿಸುತ್ತಿವೆ. ಈ ದಿಶೆಯಲ್ಲಿ ರಾಷ್ಟ್ರೀಯ ಉದ್ಯಾನವಗಳು ಯೋಜನಾ ರೂಪದಲ್ಲಿ ಅನುಷ್ಠಾನಗೊಳ್ಳುವಾಗ ಶಾಸಕಾಂಗದಿಂದ ರಚಿತಗೊಂಡ ಕಾಯ್ದೆಗಳಾಗಿ, ನ್ಯಾಯಾಂಗದ ತಕ್ಕಡಿಯಲ್ಲಿ ಅವಶ್ಯವೆನಿಸಿ ಆದೇಶವಾಗಿ ಕಾರ್ಯಾಂಗದ ಮುಖಾಂತರ ಒಮ್ಮೆಲೆಯೇ ಎರಗುವ ಸಮುದ್ರದ ಬೃಹತ್ ಅಲೆಗಳಂತೆ ಸ್ಥಳೀಯ ನಿವಾಸಿಗಳ ಮೇಲೆ ಬಂದು ಅಪ್ಪಳಿಸಿದಾಗ ಆ ಸಮಯದಿಂದ ಆರಂಭವಾಗುವುದೇ ಸಮಸ್ಯೆ ಮತ್ತು ಸವಾಲುಗಳು. ಸವಾಲುಗಳು ಸ್ಥಳೀಯ ನಿವಾಸಿಗಳಿಗೆ ಮಾತ್ರ ಸೀಮಿತವಾಗದೆ ಆದೇಶ ಪಾಲಿಸಬೇಕಾದ ಇಲಾಖೆಯ ಅಧಿಕಾರಿಗಳಿಗೂ ಕೂಡ ಎದುರಾಗುವಂತದ್ದೆ. ಈ ನಿಟ್ಟಿನಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಯೋಜನೆ ಅನುಷ್ಠಾನದ ಹಾದಿಯಲ್ಲಿ ಸ್ಥಳೀಯ ನಿವಾಸಿಗಳ ಸ್ಥಳಾಂತರ ಮತ್ತು ಅವರ ಪುನರ್ವಸತೀಕರಣಅಧಿಕಾರಿ ವರ್ಗಕ್ಕೂ ಮತ್ತು ಅವರಿಗಿಂತ ಹೆಚ್ಚಾಗಿ ಮೂಲ ನಿವಾಸಿಗಳು ಪ್ರಸ್ತುತ ಸ್ಥಳದಿಂದ ಸ್ಥಳಾಂತರ (ಒಕ್ಕಲೇಳುವುದು/ಲೆಬ್ಬಿಸುವುದು) ಗೊಳ್ಳುವುದು ಬಹು ದೊಡ್ಡ ಸವಾಲಾಗಿದೆ.

ರಾಷ್ಟ್ರೀಯ ಉದ್ಯಾನವನ ಘೋಷಣೆಯಿಂದ ಸ್ಥಳೀಯರಿಗೆ ಎದುರಾಗಿರುವ ಸವಾಲುಗಳು

೦೧. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಅಂತಿಮ ಘೋಷಣೆಯ ಪೂರ್ವದಲ್ಲಿಯೇ ಉದ್ಯಾನವನ ವ್ಯಾಪ್ತಿಗೆ ನಮ್ಮ ಜಮೀನುಗಳು ಒಳಪಟ್ಟು ನಿರಾಶ್ರಿತರಾಗುತ್ತೇವೆ ಎಂಬ ಭಯದಿಂದ ಶೃಂಗೇರಿ ತಾಲ್ಲೂಕು ಬಾಳೆಗೆರೆ ನಿವಾಸಿ ಶ್ರೀ ರಾಮೇಗೌಡ ಬಿನ್ ವೆಂಕೇಗೌಡ ದಿ: ೨೧-೧೧-೧೯೯೮ ರಂದು ಮತ್ತು ಕೆರೆ ಗ್ರಾಮದ ನಿವಾಸಿ ಮೂಲ್ಯ ಎಂಬುವರು ೨೦-೧೦-೧೯೯೮ ರಂದು ಆತ್ಮಹತ್ಯೆಗೆ ಶರಣಾಗಿದ್ದಾರೆ.

೦೨. ೧೯೭೨ ರ ವನ್ಯಜೀವಿ ಸಂರಕ್ಷಣಾ ಕಾಯ್ದೆ ಅನ್ವಯ ೨೪(೧) ರ ಪ್ರಕಾರ ಅಂತಿಮ ಘೋಷಣೆಗೆ ಶಿಫಾರಸ್ಸು ಮಾಡುವ ಮೊದಲು ಸರ್ಕಾರವು ಗಿರಿಜನರಿಂದ, ರೈತರಿಂದ ಹಾಗೂ ಇತರೆಯವರಿಂದ ಆಕ್ಷೇಪಣೆ ಮತ್ತು ತಿರಸ್ಕಾರಿಸುವ ಬಗ್ಗೆ ಸೆಟಲ್‌ಮೆಂಟ್ ಆಫ್ ಕ್ಲೇಮ್ಸ್ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ ಈ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲವೆಂಬುದಾಗಿ ಚಿಕ್ಕಮಗಳೂರು ಉಪವಿಭಾಗಾಧಿಕಾರಿಯವರೆ ತಮ್ಮ ಪತ್ರದಲ್ಲಿ ಒಪ್ಪಿಕೊಂಡಿರುವುದು ರಾಷ್ಟ್ರೀಯ ಉದ್ಯಾನವನ ಸ್ಥಾಪನೆಯ ೨೦೦೧ರ ಉದ್ಘೋಷಣಾ ಕ್ರಮದ ಸಿಂಧುತ್ವವನ್ನೇ ಪ್ರಶ್ನೆಮಾಡಲು ಅನುವುಮಾಡಿಕೊಡುತ್ತದೆ.

೦೩. ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಾರ ಎಂಬಂತೆ, ಗ್ರಾಮಪಂಚಾಯತ್‌ಗಳ ಮುಖಾಂತರ ಗಿರಿಜನ ವಸತಿಗಳಿರುವ ಕಡೆ ಸೇತುವೆ ನಿರ್ಮಾಣ ಮತ್ತು ಇತರೆ ಅಭಿವೃದ್ಧಿ ಕಾರ್ಯಗಳಿಗೆ ಹಣ ಮಂಜೂರಾಗಿ ಕಾರ್ಯ ಆರಂಭವಾಗುವೆಡೆ ಅರಣ್ಯ ಇಲಾಖೆಯಿಂದ ಕಾರ್ಯಕ್ಕೆ ತಡೆ ಒಡ್ಡುತ್ತಿದ್ದು, ಉದ್ಯಾನವನ ವ್ಯಾಪ್ತಿಯಲ್ಲಿ ಈ ಕಾರ್ಯಗಳಿಗೆ ಅನುಮತಿ ಇಲ್ಲವೆಂಬ ಸಬೂಬನ್ನು ಅಧಿಕಾರಿಗಳು ಹೇಳುತ್ತಿದ್ದಾರೆ. ಎಂದು ಸಂಸೆ ಮಾಜಿ

ಗ್ರಾಮಪಂಚಾಯತ್ ಸದಸ್ಯರಾದ ಹಾಗೂ ಉದ್ಯಾನವನದ ವ್ಯಾಪ್ತಿಯಲ್ಲಿರುವ ಬಿಳಿಗಲ್ ನಿವಾಸಿ ಜಾನಮ್ಮನವರ ವಾದ. ೨೦/೦೫/೨೦೧೫ ರಂದು ಬೆಳ್ತಂಗಡಿ ವಲಯದಲ್ಲಿ ಪತ್ರಿಕೆಯಲ್ಲಿ ಪ್ರಕಟವಾದಂತೆ, ನಾರಾವಿ ಗ್ರಾಮಪಂಚಾಯತ್ ವ್ಯಾಪ್ತಿಯ ಸೀಗೆದಡಿ ಎಂಬಲ್ಲಿ ನಬಾರ್ಡ ಯೋಜನೆ ಅಡಿ ನಡೆಯುತ್ತಿದ್ದ ಸೇತುವೆ ಕಾಮಗಾರಿಗೆ ತಡೆಯೊಡ್ಡಿ ಸೇತುವೆ ಕಾರ್ಯಕ್ಕೆ ತಂದ ಸಾಮಗ್ರಿಗಳನ್ನು ಮುಟ್ಟುಗೋಲು ಹಾಕಿರುವುದನ್ನು ವಿರೋಧಿಸಿ ಬೆಳ್ತಂಗಡಿ ವನ್ಯಜೀವಿ ಇಲಾಖೆ ಎದುರು ಸಿ ಪಿ ಐ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಇದಕ್ಕೆ ಉತ್ತರವಾಗಿ ವಲಯ ಅರಣ್ಯ ಅಧಿಕಾರಿಯಾಗಿದ್ದ ಶ್ರೀನಾಥ್ ಎಂ ಅವರು ವನ್ಯಜೀವಿ ಕಾಯ್ದೆಯಲ್ಲಿ ಸೇತುವೆ ನಿರ್ಮಾಣಕ್ಕೆ ಅವಕಾಶ ಇದ್ದು, ಪಿಡಿಓ ಮುಖಾಂತರ ಅರಣ್ಯಾಧಿಕಾರಿಗಳಿಗೆ ಸಲ್ಲಿಸಿ ಅನುಮತಿ ಪಡೆದನಂತರ ಸೇತುವೆ ಕಾರ್ಯವನ್ನು ಮುಂದುವರೆಸಬಹುದು ಎಂದು ತಿಳಿಸಿದ್ದಾರೆ. ನೋಡಿ (ಅನುಸೂಚಿಗಳು ೨, ಪು.ಸಂ:–)

೦೪. ಯಾವುದೇ ಅಭಿವೃದ್ಧಿ ಕಾಮಗಾರಿಗಳಿಗೆ ಆಸ್ಪದವನ್ನು ಅರಣ್ಯ ಇಲಾಖೆಯವರು ನೀಡುತ್ತಿಲ್ಲ. ವಿದ್ಯುತ್ ಅವಶ್ಯಕತೆ ಇರುವ ಇಂದಿನ ಕಾಲದಲ್ಲೂ ಅದರ ಸೌಲಭ್ಯಗಳನ್ನು ಪಡೆಯಲು ಹಾಗೂ ಬೆಳೆಗಳು ಇಳುವರಿ ನೀಡಲೆಂದು ಬಳಸುವ ರಸಗೊಬ್ಬರಗಳನ್ನು ಉದ್ಯಾನವನ ವ್ಯಾಪ್ತಿಯಲ್ಲಿ ಬಳಸುವಂತಿಲ್ಲ ಎಂಬ ಆಕ್ಷೇಪಣೆಗಳ ಹಿನ್ನೆಲೆಯಲ್ಲಿ ಸ್ಥಳಿಯರಿಗೆ ತಟ್ಟೆಯ ತುಂಬಾ ಅನ್ನವನ್ನು ನೀಡಿ ಕೈ ಮತ್ತು ಬಾಯಿಯನ್ನು ಕಟ್ಟಿ ಊಟ ಮಾಡಿಕೊಳ್ಳಿ ಎನ್ನುವ ಸ್ಥಿತಿಗಳನ್ನು ಇಲಾಖೆ ತಂದೊಡ್ಡಿದೆ ಎಂದು ಶ್ರೀ ರಾಜೇಶ್ ಹಾದಿಕಿರೂರು ಗ್ರಾಮದಿಂದ ಪುನರ್ವಸತಿ ಹೊಂದಿರುವವರ ಅಭಿಪ್ರಾಯ.

೦೫. ಹುಲಿ ಯೋಜನೆಯ ಹೆಸರಲ್ಲಿ ನಮ್ಮ ಬಳಿ ಇದ್ದಂತಹ ಸ್ವತ್ತುಗಳನ್ನು ಕಡಿಮೆ ಮೌಲ್ಯಕ್ಕೆ ಕೊಂಡುಕೊಂಡು ನಮ್ಮನ್ನು ಬೇರೆಡೆಗೆ ಬಂದು ನೆಲೆಸುವಂತೆ ಮಾಡಿದ್ದಾರೆ. ಮುಂದೆಯೂ ಸಹಾಯ ಕಲ್ಪಿಸುವ ಆಶಯವನ್ನು ನೀಡಿ ನಮ್ಮನ್ನು ಇಂದು ಬರಿಗೈ ಮಾಡಿದ್ದಾರೆ ಹುಲಿ ಸಂಸ್ಥೆಯವರು ಎಂದು ಕುದುರೆಮುಖ ವ್ಯಾಪ್ತಿಯ ಆವಂತಿ ಸ್ಥಳದಿಂದ ಚಿಕ್ಕಮಗಳೂರು ಜಿಲ್ಲೆಯ ಸೋಂಪುರಕ್ಕೆ ಬಂದು ನೆಲೆಸಿರುವ ಜೈನ ಸಮುದಾಯಗಳ ಅಳಲು.

೦೬. ಕುದುರೆಮುಖ ಕಬ್ಬಿಣ ಅದಿರು ಕಂಪನಿ ಆರಂಭದ ವೇಳೆ ಮಲ್ಲೇಶ್ವರ ಗ್ರಾಮದಲ್ಲಿದ್ದ ೬೯ ಕುಟುಂಬಗಳು ತಮ್ಮ ಜಮೀನುಗಳನ್ನೆಲ್ಲ ಕಂಪನಿಗೆ ಬಿಟ್ಟುಕೊಟ್ಟು, ಕಂಪನಿಯು ನೀಡಬೇಕಾದ ಪುನರ್ವಸತಿ ಸೌಲಭ್ಯವೇ ಇನ್ನು ಸಂಪೂರ್ಣವಾಗಿ ದೊರೆತಿಲ್ಲ, ಆಗಲೆ ಮತ್ತೆ ಉದ್ಯಾನವನದ ಹೆಸರಲ್ಲಿ ನಮ್ಮನ್ನು ಪುನಃ ಒಕ್ಕಲೆಬ್ಬಿಸುವುದು 'ಆರದ ಗಾಯದ ಮೇಲೆ ಮತ್ತೆ ಬರೆ ಎಳೆದಂತಾಗುತ್ತಿದೆ' ಎಂಬುದು ಬಿಳಿಗಲ್ ನಿವಾಸಿ ವೆಂಕಯ್ಯನ ಅಭಿಪ್ರಾಯ.

೦೭. ಬಿಳಿಗಲ್ ನಿವಾಸಿಗಳಿಗೆ ಅವಶ್ಯವಾಗಿದ್ದ ಸೇತುವೆಯ ನಿರ್ಮಾಣಕ್ಕೆ ಗ್ರಾಮಪಂಚಾಯತಿ ಅವರು ಹಸಿರು ನಿಶಾನೆ ತೋರ್ಪಡಿಸಿದ್ದರು. ಆದರೆ ಇಲಾಖೆಯವರು ಮೇಲಿನ ಅಧಿಕಾರಿಗಳ ಅನುಮತಿ ಕಡ್ಡಾಯ ಎಂಬ ಸಬೂಬು ನೀಡಿ ಸೇತುವೆ ಕಾರ್ಯವನ್ನು ತಡೆಹಿಡಿದರು. ಇದರ ಪರಿಣಾಮವಾಗಿ ಅನಾರೋಗ್ಯಕ್ಕೆ ತುತ್ತಾಗಿದ್ದ ೮೬ ವರ್ಷದ ನಮ್ಮ ಅಜ್ಜಿಯನ್ನು ಕಳಸ ರಸ್ತೆಗೆ ತರುವ ವೇಳೆ ಕಾಲ್ನಡಿಗೆಯಲ್ಲಿ ಬರುವಷ್ಟರಲ್ಲಿ ಆಕೆಯ ಪ್ರಾಣ ಪಕ್ಷಿ ನಮ್ಮನ್ನೆಲ್ಲ ಬಿಟ್ಟು ಹೋಯಿತು. ಸೇತುವೆ ನಿರ್ಮಾಣವಾಗಿದ್ದರೆ ಆಕೆಯ ಜೀವ ಉಳಿಯುತ್ತಿತ್ತು. ಒಂದು

ಕುಟುಂಬದ ಹಿರಿಯ ಜೀವ ಉಳಿದುಕೊಳ್ಳುತ್ತಿತ್ತು ಎಂದು ವಿಶ್ವನಾಥ ಎಂಬುವರ ಸತ್ಯದ ಮಾತು.

೦೮. ಅರಣ್ಯ ಮೂಲನಿವಾಸಿಗಳಾದ ನಾವು ಕಾಡಿನೊಂದಿಗೆ ನೆಮ್ಮದಿಯ ಬದುಕನ್ನು ಕಟ್ಟಿಕೊಂಡಿದ್ದೆವು. ಆದರೆ ಈಗ ಹಲವು ಸಮಸ್ಯೆಗಳ ನಡುವೆ ಸಿಲುಕಿಕೊಂಡಿದ್ದೇವೆ. ಕೆಲವು ಎನ್ ಜಿ ಓ ಗಳು ಆಮಿಷ ಒಡ್ಡಿ ಒಕ್ಕಲೇಳುವಂತೆ ಒತ್ತಾಯಿಸುತ್ತಾ ದಿಕ್ಕು ತಪ್ಪಿಸುತ್ತಿವೆ. ಇನ್ನೊಂದೆಡೆ ನಕ್ಸಲ್ ಪೀಡಿತ ಪ್ರದೇಶ ಎಂದು ನಕ್ಸಲ್ ನಿಗ್ರಹದಳದವರು ಮನೆಗಳಿಗೆ ನುಗ್ಗಿ ಬೆದರಿಸುತ್ತಿದ್ದಾರೆ. ನಮ್ಮ ಬದುಕೇ ಅತಂತ್ರ ಸ್ಥಿತಿಯಲ್ಲಿ ಸಿಲುಕಿಕೊಂಡು ನಮ್ಮ ಹಕ್ಕುಗಳನ್ನು ಪ್ರಶ್ನಿಸುವಂತಾಗಿದೆ. ಅರಣ್ಯ ಹಕ್ಕು ಕಾಯ್ದೆಯಡಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ನಿವಾಸಿಗಳು ಅರ್ಜಿ ಸಲ್ಲಿಸಿದ್ದು ಶೀಘ್ರ ಪರಿಹಾರವನ್ನು ನೀಡಿ ಎಂದು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಮುಖಂಡ ವಿಠಲ್ ಮಲೆಕುಡಿಯ ಅವರು ಬೆಳ್ತಂಗಡಿ ತಾಲ್ಲೂಕಿನ ಕುತ್ಲೂರು ಗ್ರಾಮದ ಅಲಂಬ ಗ್ರಾಮಸ್ಥರ ಪರವಾಗಿ ಡಿ.ಸಿ ಅವರಿಗೆ ಮನವಿ ಮಾಡಿದ್ದಾರೆ.

೦೯. ನಮ್ಮ ಮಗ ಬಿ.ಕಾಂ ಓದುವ ಸಂದರ್ಭದಲ್ಲಿ ಬೆಂಗಳೂರಿನ ಪ್ರತಿಷ್ಠಿತ ಕಂಪನಿಗೆ ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾಗಿ ಮತ್ತೆ ಕಂಪನಿ ಬೆಂಗಳೂರಿನಲ್ಲಿ ಕರೆದಿದ್ದ ಲಿಖಿತ ಮತ್ತು ಸಂದರ್ಶನ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದು, ನಮಗೆ ದೂರವಾಣಿ ಕರೆ ಮುಖಾಂತರ ಮಗನ ಆಯ್ಕೆಯನ್ನು ಖಚಿತ ಪಡಿಸಿದ್ದರು. ನಿಮಗೆ ನೇಮಕ ಪತ್ರ ಕಳುಹಿಸುತ್ತೇವೆ ಎಂದು ಹೇಳಿದವರು, ತಿಂಗಳಾದರೂ ತಲುಪಲಿಲ್ಲವೆಂದು ಕಂಪನಿಗೆ ಕರೆ ಮಾಡಿ ವಿಚಾರಣೆ ನಡೆಸಿದಾಗ ನಿಮ್ಮ ಸ್ಥಳ ನಕ್ಸಲ್ ಪೀಡಿತ ಸ್ಥಳವಾಗಿದೆ, ಆದರೆ ನಿಮ್ಮ ಮಗ ಹೇಗಿದ್ದಾನೆಂದು ನಮಗೆ ತಿಳಿದಿಲ್ಲ, ಹಾಗಾಗಿ ನಾವು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ಉತ್ತರಿಸಿದರು. ಇಂತಹ ಪರಿಸ್ಥಿತಿಯಿಂದ ಮಕ್ಕಳ ಭವಿಷ್ಯವೂ ಕೂಡ ಹಾಳಾಗುತ್ತಿದೆ ಎಂದು ಬೆಳ್ತಂಗಡಿ ತಾಲ್ಲೂಕಿನ ಕುತ್ಲೂರು ಅಲಂಬ ನಿವಾಸಿ ಶ್ರೀಮತಿ ವಸಂತ ಅವರು ಸಂದರ್ಶನದಲ್ಲಿ ತಿಳಿಸಿದರು.

೧೦. ಒಕ್ಕಲೇಳುವ ನಿಟ್ಟಿನಲ್ಲಿ ಅರಣ್ಯ ಇಲಾಖೆಗೆ ಅರ್ಜಿ ಸಲ್ಲಿಸಿ ಮೋಜಣಿ (ಸರ್ವೆ) ಕಾರ್ಯವೆಲ್ಲ ಮುಗಿದು ಪರಿಹಾರ ವಿತರಿಸುವ ಸಮಯದಲ್ಲಿ ಮರು ಮೌಲ್ಯಮಾಪನಕ್ಕೆ ಇಲಾಖೆಯವರು ಆದೇಶಿಸಿದ್ದಾರೆ. ಈ ವ್ಯವಸ್ಥೆ ಒಕ್ಕಲೇಳುವ ನಾವು ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಬೆಳೆಗಳ ಸಮೀಕ್ಷೆಗೆ ಬಂದಾಗ ಸಮೀಕ್ಷಾ ಕಾರ್ಯಕರ್ತರ ಎದುರಲ್ಲಿ ಚೆನ್ನಾಗಿಯೇ ಗೋಚರಿಸಿರುತ್ತವೆ. ಆಗ ಒಂದು ಬೆಲೆ ನಿಗದಿ ಮಾಡಿ ಎಲ್ಲಾ ಕಾರ್ಯಗಳು ಮುಗಿದವೆ ಎಂಬ ನಂಬಿಕೆಯಲ್ಲಿ ಒಕ್ಕಲೇಳುವ ದೃಷ್ಟಿಯಲ್ಲಿ ಯಾವುದೇ ಬಂದುಬಸ್ತನ್ನು ಹೊಲಗಳಿಗೆ ಮಾಡಿರುವುದಿಲ್ಲ ಮತ್ತು ಅವುಗಳಿಗೆ ಕಾಡು ಹಂದಿ, ಕಾಡು ಕೋಣ, ಜಿಂಕೆಗಳು ಪ್ರವೇಶಿಸಿ ಮೊದಲಿನ ವ್ಯವಸ್ಥೆಯನ್ನು ಹಾಳುಮಾಡಿರುತ್ತವೆ. ಅಂತಿಮ ಸಮೀಕ್ಷೆ ಮತ್ತು ಮರು ಮೌಲ್ಯಮಾಪನ ನಡೆಸಿದರೆ ಮೊದಲು ಮಾಡಿದ್ದ ಮೌಲ್ಯಕ್ಕೂ ಈಗಿನ ಮೌಲ್ಯಕ್ಕೂ ವ್ಯತ್ಯಾಸಗಳು ಏರ್ಪಡುತ್ತದೆ. ಇದರಿಂದ ಮತ್ತೆ ರೈತರಾದ ನಾವು ಆತಂಕಕ್ಕೆ ಒಳಗಾಗುತ್ತಿದ್ದೇವೆ ಹಾಗೂ ಕಂದಾಯ ಸಚಿವರಾಗಿದ್ದ ಕಾಗೋಡು ತಿಮ್ಮಪ್ಪ ಅವರು ೨೦೦೫ ರ ಹಳೇಯ ಸರ್ವೆಯಂತೆ ಪರಿಹಾರ ನೀಡಿ ಎಂದು ತಿಳಿಸಿದ್ದರು ಅಧಿಕಾರಿಗಳು ಯಾರ ಮಾತನ್ನು ಕೇಳದೆ ಮರು ಸರ್ವೆಯನ್ನು ಕೈಗೊಂಡಿದ್ದಾರೆ. ಇದು

ಸರ್ಕಾರ ಕೊಟ್ಟ ಪರಿಹಾರಕ್ಕೆ ಅಧಿಕಾರಿಗಳು ಕೊಕ್ಕೆ ಹಾಕಿಕೊಂಡು ಕೂರುತ್ತಿದ್ದಾರೆ ಎಂಬುದು ಕೆರೆ ಗ್ರಾಮ ನಿವಾಸಿಗಳ ಮತ್ತು ಸುಧಾಕರ್ ಕರುಚಾರು ಅವರ ಅಳಲು.

೧೧. ರಾಷ್ಟ್ರೀಯ ಹೆದ್ದಾರಿ ೧೬೯ ಮಂಗಳೂರು–ಮೂಡಬಿದ್ರಿ–ಬಜಗೋಳಿ–ಶೃಂಗೇರಿ–ಶಿವಮೊಗ್ಗ–ಚಿತ್ರದುರ್ಗ–ಹೊಸಪೇಟೆ–ವಿಜಾಪುರ–ಸೋಲಾಪುರ ಸ್ಥಳಗಳಿಗೆ ಸಂಚಾರ ವ್ಯವಸ್ಥೆ ಕಲ್ಪಿಸುವ ಮಾರ್ಗವಾಗಿದ್ದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಶೃಂಗೇರಿ – ಎಸ್.ಕೆ ಬಾರ್ಡರ್–ಮಾಳ – ಬಜಗೋಳಿ ಮಾರ್ಗಗಳನ್ನು ಅಭಿವೃದ್ಧಿ ಪಡಿಸಲು ಹಣ ಬಿಡುಗಡೆಯಾಗಿದ್ದು, ರಾಷ್ಟ್ರೀಯ ಉದ್ಯಾನವನದ ಒಳಭಾಗದ ಮುಖಾಂತರ ತೆರಳುವಿಕೆಗೆ ರಸ್ತೆ ನಿರ್ಮಾಣ ಅಗತ್ಯವಿದೆ. ಅಲ್ಲದೆ ಶೃಂಗೇರಿ, ಕಳಸ ಭಾಗದ ಜನರಿಗೆ ಆರೋಗ್ಯ ತುರ್ತು ಪರಿಸ್ಥಿತಿ ವೇಳೆ ಮಂಗಳೂರು, ಉಡುಪಿ ಕ್ಷೇತ್ರಗಳಿಗೆ, ಯಾತ್ರಾರ್ಥಿಗಳಿಗೆ ಶೃಂಗೇರಿ – ಧರ್ಮಸ್ಥಳ ಪುಣ್ಯ ಕ್ಷೇತ್ರಗಳಿಗೆ ತೆರಳಲು ಹತ್ತಿರದ ಮಾರ್ಗವಾಗಿರುವುದರಿಂದ ಅದನ್ನು ಅಭಿವೃದ್ಧಿ ಪಡಿಸಲು ಅರಣ್ಯ ಇಲಾಖೆಯವರು ಅನುವುಮಾಡಿಕೊಡುತ್ತಿಲ್ಲ. ರಾಷ್ಟ್ರೀಯ ಉದ್ಯಾನವನ ನೆಪದಲ್ಲಿ ಪ್ರಾಣಿಗಳ ರಾತ್ರಿ ಸಂಚಾರಕ್ಕೆ ಅಡ್ಡಿಯಾಗುವುದರಿಂದ ರಾತ್ರಿ ವೇಳೆ ಈ ರಸ್ತೆಯ ಮಾರ್ಗವನ್ನು ಬಂದ್ ಮಾಡಲು ಕೂಡ ಹಲವಾರು ಬಾರಿ ಸಭೆ ಸೇರಿ ತೀರ್ಮಾನಿಸಿದ್ದಾರೆ. ಈ ವಿಚಾರವನ್ನು ಚಿಕ್ಕಮಗಳೂರು ಜಿಲ್ಲಾಧಿಕಾರಿಗಳ ಎದುರಿನಲ್ಲೂ ಚರ್ಚಿಸಲಾಗಿದೆ ಎಂದು ತಾಲ್ಲೂಕು ಪಂಚಾಯ್ತಿ ಸದಸ್ಯರಾದ ಅರುಣ ಕುಮಾರ ಅವರ ಅಭಿಪ್ರಾಯ.

೧೨. ಕುದುರೆಮುಖ ವಲಯದ ಸಿಂಗ್ಸಾರ್, ಆವಂತಿ ಪ್ರದೇಶಗಳಲ್ಲಿ ಅರಣ್ಯಗಳ ನಡುವೆ ನಮ್ಮದೇ ಆದ ನೆಮ್ಮದಿಯ ಜೀವನ ನಡೆಸುತ್ತಿದ್ದೆವು. ಹುಲಿ ಯೋಜನೆ ಅನುಷ್ಠಾನ ಎಂಬ ಹುಸಿ ಸಂದೇಶದಿಂದ ಕುಪಿತರಾದ ನಾವು ಎನ್ ಜಿ ಒ ಗಳ ಆಮಿಶಕ್ಕೆ ಬಲಿಯಾಗಿ ಪುನರ್ವಸತಿ ಹೊಂದಿದೆವು. ಆದರೆ ಪುನರ್ವಸತಿ ಹೊಂದಿದ ಮೇಲೆ ತಿಳಿಯಿತು ಯಾವ ಹುಲಿ ಯೋಜನೆಯು ಅನುಷ್ಠಾನವಾಗುವುದಿಲ್ಲ ಎಂದು. ಪುನರ್ವಸತಿ ನಂತರ ನಾವು ಬೇಗಾರು ಗ್ರಾಮಪಂಚಾಯತ್ ವ್ಯಾಪ್ತಿಯ ನೀಲಂದೂರಿನಲ್ಲಿ ವಾಸ ಮಾಡುತ್ತಿದ್ದೇವೆ. ಆದರೆ ನಮಗೆ ಎನ್ ಜಿ ಒ ದಲ್ಲಾಳಿಯಾಗಿ ಬೇರೆಯವರಿಂದ ಕ್ರಯಕ್ಕೆ ಕೊಂಡಿರುವ ಜಮೀನು ಮತ್ತು ಮನೆ ೩ ವರ್ಷವಾದರೂ ನಮ್ಮ ಹೆಸರಿಗೆ ಬರುತ್ತಿಲ್ಲ. ಅದನ್ನು ಕಂದಾಯ ಇಲಾಖೆಯಲ್ಲಿ ಪ್ರಶ್ನಿಸಿದರೆ ಭೂ ಹಿಡುವಳಿ ಪಹಣಿ ದಾಖಲೆಯಲ್ಲಿ ನಂ ೫೩ ಬಗರ್ ಹುಕುಂ ಸಾಗುವಳಿ ಎಂದು ಬರುತ್ತಿದೆ. ಇದ್ದ ಹಣವನ್ನೆಲ್ಲ ಖರ್ಚು ಮಾಡಿ ಈ ಜಮೀನು ತೆಗೆದುಕೊಂಡರೆ, ಅದು ನಮ್ಮನ್ನು ನಿರಾಶ್ರಿತರನ್ನಾಗಿಸುವ ಭಯವನ್ನು ಹುಟ್ಟುಹಾಕಿದೆ. ಎಂದು ಆವಂತಿಯಿಂದ ಎನ್ ಜಿ ಒ ಮುಖಾಂತರ ಸ್ಥಳಾಂತರ ಹೊಂದಿದ ಶ್ರೀಮತಿ ಶಾರದ ಅವರ ಮಾತುಗಳು.

೧೩. ತಲತಲಾಂತರದಿಂದ ಬದುಕು ಕಟ್ಟಿಕೊಂಡ ಕುದುರೆಮುಖದ ನೆಲದಲ್ಲೇ ನೆಲೆನಿಲ್ಲಬೇಕೆಂಬ ಕುಟುಂಬಗಳ ಕನಸು ಈಡೇರುತ್ತಿಲ್ಲ. ಈ ಹಿಂದೆ ರಾಷ್ಟ್ರೀಯ ಉದ್ಯಾನವನ ರಚನೆಯಲ್ಲಿ ಮಾಡಿದ ಹೋರಾಟಗಳು ಫಲಿಸಲಿಲ್ಲ. ಒತ್ತಾಯ ಪೂರ್ವಕವಾಗಿ ಯಾರನ್ನು ಒಕ್ಕಲೆಬ್ಬಿಸುವುದಿಲ್ಲ ಎಂದು ಉದ್ಯಾನ ಪ್ರದೇಶದಲ್ಲಿ ಸರ್ಕಾರ ನಾಮಫಲಕಗಳನ್ನು ಹಾಕಿದರೂ ಅಲ್ಲಿಂದ ಒಕ್ಕಲೇಳಬೇಕಾದ ಅಗೋಚರ ಅನಿವಾರ್ಯ ಇಂದು ಸೃಷ್ಟಿಯಾಗಿದೆ. ಉದ್ಯಾನವನದಲ್ಲಿ ಯಾವ ಕಾನೂನು ಯಾವಾಗ ಜಾರಿಯಾಗುವುದೋ ಎಂಬ ಆತಂಕದಿಂದ

ಸರ್ಕಾರ ಕೊಡುವ ಪುನರ್ವಸತಿ ಸೌಲಭ್ಯ ಪಡೆದು ಮತ್ತೆಲ್ಲೋ ಬದುಕು ಕಟ್ಟಿಕೊಳ್ಳುವುದೇ ಲೇಸು ಎಂದುಕೊಂಡಿರುವ ನಾವು ಪರಿಹಾರ ಪ್ಯಾಕೇಜಿಗೆ ಕೈ ಹೊಡ್ಡಿದರೆ, ಸರ್ಕಾರ ಸಕಾಲದಲ್ಲಿ ಪರಿಹಾರ ನೀಡಬೇಕಾಗಿತ್ತು. ಅದನ್ನು ಹೊರತುಪಡಿಸಿ ವಿಳಂಬ ನೀತಿಯನ್ನು ಅನುಸರಿಸಿ ಬಡ ಗಿರಿಜನರ ಕುಟುಂಬಗಳ ತಾಳ್ಮೆ ಪರೀಕ್ಷೆ ಮಾಡುತ್ತಿದೆ. ೩೦% ಕೃಷಿಕರು ಪಾರಂ ೫೦ ಮತ್ತು ೫೩ ರಲ್ಲಿ ಪುನರ್ವಸತಿ ಕೋರಿ ಅರ್ಜಿ ಸಲ್ಲಿಸಿವೆ. ಅಲ್ಲದೆ ೨೦೦೫ ರಲ್ಲಿ ಕಂದಾಯ ಭೂ ಹಿಡುವಳಿಗಳಾಗಿದ್ದು, ೫೦ ಮತ್ತು ೫೩ ರಲ್ಲಿ ಅರ್ಜಿ ಸಲ್ಲಿಸಿದವರಿಗೂ ಪರಿಹಾರ ನೀಡಬಹುದೆಂದು ಆದೇಶವಿದ್ದರೂ ಪರಿಹಾರ ನೀಡದೆ ವಿನಾ ವಿಳಂಬ ಮಾಡುತ್ತಿದೆ. ಬೇಸಿಗೆ ಮುಗಿಯುವಷ್ಟರಲ್ಲಿ ಪರಿಹಾರ ನೀಡಿದರೆ, ಬೇಗನೆ ಸ್ಥಳಾಂತರಗೊಳ್ಳಬಹುದು, ಮಳೆಗಾಲ ಆರಂಭವಾದರೆ ಸಾಗಾಟ ತುಂಬಾ ಕಷ್ಟವಾಗುತ್ತದೆ ಹಾಗೂ ಸಂಚಾರ ರಸ್ತೆ ಅವ್ಯವಸ್ಥೆಗೊಳಗಾಗುತ್ತದೆ. ಎಂಬುದು ಮೆಣಸಿನ ಹಾಡ್ಯದ ಶ್ರೀ ಮಂಜೇಗೌಡ ಅವರ ಮಾತುಗಳು.

೧೪. ಒಂದೇ ಸುತ್ತುಗಟ್ಟಿಯಲ್ಲಿ ನೆಲೆಸಿರುವ ಮೂರು ಕುಟುಂಬಗಳಲ್ಲಿ ಒಂದು ಕುಟುಂಬವು ಸ್ಥಳಾಂತರ ಹೊಂದಿದರೆ, ಆ ಕುಟುಂಬವು ಇದ್ದ ಸ್ಥಳದ ತೋಟಗಳನ್ನೆಲ್ಲಾ ಭೂ ಸ್ವಾಧೀನ ಪಡಿಸಿಕೊಂಡ ಮೇಲೆ ಅರಣ್ಯ ಇಲಾಖೆಯವರು ಅದನ್ನು ನಾಶಗೊಳಿಸುತ್ತಾರೆ. ಆರು ತಿಂಗಳೊಳಗಾಗಿ ಮತ್ತೆ ಆ ಪ್ರದೇಶ ಕಾಡಿನಂತೆ ಆವೃತವಾಗುವುದು. ಇದರಿಂದ ನಮ್ಮ ಕೃಷಿ ಭೂಮಿಯಲ್ಲಿ ಬೆಳೆದ ಬೆಳೆಗಳಿಗೆ ಕಾಡು ಪ್ರಾಣಿಗಳ ಉಪಟಳ ಸಹಜವಾಗಿಯೇ ವಿಸ್ತರಿಸಿಕೊಳ್ಳುತ್ತದೆ. ಕೃಷಿ ಭೂಮಿ ಬಂದೋಬಸ್ತ್‌ಗಾಗಿ ಅಡ್ಡ ತೋಡುಗಳನ್ನು ಇಲ್ಲವೆ ತಂತಿ ಬೇಲಿ ಹಾಕಿದರೆ ಅರಣ್ಯ ಇಲಾಖೆಯಿಂದ ವಿಚಾರಣೆ ಎದುರಿಸಬೇಕು. ಬೇಲಿ ಹಾಕದಿದ್ದರೆ ಕಾಡು ಪ್ರಾಣಿಗಳು ತಿಂದು ವರ್ಷದ ಕೂಳಿಗೆ ಮತ್ತೆ ಕೂಲಿ ಹೋಗುವ ಪರಿಸ್ಥಿತಿ ಎದುರಾಗುತ್ತದೆ. ಆದ್ದರಿಂದ ನಾವು ಊರನ್ನು ಬಿಡಲು ನಿರ್ಧರಿಸಿದ್ದೇವೆ. ಇಲ್ಲಿ ಅಭಿವೃದ್ಧಿಗೆ ಅವಕಾಶವಿಲ್ಲ ಮತ್ತು ಮೂಲಭೂತ ಸೌಕರ್ಯದ ಸೌಲಭ್ಯ ಪಡೆಯಲು ಆಕ್ಷೇಪಣೆಗಳೇ ಹೆಚ್ಚಾಗಿವೆ. ಮುಡುಬ ನಿವಾಸಿ ಅಶೋಕ ಅವರ ಸಂದರ್ಶನದಲ್ಲಿ ಕಂಡುಕೊಳ್ಳಲಾಯಿತು.

೧೫. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಘೋಷಣೆಯಾದ ಮೇಲೆ ಹಲವಾರು ಹೋರಾಟ ಮತ್ತು ಸಂಘರ್ಷಗಳನ್ನು ಎದುರಿಸಬೇಕಾಯಿತು. ಈ ನಡುವೆ ಇಲ್ಲಿನ ಸಮಸ್ಯೆಯ ಜೊತೆಗೆ ನಕ್ಸಲೀಯರ ಚಟುವಟಿಕೆಗಳು ಗರಿಗೆದರಿ ಅವರನ್ನು ನಿಯಂತ್ರಿಸುವ ಸಲುವಾಗಿ ನಕ್ಸಲ್ ನಿಗ್ರಹ ದಳ ತನಿಖಾ ಕಾರ್ಯಾಚರಣೆ ಕೈಗೊಳ್ಳುತ್ತಾರೆ. ಇದರಿಂದ ಬೇಸತ್ತ ನಾವು ಅನಿವಾರ್ಯವಾಗಿ ಮುತ್ತಾಜೆಯ ಸ್ಥಳವನ್ನು ಬಿಡಬೇಕಾಯಿತು.

೧೬. ಹುಲಿ ಯೋಜನೆ ಜಾರಿಯಾಗಿ ನಮ್ಮನ್ನು ಒಕ್ಕಲೆಬ್ಬಿಸುವ ಕಾರ್ಯಾಚರಣೆ ಮತ್ತೆ ಚುರುಕಾಗಿದ್ದು, ಬೆಳ್ತಂಗಡಿಯ ಮಲವಂತಿಗೆ ಗ್ರಾಮದಲ್ಲಿರುವ ನಮಗೆ ಅರಣ್ಯ ಇಲಾಖೆ ಒತ್ತುವರಿ ತೆರವುಗೊಳಿಸಲು ಸೂಚನಾ ಪತ್ರ ನೀಡಿದ್ದಾರೆ. ಇದರಿಂದ ನಮಗೆ ಮತ್ತೆ ಆತಂಕಗಳು ಎದುರಾಗಿವೆ. ಯಾವಾಗ ಯಾವ ಕಾನೂನು ಜಾರಿಯಾಗುವುದು ಎಂಬ ಆತಂಕದಲ್ಲಿ ಮಲವಂತಿಗೆ ಗ್ರಾಮದ ಕುಟುಂಬಗಳು ವಾಸವಾಗಿವೆ.

೧೭. ಪುನರ್ವಸತಿಗೆ ಸಂಬಂಧಿಸಿದಂತೆ ಕಾಯ್ದೆಗಳು ಒಕ್ಕಲೇಳುವ ಕುಟುಂಬಕ್ಕೆ ವಾಸ್ತವದ ಮೌಲ್ಯಕ್ಕೆ ಮೂರು ಪಟ್ಟು ಹೆಚ್ಚಿಗೆ ಮೌಲ್ಯವನ್ನು ನೀಡಬೇಕಾಗುತ್ತದೆ ಎನ್ನುವ ನಿಟ್ಟಿನಲ್ಲಿ ಸರ್ಕಾರ ಮತ್ತು ಇಲಾಖೆಯವರು ಸ್ವ ಇಚ್ಚೆಯ ಸಂಕೋಲೆಯಲ್ಲಿ ಬಂಧಿಸಿ ನಮಗೆ ದೊರೆಯ ಬೇಕಾದ ಪರಿಹಾರಕ್ಕೆ ತಡೆ ಹಾಕುತ್ತಿದ್ದು, ಸಮೀಕ್ಷಾ ಕಾರ್ಯದಲ್ಲಿ ಕಂಡ ವಾಸ್ತವ ಅಂಶಗಳಿಗೆ ಬೆಲೆ ನಿಗದಿ ಮಾಡಿ ಅದನ್ನೇ ಪರಿಹಾರವನ್ನಾಗಿ ನೀಡುತ್ತಿದ್ದಾರೆ. ಹುಲಿ ಯೋಜನೆ, ಹೆದ್ದಾರಿ ಯೋಜನೆ, ಅಣೆಕಟ್ಟು ನಿರ್ಮಾಣ ಇಂತಹ ಪೂರ್ವ ಯೋಜಿತ ಯೋಜನೆಗಳ ಅನುಷ್ಠಾನದಲ್ಲಿ ಜನರನ್ನು ಸ್ಥಳಾಂತರಗೊಳಿಸಬೇಕಾದ ಅನಿವಾರ್ಯತೆ ಇರುತ್ತದೆ. ಆದರೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಪಡೆಯುವುದನ್ನೇ ತಡೆಯುವುದರಿಂದ ಸಹಜವಾಗಿಯೇ ರೈತರು ಮತ್ತು ಗಿರಿಜನರು ಪರಿಸ್ಥಿತಿಗಳನ್ನು ನಿಭಾಯಿಸಲಾಗದೇ ಅನಿವಾರ್ಯವಾಗಿ ಪುನರ್ವಸತಿಗೆ ಅರ್ಜಿ ಸಲ್ಲಿಸುತ್ತಾರೆ. ಕಿರು ಅರಣ್ಯ ಉತ್ಪತ್ತಿ ಸಂಗ್ರಹಕ್ಕೆ ಮೊದಲು ಅನುಮತಿ ನೀಡಿದ್ದರು ಆದರೆ ಇತ್ತೀಚೆಗೆ ಅದಕ್ಕೆ ಅವಕಾಶವಿಲ್ಲ, ಇದರಿಂದ ಗಿರಿಜನರ ಆದಾಯ ಮೂಲಗಳು ನಶಿಸುತ್ತಿವೆ. ಇದರಿಂದ ಅನಿವಾರ್ಯವಾಗಿ ಕೂಲಿಗೆ ಹೋಗುವ ಸಂದರ್ಭಗಳು ಎದುರಾಗುತ್ತಿವೆ.

೧೮. ಕುದುರೆಮುಖ ಕಂಪನಿಯಲ್ಲಿ ಮನೆಯವರು ವಾಚ್‌ಮನ್ ಆಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದರು. ಮದುವೆಯಾದ ೪ ವರ್ಷಕ್ಕೆ ಅವರ ಮೂತ್ರಪಿಂಡಗಳ ಕಾರ್ಯ ಕ್ಷಮತೆ ಕ್ಷೀಣಿಸತೊಡಗಿದವು. ಅಲ್ಲಿಂದ ಅವರು ಯಾವ ಕಾರ್ಯವನ್ನು ಮಾಡುವುದಕ್ಕೂ ಕಷ್ಟಸಾಧ್ಯವಾದ ಸ್ಥಿತಿಯನ್ನು ತಲುಪಿ ಕೊನೆಗೆ ಮರಣ ಹೊಂದಿದರು. ಮನೆಯವರ ಅಣ್ಣಂದಿರು ಆವಂತಿಯಲ್ಲಿದ್ದ ಒಟ್ಟಿನ ಕುಟುಂಬಗಳ ಆಸ್ತಿಯನ್ನು ಎನ್ ಜಿ ಒ ಮುಖಾಂತರ ಹುಲಿ ಯೋಜನೆಗೆ ಎಂದು ಕೊಟ್ಟುಬಿಟ್ಟರು. ಬಂದ ಹಣದಲ್ಲಿ ನನ್ನ ಪಾಲಿಗೆ ೨ ಲಕ್ಷ ಹಣವನ್ನ ಮಾತ್ರ ನೀಡಿದರು. ಈ ಹಣದಿಂದ ಕಾಲು ಎಕರೆ ಜಮೀನು ತೆಗೆದುಕೊಂಡು ಸಂಸೆಯಲ್ಲಿ ಜೀವನ ಸಾಗಿಸುವುದು ದುಸ್ತರವಾಗಿದೆ. ಕಾಡಿನಿಂದ ಹೊರಬಂದು ನಮ್ಮ ಸಮೂಹವೆಲ್ಲ ಬೇರೆ ಬೇರೆ ದಿಕ್ಕಿನೆಡೆ ನಡೆದಿವೆ. ನಮ್ಮ ಸಾಮಾಜಿಕ ಸಂಬಂಧಗಳು ವಿಘಟನೆ ಹೊಂದಿ ಏಕಾಂಗಿಯಾಗಿ ಮಕ್ಕಳ ಜೀವನ ರೂಪಿಸುವುದು ಒಂಟಿ ತಾಯಂದಿರಿಗೆ ಬಹಳ ಕಷ್ಟ ಎಂಬುದು ಸಂಸೆಯ ಲಕ್ಷ್ಮಿ ಅವರ ಮಾತು.

೧೯. ನಾವು ಕಾಡಿನ ಮಕ್ಕಳು, ಮೇಲಾಗಿ ತಾಯಿ ತುಂಗೆ ನಮ್ಮನ್ನು ಸಾಕಿ ಸಲಹಿದ್ದಾಳೆ. ನಮಗಿರುವ ೨ ಎಕರೆ ಜಮೀನನ್ನು ಇಲಾಖೆ ಬಿಟ್ಟುಕೊಟ್ಟು ಹೋದರೆ, ಸಿಗುವ ಅಲ್ಪ ಪರಿಹಾರದಿಂದ ನೆಮ್ಮಾರು ಊರಲ್ಲಿಯೇ ಒಂದು ಎಕರೆ ಜಾಗವನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ. ಮೇಲಾಗಿ ಇಂದು ಕುಡಿಯುವ ನೀರಿನ ಸಮಸ್ಯೆ ಅಧಿಕವಾಗಿ ಜಾನುವಾರುಗಳು ಬದುಕುವುದು ಕಷ್ಟವಾಗಿದೆ. ನಾವಿರುವುದು ಅವಿಭಕ್ತ ಕುಟುಂಬದಲ್ಲಿ ಮಕ್ಕಳು ಕೂಲಿ ಕೆಲಸಕ್ಕೆ (ಅಡಿಕೆ ಗೊನೆ ಇಳಿಸುವುದು) ತಿಂಗಳುಗಳ ತನಕ ಕಾಡಿನಿಂದ ಹೊರ ಪ್ರಪಂಚದಲ್ಲಿ ಇರುತ್ತಾರೆ. ನಾವು ನಮ್ಮ ಮನೆಗೆ ವರ್ಷಕ್ಕಾಗುವಷ್ಟು ಭತ್ತ, ಅಗತ್ಯಕ್ಕೆ ಅನುಗುಣವಾಗಿ ತರಕಾರಿ ಇವುಗಳನ್ನು ಬೆಳೆದುಕೊಂಡು ಊಟ ಮಾಡುತ್ತಿದ್ದೇವೆ. ಈ ವ್ಯವಸ್ಥೆ ಬಿಟ್ಟು ಹೊರ ಹೋದರೆ, ನಮ್ಮ ಜೀವನವೇ ದುಸ್ಥರವಾಗಿಬಿಡುತ್ತದೆ. ಎಂಬುದು ಕೆರೆ ಗ್ರಾಮಪಂಚಾಯಿತಿಯ ಶೀರ್ಲು ಗ್ರಾಮದ

ಶ್ರೀ ರಾಮೇಗೌಡ ಅವರ ಹೊರ ಪ್ರಪಂಚದಲ್ಲಿರುವ ಸವಾಲಿನ ಮಾತುಗಳು. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ರಚನೆಯಿಂದಾಗಿ ಆ ಪ್ರದೇಶದ ಮೂಲ ನಿವಾಸಿಗಳಾದ ಗಿರಿಜನರು, ರೈತರು ಮತ್ತು ಇತರೆಯವರು ಹಲವಾರು ಸಮಸ್ಯೆಗಳನ್ನು ತಮ್ಮ ದಿನವಹಿ ಕಾರ್ಯಚಟುವಟಿಕೆಗಳಲ್ಲಿ ಕಂಡುಕೊಂಡಿದ್ದಾರೆ. ಕಾಲ ಕಾಲಕ್ಕೆ ಬದಲಾಗುವ ಹೊಸ ಕಾನೂನುಗಳು, ಹುಲಿ ಯೋಜನೆಯಂತಹ ವನ್ಯಜೀವಿ ಸಂಕುಲದ ರಕ್ಷಣೆಗಳ ನಿಟ್ಟಿನಲ್ಲಿ, ಮಾನವ ಮತ್ತು ವನ್ಯಜೀವಿ ನಡುವಿನ ಅಪಹೊಂದಾಣಿಕೆ ತಗ್ಗಿಸಿ ಅಳಿವಿನಂಚಿನಲ್ಲಿರುವ ಪ್ರಭೇದಗಳ ರಕ್ಷಣೆಗೆ ಅರಣ್ಯ ಇಲಾಖೆ ಮುಂದಾಗಿದೆ. ಅರಣ್ಯ ಇಲಾಖೆಯ ಈ ವ್ಯವಸ್ಥೆಯಡಿ ಮೂಲ ನಿವಾಸಿಗಳು ಅಗೋಚರವಾದ ಒತ್ತಡಗಳಿಗೆ ಸಿಲುಕಿ ತಮ್ಮ ಮೂಲ ನಿವಾಸಗಳನ್ನು ತೊರೆದು ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಪ್ರಕ್ರಿಯೆಗೆ ಒಳಗಾಗುವ ಅನಿವಾರ್ಯತೆ ಎದುರಾಗಿದೆ.

೧೧. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸ್ಥಳಾಂತರ ಮತ್ತು ಪುನರ್ವಸತೀಕರಣದ ಸಾಂಖಿಕ ವಿವರಗಳು. ಸ್ವಾಧೀನಪಡಿಸಿಕೊಳ್ಳುವುದು ಮತ್ತು ಪುನರ್ವಸತಿ ಯೋಜನೆ

೨೦೦೩-೦೪ ನೇ ಸಾಲಿನಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ೨೦೧ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ರೂ. ೨೩.೧೯ ಕೋಟಿ ಅನುದಾನ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಬಳಿಕ ಹೆಚ್ಚುವರಿಯಾಗಿ ೨೫ ಕುಟುಂಬಗಳಿಗೆ ಪುನರ್ವಸತಿ ಕೋರಿ ರೂ. ೭.೭೧೪೩ ಕೋಟಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ೨೦೧ ಕುಟುಂಬಗಳ ಪುನರ್ವಸತಿ ಯೋಜನೆಗೆ ಸರ್ಕಾರವು ಆದೇಶ ಆರ್‌ಡಿ ೨೬ ಆರ್‌ಇಹೆಚ್ ೨೦೦೫ ಬೆಂಗಳೂರು ದಿನಾಂಕ ೧೮.೦೪.೨೦೦೫ ರಂತೆ ಮಂಜೂರಾತಿ ಮಾಡಿರುತ್ತದೆ. ಈ ಅದೇಶದಂತೆ ಸುತ್ತುಗಟ್ಟುಗಳಲ್ಲಿ ವಾಸಿಸುವ ಕುಟುಂಬಗಳು ತಮ್ಮ ಮಾಲ್ಕಿ ಮೌಲ್ಯವನ್ನು ಭೂ ಸ್ವಾಧೀನ ಕಾಯ್ದೆಯಡಿ ನಿರ್ಧರಿಸುವ ದರಗಳಂತೆ ಪಡೆಯಲು ಅವಕಾಶ ಇರುತ್ತದೆ. ಸುತ್ತುಗಟ್ಟುಗಳಲ್ಲಿ ವಾಸಿಸುವ ೧೯೭೮ರ ಪೂರ್ವದ ಅರಣ್ಯ ಒತ್ತುವರಿ ಮಾಡಿದ ಕುಟುಂಬಗಳಿಗೂ, ಸಕ್ರಮಕ್ಕೆ ಅರ್ಹವಿರುವ ಕಂದಾಯ ಜಮೀನುಗಳನ್ನು ಒತ್ತುವರಿ ಮಾಡಿದ ಕುಟುಂಬಗಳಿಗೂ ಪರಿಹಾರ ವಿತರಿಸಲು ಅವಕಾಶ ಇರುತ್ತದೆ. ಸರ್ಕಾರಿ ಆದೇಶದಂತೆ ಹೆಚ್ಚುವರಿಯಾಗಿ ಮನೆ ಕಟ್ಟಲು ಸಹಾಯಧನ, ಸೊತ್ತು ಸಾಗಾಟಕ್ಕೆ, ಜಮೀನು ಖರೀದಿ, ಜೀವನ ಕುರಿತು ಆರು ತಿಂಗಳಿಗೆ ಉಪದನ ಕೂಡ ಪಡೆಯಲು ಸರ್ಕಾರಿ ಅದೇಶದಲ್ಲಿ ಅವಕಾಶ ಇರುತ್ತದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಪುನರ್ವಸತಿ ಕುರಿತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಸಮಿತಿಯನ್ನು ಸರ್ಕಾರವು ಸರ್ಕಾರಿ ಅದೇಶ ಸಂಖ್ಯೆ ಅಪಜೀ ೧೪೧ ಎಫ್‌ಎಪಿ ೨೦೦೯ ಬೆಂಗಳೂರು ದಿನಾಂಕ ೦೨.೦೨.೨೦೧೦ರಲ್ಲಿ ರಚಿಸಿದ್ದು ಈ ಸಮಿತಿಯ ಸದಸ್ಯ ಕಾರ್ಯದರ್ಶಿ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದು ಜಿಲ್ಲೆಯ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸದಸ್ಯರಾಗಿರುತ್ತಾರೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಮೂರೂ ಜಿಲ್ಲೆಗೆ ಸಂಬಂಧಿಸಿದಂತೆ ಕೆರೆ, ಬಲೇಕಡಿ, ಮುಡುಬಾ, ಸಂಸೆ, ಹಾದಿ, ಬಾಳೇಗೆರೆ, ಕಿಗ್ಗಾ, ಯಡದಳ್ಳಿ, ಗುಲಗುಂಜಿಮನೆ, ಮಲ್ಲಾಡು, ಕಲ್ಲುಗುಡ್ಡೆ, ಮೇಗೂರು, ನೂರಾಲ್ ಬೆಟ್ಟು, ಶೀರ್ಲಾಲು, ಆಂಡಾರು, ನೂರಾಲ್ ಬೆಟ್ಟು, ಈದು, ಕುತ್ಲೂರು, ನಾವೂರು, ಮಲವಂತಿಗೆ, ನಾರಾವಿ, ಸವಣಾಲು, ಸುಲ್ಕೇರಿಮೊಗ್ರು, ಲ್ಯಾಲ, ನಡ, ಗ್ರಾಮಗಳಿಂದ ಸ್ವಇಚ್ಛೆಯಿಂದ ಸದ್ರಿಯವರ ಜಮೀನನ್ನು ರಾಷ್ಟ್ರೀಯ ಉದ್ಯಾನವನಕ್ಕೆ ಬಿಟ್ಟುಕೊಟ್ಟು ಹೊರಗೆ ಹೋಗುವುದಾಗಿಯೂ ಈ ಬಗ್ಗೆ ಸೂಕ್ತ ಪರಿಹಾರ ನೀಡಲು ರಾಷ್ಟ್ರೀಯ ಉದ್ಯಾನವನದಲ್ಲಿ ವಾಸಿಸುತ್ತಿರುವ ೧೩೮೨ ಕುಟುಂಬಗಳಲ್ಲಿ ೫೫೦ ಕುಟುಂಬಗಳು ಅರ್ಜಿ ಸಲ್ಲಿಸಿರುತ್ತದೆ. ಮತ್ತು ಈ ಕುಟುಂಬಗಳು ಪುನರ್ವಸತಿಯನ್ನು ಅಪೇಕ್ಷಿಸದೇ ಹೆಚ್ಚುವರಿ ಪರಿಹಾರ ನೀಡಿದಲ್ಲಿ ಸ್ವ-ಇಚ್ಛೆಯಿಂದ ತಮ್ಮ ಜಮೀನುಗಳನ್ನು ರಾಷ್ಟ್ರೀಯ ಉದ್ಯಾನವನಕ್ಕೆ ಬಿಟ್ಟು ಕೊಟ್ಟು ಇಚ್ಛೆ ಕಂಡಲ್ಲಿ ಜೀವನ ಮಾಡುವುದಾಗಿ ತಿಳಿಸಿರುತ್ತವೆ.

ಕೋಷ್ಟಕ ೭

ಸ್ವ-ಇಚ್ಛೆಯಿಂದ ಹೊರಗೆ ಹೋಗಲು ಇಚ್ಚಿಸಿ ಅರ್ಜಿ ಸಲ್ಲಿಸಿದ ವಿವರ

ಕ್ರಸಂ.	ರಕ್ಷಿತಾ ಅರಣ್ಯ	ಜಿಲ್ಲೆಗಳು	ಗ್ರಾಮ	ಹಾಡಿ	ಕುಟುಂಬಗಳು	ಸ್ವೀಕೃತ ಅರ್ಜಿಗಳು	ಅರ್ಜಿದಾರರ ವಿವರ		
							ಪ.ಜಾ	ಪ.ಪಂ	ಇತರೆ
೧	ಕುದುರೆಮುಖ ರಾಷ್ಟ್ರೀಯ ಉದ್ಯಾನವನ	ಉಡುಪಿ	೧೦	೨೭	೨೪೩	೭೬	–	೩೫	೪೧
೨		ದಕ್ಷಿಣ ಕನ್ನಡ	೧೦	೫೧	೨೬೩	೧೧೪	–	೪೭	೬೭
೩		ಚಿಕ್ಕಮಗಳೂರು	೨೨	೩೦	೮೭೬	೩೬೦	೨೪	೮೩	೨೫೩
		ಒಟ್ಟು	೪೨	೧೦೮	೧೩೮೨	೫೫೦	೨೪	೧೬೫	೩೬೧

ಮೂಲ : ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ವನ್ಯಜೀವಿ ವಿಭಾಗ. ಕಾರ್ಕಳ.

ಪುನರ್ವಸತಿ ಪ್ರಗತಿ

ಮಾನ್ಯ ಕರ್ನಾಟಕ ಸರ್ಕಾರವು ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಪುನರ್ವಸತಿ ಕುರಿತು ಹೊಸ ಲೆಕ್ಕ ಶೀರ್ಷಿಕೆಯನ್ನು ಸೃಜಿಸಿ ೨೦೦೯-೧೦ ನೇ ಸಾಲಿನಲ್ಲಿ ಪುನರ್ವಸತಿ ಯೋಜನೆ ಕುರಿತು ರೂ ೯೭.೪೨೪೩೧ ಲಕ್ಷ ಅನುದಾನ ಬಿಡುಗಡೆ ಮಾಡಿರುತ್ತದೆ. ಈವರೆಗೆ ಬಿಡುಗಡೆ ಮಾಡಿದ ಅನುದಾನದ ವಿವರ ಈ ಕೆಳಗಿನಂತೆ ಇರುತ್ತದೆ.

ಕೋಷ್ಟಕ ೮

ಪುನರ್ವಸತಿ ಪ್ರಗತಿಯ ಅನುದಾನ ಬಿಡುಗಡೆ

ಕ್ರಸಂ	ವರ್ಷಗಳು	ಅನುದಾನ (ಲಕ್ಷ ರೂಗಳಲ್ಲಿ)	ಕೊಡಮಾಡಲ್ಪಟ್ಟ ಅನುದಾನ (ಲಕ್ಷ ರೂಗಳಲ್ಲಿ)	ಖರ್ಚು (ಲಕ್ಷ ರೂಗಳು)
೧	೨೦೦೯-೧೦	೯೭.೪೨೪೩೧	೯೭.೪೨೪೩೧	೯೭.೪೨೪೩೧
೨	೨೦೧೦-೧೧	೨೫೦.೦೦	೨೫೦.೦೦	೨೫೦.೦೦
೩	೨೦೧೧-೧೨	೨೫೦.೦೦	೨೫೦.೦೦	೨೫೦.೦೦
೪	೨೦೧೨-೧೩	೨೩೯.೬೪	೨೩೯.೬೪	೨೩೯.೬೪
೫	೨೦೧೩-೧೪	೧೫೩೦.೦೦	೧೫೩೦.೦೦	೧೫೩೦.೦೦
೬	೨೦೧೪-೧೫	೩೧೩೩.೦೦	೩೧೩೩.೦೦	೩೧೩೩.೦೦
೭	೨೦೧೫-೧೬	೫೫೦.೦೦	೫೫೦.೦೦	೫೫೦.೦೦
೮	೨೦೧೬-೧೭	೨೨೭೪.೦೦	೨೨೭೪.೦೦	೨೨೭೪.೦೦
೯	೨೦೧೭-೧೮	೮೦೦.೦೦	೮೦೦.೦೦	೮೦೦.೦೦
ಒಟ್ಟು		೯೧೨೪.೦೬೪೩೧	೯೧೨೪.೦೬೪೩೧	೯೧೨೪.೦೬೪೩೧

ಮೂಲ : ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ವನ್ಯಜೀವಿ ವಿಭಾಗ. ಕಾರ್ಕಳ.

ಕೋಷ್ಟಕ ೯

ಪುನರ್ವಸತಿ ಯೋಜನೆಯಡಿ ಈವರೆಗೆ ಭರಿಸಿದ ವೆಚ್ಚ ಮತ್ತು ಸ್ವಾಧೀನಪಡೆದ ಭೂಮಿಯ ವಿವರ ಈ ಕೆಳಗಿನಂತೆ ಇರುತ್ತದೆ.

ಕ್ರ ಸಂ	ಜಿಲ್ಲೆ	ಬಿಡುಗಡೆ ಗೊಂಡ ಹಣ (ಲಕ್ಷ ರೂ)	ಸ್ಥಳಾಂತರ ಗೊಂಡ ಕುಟುಂಬಗಳು	ಹಂಚಲ್ಪಟ್ಟ ಹಣ (ಲಕ್ಷ ರೂಗಳಲ್ಲಿ)	ಸ್ವಾಧೀನ ಪಡಿಸಿಕೊಂಡ ಭೂಮಿ (ಎಕರೆ)
೧	ಚಿಕ್ಕಮಗಳೂರು	೪೮೭೭.೦೪೬೪೨	೧೧೦	೪೧೫೩.೭೦೦೩೧	೨೮೨.೦೨
೨	ದಕ್ಷಿಣ ಕನ್ನಡ	೨೫೯೭.೨೫೭೭೨	೮೬	೨೨೮೮.೩೦೫೯೩	೧೩೪.೭೯೫
೩	ಉಡುಪಿ	೧೬೪೯.೭೬೦೧೭	೪೭	೧೪೨೫.೪೦೧೪೮	೮೭.೧೮
	ಒಟ್ಟು	**೯೧೨೪.೦೬೪೩೧**	**೨೪೩**	**೭೮೬೭.೪೦೭೭೨**	**೫೦೩.೯೯೫**

ಮೂಲ : ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ವನ್ಯಜೀವಿ ವಿಭಾಗ. ಕಾರ್ಕಳ.

ಅಗತ್ಯವಿರುವ ಅನುದಾನದ ವಿವರ

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ೧೩೮೨ ಕುಟುಂಬಗಳು ವಾಸಿಸುತ್ತಿದ್ದರೂ ೫೫೦ ಕುಟುಂಬಗಳು ಮಾತ್ರ ರಾಷ್ಟ್ರೀಯ ಉದ್ಯಾನವನದಿಂದ ಸ್ವ-ಇಚ್ಛೆಯಿಂದ ಹೊರಗೆ ಹೋಗುವುದಾಗಿಯೂ, ಈ ಬಗ್ಗೆ ಸೂಕ್ತ ಪರಿಹಾರ (ವಿವಿಧ ಇಲಾಖೆಗಳು ನಿರ್ದರಿಸುವ ಸಂಪೂರ್ಣ ಮೌಲ್ಯ) ಪಾವತಿಸಲು ಮನವಿ ಸಲ್ಲಿಸಿರುತ್ತವೆ. ಪ್ರಸ್ತುತ ಅರ್ಜಿ ಸಲ್ಲಿಸಿರುವ ೫೫೦ ಕುಟುಂಬಗಳಲ್ಲಿ ೨೪೩ ಕುಟುಂಬಗಳಿಗೆ ರೂ ೭೮೬೭೪೦೭೭೨.೦೦ ಪರಿಹಾರ ಪಾವತಿಸಲಾಗಿದೆ. ಉಳಿದ ೨೯೭ ಕುಟುಂಬಗಳಿಗೆ ರೂ ೧೧೯.೬೦ಕೋಟಿ ಅನುದಾನ ಅವಶ್ಯಕತೆ ಇರುತ್ತದೆ. ಉಳಿದ ಕುಟುಂಬಗಳ ಕಂದಾಯ ಮೌಲ್ಯಮಾಪನ ಪೂರ್ಣಗೊಂಡಿರುವುದಿಲ್ಲ ಅದುದರಿಂದ ಪ್ರತಿ ಕುಟುಂಬಕ್ಕೆ ಅಂದಾಜು ರೂ ೪೦.೦೦ಲಕ್ಷದಂತೆ ಪರಿಗಣಿಸಿ ಅಗತ್ಯ ಇರುವ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಕೋಷ್ಟಕ ೧೦

ಅಗತ್ಯವಿರುವ ಅನುದಾನದ ವಿವರ

ಕ್ರಸಂ	ಜಿಲ್ಲೆ	ವಾಸಿಸುತ್ತಿರುವ ಒಟ್ಟು ಕುಟುಂಬಗಳು	ಅರ್ಜಿ ಸಲ್ಲಿಸಿದ ಕುಟುಂಬಗಳು	ಪರಿಹಾರ ಪಡೆದ ಕುಟುಂಬಗಳು	ಅರ್ಜಿ ಸಲ್ಲಿಸಿ ಬಾಕಿ ಇರುವ ಕುಟುಂಬಗಳು	ಈ ಕುಟುಂಬಗಳಿಗೆ ಅಗತ್ಯವಿರುವ ಅನುದಾನ (ರೂ ಲಕ್ಷಗಳಲ್ಲಿ)
೧	ಚಿಕ್ಕಮಗಳೂರು	೮೭೬	೩೬೦	೧೧೦	೨೫೦	೧೦೦೦೦
೨	ದಕ್ಷಿಣ ಕನ್ನಡ	೨೬೩	೧೧೪	೮೬	೨೮	೧೧೨೦
೩	ಉಡುಪಿ	೨೪೩	೭೬	೪೭	೨೧	೮೪೦
	ಒಟ್ಟು	**೧೩೮೨**	**೫೫೦**	**೨೪೩**	**೨೯೯**	**೧೧೯೬೦**

ಮೂಲ : ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ವನ್ಯಜೀವಿ ವಿಭಾಗ. ಕಾರ್ಕಳ.

ಸಮಾರೋಪ

ಅರಣ್ಯವಾಸಿಗಳಿಗೆ ಕಾಡುಗಳು ಅವಿಚ್ಛಿನ್ನವಾದವು, ಅರಣ್ಯವನ್ನೇ ನಂಬಿಕೊಂಡು ಜೀವನ ಕಟ್ಟಿಕೊಂಡ ಸಮುದಾಯಗಳು ಇಂದಿನ ಸಂರಕ್ಷಣೆಯ ಭಾಗವಾಗಿರುವ ರಾಷ್ಟ್ರೀಯ ಉದ್ಯಾನವನ ಯೋಜನೆಯ ಅನುಷ್ಠಾನದಲ್ಲಿ ತಮ್ಮ ಮೂಲ ನಿವಾಸವನ್ನು ಅನಿವಾರ್ಯ ಕಾರಣಗಳಿಂದ ತ್ಯಜಿಸಿ ಹೋಗಬೇಕಾದಂತಹ ಸಂದರ್ಭಗಳು ಉಂಟಾಗಿವೆ. ಈ ನಿಟ್ಟಿನಲ್ಲಿ ಕಾಣದ ರೀತಿಯಲ್ಲಿ ಆಗುವ ಒತ್ತಡಗಳು ಕುಟುಂಬಗಳ ಜೀವನವನ್ನು ಶೋಚನೀಯ ಸ್ಥಿತಿಗೆ ತಂದು ನಿಲ್ಲಿಸುವ ಆತಂಕದಿಂದ ಸಿಕ್ಕಷ್ಟೇ ಪರಿಹಾರಕ್ಕೆ ಕೈ ಒಡ್ಡುವ ಸ್ಥಿತಿ ಎದುರಾಗಿದೆ. ಅಲ್ಲದೆ ಸರ್ಕಾರದ ಇಲಾಖೆಗಳು ತೆಗೆದುಕೊಳ್ಳುವ ಶೀಘ್ರ ನಿರ್ಧಾರಗಳು ಗಿರಿಜನರ ಮತ್ತು ಇತರೆ ಅರಣ್ಯವಾಸಿಗಳ ಅಭಿವೃದ್ಧಿಗೆ ಪೂರಕವಾಗುವಂತೆ ಆಯೋಜಿಸಬೇಕಾದ ಅನಿವಾರ್ಯತೆ ವಾಸ್ತವಕ್ಕೆ ಅವಶ್ಯವಾಗಿದೆ. ಇದರಿಂದ ಸಮಸ್ಯೆಗಳ ಮೇಲೆ ಸಮಸ್ಯೆಗಳು ಉಂಟಾಗುವುದನ್ನು ಸಾಧ್ಯವಾದಷ್ಟು ಮಟ್ಟಿಗೆ ತಡೆಗಟ್ಟಬಹುದು. ಸರ್ಕಾರವು ಅಭಿವೃದ್ಧಿಯ ದೃಷ್ಟಿಯಲ್ಲಿ ಆಯೋಜಿಸುವ ಯೋಜನೆಗಳಾದ ರಸ್ತೆ ವಿಸ್ತರಣೆ, ಎತ್ತಿನಹೊಳೆ ಯೋಜನೆ, ಮೆಟ್ರೋ ರೈಲು ಸಂಚಾರದ ಸಾಗಾಟಕ್ಕೆ, ಅನಿಲ ಕೊಳವೆಗಳನ್ನು ಭೂ ಅಂತರಾಳದಲ್ಲಿ ಕಲ್ಪಿಸುವುದಕ್ಕೆ, ಸೇನಾ ಕಾರ್ಯಚರಣೆಯ ತುಕಡಿ–ತರಬೇತಿ ನೀಡುವ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಜನ ವಾಸಿತ ಪ್ರದೇಶಗಳು ಅನುಷ್ಠಾನದ ಸ್ಥಳದಲ್ಲಿ ಕಾಣಿಸಿಕೊಂಡರೆ, ಅಂತಹ ಜನ ವಸತಿ ಪ್ರದೇಶಗಳನ್ನು ತೆರವುಗೊಳಿಸಲು ಅನೇಕ ಪರಿಹಾರದ (ಮನೆಗೆ ಬದಲಾಗಿ ಮನೆ, ಉದ್ಯೋಗ, ದುಪ್ಪಟ್ಟಿನ ಪರಿಹಾರ ಹಣ) ಕ್ರಮವನ್ನು ಅನುಸರಿಸುವ ಸರ್ಕಾರ, ಉದ್ಯಾನವನದ ವ್ಯಾಪ್ತಿಯಲ್ಲಿ ಕೃಷಿ ಕಾರ್ಯ ಮಾಡಿಕೊಂಡು ಜೀವನ ಸಾಗಿಸುತ್ತಿದ್ದವರ ಭೂ ಹಿಡುವಳಿಯನ್ನು ಪಡೆಯುವ ಸಂದರ್ಭದಲ್ಲಿ ಸ್ವಇಚ್ಛೆ ಮತ್ತು ವಾಸ್ತವ ಸಮೀಕ್ಷೆಯಲ್ಲಿ ಕಂಡು ಬರುವ ಮೌಲ್ಯಕ್ಕೆ ಮತ್ತು ಆ ಮೌಲ್ಯಕ್ಕೆ ಸ್ವಲ್ಪ ಮಟ್ಟಿನ ಹಣವನ್ನು ನಿರ್ಧರಿಸಿಕೊಡುವ ಪ್ರಕ್ರಿಯೆ ಕುರಿತು ಮರು ಅವಲೋಕಿಸಿ, ಆಲೋಚಿಸಿ ನಿರ್ಧಾರ ತೆಗೆದುಕೊಳ್ಳುವುದು ವಿಹಿತವೆನಿಸುತ್ತದೆ. ರಾಷ್ಟ್ರೀಯ ಉದ್ಯಾನವನದಿಂದ ಜನರನ್ನು ಕೇವಲ ಸ್ಥಳಾಂತರಗೊಳಿಸುವುದೇ ಮುಖ್ಯವಾಗುವುದಿಲ್ಲ, ಅದರೊಟ್ಟಿಗೆ ಅವರ ಸಾಮಾಜಿಕ, ಸಾಂಸ್ಕೃತಿಕ ಜೀವನವನ್ನು ಕಟ್ಟಿಕೊಡುವುದು ಕೂಡ ಪ್ರಮುಖವಾದಂತಹ ಅಂಶ. ಕುದುರೆಮುಖ ರಾಷ್ಟ್ರೀಯ ಉದ್ಯವಾನವನದಲ್ಲಿ ಸ್ಥಳೀಯ ಗಿರಿಜನ, ರೈತರಿಗೆ ಮತ್ತು ಇತರೆಯವರಿಗೆ ಉದ್ಯಾನವನದಲ್ಲಿ ಉಳಿಯುವುದು ಇಂದಿನ ಕೆಲವು ಸ್ಥಿತಿಗತಿಗಳನ್ನು ಅವಲೋಕಿಸಿದರೆ ಪ್ರತ್ಯಕ್ಷವಾಗಿ ಕಾಣುವುದು. ಅಂತೆಯೇ ಉದ್ಯವಾನವನದಿಂದ ಪುನರ್ವಸತೀಕರಣಗೊಳ್ಳುವವರು ಕೂಡ ಸವಾಲುಗಳನ್ನು ಸ್ವೀಕರಿಸಿ ಅವುಗಳನ್ನು ಸಾಧ್ಯತಾ ಅಂಶಗಳನ್ನಾಗಿ ಪರಿವರ್ತಿಸಿಕೊಂಡು ಮುಂದಿನ ಜೀವನವನ್ನು ಕಟ್ಟಿಕೊಳ್ಳಲು ಸಾಗಿದ್ದಾರೆ.

ಅಡಿ ಟಿಪ್ಪಣಿಗಳು.

೦೧. ಕಲ್ಕುಳಿ ವಿಠ್ಠಲ ಹೆಗಡೆ, ಕಾಡು ಕಿರುಕುಳ, ನಮ್ಮ ನಾಡು ಪ್ರಕಾಶನ, ೨೦೦೨. ಪು.ಸಂ ೯.

೦೨. ನಾಗರಾಜ್, ಎ, ಎನ್, ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ಅಧ್ಯಯನ ಸಂಸ್ಥೆಯ ವಿಜ್ಞಾನಿಗಳ ಸಮಿತಿಯ ವರದಿಯ ವೈಜ್ಞಾನಿಕ ವಿಶ್ಲೇಷಣೆ. ಯಾರದೋ ಮುಖ, ಯಾರದೋ ದೇಹ. ಕುದುರೆಮುಖ. ಮುರಾರಿ ಬಲ್ಲಾಳ(ಸಂ). ೨೦೦೨. ಪು.ಸಂ ೩೭.

೦೩. ಯಲ್ಲಪ್ಪರೆಡ್ಡಿ. ಅ.ನ. ಕುದುರೆಮುಖ ಗಣಿಗಾರಿಕೆ– ಪರಿಸರ ಆಘಾತಗಳು. ಯಾರದೋ ಮುಖ, ಯಾರದೋ ದೇಹ.. ಕುದುರೆಮುಖ. ಮುರಾರಿ ಬಲ್ಲಾಳ (ಸಂ). ೨೦೦೨. ಪು.ಸಂ ೫೦

೦೪. http://aranya.gov.in/downloads/Final-Notification-Wildlife.pdf, STATEMENT SHOWING THE LEGAL STATUS OF NATIONAL PARKS/WILDLIFE SANCTUARIES/CONSERVATION & COMMUNITY RESERVES OF KARNATAKA AS ON September - 2012 FINAL NOTIFICATION STAGES OF NATIONAL PARKS / WILDLIFE SANCTUARIES

೦೫. ಕರ್ನಾಟಕ ರಾಜ್ಯ ಪತ್ರ ಭಾಗ –IV-A, ಬೆಂಗಳೂರು, ಸೋಮವಾರ, ಜೂನ್ ೧೮, ೨೦೦೧ (ಜೇಷ್ಠ ೨೮, ಶಕ ವರ್ಷ ೯೨೩) ನಂ, ೧೧೯೫. ಅನುಸೂಚಿಗಳು ಮತ್ತು ದಿಕ್ಕುಗಳ ವಿವರಣೆಗಳು.

೦೬. Anita S. Arekal, Deputy Conservator of Forests, Kudremukh Wildlife Division, KARKALA. REVISED MANAGEMENT PLAN FOR KUDREMUKH. (2003-13), REPORT TO KARNATAKA FOREST DEPARTMENT. Genral History (Page No 19).

೦೭. Anita S. Arekal, Deputy Conservator of Forests, Kudremukh Wildlife Division, KARKALA. REVISED MANAGEMENT PLAN FOR KUDREMUKH. (2003-13), REPORT TO KARNATAKA FOREST DEPARTMENT.

೦೮. ಕಲ್ಕುಳಿ ವಿಠ್ಠಲ ಹೆಗಡೆ, ಕಾಡು ಕಿರುಕುಳ, ನಮ್ಮ ನಾಡು ಪ್ರಕಾಶನ, ೨೦೦೨. (ಪು. ಸಂ ೭೫.)

೦೯. ಮೈತ್ರಿ ಕೆ.ಎಂ, ಬುಡಕಟ್ಟು ಕುಲಕಸುಬುಗಳು. ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ,ಹಂಪಿ. (ಪು.ಸಂ ೭೯, ೭೯).

೧೦. http://www.censusindia.gov.in/2011census/PCA/SC_ST/PCA-A11_Appendix/ST-29-PCA-A11-APPENDIX.xlsx

೧೧. ಮಂಜುನಾಥ ಬೇವಿನ ಕಟ್ಟಿ, ಬುಡಕಟ್ಟು ನಂಬಿಕೆಗಳ: ಒಂದು ನೋಟ, ಆದಿವಾಸಿ ಆಖ್ಯಾನ, ಡಾ. ಪ್ರಭಾಕರ ಎ.ಎಸ್ (ಸಂ), ಪು.ಸಂ ೧೮೨.

೧೨. ಮೂಲ: ಕುದುರೆಮುಖ ವನ್ಯಜೀವಿ ವಿಭಾಗ, ಮಾಹಿತಿ ಹಕ್ಕು ಅಧಿನಿಯಮದಲ್ಲಿ ಪಡೆಯಲಾದ ವಿವರ.

೧೩. Chris Williams, Marxism and the environment, An excerpt from the new Ecology and Socialism. https://isreview.org/issue/72/marxism-and-environment

೧೪. https://www.kioclltd.in/user/cms/275, A tribute - Prof Sampath Iyengar

೧೫. ಅಧ್ಯಕ್ಷರು ಮತ್ತು ಗ್ರಾಮಸ್ಥರು, ಸನ್ಮಾನ ಪತ್ರ, ಶ್ರೀ ಕೆ.ಸಿ ಖನ್ನಾ – ೧೧-೦೨-೧೯೭೮

೧೬. ನಾಗರಾಜ್ ಎ . ಎನ್. ಅವರು ನಾಗರೀಕ ಸೇವಾ ಟ್ರಸ್ಟ್ ವತಿಯಿಂದ ಮುದ್ರಿತವಾದ ಯಾರದೋ ಮುಖ ಯಾರದೋ ದೇಹ – ಕುದುರೆಮುಖ (ಪು.ಸಂ ೩೭ – ೪೨)

೧೭. ಕಲ್ಕುಳಿ ವಿಠಲ್ ಹೆಗ್ಡೆ, ತುಂಗ-ಭದ್ರಾ ಉಳಿಸಿ ಹೋರಾಟ ಒಕ್ಕೂಟ. ಜನತೆಯ ಹೋರಾಟಕ್ಕೆ ಮಣಿದ ಕತ್ತಿ. (ಪು.ಸಂ ೧೬,೧೭).

೧೮. ಪ್ರಕಾಶ ಕಮ್ಮರಡಗಿ, ನಕ್ಸಲ್ ಪೀಡಿತ ಮಲೆನಾಡಿನ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಗಳು, ಒಂದು ಸ್ವತಂತ್ರ ಅಧ್ಯಯನ ವರದಿ, ಸಮಾಜವಾದಿ ಅಧ್ಯಯನ ಕೇಂದ್ರ, ಬೆಂಗಳೂರು.೨೦೦೫. (ಪು.ಸಂ ೭)

೧೯. ಉಪವಿಭಾಗಾಧಿಕರಿಗಳ ಪತ್ರ. ಚಿಕ್ಕಮಗಳೂರು. ಎಲ್ ಎನ್ ಡಿ ೭೫:೯೭-೯೮, ೧೨/೧೦/೧೯೯೯

೨೦. www.businessdictionary.com/definaition/government.html.

೨೧. https:en.oxforddictioneried.com/definition/government

೨೨. ಸಂದರ್ಶನ: ಪುಟ್ಟ ಬಿನ್ ಬೆಳ್ಳೇಗೌಡ. ಬಾಳೆಗೆರೆ.

೨೩. ಸಂದರ್ಶನ: ಶ್ರೀ ತಮ್ಮಯ್ಯ ಬಿನ್ ಪುಟ್ಟ. ಸಿಂಗ್ಸಾರ್. ಸಂಸೆ. ಮೂಡಿಗೆರೆ ತಾ॥, ಎನ್.ಜಿ.ಒ ಮುಖಾಂತರ ಶೃಂಗೇರಿ ತಾ॥ ಬೇಗಾರು ಗ್ರಾಮಕ್ಕೆ ಪುನರ್ವಸತಿ ಹೊಂದಿದವರು.

೨೪. ಸಂದರ್ಶನ: ಕಂಪ್ಯೂಟರ್ ತರಬೇತಿ ಫಲಾನುಭವಿ: ದೇವಪ್ಪ ಬಿನ್ ಬಾಬು ಮಲೆಕುಡಿಯ. ಪೆರ್ನೋಡಿ. ನಲ್ಲಿಕಾರು ಗ್ರಾಮ. ಮಂಗಳೂರು ತಾ॥.

೨೫. http://sw.kar.nic.in/WebPages/PDF2016/scsp.pdf (Page No 7-8)

ಅಧ್ಯಾಯ – ೪

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವರ್ತಮಾನ

ವಿಶ್ಲೇಷಣೆ ಮತ್ತು ವಿವರಗಳು

ವಿಷಯಗಳು

ಕುದುರೆಮುಖ ರಾಷ್ಟ್ರೀಯ ಉದ್ಯಾನವನದಿಂದ ಒಕ್ಕಲೆದ್ದವರ ಹಾಗೂ ಸ್ಥಳೀಯರ ವರ್ತಮಾನದ ಸ್ಥಿತಿಗಳು

೦೧. ಸಾಮಾಜಿಕ ಅಂಶಗಳು

೦೨. ಶೈಕ್ಷಣಿಕ ಅಂಶಗಳು

೦೩. ಆರ್ಥಿಕ ಅಂಶಗಳು

೦೪. ಸಾಮಾಜಿಕ ಭದ್ರತಾ ವ್ಯವಸ್ಥೆಗಳು

೦೫. ರಾಜಕೀಯ ಅಂಶಗಳು

೦೬. ಸ್ಥಳಾಂತರ ಮತ್ತು ಪುನರ್ವಸತೀಕರಣದ ಪರಿಣಾಮಗಳು

ಸಾರಾಂಶ

ಸಮಾರೋಪ

A statistical story is one that doesn't just recite data in words. It tells a story about the data. Readers tend to recall ideas more easily than they do data. A statistical story conveys a message that tells readers what happened, who did it, when and where it happened, and hopefully, why and how it happened.

ಅಧ್ಯಾಯ ೪

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವರ್ತಮಾನದ ವಿಶ್ಲೇಷಣೆ ಮತ್ತು ವಿವರಗಳು

ಪೀಠಿಕೆ: ನಿರ್ದಿಷ್ಟ ವಿಷಯಗಳ ಆಧಾರಿತವಾಗಿ ಕೈಗೊಳ್ಳುವ ಸಂಶೋಧನೆಯಲ್ಲಿ ಕ್ಷೇತ್ರ ಕಾರ್ಯದ ಮೂಲಕ ಪ್ರಾಥಮಿಕ ಮೂಲ ಮಾಹಿತಿಯನ್ನು ಪ್ರಶ್ನಾವಳಿ, ಅವಲೋಕನ ಮತ್ತು ಸಂದರ್ಶನದ ವಿಧಾನಗಳನ್ನು ಬಳಸಿಕೊಂಡು ದತ್ತಾಂಶಗಳನ್ನು ಪಡೆಯಲಾಗುತ್ತದೆ. ಕ್ಷೇತ್ರ ಕಾರ್ಯದಲ್ಲಿ ಪಡೆದ ದತ್ತಾಂಶವು ರೂಪವಿಲ್ಲದ ವಸ್ತುವಿನಂತಾಗಿರುತ್ತದೆ. ದತ್ತಾಂಶಗಳಿಗೆ ರೂಪವನ್ನು ನೀಡುವ ಕಾರ್ಯಕ್ಕೆ ಅವುಗಳನ್ನು ಸ್ಪಷ್ಟಗೊಳಿಸಿಕೊಂಡು ಕೋಷ್ಟಕಗಳನ್ನು ತಯಾರುಮಾಡಿ ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ. ವಿಶ್ಲೇಷಣೆ ಮೂಲಕ ದೊರೆತ ಫಲಿತಾಂಶಗಳನ್ನು ವಿವರ ರೂಪದಲ್ಲಿ ಓದುಗರ ಮನನವಾಗುವಂತೆ ದತ್ತಾಂಶಗಳನ್ನು ರೂಪಿಸಲಾಗುತ್ತದೆ. ದತ್ತಾಂಶಗಳ ಆಧಾರಿತವಾಗಿ ಸಂಯುಕ್ತ ಸಂಸ್ಥಾನದ ಆರ್ಥಿಕ ಆಯೋಗವು ಉಲ್ಲೇಖಿಸುವಂತೆ "A statistical story is one that doesn't just recite data in words. It tells a story about the data. Readers tend to recall ideas more easily than they do data. A statistical story conveys a message that tells readers what happened, who did it, when and where it happened, and hopefully, why and how it happened"[೧]. ಅಂದರೆ, ದತ್ತಾಂಶಗಳಿಂದ ಸ್ವರೂಪವನ್ನು ಪಡೆದುಕೊಳ್ಳುವ ಸಾಂಖಿಕ ವಿವರಗಳು, ಯಾವ ಕಾಲದ ಸಂದರ್ಭದಲ್ಲಿ ಗತಿಸಿರುವ ಘಟನೆಗಳಿಂದ ಉಂಟಾಗಿರುವ ಪರಿಣಾಮಗಳ ಕುರಿತು ಓದುಗರಿಗೆ ಸುಲಭದ ರೀತಿಯಲ್ಲಿ ಗ್ರಹಿಸುವಂತಹ ಅಂಶಗಳನ್ನು ಒಳಗೊಂಡಿರುತ್ತವೆ.

ಕ್ಷೇತ್ರಕಾರ್ಯದಲ್ಲಿ ದೊರೆತಿರುವ ದತ್ತಾಂಶಗಳನ್ನು ಸಾಂಖಿಕ ವಿವರಗಳಿಗೆ ಒಳಪಡಿಸುವ ಮುನ್ನ ಅವುಗಳ ವಿಶ್ಲೇಷಣೆಯು ಪ್ರಮುಖವಾದುದು. ವಿಶ್ಲೇಷಣೆಯು ಪ್ರಾಯೋಗಿಕವಾದ ಅಧ್ಯಯನ ವಿಧಾನವಾಗಿದ್ದು, ಯಾವುದೇ ಒಂದು ಸಂಗತಿಯನ್ನು ಕಾರಣ ಮತ್ತು ಪರಿಣಾಮಗಳ ಸಂಬಂಧದಿಂದ ಗುರುತಿಸುವ ಪ್ರಕ್ರಿಯೆಯೇ ಆಗಿದೆ. ಸಂಶೋಧನೆಯು ಒಳಗೊಂಡ ವಿಷಯಗಳನ್ನು ಸಂಪೂರ್ಣವಾಗಿ ಬಿಡಿಸಿ ತೋರಿಸುವುದೆ ವಿಶ್ಲೇಷಣೆಯ ಲಕ್ಷಣವಾಗಿದೆ. ವಿಶ್ಲೇಷಣೆಯಲ್ಲಿ ಯಾವುದೇ ಒಂದು ವಿಷಯ ಅಥವಾ ರಚನೆಯನ್ನು ಸೂಕ್ಷ್ಮ ದೃಷ್ಟಿಯಿಂದ ಪರೀಕ್ಷಿಸಲಾಗುತ್ತದೆ. ಒಂದು ಸಂಗತಿ, ವಿಷಯ ಅಥವಾ ಘಟನೆಯು ಸಂಭವಿಸಲು ಒಂದು ಕಾರಣವಿರಬಹುದು ಅಥವಾ ಹಲವು ಕಾರಣಗಳಿರಬಹುದು. ಒಂದು ಘಟನೆಯು ಸಂಭವಿಸಲು ಯಾವ ಅಂಶಗಳು ಕಾರಣವಾಗಿರಬಹುದು ಎಂದು ವಿಶ್ಲೇಷಿಸುವಿಕೆಯು ಅಧ್ಯಯನವಾಗುವುದರಲ್ಲಿ ಸಂಶಯವಿಲ್ಲ. ಒಟ್ಟಿನಲ್ಲಿ ಕಾರಣ ಪರಿಣಾಮಗಳ ಅಧ್ಯಯನ ಅಥವಾ ಯಾವುದೇ ಸಂಗತಿಯನ್ನು ಸೂಕ್ಷ್ಮ ದೃಷ್ಟಿಯಿಂದ ಪರೀಕ್ಷಿಸುವಿಕೆಯೇ ವಿಶ್ಲೇಷಣೆ. ಸಂಶೋಧನೆಯ ಭಾಗವಾಗಿ ಈ ಅಧ್ಯಯನದಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸ್ಥಳಾಂತರ ಮತ್ತು ಪುನರ್ವಸತೀಕರಣ ಕುರಿತಂತೆ, ಉದ್ಯಾನವನದ ಒಳಭಾಗದಲ್ಲಿ ಮತ್ತು ಪರಿಹಾರ ಪಡೆದು ಪುನರ್ವಸತಿ ಹೊಂದಿರುವ

ಸಮುದಾಯಗಳನ್ನು ಪರಿಗಣಿಸಿ ೨೫೦ ಕುಟುಂಬಗಳನ್ನು ಸಂದರ್ಶನ, ಪ್ರಶ್ನಾವಳಿ ಮತ್ತು ಅವಲೋಕನದ ವಿಧಾನಗಳ ಮುಖಾಂತರ ದತ್ತಾಂಶಗಳನ್ನು ಕ್ರೋಢೀಕರಿಸಲಾಗಿದೆ. ಕ್ರೂಡೀಕರಿಸಲಾದ ದತ್ತಾಂಶಗಳನ್ನು ಸಮುದಾಯಗಳ ಆಧಾರಿತವಾಗಿ ವಿಂಗಡಿಸಿ, ಅಭಿಪ್ರಾಯಗಳ ಆಧಾರಿತವಾಗಿ ವಿಶ್ಲೇಷಣೆಗೆ ಒಳಪಡಿಸಿ ವಿವರಗಳನ್ನು ರಚಿಸಲಾಗಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವರ್ತಮಾನದ ವಿಶ್ಲೇಷಣೆ ಮತ್ತು ವಿವರಗಳನ್ನು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಆರೋಗ್ಯ ಮತ್ತು ಪುನರ್ವಸತೀಕರಣದ ನಂತರ ಉಂಟಾಗಿರುವ ಕಾರಣ ಪರಿಣಾಮಗಳನ್ನು ಸಾಂಖಿಕ ರೂಪದಲ್ಲಿ ವರದಿಯನ್ನು ದಾಖಲಿಸಲಾಗಿದೆ.

ಅಧ್ಯಯನ ವ್ಯಾಪ್ತಿ: ಕರ್ನಾಟಕ ರಾಜ್ಯದ ಪಶ್ಚಿಮಘಟ್ಟ ಪ್ರದೇಶದಲ್ಲಿ ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ವಿಸ್ತರಿಸಿಕೊಂಡಿರುವ 'ಕುದುರೆಮುಖ ರಾಷ್ಟ್ರೀಯ ಉದ್ಯಾನವನ' ವ್ಯಾಪ್ತಿಯಾಗಿದೆ.


ಸಂಶೋಧನಾ ವಿನ್ಯಾಸ: ಪ್ರಸ್ತುತ ಅಧ್ಯಯನವು ಸ್ಥಳಾಂತರ ಮತ್ತು ಪುನರ್ವಸತೀಕರಣ: ಸವಾಲು ಮತ್ತು ಸಾಧ್ಯತೆಗಳನ್ನು ಕುರಿತಾದುದ್ದಾಗಿದೆ. ಅಧ್ಯಯನದ ವ್ಯಾಪ್ತಿಯಲ್ಲಿ ಉಲ್ಲೇಖಿಸಿರುವಂತೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು ಆಯ್ಕೆ ಮಾಡಿಕೊಳ್ಳಲಾಗಿ, ಅಸಂಭವನೀಯ ನಮೂನೆಯ ಉದ್ದೇಶ ಪೂರಿತ ನಮೂನೆ ಮೂಲಕ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ದತ್ತಾಂಶಗಳನ್ನು ಕೋಷ್ಟಗೀಕರಣಕ್ಕೆ ಒಳಪಡಿಸಿ, ಸ್ತಂಬಲೇಖ, ಪೈ ನಕಾಶೆ ಮತ್ತು ಸರಳ ರೇಖಾ ಲೇಖಗಳ ಮುಖಾಂತರ (ಗ್ರಾಫ್) ನಕಾಶೆಗಳನ್ನು ಬಳಸಿಕೊಳ್ಳಲಾಗಿದೆ. ಕೋಷ್ಟಕ ೧೧ ರಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪಿಯು ಭೌಗೋಳಿಕವಾಗಿ ಹಂಚಿಕೆಯಾಗಿ ತನ್ನೊಳಗೆ ಸೇರಿಕೊಂಡಿರುವ ಜಿಲ್ಲಾವಾರು ಹಾಗೂ ಆ ಜಿಲ್ಲೆಗಳು ಒಳಗೊಂಡಿರುವ ತಾಲ್ಲೂಕು ಪ್ರದೇಶಗಳ ಆಧಾರಿತವಾಗಿ ಕುಟುಂಬಗಳ ಅಧ್ಯಯನವನ್ನು ನೆಡೆಸಿದ್ದು, ಮಾಹಿತಿದಾರರ ಸಂಖ್ಯೆಯನ್ನು ಸಮುದಾಯಗಳ ಆಧಾರಿತವಾಗಿ ಕೋಷ್ಟಕದಲ್ಲಿ ವಿಶ್ಲೇಷಿಸಲಾಗಿದೆ. ಅದರಂತೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಒಳ ಭಾಗದಲ್ಲಿರುವವರು ಮತ್ತು ಉದ್ಯಾನವನದಿಂದ ಒಕ್ಕಲೇಳಲ್ಪಟ್ಟ (ಸ್ಥಳಾಂತರಗೊಂಡ) ವರನ್ನು ಒಳಗೊಂಡಂತೆ ಮುಖ್ಯವಾಗಿ ಕಂಡುಬರುವ ಸಮುದಾಯಗಳ ಕುಟುಂಬಗಳ ಸಾಂಖಿಕ ವಿಶ್ಲೇಷಣೆಯನ್ನು ಕೋಷ್ಟಕ ತಿಳಿಸುವುದು. ಕೋಷ್ಟಕದ ಆಧಾರಿತವಾಗಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಮತ್ತು ಶೃಂಗೇರಿ–ಕೊಪ್ಪ ತಾಲ್ಲೂಕುಗಳನ್ನು, ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕನ್ನು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಮತ್ತು ಮಂಗಳೂರು ತಾಲ್ಲೂಕುಗಳನ್ನು ಒಳಗೊಂಡಿದೆ. ಅಧ್ಯಯನದ ಭಾಗವಾಗಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಕಂಡುಬರುವ ಮರಾಠಿನಾಯ್ಕ, ಮಲೆಕುಡಿಯ ಮತ್ತು ಗೌಡಲು ಆದಿವಾಸಿ ಸಮುದಾಯಗಳಾಗಿವೆ. ಜೈನರು, ಬಿಲ್ಲವರು, ಬಂಟ್ಸ್, ಗೌಡರು ಮತ್ತು ಬ್ರಾಹ್ಮಣರನ್ನು ಇತರೆ ಸಮುದಾಯಗಳೆಂದು ಪರಿಗಣಿಸಿ ಕೋಷ್ಟಕದಲ್ಲಿ ಉಲ್ಲೇಖಿಸಲಾಗಿದೆ.

ಕೋಷ್ಟಕ ೧೧

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರ ಜಿಲ್ಲಾ ಮತ್ತು ತಾಲ್ಲೂಕುವಾರು ಕುಟುಂಬಗಳ ಸಂಖ್ಯೆ

ಕ್ರಸಂ	ಜನಾಂಗ	ಚಿಕ್ಕಮಗಳೂರು		ಉಡುಪಿ	ದಕ್ಷಿಣ ಕನ್ನಡ		ಒಟ್ಟು	ಶೇಕಡವಾರು
		ಮೂಡಿಗೆರೆ	ಶೃಂಗೇರಿ-ಕೊಪ್ಪ	ಕಾರ್ಕಳ	ಬೆಳ್ತಂಗಡಿ	ಮಂಗಳೂರು		
1	ಮರಾಠಿನಾಯ್ಕ	೦	೩	೫	೫	೦	೧೩	೫.೨
2	ಮಲೆಕುಡಿಯ	೨	೦	೩೭	೪೮	೪	೯೧	೩೬.೪
3	ಗೌಡಲು	೨೪	೭೪	೧	೦	೦	೯೯	೩೯.೬
4	ಇತರೆ	೨	೨೫	೭	೧೩	೦	೪೭	೧೮.೮
	ಒಟ್ಟು	೨೮	೧೦೨	೫೦	೬೬	೪	೨೫೦	೧೦೦

ಗ್ರಾಫ್ ೧, ಮಾಹಿತಿದಾರರ
ಕುಟುಂಬಗಳ ಸಂಖ್ಯೆ



ಮೇಲಿನ ಕೋಷ್ಟಕ೧೧ ನ್ನು ಅವಲೋಕಿಸಿದಾಗ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿ ಬರುವ ಬುಡಕಟ್ಟು ಸಮುದಾಯದ ಮರಾಠಿನಾಯ್ಕ ಸಮುದಾಯವು ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ-ಕೊಪ್ಪ ತಾಲ್ಲೂಕು, ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕುಗಳಲ್ಲಿ ವಿಸ್ತರಿಸಿಕೊಂಡಿದ್ದು, ಅಧ್ಯಯನ ಸಂದರ್ಭದಲ್ಲಿ ಸಂದರ್ಶಿಸಿದ ಒಟ್ಟಾರೆಯ ಕಟುಂಬಗಳ ಸಂಖ್ಯೆ ೧೩ ಆಗಿದ್ದು, ಒಟ್ಟು ೫.೨% ರಷ್ಟು ಪ್ರತಿನಿಧಿಸುತ್ತದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಮರಾಠಿನಾಯ್ಕ ಸಮುದಾಯದವರು ಹೆಚ್ಚು ನೆಲೆಗಳನ್ನು ಹೊಂದದಿರುವುದು, ಹಾಗೂ ವಿರಳವಾದ ಜನಸಂಖ್ಯೆಯನ್ನು ಈ ವ್ಯಾಪ್ತಿಯಲ್ಲಿ ಹೊಂದಿರುವುದರಿಂದ ೫.೨% ರಷ್ಟು ಮಾತ್ರ ಪ್ರತಿನಿಧಿಸುತ್ತಾರೆ. ಚಿಕ್ಕಮಗಳೂರು ಜಿಲ್ಲಾ ಪ್ರಾಂತ್ಯಕಿಂತ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಕಾರವಳಿ ಪ್ರದೇಶಗಳ ಭಾಗಕ್ಕೆ ವಿಸ್ತರಿಸಿಕೊಂಡಿದ್ದಾರೆ.

ಬುಡಕಟ್ಟು ಸಮುದಾಯದ ಮಲೆಕುಡಿಯ ಸಮುದಾಯವು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಮತ್ತು ಮಂಗಳೂರು ತಾಲ್ಲೂಕು, ಉಡಿಪಿ ಜಿಲ್ಲೆಯ ಕಾರ್ಕಳ ತಾಲ್ಲೂಕು ಹಾಗೂ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕುಗಳಲ್ಲಿ ವಿಸ್ತರಿಸಿಕೊಂಡಿದ್ದು ಅಧ್ಯಯನ ಸಂದರ್ಭದಲ್ಲಿ ಸಂದರ್ಶಿಸಿದ ಒಟ್ಟು ಕುಟುಂಬಗಳ ಸಂಖ್ಯೆ ೯೧ ಆಗಿದ್ದು, ಒಟ್ಟು ೩೬.೪ % ರಷ್ಟು ಪ್ರತಿನಿಧಿಸುತ್ತದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಘಟ್ಟ ಪ್ರದೇಶದ ತಳಭಾಗದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಭಾಗಗಳಿಗೆ ಹೆಚ್ಚಿನ ಕುಟುಂಬಗಳು ವಿಸ್ತರಿಸಿಕೊಂಡಿದ್ದು, ಬಹುಪಾಲು ಮಲೆಕುಡಿಯ ಸಮುದಾಯದವರು ಬೆಳ್ತಂಗಡಿ ಮತ್ತು ಕಾರ್ಕಳ ತಾಲ್ಲೂಕುಗಳಲ್ಲಿ ನೆಲೆಯನ್ನು ಕಂಡುಕೊಂಡಿದ್ದಾರೆ. ಬೆಳ್ತಂಗಡಿ ತಾಲ್ಲೂಕು ಭಾಗದಿಂದ ಪುನರ್ವಸತಿ ಹೊಂದಿದ ೪ ಕುಟುಂಬಗಳು ಮಾತ್ರ ಮಂಗಳೂರು ಗಡಿ ಕ್ಷೇತ್ರದ ಅಂಚಿನ ಸ್ಥಳಗಳಲ್ಲಿ ನೆಲೆ ಕಂಡುಕೊಂಡಿವೆ. ಇನ್ನುಳಿದಂತೆ ಬೆಳ್ತಂಗಡಿ ತಾಲ್ಲೂಕು ಮತ್ತು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು ಕ್ಷೇತ್ರಗಳ ಗಡಿ ಅಂಚಿನ ರೇಖೆಯ ಭಾಗದಲ್ಲಿ ೨ ಕುಟುಂಬಗಳು ಕಂಡು ಬಂದಿರುವುದರಿಂದ ಹಾಗೂ ವ್ಯವಹಾರಿಕ ಮತ್ತು ಇತರೆ ಕಾರ್ಯಗಳಿಗೆ ಮೂಡಿಗೆರೆಯ ಭಾಗವನ್ನು ಅವಲಂಬಿಸಿರುವುದರಿಂದ ಅವುಗಳನ್ನು ಮೂಡಿಗೆರೆ ಕ್ಷೇತ್ರಕ್ಕೆ ಹೊಂದಿಸಿಕೊಳ್ಳಲಾಗಿದೆ.

ಬುಡಕಟ್ಟು ಸಮುದಾಯದ ಗೌಡಲು ಸಮುದಾಯವು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಮತ್ತು ಶೃಂಗೇರಿ-ಕೊಪ್ಪ ತಾಲ್ಲೂಕು ಹಾಗೂ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕುಗಳಲ್ಲಿ ವಿಸ್ತರಿಸಿಕೊಂಡಿದ್ದು, ಅಧ್ಯಯನ ಸಂದರ್ಭದಲ್ಲಿ ಸಂದರ್ಶಿಸಿದ ಒಟ್ಟಾರೆಯ ಕುಟುಂಬಗಳ ಸಂಖ್ಯೆ ೯೯ ಆಗಿದ್ದು, ಒಟ್ಟು ೩೯.೬% ರಷ್ಟು ಪ್ರತಿನಿಧಿಸುತ್ತದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಘಟ್ಟ ಪ್ರದೇಶದ ಮೇಲ್ಭಾಗದಲ್ಲಿ ಹೆಚ್ಚು ಆದಿವಾಸಿ ಗಿರಿಜನರನ್ನು ಹೊಂದಿರುವ ಸಮುದಾಯವಾಗಿದ್ದು, ಚಿಕ್ಕಮಗಳೂರು ಜಿಲ್ಲಾ ಕ್ಷೇತ್ರದ ಪ್ರಾಂತ್ಯಗಳಲ್ಲಿ ತಮ್ಮ ವಾಸದ ನೆಲೆಗಳನ್ನು ಕಂಡುಕೊಂಡಿದ್ದಾರೆ. ಇನ್ನುಳಿದಂತೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಈ ಸಮುದಾಯದವರು ವಿಸ್ತರಿಸಿಕೊಂಡಿಲ್ಲ. ಭೌಗೋಳಿಕವಾಗಿ ಮಲೆನಾಡು ಪ್ರದೇಶಕ್ಕೆ ಮಾತ್ರ ಸೀಮಿತವಾಗಿದ್ದಾರೆ.

ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಬುಡಕಟ್ಟು ಸಮುದಾಯಗಳೊಂದಿಗೆ ಇತರೆ ಸಮುದಾಯಗಳು ಕೂಡ ನೆಲೆಸಿದ್ದು, ಆ ಸಮುದಾಯಗಳನ್ನು ಪಾರಂಪರಿಕ ಇತರೆ ಅರಣ್ಯ ವಾಸಿಗಳು ಎಂದು ಪರಿಗಣಿಸಲಾಗಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಅದರಂತೆ ಇತರೆ ಸಮುದಾಯದವರ ಒಟ್ಟು ಕುಟುಂಬಗಳ ಸಂಖ್ಯೆ ೪೭ ಆಗಿದ್ದು, ೧೮.೮% ರಷ್ಟು ಪ್ರತಿನಿಧಿಸುತ್ತದೆ.

ಸಮಗ್ರ ಕೋಷ್ಟಕದ ಅಧ್ಯಯನದ ಆಧಾರವಾಗಿ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಅಧ್ಯಯನಕ್ಕಾಗಿ ಹೆಚ್ಚು ಬುಡಕಟ್ಟು ಸಮುದಾಯಗಳನ್ನು ಅಂದರೆ, ಶೇಕಡ ೮೧.೨% ಬುಡಕಟ್ಟು ಸಮುದಾಯದ ಕುಟುಂಬಗಳನ್ನು ಮತ್ತು ೧೮.೮% ಇತರೆ ಸಮುದಾಯಗಳನ್ನು ಅಧ್ಯಾಯಿಸಿ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ. ಅರಣ್ಯ ವ್ಯಾಪ್ತಿ ಪ್ರದೇಶಗಳಲ್ಲಿ ಆದಿವಾಸಿ ಗಿರಿಜನರು ಪೂರ್ವಜರ ಕಾಲದಿಂದಲೂ ಆಶ್ರಯಿಸಿ ತಮ್ಮ ಬದುಕನ್ನು ಇಲ್ಲಿಯೇ ಕಟ್ಟಿಕೊಂಡಿದ್ದಾರೆ. ಸಣ್ಣ ಪ್ರಮಾಣದ ರೈತರಾಗಿ ತಮಗೆ ಅಗತ್ಯವಿರುವ ಸ್ಥಳದಲ್ಲಿ ಅರಣ್ಯ ಪ್ರದೇಶಗಳನ್ನು ಒತ್ತುವರಿ ಮಾಡಿಕೊಂಡು ಕೃಷಿ ಚಟುವಟಿಕೆ ಮೂಲಕ ಆರ್ಥಿಕತೆಯನ್ನು ಅವಲಂಬಿಸಿದ್ದಾರೆ. ರಾಷ್ಟ್ರೀಯ ಉದ್ಯಾನವನ ಘೋಷಣೆಯಾದ ನಂತರ ಸಣ್ಣ ಪ್ರಮಾಣದ ರೈತರಾಗಿ ಹಾಗೂ ಆದಿವಾಸಿ ಗಿರಿಜನರಾಗಿ ಗುರುತಿಸಿಕೊಂಡಿರುವ ಈ ಸಮುದಾಯಗಳು, ಯಾವ ಪರಿಯಾಗಿ ಸ್ಥಳಾಂತರ ಮತ್ತು ಪುನರ್ವಸತೀಕರಣದ ಸವಾಲುಗಳನ್ನು ಎದುರಿಸದ್ದಾರೆ ಮತ್ತು ಅವುಗಳನ್ನು ಮೀರಿ ಸರ್ಕಾರದ ವತಿಯಿಂದ ದೊರೆತಿರುವ ಪುನರ್ವಸತಿ ಪರಿಹಾರವನ್ನು ಪಡೆದುಕೊಂಡ ಕೆಲವು ಕುಟುಂಬಗಳು ಮತ್ತು ಪರಿಹಾರ ಪಡೆಯದೇ ಇರುವ ಕುಟುಂಬಗಳ ಪರಿಸ್ಥಿತಿಗಳನ್ನು ಅಧ್ಯಯಿಸಲು ಆಯ್ಕೆಯನ್ನು ಮಾಡಿಕೊಳ್ಳಲಾಗಿದೆ. ಇತರೆ ಸಮುದಾಯದವರು ಕೂಡ ಈ ವ್ಯಾಪ್ತಿಯಲ್ಲಿ ನೆಲೆ ಕಂಡುಕೊಂಡಿದ್ದು, ಇತರೆ ಸಮುದಾಯದ ಕುಟುಂಬಗಳು ಉದ್ಯಾನವನದ ಹೊರ ಭಾಗದಲ್ಲಿ ನೆಲೆಸಿ ಉದ್ಯಾನವನದ ಒಳಭಾಗದಲ್ಲಿ ಸ್ವತ್ತುಗಳನ್ನು ರಚಿಸಿಕೊಂಡು ಆದಾಯಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಇದರೊಂದಿಗೆ ದಿನ ನಿತ್ಯದ ಕೂಲಿ ಕಸುಬುಗಳ ಆಧಾರಿತವಾಗಿ ಜೀವನ ನಡೆಸುತ್ತಿರುವವರಿಗೂ ಕೆಲಸವನ್ನು ನೀಡುವವರಾಗಿದ್ದು, ರಾಷ್ಟ್ರೀಯ ಉದ್ಯಾನವನ ಘೋಷಣೆಯ ನಂತರ ಉದ್ಯಾನವನಕ್ಕೆ ಸ್ವತ್ತುಗಳನ್ನು ಬಿಟ್ಟುಕೊಟ್ಟು ಪುನರ್ವಸತೀಕರಣ ಪರಿಹಾರವನ್ನು ಪಡೆದವರು ಒಂದೆಡೆಯಾದರೆ, ಯಾವುದೇ ಕಾನೂನು ಜಾರಿಯಾದರೂ ಈ ಸ್ಥಳಗಳಿಂದ ಹೊರಹೋಗುವುದಿಲ್ಲವೆಂದು ಅಲ್ಲಿಯೇ ಉಳಿದಿರುವವರ ಸ್ಥಿತಿಗಳು ಯಾವ ರೀತಿಯಲ್ಲಿವೆ ಎಂಬ ಅಂಶಗಳನ್ನು ತಿಳಿಯುವ ಸಲುವಾಗಿ ಸಮುದಾಯಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ.

ಸಾಮಾಜಿಕ ಅಂಶಗಳು


ಮಾನವ ಸಮಾಜ ಜೀವಿ. ಆತನು ಒಂಟಿಯಾಗಿ ಜೀವಿಸಲಾರ. ಸಮಾಜದ ಸಂಪರ್ಕದ ಹೊರತು ಆತನು ಬಾಳುವುದು ಕಷ್ಟಸಾಧ್ಯ. ಆದ್ದರಿಂದ ಮಾನವ ಯಾವಾಗಲೂ ಸಾಂಘಿಕ ಜೀವಿಯಾಗಿ ಸಮಾಜದಲ್ಲಿಯೇ ಜೀವಿಸಿರುತ್ತಾನೆ. ಸಮಾಜವೆಂಬುದರ ಬಗ್ಗೆ ಅನೇಕರಲ್ಲಿ ತದೇಕವಾದ ಭಾವನೆಯಿದ್ದು, ಎಲ್ಲರ ಆಸೆ ಆಕಾಂಕ್ಷೆಗಳು ಬಹಳಮಟ್ಟಿಗೆ ಒಂದೇ ಆಗಿರುವ ಜನ ಸಮೂಹವನ್ನು ಸಮಾಜ ಎನ್ನುತ್ತೇವೆ. ಹಲವು ಸಾಮಾಜಿಕ ಸಂಬಂಧಗಳ ವ್ಯವಸ್ಥೆಯಿಂದಲೇ ಸಮಾಜವು ಅಸ್ತಿತ್ವವನ್ನು ಪಡೆದುಕೊಂಡಿದೆ. ಸಮಾಜವು ಸಾಮಾಜಿಕ ಸಂಬಂಧಗಳ ಬಲೆಯಾಗಿದೆ. ಸಾಮಾಜಿಕ ಸಂಬಂಧವೆಂದರೆ, ಜೀವಿಗಳ ನಡುವಿನ ಪರಸ್ಪರ ಅರಿವನ್ನು ಆಧರಿಸಿದ ಸಂಬಂಧ. ಅವು ತಾಯಿ–ಮಕ್ಕಳು, ತಂದೆ–ಮಕ್ಕಳು, ಪತಿ–ಪತ್ನಿ, ಗೆಳೆಯರು, ಗುರು–ಶಿಷ್ಯರು, ಹಿರಿಯರುಗಳ ನಡುವಿನ ಸಂಬಂಧವನ್ನು ಆಧರಿಸಿದೆ. ಅಂತೆಯೇ ಇವುಗಳು ಸಾಮಾಜಿಕ ಸಂಬಂಧಗಳೆನಿಸಿಕೊಳ್ಳುತ್ತವೆ. ಸಾಮಾಜಿಕ ಸಂಬಂಧಗಳು ಮಾನವನ ಒಟ್ಟಾರೆಯ ಜೀವನಕ್ಕೆ ಸಂಬಂಧಿಸಿರುತ್ತವೆ. ಅವು ಆತನ ಆರ್ಥಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ ಮೊದಲಾದ ಜೀವನದ ಎಲ್ಲಾ ಕ್ಷೇತ್ರಗಳಿಗೂ ಸಂಬಂಧಿಸಿದೆ. ಸಮಾಜವು ಹೋಲಿಕೆ ಮತ್ತು ವ್ಯತ್ಯಾಸಗಳ ಮೇಲೆ ಆಧರಿಸಿದೆ. ಜನರು ಜೊತೆಗೂಡಿ ಜೀವಿಸಿದಾಗ ಸಮಾಜವಾಗುತ್ತದೆ. ಜೊತೆಗೂಡಿ ಜೀವಿಸಲು ಮಾನಸಿಕ ಮತ್ತು ದೈಹಿಕ ಹೋಲಿಕೆಯಿದೆ. ಪ್ರಭೇದದ ಪ್ರಜ್ಞೆಯಿದೆ. 'ಗಿಡ್ಡಿಂಗ್ಸ್ ಸಮಾಜವು ಪ್ರಭೇದದ ಪ್ರಜ್ಞೆಯ ಆಧಾರದ ಮೇಲೆ ನಿಂತಿದೆ'ಎಂದು ಅಭಿಪ್ರಾಯಿಸುತ್ತಾನೆ[೨]. ಹೋಲಿಕೆ ಮತ್ತು ಪ್ರಭೇದ ಪ್ರಜ್ಞೆಗಳು ಜನರನ್ನು ಒಂದೆಡೆ ಎಳೆದು ತರುತ್ತವೆ. ಕೂಡಿ ಬಾಳುವಂತೆ ಪ್ರೇರೇಪಿಸುತ್ತವೆ. ಇವುಗಳಿಂದಾಗಿ ಜನರಲ್ಲಿ ಒಡನಾಡಿತನ, ಅನ್ಯೂನತೆ, ಸಹಕಾರ ತಾವೆಲ್ಲರೂ ಒಂದೇ ಎಂಬ ಭಾವನೆ ಬೆಳೆದು ಬರುತ್ತವೆ. ಮಾನವ ಸಮಾಜಕ್ಕೆ ಹೋಲಿಕೆ ಎಷ್ಟು ಮುಖ್ಯವೋ ವ್ಯತ್ಯಾಸವೂ ಅಷ್ಟೇ ಮುಖ್ಯವಾದದ್ದು. ವ್ಯಕ್ತಿಗಳಲ್ಲಿ ಪರಿಪೂರ್ಣ ಸ್ವಾಮ್ಯತೆ ಇದ್ದಲ್ಲಿ ವೈವಿಧ್ಯಮಯ ಸಮಾಜ ನಿರ್ಮಾಣವಾಗುತ್ತಿರಲಿಲ್ಲ. ಸೃಷ್ಟಿ ವ್ಯತ್ಯಾಸದ ಅಥವಾ ಭೇದದ ಆಗರ. ಅಂತೆಯೇ ಮಾನವ ವಯೋಮಿತಿಯಲ್ಲಿ ವ್ಯತ್ಯಾಸವನ್ನು ಕಾಣದಿದ್ದರೆ, ಆತನು ಜೀವಿತಾವಧಿಯಲ್ಲಿ ಗಳಿಸಿರುವ ಅನುಭವ, ವಿಷಯ ತಜ್ಞತೆ ಮತ್ತು ಆ ತಜ್ಞತೆಗೆ ಕಳೆದಿರುವ ಕಾಲಕ್ಕೆ ಮೌಲ್ಯವಿಲ್ಲದಂತಾಗುತ್ತಿತ್ತು. ಸಾಮಾಜಿಕ ಸಂಬಂಧಗಳಲ್ಲಿ ಹಾಗೂ ಸಾಮಾಜಿಕ ಸ್ಥಾನಮಾನಗಳ ಅನುಕ್ರಮಣಿಕೆಯಲ್ಲಿ ಹಿರಿಯರ ವಯೋಮಿತಿ ಪ್ರಮುಖವಾದಂತಹ ಸ್ಥಾನವನ್ನು ಪಡೆದುಕೊಳ್ಳುವುದು.

ಕೋಷ್ಟಕ೧೨ರಲ್ಲಿ ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರನ್ನು ವಯೋಮಿತಿ ಅನುಗುಣವಾಗಿ ಪರಿಗಣನೆಗೆ ತೆಗೆದುಕೊಂಡಿದ್ದು, ೩೬ ರಿಂದ ೫೪ ವರ್ಷ ವಯೋಮಿತಿಯ ಮದ್ಯ ವಯಸ್ಕರು ೫೪.೮% ರಷ್ಟಿರುವುದರೊಂದಿಗೆ ಅಧಿಕ ಸಂಖ್ಯೆಯಲಿದ್ದಾರೆ. ೫೫ ರಿಂದ ೭೨ ವರ್ಷ ವಯೋಮಿತಿಯ ವಯಸ್ಕರು ೩೮% ರಷ್ಟಿದ್ದಾರೆ. ೧೮ ರಿಂದ ೩೫ ವರ್ಷ ವಯೋಮಾನದ ವಯಸ್ಕರು ೪.೪%ರಷ್ಟಿದ್ದಾರೆ ಮತ್ತು ೭೩ಕ್ಕಿಂತ ಹೆಚ್ಚಿನ ವರ್ಷ ವಯೋಮಿತಿಯವರು ೨.೮%ರಷ್ಟಿದ್ದು, ಅತಿ ಕಡಿಮೆ ಸಂಖ್ಯೆಯಲ್ಲಿ ಪ್ರತಿನಿಧಿಸಿದ್ದಾರೆ.

ಕೋಷ್ಟಕ ೧೨

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರ ವಯೋಮಿತಿ ವಿವರ

ಕ್ರಸಂ	ವಯೋಮಿತಿ	ಸಮುದಾಯಗಳು								ಒಟ್ಟು	ಶೇಕಡವಾರು
		ಮರಾಠಿನಾಯ್ಕ		ಮಲೆಕುಡಿಯ		ಗೌಡಲು		ಇತರೆ			
		ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು		
೧	೧೮ ರಿಂದ ೩೫ ವರ್ಷ	೦	೨	೦	೧	೪	೩	೧	೦	೧೧	೪.೪
೨	೩೬ ರಿಂದ ೫೪ ವರ್ಷ	೪	೧	೪೨	೧೨	೪೦	೮	೨೫	೫	೧೩೭	೫೪.೮
೩	೫೫ ರಿಂದ ೭೨ ವರ್ಷ	೫	೧	೨೭	೬	೩೧	೯	೧೦	೬	೯೫	೩೮
೪	೭೩ ಕ್ಕಿಂತ ಹೆಚ್ಚು	೦	೦	೨	೧	೪	೦	೦	೦	೭	೨.೮
	ಒಟ್ಟು	೯	೪	೭೧	೨೦	೭೯	೨೦	೩೬	೧೧	೨೫೦	೧೦೦



ಗ್ರಾಫ್ ೨, ವಯೋಮಿತಿ ವಿವರ

ಗ್ರಾಫ್ ೨. ವಯೋಮಿತಿ ಅನುಸಾರವಾಗಿ ರಚಿಸಲಾಗಿದ್ದು, ೧೮ ರಿಂದ ३४ ವರ್ಷ ವಯೋಮಾನದವರು ೪% ರಷ್ಟಿದ್ದು, ಯುವ ಪೀಳಿಗೆಯನ್ನು ಪ್ರತಿನಿಧಿಸುವರಾಗಿದ್ದು, ವಿದ್ಯಾಭ್ಯಾಸ ಹಾಗೂ ಉದ್ಯೋಗಗಳನ್ನು ಅರಸಿ ಅನ್ಯ ಸ್ಥಳಗಳಿಗೆ ತೆರಳಿರುವುದು ಅಧ್ಯಯನದಲ್ಲಿ ಕಂಡು ಬಂದಿದೆ. ಶಿಕ್ಷಣಕ್ಕಾಗಿ ಮತ್ತು ಕುಟುಂಬಗಳ ಪೋಷಣೆಯ ಸಲುವಾಗಿ ಅರಣ್ಯ ಪ್ರದೇಶದ ವ್ಯಾಪ್ತಿಯಿಂದ ಬೇರೆ ಸ್ಥಳಗಳಿಗೆ ಉದ್ಯೋಗವನ್ನರಸಿ ತೆರಳಿದ್ದಾರೆ. ೩೬ ವರ್ಷದಿಂದ ೫೪ ವರ್ಷದ ಪ್ರಾಯದವರು ಮತ್ತು ೫೫ ರಿಂದ ೭೨ ವರ್ಷ ಪ್ರಾಯದವರು ಕೃಷಿ ಮೂಲ ಚಟುವಟಿಕೆಗಳನ್ನು ಆಧರಿಸಿ ಇರುವ ಸ್ಥಳಗಳಲ್ಲಿಯೇ ಕುಟುಂಬಗಳನ್ನು ನಿರ್ವಹಿಸುತ್ತಾ, ಪೂರ್ವಜರಿಂದ ಪಡೆದ ಹಾಗೂ ಅರಣ್ಯ ಪ್ರದೇಶದಲ್ಲಿ ಒತ್ತುವರಿ ಮಾಡಿಕೊಂಡು ಬಂದಿರುವ ಭೂಹಿಡುವಳಿಗಳನ್ನು ಸಂರಕ್ಷಿಸಿಕೊಂಡು ಅವಲಂಬಿತರನ್ನು ಪೋಷಿಸುವ ನಿಟ್ಟಿನಲ್ಲಿ ಅಧಿಕ ಸಂಖ್ಯೆಯಲ್ಲಿ ಕ್ರಮವಾಗಿ ೫೫% ಮತ್ತು ೩೮%ರಷ್ಟಿದ್ದಾರೆ. ಇನ್ನುಳಿದಂತೆ, ಬಹು ಪ್ರಾಯದವರಾದ ೭೩ ವರ್ಷಕ್ಕಿಂತ ಹೆಚ್ಚಿನ ವಯೋಮಾನದವರನ್ನು ಅವಲೋಕಿಸಿದಾಗ (೨.೮) ३%ರಷ್ಟಿದ್ದು, ಅರಣ್ಯ ವ್ಯಾಪ್ತಿಯ ಸಮುದಾಯಗಳ ಜೀವಿತ ಅವಧಿಯನ್ನು ಪ್ರತಿನಿಧಿಸುತ್ತಿದೆ. ಈ ಮೂಲಕ ಆದಿವಾಸಿ ಗಿರಿಜನ ಸಮುದಾಯಗಳ ವಯೋಮಾನ ಇತರೆ ಸಮುದಾಯಗಳಿಗಿಂತ ಹೆಚ್ಚಿರುವುದನ್ನು ಹಾಗೂ ಅವರ ಗರಿಷ್ಟ ಮಟ್ಟದ ಜೀವಿತಾವಧಿ ಕಾಲವನ್ನು ಅವರು ಹೊಂದಿರುವರೆಂದು ತಿಳಿಯಬಹುದು. ಒಟ್ಟಾರೆಯ ವಯೋಮಾನದ ಆರೋಹಣ ಚಲನೆಯು ಹೆಚ್ಚು ಪರಿಪಕ್ವವಾದ ಮತ್ತು ಸ್ವ ಅನುಭವಗಳ ಸಮಗ್ರ ವಿಷಯಗಳನ್ನು ಗ್ರಹಿಸಲು ಹಾಗೂ ಅಭಿಪ್ರಾಯಗಳನ್ನು ಕ್ರೋಡೀಕರಿಸಲು ಅನುವು ನೀಡುತ್ತದೆ.

ವೈವಾಹಿಕ ಸ್ಥಾನಮಾನ

ಮಾನವ ತನ್ನ ಹುಟ್ಟಿಗೆ, ಪೋಷಣೆಗೆ ಹಾಗೂ ಪ್ರಗತಿಗೆ ಹಲವಾರು ಜನರನ್ನು ಅವಲಂಬಿಸಬೇಕಾಗಿರುತ್ತದೆ. ಮಾನವರಿಗೆ ಪರಸ್ಪರ ಅವಲಂಬನೆ ಇರುವುದರಿಂದಲೇ ಸಮಾಜ ಸೃಷ್ಟಿಯಾಗಿದೆ. ಮಾನವರಿಗೆ ಪರಸ್ಪರ ಲೈಂಗಿಕ ಅವಲಂಬನೆ ಇರುವುದರಿಂದಲೇ ಕೌಟುಂಬಿಕ ಜೀವನ ಅಸ್ತಿತ್ವಕ್ಕೆ ಬಂದಿದೆ. ಈ ಮುಖಾಂತರ ಸದಸ್ಯರ ಪರಸ್ಪರ ಅವಲಂಬನೆಯಿಂದಾಗಿಯೇ ಕುಟುಂಬವು ನಿಂತಿರುತ್ತದೆ. ಕುಟುಂಬ ವ್ಯವಸ್ಥೆಯ ಮೊದಲ ಹಂತವೇ ವಿವಾಹ. ವಿವಾಹವು ಪ್ರಮುಖ ಸಾಮಾಜಿಕ ಸಂಸ್ಥೆಯಾಗಿದೆ. ವಿವಾಹವು ಕುಟುಂಬದ ಮೂಲಾಧಾರವಾಗಿದ್ದು, ಸಂಬಂಧಗಳಲ್ಲಿ ಸ್ಥಿರತೆಯನ್ನುಂಟು ಮಾಡುತ್ತದೆ. ಕೋಷ್ಟಕ೧೩ ಮಾಹಿತಿದಾರರ ವೈವಾಹಿಕ ಸ್ಥಾನಮಾನದ ಕುರಿತಾಗಿ ಮಾಹಿತಿ ಒಳಗೊಂಡಿದ್ದು, ವಿವಾಹಿತ ಮಾಹಿತಿದಾರರು ೮೮%ರಷ್ಟಿದ್ದು, ಅಧಿಕ ಸಂಖ್ಯೆಯಲ್ಲಿದ್ದಾರೆ. ವಿಧವಾ/ವಿಧುರ ಮಾಹಿತಿದಾರರು ೧೧.೬%ರಷ್ಟಿದ್ದು, ಅವಿವಾಹಿತರು ೦.೪%ರಷ್ಟನ್ನು ಪ್ರತಿನಿಧಿಸಿದ್ದಾರೆ.

ಕೋಷ್ಟಕ ೧೩

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರ ವೈವಾಹಿಕ ಸ್ಥಾನಮಾನ

ಕ್ರಸಂ	ವೈವಾಹಿಕ ಸ್ಥಾನ	ಮರಾಠಿನಾಯ್ಕ		ಮಲೆಕುಡಿಯ		ಗೌಡಲು		ಇತರೆ		ಒಟ್ಟು	ಶೇಕಡವಾರು
		ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು		
೧	ಅವಿವಾಹಿತ	೦	೦	೦	೦	೧	೦	೦	೦	೧	೦.೪
೨	ವಿವಾಹಿತ	೯	೨	೭೧	೯	೭೭	೧೨	೩೫	೫	೨೨೦	೮೮
೩	ವಿಧವಾ/ವಿಧುರ	೦	೨	೦	೧೧	೧	೮	೧	೬	೨೯	೧೧.೬
	ಒಟ್ಟು	೯	೪	೭೧	೨೦	೭೯	೨೦	೩೬	೧೧	೨೫೦	೧೦೦

ಗ್ರಾಫ್ ೩, ವೈವಾಹಿಕ ಸ್ಥಾನಮಾನ



ಗ್ರಾಫ್ ೩ರ ಅನ್ವಯ, ಅವಿವಾಹಿತರು ಮತ್ತು ವಿಧವಾ/ವಿದುರ ಶೇಕಡವಾರು ಪ್ರಮಾಣಕ್ಕಿಂತ ವಿವಾಹಿತರ ಪ್ರಮಾಣವು ಹೆಚ್ಚಿದ್ದು, ಮಲೆನಾಡು ಪ್ರಾಂತ್ಯಗಳಲ್ಲಿ ನಿರ್ದಿಷ್ಟ ವಯೋಮಿತಿಗೆ ಅನುಗುಣವಾಗಿ ಕುಟುಂಬ ನಿರ್ವಹಣಾ ಹೊಣೆಗಾರಿಕೆಯು ಸೃಜಿಸಲ್ಪಡುವುದರಿಂದ ವಿವಾಹದ ಕಾರ್ಯಗಳು ಶೀಘ್ರವಾಗಿ ನೆರವೇರಲ್ಪಟ್ಟು ಕುಟುಂಬ ವಿಸ್ತರಣಾ ಜೀವನವು ಆರಂಭವಾಗುವುದನ್ನು ಸೂಚಿಸುತ್ತದೆ. ಕುಟುಂಬ ಜೀವನದ ನಿರಂತರತೆಯಲ್ಲಿ ಅಕಾಲಿಕ ಕಾರಣಗಳಿಂದ ಸಂಗಾತಿ ಮರಣ ಹೊಂದಿದರೂ ಕುಟುಂಬ ನಿರ್ವಹಣೆಯಲ್ಲಿ ವಿಧವಾ/ಧುರ ನಿರ್ವಹಣಾ ಪಾತ್ರವನ್ನು ಗಮನಿಸಬಹುದು. ಬಹುಮುಖ್ಯವಾಗಿ ವಿವಾಹಿತರಿಂದ ವಿಧವಾ/ಧುರರ ಶೇಕಡಾವಾರು ಪ್ರಮಾಣದಲ್ಲಿ ಕುಸಿತವನ್ನು ಕಾಣಬಹುದಾಗಿದ್ದು, ವಿವಾಹದ ನಂತರದ ಸಂಗಾತಿಯೊಂದಿಗಿನ ಕೌಟುಂಬಿಕ ಜೀವನವು (೭೭%) ಹೆಚ್ಚು ಕಾಲ ಇರುವಿಕೆಯನ್ನು ಮೇಲಿನ ನಕಾಶೆ ಮುಖಾಂತರ ಗ್ರಹಿಸಬಹುದು. ವಿಧುರ ಸ್ಥಾನದಲ್ಲಿ ಕನಿಷ್ಠ ಪ್ರಮಾಣದ ಪುರುಷರನ್ನು ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರನ್ನು ಗಮನಿಸಬಹುದಾಗಿದ್ದು, ಪುರುಷರಿಗಿಂತ ಮಹಿಳೆಯರ ಜೀವಿತಾವಧಿಯು ಹೆಚ್ಚಾಗಿದೆ ಎಂದು ಅಧ್ಯಯನದಲ್ಲಿ ತಿಳಿದಿದೆ. ಮಲೆನಾಡಿನ ಭಾಗದಲ್ಲಿ ಇತ್ತೀಚಿನ ದಿನಮಾನಗಳಲ್ಲಿ ವಿದ್ಯಾಭ್ಯಾಸ ಹಾಗೂ ವೃತ್ತಿ ಅರಸಿಕೊಂಡು ಆರ್ಥಿಕ ಸದೃಡತೆಯನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಕುಟುಂಬ ಜೀವನಕ್ಕೆ ಕಾಲಿರಿಸುವವರ ಪ್ರಮಾಣವು ಕಡಿಮೆಗೊಳ್ಳುತ್ತಿದ್ದು ೦.೪%ರಷ್ಟರಲ್ಲಿ ಪ್ರತಿನಿಧಿಸುತ್ತಿದ್ದು, ಅವಿವಾಹಿತ ಮತ್ತು ವಿವಾಹಿತರ ನಡುವಿನ ಕನಿಷ್ಠ ಮಟ್ಟದ ಅಂತರವನ್ನು ಗ್ರಹಿಸಬಹುದು.

ವಸತಿ ವ್ಯವಸ್ಥೆ


ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ವಸತಿ ವ್ಯವಸ್ಥೆಯು ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿದೆ. ವಸತಿ ವ್ಯವಸ್ಥೆಗಳು ಮಾನವ ನಿರ್ವಹಿಸುವ ಕಾರ್ಯಗಳ ಆಧಾರವಾಗಿ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಆರೋಗ್ಯ ಅಂಶಗಳನ್ನು ವ್ಯಕ್ತಪಡಿಸುವಂತವುಗಳಾಗಿವೆ. ಈ ಮೂಲಕ ಸಾಮಾಜಿಕವಾಗಿ ಸಮಾಜದಲ್ಲಿ ಸ್ಥಾನಮಾನ ಮತ್ತು ತನ್ನನ್ನು ತಾನು ಗುರುತಿಸಿಕೊಳ್ಳಲು ಅನುವಾಗುವಂತೆ ವಸತಿ ವ್ಯವಸ್ಥೆಯು ಅಗತ್ಯವಾಗಿದೆ. ಕೋಷ್ಟಕಳ.೪ ಸಮುದಾಯಗಳ ಮಾಹಿತಿದಾರರು ಹೊಂದಿರುವ ಗೃಹ ವ್ಯವಸ್ಥೆಗಳ ವಿವರವುಳ್ಳದ್ದಾಗಿದ್ದು, ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಹಂಚಿನ ಮನೆ ವಸತಿ ವ್ಯವಸ್ಥೆಯನ್ನು ೭೫.೨% ರಷ್ಟು ಮಾಹಿತಿದಾರರು ಹೊಂದಿದ್ದಾರೆ. ಸರ್ಕಾರ ವ್ಯವಸ್ಥೆಯಡಿ ಕೊಡಮಾಡಲ್ಪಡುತ್ತಿರುವ ಆಶ್ರಯ ಮನೆ ವಸತಿ ವ್ಯವಸ್ಥೆಯಡಿ ೧೨.೪% ಮಾಹಿತಿದಾರರು ಹೊಂದಿದ್ದಾರೆ. ಆರ್.ಸಿ.ಸಿ (ತಾರಸಿ) ವಸತಿ ವ್ಯವಸ್ಥೆಯನ್ನು ೬% ರಷ್ಟು ಮಾಹಿತಿದಾರರು ಹೊಂದಿದ್ದಾರೆ. ಬಾಡಿಗೆ ಮನೆಗಳ ಆಶ್ರಿತವಾಗಿ ೫.೨% ರಷ್ಟು ಮಾಹಿತಿದಾರರು ಹೊಂದಿದ್ದಾರೆ. ಧಾಬಾ/ಮಾಳಿಗೆ ವಸತಿ ವ್ಯವಸ್ಥೆಯನ್ನು ೦.೮% ಮಾಹಿತಿದಾರರು ಹೊಂದಿದ್ದರೆ, ಗುಡಿಸಲು ವ್ಯವಸ್ಥೆಯನ್ನು ೦.೪% ರಷ್ಟು ಮಾಹಿತಿದಾರರು ಹೊಂದಿದ್ದಾರೆ.

ಕೋಷ್ಟಕ ೧೪

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರ ವಸತಿ ವಿವರ

ಕ್ರ.ಸಂ	ಗೃಹಗಳು	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ		
1	ಬಾಡಿಗೆ ಮನೆ	೦	೭	೫	೧	೧೩	೫.೨
2	ಆಶ್ರಯ ಮನೆ	೫	೧೦	೧೪	೨	೩೧	೧೨.೪
3	ಆರ್.ಸಿ.ಸಿ	೦	೪	೩	೮	೧೫	೬
4	ಹೆಂಚಿನ ಮನೆ	೮	೭೦	೭೪	೩೬	೧೮೮	೭೫.೨
5	ಗುಡಿಸಲು	೦	೦	೧	೦	೧	೦.೪
6	ಧಾಬಾ/ಮಾಳಿಗೆ	೦	೦	೨	೦	೨	೦.೮
	ಒಟ್ಟು	೧೩	೯೧	೯೯	೪೭	೨೫೦	೧೦೦

ಗ್ರಾಫ್ ೪, ವಸತಿ ವಿವರ



ಗ್ರಾಫ್ ೪ರ ಅನ್ವಯ, ೭೫.೨% ಉದ್ಯಾನವನ ವ್ಯಾಪ್ತಿಯಲ್ಲಿ ಹಂಚಿನ ಮನೆಗಳನ್ನು ಮಾಹಿತಿದಾರರು ಹೊಂದಿದ್ದಾರೆ. ಕಾರಣ, ವಾರ್ಷಿಕವಾಗಿ ಅಧಿಕ ಮಳೆಯನ್ನು ಪಡೆಯುವ ಪ್ರದೇಶಗಳಾದ್ದರಿಂದ ವಸತಿ ಮೇಲ್ಚಾವಣಾ ವ್ಯವಸ್ಥೆಗಳನ್ನು ಹೆಂಚುಗಳ ಬಳಕೆಯಿಂದ ಪೂರ್ಣಗೊಳಿಸಿರುತ್ತಾರೆ. ಈ ವ್ಯವಸ್ಥೆಯು ನಿರ್ಮಾಣಗೊಳಿಸಿದ ವಸತಿ ವ್ಯವಸ್ಥೆಯನ್ನು ದೀರ್ಘಕಾಲದವರೆಗೆ ಸುಸ್ಥಿತಿಯಲ್ಲಿಡುವುದರಿಂದ ಮತ್ತು ಹೆಂಚುಗಳ ಮರುಬಳಕೆಯು ಅಲ್ಪ ಆರ್ಥಿಕತೆ ವ್ಯವಸ್ಥೆಯಡಿ ಒಳ ಪಡುವುದರಿಂದ ಈ ಭಾಗದಲ್ಲಿ ಹೆಚ್ಚು ಬಳಕೆಯಲ್ಲಿದೆ. ಸರ್ಕಾರದ ಆಶ್ರಯ ವಸತಿ ಯೋಜನೆ ಅಡಿ ೧೨.೪% ಮಾಹಿತಿದಾರರು ತಮ್ಮಲ್ಲಿದ್ದ ನಿವೇಶನಗಳಿಗೆ ಸೌಲಭ್ಯವನ್ನು ಪಡೆದುಕೊಂಡು ಹೆಂಚಿನ ಮಾಡು ನಿರ್ಮಾಣ ಮಾಡಿಕೊಳ್ಳುವಿಕೆ ಮುಖಾಂತರ ಈ ಪ್ರಕಾರದ ವಸತಿ ವ್ಯವಸ್ಥೆಯನ್ನು ಪಡೆದುಕೊಂಡಿವೆ.

ಆರ್.ಸಿ.ಸಿ (ತಾರಸಿ) ವಸತಿ ವ್ಯವಸ್ಥೆಯು ೧೨.೪% ರಷ್ಟಿದ್ದು, ಈ ವ್ಯವಸ್ಥೆಯು ಮಾಹಿತಿದಾರರು ಹೊಂದಿರುವ ಆರ್ಥಿಕ ವ್ಯವಸ್ಥೆಯನ್ನು ಉಲ್ಲೇಖಿಸುತ್ತದೆ. ಉದ್ಯಾನವನ ಭಾಗದಲ್ಲಿ ಕೃಷಿ ಮತ್ತು ಇತರ ಮೂಲಗಳಿಂದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಗತಿಯನ್ನು ಹೊಂದಿರುವವರು ಈ ಪರಿಯ ವಸತಿ ವ್ಯವಸ್ಥೆಗಳನ್ನು ಹೊಂದಿದ್ದಾರೆ. ಇದರೊಂದಿಗೆ ಪುನರ್ವಸತೀಕರಣಗೊಂಡು ಕೆಲವು ಕುಟುಂಬಗಳು ದೊರೆತಿರುವ ಪರಿಹಾರದ ಮೊತ್ತದ ಅನುಸಾರವಾಗಿ ಸ್ಥಳಾಂತಗೊಂಡ ಮೇಲೆ ಈ ಪ್ರಕಾರದ ವಸತಿ ವ್ಯವಸ್ಥೆಯನ್ನು ಕಲ್ಪಿಸಿಕೊಂಡಿವೆ. ಬಾಡಿಗೆ ಮನೆ ವಸತಿ ವ್ಯವಸ್ಥೆಯಡಿ ೫.೨% ಪುನರ್ವಸತಿ ಹೊಂದಿರುವ ಸಮುದಾಯಗಳು ಸ್ಥಳಾಂತರಗೊಂಡ ಪ್ರದೇಶದಲ್ಲಿ ತಾತ್ಕಾಲಿಕವಾಗಿ ಈ ವ್ಯವಸ್ಥೆಗಳನ್ನು ಕಲ್ಪಿಸಿಕೊಂಡಿವೆ. ಧಾಬಾ/ಮಾಳಿಗೆ ವಸತಿ ಮತ್ತು ಗುಡಿಸಲು ವ್ಯವಸ್ಥೆಯಡಿ ೦.೮% ಮತ್ತು ೦.೪% ಮಾಹಿತಿದಾರರಿದ್ದು, ತಮ್ಮಲ್ಲಿರುವ ಆರ್ಥಿಕ ವ್ಯವಸ್ಥೆಗಳಿಗೆ ಅನುಗುಣವಾಗಿ ಈ ವಸತಿ ವ್ಯವಸ್ಥೆಗಳನ್ನು ಒಳಗೊಂಡಿದ್ದಾರೆ. ಒಂದು ಹಂತದಲ್ಲಿ ಸರ್ಕಾರದ ವತಿಯಿಂದ ವಸತಿ ಯೋಜನಾ ವ್ಯವಸ್ಥೆಗಳಿದ್ದರು ಸಹ, ಅವುಗಳನ್ನು ಪಡೆದುಕೊಳ್ಳಲು ಇವರ ಬಳಿ ಸಮರ್ಪಕವಾದ

ದಾಖಲೆಗಳಿಲ್ಲದಿರುವುದು ಕಂಡುಬಂದಿದೆ. ಇದರೊಂದಿಗೆ ಬಗರ್ ಹುಕುಂ ಸಾಗುವಳಿ ವ್ಯವಸ್ಥೆಯಡಿ ಸರ್ಕಾರವು ಅರಣ್ಯ ಹಕ್ಕು ಪತ್ರವನ್ನು ಇಲ್ಲಿಯವರೆಗೂ ಇವರಿಗೆ ನೀಡದಿರುವುದು ಪ್ರಶ್ನಾರ್ಹವಾಗಿಯೇ ಉಳಿದಿದೆ.

ಜನಸಂಖ್ಯೆ

ಜನಸಂಖ್ಯೆಯು ಒಂದು ದೇಶದ ಸಂಪನ್ಮೂಲವಾಗಿದೆ. ದೇಶದ ಸಮಗ್ರ ಅಭಿವೃದ್ಧಿಯು ಅಲ್ಲಿನ ಜನಸಂಖ್ಯೆಯ ಕೊಡುಗೆಗಳನ್ನು ಆಧರಿಸಿದೆ. ಜನಸಂಖ್ಯೆಯು ಬಳಸಿಕೊಳ್ಳುವ ಸಂಪನ್ಮೂಲಗಳ ಆಧಾರಿತವಾಗಿ ಅವುಗಳ ಅವಲಂಬನೆಯನ್ನು ವಿಶ್ಲೇಷಿಸಲಾಗುತ್ತದೆ. ಅವಲಂಬನೆಯು ಬೇಡಿಕೆ ಮತ್ತು ಪೂರೈಕೆ ಸಿದ್ಧಾಂತದ ಅನುಗುಣವಾಗಿ ಏರ್ಪಡುವಂತದ್ದಾಗಿದೆ. ಈ ನಿಟ್ಟಿನಲ್ಲಿ ಬೇಡಿಕೆ ಮತ್ತು ಪೂರೈಕೆ ಜನಸಂಖ್ಯೆಯ ಸ್ಥಿತಿಸ್ಥಾಪಕತ್ವವನ್ನು ಹೊಂದಿದೆ. ಜನಸಂಖ್ಯೆಯ ಕುರಿತಾಗಿ ಹಲವಾರು ಅಧ್ಯಯನ ಕ್ರಮಗಳು ಜಾರಿಯಲ್ಲಿದ್ದು, ವೈಜ್ಞಾನಿಕ ಅಧ್ಯಯನದ ಮುಖಾಂತರ ಅವುಗಳಲ್ಲಿ ಲಿಂಗಾನುಪಾತದ ಜನಸಂಖ್ಯೆಯ ಮಟ್ಟವನ್ನು ತಿಳಿಯಲು ಸಾಧ್ಯವಿದೆ. ಜನಸಂಖ್ಯಾ ಅನುಪಾತ ಅಧ್ಯಯನದಲ್ಲಿ ಕಂಡುಬರುವ ವ್ಯತ್ಯಾಸದ ಮುಖಾಂತರ ಅವುಗಳ ಬೆಳವಣಿಗೆಗಳು ಮತ್ತು ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ರೂಪಿಸಲು ಸ್ಥಳೀಯ ಮಟ್ಟದ ಸರ್ಕಾರಗಳಿಗೆ ಅಂಕಿ ಅಂಶಗಳ ಅಗತ್ಯತೆ ಅನಿವಾರ್ಯ. ಸಂಶೋಧನಾ ದೃಷ್ಟಿಯಿಂದ ಆಯ್ಕೆ ಮಾಡಿಕೊಂಡ ವ್ಯಾಪ್ತಿಯ ಅನುಸಾರವಾಗಿ ಕೋಷ್ಟಕ೪.೫ರಲ್ಲಿ ಕುಟುಂಬಗಳ ಜನಸಂಖ್ಯಾ ಮಾಹಿತಿಯನ್ನು ಮತ್ತು ಲಿಂಗಾನುಪಾತದ ವ್ಯತ್ಯಾಸಗಳನ್ನು ಶೇಕಡವಾರು ಪ್ರಮಾಣದಲ್ಲಿ ವಿವರಿಸಲಾಗಿದೆ.


ಕೋಷ್ಟಕ೧೫ರಲ್ಲಿ ಅಧ್ಯಯನಕ್ಕೊಳಪಟ್ಟ ಕುಟುಂಬಗಳ ಒಟ್ಟು ಜನಸಂಖ್ಯಾ ವಿವರಗಳನ್ನು ನೀಡಿದ್ದು, ಒಟ್ಟು ಕುಟುಂಬಗಳ ಆಧಾರಿತವಾಗಿ ೧೨೫೭ ಜನಸಂಖ್ಯೆಗೆ ಪುರುಷರು ೪೮.೫೩ ಪ್ರತಿಶತ ಹಾಗೂ ಮಹಿಳೆಯರು ೫೧.೪೭ ಪ್ರತಿಶತ ರಷ್ಟಿದ್ದಾರೆ. ಅದರಲ್ಲಿ ೧೯ ರಿಂದ ೩೪ ವರ್ಷದ ಲಿಂಗಾನುಪಾತದಲ್ಲಿ ಯುವ ಸಮುದಾಯದ ಗಂಡು ೩೧.೯೭% ಮತ್ತು ಹೆಣ್ಣು ೩೦.೪೫%ರಷ್ಟಿದ್ದು, ಒಟ್ಟು ೩೧.೧೯%ರಷ್ಟು ಪ್ರತಿನಿಧಿಸಿದ್ದಾರೆ. ೩೫ ರಿಂದ ೫೪ ವರ್ಷದ ಲಿಂಗಾನುಪಾತದಲ್ಲಿ ಮಧ್ಯಮ ವಯಸ್ಸಿನ ಗಂಡು ೨೯.೫೧%, ಹೆಣ್ಣು ೨೮.೧೩% ರಷ್ಟಿದ್ದು, ಒಟ್ಟು ೨೮.೮೦% ರಷ್ಟು ಪ್ರತಿನಿಧಿಸಿದ್ದಾರೆ. ೭ ರಿಂದ ೧೮ ವರ್ಷದ ಪ್ರಶಿಕ್ಷಣ ಲಿಂಗಾನುಪಾತದಲ್ಲಿ ಗಂಡು ೨೨.೧೩ %, ಹೆಣ್ಣು ೨೧.೧೭%ರಷ್ಟಿದ್ದು, ಒಟ್ಟು ೨೧.೬೪%ರಷ್ಟು ಪ್ರತಿನಿಧಿಸಿದ್ದಾರೆ. ೫೫ ಕ್ಕಿಂತ ಹೆಚ್ಚಿನ ವಯೋಮಾನದ ಲಿಂಗಾನುಪಾತದಲ್ಲಿ ಗಂಡು ೧೧.೪೭%, ಹೆಣ್ಣು ೧೪.೮೪ರಷ್ಟಿದ್ದು, ಒಟ್ಟು ೨೬.೩೧% ರಷ್ಟು ಪ್ರತಿನಿಧಿಸಿದ್ದಾರೆ. ನವಜಾತ ಶಿಶುಗಳನ್ನು ೦ (ಹುಟ್ಟಿದ ಗಳಿಗೆ) ಇಂದ ಪರಿಗಣಿಸಿ ೬ ವರ್ಷದ ಲಿಂಗಾನುಪಾತದಲ್ಲಿ ಗಂಡು ೪.೯೨%, ಹೆಣ್ಣು ೫.೪೧% ರಷ್ಟಿದ್ದು, ಒಟ್ಟು ೫.೧೭% ರಷ್ಟು ಪ್ರತಿನಿಧಿಸಿದ್ದಾರೆ. ೭೩ ಕ್ಕಿಂತ ಹೆಚ್ಚಿನ ವಯೋಮಾನದವರು ಗಂಡು ೧.೪೮%, ಹೆಣ್ಣು ೧.೮೫% ರಷ್ಟಿದ್ದು, ಒಟ್ಟು ೧.೬೭% ಪ್ರತಿನಿಧಿಸಿದ್ದಾರೆ.

ಕೋಷ್ಟಕ ೧೫

ಅಧ್ಯಯನಕ್ಕೊಳಪಟ್ಟ ಕುಟುಂಬಗಳ ಒಟ್ಟು ಜನಸಂಖ್ಯೆ

ಕ್ರಸಂ	ವಯೋಗುಂಪು	ಲಿಂಗ			ಲಿಂಗಾನುಪಾತ		ಒಟ್ಟು
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	
೧	೦ ರಿಂದ ೬ ವರ್ಷ	೩೦	೩೫	೬೫	೪.೯೨	೫.೪೧	೫.೧೭
೨	೭ ರಿಂದ ೧೮ ವರ್ಷ	೧೩೫	೧೩೭	೨೭೨	೨೨.೧೩	೨೧.೧೭	೨೧.೬೪
೩	೧೯ ರಿಂದ ೩೪ ವರ್ಷ	೧೯೫	೧೯೭	೩೯೨	೩೧.೯೭	೩೦.೪೫	೩೧.೧೯
೪	೩೫ ರಿಂದ ೫೪ ವರ್ಷ	೧೮೦	೧೮೨	೩೬೨	೨೯.೫೧	೨೮.೧೩	೨೮.೮
೫	೫೫ ಕ್ಕಿಂತ ಹೆಚ್ಚಿನ ವಯೋಮಾನದವರು	೭೦	೯೬	೧೬೬	೧೧.೪೭	೧೪.೮೪	೧೩.೨೧
	ಒಟ್ಟು	೬೧೦	೬೪೭	೧೨೫೭	೪೮.೫೩	೫೧.೪೭	೧೦೦

ಗ್ರಾಫ್ ೫, ಕುಟುಂಬಗಳ ಜನಸಂಖ್ಯಾ



ಗ್ರಾಫ್ ೫ರ ಅನ್ವಯ, ಲಿಂಗಾನುಪಾತವನ್ನು ಗಮನಿಸಿದರೆ, ಹೆಣ್ಣು ಮಕ್ಕಳ ಜನಸಂಖ್ಯೆಯು ೦ ರಿಂದ ೬, ೩೫ ರಿಂದ ೫೪ ಮತ್ತು ೭೩ ಕ್ಕಿಂತ ಹೆಚ್ಚಿನ ವಯೋಮಾನ ಗುಂಪುಗಳಲ್ಲಿ ಏರಿಕೆಯನ್ನು ಕಂಡಿದೆ. ಇದು ಹೆಣ್ಣು ಲಿಂಗಾನುಪಾತವನ್ನು ಹುಟ್ಟು, ಮಧ್ಯಾಂತರ ಮತ್ತು ಅಂತ್ಯ ಜೀವನದಲ್ಲಿ ಹೆಚ್ಚು ಕಾಲದ ಜೀವಿತಾವಧಿಯನ್ನು ಉಲ್ಲೇಖಿಸುತ್ತದೆ.

೭ ರಿಂದ ೧೮, ೧೯ರಿಂದ ೩೪ ಮತ್ತು ೩೫ ರಿಂದ ೫೪ ವರ್ಷಗಳ ವಯೋಮಾನದಲ್ಲಿ ಹೆಣ್ಣು ವಿವಾಹವಾಗುವಿಕೆ, ಶಿಕ್ಷಣಕ್ಕೆ ವಲಸೆ ಹೋಗುವಿಕೆ ಮತ್ತು ಅಕಾಲಿಕ ಮರಣದಂತಹ ಸ್ಥಿತಿಗಳನ್ನು ಗಮನಿಸಬಹುದಾಗಿದ್ದು, ಅಲ್ಪ ಮಟ್ಟಿನ ಕ್ಷೀಣಿಸುವಿಕೆಯನ್ನು ಕಾಣಬಹುದಾಗಿದೆ.

ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಯ ವಯೋಮಾನದವರಾದ ೭ ರಿಂದ ೧೯ ವರ್ಷ ವಯೋಮಾನದವರು ಶಿಕ್ಷಣ ಪಡೆಯುವರಾಗಿದ್ದು, ಕುಟುಂಬದ ಉತ್ಪಾದಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವವರಾಗಿದ್ದಾರೆ.

೧೯ ರಿಂದ ೩೪ ೩೫ ರಿಂದ ೫೪ ಮತ್ತು ೫೫ ರಿಂದ ೭೨ ವರ್ಷ ವಯೋಮಾನವದವರು ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ ಮತ್ತು ಕುಟುಂಬ ಹಾಗೂ ಆರ್ಥಿಕ ನಿರ್ವಹಣಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ವಯೋಮಾನದಲ್ಲಿ ಮಹಿಳೆಯರು ಕೂಡ ಉತ್ಪಾದಕ ಮತ್ತು ಕುಟುಂಬ ನಿರ್ವಹಣಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ.

೫೫ ಹೆಚ್ಚಿನ ವಯೋಮಾನದ ಆದಿವಾಸಿಗಳು ಮತ್ತು ಇತರೆ ಸಮುದಾಯದವರು ಸಾಮಾಜಿಕ-ಸಾಂಸ್ಕೃತಿಕ ಅಂಶಗಳನ್ನು ಉಳಿಸಿ ಬೆಳಸಿಕೊಂಡು ಬಂದವರಾಗಿದ್ದಾರೆ. ಈ ವಯೋಮಾನದವರು ತಮ್ಮ ಸಮುದಾಯಗಳಿಗೆ ಸಾಮಾಜಿಕ ಸಂಘಟನೆಗಳನ್ನು ಹಾಗೂ ಸಾಂಸ್ಕೃತಿಕ ಅಂಶಗಳನ್ನು ಬೆಳೆಸಿಕೊಂಡು ಹೋಗುವೆಡೆ ನಿರ್ದೇಶಿಸುವಂತಹ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಒಂದು ವೇಳೆ ಈ ವಯೋಮಾನದವರು ಅರಣ್ಯ ಪ್ರದೇಶಗಳನ್ನು ತೊರೆದು ಸ್ಥಳಾಂತರ ಹೊಂದಿದಲ್ಲಿ ಮುಂಬರುವ ಪೀಳಿಗೆಗಳಿಗೆ ಅರಣ್ಯ ಮತ್ತು ಅವರು ಕಂಡ ಪೂರ್ವಜರ ಸಂಸ್ಕೃತಿ ಪದ್ಧತಿಗಳನ್ನು ತಿಳಿಸಿಕೊಡುವೆಡೆ ಕಷ್ಟಸಾಧ್ಯವಾಗುವುದರಲ್ಲಿ ಸಂದೇಹವಿಲ್ಲ.

ಶೈಕ್ಷಣಿಕ ಸ್ಥಾನಮಾನಗಳು

ಶಿಕ್ಷಣವು ಮಾನವನನ್ನು ಅಜ್ಞಾನದಿಂದ ಜ್ಞಾನದೆಡೆಗೆ ಕೊಂಡೊಯ್ಯುವ ದಾರಿದೀಪವಾಗಿದೆ. ವ್ಯಕ್ತಿತ್ವದ ವಿಕಸನಕ್ಕೆ ಶಿಕ್ಷಣ ಮೂಲಭೂತವಾದ ತಳಪಾಯವನ್ನು ನಿರ್ಮಿಸುತ್ತದೆ. ಅಲ್ಲದೆ ಶಿಕ್ಷಣವು ವ್ಯಕ್ತಿಯ ಸಂಕೀರ್ಣ ವ್ಯಕ್ತಿತ್ವದ ವಿಕಾಸಕ್ಕೆ ಪ್ರಯತ್ನಿಸುತ್ತದೆ. ಶಿಕ್ಷಣವು ಮಾನವನಲ್ಲಿ ಅಂತರ್ಗತವಾಗಿರುವ ಶಕ್ತಿಯನ್ನು ಉದ್ದೀಪಿಸುವುದಲ್ಲದೆ ವ್ಯಕ್ತಿಯು ಪರಿಸರಕ್ಕೆ ಹೊಂದಿಕೊಳ್ಳುವ, ಪರಿಸರವನ್ನು ರೂಪಿಸುವ ಹಾಗೂ ನಿಯಂತ್ರಿಸುವ ಸಾಮರ್ಥ್ಯಕ್ಕೂ ಸಾಧನವಾಗುತ್ತದೆ. ಶಿಕ್ಷಣವು ಮಗುವು ಬೆಳೆದಂತೆಲ್ಲ ತಾನಿರುವ ಸಮಾಜದೊಡನೆ ತನ್ನನ್ನು ತಾನು ಗುರುತಿಸಿಕೊಳ್ಳುವತ್ತ, ಸ್ವತಂತ್ರ ವ್ಯಕ್ತಿತ್ವವನ್ನು ಉಳಿಸಿಕೊಂಡು ಸಮಾಜದಲ್ಲಿ ಬೆರೆತು ಒಂದಾಗುವತ್ತಾ ಸಮಾಜದೊಡನೆ ಅರ್ಥಪೂರ್ಣವಾದ ಸಂಬಂಧವನ್ನು ಉಳಿಸಿಕೊಳ್ಳುವ ಬಗೆಗೆ ಅರಿವು ಮೂಡಿಸುವತ್ತ, ಹತ್ತಿರದ ಅಥವಾ ಸಮಾಜದೊಡನೆ ಸಂಬಂಧವಿರಿಸಿಕೊಂಡು ಸಮಾಜದ ಪ್ರಗತಿಗೆ ಪೂರಕವಾಗುವುದು. ಸಮಾಜದಲ್ಲಿ ಅನೇಕ ಬಗೆಯ ಕಾರ್ಯ ನಿರ್ವಹಿಸಲು ಶಿಕ್ಷಣ ವ್ಯವಸ್ಥೆಯು ವ್ಯಕ್ತಿಯನ್ನು ಚಾಲನೆಗೊಳಿಸುವ, ಸಜ್ಜುಗೊಳಿಸುವ ಹಾಗೂ ನಿಯಮಿಸುವ ಕಾರ್ಯವನು ್ನವಹಿಸುತ್ತದೆ. ಶಿಕ್ಷಣದ ಪ್ರಮುಖವಾದ ಕಾರ್ಯವೆಂದರೆ, ಯುವಪೀಳಿಗೆಯನ್ನು ಕ್ರಮಬದ್ಧವಾಗಿ ಸಾಮಾಜೀಕರಣಗೊಳಿಸುವುದು. ಸಮಾಜಿಕ ಜೀವನಕ್ಕೆ ಇನ್ನೂ ಸಿದ್ಧವಾಗಿರದ ಪೀಳಿಗೆಯ ಮೇಲೆ ವಯಸ್ಕರು ಬೀರುವ ಪ್ರಭಾವದ ಒಂದು ಪ್ರಕ್ರಿಯೆಯಾಗಿದೆ. ಈ ಮೂಲಕ ಸಮಾಜವು ಅಪೇಕ್ಷಿಸುವ ಹಾಗೂ ವ್ಯಕ್ತಿಯಾಗಿ ಜೀವಿಸಲು ಅಗತ್ಯವಾದ ಸ್ವಂತಿಕೆಯನ್ನು ಉಳಿಸಿಕೊಂಡು ದೈಹಿಕ, ಬೌದ್ಧಿಕ ಹಾಗೂ ನೈತಿಕ ವಿಚಾರಗಳ ಬಗ್ಗೆ ಮಗುವಿನಲ್ಲಿ ಆಸಕ್ತಿ ಮತ್ತು ಅರಿವು ಹುಟ್ಟಿಸುವುದು ಹಾಗೂ ವಿಚಾರಗಳ ಬೆಳವಣಿಗೆಯನ್ನು ಪೋಷಿಸುವುದೇ ಆಗಿದೆ. ಭಾರತವು ಗ್ರಾಮೀಣ ಪ್ರದೇಶಗಳ ಸಮೂಹದಿಂದ ಕೂಡಿದ ನಾಡಾಗಿದ್ದು, ಸ್ವತಂತ್ರದ ನಂತರ ಶಿಕ್ಷಣ ಕ್ಷೇತ್ರಕ್ಕೆ ಪ್ರಮುಖವಾದ ಒತ್ತನ್ನು ನೀಡುವುದರ ಮುಖಾಂತರ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಕಂಡುಕೊಂಡು ಅನುಷ್ಠಾನಗೊಳಿಸುವ ಮೂಲಕ ಭಾರತೀಯರನ್ನು ಸಾಕ್ಷರರನ್ನಾಗಿಸುವೆಡೆ ಸಾಕಷ್ಟು ಶ್ರಮವನ್ನು ವಿನಿಯೋಗಿಸಿದೆ. ಈ ನಿಟ್ಟಿನಲ್ಲಿ ಸಾಕ್ಷರತಾ ಆಂದೋಲನ, ರಾತ್ರಿ ಶಾಲೆಗಳು, ವಯಸ್ಕರ ಶಾಲೆಗಳು, ಹೆಣ್ಣು ಮಕ್ಕಳಿಗಾಗಿ ಉಚಿತ ಶಿಕ್ಷಣ, ವಿದ್ಯಾರ್ಥಿ ವೇತನದ ಮುಖಾಂತರ ಶಾಲಾ ದಾಖಲಾತಿಗಳನ್ನು ಹೆಚ್ಚಿಸುವ ಪ್ರಕ್ರಿಯೆಗಳಿಗೆ ಚಾಲನೆಯನ್ನು ನೀಡುವುದರೊಂದಿಗೆ ಅವುಗಳು ಫಲಕಾರಿಯಾಗಲು ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ ಮರು ಶಾಲೆಗೆ ದಾಖಲು ಮಾಡುವ ಯೋಜನೆಗಳನ್ನು ಹಮ್ಮಿಕೊಂಡು ಗ್ರಾಮೀಣ ಭಾಗದ ಮಕ್ಕಳಿಗೆ ಶಿಕ್ಷಣ ಪೂರೈಸುವಿಕೆಗೆ ಶ್ರಮ ವಹಿಸಿದೆ. ಈ ರೀತಿಯ ವ್ಯವಸ್ಥೆಗಳಿದ್ದಾಗ್ಯೂ ಕೂಡ ಅರಣ್ಯ ವ್ಯಾಪ್ತಿಯ ಪ್ರದೇಶಗಳು ಇಂದಿಗೂ ಕೆಲವು ಮೂಲಭೂತ ಸೌಕರ್ಯಗಳ ಸೌಲಭ್ಯಗಳಿಂದ ವಂಚಿತವಾಗಿರುವುದು ಹಲವು ನಿದರ್ಶನಗಳಲ್ಲಿ ಸಾಬೀತಾಗಿದೆ. ಬಹುತೇಕ ಅರಣ್ಯ ವ್ಯಾಪ್ತಿಯ ಹಳ್ಳಿಗಳಲ್ಲಿ ಶಿಕ್ಷಣ ಸೌಲಭ್ಯಗಳು ಕ್ರಮಬದ್ಧವಾಗಿ ಸಿಗದೆ ಮಕ್ಕಳು ಇಂದಿಗೂ ಶಾಲೆಯಿಂದ ಹೊರಗುಳಿಯುವ ಸನ್ನಿವೇಶಗಳು ಅಲ್ಲಲ್ಲಿಯೇ ಬೆಳಕಿಗೆ ಬಂದಿವೆ.

ಕೋಷ್ಟಕ ೧೬


ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರ ಶೈಕ್ಷಣಿಕ ಸ್ಥಾನಮಾನ

ಕ್ರಸಂ	ಶಿಕ್ಷಣ	ಸಮುದಾಯಗಳು								ಒಟ್ಟು	ಶೇಕಡವಾರು
		ಮರಾಠಿನಾಯ್ಕ		ಮಲೆಕುಡಿಯ		ಗೌಡಲು		ಇತರೆ			
		ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು		
೧	ಅನಕ್ಷರಸ್ಥರು	೨	೦	೨೯	೧೧	೨೯	೧೩	೯	೭	೧೦೦	೪೦
೨	ಪ್ರಾಥಮಿಕ ಶಿಕ್ಷಣ	೬	೩	೧೯	೫	೩೧	೨	೫	೩	೭೪	೨೯.೬
೩	ಮಾಧ್ಯಮಿಕ ಶಿಕ್ಷಣ	೧	೦	೧೪	೪	೧೩	೨	೧೦	೦	೪೪	೧೭.೬
೪	ಪ್ರೌಢ ಶಿಕ್ಷಣ	೦	೧	೮	೦	೪	೩	೫	೧	೨೨	೮.೮
೫	ಪದವಿ ಪೂರ್ವ	೦	೦	೧	೦	೧	೦	೫	೦	೭	೨.೮
೬	ಸ್ನಾತಕ ಪದವಿ	೦	೦	೦	೦	೦	೦	೨	೦	೨	೦.೮
೭	ಸ್ನಾತಕೋತ್ತರ ಪದವಿ	೦	೦	೦	೦	೧	೦	೦	೦	೧	೦.೪
	ಒಟ್ಟು	೯	೪	೭೧	೨೦	೭೯	೨೦	೩೬	೧೧	೨೫೦	೧೦೦

ಕೋಷ್ಟಕ೧೬ರ ಅನ್ವಯ ಕ್ಷೇತ್ರಾಧ್ಯಯನದಲ್ಲಿ ಕಂಡುಕೊಂಡ ಹಾಗೆ ಅನಕ್ಷರಸ್ಥರು ೪೦% ಪ್ರತಿನಿಧಿಸುವುದರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಪ್ರಾಥಮಿಕ ಮೂಲ ಶಿಕ್ಷಣ ಪಡೆದವರು ೨೯.೬% ಪ್ರತಿನಿಧಿಸುತ್ತಿದ್ದಾರೆ. ಮಾಧ್ಯಮಿಕ ಶಿಕ್ಷಣವನ್ನು ಪಡೆದವರು ೧೭.೬% ಪ್ರತಿನಿಧಿಸುತ್ತಿದ್ದಾರೆ. ಪ್ರೌಢ ಶಿಕ್ಷಣ ಪಡೆದವರು ೮.೮% ಪ್ರತಿನಿಧಿಸಿದ್ದಾರೆ. ಪದವಿ ಪೂರ್ವ ಶಿಕ್ಷಣ ಪಡೆದವರು ೨.೮% ಪ್ರತಿನಿಧಿಸಿದ್ದಾರೆ. ಸ್ನಾತಕ ಪದವಿಯನ್ನು ಪಡೆದವರು ೦.೮% ಪ್ರತಿನಿಧಿಸಿದ್ದಾರೆ ಮತ್ತು ಸ್ನಾತಕೋತ್ತರ ಪದವಿಯನ್ನು ಪಡೆದವರು ೦.೪% ಪ್ರತಿನಿಧಿಸಿದ್ದಾರೆ.

ಗ್ರಾಫ್ ೬. ಮಾಹಿತಿದಾರರು ಹೊಂದಿರುವ ಶೈಕ್ಷಣಿಕ ಸಾಕ್ಷರ ಮಟ್ಟವನ್ನು ಪ್ರದರ್ಶಿಸುತ್ತಿದ್ದು, ಅನಕ್ಷರಸ್ಥರೇ ಈ ವ್ಯಾಪ್ತಿಯಲ್ಲಿ ಹೆಚ್ಚಾಗಿರುವುದನ್ನು ದೃಢಪಡಿಸುತ್ತಿದೆ. ೪೦% ಮಾಹಿತಿದಾರರು ಅನಕ್ಷರಸ್ಥರಾಗಿ ಪ್ರತಿನಿಧಿಸುತ್ತಿದ್ದಾರೆ. ಒಟ್ಟಾರೆಯ ನಕಾಶೆಯನ್ನು ಗ್ರಹಿಸುವುದಾದರೆ, ಅನಕ್ಷರಸ್ಥರೇ ಹೆಚ್ಚಾಗಿದ್ದು ಸ್ನಾತಕೋತ್ತರ ಪದವಿಯನ್ನು ಪಡೆದವರ ಕಡೆ ಹೊರ ಹೊಮ್ಮಿರುವ ರೇಖೆಯು

ಗ್ರಾಫ್ ೬. ಮಾಹಿತಿದಾರರು ಹೊಂದಿರುವ ಶೈಕ್ಷಣಿಕ ಸ್ಥಾನಮಾನ



ನಿರಂತರ ಕ್ಷೀಣಿಸುವಿಕೆಯನ್ನು ಪ್ರವಹಿಸುತ್ತಿದೆ. ಪ್ರತಿ ಶೈಕ್ಷಣಿಕ ಹಂತದಲ್ಲೂ ರೇಖೆ ಕೆಳ ಮುಖವಾಗಿ ಚಲನೆ ಹೊಂದಿರುವುದನ್ನು ನೋಡಬಹುದು. ಕಾರಣ, ಅರಣ್ಯ ವ್ಯಾಪ್ತಿಯ ಪ್ರದೇಶಗಳಾದ್ದರಿಂದ ಸಾಕಷ್ಟು ಮಳೆಯನ್ನು ಆಕರ್ಷಿಸುವ ದಟ್ಟಾರಣ್ಯಗಳ ಮಧ್ಯದಲ್ಲಿ ಜನರು ನೆಲೆಗಳನ್ನು ಕಂಡುಕೊಂಡಿದ್ದಾರೆ. ಮಳೆಗಾಲ ಆರಂಭವಾದರೆ, ಅವರು ನೆಲೆಸಿರುವ ಪ್ರದೇಶಗಳು ನಡುಗಡ್ಡೆಯಾಗಿ ಪರಿಣಮಿಸುವ ಕಾರಣದಿಂದ ಶಾಲೆಗಳಿಗೆ ತೆರಳುವುದು ಕಷ್ಟಸಾಧ್ಯವಾಗಿದೆ.ಅರಣ್ಯ ಪ್ರಾಂತ್ಯದಲ್ಲಿ ಶಾಲೆಗಳು ತೆರೆದಿದ್ದರೂ ಶಾಲೆಗಳಿಗೆ ಸರಿಯಾದ ಸಿಬ್ಬಂದಿ ವರ್ಗದವರನ್ನು ನಿಯೋಜಿಸದಿರುವುದು ಕೂಡ ಕಾರಣವಾಗಿದೆ.ಈ ವ್ಯಾಪ್ತಿಯ ಸಮುದಾಯಗಳು ಸಣ್ಣ ಪ್ರಮಾಣದ ರೈತರಾಗಿರುವುದರಿಂದ ಉನ್ನತ ಶಿಕ್ಷಣ ಕಲಿಕೆಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡದೆ, ತಮಗೆ ಲಭ್ಯವಿರುವ ಭೂ ಹಿಡುವಳಿಗಳ ಆಧಾರವಾಗಿ ದೊರೆಯುವ ಆರ್ಥಿಕ ಅಂಶಗಳನ್ನು ಬಳಸಿಕೊಂಡು ಅಲ್ಪ ಪ್ರಮಾಣದ ಶಿಕ್ಷಣವನ್ನು ಪಡೆದಿದ್ದಾರೆ. ಶಿಕ್ಷಣಕ್ಕಾಗಿ ದೂರದ ಸ್ಥಳಗಳಿಗೆ ತೆರಳಿ ಅಧ್ಯಯಿಸಲು



ಆರ್ಥಿಕತೆಯ ಲಭ್ಯತೆ ಕಡಿಮೆ ಇರುವುದರಿಂದ ಹೆಚ್ಚು ಜನರು ಶಾಲೆಯಿಂದ ಹೊರಗುಳಿದ ಪ್ರಸಂಗಗಳೇ ಅಧಿಕವಾಗಿದೆ.

ಈಗಾಗಲೇ ಸಾಕಷ್ಟು ಕುಟುಂಬಗಳು ಸ್ಥಳಾಂತರ ಹೊಂದಿ ಹೊರ ಪ್ರಪಂಚದಲ್ಲಿ ಬದುಕನ್ನು ಕಟ್ಟಿಕೊಳ್ಳುವಲ್ಲಿ ಹರ ಸಾಹಸವನ್ನು ಪಡುತ್ತಿದ್ದಾರೆ. ಇನ್ನುಳಿದ ಸಮುದಾಯದ ಕುಟುಂಬಗಳು ಸ್ಥಳಾಂತರಗೊಂಡರೆ, ಪಡೆದಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಹೊರ ಪ್ರಪಂಚದಲ್ಲಿ ಬದುಕು ಕಟ್ಟಿಕೊಳ್ಳುವುದು ಕಷ್ಟಸಾಧ್ಯವಾಗುತ್ತದೆ.

ಆರ್ಥಿಕ ಅಂಶಗಳು

ಒಂದು ದೇಶದ ಅಭಿವೃದ್ಧಿ ಮತ್ತು ಬೆಳವಣಿಗೆಗಳು, ಅಲ್ಲಿ ಅನುಸರಿಸಿರುವ ಆರ್ಥಿಕ ಚಟುವಟಿಕೆಗಳ ಮೇಲೆ ಅವಲಂಬಿತವಾಗಿರುತ್ತದೆ. ಆರ್ಥಿಕ ಚಟುವಟಿಕೆಗಳು ಬೇಡಿಕೆ, ಪೂರೈಕೆ, ಅನುಭೋಗ, ಉತ್ಪಾದನೆ, ಮಾರುಕಟ್ಟೆ ಮತ್ತು ಉದ್ಯೋಗಗಳನ್ನು ಆಧರಿಸಿವೆ. ಇದು ಮಾನವನ ಸಮಗ್ರ ಚಟುವಟಿಕೆಗಳ ಭಾಗವಾಗಿದ್ದು ಆರ್ಥಿಕ ಅಂಶಗಳನ್ನು ಪ್ರತಿನಿಧಿಸುತ್ತದೆ. ಮಾನವ ಆರ್ಥಿಕತೆಯನ್ನು 'ಸಂಪತ್ತಿ'ನ ಅಧ್ಯಯನವೆಂದು ಕರೆಯುತ್ತಾರೆ. ಸಂಪತ್ತು ಹೆಚ್ಚಾಗುವಿಕೆ, ಕುಗ್ಗುವಿಕೆ ಮತ್ತು ಸಮಾಂತರವಾಗಿರುವೆಡೆ ಆಧರಿಸಿರುವ ಆರ್ಥಿಕ ಚಟುವಟಿಕೆಗಳು ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತವೆ. ಸಂಪತ್ತುಗಳು ಹೆಚ್ಚಾದಂತೆ ಆರ್ಥಿಕ ಚಟುವಟಿಕೆಗಳಲ್ಲಿ ಪ್ರಗತಿಯನ್ನು, ಸಂಪತ್ತು ಕುಗ್ಗುವಿಕೆಯಲ್ಲಿ ಆರ್ಥಿಕ ಚಟುವಟಿಕೆ ಕ್ಷೀಣಿಸಿದೆ ಎಂಬ ಅಂಶಗಳನ್ನು ತಿಳಿದುಕೊಳ್ಳಬಹುದು. ಪ್ರತಿ ಆರ್ಥಿಕ ಚಟುವಟಿಕೆಗಳು ಒಂದೊಕ್ಕೊಂದು ಪೂರಕವಾದ ಸಂಬಂಧವನ್ನು ಹೊಂದಿರುತ್ತವೆ. ಎಲ್ಲಿ ಬೇಡಿಕೆ ಇದೆಯೋ ಅಲ್ಲಿ ಉದ್ಯೋಗ, ಉತ್ಪಾದನೆ, ಮಾರುಕಟ್ಟೆ, ಪೂರೈಕೆ ಮತ್ತು ಅನುಭೋಗಗಳು ಇರುತ್ತವೆ. ಇವುಗಳಲ್ಲಿ ಯಾವುದಾದರು ಒಂದು ಅಂಶವು ಇಲ್ಲವಾದಲ್ಲಿ ಇದರ ಸಂಪೂರ್ಣ ಸರಪಳಿಯು ಕಳಚಿ ಬೀಳುವುದು. ಮಾನವನು ಕೂಡ ಸಮಾಜದಲ್ಲಿ ತನ್ನ ಸಾಮಾಜಿಕ ಅಂತಸ್ತನ್ನು ಹೊಂದುವ ಸಲುವಾಗಿ ಆರ್ಥಿಕ ಚಟುವಟಿಕೆಗಳನ್ನು ಆಧರಿಸಿರುತ್ತಾನೆ. ಆರ್ಥಿಕ ಚಟುವಟಿಕೆಗಳು ಆತ ಯಾವುದರಲ್ಲಿ ಪರಿಣತಿ ಹೊಂದಿದ್ದಾನೆ, ಎಲ್ಲಿ ನೆಲೆಸಿದ್ದಾನೆ ಹೇಗೆ ಜೀವಿಸಬಹುದು ಎಂಬ ಅಂಶಗಳ ಮೇಲೆ ನಿರ್ಧರಿತವಾಗುತ್ತದೆ. ಜಾಗತಿಕ ಪ್ರಪಂಚದ ಯಾವುದೇ ಕ್ಷೇತ್ರಕ್ಕೆ ಹೋದರೂ ಅವರು ಅನುಸರಿಸಿರುವ ಆರ್ಥಿಕ ಚಟುವಟಿಕೆಗಳ ಆಧಾರದ ಮೇಲೆ ಗುರುತಿಸಲ್ಪಡುತ್ತಾರೆ. ಉದಾಹರಣೆಗೆ:– ವ್ಯಾಪಾರ ಕ್ಷೇತ್ರ, ವ್ಯಾಪಾರ ಕ್ಷೇತ್ರವು ಸಮಗ್ರ ಆರ್ಥಿಕ ಚಟುವಟಿಕೆಗಳಾದ ಬೇಡಿಕೆ, ಉದ್ಯೋಗ, ಉತ್ಪಾದನೆ, ಮಾರುಕಟ್ಟೆ, ಪೂರೈಕೆ ಮತ್ತು ಅನುಭೋಗತ್ವವನ್ನು ಹೊಂದಿದ್ದು, ವಸ್ತುಗಳ ಆಧಾರವಾಗಿ ನಿರ್ದರಿತವಾಗುತ್ತದೆ. ಮನೆ ನಿರ್ಮಾಣ ಮಾಡಲು ಕಲ್ಲು, ಸಿಮೆಂಟ್, ಮರಳು, ಇಟ್ಟಿಗೆ, ಕಬ್ಬಿಣ, ಮರ ಮತ್ತು ಸಿಮೆಂಟ್ ವಸ್ತುಗಳು ಅಗತ್ಯವಿದೆ. ಇದು ಬೇಡಿಕೆಯಾಗಿ ಪರಿಣಮಿಸಲ್ಪಟ್ಟರೆ, ಇವುಗಳ ಉತ್ಪಾದನೆಗೆ ಉದ್ಯೋಗ ಸೃಷ್ಟಿಯಾಗುತ್ತದೆ. ಈ ಮೂಲಕ ವಸ್ತುಗಳ ಉತ್ಪಾದನೆಯಾಗುತ್ತದೆ. ಉತ್ಪಾದನೆಯಾದ ವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವ ಮುಖಾಂತರ ಬೇಡಿಕೆಯನ್ನು

ಪೂರೈಸಲಾಗುತ್ತದೆ. ಬೇಡಿಕೆಗಳು ಪೂರೈಕೆಗೊಂಡ ಮೇಲೆ ಅದು ಅನುಭೋಗವಾಗುತ್ತದೆ. ಈ ಎಲ್ಲಾ ಅಂಶಗಳ ಅಧ್ಯಯನವೇ ಆರ್ಥಿಕತೆಯಾಗಿದೆ.

ವೃತ್ತಿ ಇಲ್ಲವೆ ಕಸುಬು ಮಾನವನ ಆರ್ಥಿಕ ಚಟುವಟಿಕೆಗಳಲ್ಲಿ ಪ್ರಮುಖವಾದದ್ದು. ವೃತ್ತಿಗಳ ಮೂಲಕ ಉದ್ಯೋಗಗಳನ್ನು ಅನುಸರಿಸಿಕೊಂಡು ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿ ಅವುಗಳಿಂದ ಬರುವ ಆದಾಯಗಳನ್ನು ಬೇಡಿಕೆಗಳನ್ನು ಪೂರೈಸಿಕೊಳ್ಳಲು ವಿನಿಯೋಗಿಸಲಾಗುತ್ತದೆ. ಯಾವ ಸಂದರ್ಭದಲ್ಲಿ ಬೇಡಿಕೆಗಳು ಪೂರೈಕೆಗೊಳ್ಳುತ್ತದೆಯೋ ಆಗ ಅದು ಅನುಭೋಗವಾಗಿ ಮಾರ್ಪಡುತ್ತದೆ. ಮಾನವ ಅನುಸರಿಸುವ ವೃತ್ತಿಗಳು ಉದ್ಯೋಗ ಹಾಗೂ ಉತ್ಪಾದನಾಂಗಗಳನ್ನು ಆಧಾರಿಸಿದ್ದು, ಬೇಡಿಕೆಗಳನ್ನು ಪೂರೈಸಿದಾಗ ಮಾರುಕಟ್ಟೆ ಮೂಲಕ ದೊರೆಯುವ ಆದಾಯದಲ್ಲಿ ಹೆಚ್ಚಳವಾಗುವಿಕೆ ಸಂಪತ್ತನ್ನು ಹೆಚ್ಚಿಸುತ್ತದೆ. ಸಂಪತ್ತುಗಳು ಹೆಚ್ಚಿದಂತೆ, ಸಮಾಜದಲ್ಲಿ ಸಾಮಾಜಿಕ ಸ್ಥಾನಮಾನ ಕಂಡುಕೊಳ್ಳಲು ಅನುವಾಗುತ್ತದೆ. ಈ ಮೂಲಕ ವೃತ್ತಿ ಆರ್ಥಿಕತೆಯ ಮೂಲಾಧಾರವಾಗಿದ್ದು, ವ್ಯಕ್ತಿಯ ಸಂಪತ್ತನ್ನು ನಿರ್ಧರಿಸುವಲ್ಲಿ ವೃತ್ತಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ. ಕೋಷ್ಟಕ೧೭ ಮಾಹಿತಿದಾರರು ಅನುಸರಿಸುತ್ತಿರುವ ವೃತ್ತಿಗಳನ್ನು ಕುರಿತಾದುದಾಗಿದ್ದು, ಅವರ ಆರ್ಥಿಕ ಚಟುವಟಿಕೆ ಮೂಲವನ್ನು ತಿಳಿಸುತ್ತಿದೆ.

ಕೃಷಿಯನ್ನೇ ತಮ್ಮ ಮೂಲ ವೃತ್ತಿಯನ್ನಾಗಿಸಿಕೊಂಡು ಆರ್ಥಿಕತೆಯನ್ನು ಹೊಂದಿರುವವರು ೫೧.೨% ರಷ್ಟಿದ್ದು ಅಧಿಕವಾಗಿದ್ದಾರೆ. ಕೃಷಿಯೊಂದಿಗೆ ಕೂಲಿಕಾರರಾಗಿ ೧೫.೬% ರಷ್ಟಿದ್ದಾರೆ. ಕೃಷಿ ಮೂಲ ವೃತ್ತಿಯೊಂದಿಗೆ ಹೈನುಗಾರಿಕೆಯನ್ನು ವೃತ್ತಿಯನ್ನಾಗಿಸಿಕೊಂಡವರು ೧೫.೨% ರಷ್ಟಿದ್ದಾರೆ. ಭೂರಹಿತರು ಕೂಲಿ (ಕೃಷಿ ಮತ್ತು ಇತರೆ ಕಾರ್ಯ) ವೃತ್ತಿಯನ್ನು ಆಧರಿಸಿರುವವರು ೭.೨% ರಷ್ಟಿದ್ದಾರೆ. ಕೃಷಿಯೊಂದಿಗೆ ವ್ಯಾಪಾರ ವ್ಯವಹಾರದ ವೃತ್ತಿಯಲ್ಲಿ ೪% ರಷ್ಟಿದ್ದಾರೆ. ವ್ಯಾಪಾರವನ್ನೇ ಮೂಲ ವೃತ್ತಿಯನ್ನಾಗಿಸಿಕೊಂಡಿರುವವರು ೪.೪% ರಷ್ಟಿದ್ದಾರೆ. ಅರೆ ಸರ್ಕಾರಿ ಮತ್ತು ಸರ್ಕಾರಿ ನೌಕರರು ಕ್ರಮವಾಗಿ ಸೇರಿ ೧.೬% ಮತ್ತು ೦.೧೦% ರಷ್ಟಿದ್ದಾರೆ.


ಗ್ರಾಫ್ ೭ರ ಸ್ತಂಭಲೇಖ ಚಿತ್ರದನ್ವಯ ಕೃಷಿಯನ್ನೇ ಮೂಲ ವೃತ್ತಿಯನ್ನಾಗಿಸಿಕೊಂಡಿರುವವರ ಪ್ರತಿಶತವೇ ಈ ವ್ಯಾಪ್ತಿಯಲ್ಲಿ ಹೆಚ್ಚಾಗಿದೆ. ಕಾರಣ, ಪೂರ್ವಜನರ ಮೂಲದಿಂದಲೂ ಈ ಭಾಗದಲ್ಲಿ ಅರಣ್ಯ ಪ್ರದೇಶಗಳನ್ನು ಬಳಸಿಕೊಂಡು ತಮಗೆ ಅವಶ್ಯವಿರುವ ಬೆಳೆಗಳನ್ನು ಬೆಳೆದು ಕುಟುಂಬ ನಿರ್ವಹಣೆಯಲ್ಲಿ ತೊಡಗಿಕೊಂಡಿದ್ದಾರೆ ಮತ್ತು ಈ ವೃತ್ತಿಯನ್ನು ಹೊರತು ಪಡಿಸಿ ಅನ್ಯ ವೃತ್ತಿಯಲ್ಲಿ ತೊಡಗಲು ಶೈಕ್ಷಣಿಕವಾಗಿ ಹಿಂದುಳಿದಿರುವ ಕಾರಣಗಳಿಂದ ಕೃಷಿ ಚಟುವಟಿಕೆಯನ್ನು ಹೆಚ್ಚು ಜನರು ಅವಲಂಬಿಸಿದ್ದಾರೆ. ಕೃಷಿ ವೃತ್ತಿಯ ಮೂಲದೊಂದಿಗೆ ಕೂಲಿಯನ್ನು ತಮ್ಮ ವೃತ್ತಿಯನ್ನಾಗಿಸಿಕೊಂಡಿರುವವರು ೧೫.೬% ರಷ್ಟಿದ್ದಾರೆ. ಕಾರಣ ಲಭ್ಯವಿರುವ ಅಲ್ಪ ಭೂಹಿಡುವಳಿಯ ಆಧಾರದ ಮೇಲೆ ಅವಿಭಕ್ತ ಕುಟುಂಬಗಳನ್ನು ನಿರ್ವಹಿಸುವುದು ಕಷ್ಟಸಾಧ್ಯವಾಗಿದೆ. ಇದರೊಂದಿಗೆ ಕೃಷಿ ಉತ್ಪತ್ತಿಯೂ ಪ್ರತಿ ವರ್ಷ ಒಂದೇ ಸಮಾನಾಗಿರದೆ ಏರುಪೇರಿನಲ್ಲಿ ಸಾಗುತ್ತಿರುತ್ತದೆ. ಆದ್ದರಿಂದ ಕೃಷಿಯೊಂದಿಗೆ ಕೂಲಿಯನ್ನು ಆಶ್ರಯಿಸಿಕೊಂಡು ತಮ್ಮ ಆರ್ಥಿಕತೆಯನ್ನು ಹೊಂದಿದ್ದಾರೆ.

ಕೋಷ್ಟಕ ೧೭

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರು ಅನುಸರಿಸುತ್ತಿರುವ ವೃತ್ತಿ

ಕ್ರಸಂ	ವೃತ್ತಿ	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ		
೧	ಕೃಷಿಕರು	೭	೪೩	೫೬	೨೨	೧೨೮	೫೧.೨
೨	ಭೂರಹಿತ ಕೂಲಿಗರು	೨	೮	೩	೫	೧೮	೭.೨
೩	ವ್ಯಾಪಾರಸ್ಥರು	೦	೩	೧	೭	೧೧	೪.೪
೪	ಸರ್ಕಾರಿ ನೌಕರರು	೦	೦	೨	೦	೨	೦.೧೦
೫	ಸರ್ಕಾರೇತರ ನೌಕರರು	೦	೦	೪	೦	೪	೧.೬
೬	ಕೃಷಿ ಮತ್ತು ವ್ಯಾಪಾರಸ್ಥರು	೦	೨	೪	೪	೧೦	೪
೭	ಕೃಷಿ ಮತ್ತು ಕೂಲಿಕಾರರು	೪	೧೫	೧೪	೬	೩೯	೧೫.೬
೮	ಕೃಷಿ ಮತ್ತು ಹೈನುಗಾರಿಕೆ	೦	೨೦	೧೫	೩	೩೮	೧೫.೨
	ಒಟ್ಟು	೧೩	೯೧	೯೯	೪೭	೨೫೦	೧೦೦

ಗ್ರಾಫ್ ೭. ಮಾಹಿತಿದಾರರು ಅನುಸರಿಸುತ್ತಿರುವ ವೃತ್ತಿ



ಆದಿವಾಸಿ ಮೂಲದವರೇ ಹೆಚ್ಚಿರುವ ಈ ಭಾಗದಲ್ಲಿ ತಮ್ಮ ಮೂಲ ಸಂಸ್ಕೃತಿಯನ್ನು ಹಾಗೂ ಕುಟುಂಬ ಆರ್ಥಿಕತೆಯನ್ನು ನಿರ್ವಹಿಸುವ ದೃಷ್ಟಿಯಿಂದ ಹೈನುಗಾರಿಕಾ ಪದ್ಧತಿಯನ್ನು ೧೫.೨% ರಷ್ಟು ಮಾಹಿದಾರರು ಕೃಷಿಯೊಂದಿಗೆ ವೃತ್ತಿಯನ್ನು ಹೊಂದಿದ್ದಾರೆ. ಈ ಮೂಲವು ಅವರು ವರ್ಷಾಂತ್ಯಕ್ಕೆ ಜಮೀನು ಮತ್ತು ತೋಟಗಳಿಗೆ ಅಗತ್ಯವಿರುವ ಗೋವು ಉತ್ಪಾದಿತ ಗೊಬ್ಬರವನ್ನು ಉತ್ಪಾದಿಸಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ ಮತ್ತು ಗೊಬ್ಬರವನ್ನು ಸ್ಥಳೀಯರಿಗೆ ಪೂರೈಸುವ ಮೂಲಕ ಆರ್ಥಿಕ ಮೂಲವನ್ನು ಕಂಡುಕೊಂಡಿರುವುದರಿಂದ ಹೈನುಗಾರಿಕೆಯನ್ನು ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಭೂಹಿಡುವಳಿಗಳೇ ಇಲ್ಲದೆ ಬದುಕು ಕಟ್ಟಿಕೊಂಡಿರುವ ಕುಟುಂಬಗಳು ತಮ್ಮಲ್ಲಿರುವ ಕೌಶಲ್ಯಗಳನ್ನು ಬಳಕೆಮಾಡಿಕೊಂಡು (ಕೃಷಿಗೆ ಅಗತ್ಯವಿರುವ) ಅಡಿಕೆ ಗೊನೆ ಇಳಿಸುವುದು, ತೆಂಗಿನ ಕಾಯಿ, ಎಳನೀರು ಇಳಿಸುವುದು, ಕಾಫೀ ಎಸ್ಟೇಟ್‌ಗಳಿಗೆ ದಿನನಿತ್ಯದ ಕೆಲಸ ಕಾರ್ಯಗಳಿಗೆ ಕೂಲಿ ಕಾರ್ಮಿಕರಾಗಿ ೭.೨% ರಷ್ಟು ಮಾಹಿತಿದಾರರು ತೆರಳುತ್ತಿದ್ದಾರೆ. ಜಮೀನ್ದಾರರ ಆಶ್ರಯದಲ್ಲಿ ವಾರ್ಷಿಕವಾಗಿ ಕೂಲಿ ಕಾರ್ಯಗಳಿಗೆ ಬರುವುದಾಗಿ ಮುಂಗಡ ಹಣವನ್ನು ಪಡೆದಿರುವವರು, ಅವುಗಳನ್ನು ತೀರಿಸುವ ಸಮುವಾಗಿ ಕೂಲಿಯನ್ನೇ ಆಶ್ರಯಿಸಿಕೊಂಡಿದ್ದಾರೆ.

ಸ್ಥಳೀಯ ವ್ಯಾಪ್ತಿಯಲ್ಲಿ ಅಡಿಕೆ, ಏಲಕ್ಕಿ, ಸಾಂಬಾರು ಪದಾರ್ಥಗಳು ಮತ್ತು ಕಿರು ಅರಣ್ಯ ಉತ್ಪನ್ನಗಳ ಸಂಗ್ರಹದ ಆರ್ಥಿಕತೆ ಹೆಚ್ಚಿದ್ದು, ಮೂಲ ಮಾರುಕಟ್ಟೆಗಳಿಗೆ ಸಣ್ಣ ರೈತರು ತಾವು ಸಂಗ್ರಹಿಸಿದ ಪದಾರ್ಥಗಳ ಬೆಳೆಗಳನ್ನು ಕೊಂಡ್ಯೂಯುವುದು ಕಷ್ಟಸಾಧ್ಯವಾಗುತ್ತಿರುವುದರಿಂದ ಅಲ್ಲಿನ ಸ್ಥಳೀಯರೇ ಕೊಂಡುಕೊಳ್ಳುವ ಮತ್ತು ಮಾರುಕಟ್ಟೆ ಬೆಲೆಯನ್ನೇ ಇವರಿಗೆ ನೀಡುವ (ರೈತರು ಇರುವ ಸ್ಥಳಗಳಿಗೆ ತೆರಳಿ ಅಲ್ಲಿಯೇ ಕೊಂಡುಕೊಳ್ಳುವುದು) ವ್ಯವಸ್ಥೆಗಳನ್ನು ಕಲ್ಪಿಸಿಕೊಂಡಿದ್ದಾರೆ. ಈ ವೃತ್ತಿಯನ್ನು ಮೂಲ ವ್ಯಾಪರಸ್ಥರು ೪.೪%ರಷ್ಟಿದ್ದು, ಕೃಷಿಯೊಂದಿಗೆ ವ್ಯಾಪಾರದ ಜ್ಞಾನವನ್ನು ಹೊಂದಿರುವವರು ೪%ರಷ್ಟು ಮಾಹಿತಿದಾರರು ಈ ವೃತ್ತಿಯನ್ನು ಅವಲಂಬಿಸಿದ್ದಾರೆ.

ಕೆ.ಐ.ಸಿ.ಓ.ಎಲ್ ಮತ್ತು ಅರಣ್ಯ ಇಲಾಖೆಯಲ್ಲಿ ಅರೆಉದ್ಯೋಗಿಗಳಾಗಿ ಕಾರ್ಯನಿರ್ವಹಿಸುತ್ತಿದ್ದವರು ಇತ್ತೀಚೆಗೆ ಖಾಯಂ ಉದ್ಯೋಗಿಗಳಾಗಿ ೦.೧೦% ನೇಮಕವಾಗಿದ್ದಾರೆ. ಇವರನ್ನು ಹೊರತು ಪಡಿಸಿ ಪದವಿಪೂರ್ವ ಶಿಕ್ಷಣವನ್ನು ಪಡೆದವರು ಧರ್ಮಸ್ಥಳ ಸಂಘಗಳಲ್ಲಿ ಸೇರಿಕೊಂಡು ಸರ್ಕಾರೇತರ ವೃತ್ತಿಯನ್ನು ೧.೬% ರಷ್ಟು ಮಾಹಿತಿದಾರರು ಅವಲಂಬಿಸಿದ್ದಾರೆ.

ವಾರ್ಷಿಕ ಆದಾಯ

ಆರ್ಥಿಕ ಚಟುವಟಿಕೆಗಳಲ್ಲಿ ಆದಾಯವು ಅತಿ ಮುಖ್ಯವಾದ ಹಾಗೂ ಪ್ರಾಯೋಗಿಕ ಮಹತ್ವವನ್ನು ಪಡೆದಿರುವ ಪರಿಕಲ್ಪನೆಯಾಗಿದೆ. ಒಂದು ವಾರ್ಷಿಕಾವಧಿಯಲ್ಲಿ ಉತ್ಪಾದಿಸಲ್ಪಟ್ಟ ಎಲ್ಲಾ ಸರಕು ಮತ್ತು ಸೇವೆಗಳ ಒಟ್ಟು ಹಣ ರೂಪದ ಮೌಲ್ಯವನ್ನು ರಾಷ್ಟ್ರೀಯ ಆದಾಯ ಎಂದು ಕರೆಯಲಾಗುತ್ತದೆ. ರಾಷ್ಟ್ರೀಯ ಆದಾಯವು ಎಲ್ಲಾ ಉತ್ಪಾದನಾಂಗಗಳ ಸಮಗ್ರ ಕೊಡುಗೆಯಾಗಿರುತ್ತದೆ. ಈ ಮೂಲಕ ರಾಷ್ಟ್ರೀಯ ಆದಾಯವು ಎಲ್ಲಾ ಉತ್ಪಾದನಾಂಗಗಳ ನಡುವೆ ಗೇಣಿ, ಕೂಲಿ, ಬಡ್ಡಿ ಮತ್ತು ಲಾಭದ ರೂಪದಲ್ಲಿ ಹಂಚಿಕೆಯಾಗುತ್ತದೆ [೩].

ಸೈಮನ್ ಕಜನೆಟ್ಸ್ ಎಂಬ ಆರ್ಥಿಕ ತಜ್ಞರು "ಒಂದು ವರ್ಷದ ಅವಧಿಯಲ್ಲಿ ಒಂದು ದೇಶದ ಉತ್ಪಾದನಾ ವ್ಯವಸ್ಥೆಯಿಂದ ಅಂತಿಮ ಅನುಭೋಗಿಗಳ ಕೈಗೆ ಅಥವಾ ಬಂಡವಾಳ ಸರಕುಗಳ ಸಂಗ್ರಹಕ್ಕೆ ಪ್ರವಹಿಸುವ ಸರಕುಗಳ ಮತ್ತು ಸೇವೆಗಳ ನಿವ್ವಳ ಉತ್ಪನ್ನವೇ ರಾಷ್ಟ್ರೀಯ ಆದಾಯ".

ರಾಷ್ಟ್ರೀಯ ಆದಾಯವು ಅನೇಕ ಭಾವನೆಗಳನ್ನು ಒಳಗೊಂಡಿದ್ದು, ಅದರ ಸಮಗ್ರ ಸ್ವರೂಪವನ್ನು ಒಟ್ಟು ರಾಷ್ಟ್ರೀಯ ಉತ್ಪನ್ನ, ನಿವ್ವಳ ರಾಷ್ಟ್ರೀಯ ಉತ್ಪನ್ನ, ಉತ್ಪಾದನಾಂಗಗಳ ವೆಚ್ಚ ರೂಪದ ರಾಷ್ಟ್ರೀಯ ಆದಾಯ, ವ್ಯಕ್ತಿಗತ ಆದಾಯ ಮತ್ತು ಖರ್ಚು ಯೋಗ್ಯ ವ್ಯಕ್ತಿಗತ ಆದಾಯಗಳೆಂದು ಅಧ್ಯಯಿಸುವುದುಂಟು. ವ್ಯಕ್ತಿಗತ ಆದಾಯವು ಒಂದು ವರ್ಷದ ಅವಧಿಯಲ್ಲಿ ವ್ಯಕ್ತಿಗಳು ಪಡೆಯುವ ಒಟ್ಟು ಆದಾಯದ ಮೊತ್ತವೇ ಆಗಿರುತ್ತದೆ. ಆದಾಯವು ವ್ಯಕ್ತಿಯಿಂದ ಪ್ರವಹಿಸಲ್ಪಡುವ ಶ್ರಮ, ಬಂಡವಾಳ, ಉತ್ಪಾದನೆ, ಮಾರುಕಟ್ಟೆ, ವೆಚ್ಚ ಮತ್ತು ಲಾಭಾಂಶಗಳನ್ನು ಒಳಗೊಂಡಿರುತ್ತದೆ. ಆದಾಯವು ಎಂದಿಗೂ ಸ್ಥಿರವಾಗಿರುವುದಿಲ್ಲ, ಬದಲಿಗೆ ಅದು ಚಲನಾತ್ಮಕತೆಯನ್ನು ಹೊಂದಿದ್ದು, ವರ್ಷದಿಂದ ವರ್ಷಕ್ಕೆ ಏರುವಿಕೆ ಮತ್ತು ಇಳಿಯುವಿಕೆಯ ಆಧಾರಿತವಾಗಿರುತ್ತದೆ. ಕಾರಣ ಬಂಡವಾಳ, ಶ್ರಮ, ಉತ್ಪಾದನೆಯಲ್ಲಾಗುವ ಪ್ರತಿಕೂಲ ಪರಿಣಾಮಗಳಿಂದ ವ್ಯತ್ಯಾಸಕ್ಕೆ ಒಳಪಡುತ್ತದೆ. ಈ ಪ್ರಕ್ರಿಯೆಯು ವ್ಯಕ್ತಿಯ ಆರ್ಥಿಕ ಯೋಗಕ್ಷೇಮವನ್ನು ನಿರ್ದರಿಸುತ್ತದೆ ಮತ್ತು ಅಭ್ಯುದಯವನ್ನು ಸೂಚಿಸುತ್ತದೆ. ಕೋಷ್ಟಕ೧೮ ಮಾಹಿತಿದಾರರು ವಾರ್ಷಿಕವಾಗಿ ಗಳಿಸುತ್ತಿರುವ ಆದಾಯ (ರೂಗಳಲ್ಲಿ) ದ ವಿವರವುಳ್ಳದ್ದಾಗಿದ್ದು, ೭೬ ರಿಂದ ೧ ಲಕ್ಷ ರೂಗಳ ವರೆಗಿನ ಆದಾಯ ಮಿತಿಯಲ್ಲಿ ೩೩.೨% ರಷ್ಟಿದ್ದು,


ಕೋಷ್ಟಕ ೧೮

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರ ವಾರ್ಷಿಕ ಆದಾಯ (ರೂಗಳಲ್ಲಿ)

ಕ್ರ.ಸಂ	ವಾರ್ಷಿಕ ಆದಾಯ ರೂಗಳಲ್ಲಿ	ಸಮುದಾಯಗಳ				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ		
1	೧೧,೦೦೦ ರೂ – ೨೫,೦೦೦ ರೂ	೦	೧	೨	೦	೩	೧.೨
2	೨೬,೦೦೦ ರೂ – ೫೦,೦೦೦ ರೂ	೨	೯	೧೭	೬	೩೪	೧೩.೬
3	೫೧,೦೦೦ ರೂ – ೭೫,೦೦೦ ರೂ	೪	೧೬	೨೦	೧೫	೫೫	೨೨
4	೭೬,೦೦೦ ರೂ – ೧ ಲಕ್ಷ ರೂ	೪	೩೩	೩೩	೧೩	೮೩	೩೩.೨
5	೧ ಲಕ್ಷ ರೂ – ೧,೫೦,೦೦೦ ರೂ	೩	೨೪	೨೦	೮	೫೫	೨೨
6	೧,೫೦,೦೦೦ ರೂ – ೨,೦೦,೦೦೦ ರೂ	೦	೭	೫	೩	೧೫	೬
7	೨,೦೦,೦೦೦ ರೂ – ೩,೦೦,೦೦೦ ರೂ	೦	೧	೧	೧	೩	೧.೨
8	೩ ಲಕ್ಷಕ್ಕಿಂತ ಹೆಚ್ಚು	೦	೦	೧	೧	೨	೦.೮
	ಒಟ್ಟು	೧೩	೯೧	೯೯	೪೭	೨೫೦	೧೦೦

ಅಧಿಕ ಸಂಖ್ಯೆಯಲ್ಲಿದ್ದಾರೆ. ೫೧ ರಿಂದ ೭೫ ಸಾವಿರ ರೂಗಳ ಆದಾಯದಲ್ಲಿ ೨೨% ಮತ್ತು ೧ ರಿಂದ ೧.೫೦ ಲಕ್ಷ ರೂಗಳ ಆದಾಯ ವ್ಯಾಪ್ತಿಯಲ್ಲಿ ೨೨%ರಷ್ಟಿದ್ದಾರೆ. ೨೬ ರಿಂದ ೫೦ ಸಾವಿರ ರೂಗಳ ಆದಾಯ ಮಿತಿಯಲ್ಲಿ ೧೩.೫% ರಷ್ಟಿದ್ದಾರೆ. ೧೧ ರಿಂದ ೧೫ ಸಾವಿರ ರೂ ಆದಾಯದ ಮಿತಿಯಲ್ಲಿ ೧.೨% ಮತ್ತು ೨ ರಿಂದ ೩ ಲಕ್ಷ ಆದಾಯದ ಮಿತಿಯಲ್ಲಿ ೧.೨%ರಷ್ಟಿದ್ದಾರೆ. ೩ ಲಕ್ಷಕ್ಕಿಂತ ಹೆಚ್ಚಿನ ಆದಾಯವುಳ್ಳವರು ಅತಿ ಕಡಿಮೆಪ್ರಮಾಣ ೦.೮%ರಷ್ಟಿದ್ದಾರೆ.

ಗ್ರಾಫ್ ೮, ಮಾಹಿತಿದಾರರ ವಾರ್ಷಿಕ ಆದಾಯ



ಗ್ರಾಫ್ ೮ ರ ಅನ್ವಯ ೧೧ ರಿಂದ ೭೪ ಸಾವಿರ ರೂ ವ್ಯಾಪ್ತಿಯಲ್ಲಿ ಬರುವ ೧.೨%, ೧೩.೬% ಮತ್ತು ೨೨% ಮಾಹಿತಿದಾರರು ಕೂಲಿ ಹಾಗೂ ಅತಿ ಸಣ್ಣ ಪ್ರಮಾಣದ ಭೂ ಹಿಡುವಳಿ ಹೊಂದಿದ್ದು, ಆದಾಯ ಉತ್ಪತ್ತಿ ಮತ್ತು ಉಳಿತಾಯದಲ್ಲಿ ಕಡಿಮೆ ಪ್ರಮಾಣವನ್ನು ಹೊಂದಿದ್ದಾರೆ. ಕಾರಣ ಪೂರ್ವಜರಿಂದ ಪಿರ್ತಾಜಿತ ಆಸ್ತಿ ಸ್ವತ್ತುಗಳು ದೊರೆಯದಿರುವುದು, ಇರುವ ಅಲ್ಪ ಭೂಹಿಡುವಳಿಗಳು ಅವಿಭಕ್ತ ಕುಟುಂಬಗಳು ವಿಘಟನೆ ಹೊಂದಿರುವುದರಿಂದ ಹಂಚಿಕೆಯಾಗಿ ಆರ್ಥಿಕ ಕೊರತೆಯುಂಟಾಗಿ ಕೂಲಿಯ ಮಾರ್ಗವನ್ನು ಹೊಂದಿರಬಹುದಾದ್ದರಿಂದ ಆದಾಯ ಮಟ್ಟವು ಇಳಿಕೆಯಾಗಿದೆ.

೩೩.೨% ರಿಂದ ಅಧಿಕ ಸಂಖ್ಯೆಯಲ್ಲಿರುವ ೭೬ ರಿಂದ ೧ ಲಕ್ಷ ರೂಗಳ ಹಾಗೂ ೨೨% ರಿಂದ ೧ ರಿಂದ ೧.೫೦ ಲಕ್ಷ ರೂಗಳ ವರೆಗಿನ ಆದಾಯದ ಮೂಲದವರು ೧ ರಿಂದ ೩ ಎಕರೆ ಒಳಗಿನ ಭೂ ಹಿಡುವಳಿಗಳನ್ನು ಹೊಂದಿದ್ದು, ಅಡಿಕೆ, ಏಲಕ್ಕಿ ಹಾಗೂ ಭತ್ತ ಕೃಷಿ ಮುಖಾಂತರ ಆದಾಯದ ಪ್ರಗತಿಯಲ್ಲಿ ಮಧ್ಯಮ ಸ್ಥಾನವನ್ನು ಹೊಂದಿದ್ದಾರೆ. ಪಿರ್ತಾಜಿತವಾಗಿ, ಅರಣ್ಯ ಒತ್ತುವರಿ ಭೂ ಹಿಡುವಳಿಗಳ ಬಳಕೆಯಿಂದ ಆದಾಯ ಪ್ರಮಾಣವು ಇವರಿಗೆ ಸಂದಾಯವಾಗಿದೆ.

೧.೫೦ ಲಕ್ಷದಿಂದ ೩ ಲಕ್ಷದ ಆದಾಯದವರಗಿನ ೬%, ೧.೨% ಮತ್ತು ೦.೮% ಮಾಹಿತಿದಾರರು ಹೊಂದಿರುವ ಭೂಹಿಡುವಳಿ ಗಾತ್ರವು ಹೆಚ್ಚಾಗಿದ್ದು, ಕೃಷಿಯೊಂದಿಗೆ ವ್ಯವಹಾರ



ಚಟುವಟಿಕೆಗಳನ್ನು ಹೊಂದಿರುವುದರಿಂದ ಉತ್ಪಾದನೆಯ ಮಟ್ಟವು ಅಧಿಕವಾಗಿರುವುದರೊಂದಿಗೆ ಆದಾಯವು ಹೆಚ್ಚಾಗಿದೆ.

ಭೂಹಿಡುವಳಿ

ಭಾರತೀಯ ಇತಿಹಾಸದ ಕಾಲಮಾನದ ಉದ್ದಕ್ಕೂ ಗತಿಸಿರುವ ಹೋರಾಟಗಳು ಪ್ರಮುಖವಾಗಿ ಭೂ ಹಿಡುವಳಿ ಸಂಪನ್ಮೂಲದ ಹತೋಟಿಗಾಗಿ. ಇದು ಇತಿಹಾಸ ಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿದ್ದಾಗಿರದೆ, ಮಾನವನ ಅಲೇಮಾರಿ ಜೀವನ ಆರಂಭದಿಂದಲೂ ಕೂಡ ಸಾಗಿದೆ. ಭಾರತದ ವೇದಗಳ ಕಾಲದಿಂದ, ರಾಜರ, ಮೊಘಲರ ಆಳ್ವಿಕೆ, ಬ್ರಿಟೀಷ್‌ರ ವಸಾಹತು ಆಳ್ವಿಕೆ ಅಷ್ಟೇ ಏಕೆ ಸ್ವತಂತ್ರ ನಂತರ ಇಂದಿನ ವಾಸ್ತವ ಸ್ಥಿತಿವರೆಗೂ ಸಮಸ್ಯಾತೀತವಾಗಿ ಉಳಿದಿರುವ ಅಂಶವೆಂದರೆ, ಅದು ಭೂ ಹಿಡುವಳಿ. ಭೂಹಿಡುಳಿಗಳ ಮೇಲೆ ನಿಯಂತ್ರಣವನ್ನು ಸಾಧಿಸುವ ದೃಷ್ಟಿಯಿಂದ ಪೂರ್ವ ಕಾಲದಿಂದಲೂ ಒಂದಲ್ಲ ಒಂದು ರಾಜ ಮನೆತನಗಳು, ಮೊಘಲರ ಆಳ್ವಿಕೆಗಳು, ಬ್ರಿಟೀಷ್ ಆಡಳಿತ ವ್ಯವಸ್ಥೆಯಲ್ಲಿಯೂ ಪರಸ್ಪರ ಹೋರಾಟವನ್ನು ನಡೆಸಿ ಗತಿಸಿರುವ ಇತಿಹಾಸವನ್ನು ಅಧ್ಯಯನ ಮಾಡಿಕೊಂಡೆ ಬರುತ್ತಿದೇವೆ. ಕೃಷಿಯನ್ನೇ ತಮ್ಮ ಮೂಲ ಕಸುಬನ್ನಾಗಿ ಹೊಂದಿರುವ ರೈತರು ಆದಿ ಕಾಲದಿಂದಲೂ ಭೂಹಿಡುವಳಿಗಾಗಿ ಸುಂಕವನ್ನು ತೆತ್ತಿದ್ದಾರೆ.

ಬ್ರಿಟೀಷ್ ಆಳ್ವಿಕೆಯಲ್ಲಿ ರೈತವಾರಿ, ಮಹಲ್ವಾರಿ ಮತ್ತು ಜಮೀನ್ದಾರಿ ಪದ್ಧತಿಗಳ ಮುಖಾಂತರ ಜಮೀನ್ದಾರರನ್ನು ರೈತರನ್ನು ಸುಂಕದ ವ್ಯಾಪ್ತಿಗೆ ತರಲಾಯಿತು. ಸ್ವತಂತ್ರ ನಂತರದಲ್ಲಿ ಉಳುವವನೆ ಭೂಮಿಯ ಒಡೆಯ ಕಾಯ್ದೆ ಅಡಿ ಭೂಹಿಡುವಳಿಯನ್ನು ಸಾಗುವಳಿದಾರನಿಗೆ ಕಲ್ಪಿಸಿದರೂ, ಅದು ಪರಿಣಾಮಕಾರಿಯಾಗಲಿಲ್ಲ. ಇನ್ನುಳಿದಂತೆ ಆಧುನಿಕ ಯುಗದಲ್ಲಿ ಜಾಗತೀಕರಣವೆಂಬ ಭೂತ ಕಂಡರೂ ಕಾಣದೇ ತನ್ನ ಬಂಡವಾಳಶಾಹಿತ್ವದ ಕಪಿಮುಷ್ಠಿಯಲ್ಲಿ ಎಲ್ಲವನ್ನು ಬಂಧಿಸಿಡುವ ಹುನ್ನಾರವನ್ನು ಸದ್ದಿಲ್ಲದೆ ನಡೆಸಿದೆ. ತನಗೆ ಅವಶ್ಯವೆಂಬುದನ್ನು ಹಾಗೂ ಇತರರ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಭೌದ್ಧಿಕ ಸ್ವಾಮ್ಯತೆಯ ಕಟ್ಟುಪಾಡಿನಲ್ಲಿ ಬಂಡವಾಳ ಶಾಹಿ ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ಮತ್ತು ಮೂರನೆ ದರ್ಜೆಯ ರಾಷ್ಟ್ರಗಳನ್ನು ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಭೂಹಿಡುವಳಿ ಸಂಪನ್ಮೂಲಗಳ ಮೇಲೆ ಕಾನೂನು ಹಸ್ತಕ್ಷೇಪದ ಮುಖಾಂತರ ಸಂರಕ್ಷಣೆಯ ಸೋಗಿನಲ್ಲಿ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಹಾದಿಯನ್ನಿಡಿದಿವೆ.

ಆರ್ಥಿಕ ಹಿನ್ನೆಲೆಯಲ್ಲಿ ಮಾನವನ ಆರ್ಥಿಕ ಚಟುವಟಿಕೆ ಮುಖಾಂತರ ಆದಾಯಕ್ಕೆ ಪ್ರಮುಖ ಸ್ಥಾನವನ್ನು ಕಲ್ಪಿಸಿದ್ದೇವೆ. ಆದಾಯವು ಉತ್ಪಾದನೆ ಮತ್ತು ಉತ್ಪಾದನಾ ಮೂಲಗಳಿಂದಾದ ಲಾಭಾಂಶದ ಅವಲಂಬಿತವಾಗಿರುತ್ತದೆ. ವಸ್ತುವಿನೊಳಗೆ ತುಷ್ಟಿಗುಣವನ್ನು ಸೇರಿಸಿ ಅದನ್ನು ಉಪಯೋಗ ಯೋಗ್ಯವನ್ನಾಗಿ ಮಾಡುವ ಕಾರ್ಯವನ್ನು ಉತ್ಪಾದನೆ ಎನ್ನಬಹುದು. ಉತ್ಪಾದನಾ ಕ್ರಿಯೆಯಲ್ಲಿ ಭಾಗವಾಗುವ ವಸ್ತುಗಳಿಗೆ ಉತ್ಪಾದನಾಂಗಗಳು ಎಂದು ಕರೆಯುತ್ತಾರೆ. ಅವು ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆಗಳಾಗಿವೆ. ಶ್ರಮವು ಮಾನವ ಶಕ್ತಿಯಿಂದ ದೊರೆಯುವ ಉತ್ಪಾದನಾಂಗವಾದರೆ, ಭೂಮಿಯು ನಿಸರ್ಗದತ್ತವಾಗಿ ಮಾನವನಿಗೆ

ದೊರೆತಿರುವ ಉತ್ಪಾದನಾಂಗವಾಗಿದೆ. ಈ ಮೂಲಗಳ ಆಧಾರವಾಗಿಯೇ ಯಾವುದೇ ಉತ್ಪಾದನೆಗೆ ಭೂಮಿ ಮತ್ತು ಶ್ರಮ ಅವಶ್ಯವಿರುವುದರಿಂದ ಪ್ರಾಥಮಿಕ ಉತ್ಪಾದನಾಂಗಗಳೆಂದು ಪರಿಗಣಿಸಬಹುದು. ಭೂಮಿಯ ವಿಸ್ತೀರ್ಣ ನಿರ್ದಿಷ್ಟವಾಗಿರುತ್ತದೆ. ಮಾನವನ ಸತತ ಪ್ರಯತ್ನಗಳಿಂದ ಅದನ್ನು ವಿಸ್ತರಿಸಲು ಸಾಧ್ಯವಿಲ್ಲ. ಭೂಮಿಯಲ್ಲಿನ ಫಲವತ್ತತೆ ನಾಶವಾದರೂ ಭೂಮಿ ಮಾತ್ರ ಎಂದಿಗೂ ನಾಶವೊಂದುವುದಿಲ್ಲ. ಭೂಮಿಯು ಸ್ಥಿರಾಸ್ತಿಯಾಗಿದ್ದು, ಫಲವತ್ತತೆಯನ್ನು ಕಳೆದುಕೊಳ್ಳುವುದಾದರೂ ನಾಶವಾಗುವುದಿಲ್ಲ.

ಭೂ ವಿಸ್ತೀರ್ಣವನ್ನು ನಿರ್ದಿಷ್ಟ ಪಡಿಸುವ ನಿಟ್ಟಿನಲ್ಲಿ ಅಳತೆ ಮಾಪನಗಳನ್ನು ಬಳಸಿಕೊಂಡು ಇಂತಿಷ್ಟೇ ಎಂದು ಗುರುತು ಮಾಡುವುದಕ್ಕೆ ಕಂದಾಯ ಇಲಾಖೆ ಕಾರ್ಯ ನಿರ್ವಹಿಸುತ್ತಿದೆ. ಯಾವುದೇ ಯೋಜನೆಗೆ ಭೂಮಿಯನ್ನು ನೀಡುವ ಮೊದಲು ಕಂದಾಯ ಇಲಾಖೆಯ ಅನುಮತಿ ಕಡ್ಡಾಯವಾಗಿರುತ್ತದೆ. ಯೋಜನೆಗೆ ಬಳಸಿಕೊಳ್ಳುವ ಭೂಮಿ ಗೋಮಾಳವೋ, ಕೃಷಿ (ಭಾಗಾಯ್ತು, ತರಿ) ಭೂಮಿಯೋ, ಅರಣ್ಯ ಭೂಮಿಯೋ, ಪರಂಪೋಗು ಭೂಮಿಯೋ ಎಂದು ಸಮೀಕ್ಷೆಗಳು ನಡೆದ ನಂತರ ಇಲಾಖೆ ಸಮ್ಮತಿ ಮೇರೆಗೆ ನಿಯೋಜಿತವಾಗುತ್ತದೆ. ಈ ಪರಿಯಾಗಿ ನಿಯೋಜಿತವಾಗುವ ಭೂಮಿಗೆ (ಭಾರತದಲ್ಲಿ) ಎಕರೆ ವಿಸ್ತೀರ್ಣ ಹಾಗೂ ಹೆಕ್ಟೇರ್ ವಿಸ್ತೀರ್ಣಗಳ ಅಳತೆ ಮಾಪನದ ಆಧಾರಿತವಾಗಿ ಭೂಹಿಡುವಳಿಗಳನ್ನು ಗೊತ್ತುಪಡಿಸಲಾಗುತ್ತದೆ.

ಭಾರತೀಯ ಸಂದರ್ಭದಲ್ಲಿ ಭೂಹಿಡುವಳಿಗೆ ಸಂಬಂಧಿಸಿದಂತೆ ಹಲವಾರು ಸಾಗುವಳಿ ಪದ್ಧತಿಗಳು ರೂಢಿಯಲ್ಲಿದ್ದವು. ಗೇಣಿ ಪದ್ಧತಿ, ದಾಖಲಾತಿಗಳಿರದೆ ಅಪ್ಪಣೆ ಪಡೆದು ಸಾಗುವಳಿ ಮಾಡುವ ಬಗರ್ ಹುಕುಂ ಪದ್ಧತಿ ಮತ್ತು ಬಾಡಿಗೆ ಪದ್ಧತಿ. ಭಾರತದ ಬಹಪಾಲು ಅರಣ್ಯ ವ್ಯಾಪ್ತಿಯ ಸಾಗುವಳಿಗಳು ಬಗರ್ ಹುಕುಂ ಸಾಗುವಳಿಗಳಾಗಿದ್ದು (ಬ್ರಿಟೀಷ್ ಪೂರ್ವ ಕಾಲದಿಂದಲೂ) ಕಾಲ ಕಾಲಕ್ಕೆ ಕಂದಾಯ ಇಲಾಖೆ ಮುಖಾಂತರ ಸೂಚನೆಗಳನ್ನು ನೀಡಿ ಅವುಗಳನ್ನು ಸಕ್ರಮಗೊಳಿಸುವ ಕಾರ್ಯಗಳು ಅನುಷ್ಠಾನಗೊಂಡಿಲ್ಲ. ಪರಿಣಾಮ ಅರಣ್ಯ ವ್ಯಾಪ್ಯಿಯ ಬಹುಪಾಲು ಬಗರ್ ಹುಕುಂ ಸಾಗುವಳಿದಾರರಿಗೆ ಸಮಯಕ್ಕೆ ಸಿಗದ ಭೂಹಿಡುವಳಿ ಪಟ್ಟಾ ವ್ಯವಸ್ಥೆಗಳು ಆತಂಕದಲ್ಲಿ ದಿನಗಳನ್ನು ಕಳೆಯುವಂತ ಸ್ಥಿತಿಗಳಾಗಿವೆ. ಎಷ್ಟು ಬಾರಿ ಸಕ್ರಮಗೊಳಿಸುವ ಅಹವಾಲುಗಳನ್ನು ನೀಡಿದರು ಸರ್ಕಾರ ಅದನ್ನು ಸರಿಯಾದ ಕ್ರಮದಲ್ಲಿ ಪರಿಗಣಿಸಲು ಸಾಧ್ಯವಾಗಿಲ್ಲ ಮತ್ತು ಜನ ಪ್ರತಿನಿಧಿಗಳ ಹಿಚ್ಚಾಶಕ್ತಿ ಸಮಸ್ಯೆಗಳಿಲ್ಲವೆಂದರೆ ರಾಜಕೀಯ ಹೇಗೆ ಸಾಧ್ಯವೆಂಬಂತಾಗಿದೆ. ಜನಪ್ರತಿನಿಧಿಗಳಲ್ಲಿ ಹಾಗೂ ಅಧಿಕಾರಿ ವರ್ಗದಲ್ಲಿ ಹಿಚ್ಚಾಶಕ್ತಿವುಳ್ಳ ಕೆಲವರು ನಿರ್ದಿಷ್ಟಾವಧಿಗೆ ಆಳ್ವಿಕೆಯಲ್ಲಿರುವಾಗ ಅರಣ್ಯ ವ್ಯಾಪ್ತಿಯ ಆದಿವಾಸಿ ಸಮುದಾಯಗಳಿಗೆ ಪ್ರಯೋಜನ ಮತ್ತು ಅವರ ಸ್ಥಿರತೆಗೆಂದು (ಕ್ಷೇತ್ರಾಧ್ಯಯನದ ಮುಖಾಂತರ) ಯೋಜನೆಗಳನ್ನು ತಯಾರಿಸಿ ಉನ್ನತ ಮಟ್ಟಕ್ಕೆ ತಲುಪಿಸಿದರೆ, ಅವುಗಳು ಸೃಷ್ಟಿಯಾಗುವ ದಿಶೆಯಲ್ಲಿ ಕಾರ್ಯ ನಿರ್ವಹಿಸಿ ಅನುಷ್ಠಾನ ಹಂತದಲ್ಲಿ ಮರೀಚಿಕೆಯಾಗಿವೆ. ಇನ್ನುಳಿದಂತೆ ಕಾಯ್ದೆಗಳು ಜಾರಿಯಾದರೂ ಅವುಗಳು ಕ್ಷಿಪ್ರಗತಿಯಲ್ಲಾಗಲಿ ಪರಿಣಾಮಕಾರಿಯಾಗಿ ಆಗಲಿ ಆಗುವುದಿಲ್ಲ. ಉದಾಹರಣೆಗೆ, ೧೯೯೬ ರಲ್ಲಿ ಪೆಸಾ ಕಾಯ್ದೆ (PESA : Panchayat Extention to Shedule

Area 1996) ಐದನೇ ಅನುಸೂಚಿ ಅನ್ವಯ ಮಹಾರಾಷ್ಟ್ರ, ಆಂಧ್ರಪ್ರದೇಶ, ಛತ್ತೀಸ್‌ಗಡ್, ಬಿಹಾರ್, ಹಿಮಾಚಲ್ ಪ್ರದೇಶ, ಮಧ್ಯಪ್ರದೇಶ, ಗುಜರಾತ್, ಓಡಿಶ ಮತ್ತು ರಾಜಸ್ಥಾನ್ ರಾಜ್ಯಗಳನ್ನು ಕೇಂದ್ರೀಕರಿಸಿ ರಚನೆಯಾಯಿತು. ಆರನೇ ಅನುಸೂಚಿಯಲ್ಲಿ ಈಶಾನ್ಯ ಭಾರತದ ರಾಜ್ಯಗಳನ್ನು ಪರಿಗಣಿಸಲಾಯಿತು. ಕೇಂದ್ರ ಸರ್ಕಾರ ಈ ಅನುಸೂಚಿಯನ್ನು ನೀಡುವ ಮೊದಲು ಪ್ರತಿ ರಾಜ್ಯದ ಅವಗಹನೆಗೆ ಕಳುಹಿಸಿರುತ್ತಾದರೂ ಕರ್ನಾಟಕ ರಾಜ್ಯದಲ್ಲಿ ಜಾರಿ ತರುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ಇಚ್ಛಾಶಕ್ತಿ ಹೊಂದದಿರುವುದಕ್ಕೆ ಕಾರಣಗಳು ಪ್ರಶ್ನೆಯಾಗಿಯೇ ಉಳಿದಿವೆ. ೨೦೦೬ ರಲ್ಲಿ ಅರಣ್ಯ ಹಕ್ಕು ಅಧಿನಿಯಮವನ್ನು ಜಾರಿ ತಂದು ಆದಿವಾಸಿಗಳಿಗೆ ಅರಣ್ಯ ಕಿರು ಉತ್ಪನ್ನ ಪಡೆವ ಮತ್ತು ಸಾಗುವಳಿ ಮಾಡುವ ಪಟ್ಟಾ ಪಡೆಯುವ ಹಕ್ಕನ್ನು ನೀಡಿದ್ದರೂ ಅನುಷ್ಠಾನ ಮಟ್ಟದಲ್ಲಿ ಅಧಿಕಾರಿಗಳಲ್ಲಿ ಇಂದಿಗೂ ಗೊಂದಲವಿದೆ. ಇದಕ್ಕೆ ಕಾರಣಗಳು ಪ್ರಶ್ನೆಯಾಗಿಯೇ ಉಳಿದಿದೆ.

ಅರಣ್ಯ ವ್ಯಾಪ್ತಿಯ ಆದಿವಾಸಿ ಸಮುದಾಯಗಳಿಗೆ ಅರಣ್ಯ ಹಕ್ಕು ಪತ್ರವನ್ನು ಸರ್ಕಾರದ ಆದೇಶದನ್ವಯ ಜಿಲ್ಲಾಡಳಿತದಿಂದ ನೀಡುತ್ತಿದ್ದಾರೆ. ಆದರೆ, ವಾಸ್ತವದಲ್ಲಿ ಅರಣ್ಯ ಹಕ್ಕು ಪತ್ರವು ಒಂದೆಡೆ ಹಕ್ಕನ್ನು ನೀಡಿ ಇನ್ನೊಂದೆಡೆ ಕಿತ್ತುಕೊಂಡಂತಾಗಿದೆ ಎಂದು ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಮೂಡಿಗೆರೆ ತಾಲ್ಲೂಕಿನ ಬಿಳಿಗಲ್ ನಿವಾಸಿ ಶ್ರೀ ಪ್ರಶಾಂತ ಅವರ ಅಭಿಪ್ರಾಯವಾಗಿದೆ. ಅರಣ್ಯ ಹಕ್ಕು ಅಡಿಯಲ್ಲಿ ಪಡೆಯುವ ಸಾಗುವಳಿ ಚೀಟಿಯನ್ನು ಸಾಗುವಳಿ ಜಮೀನು ಮತ್ತು ಇನ್ನಿತರ ಅಭಿವೃದ್ಧಿ ಕಾರ್ಯಗಳಿಗೆ ಬ್ಯಾಂಕ್‌ಗಳ ಮುಖಾಂತರ ಸಾಲವನ್ನು ಪಡೆಯುಲು ಸಾಧ್ಯವಿಲ್ಲ ಹಾಗೂ ಕಷ್ಟ ಸಮಯದಲ್ಲಿ ಅಲ್ಪ ಜಮೀನನ್ನು ಪರಾಭಾರೆ ಮಾಡಲು ಸಾಧ್ಯವಿಲ್ಲದಂತೆ ಹಕ್ಕನ್ನು ಮೊಟುಕುಗೊಳಿಸಲಾಗಿದೆ[೪]. ಈ ಪರಿಯಾಗಿ ಕಾಯ್ದೆಗಳು ಅನುಷ್ಠಾನಗೊಂಡಾಗ ಇರುವ ಅಲ್ಪ ಭೂಹಿಡುವಳಿಗಳ ಮೇಲೆ ಹಕ್ಕು ಸಾಧಿಸುವಿಕೆ ಕಷ್ಟಸಾಧ್ಯವಾಗುತ್ತದೆ. ಯಾವುದಾದರು ಯೋಜನೆ ಜಾರಿಗೊಂಡಾಗ ಸಿಗುವ ಅಲ್ಪ ಮೊತ್ತಕ್ಕೆ ಸ್ಥಳಾಂತರಗೊಳ್ಳಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಉಳ್ಳವರು ಭೂಹಿಡುವಳಿಯನ್ನು ಹೆಚ್ಚಿಸಿಕೊಳ್ಳುತ್ತಾ ಸಾಗುತ್ತಿದ್ದಾರೆ ಬಡವ ಬಡವನಾಗಿಯೇ ಉಳಿಯುತ್ತಿದ್ದಾನೆ.

ಕೋಷ್ಟಕ೧೯ ಸಮುದಾಯಗಳು ಹೊಂದಿರುವ ಭೂಹಿಡುವಳಿಗಳ ಪ್ರಕಾರದ್ದಾಗಿದೆ. ಈ ವ್ಯಾಪ್ತಿಯಲ್ಲಿ ಸ್ವಂತ ಭೂಹಿಡುವಳಿ ಹೊಂದಿರುವವರು ೬೫.೨% ರಷ್ಟಿದ್ದಾರೆ. ಭೂರಹಿತರು ೧೧.೨% ರಷ್ಟಿದ್ದಾರೆ. ಜಿಲ್ಲಾಡಳಿತದಿಂದ ಅರಣ್ಯ ಹಕ್ಕು ಪತ್ರವನ್ನು ಪಡೆದಿರುವವರು ೯.೨% ರಷ್ಟಿದ್ದಾರೆ. ಸ್ವಂತ ಭೂಹಿಡುವಳಿಯೊಂದಿಗೆ ಅರಣ್ಯ ಪ್ರದೇಶಗಳನ್ನು ಒತ್ತುವರಿ ಮಾಡಿ ಸಕ್ರಮಗೊಳಿಸಿಕೊಂಡು ಅರಣ್ಯ ಹಕ್ಕು ಪತ್ರ ಪಡೆದಿರುವವರು ೮% ರಷ್ಟಿದ್ದಾರೆ ಮತ್ತು ಸ್ವಂತ ಭೂಹಿಡುವಳಿಯೊಂದಿಗೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವವರು ೬.೪% ರಷ್ಟಿದ್ದಾರೆ.


ಕೋಷ್ಟಕ ೧೯

ಅಧ್ಯಯಯಕ್ಕೊಳಪಟ್ಟ ಸಮುದಾಯಗಳ ಭೂಹಿಡುವಳಿ ಪ್ರಕಾರಗಳು

ಕ್ರ.ಸಂ	ಭೂ ಹಿಡುವಳಿ ಪ್ರಕಾರ	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ		
1	ಭೂರಹಿತರು	೧	೧೧	೬	೧೦	೨೮	೧೧.೨
2	ಸ್ವಂತ ಭೂಹಿಡುವಳಿ	೯	೬೭	೫೨	೩೫	೧೬೩	೬೫.೨
3	ಸ್ವಂತ ಮತ್ತು ಅರಣ್ಯ ಒತ್ತುವರಿ	೧	೮	೬	೧	೧೬	೬.೪
4	ಸ್ವಂತ ಮತ್ತು ಅರಣ್ಯ ಹಕ್ಕು ಪತ್ರ	೦	೩	೧೭	೦	೨೦	೮
5	ಅರಣ್ಯ ಹಕ್ಕು ಪತ್ರ	೨	೨	೧೮	೧	೨೩	೯.೨
	ಒಟ್ಟು	೧೩	೯೧	೯೯	೪೭	೨೫೦	೧೦೦

ಗ್ರಾಫ್ ೯ ರ ಅನ್ವಯ ೬೫.೨% ರಷ್ಟು ಸ್ವಂತ ಭೂಹಿಡುವಳಿಯನ್ನು ಹೊಂದಿರುವ ಮಾಹಿತಿದಾರರು (ಸ್ಥಳಾಂತರಗೊಂಡವರನ್ನು ಒಳಗೊಂಡಂತೆ) ಈ ವ್ಯಾಪ್ತಿಯಲ್ಲಿ ಅಧಿಕ ಪ್ರಮಾಣದಲ್ಲಿದ್ದಾರೆ. ಹಿಂದೆ ಬಗರ್‌ಹುಕುಂ ಸಾಗುವಳಿದಾರರಾಗಿದ್ದರೂ, ಸರ್ಕಾರದ ಅಕ್ರಮ ಸಕ್ರಮ ಯೋಜನೆ ಅಡಿ ಸಾಗುವಳೀ ಭೂಮಿಯನ್ನು ಸ್ವಂತ ಹಿಡುವಳಿಗಳಾಗಿ ಪರಿವರ್ತಿಸಿಕೊಂಡಿದ್ದಾರೆ.

ಗ್ರಾಫ್ ೯. ಭೂಹಿಡುವಳಿ ಪ್ರಕಾರಗಳು



೧೧.೨% ರಷ್ಟು ಭೂರಹಿತ ಮಾಹಿತಿದಾರರಿದ್ದಾರೆ. ಸಮುದಾಯದಲ್ಲಿ ಹಿರಿಯರಿಂದ ಯಾವುದೇ ಭೂಹಿಡುವಳಿಗಳು ದೊರೆಯದಿರುವುದು ಮತ್ತು ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ವಿಘಟನೆ ಹೊಂದಿದಾಗ ಚಿಕ್ಕ ಚಿಕ್ಕ ಭೂಹಿಡುವಳಿಗಳಾಗಿ ಮಾರ್ಪಾಡಾಗುವ ಮುಖಾಂತರ ಅಲ್ಪ ಜಮೀನುಗಳ ಮೇಲೆ ಹಕ್ಕು ಸಾಧಿಸದಿರುವಿಕೆಯಿಂದಾಗಿ ಭೂಹಿಡುವಳಿ ರಹಿತರಾಗಿದ್ದಾರೆ.

೯.೨% ಅರಣ್ಯ ಹಕ್ಕು ಪತ್ರವನ್ನು ಪಡೆದಿರುವ ಮಾಹಿತಿದಾರರಿದ್ದಾರೆ. ೨೦೦೬ರ ನಂತರ ಜಿಲ್ಲಾಡಳಿತ ಮತ್ತು ಕಂದಾಯ ಇಲಾಖೆ ವತಿಯಿಂದ ಅರಣ್ಯ ಹಕ್ಕು ಪತ್ರವನ್ನು ನೀಡುತ್ತಿದ್ದಾರೆ. ಕನಿಷ್ಠ ಮೂರು ತಲೆಮಾರುಗಳ ಕಾಲ ಸಾಗುವಳಿ ಮಾಡಿಕೊಂಡಿದ್ದು, ಕಂದಾಯ ಇಲಾಖೆ ವತಿಯಿಂದ ಸಾಗುವಳಿದಾರರೆಂದು ದೃಢೀಕರಿಸಲ್ಪಟ್ಟಿರುವರೂ ಅವರು ಅರಣ್ಯ ಪತ್ರವನ್ನು ಪಡೆದಿರುವ ಸಾಗುವಳಿ ಹಕ್ಕುದಾರರಾಗಿದ್ದಾರೆ.

೮% ರಷ್ಟಿರುವ ಸ್ವಂತ ಮತ್ತು ಅರಣ್ಯ ಹಕ್ಕು ಪಟ್ಟವನ್ನು ಪಡೆದಿರುವ ಮಾಹಿತಿದಾರರು, ಅವಿಭಕ್ತ ಕುಟುಂಬಗಳು ವಿಘಟನೆಯಾದ ಸಂದರ್ಭದಲ್ಲಿ ಸಾಗುವಳಿ ಭೂಮಿಯು ಹಂಚಿಕೆಯಾದಾಗ ಅಲ್ಪ ಪ್ರಮಾಣದ ಭೂಹಿಡುವಳಿಗಳು ದೊರೆತು ಕುಟುಂಬ ನಿರ್ವಹಣೆಗೆ ಸರಿಸಮವಾಗದಿದ್ದ ಸಂದರ್ಭದಿಂದ ಅಕ್ಕ ಪಕ್ಕದ ಅರಣ್ಯ ಭೂಮಿಯನ್ನು ಒತ್ತುವರಿಗೊಳಿಸಿಕೊಂಡು ಕೃಷಿ ಮಾಡಿದ್ದಾರೆ ಮತ್ತು ಇಲಾಖೆ ವತಿಯಿಂದ ಅಕ್ರಮ – ಸಕ್ರಮದಡಿಯಲ್ಲಿ ಅರಣ್ಯ ಹಕ್ಕು ಪತ್ರವನ್ನು ಪಡೆದಿದ್ದಾರೆ.



ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಪ್ರದೇಶವಾದ್ದರಿಂದ ಅಲ್ಲಿ ನೆಲೆಸಿರುವ ಸಮುದಾಯಗಳು ಕೃಷಿ ಚಟುವಟಿಕೆಗಳನ್ನು ತಮ್ಮ ಆರ್ಥಿಕ ಮೂಲಾಧಾರವಾಗಿ ಹೊಂದಿದ್ದು ಅಲ್ಪ ಪ್ರಮಾಣದ ಸಾಗುವಳಿ ಭೂಮಿಗೆ ಸಮೀಪದಲ್ಲಿರುವ ಅರಣ್ಯ ಪ್ರದೇಶಗಳ ಸ್ಥಳಗಳನ್ನು ಒತ್ತುವರಿ ಮಾಡಿಕೊಳ್ಳುವ ಸಂದರ್ಭಗಳು ಎದುರಾಗಿರುತ್ತವೆ. ಇದರೊಂದಿಗೆ ಯಾರು ಪೂರ್ವಿಕರ ಕಾಲದಿಂದಲೂ ಅರಣ್ಯ ಪ್ರದೇಶಗಳನ್ನು ಸಾಗುವಳಿ ಮಾಡಿಕೊಂಡು ಜೀವನ ಸಾಗಿಸಿದ್ದು, ಗ್ರಾಮ ಅರಣ್ಯ ಸಮಿತಿ ಮುಖಾಂತರ ಹಕ್ಕು ಮಾನ್ಯತೆಗೆ ಅರ್ಜಿ ಸಲ್ಲಿಸಿದ್ದಾರೋ ಅಂತಹ ಕುಟುಂಬಗಳಿಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಮುಖಾಂತರ ಅರಣ್ಯ ಸಾಗುವಳಿ ಹಕ್ಕುಪತ್ರಗಳನ್ನು ನೀಡಿದ್ದಾರೆ. ಇದರೊಂದಿಗೆ ಬಹುಪಾಲು ಎಲ್ಲಾ ಸಮುದಾಯದವರು ಸಾಗುವಳಿ ಚೀಟಿಯನ್ನು ಹಾಗೂ ಖಾತೆಯನ್ನು ತಮ್ಮ ಸ್ವಂತಿಕೆಯಲ್ಲಿ ಪಡೆದಿದ್ದಾರೆ. ಕೃಷಿ ಭೂಮಿಯನ್ನು ಹೊಂದದಿರುವವರು ಕೂಲಿ ಕಾರ್ಮಿಕರಾಗಿ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದಲ್ಲದೆ ವಾಸ ಸ್ಥಳಗಳನ್ನು ಸ್ವಂತ ಮತ್ತು ಅರಣ್ಯ ವ್ಯಾಪ್ತಿಯ ಹಕ್ಕು ಪತ್ರಗಳ ಮುಖಾಂತರ ಪಡೆದಿದ್ದಾರೆ. ಅರಣ್ಯ ಹಕ್ಕು ಅಧಿನಿಯಮದಡಿಯಲ್ಲಿ ಅರಣ್ಯ ಹಕ್ಕು ಪತ್ರ ದೊರೆತರು ಅದನ್ನು ಎಲ್ಲೆಡೆಯಲ್ಲಿಯೂ ಸಮರ್ಪಕವಾಗಿ ಬಳಸಲು ಸಾಧ್ಯವಾಗದೇ ಇರುವುದು ಹಕ್ಕುಗಳನ್ನು ಕೊಟ್ಟು ಕಿತ್ತುಕೊಂಡಂತಾಗಿದೆ.

ಭೂಹಿಡುವಳಿ ವಿಸ್ತೀರ್ಣ

ಭಾರತೀಯ ಸಂದರ್ಭದಲ್ಲಿ ಕಂದಾಯ ಇಲಾಖೆ ಮುಖಾಂತರ ಭೂಹಿಡುವಳಿಗಳನ್ನು ಅಳತೆ ಮಾಡುವ ಕಾರ್ಯವನ್ನು ನಿರ್ವಹಿಸುತ್ತದೆ. ಕಂದಾಯ ಇಲಾಖೆಯು ಸಮೀಕ್ಷಾ ಅಥವಾ ಮೋಜಣಿ ವಿಭಾಗವನ್ನು ಹೊಂದಿದ್ದು, ಈ ವಿಭಾಗದ ಮುಖಾಂತರ ಭೂಹಿಡುವಳಿಗಳನ್ನು ಅಳತೆ ಕಾರ್ಯಗಳಿಗೆ ಒಳಪಡಿಸುತ್ತದೆ. ವಾಸ್ತವದಲ್ಲಿ ಭೂಹಿಡುವಳಿಗಳನ್ನು ಗುಂಟೆ, ಎಕರೆ ಮತ್ತು ಹೆಕ್ಟೇರ್ ಮಾಪನದಲ್ಲಿ ಉಲ್ಲೇಖಿಸುವ ವಾಡಿಕೆಯುಂಟು. ಗುಂಟೆ ಮಾಪನವು, ಯಾವ ಭೂ ಹಿಡುವಳಿಯು <೧ ಎಕರೆಗಿಂತ ಕಡಿಮೆ ವಿಸ್ತೀರ್ಣತೆಗೆ ಒಳಪಡುವುದೋ ಅಂತಹ ವ್ಯಾಪ್ತಿಯನ್ನು ಗುಂಟೆ ಎಂದು ಮಾಪನ ಮಾಡುವ ಬಳಕೆ ಇದೆ. ಯಾವ ಭೂಹಿಡುವಳಿ ೪೦ ಗುಂಟೆ ವ್ಯಾಪ್ತಿಗೆ ಒಳಪಡುವುದೋ ಅದನ್ನು ಒಂದು ಎಕರೆ ಎಂದು ಮಾಪನ ಮಾಡುವ ಬಳಕೆ ಇದೆ. ಯಾವ ಭೂಹಿಡುವಳಿ ೨.೫೭ ಎಕರೆಗಳಿಂದ ವ್ಯಾಪ್ತಿಗೆ ಒಳಪಡುವುದೋ ಅದನ್ನು ಒಂದು ಹೆಕ್ಟೇರ್ ಎಂದು ಮಾಪನ ಮಾಡುವ ಬಳಕೆ ಇದೆ. ಕಂದಾಯ ಇಲಾಖೆಯಿಂದ ಜಾರಿಯಲ್ಲಿರುವ ಪಹಣಿ, ಮುಟೇಷನ್ ದಾಖಲೆ (RTC: Records of Rights, Tenance and Crop) ಪ್ರಕಾರ ಎಕರೆ ಮತ್ತು ಗುಂಟೆ ಮಾಪನದಲ್ಲಿ ಭೂಹಿಡುವಳಿಗಳನ್ನು ಉಲ್ಲೇಖಿಸಲಾಗಿದೆ. ೨೦೦೬ರ ಅರಣ್ಯ ಹಕ್ಕು ಅಧಿನಿಯಮದಡಿ ಅರಣ್ಯ ವ್ಯಾಪ್ತಿಯ ಸಮುದಾಯಗಳು ಸಾಗುವಳಿ ಮಾಡಿರುವ ಭೂಮಿಗಳಿಗೆ ಅರಣ್ಯ ಹಕ್ಕು ಪತ್ರ ನೀಡುವುದರೊಂದಿಗೆ ಅದರಲ್ಲಿ ಎಷ್ಟು ಎಕರೆ ಗುಂಟೆ ಸಾಗುವಳಿಗೆ ಒಳಪಟ್ಟಿದೆ ಎಂದು ಉಲ್ಲೇಖಿಸಿರುತ್ತಾರೆ.

ಸಾಮಾನ್ಯವಾಗಿ ರೈತರು ಹೊಂದಿರುವ ಭೂಹಿಡುವಳಿಗಳ ವಿಸ್ತೀರ್ಣದ ಆಧಾರದ ಅನ್ವಯ ಯಾವ ಪ್ರಮಾಣದ ರೈತರೆಂದು ಗುರುತಿಸುವುದುಂಟು. ಯಾವ ರೈತರ ಭೂಹಿಡುವಳಿ ೫ ಎಕರೆಗಿಂತ ಕಡಿಮೆ ಪ್ರಮಾಣದಲ್ಲಿರುವುದೋ ಅವರು ಸಣ್ಣ ರೈತರೆಂದು ಕರೆಯಲ್ಪಡುತ್ತಾರೆ. ಯಾವ ರೈತರ ಭೂ ಹಿಡುವಳಿ ೨.೪೭ ಎಕರೆಗಿಂತ ಕಡಿಮೆ ಪ್ರಮಾಣದಲ್ಲಿರುವುದೋ ಅವರು ಅತೀ ಸಣ್ಣ ರೈತರೆಂದು ಕರೆಯಲ್ಪಡುತ್ತಾರೆ. ಕೋಷ್ಟಕ೨೦ ರಲ್ಲಿ ಮಾಹಿತಿದಾರರ ಭೂ ಹಿಡುವಳಿಗಳನ್ನು ಎಕರೆ ಮಾಪನದ ಅಡಿಯಲ್ಲಿ ಗುರುತಿಸಲಾಗಿದೆ.

ರಾಷ್ಟ್ರೀಯ ಉದ್ಯಾನವನ ಮತ್ತು ಉದ್ಯಾನವನದಿಂದ ಸ್ಥಳಾಂತರಗೊಂಡಿರುವವರನ್ನು ಆಧರಸಿ ೧ ರಿಂದ ೨ ಎಕರೆ ಭೂ ಹಿಡುವಳಿಯನ್ನು ಹೊಂದಿರುವ ಅತೀ ಸಣ್ಣ ಪ್ರಮಾಣದ ಸಾಗುವಳಿದಾರರು ೪೧.೨% ರಷ್ಟಿದ್ದಾರೆ. ೨ ರಿಂದ ೪ ಎಕರೆ ಭೂಹಿಡುವಳಿಯನ್ನು ಹೊಂದಿರುವ ಸಣ್ಣ ಪ್ರಮಾದ ಸಾಗುವಳಿದಾರರು ೨೯.೨%ರಷ್ಟಿದ್ದಾರೆ. ಸಾಗುವಳೀಗಾಗಿ ಭೂಹಿಡುವಳಿ ಇಲ್ಲದವರು ಕೂಲಿ ಆಧಾರಿತವಾಗಿದ್ದು, ೧೧.೨% ರಷ್ಟಿದ್ದಾರೆ. ೪ ರಿಂದ ೬ ಎಕರೆ ಸಾಗುವಳಿದಾರರು ೮.೮% ರಷ್ಟಿದ್ದಾರೆ ಮತ್ತು ೬ ರಿಂದ ೮ ಎಕರೆ ದೊಡ್ಡ ಸಾಗುವಳಿದಾರರು ೦.೮%ರಷ್ಟಿದ್ದಾರೆ.


ಕೋಷ್ಟಕ ೨೦

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರ ಭೂಹಿಡುವಳಿ ಎಕರೆಗಳಲ್ಲಿ

ಕ್ರ.ಸಂ	ಭೂ ಹಿಡುವಳಿ ಎಕರೆಗಳಲ್ಲಿ	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ		
1	ಭೂಮಿ ಇಲ್ಲದವರು	೧	೧೧	೬	೧೦	೨೮	೧೧.೨
2	೦.೨೨–೪೦ ಗುಂಟ	೪	೯	೫	೪	೨೨	೮.೮
3	೧–೨ ಎಕರೆ	೪	೪೧	೩೫	೨೩	೧೦೩	೪೧.೨
4	೨–೪ ಎಕರೆ	೪	೨೬	೩೬	೭	೭೩	೨೯.೨
5	೪–೬ ಎಕರೆ	೦	೩	೧೬	೩	೨೨	೮.೮
6	೬–೮ ಎಕರೆ	೦	೧	೧	೦	೨	೦.೮
	ಒಟ್ಟು	೧೩	೯೧	೯೯	೪೭	೨೫೦	೧೦೦

ಗ್ರಾಫ್ ೧೦ ರ ಅನ್ವಯ ಉದ್ಯಾನವನ ಮತ್ತು ಸ್ಥಳಾಂತರ ಹೊಂದಿದವರನ್ನು ಒಳಗೊಂಡಂತೆ ಅತೀ ಸಣ್ಣ ಪ್ರಮಾಣದ ಸಾಗುವಳಿದಾರರು ೪೧.೨% ರಷ್ಟಿದ್ದಾರೆ. ಮೂಲ ಸಾಗುವಳಿದಾರರು ಪೂರ್ವಜರಿಂದ ಪಿರ್ತಾಜಿತವಾಗಿ ಪಡೆದಿರುವ ಮತ್ತು ತಾವು ಹೊಂದಿರುವ ಕುಟುಂಬದ ಗಾತ್ರಾನುಸಾರವಾಗಿ ಸಣ್ಣ ಪ್ರಮಾಣದ ೧ ರಿಂದ ೨ ಎಕರೆ ಭೂಹಿಡುವಳಿಯನ್ನು ಹೊಂದಿದ್ದಾರೆ. ಅವಿಭಕ್ತ ಕುಟುಂಬ ಹೊಂದಿರುವ ಮತ್ತು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಮಾಹಿತಿದಾರರು ೪ ರಿಂದ ೬ ಎಕರೆಯ ಸಾಗುವಳಿದಾರರಾಗಿ ೨೯.೨%, ೪ ರಿಂದ ೬ ಎಕರೆ ಸಾಗುವಳಿದಾರರಾಗಿ ೮.೮% ಮತ್ತು ದೊಡ್ಡ ಪ್ರಮಾಣದ ಸಾಗುವಳಿದಾರರಾಗಿ ೬ ರಿಂದ ೮ ಎಕರೆವುಳ್ಳವರು ೦.೮% ರಷ್ಟಿದ್ದಾರೆ.

ಗ್ರಾಫ್ ೧೦, ಭೂ ಹಿಡುವಳಿ ಎಕರೆಗಳಲ್ಲಿ



ಯಾವುದೇ ಮೂಲ ಆಸ್ತಿಗಳನ್ನು ಹೊಂದದೆ, ಪಿರ್ತಾಜಿತ ಮೂಲಗಳಿಂದಲೂ ಸ್ವತ್ತುಗಳು ದೊರೆಯದೇ ಭೂಹಿಡುವಳಿಗಳನ್ನು ಹೊಂದದೆ ಇರುವವರು೧೧.೨% ರಷ್ಟಿದ್ದಾರೆ. ಒಂದು ಎಕರೆ ಪ್ರಮಾಕ್ಕಿಂತ ಕಡಿಮೆ ಸಾಗುವಳಿ ಮಾಡಿಕೊಂಡು ಕೂಲಿ ಕಾರ್ಯಕ್ಕೂ ತಮ್ಮನ್ನು ತೊಡಗಿಸಿಕೊಂಡಿರುವವರು ೮.೮% ರಷ್ಟಿದ್ದಾರೆ.

ಸಮಗ್ರ ನಕಾಶೆಯ ಅವಲೋಕನದ ಪ್ರಕಾರ ಅರಣ್ಯ ವ್ಯಾಪ್ತಿಯ ಸಾಗುವಳಿದಾರರಲ್ಲಿ ಅತೀ ಸಣ್ಣ ಪ್ರಮಾಣದ ಸಾಗುವಳಿದಾರರೇ ಅಧಿಕವಾಗಿದ್ದಾರೆ. ಇವರೊಂದಿಗೆ ಭೂಹಿಡುವಳಿ ಇಲ್ಲದವರು ಕೃಷಿ ಕೂಲಿ ಮತ್ತು ಇತರೆ ಕೂಲಿ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆ. ಆರ್ಥಿಕವಾಗಿ ಸಬಲರಾಗಿದ್ದು, ಅರಣ್ಯ ಭೂಮಿಗಳಲ್ಲಿ ಸಾಗುವಳಿ ಹೆಚ್ಚುಗೊಳಿಸಿಕೊಂಡಿರುವವರು ಕ್ರಮೇಣವಾಗಿ ಇಳಿಕೆಯಾಗಿದ್ದಾರೆ. ಈ ಅರಣ್ಯ ವ್ಯಾಪ್ತಿ ಪ್ರದೇಶದಲ್ಲಿ ಅಧಿಕವಾಗಿರುವವರು ಸಣ್ಣ ಪ್ರಮಾಣದ ರೈತರೇ ಹೊರತು, ದೊಡ್ಡ ಪ್ರಮಾಣದ ರೈತರಾಗಿಲ್ಲ.

ಪಶು ಸಂಪತ್ತು

ಕೃಷಿ ಚಟುವಟಿಕೆಯಲ್ಲಿ ಮಾನವನಿಗೆ ಸಕಲ ಕಾರ್ಯಗಳಿಗೆ ಆಧಾರವಾಗುವ ಸಂಪನ್ಮೂಲವೆಂದರೆ ಪಶು ಸಂಪತ್ತಾಗಿದೆ. ಸಣ್ಣ ಪ್ರಮಾಣದ ರೈತಾಪಿ ವರ್ಗದಿಂದ ದೊಡ್ಡ ಪ್ರಮಾಣದ ರೈತರವರೆಗೂ ಪಶು ಸಂಪತ್ತಿನ ಅವಶ್ಯಕತೆ ಅನಿವಾರ್ಯ. ಹೊಲದಲ್ಲಿ ಬಿತ್ತನೆ ಕಾರ್ಯಕ್ಕೆ, ಕಳೆ ನಿರ್ವಹಣೆ ಕಾರ್ಯಕ್ಕೆ, ಇಳುವರಿಗಳನ್ನು ಕಣಜಕ್ಕೆ ಮತ್ತು ಮಾರುಕಟ್ಟೆಗೆ ಸಾಗಾಟ ಮಾಡಲು ಹೀಗೆ ಒಂದಿಲ್ಲೊಂದು ಕಾರ್ಯಗಳಿಗೆ ಪಶು ಸಂಪತ್ತಿನ ಅವಶ್ಯಕತೆ ರೈತಾಪಿ ವರ್ಗಕ್ಕೆ ಇದೆ. ಪಶುಗಳಿಂದ ಎರವಲು ಪಡೆಯುವ ಶ್ರಮದಾಯಕ ಕಾರ್ಯಕ್ಕೆ ಸರಿಸಮಾನಾಗಿ ಹೋಲಿಕೆ ಮಾಡುವುದು ಕಷ್ಟ ಸಾಧ್ಯ. ಪಶು ಸಂಪತ್ತಿನಿಂದ ಇದುವರೆಗೂ ಯಾವುದೇ ನಷ್ಟವನ್ನು ರೈತಾಪಿ ವರ್ಗದವರು ಅನುಭವಿಸಿಲ್ಲ. ಪಶುಗಳಿಂದ ದೊರೆಯುವ ಸಗಣಿಗಳನ್ನು ಬಳಸಿಕೊಂಡು ಅನೇಕ ಕಾರ್ಯಗಳಲ್ಲಿ ಅಂದರೆ, ಹೊಲಕ್ಕೆ, ತೋಟಗಳಿಗೆ, ಗದ್ದೆಗಳಿಗೆ ಗೊಬ್ಬರವನ್ನಾಗಿ ಮತ್ತು ಗೊಬ್ಬರವನ್ನು ಕೊಳೆಯಲು ಬಿಟ್ಟು ಅದರಿಂದ ಉತ್ಪತ್ತಿಯಾಗುವ ಅನಿಲವಸ್ತುವಿನಿಂದ (ಗೋಬರ್ ಗ್ಯಾಸ್) ಅಡುಗೆ ತಯಾರಿ, ಬಿಸಿನೀರು ತಯಾರಿಕೆ ಹಾಗೂ ಇನ್ನಿತರ ಕಾರ್ಯಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಪಶುಗಳನ್ನ ಕೇವಲ ಕೃಷಿ ಚಟುವಟಿಕೆಗಳಿಗೆ ಸೀಮಿತಗೊಳಿಸಲಾಗದು, ಅದನ್ನು ಮೀರಿ ಮಾನವನ ಆರ್ಥಿಕ ಚಟುವಟಿಕೆಯಲ್ಲಿ ಪಶುಗಳ ಮೂಲಕವೇ ಆದಾಯದ ಮಟ್ಟವು ಹೆಚ್ಚಾಗಿದೆ ಎಂದರೆ, ತಪ್ಪಾಗಲಾರದು. ಮಾನವನ ತಾಯಿಯಾಗಿ ಹಾಲನ್ನು ನಿಡುವ ಮುಖಾಂತರ ಉತ್ಪಾದನಾಂಗವಾಗಿ ಆದಾಯವನ್ನು ಒಂದೆಡೆ ಹೆಚ್ಚಿಸಿದೆ. ಹಾಲಿನಿಂದ ಉತ್ಪಾದಿಸಲ್ಪಡುವ ಹಲವು ಪ್ರಕಾರದ (ಚೀಸ್, ಪೇಡ, ಕೋವಾ, ಬೆಣ್ಣೆ, ತುಪ್ಪ) ಪದಾರ್ಥಗಳಿಗೆ ಅಂತರಾಷ್ಟ್ರೀಯ ಮಾರುಕಟ್ಟೆ ಮುಖಾಂತರ ಬೇಡಿಕೆಗಳು ಕೂಡ ಹೆಚ್ಚಾಗಿದ್ದು, ಬೃಹತ್ ಉತ್ಪಾದನಾಂಗವಾಗಿ ಹೈನುಗಾರಿಕೆ ವೃತ್ತಿಯು ಕೃಷಿ ಚಟುವಟಿಕೆಯೊಂದಿಗೆ ಸಮ್ಮಿಳಿತವಾಗಿದೆ. ಕೋಳಿ ಸಾಕಾಣಿಕೆ ಮುಖಾಂತರ ಆಹಾರ ಸೇವನೆಗೆ ಮಾಂಸವಾಗಿ, ಮಾನವನ ದೇಹದ ಶಕ್ತಿಯನ್ನು ಹೆಚ್ಚಿಸುವ ಪ್ರವರ್ದಕವಾಗಿ ಮೊಟ್ಟೆಗಳಿಗೆ ಬೇಡಿಕೆ ಇದೆ. ಈ ಬೇಡಿಕೆಗಳನ್ನು ಪೂರೈಸಲು ಪಾರಂಗಳನ್ನು ವೃದ್ಧಿಗೊಳಿಸಿಕೊಂಡು ಆದಾಯದ ಮೂಲವನ್ನು ಹೆಚ್ಚಿಸಿಕೊಂಡವರಿದ್ದಾರೆ. ಒಟ್ಟಿನಲ್ಲಿ ಪಶು ಸಂಪತ್ತು ಮಾನವನಿಗೆ ಗರಿಷ್ಟ ಮಟ್ಟದಲ್ಲಿ ಆದಾಯ ಮತ್ತು ಕೃಷಿ ಚಟುವಟಿಕೆಗಳಲ್ಲಿ ೫೦% ಭಾಗ ತಮ್ಮ ಪಾಲನ್ನು ಹೊಂದಿವೆ ಎಂದರೆ, ಅದು ಅತಿಶಯೋಕ್ತಿಯಾಗಲಾರದು.

ಕೋಷ್ಟಕ೨೧ ಮಾಹಿತಿದಾರರು ಹೊಂದಿರುವ ಪಶು ಸಂಪತ್ತಿನ ವಿವರವನ್ನು ಒಳಗೊಂಡಿದೆ. ಮಾನವನ ತಾಯಿ ಎಂದೇ ಖ್ಯಾತಿಯಾಗಿರುವ ಆಕಳುಗಳು ಈ ಭಾಗದಲ್ಲಿ ಹೆಚ್ಚು ಬಳಕೆಯಲ್ಲಿದ್ದು, ೪೩.೫೩% ರಷ್ಟಿದ್ದು ಅಧಿಕವಾಗಿದೆ. ಈ ಮೂಲಕ ಪಶುಪಾಲನ ವೃತ್ತಿಯನ್ನು ಪೂರ್ವಜರ ಕಾಲದಿಂದಲೂ ಒಳಗೊಂಡಿದ್ದಾರೆಂದು ತಿಳಿದುಬರುತ್ತಿದೆ. ಕೆಲವು ಮಲೆಕುಡಿಯ ಮತ್ತು ಗೌಡಲು ಸಮುದಾಯದ ಸ್ಥಳಾಂತರ ಪ್ರಕ್ರಿಯೆಗೆ ಒಳಗಾದವರು ಹೈನುಗಾರಿಕೆಯನ್ನು ಕೃಷಿ ಚಟುವಟಿಕೆಗಳೊಂದಿಗೆ ಸಮ್ಮಿಳಿತಗೊಳಿಸಿಕೊಂಡು ತಮ್ಮ ಆದಾಯದ ಮಟ್ಟವನ್ನು ಹೆಚ್ಚಿಸಿಕೊಳ್ಳುವತ್ತಾ ಸಾಗುತ್ತಿದೆ. ಕೋಳಿ ಸಾಕಾಣಿಕೆಯು ೩೬.೦೨% ರಷ್ಟಿದೆ. ಈ ಮೂಲಕ ಕೋಳಿಗಳಿಂದ ಉತ್ಪತ್ತಿಯಾಗುವ ಮೊಟ್ಟೆ ಮತ್ತು ಅದರ ಮಾಂಸ ಭಕ್ಷಣೆಯಿಂದ ತಮ್ಮ ಮಕ್ಕಳಿಗೆ

ಕೋಷ್ಟಕ ೨೧

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರ ಪಶು ಸಂಪತ್ತಿನ ವಿವರ

ಕ್ರಸಂ	ಪಶು ಸಂಪತ್ತು	ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ	ಒಟ್ಟು	ಶೇಕಡವಾರು
1	ಎತ್ತು/ಹೋರಿ	೭	೧೪೬	೧೮೮	೨೦	೩೬೧	೧೯.೩೮
2	ಆಕಳು/ಕರು	೩೮	೩೩೦	೩೬೫	೭೮	೮೧೧	೪೩.೫೩
3	ಕೋಳಿ	೩೦	೨೮೦	೨೭೦	೯೧	೬೭೧	೩೬.೦೨
4	ಎಮ್ಮೆ/ಕೋಣ	೦	೧೫	೪	೧	೨೦	೧.೦೭
	ಒಟ್ಟು	೭೫	೭೭೧	೮೨೭	೧೯೦	೧೮೬೩	೧೦೦.೦೦

ಅವಶ್ಯವಿರುವ ಪ್ರೋಟಿನ್ ಕೊರತೆಯನ್ನು ನೀಗಿಸುವ ಸಲುವಾಗಿ ಕೋಳಿ ಸಾಕಾಣಿಕೆಯು ಆಕಳು ಸಾಕಾಣಿಕೆ ನಂತರದ ಸ್ಥಾನವನ್ನು ಪಡೆದಿದೆ.

ಆಕಳುಗಳನ್ನು ಹಾಲು ಉತ್ಪಾದನೆಗೆ ಬಳಕೆಮಾಡಿಕೊಂಡರೆ, ಸಮತಟ್ಟಾದ ಭೂಹಿಡುವಳಿಗಳಲ್ಲಿ ಗದ್ದೆಗಳನ್ನು ನಿರ್ಮಾಣ ಮಾಡಿಕೊಂಡು ಗದ್ದೆ ಸಾಗುವಳಿಗಾಗಿ ಎತ್ತುಗಳನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಆಕಳುಗಳ ಸಂತತಿ ಹೆಚ್ಚಿಸುವಿಕೆ ಮತ್ತು ಕೃಷಿಗಾಗಿ ಕರುಗಳನ್ನು ಬಳಕೆ ಮಾಡಿಕೊಳ್ಳುವ ಸಲುವಾಗಿ ದೇಶಿ ಜ್ಞಾನದಡಿ ಹೋರಿಗಳನ್ನು ಸಾಕುವ ವಾಡಿಕೆ ಈ ಪ್ರಾಂತ್ಯದಲ್ಲಿದೆ. ಈ ಮೂಲಕ ೧೯.೩೮% ಎತ್ತು/ಹೋರಿಗಳನ್ನು ಸಾಕಿ ಸಲುಹುತ್ತಿದ್ದಾರೆ.

ಕೋಣಗಳು ಹೆಚ್ಚು ದಕ್ಷಿಣ ಕನ್ನಡ ಮತ್ತು ಉಡುಪಿ ಭಾಗದಲ್ಲಿ ಬಳಕೆಯಲ್ಲಿದೆ. ಈ ಮೂಲಕ ಗದ್ದೆ ಸಾಗುವಳಿ ಮತ್ತು ಕಂಬಳದಂತಹ ಸಾಂಸ್ಕೃತಿಕ ಆಚರಣೆಯಲ್ಲಿ ಕೋಣಗಳನ್ನು ಬಳಸಿಕೊಂಡು ಓಟದ ಸ್ಪರ್ದೆಯಲ್ಲಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಆಕಳುಗಳನ್ನು ದೈವ ಸಮಾನವಾಗಿ ಕಾಣುವ ದೃಷ್ಟಿಯಿಂದ ಮತ್ತು ಪೌಷ್ಟಿಕಯುಕ್ತವಾದ ಹಾಲನ್ನು ನೀಡುವ ಕಾರಣದಿಂದ ಬಳಕೆ ಹೆಚ್ಚಿದೆ. ಅದನ್ನು ಹೊರತು ಪಡಿಸಿ ಈ ವ್ಯಾಪ್ತಿಯಲ್ಲಿ ಕೋಣಗಳು/ಎಮ್ಮೆಗಳನ್ನು ಬಳಕೆ ಮಾಡಿಕೊಂಡಿಲ್ಲದಿರುವುದು ಹೆಚ್ಚಾಗಿಲ್ಲದ ಕಾರಣ ೧.೦೭% ರಷ್ಟಿದೆ.

ಒಟ್ಟಾರೆಯ ಕೋಷ್ಟಕದ ಅನುಸಾರವಾಗಿ ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರು ಕೃಷಿ ಚಟುವಟಿಕೆಗಳಿಗಾಗಿ ಎತ್ತು/ಹೋರಿ ಹಾಗೂ ಗದ್ದೆ ಚಟುವಟಿಕೆಗೆ ಎಮ್ಮೆ/ಕೋಣಗಳನ್ನು ಬಳಕೆ ಮಾಡುವುದರೊಂದಿಗೆ ಆಕಳು/ಕರುಗಳನ್ನು ದಿನ ನಿತ್ಯದ ಕ್ಷೀರ ಉತ್ಪಾದಿತ ಆಹಾರಗಳಿಗಾಗಿ ಹಾಗೂ ಕೋಳಿಗಳನ್ನು ಸಾಕು ಪ್ರಾಣಿಗಳನ್ನಾಗಿ ಬಳಸಿಕೊಳ್ಳವುದರೊಂದಿಗೆ ಪರಸ್ಪರ ಸಂಬಂಧವನ್ನು ಹೊಂದಿದ್ದಾರೆಂದು ತಿಳಿದುಬರುತ್ತದೆ. ಇದರೊಂದಿಗೆ ಎಲ್ಲಾ ಸಮುದಾಯಗಳು ಪಶುಪಾಲನ ಮೂಲ ವೃತ್ತಿಯನ್ನು ಹೊಂದಿದ್ದಾರೆಂದು ತಿಳಿದುಬರುತ್ತದೆ.

ಸಾಮಾಜಿಕ ಭದ್ರತಾ ವ್ಯವಸ್ಥೆಗಳು

ಭಾರತದ ಆರ್ಥಿಕ ವಿಶ್ಲೇಷಣೆ ಅಡಿಯಲ್ಲಿ ಕುಟುಂಬಗಳು ವಾರ್ಷಿಕ ಅವಧಿಯಲ್ಲಿ ಹೊಂದುವ ಆದಾಯದ ಅನುಸಾರವಾಗಿ ಮೂರು ಪ್ರಕಾರದ ಕುಟುಂಬಗಳೆಂದು ವಿಂಗಡಿಸಲಾಗಿದೆ. ಅವುಗಳಲ್ಲಿ ಬಡತನದ ಅಂಚಿನಲ್ಲಿರುವ ಕುಟುಂಬಗಳು, ಬಡತನ ರೇಖೆಗಿಂತ ಕಡಿಮೆ ಇರುವ ಕುಟುಂಬಗಳು ಮತ್ತು ಬಡತನ ರೇಖೆಗಿಂತ ಮೇಲ್ಮಟ್ಟದ ಕುಟುಂಬಗಳೆಂದು ವಿಂಗಡಿಸಲಾಗಿದೆ. ಯಾವ ಕುಟುಂಬದ ವಾರ್ಷಿಕ ವರಮಾನವು ಎಲ್ಲಾ ಮೂಲದ ಉತ್ಪಾದನಾಂಗಗಳಿಂದ ಕಡಿಮೆ ಪ್ರಮಾಣದ ಆದಾಯದ ಮೂಲವನ್ನು ಹೊಂದಿದ್ದು, ಕನಿಷ್ಠ ಪೂರೈಕೆಯನ್ನು ಹೊಂದಲಾಗದ ಕುಟುಂಬಗಳನ್ನು ಪರಿಗಣಿಸಿ ಬಿ.ಪಿ.ಎಲ್ ಎಂದು ಮತ್ತು ಬಿ.ಪಿ.ಎಲ್ ರೇಖೆಗಿಂತ ಕನಿಷ್ಠ ಮೊತ್ತದ ಆದಾಯವಿರುವ ಕುಟುಂಬವನ್ನು ಅಂಚಿನ ಕುಟುಂಬಗಳೆಂದು ಉಲ್ಲೇಖಿಸಲಾಗಿದೆ. ವ್ಯಕ್ತಿ ಎಂದಿಗೂ ಸರ್ವ ಸಂಪನ್ಮೂಲನಾಗಲು ಸಾಧ್ಯವಿಲ್ಲ. ಆತ ಒಂದಲ್ಲ ಒಂದು ಸಮಸ್ಯೆಗಳಿಂದ ಹೊರತಾಗಿಯು ಇಲ್ಲ. ಈ ಸನ್ನಿವೇಶಗಳನ್ನು ಆಧರಿಸಿಕೊಂಡು ಸರ್ಕಾರವು ಆಡಳಿತ ನಡೆಸುವ ಪ್ರಕ್ರಿಯೆಯಲ್ಲಿ ಆರ್ಥಿಕವಾಗಿ ಬಡತನ ರೇಖೆಗಿಂತ ಕೆಳ ಹಂತದ ಕುಟುಂಬಗಳ ಸಬಲೀಕರಣಕ್ಕೆ ಒತ್ತನ್ನು ನೀಡುವುದರೊಂದಿಗೆ ಅವುಗಳ ಆರ್ಥಿಕ ಸ್ಥಿತಿಗಳನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಹಲವಾರು ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಸರ್ಕಾರದಿಂದ ಜಾರಿಯಾಗುವ ಎಲ್ಲಾ ಯೋಜನೆಗಳಿಗೆ ಮೂಲಭೂತವಾಗಿ ಪಡಿತರ ಚೀಟಿಯನ್ನೇ ಪರಿಗಣನೆಗೆ ತೆಗೆದುಕೊಳ್ಳುವುದು ಸಹಜ ಪ್ರಕ್ರಿಯೆಯಾಗಿದೆ. ಈ ಮೂಲಕ ಬಡತನ ರೇಖೆಗೆ ಸೀಮಿತರಾಗುವ ಕುಟುಂಬವನ್ನು ಹಸಿರು ಕಾರ್ಡ್‌ಗಳನ್ನು ನೀಡುವುದರ ಮುಖಾಂತರ ಗುರುತಿಸಲಾಗುತ್ತದೆ. ಬಡತನ ರೇಖೆಗಿಂತ ಕೆಳ ಹಂತದಲ್ಲಿರುವವರನ್ನು ಹಳದಿ ಕಾರ್ಡ್ ವಿತರಣೆ ಮುಖಾಂತರ ಅಂತ್ಯೋದಯ ಯೋಜನೆಯಡಿಯಲ್ಲಿ ಗುರುತಿಸಲಾಗುತ್ತದೆ.

ಪತಿಯ ಅಕಾಲಿಕ ಮರಣದ ಸಂದರ್ಭದಿಂದಾಗಿ ಸಾಮಾಜಿಕವಾಗಿ ವಿಧವೆ ಎಂದು ಉಲ್ಲೇಖಿಸಿಲ್ಪಡುವ ಮತ್ತು ಬಿ.ಪಿ.ಎಲ್ ಪಡಿತರವನ್ನು ಹೊಂದಿರುವ ಮಹಿಳೆಗೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಭದ್ರತೆಯನ್ನು ನೀಡುವ ಸಲುವಾಗಿ ವಿಧವಾ ವೇತನವನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯು ಕಂದಾಯ ಇಲಾಖೆಯ ಮುಖಾಂತರ ಅನುಷ್ಠಾನಗೊಂಡಿದ್ದು, ಮಾಸಿಕವಾಗಿ ಫಲಾನುಭವಿಯ ಖಾತೆಗೆ ಅಥವಾ ಭಾರತೀಯ ಅಂಚೆ ಕಾರ್ಯಕರ್ತರ ಮುಖಾಂತರ ನೇರವಾಗಿ ತಲುಪುತ್ತದೆ.

೬೦ ವರ್ಷ ಪೂರೈಸಿದ ವಯಸ್ಕರನ್ನು ವೃದ್ದರು ಎಂದು ವೈದ್ಯಕೀಯ ದಾಖಲೆಗಳ ಅನ್ವಯ ಕರೆಯುತ್ತಾರೆ. ಬಿ.ಪಿ.ಎಲ್ ಪಡಿತರ ಹೊಂದಿದ್ದು ಹಾಗೂ ೬೦ ವರ್ಷ ಮೀರಿದ ವೃದ್ದರು ಈ ಯೋಜನೆಯ ಫಲಾನುಭವಿಗಳಾಗುತ್ತಾರೆ.

ಶಿಕ್ಷಣ ಪಡೆಯುವ ಮಗುವು ಪ್ರಾಥಮಿಕ ಶಾಲ ಹಂತದಿಂದ ಸ್ನಾತಕೋತ್ತರ ಶಿಕ್ಷಣ ಪಡೆಯುವವರೆಗೂ ಸರ್ಕಾರದ ವತಿಯಿಂದ ಶಿಷ್ಯವೇತನವನ್ನು ನೀಡಲಾಗುತ್ತದೆ. ಮಗುವಿನ ಸರ್ವತೋಮುಖ ಬೆಳವಣಿಗೆಗಾಗಿ ಸರ್ಕಾರದಿಂದ ಸಮುದಾಯಗಳ ಆಧಾರಿತವಾಗಿ ನೀಡಿರುವ

ಯೋಜನೆಯಾಗಿದೆ. ಶಾಲೆಗೆ ಬರುವ ಮಗುವಿಗೆ ಉಚಿತ ಸಮವಸ್ತ್ರ, ಪಠ್ಯ ಪುಸ್ತಕಗಳು ಮತ್ತು ಪ್ರೌಢ ಶಿಕ್ಷಣವನ್ನು ಅಭ್ಯಸಿಸುತ್ತಿರುವವರಿಗೆ ಸೈಕಲ್ ನೀಡುವ ಮುಖಾಂತರ ಶಿಕ್ಷಣದಲ್ಲಿ ಮಕ್ಕಳ ದಾಖಲಾತಿಯನ್ನು ಹೆಚ್ಚಿಸುವ ಪ್ರಯತ್ನಗಳಾಗಿವೆ. ಪ್ರತಿ ಮಗುವು ಶಿಕ್ಷಣದಿಂದ ವಂಚಿತರಾಗಬಾರದೆಂಬ ಧ್ಯೇಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ೨೧-ಎ ವಿಧಿಗೆ ಸಂವಿಧಾನದ ೮೬ನೇ ತಿದ್ದುಪಡಿಯನ್ನು ತರುವ ಮುಖಾಂತರ ಕಡ್ಡಾಯಗೊಳಿಸಲಾಗಿದೆ.


ಯಾವ ವ್ಯಕ್ತಿ ಹುಟ್ಟಿನಿಂದ ಅಂಗಾಂಗಗಳ ಚಲನದಲ್ಲಿ ವೈಪಲ್ಯವನ್ನು ಹೊಂದಿರುತ್ತಾರೆಯೋ ಅವರನ್ನು ದೈಹಿಕ ಛಲಗಾರರು ಅಥವಾ ಅಂಗವಿಕಲರು ಎಂದು ಕರೆಯುತ್ತಾರೆ. ಸರ್ಕಾರದ ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಮುಖಾಂತರ ಅಂಗವಿಕಲ ವ್ಯಕ್ತಿಗೆ ಅವರು ಹೊಂದಿರುವ ದೈಹಿಕ ನ್ಯೂನತೆಯ ಪ್ರಮಾಣದ (ವೈದ್ಯರು ದೃಢೀಕರಿಸಿರುವ) ಆಧಾರವಾಗಿ ಮಾಸಿಕ ವೇತನವು ದೊರೆಯುವುದು. ೭೫% ಗಿಂತ ಹೆಚ್ಚಿನ ನ್ಯೂನತೆ ಇರುವ ವ್ಯಕ್ತಿಗೆ ೧೦೦೦/-ರೂ ಮತ್ತು ೫೦% ನ್ಯೂನತೆ ಇರುವ ವ್ಯಕ್ತಿಗೆ ೫೦೦/-ರೂಗಳ ಮಾಶಾಸನವನ್ನು ಇಲಾಖ ವತಿಯಿಂದ ನೀಡುತ್ತಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ ಮಕ್ಕಳ ಪೋಷಣೆ, ಮಹಿಳಾ ಆರೋಗ್ಯ ಮತ್ತು ಸಬಲೀಕರಣವನ್ನು ದೃಷ್ಟಿಯಲ್ಲಿರಿಸಿಕೊಂಡು ಅಂಗನವಾಡಿ ಮುಖಾಂತರ ಸೇವಾ ಸೌಲಭ್ಯವನ್ನು ಕಲ್ಪಿಸುತ್ತಿದ್ದಾರೆ. ಯಾವ ಮಹಿಳೆಯು ಗರ್ಭವತಿ ಎಂದು ದೃಢೀಕೃತವಾಗುತ್ತದೆಯೋ ಆ ಮಹಿಳೆ ಅಂಗನವಾಡಿ ಮುಖಾಂತರ ಮಾಸಿಕವಾಗಿ ಪೌಷ್ಟಿಕ ಆಹಾರದ ಪ್ಯಾಕೆಟ್‌ಗಳನ್ನು ಉಚಿತವಾಗಿ ಪಡೆದುಕೊಳ್ಳಬಹುದು. ತಾಯಿ ಕಾರ್ಡ್ ನೊಂದಾವಣೆ ಮುಖಾಂತರ ಹೆರಿಗೆಯಾಗುವವರೆಗೂ ಹಾಗೂ ನಂತರದ ಕಾಲದ ವರೆಗೂ ಉಚಿತ ಚಿಕಿತ್ಸೆಯನ್ನು ಅಂಗನವಾಡಿ ಶಿಫಾರಸ್ಸಿನ ಮುಖಾಂತರ ಪ್ರಾಥಮಿಕ ಆರೋಗ್ಯ, ಸಮುದಾಯ ಆರೋಗ್ಯ, ತಾಲ್ಲೂಕು ಮತ್ತು ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಪಡೆಯಬಹುದು. ಮಗುವಿನ ಜನನದ ನಂತರ ೦ ಯಿಂದ ೨ ವರ್ಷದ ವರೆಗೆ ತಾಯಿ ಆರೈಕೆಯಲ್ಲಿರುವ ಮಕ್ಕಳಿಗೆ ಅಂಗನವಾಡಿ ಮುಖಾಂತರ ಲಸಿಕೆಗಳನ್ನು ಹಾಕಿಸಲಾಗುತ್ತದೆ. ೨ ರಿಂದ ೫ ವರ್ಷದ ವರೆಗೆ ಪೂರ್ವ ಪ್ರಾಥಮಿಕ ಶಿಕ್ಷಣದ ಜೊತೆಯಲ್ಲಿ ಪೌಷ್ಟಿಕ ಆಹಾರವನ್ನು ಮಗುವಿಗೆ ನೀಡಲಾಗುತ್ತದೆ. ಕೋಷ್ಟಕ೨೨ ಮಾಹಿತಿದಾರರ ಕುಟುಂಬದವರು ಸರ್ಕಾರದಿಂದ ಪಡೆಯುತ್ತಿರುವ ಸೌಲಭ್ಯಗಳ ವಿವರದ್ದಾಗಿದೆ. ಅಧ್ಯಯನಕ್ಕೆ ಒಳಪಟ್ಟ ಎಲ್ಲಾ ಕುಟುಂಬಗಳ ಪೈಕಿ ೨೨೪ ಕುಟುಂಬಗಳು ಪಡಿತರ ಚೀಟಿ ಸೌಲಭ್ಯವನ್ನು ಹೊಂದಿವೆ. ೫೫.೯% ರಷ್ಟಿರುವ ಮಾಹಿತಿದಾರರ ಕುಟುಂಬದವರು ಸರ್ಕಾರದ ವತಿಯಿಂದ ನೇಮಿತವಾಗಿರುವ ಪಡಿತರ ಸೌಲಭ್ಯವನ್ನು ಸಂಪೂರ್ಣವಾಗಿ ಬಳಸಿಕೊಂಡಿದ್ದಾರೆ. ಇನ್ನುಳಿದಂತೆ ಸ್ಥಳಾಂತರಗೊಂಡಿರುವ ೨೬ ಕುಟುಂಬಗಳು ಸೌಲಭ್ಯಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಶಾಲೆಗೆ ಸೇರಿ ಶಿಕ್ಷಣವನ್ನು ಪಡೆಯುತ್ತಿರುವ ಮಕ್ಕಳ ಪೈಕಿ ಈ ವ್ಯಾಪ್ತಿಯಲ್ಲಿ ೧೩.೭% ರಷ್ಟು ಮಕ್ಕಳು ಶಿಷ್ಯವೇತನವನ್ನು ಪಡೆಯುತ್ತಿದ್ದಾರೆ. ಇನ್ನುಳಿದ ಮಕ್ಕಳು ಶಿಷ್ಯವೇತನಕ್ಕೆ ಅರ್ಜಿಯನ್ನು ಸಲ್ಲಿಸಿದ್ದಾರೆ. ೬೦ ವರ್ಷ ಪೂರೈಸಿದ ವೃದ್ಧರು ೧೦.೨% ರಷ್ಟಿದ್ದು, ವೃದ್ದಾಪ್ಯ ವೇತನವನ್ನು ಪಡೆಯುತ್ತಿದ್ದಾರೆ.

ಕೋಷ್ಟಕ ೨೨

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರ ಸರ್ಕಾರಿ ಸೌಲಭ್ಯಗಳು

ಕ್ರಸಂ	ಸರ್ಕಾರಿ ಸೌಲಭ್ಯಗಳು	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ		
1	ಪಡಿತರ ಚೀಟಿ	೧೩	೮೫	೮೮	೩೮	೨೨೪	೫೫.೯
2	ವಿಧವಾ ವೇತನ	೨	೧೨	೧೨	೯	೩೫	೮.೭
3	ವೃದ್ಧಾಪ್ಯವೇತನ	೩	೧೨	೨೫	೧	೪೧	೧೦.೨
4	ಶಿಷ್ಯವೇತನ	೧	೨೯	೨೫	೦	೫೫	೧೩.೭
5	ಅಂಗವಿಕಲ ವೇತನ	೦	೮	೩	೦	೧೧	೨.೭
6	ಅಂಗನವಾಡಿ ಸೌಲಭ್ಯ	೨	೧೧	೨೧	೧	೩೫	೮.೭
	ಒಟ್ಟು	೨೧	೧೫೭	೧೭೪	೪೯	೪೦೧	೧೦೦

ಗ್ರಾಫ್ ೧೧, ಸರ್ಕಾರಿ ಸೌಲಭ್ಯಗಳು



ಅಕಾಲಿಕವಾಗಿ ಪತಿಯನ್ನು ಕಳೆದುಕೊಂಡ ವಿಧವಾ ನೇತೃತ್ವದ ಕುಟುಂಬಗಳು ೮.೭ ರಷ್ಟಿದ್ದು, ವಿಧವಾ ವೇತನವನ್ನು ಪಡೆಯುತ್ತಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಅಂಗನವಾಡಿ ಮುಖಾಂತರ ಜಾರಿಯಲ್ಲಿರುವ ಸೌಲಭ್ಯಗಳನ್ನು ೮.೭% ರಷ್ಟು ಫಲಾನುಭವಿಗಳು ಪಡೆಯುತ್ತಿದ್ದಾರೆ. ಅಂಗವಿಕಲರ ವೇತನವನ್ನು ೨.೭% ರಷ್ಟು ಜನರು ಪಡೆಯುತ್ತಿದ್ದಾರೆ. ಈ ಮೂಲಕ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಇನ್ನು ಹೆಚ್ಚಿನ ಜನರು ಸಾಮಾಜಿಕ ಭದ್ರತಾ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ ಅಲ್ಲದೆ ಅಗತ್ಯವಿರುವ ಸೌಲಭ್ಯವನ್ನು ಪಡೆಯಲು ಸರಿಯಾದ ಮೂಲಭೂತ ಸೌಕರ್ಯಗಳು ಅರಣ್ಯದ ಒಳ ಭಾಗದಲ್ಲಿ ದೊರೆಯದಿರುವುದರಿಂದ ವಂಚಿತರೂ ಕೂಡ ಆಗಿದ್ದಾರೆ.

ರಾಜಕೀಯ ವ್ಯವಸ್ಥೆ

ಆಧುನಿಕ ರಾಜ್ಯಗಳು ಕಲ್ಯಾಣ ರಾಜ್ಯಗಳಾಗಿವೆ. ಜನರು ತಮ್ಮನ್ನು ತಾವು ಆಳ್ವಿಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ರಾಜ್ಯವನ್ನು ನಿರ್ದೇಶಿಸುವ ಪರಮಾಧಿಕಾರದ ಸರ್ಕಾರವು 'ಅಭಿವೃದ್ಧಿ ಎಂಬುದು ಮೇಲಿನ ಹಂತದಿಂದ ಸಾಧ್ಯವಾಗದು. ಅದು ಕೆಳ ಹಂತದಿಂದ ಮೇಲಿನ ಹಂತಕ್ಕೆ ಚಲಾವಣೆಗೊಳ್ಳಬೇಕೆಂಬ' ದಿಶೆಯಲ್ಲಿ ಅಧಿಕಾರ ವಿಕೇಂದ್ರೀಕರಣವನ್ನು ಅನುಷ್ಠಾನಗೊಳಿಸಿದೆ. ರಾಜ್ಯವನ್ನು ನಿಯಂತ್ರಿಸಲು ಅಗತ್ಯವಿರುವ ಕಾನೂನುಗಳನ್ನು ರಚನೆ ಮಾಡಲು, ಅಭಿವೃದ್ಧಿ ಹೊಂದುವುದಕ್ಕಾಗಿ ಯೋಜನೆಗಳನ್ನು ತಯಾರಿಸುವುದು, ಅವುಗಳನ್ನು ಅನುಷ್ಠಾನಗೊಳಿಸುವುದು ಸೇರಿದಂತೆ ಮೇಲ್ವಿಚಾರಣೆಗಳ ಮುಖಾಂತರ ಪ್ರಜೆಗಳ ಸಹಭಾಗಿತ್ವವನ್ನು ಪ್ರೋತ್ಸಾಹಿಸುವುದರ ಜೊತೆಗೆ ಪ್ರಜೆಗಳ ಕಲ್ಯಾಣವನ್ನು ನೆರವೇರಿಸುವ ಉದ್ದೇಶಗಳನ್ನು ಹೊಂದಿದೆ. ಈ ಮೂಲಕ ಸ್ಥಳೀಯ ಸಂಸ್ಥೆಗಳ ಸ್ಥಾಪನೆಗೆ ಒತ್ತು ನೀಡಿದೆ. ಗ್ರಾಮ ಹಂತದಲ್ಲಿ ಸ್ಥಳೀಯ ಸರ್ಕಾರಗಳನ್ನು



ಬಲಪಡಿಸಲು, ಸ್ಥಳೀಯ ಜನರೇ ಆಡಳಿತದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವಂತಾಗಲು ಹಿಂದುಳಿದ ಹಾಗೂ ಮಹಿಳೆಯರ ಹಿತಾಸಕ್ತಿಗಳನ್ನು ರಕ್ಷಿಸಿ ಕಾಪಾಡಿಕೊಂಡು ಬರಲು; ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸದೃಡಗೊಳಿಸಲು, ಜನರಲ್ಲಿ ರಾಜಕೀಯ ಜಾಗೃತಿ, ಅರಿವು, ಪ್ರಜ್ಞೆಯನ್ನು ಮೂಡಿಸಿ ಅವರು ಆಡಳಿತದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತಾಗಲು ಕೇಂದ್ರ ಸರ್ಕಾರ ಪಂಚಾಯತ ರಾಜ್ ವ್ಯವಸ್ಥೆಯನ್ನು ಜಾರಿ ತಂದಿತು [೫]. ಪಂಚಾಯತ್ ರಾಜ್ ವ್ಯವಸ್ಥೆಯಡಿ ಮೂರು ಪ್ರಕಾರದ ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಅವು ಗ್ರಾಮ ಮಟ್ಟದಲ್ಲಿ ಗ್ರಾಮಪಂಚಾಯತಿ, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿಗಳಾಗಿವೆ. ಈ ಮೂಲಕ ಪ್ರಜೆಗಳು ತಮ್ಮನ್ನು ತಾವು ಆಳ್ವಿಕೆ ಮಾಡಿಕೊಳ್ಳುವ ಮುಖಾಂತರ ಸ್ಥಳೀಯವಾಗಿ ಅವಶ್ಯವಿರುವ ಅಭಿವೃದ್ಧಿ ಕಾರ್ಯಗಳನ್ನು ತಾವೇ ನಿರ್ಧರಿಸಿ ತಮ್ಮ ಅಭ್ಯುದಯಕ್ಕೆ ತಾವುಗಳೇ ಶ್ರಮಿಸುವ ವ್ಯವಸ್ಥೆಗಳನ್ನು ಅಳವಡಿಸಲಾಗಿದೆ. ಗ್ರಾಮ ಮಟ್ಟದಿಂದ ಪ್ರಜೆಗಳ ವಲಸೆ ಪ್ರಕ್ರಿಯೆಯನ್ನು ತಡೆಯುವ ಕ್ರಮಗಳಿಗಾಗಿ ಹಾಗೂ ಪ್ರಜೆಗಳ ಸರ್ವತೋಮುಖ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಧಾನ ಮಂತ್ರಿ ನಾಮಾಂಕಿತ ಹಲವು ಯೋಜನೆಗಳನ್ನು (ಸಡಕ್ ಯೋಜನೆ, ರೋಜಗಾರ್ ಯೋಜನೆ, ಸ್ವಚ್ಚ ಭಾರತ ಅಭಿಯಾನ ಇತ್ಯಾದಿ) ಜಾರಿಗೊಳಿಸುವ ಮುಖಾಂತರ ಗ್ರಾಮಪಂಚಾಯತಿಗಳ ನೇತೃತ್ವದಲ್ಲಿ ಅನುಷ್ಠಾನಗೊಳಿಸಲು ಕ್ರಮಗಳನ್ನು ಕೈಗೊಂಡಿದ್ದಾರೆ.

ಅರಣ್ಯವಾಸಿ ಆದಿವಾಸಿಗಳ ಆರ್ಥಿಕ ವ್ಯವಸ್ಥೆಗಳನ್ನು ಉತ್ತಮ ಪಡಿಸುವ ದಿಶೆಯಲ್ಲಿ ಅರಣ್ಯವಾಸಿಗಳು ಸಂಗ್ರಹಿಸುವ ಅರಣ್ಯ ಕಿರು ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸುವ ಮುಖಾಂತರ ಉತ್ತಮ ಬೆಲೆಗಳು ಪದಾರ್ಥಗಳಿಗೆ ದೊರಕಿ ಲಾಭಾಂಶವನ್ನು ಹೊಂದುವ ವ್ಯವಸ್ಥೆಗಳನ್ನು ಜಿಲ್ಲಾವಾರು ಲ್ಯಾಂಪ್ಸ್ ಸೊಸೈಟಿಗಳ ಸ್ಥಾಪನೆಯೊಂದಿಗೆ ಅವಕಾಶವನ್ನು ಕಲ್ಪಿಸಲಾಗಿದೆ. ಈ ವ್ಯವಸ್ಥೆಯಡಿ ನಿರ್ದೇಶಿತ ಅರಣ್ಯ ವ್ಯಾಪ್ತಿಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಒಳಗೊಂಡಂತೆ ಆದಿವಾಸಿ ಸದಸ್ಯರುಗಳ ಒಕ್ಕೂಟವನ್ನು ರಚಿಸಲಾಗಿದೆ. ಈ ವ್ಯವಸ್ಥೆಯಡಿ ಆದಿವಾಸಿಗಳು ಸಂಗ್ರಹಿತ ಕಿರು ಉತ್ಪನ್ನಗಳನ್ನು ಮಾರುವ ಮತ್ತು ಅದರ ಲಾಭವನ್ನು ನೇರವಾಗಿ ತಮ್ಮ ಖಾತೆಗೆ ಪಡೆಯುವ ಹಾಗೂ ಸಾಲವನ್ನು ಪಡೆಯುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸುವ ವ್ಯವಸ್ಥೆಯಡಿ ಸರ್ಕಾರಿ ಶಾಲೆಗಳಲ್ಲಿ ಪೋಷಕರ ಪಾತ್ರವನ್ನು ಸಮಗ್ರಗೊಳಿಸುವ ದೃಷ್ಟಿಯಲ್ಲಿ ಶಾಲಾ ಅಭಿವೃದ್ಧಿ ಸದಸ್ಯರ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿ ಅಡಿಯಲ್ಲಿ ಶಾಲೆಗೆ ಅಗತ್ಯವಿರುವ ಅಭಿವೃದ್ಧಿ ವ್ಯವಸ್ಥೆ, ಮಕ್ಕಳ ಶಿಕ್ಷಣ ಗುಣ ಮಟ್ಟವನ್ನು ಸುವ್ಯವಸ್ಥೆಗೊಳಿಸುವ ಜವಾಬ್ದಾರಿ ಕಾರ್ಯಕ್ಕೆ ಶಿಕ್ಷಕರು ಮತ್ತು ಪೋಷಕರನ್ನು ಜಂಟಿಯಾಗಿಸಿ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಲಾಗಿದೆ.

ಅರಣ್ಯ ಪ್ರದೇಶಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪ್ರತಿ ಪಂಚಾಯತ್ ವ್ಯವಸ್ಥೆಯಲ್ಲಿ ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಲಾಗಿದೆ. ಗ್ರಾಮ ಅರಣ್ಯ ಸಮಿತಿ ಮುಖೇನ ಬಂಜರು ಭೂಮಿಗಳ

ಅರಣ್ಯೀಕರಣಗೊಳಿಸುವ ವ್ಯವಸ್ಥೆಯಡಿ ಅರಣ್ಯ ಇಲಾಖೆಯ ಸಹಯೋಗದಲ್ಲಿ ಅರಣ್ಯಗಳನ್ನು ಬೆಳೆಸುವ ಹಾಗೂ ಅವುಗಳ ಮೇಲೆ ಜವಾಬ್ದಾರಿಯನ್ನು ಹೊಂದುವ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಪಂಚಾಯತ್ ವ್ಯಾಪ್ತಿಯ ಪ್ರದೇಶಗಳನ್ನು ಗುರುತಿಸಿ ಆ ಪ್ರದೇಶಗಳಲ್ಲಿ ಸಸಿ ನೆಡಸುವ, ಅವುಗಳನ್ನು ಪೋಷಿಸುವ ಕಾರ್ಯಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿದೆ.

ಪರಿಸರ ಅಭಿವೃದ್ಧಿ ಸಮಿತಿಗಳು ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ರಚಿಸಲಾಗಿದ್ದು. ಉದ್ಯಾನವನ ವ್ಯಾಪ್ತಿಯ ಪರಿಸರ ಸೂಕ್ಷ್ಮ ಪ್ರದೇಶಗಳ ಮೇಲೆ ನೇರ ನಿಗಾವಣೆಯನ್ನು ಹೊಂದುವುದರೊಂದಿಗೆ ಅರಣ್ಯ ಇಲಾಖೆ ಮತ್ತು ಸ್ಥಳೀಯ ಜನರ ಸಹಭಾಗಿತ್ವದಡಿ ಅರಣ್ಯ ಪ್ರದೇಶಗಳನ್ನು ರಕ್ಷಿಸುವ ಹೊಣೆಗಾರಿಕೆಯನ್ನು ವ್ಯವಸ್ಥೆಗೊಳಿಸಲಾಗಿದೆ. ಈ ಸಮಿತಿಯು ವಲಯವಾರು ಅರಣ್ಯಾಧಿಕಾರಿಗಳನ್ನು ಹಾಗೂ ಸ್ಥಳೀಯ ಸಮುದಾಯಗಳ ಸದಸ್ಯರುಗಳನ್ನು ಒಳಗೊಂಡ ಸಮಿತಿಯಾಗಿ ರಚನೆಯಾಗಿದೆ.

ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ರಾಷ್ಟ್ರವಾಗಿದೆ. ಅಂತೆಯೇ ಜಾತಿ ವ್ಯವಸ್ಥೆಗಳು ಬೇರೂರಿರುವ ಪರಿಯಲ್ಲಿ ಜಾತಿಗಳ ಬಲವಾಗಿಯೂ ಕೂಡ ಗುರುತಿಸಲ್ಪಟ್ಟಿವೆ. ನಿರ್ದಿಷ್ಟ ಸಮುದಾಯವೊಂದು ತನ್ನ ಆಶೋತ್ತರಗಳನ್ನು ಪೂರೈಸಿಕೊಳ್ಳುವ ನಿಟ್ಟಿನಲ್ಲಿ ತನ್ನದೇ ಆದ ಸಮುದಾಯದ ಜನರನ್ನು ಒಗ್ಗೂಡಿಸಿಕೊಂಡು ರಚಿಸಿದ ಬಲವೇ ಜಾತಿಗಳ ಗುಂಪಾಗಿದೆ. ಜಾತಿ ಗುಂಪುಗಳಿಡಿಯಲ್ಲಿ ತಮ್ಮ ಸಮುದಾಯಗಳಿಗೆ ಸರ್ಕಾರದ ಮುಖೇನ ಅಗತ್ಯವಿರುವ ಸೌಲಭ್ಯಗಳನ್ನು ಪಡೆಯುವ, ಅವುಗಳ ಪೂರೈಕೆಗಾಗಿ ಮನವಿ ಸಲ್ಲಿಸುವ, ಅನ್ಯ ಜಾತಿಯವರಿಂದ ಸಮುದಾಯಗಳ ಮೇಲೆ ಆಗುವ ಅನ್ಯಾಯಗಳನ್ನು ತಡೆಯುವ ಶಕ್ತಿಗಳಾಗಿ ವರ್ತಿಸುವ ನಿಟ್ಟಿನಲ್ಲಿ ಜಾತಿ ಸಂಘಟನೆಗಳು ಅಸ್ತಿತ್ವಕ್ಕೆ ಬಂದಿವೆ.

ಕೋಷ್ಟಕಳ.೧೩ ಮಾಹಿತಿದಾರರು ಸಾಂಸ್ಥಿಕ ವ್ಯವಸ್ಥೆಗಳಲ್ಲಿ ಹೊಂದಿರುವ ಸದಸ್ಯತ್ವದ ವಿವರವಾಗಿದೆ. ಈ ಕೋಷ್ಟಕದನ್ವಯ ಯಾವ ಯಾವ ಸಂಸ್ಥೆಗಳಲ್ಲಿ ತಮ್ಮ ಕುಟುಂಬ ಸದಸ್ಯರು ಸದಸ್ಯತ್ವವನ್ನು ಹೊಂದಿದ್ದಾರೆಂದು ಉಲ್ಲೇಖಿಸಿದ್ದಾರೆ. ಯಾವುದೇ ಸಂಘ, ಸಂಘಟನೆ, ಸಮುದಾಯಗಳಲ್ಲಿ ಭಾಗವಹಿಸದೇ ಇರುವ ಮಾಹಿತಿದಾರರನ್ನು ಉಲ್ಲೇಖಿಸಲಾಗಿದೆ. ಕೋಷ್ಟಕದ ಆಧಾರಿತವಾಗಿ ಮಾಹಿತಿದಾರರು ಜಾತಿಗುಂಪುಗಳಲ್ಲಿ ೧೦.೪% ಸದಸ್ಯತ್ವವನ್ನು ಪಡೆಯುವುದರೊಂದಿಗೆ ಅಧಿಕವಾಗಿದ್ದಾರೆ. ಪ್ರತಿ ಸಮುದಾಯಗಳನ್ನು ಅವಲೋಕಿಸಿದರೆ, ಮಲೆಕುಡಿಯ ಸಮುದಾಯದ ಸದಸ್ಯತ್ವದ ಸಂಖ್ಯೆ ಜಾತಿ ಗುಂಪುಗಳಲ್ಲಿ ಹೆಚ್ಚಾಗಿದೆ. ಕ್ಷೇತ್ರ ಅಧ್ಯಯನದಲ್ಲಿ ಮಲೆಕುಡಿಯ ಸಂಘದವರನ್ನು ಭೇಟಿ ನೀಡಿದ ಸಂದರ್ಭದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವ್ಯಾಪಕವಾಗಿರುವ ಮಲೆಕುಡಿಯ ಸಮುದಾಯದ ಪ್ರತಿ ಸದಸ್ಯನನ್ನು ಅನುಲಕ್ಷಿಸಿ ಸಂಘದಲ್ಲಿ ನೊಂದಾವಣೆಯನ್ನು ಮಾಡಿಕೊಂಡಿದ್ದೇವೆ ಎಂದು ಜಿಲ್ಲಾ ಮಲೆಕುಡಿಯ ಸಂಘದ ಪದಾಧಿಕಾರಿಗಳು ಅಭಿಪ್ರಾಯಿಸಿದ್ದಾರೆ. ಈ ನಿಟ್ಟಿನಲ್ಲಿ ಉಳಿದ ಸಮುದಾಯಗಳಿಗಿಂತ ಮಲೆಕುಡಿಯ ಸಮುದಾಯದವರೇ ಹೆಚ್ಚಾಗಿ ಜಾತಿ ಸಂಘಟನೆಯಲ್ಲಿ ಸದಸ್ಯತ್ವವನ್ನು ಪಡೆದಿದ್ದಾರೆ.

ಕೋಷ್ಟಕ ೨೩

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರ ಸಾಂಸ್ಥಿಕ ಸದಸ್ಯತ್ವ

ಕ್ರ.ಸಂ	ಸದಸ್ಯರು	ಸಮುದಾಯಗಳು								ಒಟ್ಟು	ಶೇಕಡವಾರು
		ಮರಾಠಿನಾಯ್ಕ		ಮಲೆಕುಡಿಯ		ಗೌಡಲು		ಇತರೆ			
		ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು		
೧	ಲ್ಯಾಂಪ್ಸ್	೦	೦	೧೦	೦	೩	೧	೦	೦	೧೪	೫.೬
೨	ಸ್ವ ಸಹಾಯ ಗುಂಪು	೦	೧	೧	೧	೧	೧	೧	೧	೭	೨.೮%
೩	ಶಾಲಾಭಿವೃದ್ಧಿ ಸದಸ್ಯರು	೦	೦	೩	೧	೪	೧	೦	೦	೯	೩.೬
೪	ಪರಿಸರ ಅಭಿವೃದ್ಧಿ ಸದಸ್ಯರು	೦	೦	೩	೧	೬	೨	೦	೦	೧೨	೪.೮
೫	ಜಾತಿ ಗುಂಪುಗಳು	೧	೦	೨೧	೩	೧	೦	೦	೦	೨೬	೧೦.೪
೬	ಗ್ರಾಮ/ತಾಲ್ಲೂಕು/ಜಿಲ್ಲಾ ಪಂಚಾಯತಿ ಸದಸ್ಯರು	೦	೦	೩	೧	೧	೧	೧	೦	೭	೨.೮
೭	ಗ್ರಾಮ ಅರಣ್ಯ ಸಮಿತಿ	೦	೦	೦	೧	೧	೦	೦	೦	೨	೦.೮
೮	ಸದಸ್ಯರಲ್ಲದವರು	೮	೩	೨೯	೧೩	೬೨	೧೪	೩೩	೧೧	೧೭೩	೬೯.೨
	ಒಟ್ಟು	೯	೪	೭೦	೨೧	೭೯	೨೦	೩೫	೧೨	೨೫೦	೧೦೦


ಲ್ಯಾಂಪ್ಸ್ ಸೊಸೈಟಿ (Large Sized Adivasi Multipurpose Society, ಪರಿಶಿಷ್ಟ ವರ್ಗಗಳ ದೊಡ್ಡ ಪ್ರಮಣದ ವಿವಿದೋದ್ದೇಶ ಸಹಕಾರ ಸಂಘ) ಗಳಲ್ಲಿ ಸದಸ್ಯತ್ವವನ್ನು ಪಡೆದವರು ಒಟ್ಟು ೫.೬% ರಷ್ಟಿದ್ದಾರೆ. ಮಲೆಕುಡಿಯ ಮತ್ತು ಗೌಡಲು ಸಮುದಾಯದವರನ್ನು ಹೊರತು ಪಡಿಸಿದರೆ ಉಳಿದ ಸಮುದಾಯಗಳು ಸೊಸೈಟಿ ಸಮೂಹದಲ್ಲಿ ತಮ್ಮ ಸದಸ್ಯತ್ವವನ್ನು ನೊಂದಾಯಿಸಿಕೊಂಡಿಲ್ಲ. ಇತರೆ ಸಮುದಾಯದವರನ್ನು ಹೊರತು ಪಡಿಸಿ, ಇರುವ ಆದಿವಾಸಿ ಸಮುದಾಯಗಳು ಲ್ಯಾಂಪ್ಸ್ ಸೊಸೈಟಿಗಳಲ್ಲಿ ಹೆಚ್ಚು ನೊಂದಾವಣೆ ಹೊಂದುವುದು ಅವಶ್ಯವಾಗಿದೆ. ಅರಣ್ಯ ಕಿರು ಉತ್ಪಾದನೆಗಳನ್ನು ಸಂಗ್ರಹಿಸುವ ಸಮುದಾಯಗಳು ಲ್ಯಾಂಪ್ಸ್ ಸೊಸೈಟಿಗಳಲ್ಲಿ ನೊಂದಾವಣೆಯಾಗುವುದರಿಂದ ನಿಗದಿತ ಬೆಂಬಲ ಬೆಲೆಗೆ ಸಂಘಗಳ ಮುಖಾಂತರ ಮಾರಾಟಮಾಡಬಹುದು. ಅಧಿಕಾರಿಗಳು ಸೊಸೈಟಿಗಳಲ್ಲಿ ಪದಾಧಿಕಾರಿಗಳಾಗಿರುವುದರಿಂದ ಸದಸ್ಯತ್ವದ ಮುಖಾಂತರ ಹೆಚ್ಚು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಸಹಕಾರ ಲಭ್ಯವಾಗುತ್ತದೆ.

ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಮಾತ್ರ ಕಂಡು ಬರುವ ಪರಿಸರ ಅಭಿವೃದ್ಧಿ ಸಮಿತಿಗಳಲ್ಲಿ ೪.೮% ರಷ್ಟು ಸದಸ್ಯತ್ವವನ್ನು ಮಾತ್ರ ಪಡೆದಿದ್ದಾರೆ. ಈ ಸಮಿತಿಗಳು ಕಾನೂನು ಆಧಾರವಾಗಿ ನಿರ್ದಿಷ್ಟ ಸದಸ್ಯತ್ವವನ್ನು ಮಾತ್ರ ಹೊಂದಲು ಸಾಧ್ಯವಿದೆ. ಸದಸ್ಯತ್ವದ ಆಯ್ಕೆಗಾಗಿ ಚುನಾವಣೆಗೆ ಸ್ಪರ್ಧಿಸಬಹುದು. ಆದರೆ, ಆಯ್ಕೆ ಮಾತ್ರ ನಿರ್ದಿಷ್ಟವಾದ ಸದಸ್ಯತ್ವದ ಮೇಲೆ ಅವಲಂಬಿತವಾಗಿರುತ್ತದೆ. ಉದ್ಯಾನವನ ವ್ಯಾಪ್ತಿಯಲ್ಲಿ ರಚನೆಯಾಗಿರುವ ಈ ಸಮಿತಿಗಳಲ್ಲಿ ಆದಿವಾಸಿ ಸಮುದಾಯದವರೆ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯತ್ವವನ್ನು ಪಡೆದಿರುತ್ತಾರೆ.

ಶಾಲೆಗಳ ಅಭಿವೃದ್ಧಿ ಮತ್ತು ಮೇಲುಸ್ತುವಾರಿಯ ಶಾಲಾಭಿವೃದ್ಧಿ ಸಮಿತಿಗಳಲ್ಲಿ ೩.೬% ರಷ್ಟು ಮಾಹಿತಿದಾರರು ಸದಸ್ಯರಾಗಿದ್ದಾರೆ. ಈ ಸದಸ್ಯತ್ವವು ಸರ್ಕಾರಿ ಶಾಲೆಗಲ್ಲಿ ತಮ್ಮ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಲ್ಲಿ ಮಾತ್ರ ಅನ್ವಯವಾಗುತ್ತದೆ. ಅಧ್ಯಯನ ಕ್ಷೇತ್ರದಲ್ಲಿ ದೊರೆತಿರುವ ಮಾಹಿತಿ ಅನುಸಾರವಾಗಿ ಕೆಲವು ಮಕ್ಕಳು ಪ್ರೌಢ ಶಿಕ್ಷಣದಿಂದ ಪದವಿಪೂರ್ವ ಹಂತಕ್ಕೆ ಹಾಗೂ ಪ್ರೌಢ ಶಿಕ್ಷಣಕ್ಕೆ ಶಾಲೆ ತೊರೆದು ಇತರೆ ಕೆಲಸಕ್ಕೆ ಸೇರಿರುವ ಸನ್ನಿವೇಶಗಳಿಂದಾಗಿ ಶಾಲಾಭಿವೃದ್ಧಿ ಸಮಿತಿ ಸದಸ್ಯರ ಸಂಖ್ಯೆ ಪ್ರಮಾಣವು ಇಳಿಮುಖವಾಗಿದೆ.

ರಾಜಕೀಯ ಕ್ಷೇತ್ರದಲ್ಲಿ ಪಾಲ್ಗೊಳ್ಳುವ ವ್ಯವಸ್ಥೆಯಡಿ ಉದ್ಯಾನವನ ವ್ಯಾಪ್ತಿಯ ಆದಿವಾಸಿ ಸಮುದಾಯದವರು ಉನ್ನತ ಮಟ್ಟದ ಆಯ್ಕೆಯಾಗಿರುವ ಜಿಲ್ಲಾ ಪಂಚಾಯತ್ ಮಟ್ಟಕ್ಕೆ ಮಾತ್ರ ಸ್ಪರ್ಧಿಸಲು ಸಾಧ್ಯವಾಗಿದೆ. ಕಾರಣ ಉದ್ಯಾನವನದ ವ್ಯಾಪ್ತಿಗೆ ಮಾತ್ರ ಅವರ ಜನಸಂಖ್ಯೆ ಸೀಮಿತವಾಗಿದ್ದು, ಇತರೆ ಆದಿವಾಸಿ ಸಮುದಾಯಗಳ ಜನಸಂಖ್ಯೆಗೆ ಜಿಲ್ಲಾ ಮಟ್ಟದ ಚುನಾವಣೆಗೆ ಹೋಲಿಕೆ ಮಾಡಿದ್ದಲ್ಲಿ ಕಡಿಮೆ ಪ್ರಮಾಣದಲ್ಲಿದೆ. ಈ ಮೂಲಕ ಚುನಾವಣಾ ಸ್ಪರ್ಧೆಗಳಲ್ಲಿ ಹೆಚ್ಚು ಜನಸಂಖ್ಯೆ ಇರುವ ಸಮುದಾಯಗಳು ಅವರ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಸಂದರ್ಭಗಳು ಅಧಿಕವಾಗಿರುತ್ತದೆ. ಇಲ್ಲಿ ವಾಸವಿರುವ ಸಮುದಾಯಗಳಲ್ಲಿ ಹೆಚ್ಚು ಸದಸ್ಯತ್ವವನ್ನು ಪಡೆದಿರುವುದು ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಾತ್ರ. ಈ ಮೂಲಕ ಗ್ರಾಮ/ತಾಲ್ಲೂಕು/ಜಿಲ್ಲಾ ಪಂಚಾಯತ್ ಒಟ್ಟು ವ್ಯಾಪ್ತಿಯನ್ನು ಅವಲೋಕಿಸಿದಾಗ ಇವರ ಪ್ರಮಾಣ ೨.೮% ರಷ್ಟಿದ್ದಾರೆ. ಗ್ರಾಮ ಅರಣ್ಯ

ಗ್ರಾಫ್ ೧೨. ಸಾಂಸ್ಥಿಕ ಸದಸ್ಯತ್ವ



ಸಮಿತಿಗಳಲ್ಲಿ ೦.೮%ರಷ್ಟು ಸದಸ್ಯರಿದ್ದಾರೆ. ಲಭ್ಯವಾಗುವ ಅಲ್ಪ ಆರ್ಥಿಕತೆಯಲ್ಲಿ ಉಳಿತಾಯವನ್ನು ಮಾಡುವ ಸಲುವಾಗಿ ಸ್ವಸಹಾಯ ಸಂಘಗಳಲ್ಲಿ ಸದಸ್ಯತ್ವವನ್ನು ಪಡೆದಿರುವವರು ೨.೮% ರಷ್ಟಿದ್ದಾರೆ.

ಗ್ರಾಫ್ ೧೨. ರ ಸಮಗ್ರ ವಿಶ್ಲೇಷಣೆಯಡಿ ಸದಸ್ಯತ್ವವನ್ನು ಪಡೆಯದಿರುವವರು ೬೯.೨% ರಷ್ಟಿದ್ದಾರೆ, ಮತ್ತು ಒಟ್ಟಾರೆಯ ಅಧ್ಯಯನ ಜನಸಂಖ್ಯೆಗೆ ಹೋಲಿಕೆ ಮಾಡಿದಾಗ ಪ್ರತಿ ಅಂಕಣದಲ್ಲೂ ಸದಸ್ಯತ್ವವು ಕನಿಷ್ಟ ಮಟ್ಟವನ್ನು ಹೊಂದಿದೆ. ಕಾರಣ ಮೂಲ ಜನಸಂಖ್ಯೆಯಲ್ಲಿ ಅರ್ಧದಷ್ಟು ಜನಸಂಖ್ಯೆಯು ಸ್ಥಳಾಂತರ ಪ್ರಕ್ರಿಯೆಗೆ ಒಳಗಾಗಿದೆ.

ಸ್ಥಳಾಂತರ ಮತ್ತು ಪುನರ್ವಸತೀಕರಣದ ಪರಿಣಾಮಗಳು

ಭಾರತೀಯ ಸಂದರ್ಭದಲ್ಲಿ ಚರ್ಚೆಗೆ ಕಾರಣವಾಗಿರುವ ವಿಷಯವೆಂದರೆ ಸ್ಥಳಾಂತರ ಮತ್ತು ಅದರ ಭಾಗವಾಗಿರುವ ಪುನರ್ವಸತೀಕರಣ ನಿಯಮಗಳು. ಸ್ಥಳಾಂತರವು ಅಭಿವೃದ್ಧಿಯ ಭಾಗವಾಗಿದ್ದು, ಯೋಜನೆಗಳ ಅನುಷ್ಠಾನದ ಮುಖಾಂತರ ಮೂಲ ನೆಲೆಗಳಿಂದ ತೆರವುಗೊಳ್ಳುತ್ತಿರುವವರಲ್ಲಿ ಆದಿವಾಸಿಗಳು, ದಲಿತರು ಮತ್ತು ಇತರೆ ಅರಣ್ಯವಾಸಿಗಳು ಬಲಿಯಾಗುತ್ತಿದ್ದಾರೆ. ಪರಿಣಾಮವಾಗಿ ಸಾಮಾಜಿಕ ಗುಂಪುಗಳು ತಮ್ಮ ಸಂಸ್ಕೃತಿಯಲ್ಲಿ ವಿಷಮ ಸ್ಥಿತಿಯನ್ನು ಹೊಂದುತ್ತಿದ್ದಾರೆ. ಮೂಲ ನೆಲೆಗಳಿಂದ ಸ್ಥಳಾಂತರ ಪ್ರಕ್ರಿಯೆಗೆ ಒಳಪಡುವವರ ಪರವಾಗಿ ಸರ್ಕಾರ ಯಾವುದೇ ಗಂಭೀರ ನಿಲುವುಗಳನ್ನು ತೆಗೆದುಕೊಳ್ಳದಿರುವುದು ಸಾಮಾಜಿಕ ಗುಂಪುಗಳ ಸಂಸ್ಕೃತಿಯು ವಿನಾಶದತ್ತ ಪಯಣಿಸುತ್ತಿದೆ. ಕಳೆದ ಸುಮಾರು ವರ್ಷಗಳಿಂದ ಸ್ಥಳಾಂತರ ಪ್ರಕ್ರಿಯೆಯು ಒಂದಲ್ಲ ಒಂದು ವಿಷಯದ ಅನುಸಾರವಾಗಿ ಗತಿಸಲ್ಪಡುತ್ತಿದೆ. ಅದಕ್ಕೆ ಎರಡು ಆಯಾಮಗಳ ದೃಷ್ಟಿಕೋನದಲ್ಲಿ ಅವಲೋಕಿಸುವುದಾದರೆ, ೧) ಸ್ಥಳಾಂತರತೆ ಆಹ್ವಾನಿತವಾದದ್ದು ಮತ್ತು ದುಃಖಕರವಾದ ಪ್ರಕ್ರಿಯೆಯೂ ಹೌದು. ೨) ಸ್ಥಳಾಂತರ

ಪ್ರಕ್ರಿಯೆಯಿಂದಾಗುವ ವ್ಯತ್ಯಾಸವನ್ನು ಪುನರ್ವಸತೀಕರಣ ಪರಿಹಾರ ಮತ್ತು ಕ್ರೂಡೀಕೃತವಾದ ಪ್ಯಾಕೇಜ್‌ಗಳಲ್ಲಿ ಭರಿಸಬಹುದು ಎಂಬ ವಾದಗಳು.

ಭಾರತದ ಅನೇಕ ಸ್ಥಳಾಂತರ ಪ್ರಕ್ರಿಯೆಗಳನ್ನು ಗಮನಿಸಿದಾಗ ಕಂಡುಬರುವ ಸತ್ಯಾಂಶವೆಂದರೆ, ಅದು 'ಅಭಿವೃದ್ಧಿಯ ಪ್ರಕ್ರಿಯೆಗಾಗಿ ಸ್ಥಳಾಂತರ'. ಅಭಿವೃದ್ಧಿಯ ಪ್ರಕ್ರಿಯೆಯ ಅವಶ್ಯಕತೆ ಇದೆಯಾದರೂ ಅವುಗಳನ್ನು ಅಳವಡಿಸುವ ಕ್ರಮದಲ್ಲಾಗುವ ವ್ಯತ್ಯಾಸಗಳಿಂದ ಸಾಮಾಜಿಕ ಗುಂಪುಗಳು ತಮ್ಮ ನೆಲೆಯನ್ನು ಕಳೆದುಕೊಳ್ಳುತ್ತಿದೆ. ಸರ್ಕಾರವು ಅಭಿವೃದ್ಧಿಗಾಗಿ ರೂಪಿಸಿಕೊಳ್ಳುತ್ತಿರುವ ಅನೇಕ ಯೋಜನೆಗಳ ಪರಿಣಾಮವಾಗಿ ಹಾಗೂ ಕ್ರಮಬದ್ಧವಾದ ಪುನರ್ವಸತೀಕರಣ ಪರಿಹಾರ ನಿಯಮಗಳು ಅನ್ವಯವಾಗದಿರುವುದು. ಸ್ಥಳಾಂತರ ಕುರಿತಂತೆ ಅನೇಕ ಅಧ್ಯಯನಗಳು ಹೊರತಂದಿರುವ ಸಂಖ್ಯಾತ್ಮಕ ಅಂಶಗಳನ್ನು ಗಮನಿಸಿದರೆ, ೧೯೫೧ ರಿಂದ ೧೯೯೦ ರ ವರಗೆ ೨೧.೩ ಮಿಲಿಯನ್ ಜನಸಂಖ್ಯೆ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಿಂದಾಗಿ ಸ್ಥಳಾಂತರಕ್ಕೆ ಒಳಗಾಗಿದ್ದಾರೆ [೬].

೧೯೫೦ ರಿಂದ ೧೯೯೦ ರ ವರಗೆ ಅನುಷ್ಠಾನವಾದ ಪಂಚವಾರ್ಷಿಕ ಯೋಜನೆಗಳ ಮುಖಾಂತರ ವಾರ್ಷಿಕವಾಗಿ ೫೦೦,೦೦೦ ಜನರಲ್ಲಿ ೪೦% ರಷ್ಟು ಆದಿವಾಸಿ ಸಮುದಾಯದವರಾಗಿದ್ದಾರೆ.(Smithu Kothari: 1995). ಸ್ಥಳಾಂತರ ಪ್ರಕ್ರಿಯೆಯು ವಿವಿಧ ಸಂಗತಿಗಳ ಆಧಾರವಾಗಿ ಏರ್ಪಡುವುದು. ಅವು ಅಣೆಕಟ್ಟು ನಿರ್ಮಾಣ, ಗಣಿಗಾರಿಕೆ, ಕಾರ್ಖಾನೆಗಳ ಸ್ಥಾಪನೆ, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ. ಗ್ರಾಮೀಣಾಭಿವೃದ್ಧಿ ಸಚಿವಾಲಯದ ಪ್ರಕಾರ ೧೯೫೧ ರಿಂದ ೧೯೯೦ ರ ವರೆಗೆ ೨೧೩ ಲಕ್ಷ ಜನರು ಸ್ಥಳಾಂತರ ಪ್ರಕ್ರಿಯೆಗೆ ಒಳಗಾಗಿದ್ದು, ಅದರಲ್ಲಿ ೧೬.೪ ಮಿಲಿಯನ್ ಅಣೆಕಟ್ಟು ನಿರ್ಮಾಣದಿಂದ, ೨.೫೫ ಮಿಲಿಯನ್ ಗಣಿಗಾರಿಕೆ ಪ್ರದೇಶಗಳಿಂದ, ೧.೨೫ ಮಿಲಿಯನ್ ಕಾರ್ಖಾನೆಗಳ ಸ್ಥಾಪನೆಯಿಂದ, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯಿಂದ ೦.೬ ಮಿಲಿಯನ್[೭]. ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಮನನಕ್ಕೆ ಬರುವ ವಸ್ತು ವಿಷಯವೆಂದರೆ, ಸರ್ಕಾರವು ಪ್ರಮುಖವಾಗಿ ಸ್ಥಳಾಂತರ ಮತ್ತು ಪುನರ್ವಸತೀಕರಣ ವಿಷಯವನ್ನು ಗಂಭೀರವಾಗಿ ಪರಿಗಣಿಸದೇ ಇರುವುದು. ಸ್ಥಳಾಂತರ ಪ್ರಕ್ರಿಯೆಗೆ ಒಳಗಾಗುವವರಿಗೆ ಕ್ರಮಬದ್ಧವಾದ ಭೂಹಿಡುವಳಿಗಳನ್ನು ಗುರುತಿಸಿ ವಿತರಿಸದಿರುವುದು.

ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕೆಲವೇ ಭೂಹಿಡುವಳಿ ಪಟ್ಟ ಹೊಂದಿರುವ ಜನರನ್ನು ಪರಿಗಣಿಸುವುದು ಮತ್ತು ಅರಣ್ಯ ವ್ಯಾಪ್ತಿಯ ಅಂತರಾಳದಲ್ಲಿ ಜೀವನವನ್ನು ಕಟ್ಟಿಕೊಂಡಿರುವ ಭೂಹಿಡುವಳಿ ಪಟ್ಟ ರಹಿತ ಆದಿವಾಸಿ ಸಮುದಾಯಗಳನ್ನು ಒತ್ತುವರಿಗಾರರೆಂದು ಪರಿಗಣಿಸಿರುವುದು. ಕ್ರಮಬದ್ಧವಾದ ಪುನರ್ವಸತೀಕರಣ ಪರಿಹಾರವನ್ನು ಹಾಗೂ ಭೂಹಿಡುವಳಿಗಳನ್ನು ಕೂಲಂಕಷವಾಗಿ ಪರೀಕ್ಷಿಸಿ ನೀಡದಿರುವುದು, ಆದಿವಾಸಿ ಸಮುದಾಯಗಳ ಆರ್ಥಿಕ ವ್ಯವಸ್ಥೆಗಳನ್ನು ಬುಡಮೇಲು ಮಾಡುವುದರ ಮುಖಾಂತರ ಅವರನ್ನು ಆರ್ಥಿಕವಾಗಿ ಅಂತಿಮ ಹಂತದ ಅಂಚಿನ ರೇಖೆಗೆ ಸರ್ಕಾರವೇ ತಳಲ್ಪಡುತ್ತದೆ. ಇತ್ತ ಮೂಲ ಆರ್ಥಿಕತೆಯನ್ನು ಹಾಗೂ ಸಂಸ್ಕೃತಿಯನ್ನು ಉಳಿಸಿಕೊಳ್ಳಲಾಗದ ತೊಳಲಾಟದಲ್ಲಿ ಆದಿವಾಸಿ ಸಮುದಾಯಗಳು

ದಿನಗಳನ್ನು ಕಳೆಯುವಂತಾಗಿದೆ. ಸರ್ಕಾರವು ನಿರ್ದಿಷ್ಟವಾಗಿ ಸ್ಥಳೀಯ ಸಂದರ್ಭಗಳಿಗೆ ಅನುಸಾರವಾಗಿ ಪುನರ್ವಸತಿ ಪರಿಹಾರ ಯೋಜನೆಗಳನ್ನು ರೂಪಿಸದಿರುವ ಪರಿಣಾಮವಾಗಿ ಸಾಮಾಜಿಕ ಗುಂಪುಗಳಲ್ಲಿ ಆತಂಕಗಳು ಎದುರಾಗಿ ಸಿಕ್ಕಷ್ಟೆ ಅಲ್ಪ ಪರಿಹಾರಕ್ಕೆ ಕೈ ಒಡ್ಡುವ ಸ್ಥಿತಿಗಳಾಗಿವೆ. ಇವೆಲ್ಲದರ ನಡುವೆ ಸರ್ಕಾರವೇ ಹುಲಿ ಯೋಜನೆಯನ್ನು ಜಾರಿ ತರಲು ದ್ವಂದ್ವದಲ್ಲಿರುವಾಗ ಮುಗ್ಧ ಆದಿವಾಸಿ ಜನರನ್ನು ಹುಲಿ ಯೋಜನೆಯು ಅನುಷ್ಠಾನವಾಗುತ್ತದೆ ಎಂಬ ಹೇಳಿಕೆ ನೀಡಿ ಅಲ್ಪ ಮೊತ್ತಕ್ಕೆ ಸ್ವಇಚ್ಛೆಯ ಮೇರೆಗೆ ಸ್ಥಳಾಂತರ ಹೊಂದುವಂತೆ ಮಾಡುತ್ತಿರುವ ಎನ್.ಜಿ.ಓಗಳು.

ಅಂತಿಮವಾಗಿ ಉಲ್ಲೇಖಿಸುವ ಅಂಶವೆಂದರೆ, ಸರ್ಕಾರವು ಜಾರಿತರುವ ಯೋಜನೆಗಳಲ್ಲಿ ಕೇವಲ ತನಗಾಗುವ ಉಪಯೋಗವನ್ನು ಮಾತ್ರ ಪರಿಗಣಿಸುತ್ತಿದ್ದು, ಅಧಿಕಾರ ನಡೆಸುವವರ ಆಲೋಚನೆಯ ವೈಚಾರಿಕತೆ ಕೇವಲ ಸ್ವ ಅಭಿವೃದ್ಧಿಯನ್ನು ಮಾತ್ರ ಪರಿಗಣಿಸುತ್ತಿದೆ ಹೊರತು, ನೈಜವಾಗಿ ಮೂಲ ಪರಿಸರಗಳಿಂದ ವಂಚನೆಗೆ ಒಳಗಾಗುತ್ತಿರುವ ಸಾಮಾಜಿಕ ಗುಂಪುಗಳಲ್ಲ. ಬಡನನವು ಹೆಚ್ಚಾಗಿರುವುದು ಬಡವರಿಂದಲ್ಲ, ಅದು ಯಾವುದೇ ಮುಂದಾಲೋಚನೆಗಳಿಲ್ಲದೆ ಅಭಿವೃದ್ಧಿಯ ನೆಪದಲ್ಲಿ ಜಾರಿ ತರುತ್ತಿರುವ ಪ್ರಕಲ್ಪಗಳ ಅನುಷ್ಠಾನದಿಂದ ಸ್ಥಳಾಂತರ ಹೊಂದುತ್ತಿರುವುದರಿಂದ. ಇದರೊಂದಿಗೆ ಆರ್ಥಿಕವಾಗಿ ಸದೃಡರಾಗಲು ಅವಶ್ಯವಿರುವ ಭೂಹಿಡುವಳಿಗಳು ಲಭ್ಯವಾಗದೆ ಇರುವುದರಿಂದ ಆದಿವಾಸಿಗಳು ಬಡವರಾಗಿಯೇ ಉಳಿಯುತ್ತಿದ್ದಾರೆ. ದೇಶದಲ್ಲಿ ಬಡತನದ ಪ್ರಮಾಣ ವರ್ಷದಿಂದ ವರ್ಷಕ್ಕೆ ಆರೋಹಣ ಪಥಕ್ಕೆ ಕ್ರಮಿಸುತ್ತಲೇ ಇದೆ. ಈ ಮೇಲಿನ ಎಲ್ಲಾ ವಿಷಯಗಳನ್ನು ಆಧರಿಸಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಾಗಿರುವ ಸ್ಥಳಾಂತರ ಮತ್ತು ಪುನರ್ವಸತೀಕರಣದ ಪರಿಣಾಮಗಳನ್ನು ಸಂಖ್ಯಾತ್ಮಕವಾಗಿ ಕೋಷ್ಟಕಹಾಗೂ ನಕಾಶೆ ಮುಖಾಂತರ ವಿಶ್ಲೇಷಿಸಲಾಗಿದೆ.


ಕೋಷ್ಟಕ೨೪, (ಒಕ್ಕಲೇಳಲು) ಸ್ಥಳಾಂತರಕ್ಕೆ ಒಳಗಾಗಲು ಕಾರಣವಾಗಿರುವ ಯೋಜನೆಯ ವಿವರವನ್ನು ಒಳಗೊಂಡಿದೆ. ಅದರ ಪ್ರಕಾರ ರಾಷ್ಟ್ರೀಯ ಉದ್ಯಾನವನ ಯೋಜನೆಯು ಸರ್ಕಾರದ ಮುಖೇನ ಅನುಷ್ಠಾನಗೊಂಡಿದೆ. ರಾಷ್ಟ್ರೀಯ ಉದ್ಯಾನವನ ಯೋಜನೆ ಅಡಿಯಲ್ಲಿ ೪೭.೬% ರಷ್ಟು ಕುಟುಂಬಗಳು ಸ್ಥಳಾಂತರಕ್ಕೆ ಒಳಗಾಗಿವೆ. ಎನ್.ಜಿ.ಓ ಮುಖೇನ ಹುಲಿ ಯೋಜನೆ ಹೆಸರಿನಲ್ಲಿ ೬.೪% ರಷ್ಟು ಕುಟುಂಬಗಳು ಸ್ಥಳಾಂತರಕ್ಕೆ ಒಳಗಾಗಿವೆ. ಇನ್ನುಳಿದಂತೆ ಒಕ್ಕಲೇಳದೆ ಉದ್ಯಾನವನದಲ್ಲಿಯೇ ಉಳಿದವರು ೪೬% ರಷ್ಟಿದ್ದಾರೆ.

ಕೋಷ್ಟಕ ೨೪

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರು ಕಾಡಿನಿಂದ ಒಕ್ಕಲೇಳಲು ಕಾರಣವಾದ ಯೋಜನೆಗಳು

ಕ್ರಸಂ	ಯೋಜನೆ	ಯೋಜನೆಯ ಪ್ರಕಾರ	ಸಮುದಾಯಗಳು				ಒಟ್ಟು	ಶೇಕಡವಾರು
			ಮರಾಠಿ ನಾಯ್ಕ	ಮಲೆಕುಡಿಯ	ಗೌಡಲು	ಇತರೆ		
1	ರಾಷ್ಟ್ರೀಯ ಉದ್ಯಾನವನ	ಸರ್ಕಾರಿ ಯೋಜನೆ	೧	೫೧	೩೫	೩೨	೧೧೯	೪೭.೬
2	ಹುಲಿ ಯೋಜನೆ	ಎನ್.ಜಿ.ಒ ಯೋಜನೆ	೦	೩	೧೧	೨	೧೬	೬.೪
3	ಒಕ್ಕಲೇಳದವರು		೧೨	೩೭	೫೩	೧೩	೧೧೫	೪೬
	ಒಟ್ಟು		೧೩	೯೧	೯೯	೪೭	೨೫೦	೧೦೦

ಗ್ರಾಫ್ ೧೩, ಒಕಲೇಳಲು ಕಾರಣವಾದ ಯೋಜನೆ



ಗ್ರಾಫ್ ೧೩ ರ ಅನ್ವಯ ರಾಷ್ಟ್ರೀಯ ಉದ್ಯಾನವನ ಯೋಜನೆಯು ಜಾರಿಯಾದ ನಂತರ ಕಾನೂನುಗಳು ಯಾವ ಸಂದರ್ಭದಲ್ಲಿ ಯಾವ ರೀತಿಯಾಗಿ ಅನುಷ್ಠಾನಗೊಳ್ಳುವುದು ಎಂಬ ಆತಂಕದಲ್ಲಿ ಸಿಕ್ಕಂತಹ ಪರಿಹಾರಕ್ಕೆ ಅಧಿಕ ಕುಟುಂಬಗಳು ಸ್ವ ಇಚ್ಛೆ ಮೂಲಕ ಸ್ಥಳಾಂತರ ಹೊಂದಿದ್ದಾರೆ. ಎನ್.ಜಿ.ಓ ಮುಖಾಂತರ ಅನುಷ್ಠಾನಗೊಂಡ ಹುಲಿ ಯೋಜನೆಯು ಬಹಳಷ್ಟು ಕಾಲ ಈ ವ್ಯಾಪ್ತಿಯಲ್ಲಿ ಅನುಷ್ಠಾನಗೊಳ್ಳಲು ಸಾಧ್ಯವಾಗಲಿಲ್ಲ. ಆದರೂ ಈ ಯೋಜನೆ ಅಡಿಯಲ್ಲಿ ಸ್ಥಳಾಂತರಗೊಂಡಿರುವ ಕುಟುಂಬಗಳು ಅರಣ್ಯ ವ್ಯಾಪ್ತಿಯಲ್ಲಿ ಪಟ್ಟ ಭೂಹಿಡುವಳಿಗಳನ್ನು ಹೊಂದದಿರುವುದು ಅಧ್ಯಯನದಲ್ಲಿ ಕಂಡುಬಂದಿದೆ. ಇನ್ನುಳಿದಂತೆ ೪೬% ಒಕ್ಕಲೇಳದೇ ಉದ್ಯಾನವನ ವ್ಯಾಪ್ತಿಯಲ್ಲಿಯೇ ಉಳಿದಿರುವವರು ಅತೀ ಸಣ್ಣ ರೈತರಾಗಿದ್ದು, ಇರುವ ಅಲ್ಪ ಪ್ರಮಾಣದ ಭೂಹಿಡುವಳಿಗಳನ್ನು ಕಳೆದುಕೊಂಡು ಸರ್ಕಾರದ ಮುಖಾಂತರ ಸಿಗುವ ಅಲ್ಪ ಪರಿಹಾರಕ್ಕೆ ಸ್ಥಳಾಂತರಗೊಂಡರೆ ಹೊರಗಿನ ಪ್ರಪಂಚದಲ್ಲಿ ಬದುಕುವುದು ದುಸ್ತರವಾಗುತ್ತದೆ ಎಂಬ ಕಾರಣದಿಂದ ಒಕ್ಕಲೇಳದೆ ಅಲ್ಲಿಯೇ ಉಳಿದಿದ್ದಾರೆ.

ಸ್ಥಳಾಂತರ ಪೂರ್ವದ ಆಸ್ತಿಗಳು

ಆಸ್ತಿಗಳು ಅಥವಾ ಸ್ವತ್ತುಗಳು ಪೂರ್ವಜರಿಂದ ವಂಶಾಂತರವಾಗಿ ಬಂದಿರುವ, ಬಳುವಳಿಯಾಗಿ ಪಡೆದಿರುವ ಇಲ್ಲವೆ ಕ್ರಯಕ್ಕೆ ಪಡೆದಿರುವ ಉತ್ಪಾದನಾಂಗಗಳ ಉತ್ಪತ್ತಿಯ ಭಾಗವಾಗಿ ಗುರುತಿಸಲ್ಪಟ್ಟಿವೆ. ಮಾನವನ ಆರ್ಥಿಕ ಸ್ಥಾನಮಾನಗಳ ಮಟ್ಟವನ್ನು ನಿರ್ದರಿಸುವ ಅಂಶಗಳಲ್ಲಿ ಆಸ್ತಿ ಅಥವಾ ಸ್ವತ್ತು ಪ್ರಮುಖವಾದ ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತದೆ. ಆರ್ಥಿಕ ಚಟುವಟಿಕೆಗಳ ಮೂಲಗಳು ಎಂದರೆ, ಅವು ಆಸ್ತಿಗಳು ಅಥವಾ ಸ್ವತ್ತುಗಳು. ಆಸ್ತಿಗಳಲ್ಲಿ ಕೆಲವು ಚರವಾದ ಆಸ್ತಿಗಳು ಮತ್ತು ಸ್ಥಿರವಾದ ಆಸ್ತಿಗಳೆಂದು ವಿಂಗಡಿಸುವುದುಂಟು. ಸ್ಥಿರಾಸ್ಥಿಗಳು ಒಂದು ಕಡೆ ನೆಲೆಯನ್ನು ಹೊಂದಿರುವವು. ಉದಾಹರಣೆಯಾಗಿ ಭೂಮಿ ಸ್ಥಿರಾಸ್ತಿಯಾಗಿದ್ದು, ವ್ಯಕ್ತಿ ಎಷ್ಟು ಪ್ರಮಾಣದಲ್ಲಿ ಹೊಂದಿದ್ದಾನೆಂದು ಎಕರೆ ಅಳತೆಯಲ್ಲಿ ಮಾಪನಗೊಳಿಸಬಹುದು. ಹಣ ಚರಾಸ್ಥಿಯಾಗಿದ್ದು, ಅದು ನಿರಂತರವಾಗಿ ಚಲಾವಣೆಯಲ್ಲಿರುತ್ತದೆ. ಮಾನವನ ದಿನನಿತ್ಯದ ಜೀವನಕ್ಕೆ ಚರ ಮತ್ತು ಸ್ಥಿರ ಆಸ್ತಿಗಳು ಅತ್ಯಗತ್ಯ. ಇವುಗಳ ಮುಖಾಂತರ ಹೂಡಿಕೆಯನ್ನು ಮಾಡುವುದರ ಮುಖಾಂತರ ಉತ್ಪಾದನೆಯನ್ನು ಕಂಡುಕೊಂಡು ಮಾರುಕಟ್ಟೆಗಳಿಗೆ ಉತ್ಪತ್ತಿಗಳನ್ನು ಬೇಡಿಕೆಗೆ ಅನುಸಾರವಾಗಿ ಪೂರೈಸುವುದರ ಮುಖಾಂತರ ಆದಾಯವನ್ನು ಪಡೆಯಬಹುದು. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಸ್ಥಳಾಂತರದ ಭಾಗವಾಗಿ ಆರ್ಥಿಕ ಪರಿಸ್ಥಿತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಸಂದರ್ಭದಲ್ಲಿ ಹಿಂದೆ ಇದ್ದಂತಹ ಸ್ವತ್ತುಗಳನ್ನು ಹಾಗೂ ಸ್ಥಳಾಂತರದ ನಂತರ ಹೊಂದಿರುವ ಸ್ವತ್ತುಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ ಅದರ ವ್ಯತ್ಯಾಸಗಳು ಕಂಡುಬರುವವು. ಈ ನಿಟ್ಟಿನಲ್ಲಿ ಕೋಷ್ಟಕ೨೫ ಮಾಹಿತಿದಾರರು ಒಕ್ಕಲೇಳುವ ಪೂರ್ವದಲ್ಲಿ ಹೊಂದಿದ್ದ ಆಸ್ತಿಗಳ ವಿವರವಾಗಿದೆ. ಅದರಲ್ಲಿ ಒಕ್ಕಲೇಳದ ಮಾಹಿತಿದಾರರು ೪೬% ರಷ್ಟಿದ್ದಾರೆ. ಅಂದರೆ, ಯಾವ ಕಾರಣಕ್ಕೂ ಇರುವ ಸ್ಥಳವನ್ನು ಬಿಟ್ಟು ಬೇರೆಡೆ ಹೋಗಲು ಸಿದ್ಧವಿಲ್ಲ ಹಾಗೂ ಸರ್ಕಾರವು ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಈ ಸ್ಥಳಕ್ಕೆ ನೀಡಬೇಕು ಎನ್ನುವ ಹಕ್ಕೊತ್ತಾಯದ ಮುಖಾಂತರ ಒಕ್ಕಲೇಳಲು ಸಿದ್ಧವಿಲ್ಲವಾಗಿದ್ದಾರೆ.

ಕೋಷ್ಟಕ ೨೫


ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರು ಒಕ್ಕಲೇಳುವ ಪೂರ್ವದಲ್ಲಿದ್ದಂತಹ ಆಸ್ತಿಗಳು

ಕ್ರಸಂ	ಆಸ್ತಿಗಳು	ಜನಾಂಗ				ಒಟ್ಟು	ಶೇಕಡವಾರು
		ಮರಾಠಿ ನಾಯ್ಕ	ಮಲೆಕುಡಿಯ	ಗೌಡಲು	ಇತರೆ		
1	0.10 ರಿಂದ 39 ಗುಂಟೆ ಜಮೀನು ಮತ್ತು ಮನೆ	೦	೧೩	೪	೦	೧೭	೬.೮
2	39 ಗುಂಟದಿಂದ 1 ಎಕರೆ ಜಮೀನು, ಮನೆ	೧	೭	೩	೧೯	೩೦	೧೨
3	1 ರಿಂದ 3 ಎಕರೆ ಜಮೀನು, ಮನೆ ಮತ್ತು ಗದ್ದೆ	೦	೨೬	೨೩	೯	೫೮	೨೩.೨
4	3 ರಿಂದ 5 ಎಕರೆ ಜಮೀನು, ಮನೆ ಮತ್ತು ಗದ್ದೆ	೦	೮	೧೨	೪	೨೪	೯.೬
5	6 ಎಕರೆಗಿಂತ ಹೆಚ್ಚಿನ ಜಮೀನು, ಮನೆ ಮತ್ತು ವ್ಯಾಪಾರ	೦	೦	೧	೧	೨	೦.೮
6	ವಾಸದ ಮನೆ ಮಾತ್ರ	೦	೦	೩	೧	೪	೧.೬
7	ಒಕ್ಕಲೇಳದವರು	೧೨	೩೭	೫೩	೧೩	೧೧೫	೪೬
	ಒಟ್ಟು	೧೩	೯೧	೯೯	೪೭	೨೫೦	೧೦೦

೧ರಿಂದ ೩ ಎಕರೆ ಜಮೀನು, ಮನೆ ಮತ್ತು ಗದ್ದೆ ಹೊಂದಿರುವವರು ೨೩.೨% ರಷ್ಟಿದ್ದಾರೆ. ೩೯ ಗುಂಟೆ ಇಂದ ೧ ಎಕರೆ ಜಮೀನು ಮತ್ತು ಮನೆಯನ್ನು ಹೊಂದಿರುವವರು ೧೨% ರಷ್ಟಿದ್ದಾರೆ. ೩ ರಿಂದ ೫ ಎಕರೆ ಜಮೀನು, ಮನೆ ಮತ್ತು ಗದ್ದೆ ಹೊಂದಿರುವವರು ೯.೬% ರಷ್ಟಿದ್ದಾರೆ. ೧೦ ಗುಂಟೆ ಯಿಂದ ೩೯ ಗುಂಟೆ ಜಮೀನು ಮತ್ತು ಮನೆ ಹೊಂದಿರುವವರು ೬.೮% ರಷ್ಟಿದ್ದಾರೆ. ವಾಸದ ಮನೆಯನ್ನು ಮಾತ್ರ ಹೊಂದಿರುವವರು ೧.೬% ರಷ್ಟಿದ್ದಾರೆ ಮತ್ತು ೬ ಎಕರೆಗಿಂತ ಹೆಚ್ಚಿನ ಜಮೀನು,ಮನೆ ಮತ್ತು ವ್ಯಾಪಾರ ಹೊಂದಿರುವವರು ೦.೮% ರಷ್ಟಿದ್ದಾರೆ.

ಗ್ರಾಫ್ ೧೪ ರ ಅನ್ವಯ, ೧ ರಿಂದ ೩ ಎಕರೆ ಜಮೀನು, ಮನೆ ಮತ್ತು ಗದ್ದೆ ಆಸ್ತಿಗಳನ್ನು ಹೊಂದಿರುವ ರೈತರು ೨೩.೨% ರಷ್ಟಿದ್ದು, ಅಧಿಕ ಸಂಖ್ಯೆಯಲ್ಲಿದ್ದಾರೆ.

ಗ್ರಾಫ್ ೧೪, ಒಕ್ಕಲೇಳುವ ಪೂರ್ವದಲ್ಲಿದ್ದಂತಹ ಆಸ್ತಿಗಳು



ಈ ಪ್ರಮಾಣವು ನಮಗೆ ಉದ್ಯಾನವನ ವ್ಯಾಪ್ತಿಯಲ್ಲಿ ಅಧಿಕ ಸಂಖ್ಯೆಯ ಸಣ್ಣ ಪ್ರಮಾಣದ ರೈತರು ಆಶ್ರಿತರಾಗಿದ್ದು, ಕಡಿಮೆ ಪ್ರಮಾಣದ ಭೂಹಿಡುವಳಿಗಳನ್ನು ಹೊಂದಿರುವುದನ್ನು ಸೂಚಿಸುತ್ತಿದೆ. ಕನಿಷ್ಠ ಮಟ್ಟದ ಆಸ್ತಿಗಳನ್ನು ಹೊಂದಿರುವವರು ೦.೧೦ ಗುಂಟೆಯಿಂದ ೩೯ ಗುಂಟೆ ಜಮೀನು ಮತ್ತು ಮನೆ ಹೊಂದಿರುವವರು ೬.೮% ಮತ್ತು ೩೯ ಗುಂಟೆಯಿಂದ ೧ ಎಕರೆ ಜಮೀನು, ಮನೆ ಮತ್ತು ಗದ್ದೆ ಹೊಂದಿರುವವರು ೧೨%ರಷ್ಟಿದ್ದಾರೆ. ಈ ಪ್ರಮಾಣವು ಅವರ ಆರ್ಥಿಕ ಸ್ಥಿತಿಯನ್ನು ಸೂಚಿಸುತ್ತಿದ್ದು, ಪ್ರಮುಖ ಆರ್ಥಿಕ ಚಟುವಟಿಕೆಯಾಗಿ ಕೃಷಿಯೊಂದಿಗೆ ಕೂಲಿಯನ್ನು ಆಶ್ರಯಿಸಿಕೊಂಡಿದ್ದಾರೆ. ಉದ್ಯಾನವನ ವ್ಯಾಪ್ತಿಯಲ್ಲಿ ವಾಸದ ಮನೆಯನ್ನು ಮಾತ್ರ ಹೊಂದಿದ್ದು, ಸಂಪೂರ್ಣವಾಗಿ ಕೃಷಿ ಕೂಲಿಯನ್ನೇ ಆಶ್ರಯಿಸಿರುವ ಕುಟುಂಬಗಳು ೧.೬% ರಷ್ಟಿದ್ದಾರೆ. ಯಾವುದೇ ಮೂಲಗಳಿಂದ ಅಂದರೆ, ಪೂರ್ವಜರ ಮೂಲಗಳಿಂದ ಮತ್ತು ಕನಿಷ್ಠ



ಮಟ್ಟದ ಆರ್ಥಿಕತೆಯ ಪರಿಣಾಮವಾಗಿ ಕೇವಲ ಮನೆಯನ್ನು ಆಸ್ತಿಯಾಗಿ ಹೊಂದಿದ್ದಾರೆ ಹಾಗೂ ಕೂಲಿಯನ್ನೇ ತಮ್ಮ ಮೂಲ ಆರ್ಥಿಕ ಚಟುವಟಿಕೆಯನ್ನಾಗಿ ಆಧರಿಸಿದ್ದಾರೆ.

೩ ರಿಂದ ೫ ಎಕರೆ ಜಮೀನು, ಮನೆ ಮತ್ತು ಗದ್ದೆ ಹೊಂದಿರುವವರು ೯.೬% ರಷ್ಟಿದ್ದಾರೆ. ಮೂಲವಾಗಿ ತಮ್ಮ ಪೂರ್ವಜರಿಂದ ಹಾಗೂ ಅರಣ್ಯಗಳಲ್ಲಿನ ಪ್ರದೇಶಗಳನ್ನು ಅಲ್ಪ ಪ್ರಮಾಣದಲ್ಲಿ ಒತ್ತುವರಿ ಪ್ರದೇಶಗಳನ್ನಾಗಿ ಪರಿವರ್ತಿಸಿಕೊಂಡಿರುವವರಾಗಿದ್ದಾರೆ. ೬ ಎಕರೆ ಗಿಂತ ಹೆಚ್ಚಿನ ಜಮೀನು, ಮನೆ ಮತ್ತು ವ್ಯಾಪಾರ ಹೊಂದಿರುವವರು ೦.೮% ರಷ್ಟಿದ್ದು, ಆರ್ಥಿಕವಾಗಿ ದೊಡ್ಡ ಪ್ರಮಾಣದ ರೈತರಾಗಿ ಈ ವ್ಯಾಪ್ತಿಯಲ್ಲಿ ಕನಿಷ್ಟ ಪ್ರಮಾಣದಲ್ಲಿ ಕಂಡುಬರುತ್ತಿದ್ದಾರೆ. ಒಟ್ಟಾರೆಯ ಕೋಷ್ಟಕಮತ್ತು ನಕಾಶೆ ಅನ್ವಯ ದೊಡ್ಡ ಪ್ರಮಾಣದ ರೈತರಿಗಿಂತ ಹೆಚ್ಚು ಸಣ್ಣ ಮತ್ತು ಅತೀ ಸಣ್ಣ ಪ್ರಮಾಣದ ರೈತರೇ ಈ ವ್ಯಾಪ್ತಿಯಲ್ಲಿ ಹೆಚ್ಚಾಗಿದ್ದಾರೆ.

ಸ್ಥಳಾಂತರದ (ಒಕ್ಕಲೆದ್ದ) ನಂತರದಲ್ಲಿನ ಆಸ್ತಿಗಳ ವಿವರ

ಸರ್ಕಾರದ ಉದ್ದೇಶಿತ ಯೋಜನೆಗಳು ಅನುಷ್ಠಾನಗೊಂಡಾಗ, ಯೋಜಿತ ಸ್ಥಳಗಳಲ್ಲಿನ ಸಮುದಾಯಗಳು ಸ್ಥಳಾಂತರ (ಒಕ್ಕಲೇಳುವ)ದ ಪ್ರಕ್ರಿಯೆಗೆ ಒಳಪಡುತ್ತವೆ. ಈ ಪ್ರಕ್ರಿಯೆಯ ಅನುಸಾರವಾಗಿ ಅನ್ಯ ಸ್ಥಳಗಳಲ್ಲಿ ಮೊದಲಿನಂತೆ ಜೀವನವನ್ನು ನಡೆಸಲು ಅನುವಾಗುವ ಹಾಗೆ ಭೂಹಿಡುವಳಿ ಮತ್ತು ಆಸ್ತಿಗಳನ್ನು ಹೊಂದಬೇಕಾದದ್ದು ಅನಿವಾರ್ಯವಾಗಿರುತ್ತದೆ. ಈ ದಿಶೆಯಲ್ಲಿ ಸ್ಥಳಾಂತರಕ್ಕೆ ಸಮ್ಮತಿಯನ್ನು ಸೂಚಿಸಿ ಇಲಾಖೆವತಿಯಿಂದ ತಮ್ಮ ಸ್ವತ್ತುಗಳಿಗೆ ಮೌಲ್ವೀಕರಣಗೊಂಡು ದೊರೆಯುವ ಸಂಚಿತ ನಿಧಿಯ ಅನುಸಾರವಾಗಿ ಪರ ಸ್ಥಳಗಳಲ್ಲಿ ಸ್ವತ್ತುಗಳನ್ನು ಹೊಂದಬೇಕಾಗುತ್ತದೆ. ಅದರ ಅನುಸಾರವಾಗಿ ಕೋಷ್ಟಕ೨೬ ಉದ್ಯಾನವನ ವ್ಯಾಪ್ತಿಯಿಂದ ಒಕ್ಕಲೆದ್ದ ನಂತರದಲ್ಲಿ ಪುನರ್ವಸತೀಕರಣಗೊಂಡವರು ಹೊಂದಿರುವ ಆಸ್ತಿಗಳ ವಿವರಗಳನ್ನು ಸ್ಪಷ್ಟಗೊಳಿಸುತ್ತದೆ.

ಅದರಂತೆ, ೨ ರಿಂದ ೪ ಎಕರೆ ಜಮೀನು ಮತ್ತು ಮನೆಯನ್ನು ಪರಿಹಾರ ಪಡೆದ ಹಣದಿಂದ ಹೊಂದಿರುವವರು ೧೦.೮% ರಷ್ಟಿದ್ದಾರೆ. ೧ ರಿಂದ ೨ ಎಕರೆ ಜಮೀನು, ಮನೆ ಮತ್ತು ವ್ಯಾಪಾರ ಹೊಂದಿದವರು ೧೦% ರಷ್ಟಿದ್ದಾರೆ. ೦.೧೦ ರಿಂದ ೩೯ ಗುಂಟೆ ಜಮೀನು ಮತ್ತು ಮನೆ ಹೊಂದಿರುವವರು ೭.೬% ರಷ್ಟಿದ್ದಾರೆ. ೧ ಎಕರೆ ಜಮೀನು, ಮನೆ ಮತ್ತು ಕೂಲಿ ಹೊಂದಿದವರು ೬.೮% ರಷ್ಟಿದ್ದಾರೆ. ೦.೧೦ ರಿಂದ ೩೯ ಗುಂಟೆ ಜಮೀನು, ಮನೆ ಮತ್ತು ಕೂಲಿ ಹೊಂದಿದವರು ೬% ರಷ್ಟಿದ್ದಾರೆ. ೦.೧೦ ರಿಂದ ೩೯ ಗುಂಟೆ ಜಮೀನು, ಮನೆ ಮತ್ತು ವ್ಯವಹಾರ ಹೊಂದಿದವರು ೩.೨% ರಷ್ಟಿದ್ದಾರೆ. ೨ ರಿಂದ ೪ ಎಕರೆ ಜಮೀನು, ಮನೆ, ಹೈನುಗಾರಿಕೆ ಮತ್ತು ವ್ಯವಹಾರ ಹೊಂದಿರುವವರು ೨.೮% ರಷ್ಟಿದ್ದಾರೆ. ಮನೆ ಮತ್ತು ಬ್ಯಾಂಕ್‌ಗಳಲ್ಲಿ ಠೇವಣಿ ಹೊಂದಿರುವವರು ೧.೬% ರಷ್ಟಿದ್ದಾರೆ. ೪ ರಿಂದ ೬ ಎಕರೆ ಜಮೀನು, ಮನೆ ಮತ್ತು ವ್ಯವಹಾರ ಹೊಂದಿದವರು ೧.೨% ಹಾಗೂ ೬ ಎಕರೆಗಿಂತ ಹೆಚ್ಚಿನ ಜಮೀನು, ಮನೆ, ವ್ಯಾಪಾರ ಮತ್ತು ಹೈನುಗಾರಿಕೆ ಹೊಂದಿದವರು ೧.೨% ರಷ್ಟಿದ್ದಾರೆ.

ಕೋಷ್ಟಕ೨೬


ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಒಕ್ಕಲೆದ್ದ ನಂತರದಲ್ಲಿರುವ ಆಸ್ತಿಗಳು

ಕ್ರ.ಸಂ	ಆಸ್ತಿಗಳು	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ		
1	0.10 – 39 ಗುಂಟ ಜಮೀನು, ಮನೆ ಮತ್ತು ವ್ಯವಹಾರ	೦	೪	೦	೪	೮	೩.೨
2	0.10 – 39 ಗುಂಟ ಜಮೀನು, ಮನೆ ಮತ್ತು ಕೂಲಿ	೧	೫	೫	೪	೧೫	೬
3	0.10 – 39 ಗುಂಟ ಜಮೀನು ಮತ್ತು ಮನೆ	೦	೧೦	೧	೮	೧೯	೭.೬
4	1 ಎಕರೆ ಜಮೀನು, ಮನೆ ಮತ್ತು ಕೂಲಿ	೦	೫	೩	೯	೧೭	೬.೮
5	1–2ಎಕರೆ ಜಮೀನು, ಮನೆ ಮತ್ತು ವ್ಯವಹಾರ	೦	೦	೨೫	೦	೨೫	೧೦
6	1–2ಎಕರೆಜಮೀನು, ಮತ್ತು ಮನೆ	೦	೧	೪	೨	೭	೨.೮
7	2–4 ಎಕರೆ ಜಮೀನು ಮತ್ತು ಮನೆ	೦	೨೧	೨	೪	೨೭	೧೦.೮

8	2–4 ಎಕರೆ ಜಮೀನು, ಮನೆ ಮತ್ತು ವ್ಯವಹಾರ, ಹೈನುಗಾರಿಕೆ	೦	೨	೩	೨	೭	೨.೮
9	4–6 ಎಕರೆ ಜಮೀನು, ಮನೆ ಮತ್ತು ವ್ಯವಹಾರ	೦	೩	೦	೦	೩	೧.೨
10	ಮನೆ ಮತ್ತು ಬ್ಯಾಂಕ್ ಠೇವಣಿ	೦	೧	೩	೦	೪	೧.೬
11	> 6 ಎಕರೆ ಜಮೀನು, ಮನೆ ಮತ್ತು ವ್ಯಾಪಾರ, ಹೈನುಗಾರಿಕೆ	೦	೨	೦	೧	೩	೧.೨
12	ಒಕ್ಕಲೇಳದವರು	೧೨	೩೭	೫೩	೧೩	೧೧೫	೪೬
	ಒಟ್ಟು	೧೩	೬೧	೯೯	೪೭	೨೫೦	೧೦೦

ಗ್ರಾಫ್ ೧೫ ರ ಅನ್ವಯ ಒಕ್ಕಲೇಳದೆ ಉದ್ಯಾನವನ ಭಾಗದಲ್ಲಿಯೇ ಉಳಿದವರು ೪೬% ರಷ್ಟಿದ್ದಾರೆ. ಪುನರ್ವಸತೀಕರಣದ ನಂತರ ದೊರಕಿರುವ ಪರಿಹಾರದ ಆಧಾರಿತವಾಗಿ ವ್ಯವಹಾರ ಪ್ರಕ್ರಿಯೆಗೆ ತೊಡಗಿರುವವರು ೦.೧೦ ಗುಂಟ ದಿಂದ ೩೯ ಗುಂಟೆ ಮತ್ತು ೧ ರಿಂದ ೨ ಎಕರೆ ಜಮೀನು ಹೊಂದಿರುವ ೩.೨% ಮತ್ತು ೧೦% ಮಾಹಿತಿದಾರರು ಹೊಸದಾದ ವೃತ್ತಿಗೆ ಅಳವಡಿಸಿಕೊಂಡಿದ್ದಾರೆ. ಭೂಹಿಡುವಳಿ ಜಮೀನು, ಮನೆ, ವ್ಯಾಪಾರ ಮತ್ತು ಹೈನುಗಾರಿಕೆಯನ್ನು ಆರಂಭಿಸಿರುವವರು ೨.೮% ಮತ್ತು ೧.೨% ರಷ್ಟಿರುವ ೨ ರಿಂದ ೪ ಎಕರೆ ಮತ್ತು ೬ಕ್ಕಿಂತ ಹೆಚ್ಚು ಎಕರೆ ಭೂಹಿಡುವಳಿಯನ್ನು ಹೊಂದಿರುವವರು. ಕೂಲಿ ವೃತ್ತಿಯನ್ನು ಮೊದಲಿನಿಂದಲೂ ಹೊಂದಿರುವವರು ಮತ್ತು ಪುನರ್ವಸತೀಕರಣದ ನಂತರ ದೊರಕಿದ ಪರಿಹಾರವನ್ನು ಕೂಡು

ಗ್ರಾಫ್ ೧೫, ಒಕ್ಕಲೆದ್ದ ನಂತರದಲ್ಲಿರುವ ಆಸ್ತಿಗಳು





ಕುಟುಂಬದೊಂದಿಗೆ ಹಂಚಿಕೊಂಡು ಅಲ್ಪ ಪ್ರಮಾಣದ ಆಸ್ತಿಗಳೊಂದಿಗೆ ಕೂಲಿ ವೃತ್ತಿಯನ್ನು ಆಶ್ರಯಿಸಿರುವವರು ೬% ಮತ್ತು ೬.೮% ರಷ್ಟಿದ್ದಾರೆ. ಪುನರ್ವಸತೀಕರಣದ ನಂತರ ದೊರೆತಿರುವ ಪರಿಹಾರವನ್ನು ಪಟ್ಟಣ ವ್ಯಾಪ್ತಿಯಲ್ಲಿ ಮನೆಯನ್ನು ಕ್ರಯಕ್ಕೆ ತೆಗೆದುಕೊಂಡು ಬ್ಯಾಂಕ್‌ಗಳಲ್ಲಿ ಠೇವಣಿಗಳನ್ನಿರಿಸಿಕೊಂಡಿರುವ ದೊಡ್ಡ ಪ್ರಮಾಣದ ರೈತರು ೧.೬% ರಷ್ಟಿದ್ದಾರೆ. ಮೂಲವಾಗಿ ಅವರ ಮಕ್ಕಳು ವಿವಿಧ ಪ್ರಕಾರದ ಹುದ್ದೆಗಳನ್ನು ಅಲಂಕರಿಸಿ ಬೆಂಗಳೂರು ಇನ್ನಿತರ ಪ್ರದೇಶಗಳಲ್ಲಿರುವವರಾಗಿದ್ದು, ಇದ್ದಂತಹ ಜಮೀನುಗಳನ್ನು ಉದ್ಯಾನವನಕ್ಕೆ ಬಿಟ್ಟುಕೊಟ್ಟಿದ್ದಾರೆ. ಒಕ್ಕಲೆದ್ದ ಮೇಲೆ ಪಡೆದಿರುವ ಪರಿಹಾರ ಆಧಾರವಾಗಿ ಸಣ್ಣ ಪ್ರಮಾಣದ ರೈತರಾಗಿಯೇ ಉಳಿದಿರುವವರು ೭.೬% ನ ೦.೧೦ ರಿಂದ ೩೯ ಗುಂಟ ಜಮೀನು ಮತ್ತು ಮನೆ ಹೊಂದಿರುವವರು, ೨.೮% ನ ೧ ಎಕರೆ ಜಮೀನ ಮತ್ತು ಮನೆ ಹೊಂದಿರುವವರು ಮತ್ತು ೧೦.೮% ನ ೨ ರಿಂದ ೪ ಎಕರೆ ಜಮೀನು ಮತ್ತು ಮನೆ ಹೊಂದಿದವರು.

೨೫೦ ಕುಟುಂಬಗಳ ಪೈಕಿ ೪೬% ಮಾಹಿತಿದಾರರು ಒಕ್ಕಲೇಳದೆ ಉದ್ಯಾನವನದಲ್ಲಿ ಉಳಿದಿದ್ದಾರೆ. ಇನ್ನು ಒಕ್ಕಲೆದ್ದು ಪುನರ್ವಸತಿ ಪಡೆದಿರುವ ೫೪% ಮಾಹಿತಿದಾರರಲ್ಲಿ ೨೧.೨% ಮಾಹಿತಿದಾರರು ಮೊದಲಿದ್ದ ಪರಿಸ್ಥಿತಿಗಳನ್ನೆ ಅಂದರೆ, ಜಮೀನು ಮತ್ತು ಮನೆಗಳನ್ನು ಹೊಂದಿದ್ದಾರೆ. ೧೪.೦೪% ಮಾಹಿತಿದಾರರು ವ್ಯವಹಾರದೊಂದಿಗೆ ಜಮೀನು ಮನೆಯನ್ನು ಹೊಂದಿದ್ದಾರೆ. ಕೂಲಿ ವೃತ್ತಿಯಲ್ಲಿ ಮೊದಲಿಗಿಂತಲೂ ಪ್ರಮಾಣ ಹೆಚ್ಚಿದ್ದು ಅದರಲ್ಲಿ ೧೨.೮% ರಷ್ಟು ಮಾಹಿತಿದಾರರಿದ್ದಾರೆ. ಹೈನುಗಾರಿಕೆಯ ವೃತ್ತಿಯನ್ನು ಜಮೀನು, ಮನೆ ಮತ್ತು ವ್ಯವಹಾರದೊಂದಿಗೆ ಆರಂಭಿಸಿರುವವರು ೪% ರಷ್ಟಿದ್ದಾರೆ. ಈ ಎಲ್ಲಾ ಪ್ರಕ್ರಿಯೆಯು ಅವರ ಆರ್ಥಿಕ ಚಟುವಟಿಕೆಯ ಉತ್ಪಾದನಾಂಗಗಳನ್ನು ಹಾಗೂ ಅವರ ಬೇಡಿಕೆ ಮತ್ತು ಪೂರೈಕೆಗಳನ್ನು ಆಧರಿಸಿದೆ.

ಮಾಹಿತಿದಾರರು ಕಾಡಿನಿಂದ ಒಕ್ಕಲೇಳಲು ಕಾರಣ

ಸ್ಥಳಾಂತರ ಪ್ರಕ್ರಿಯೆಯಲ್ಲಿ ಸಾಮಾಜಿಕ ಸಮುದಾಯಗಳು ತಮ್ಮ ಮೂಲ ಸ್ಥಳಗಳನ್ನು ತೊರೆದು ಒಕ್ಕಲೇಳುವಿಕೆಗೆ ಹಲವಾರು ಅಂಶಗಳು ಕಾರಣವಾಗುತ್ತವೆ. ಆ ಕಾರಣಗಳು ಹಲವಾರಿದ್ದರು, ಅದರ ಹಿಂದೆ ಅನೇಕ ಸಮಸ್ಯೆಗಳನ್ನು ಸವಾಲುಗಳಂತೆ ಸ್ವೀಕರಿಸಿ ತಡೆಯುವಿಕೆಗೆ ಪ್ರಯತ್ನಗಳನ್ನು ಕೂಡ ಮಾಡಿರುತ್ತಾರೆ. ಆದರೆ, ಕೆಲ ಸಂದರ್ಭಗಳು ಆಂತರಿಕವಾಗಿ ಹಾಗೂ ಬಾಹ್ಯವಾಗಿ ಪ್ರಚೋಧಿತವಾದಾಗ ಅನಿವಾರ್ಯವಾಗಿಯೇ ಪ್ರದೇಶಗಳನ್ನು ತೊರೆದು ಹೊರ ಬರಬೇಕಾದ ಸ್ಥಿತಿಗಳು ಎದುರಾಗಿರುತ್ತವೆ. ಸಾಮಾನ್ಯ ಸಂದರ್ಭಗಳಲ್ಲಿ ತಾತ್ಕಾಲಿಕವಾಗಿ ಇರುವ ಸ್ಥಳದಿಂದ ಬೇರೊಂದು ಸ್ಥಳಕ್ಕೆ ಸ್ಥಳಾಂತರಗೊಳ್ಳುವಿಕೆಯು ಅಷ್ಟೊಂದು ನೋವಿನ ಸಂಗತಿಯಾಗಿ ಪರಿಣಮಿಸಿರುವುದಿಲ್ಲ. ಆದರೆ, ಪೂರ್ವಜರಿಂದ ಸಂಸ್ಕೃತಿಯನ್ನು, ಸಾಮಾಜಿಕ ಸಂಘಟನೆಯನ್ನು ತೊರೆದು ಅನಿವಾರ್ಯ ಕಾರಣಗಳಿಗಾಗಿ ಸ್ಥಳಗಳನ್ನು ತೊರೆಯಬೇಕಾಗಾದಾಗ ಉಂಟಾಗುವ ಮಾನಸಿಕ ಯಾತನೆಯನ್ನು ಅಳೆಯಲಾಗುವುದಿಲ್ಲ. ಕರ್ನಾಟಕ ರಾಜ್ಯದ ಇತರೆ ಅರಣ್ಯ ಪ್ರದೇಶಗಳಲ್ಲಿ ಗತಿಸಿರುವ ಸ್ಥಳಾಂತರ ಪ್ರಕ್ರಿಯೆಗಿಂತ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿನ ಸ್ಥಳಾಂತರ ಪ್ರಕ್ರಿಯೆಯು ವಿಭಿನ್ನವಾಗಿಯೇ ಸತ್ಯವನ್ನು ಅಡಗಿಸಿಕೊಂಡಿದೆ. ಮೂಲಭೂತ ಸೌಲಭ್ಯಗಳು ಪ್ರತಿಯೊಬ್ಬ ಮಾನವನಿಗೆ ಅವಶ್ಯವಾದಂತದ್ದು. ಇಂತಹ ಅವಶ್ಯವಿರುವಂತಹ ಅಂಶಗಳು ಅಭಿವೃದ್ಧಿಗೆ ಪೂರಕವಾದವುಗಳು. ಯಾವ ಸಂದರ್ಭದಲ್ಲಿ ಈ ಮೂಲಭೂತ ಅಂಶಗಳು ಕೊರತೆಗೆ ಒಳಪಡುವುದೋ ಹಾಗೂ ಅವುಗಳ ಹಿನ್ನೆಲೆಯಲ್ಲಿ ಗತ ಕಾಲದಲ್ಲಿ ಸಂಭವಿಸಿದ ಘಟನೆಗಳು ಒತ್ತಡ ಪೂರಕವಾಗಿದ್ದಲ್ಲಿ ಸ್ಥಳಾಂತರವು ಅನಿವಾರ್ಯತೆ ಸನ್ನಿವೇಶವನ್ನು ಸೃಜಿಸಿಕೊಳ್ಳುತ್ತದೆ.


ಕೋಷ್ಟಕ೨೭ ಮಾಹಿತಿದಾರರು ಮೂಲ ನೆಲೆಗಳಿಂದ ಒಕ್ಕಲೇಳಲು ಕಾರಣವಾಗಿರುವ ಹಲವಾರು ಅಂಶಗಳನ್ನು ಕುರಿತು ವಿವರಣೆಯನ್ನು ಹೊಂದಿದೆ. ಮೂಲವಾಗಿ ಒಕ್ಕಲೇಳದೆ ಉದ್ಯಾನವನದಲ್ಲಿಯೇ ಉಳಿದವರು ೪೬% ರಷ್ಟಿದ್ದಾರೆ. ಸ್ವ ಇಚ್ಛೆ ಮತ್ತು ಮೂಲಭೂತ ಸೌಲಭ್ಯಗಳನ್ನು ಪಡೆಯುವ ಕಾರಣದಿಂದ ಒಕ್ಕಲೆದ್ದವರು ೩೮.೮% ರಷ್ಟಿದ್ದಾರೆ. ನೆರೆಹೊರೆಯವರು ಒಕ್ಕಲೇಳುವಿಕೆ ಕಾರಣದಿಂದಾಗಿ ಒಕ್ಕಲೆದ್ದವರು ೧೧.೬% ರಷ್ಟಿದ್ದಾರೆ. ಪುನರ್ವಸತೀಕರಣ ಪ್ಯಾಕೇಜ್ ಕಾರಣವಾಗಿ ಒಕ್ಕಲೆದ್ದವರು೨.೪% ರಷ್ಟಿದ್ದಾರೆ. ಅನಾರೋಗ್ಯ ಕಾರಣಗಳಿಗಾಗಿ ಒಕ್ಕಲೆದ್ದವರು ೧.೨% ರಷ್ಟಿದ್ದಾರೆ.

ಕೋಷ್ಟಕ ೨೭

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರು ಕಾಡಿನಿಂದ ಒಕ್ಕಲೇಳಲು ಕಾರಣ

ಕ್ರಸಂ	ಒಕ್ಕಲೇಳಲು ಕಾರಣ	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ		
1	ಸ್ವ ಇಚ್ಚೆ ಮತ್ತು ಮೂಲ ಸೌಲಭ್ಯಗಳಿಗಾಗಿ	೧	೩೯	೩೩	೨೪	೯೭	೩೮.೮
2	ನೆರೆಹೊರೆಯವರು ಒಕ್ಕಲೇಳುವಿಕೆ	೦	೧೦	೧೦	೯	೨೯	೧೧.೬
3	ಅನಾರೋಗ್ಯ	೦	೨	೦	೧	೨	೧.೨%
4	ಪುನರ್ವಸತೀಕರಣಪ್ಯಾಕೇಜ್	೦	೩	೩	೦	೬	೨.೪
6	ಒಕ್ಕಲೇಳದವರು	೧೨	೩೭	೫೩	೧೩	೧೧೫	೪೬
	ಒಟ್ಟು	೧೩	೯೧	೯೯	೪೭	೨೫೦	೧೦೦

ಗ್ರಾಫ್ ೧೬ ,ಒಕ್ಕಲೇಳಲು ಕಾರಣ



ಗ್ರಾಫ್ ೧೬ ಮಾಹಿತಿದಾರರು ಮೂಲ ನೆಲೆಯಾದ ರಾಷ್ಟ್ರೀಯ ಉದ್ಯಾನವನದಿಂದ ಒಕ್ಕಲೇಳಲು ಕಾರಣವಾದ ಅಂಶಗಳ ಕುರಿತ ವಿವರದ್ದಾಗಿದ್ದು, ಸ್ವ ಇಚ್ಚೆ ಮತ್ತು ಮೂಲ ಸೌಲಭ್ಯಗಳಿಗಾಗಿ (ಸ್ವ ನಿರ್ಧಾರಿತವಾಗಿ ಮತ್ತು ರಸ್ತೆ, ನೀರು, ಶಿಕ್ಷಣ, ಕಛೇರಿಗಳು, ಆಸ್ಪತ್ರೆ ಮುಂತಾದ ಸವಲತ್ತುಗಳು) ಒಕ್ಕಲೆದ್ದಂತಹ ೩೮.೮% ರಷ್ಟಿದ್ದಾರೆ. ಮೊದಲಿದ್ದ ನೆಲೆಯು ಅರಣ್ಯಗಳ ಭಾಗವಾಗಿದ್ದು, ಮೂಲ ಸೌಕರ್ಯಗಳನ್ನು ಪಡೆಯುವುದು ಕಷ್ಟಸಾಧ್ಯವಾಗಿತ್ತು. ಇದರೊಂದಿಗೆ ಮಕ್ಕಳ ಭವಿಷ್ಯವನ್ನು ರೂಪಿಸುವ ಉದ್ದೇಶದಿಂದ ಮೂಲ ನೆಲೆಗಳಿಂದ ಒಕ್ಕಲೇಳಬೇಕಾದ ಅನಿವಾರ್ಯತೆ ಇತ್ತು ಎಂದು ಮಾಹಿತಿದಾರರು ಸ್ಪಷ್ಟಪಡಿಸಿದ್ದಾರೆ.

ರಾಷ್ಟ್ರೀಯ ಉದ್ಯಾನವನದಲ್ಲಿ ಆಂತರಿಕವಾಗಿ ನೆಲೆಸಿದ್ದ ಕುಟುಂಬಗಳು ಒಂದೇ ಪ್ರದೇಶದಲ್ಲಿ ತಮಗೆ ಅನುಕೂಲವಿರುವಷ್ಟು ಪ್ರದೇಶಗಳನ್ನು ಸಾಗುವಳಿ ಮಾಡಿಕೊಂಡು ಜೀವಿಸುತ್ತಿದ್ದರು. ಮೂಲಭೂತ ಸೌಕರ್ಯಗಳನ್ನು ಅರಸಿ ಒಂದು ಕುಟುಂಬವು ಆ ಪ್ರದೇಶದಿಂದ ಹೊರ ಹೋದ ಮೇಲೆ ಅರಣ್ಯ ಇಲಾಖೆಯಿಂದ ಸಾಗುವಳಿ ಜಮೀನನ್ನು ವಶಕ್ಕೆ ಪಡೆದುಕೊಳ್ಳುವ ಮುಖಾಂತರ ಸಾಗುವಳಿ ಇಲ್ಲದಂತಾಗುತ್ತದೆ. ಈ ಪ್ರಮೇಯವಾಗಿ ಕಾಡು ಪ್ರಾಣಿಗಳು ನೇರವಾಗಿ ಆಹಾರಕ್ಕೋಸ್ಕರ ಅರಸಿ ಇರುವವರ ಭೂಹಿಡುವಳಿಗೆ ದಾಳಿ ಇಡುತ್ತವೆ. ಈ ಕಾರಣದಿಂದ ಒಂದೊಂದೇ ಕುಟುಂಬಗಳು ಒಕ್ಕಲೇಳುವಿಕೆಯಿಂದ ಆ ಸ್ಥಳದಲ್ಲಿ ಒಂದೇ ಕುಟುಂಬವು ನೆಲೆಸುವುದು ಕಷ್ಟವಾಗುತ್ತದೆ. ಆದ್ದರಿಂದ ಸ್ಥಳವನ್ನು ನಿರ್ಗಮಿಸಿ ಬೇರೆಡೆ ತಮ್ಮ ನೆಲೆಯನ್ನು ಕಂಡುಕೊಳ್ಳುವಿಕೆಗೆ ಅನಿವಾರ್ಯವೆಂದು ೧೧.೬% ರಷ್ಟು ನೆರೆಹೊರೆಯವರ ಒಕ್ಕಲೇಳುವಿಕೆ ಕಾರಣವಾಗಿದೆ ಎಂದಿದ್ದಾರೆ. ಅನಾರೋಗ್ಯ ಸಮಸ್ಯೆಗಳ ಕಾರಣಗಳಿಂದಾಗಿ ಒಕ್ಕಲೆದ್ದಿರುವವರ ಕುಟುಂಬಗಳು ೧.೨%ರಷ್ಟಿದ್ದಾರೆ. ಪುನರ್ವಸತೀಕರಣಪ್ಯಾಕೇಜ್‌ಗಳ ಸೌಲಭ್ಯಗಳಿಗಾಗಿ ಒಕ್ಕಲೆದ್ದ ಕುಟುಂಬಗಳು ೨.೪%ರಷ್ಟಿದ್ದಾರೆ. ಸರ್ಕಾರವು ನಕ್ಸಲ್ ಚಳುವಳಿಗಾರರು ಈ ಪ್ರಾಂತ್ಯಕ್ಕೆ ಕಾಲಿಟ್ಟ ನಂತರ ಆತುರಾತುರವಾಗಿ ಮೂರು ಬಾರಿ ವಿವಿಧ ಪ್ರಕಾರದ ಪ್ಯಾಕೇಜ್‌ಗಳನ್ನು ಘೋಷಿಸಿತು. ಈ ಪ್ರಕಾರದ ನಡತೆಯಿಂದ ಉದ್ಯಾನವನದ ಜನರು ಆತಂಕ್ಕೆ ಒಳಗಾಗಿದ್ದರು. ಮುಂದಿನ ದಿನ ಮಾನದಲ್ಲಿ ಯಾವ ರೀತಿಯ ಕಾನೂನುಗಳು ಈ ವ್ಯಾಪ್ತಿಯಲ್ಲಿ ಬರುತ್ತವೆಯೋ ಎಂಬ ಕಾರಣದಿಂದ ಒಕ್ಕಲೆದ್ದಿದ್ದೇವೆ ಎಂದು ತಿಳಿಸಿದ್ದಾರೆ.

ಸ್ಥಳಾಂತರವು ಅಭಿವೃದ್ಧಿ ಕಾರ್ಯಗಳ ಅನುಷ್ಠಾನದ ಪ್ರತೀಕವಾಗಿ ಏರ್ಪಡುವಂತದ್ದು. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಅನ್ಯ ಸ್ಥಳಗಳಿಗಳಲ್ಲಿ ನಡೆದ ಒಕ್ಕಲೇಳುವಿಕೆಗೆ ದೊರೆತಿರುವ ಪರಿಹಾರಕ್ಕಿಂತ ಭಿನ್ನವಾದ ಆಲೋಚನೆ ಮುಖಾಂತರ ಸರ್ಕಾರ ಪುನರ್ವಸತೀಕರಣ ಪ್ಯಾಕೇಜ್‌ನ್ನು ಘೋಷಿಸಲಾಗಿದೆ. ಅದರ ಅನ್ವಯ ಸ್ವತ್ತುಗಳ ನೈಜ ಮೌಲ್ಯಮಾಪನ ಹಾಗೂ ಅದರ ಆಧಾರಿತವಾಗಿ ನಿಧಿ ಸಂದಾಯ ಮಾಡುವುದು. ಎನ್.ಜಿ.ಓ ಮುಖಾಂತರವು ಪುನರ್ವಸತೀಕರಣ ಸೌಲಭ್ಯವನ್ನು ನೀಡಿದ್ದು ಇದರಲ್ಲಿ (ಲಂಪ್‌ಸಮ್) ಒಂದು ಹಣದ ಗಂಟು ಎಂಬ ಅಡಿಯಲ್ಲಿ ಪುನರ್ವಸತೀಕರಣ ಪ್ರಕ್ರಿಯೆಯನ್ನು ನಡೆಸಲಾಗಿದೆ. ಕೋಷ್ಟಕ೨೮ ಮಾಹಿತಿದಾರರಿಗೆ ಒಕ್ಕಲೇಳುವಿಕೆಯಿಂದ ದೊರೆತಿರುವ ಪರಿಹಾರದ ವಿವರವಾಗಿದೆ. ಅದರ ಅನ್ವಯ


ಕೋಷ್ಟಕ ೨೮

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರು ಒಕ್ಕಲೇಳುವಿಕೆಗೆ ದೊರೆತಿರುವ ಪರಿಹಾರ

ಕ್ರ.ಸಂ	ಪರಿಹಾರ (ರೂಗಳಲ್ಲಿ)	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ		
೧	೨ ಲಕ್ಷಕ್ಕಿಂತ ಕಡಿಮೆ	೦	೦	೨	೦	೨	೦.೮
೨	೨ ರಿಂದ ೬ ಲಕ್ಷ	೦	೬	೨	೯	೧೭	೬.೮
೩	೭ ರಿಂದ ೧೧ ಲಕ್ಷ	೧	೧೫	೭	೧೧	೩೪	೧೩.೬
೪	೧೨ ರಿಂದ ೧೮ ಲಕ್ಷ	೦	೧೦	೧೨	೮	೩೦	೧೨
೫	೧೮ ರಿಂದ ೨೫ ಲಕ್ಷ	೦	೬	೧೧	೩	೨೦	೮
೬	೨೫ ರಿಂದ ೫೦ ಲಕ್ಷ	೦	೧೪	೯	೧	೨೪	೯.೬
೭	೫೦ ರಿಂದ ೭೫ ಲಕ್ಷ	೦	೩	೧	೦	೪	೧.೬
೮	೭೫ ಲಕ್ಷ ದಿಂದ ೧ ಕೋಟಿ	೦	೦	೧	೧	೨	೦.೮
೯	೧ ಕೋಟಿಯಿಂದ ೨ ಕೋಟಿ	೦	೦	೧	೧	೨	೦.೮
೧೦	ಒಕ್ಕಲೇಳದವರು	೧೨	೩೭	೫೩	೧೩	೧೧೫	೪೬
	ಒಟ್ಟು	೧೩	೯೧	೯೯	೪೭	೨೫೦	೧೦೦

೭ ರಿಂದ ೧೧ ಲಕ್ಷ ಮೊತ್ತದ ಪರಿಹಾರವನ್ನು ಪಡೆದವರು ೧೩.೬% ನಿಂದ ಅಧಿಕ ಸಂಖ್ಯೆಯಲ್ಲಿದ್ದಾರೆ. ೧೨ ರಿಂದ ೧೮ಲಕ್ಷ ಪರಿಹಾರವನ್ನು ಪಡೆದವರು ೧೨% ರಷ್ಟಿದ್ದಾರೆ. ೨೫ ರಿಂದ ೫೦ ಲಕ್ಷ ಮೊತ್ತದ ಪರಿಹಾರವನ್ನು ಪಡೆದವರು ೯.೬% ರಷ್ಟಿದ್ದಾರೆ. ೧೮ ರಿಂದ ೨೫ ಲಕ್ಷ ಮೊತ್ತದ ಪರಿಹಾರವನ್ನು ಪಡೆದವರು ೮% ರಷ್ಟಿದ್ದಾರೆ. ೨ ರಿಂದ ೬ ಲಕ್ಷ ಮೊತ್ತದ ಪರಿಹಾರವನ್ನು ಪಡೆದವರು ೬.೮% ರಷ್ಟಿದ್ದಾರೆ. ೫೦ ರಿಂದ ೭೫ ಲಕ್ಷ ಪಡೆದವರು ೧.೬% ರಷ್ಟಿದ್ದಾರೆ. ಇನ್ನುಳಿದಂತೆ ೨ ಲಕ್ಷಕ್ಕಿಂತ ಕಡಿಮೆ ಮೊತ್ತದ ಪರಿಹಾರ ಪಡೆದವರು ೨%, ೭೫ ಲಕ್ಷದಿಂದ ೧ ಕೋಟಿ ಮೊತ್ತದ ಪರಿಹಾರ ಪಡೆದವರು ೦.೮% ಮತ್ತು ೧ ಕೋಟಿಯಿಂದ ೨ಕೋಟಿ ಮೊತ್ತದ ಹಣ ಪಡೆದವರು ೦.೮% ರಷ್ಟಿದ್ದಾರೆ.

ಗ್ರಾಫ್ ೧೭, ಒಕ್ಕಲೇಳುವಿಕೆಗೆ ದೊರೆತಿರುವ ಪರಿಹಾರದ



ಗ್ರಾಫ್ ೧೭, ಒಕ್ಕಲೆದ್ದ ಸಮುದಾಯಗಳು ಪಡೆದಿರುವ ಪರಿಹಾರ ಮೊತ್ತದ ಅನುಸಾರವಾಗಿ ಚದುರುವಿಕೆಯನ್ನು ಶೇಕಡಾವಾರು ಪ್ರಮಾಣದಲ್ಲಿ ಚಿತ್ರದ ಮುಖಾಂತರ ಪ್ರಸ್ತಾಪಿಸಿದೆ. ಅದರ ಅನ್ವಯ ೨ ಲಕ್ಷಕ್ಕಿಂತ ಕಡಿಮೆ ಮೊತ್ತದ ಪರಿಹಾರವನ್ನು ಪಡೆದವರು, ೭೫ ಲಕ್ಷದಿಂದ ೧ ಕೋಟಿ ಹಾಗೂ ೧ ಕೋಟಿಯಿಂದ ೨ ಕೋಟಿ ಪರಿಹಾರ ಮೊತ್ತ ಪಡೆದವರು ತಲಾ (೦.೮%) ೧% ಅಂಕಿ ಅಂಶದ ಸ್ಥಾನಗಳಲ್ಲಿ ಗುರುತಿಸಲಾಗಿದೆ. ಅಂದರೆ, ಒಟ್ಟಾರೆಯ ಪುನರ್ವಸತೀಕರಣ ಪರಿಹಾರದಡಿ ಅತಿ ಕಡಿಮೆ ಪ್ರಮಾಣದವರೆಂದು ನಕಾಶೆ ತೋರಿಸುತ್ತಿದೆ. ೭ ರಿಂದ ೧೧ ಲಕ್ಷ ಪರಿಹಾರ ಮೊತ್ತವನ್ನು ಪಡೆದವರು ಒಕ್ಕಲೆದ್ದವರ ಸಮೂಹದಲ್ಲಿ ಅಧಿಕ ಪ್ರಮಾಣದವರಾಗಿದ್ದಾರೆ. ೧೨ ರಿಂದ ೧೮ ಲಕ್ಷ ಮೊತ್ತದ ೧೨%, ೨೫ ರಿಂದ ೫೦ ಲಕ್ಷದ ಮೊತ್ತದ ೯.೬%, ೧೨ ರಿಂದ ೧೮ ಲಕ್ಷ ಮೊತ್ತದ ೮%, ೨ ರಿಂದ ೬ ಲಕ್ಷ ಮೊತ್ತದ ೬.೮% ಮತ್ತು ೫೦ರಿಂದ ೭೫ ಲಕ್ಷ ಮೊತ್ತದ ೧.೬% ರಷ್ಟು ಮಾಹಿತಿದಾರರು ಅವರ ಜಮೀನುಗಳಲ್ಲಿದ್ದ



ಕೃಷಿ, ತೋಟಗಾರಿಕ, ಅರಣ್ಯ ಮತ್ತು ಭೌತಿಕ ಸ್ವತ್ತುಗಳು ಹೊಂದಿರುವ ಪ್ರಮಾಣವನ್ನು ಆಧರಿಸಿ ನಿಶ್ಚಯಿಸಿ ದೊರಕಿರುವಂತಹ ಪರಿಹಾರವಾಗಿದೆ. ಅಧಿಕ ಅಂಕೆಯ ಮನರ್ವಸತೀಕರಣ ಪರಿಹಾರ ಹೆಚ್ಚಿದಂತೆ ಪಡೆದವರ ಪ್ರಮಾಣ ಅವರೋಹಣ ಫಥವನ್ನು ಈ ನಕಾಶೆ ಹೊಂದುತ್ತಿದೆ. ೨ ಲಕ್ಷಕ್ಕಿಂತ ಕಡಿಮೆ ಹಂತದಿಂದ ೧೮ ಲಕ್ಷದ ವರಗಿನ ಪಂಥದಲ್ಲಿ ಎನ್.ಜಿ.ಓ ಮುಖಾಂತರ ಪರಿಹಾರವನ್ನು ಪಡೆದವರು ಇದ್ದಾರೆ.

ಒಕ್ಕಲೇಳುವಿಕೆಯಿಂದಾಗಿರುವ ಸಾಮಾಜಿಕ ಪರಿಣಾಮಗಳು

ಮಾನವ ಸಂಘಜೀವಿ ಆದ್ದರಿಂದಲೇ ಅವನು ತನ್ನ ಆಶೋತ್ತರಗಳನ್ನು ಪೂರೈಸಿಕೊಳ್ಳಲು ಸಮೂಹದೊಂದಿಗೆ ಜೀವಿಸುವನು. ಅನೇಕ ವ್ಯಕ್ತಿಗಳಲ್ಲಿ ತಮ್ಮದೇ ಆದ ಭಾವನೆಗಳಿದ್ದು, ಎಲ್ಲರ ಆಕಾಂಕ್ಷೆಗಳು ಒಂದೇ ಆಗಿರುವ ಸಮೂಹವನ್ನು ಸಮಾಜ ಎನ್ನುತ್ತೇವೆ. ಈ ಮೂಲಕವೇ ಸಮಾಜವು ಸಾಮಾಜಿಕ ಸಂಬಂಧಗಳ ವ್ಯವಸ್ಥೆಗಳಿಂದ ಅಸ್ತಿತ್ವವನ್ನು ಪಡೆದುಕೊಂಡಿದೆ. ಸಾಮಾಜಿಕ ಸಂಬಂಧಗಳು ಜೀವಿಗಳ ನಡುವಿನ ಪರಸ್ಪರ ಅರಿವನ್ನು ಆಧರಿಸಿದ ಸಂಬಂಧವಾಗಿರುವುದರಿಂದ ಮಾನವನ ಒಟ್ಟಾರೆಯ ಜೀವನಕ್ಕೆ ಸಂಬಂಧಿಸಿರುತ್ತದೆ. ಇದು ಮಾನವನ ಆರ್ಥಿಕ, ರಾಜಕೀಯ, ಶೈಕ್ಷಣಿಕ ಮುಂತಾದ ಎಲ್ಲಾ ಕ್ಷೇತ್ರಗಳಿಗೂ ಸಂಬಂಧಿಸಿದ್ದಾಗಿದೆ. ಸಮಾಜವು ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಹೊಂದಿರುವುದರಿಂದ ಜನರು ಜೊತೆಗೂಡಿ ಜೀವಿಸಿದಾಗ ಮಾತ್ರ ಸಮಾಜವಾಗುತ್ತದೆ. ಜನರು ಜೊತೆಗೂಡಿ ಜೀವಿಸಲು ಕಾರಣ ಅವರ ದೈಹಿಕ ಮತ್ತು ಮಾನಸಿಕವಾದ ಹೋಲಿಕೆಗಳು.


ಅಭಿವೃದ್ಧಿಯ ಪ್ರಕಲ್ಪಗಳ ಅನುಷ್ಠಾನದಿಂದ ಮಾನವನ ಸಂಘ ಜೀವನವು ಸ್ಥಳಾಂತರ ಪ್ರಕ್ರಿಯೆಗೆ ಒಳಪಡುತ್ತದೆ. ಈ ಪ್ರಕ್ರಿಯೆಯ ಮುಖಾಂತರ ಒಕ್ಕಲೇಳುವಿಕೆಯ ಅನಿವಾರ್ಯವಾದ ಸಂದರ್ಭವನ್ನು ಎದುರಿಸಲೇಬೇಕಾಗುತ್ತದೆ. ಒಕ್ಕಲೇಳುವಿಕೆಯ ಪ್ರಸಂಗಗಳು ಸಾಮಾಜಿಕ ಸಂಘಜೀವಿಯಾಗಿ ಸಮೂಹದಲ್ಲಿ ವಾಸವಿದ್ದವರ ಸಾಮಾಜಿಕ ಜೀವನದಲ್ಲಿ ವ್ಯತ್ಯಾಸಗಳನ್ನು ಹೊಂದುವಂತೆ ಮಾಡುತ್ತದೆ. ಈ ನಿಟ್ಟಿನಲ್ಲಿ ಕೋಷ್ಟಕ೨೯ ರಾಷ್ಟ್ರೀಯ ಉದ್ಯಾನವನದಿಂದ ಒಕ್ಕಲೆದ್ದವರು ಸಾಮಾಜಿಕವಾಗಿ ಕಂಡಿರುವ ವ್ಯತ್ಯಾಸಗಳ ವಿವರಗಳನ್ನು ಒಳಗೊಂಡಿದೆ. ಅದರ ಅನ್ವಯ ಒಕ್ಕಲೇಳದೆ ಉದ್ಯಾನವನ ಭಾಗದಲ್ಲಿ ಉಳಿದವರು ೪೬% ರಷ್ಟಿದ್ದಾರೆ. ಸಮೂಹ/ಸಂಘಟಿತ ಸಮೂಹ ಸಂಬಂಧಿಗಳಿಂದ ದೂರವಾಗಿ ವಾಸ ಮಾಡುತ್ತಿರುವವರ ಸಮೂಹದಲ್ಲಿ ೨೨% ರಷ್ಟಿದ್ದಾರೆ. ಕೌಟುಂಬಿಕ ವಿಘಟನೆಯಾಗಿವೆ ಎಂಬುವ ಸಮೂಹದಲ್ಲಿ ೧೧.೬% ರಷ್ಟಿದ್ದಾರೆ. ಹಿಂದೆ ವಾಸವಿದ್ದ ಸಮುದಾಯದೊಂದಿಗೆ ಒಂದೆಡೆ ಸೇರಿದ್ದೇವೆ ಎಂಬ ಸಮೂಹದಲ್ಲಿ ೭.೨% ರಷ್ಟಿದ್ದಾರೆ. ಇತರೆ ಸಮುದಾಯದೊಂದಿಗೆ ಹೊಂದಾಣಿಕೆಯ ಜೀವನ ಆರಂಭವಾಗಿದೆ ಎಂಬುವ ಸಮೂಹದಲ್ಲಿ ೭.೨% ರಷ್ಟಿದ್ದಾರೆ. ಒಕ್ಕಲೇಳಿದ ನಂತರ ಏಕಾಂಗಿತನ ಎದುರಾಗಿದೆ ಎಂಬುವ ಸಮೂಹದಲ್ಲಿ ೬% ರಷ್ಟಿದ್ದಾರೆ.

ಕೋಷ್ಟಕ ೨೯

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರು ಒಕ್ಕಲೇಳುವಿಕೆಯಿಂದಾಗಿರುವ ಸಾಮಾಜಿಕ ಪರಿಣಾಮಗಳು

ಕ್ರಸಂ	ಸಾಮಾಜಿಕ ವ್ಯತ್ಯಾಸ	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ		
1	ಹಿಂದೆ ವಾಸವಿದ್ದ ಸಮುದಾಯದೊಂದಿಗೆ ಒಂದೆಡೆ ಸೇರಿದ್ದೇವೆ	೦	೯	೯	೦	೧೮	೭.೨
2	ಸಮೂಹ/ಸಂಘಟಿತ ಸಮೂಹ ಸಂಬಂಧಿಗಳಿಂದ ದೂರದ ವಾಸ	೦	೨೧	೧೭	೧೭	೫೫	೨೨
3	ಇತರೆ ಸಮುದಾಯದೊಂದಿಗೆ ಹೊಂದಾಣಿಕೆ ಜೀವನ ಆರಂಭ	೦	೯	೭	೨	೧೮	೭.೨
4	ಏಕಾಂಗಿತನ	೧	೩	೫	೬	೧೫	೬
5	ಕೌಟುಂಬಿಕ ವಿಘಟನೆ	೦	೧೨	೮	೯	೨೯	೧೧.೬
7	ಒಕ್ಕಲೇಳದವರು	೧೨	೩೭	೫೩	೧೩	೧೧೫	೪೬
	ಒಟ್ಟು	೧೩	೯೧	೯೯	೪೭	೨೫೦	೧೦೦

ಗ್ರಾಫ್ ೧೮ .ಒಕ್ಕಲೇಳುವಿಕೆಯಿಂದಾಗಿರುವ ಸಾಮಾಜಿಕ ಪರಿಣಾಮಗಳು



ಗ್ರಾಫ್ ೧೮ರ ಅನ್ವಯ ಉದ್ಯಾನವನದಿಂದ ಒಕ್ಕಲೆದ್ದವರು ಅನುಭವಿಸುತ್ತಿರುವ ಸಾಮಾಜಿಕ ವ್ಯತ್ಯಾಸದಲ್ಲಿ ಸಮೂಹ/ಸಂಘಟಿತ ಸಮೂಹ ಸಂಬಂಧಿಗಳಿಂದ ದೂರದ ವಾಸವನ್ನು ಮಾಡಲಾಗುತ್ತಿದೆ ಎಂದು ೨೨%ರಷ್ಟು ಮಾಹಿತಿದಾರರು ವಿವರಿಸಿದ್ದಾರೆ. ಈ ಹಿಂದೆ ಉದ್ಯಾನವನ ಭಾಗದಲ್ಲಿ ವಾಸವಿದ್ದಾಗ ನಮ್ಮದೇ ಆದ ಪಂಗಡಗಳೊಂದಿಗೆ ಒಗ್ಗಟ್ಟಿನಿಂದ ವಾಸ ಮಾಡುತ್ತಿದ್ದೆವು.

ಕಷ್ಟ ಮತ್ತು ಸುಖಗಳು ಬಂದಾಗ ಅವುಗಳನ್ನು ಹಂಚಿಕೊಂಡು ಬಾಳುತ್ತಿದ್ದೆವು. ಒಬ್ಬರಿಗೊಬ್ಬರು ಆಸರೆಯಾಗಿ ಜೀವನ ಮಾಡಿಕೊಳ್ಳುವಿಕೆಗೆ ಸಹಕಾರಿಯಾಗಿದ್ದೆವು. ಆದರೆ, ಒಕ್ಕಲೇಳುವಿಕೆಯು ಅನಿವಾರ್ಯವಾದ ನಂತರ ಸ್ವಇಚ್ಚೆ ಮೇರೆಗೆ ಮೂಲ ಸ್ಥಳದಿಂದ ಹೊರಬಂದ ನಾವು ಇಂದು ಮೂಲ ಸಮೂಹದ ಸಂಬಂಧಿಗಳೊಂದಿಗೆ ವಾಸಿಸುತ್ತಿಲ್ಲ [೬].

ಈ ಹಿಂದೆ ವಾಸವಿದ್ದ ಸಮುದಾಯದೊಂದಿಗೆ ಒಂದೆಡೆ ಸೇರಿದ್ದೇವೆ ಎಂದು ೭.೨% ಮಾಹಿತಿದಾರರಿದ್ದಾರೆ. ಮೂಲ ನೆಲೆಯಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ವಾಸವಾಗಿದ್ದ ನಮ್ಮ ರಕ್ತ ಸಂಬಂಧಿಗಳನ್ನು ಒಕ್ಕಲೇಳುವ ಮುಖಾಂತರ ಒಂದೇ ಸ್ಥಳವನ್ನು ಆಯ್ಕೆ ಮಾಡಿಕೊಂಡು ಒಕ್ಕಲೆದ್ದ ಇಲ್ಲಿ ಬಂದು ಸಮೂಹವಾಗಿ ನೆಲೆಸಿದ್ದೇವೆ. ಮೊದಲಿಗಿಂತಲೂ ನಮ್ಮ ಸಂಬಂಧಿಗಳು ಹತ್ತಿರವಿದ್ದಾರೆ ಎಂಬ ಭಾವನೆಯಿದೆ. ಸಾಮಾಜಿಕವಾಗಿ ನಾವು ಒಂದೆಡೆ ಸೇರುವ ಆಲೋಚನೆ ಈ ಮೂಲಕವಾಗಿ ಬಂದೊದಗಿದೆ [೮]. ಒಕ್ಕಲೆದ್ದು ಈ ಪ್ರದೇಶಗಳಲ್ಲಿ ಭೂಹಿಡುವಳಿ ಮತ್ತು ಮನೆ ಕ್ರಯಕ್ಕೆ ತೆಗೆದುಕೊಂಡ ಮೇಲೆ ಮೊದಲಿದ್ದ ಜೀವನವೇ ಚೆನ್ನಾಗಿದ್ದಿತು. ನಮ್ಮವರ ನಡುವೆ ಅನ್ಯೋನ್ಯತೆಯಿಂದ ಬದುಕಿದ ನಾವು ಕಷ್ಟಗಳನ್ನು ಎಂದಿಗೂ ಕಂಡಿರಲಿಲ್ಲ. ಆದರೆ, ಒಕ್ಕಲೆದ್ದ ಈ ಪ್ರದೇಶಕ್ಕೆ ವರ್ಗವಾದ ಮೇಲೆ ಅನ್ಯ ಸಮಾಜದೊಂದಿಗೆ ಹೊಂದಿಕೊಳ್ಳಲು ಇನ್ನು ಕಾಲವು ಬೇಕಾಗಿದೆ [೯]. ಈ ಸಮೂಹದಲ್ಲಿ ಒಟ್ಟು ೭.೨% ಮಾಹಿತಿದಾರರಿದ್ದಾರೆ. ಪುನರ್ವಸತೀಕರಣ



ಹೊಂದಿದ್ದಕ್ಕಾಗಿ ಮೂಲ ಭೂಹಿಡುವಳಿಗಳಿಂದ ದೊರೆತ ಮೌಲ್ಯವನ್ನು ಒಟ್ಟಿನ ಕುಟುಂಬದಲ್ಲಿ ಹಂಚಿಕೊಂಡಿದ್ದೇವೆ. ತದನಂತರ ಕುಟುಂಬದಿಂದ ಬೇರ್ಪಟ್ಟು ಬೇರೆಡೆ ವಾಸವನ್ನು ಮಾಡುತ್ತಿದ್ದೇವೆ[೧೦]. ಎಂದು ೧೧.೬% ರಷ್ಟು ಮಾಹಿತಿದಾರರಿದ್ದಾರೆ. ಇನ್ನುಳಿದಂತೆ ೬% ಮಾಹಿತಿದಾರರು ಏಕಾಂಗಿಯಾಗಿದ್ದೇವೆ ಎಂದು ತಿಳಿಸಿದ್ದಾರೆ. ನಮ್ಮ ಸಾಮಾಜಿಕ ಸಂಘಟನೆಯಿಂದ ಬೇರ್ಪಟ್ಟ ಮೇಲೆ ನಾವು ಏಕಾಂಗಿಯಾಗಿ ಬದುಕು ನಡೆಸುವಂತಾಗಿದೆ.

ಸಾಂಸ್ಕೃತಿಕ ಪರಿಣಾಮಗಳು

ಮಾನವನು ಹುಟ್ಟಿನಿಂದ ಒಂದು ಜೈವಿಕ ಪದಾರ್ಥವಾಗಿರುತ್ತಾನೆ. ಆದರೆ, ಸಾಮಾಜಿಕ ಎನ್ನಬಹುದಾದ ಅವನ ಅನೇಕ ವರ್ತನೆಗಳು ಕಲಿಕೆಯಿಂದ ಮಾತ್ರ ಬರುತ್ತವೆ. ಈ ಕಲಿಕೆಯು ಆಗಲೇ ಸಾಮಾಜೀಕರಣಗೊಂಡಿರುವ ಜೀವಿಗಳ ಸಂಪರ್ಕದಿಂದ ಸಾಧ್ಯವಾಗುತ್ತದೆ. ಮಾನವನ ಆ ಬಗೆಯ ಪ್ರತಿಯೊಂದು ಗಳಿಕೆಯೂ ಸಂಸ್ಕೃತಿ ಎನಿಸಿಕೊಳ್ಳುತ್ತದೆ. ಸಂಸ್ಕೃತಿಯು ಮಾನವನ ಜೀವನದ ಮುಖ್ಯ ಗುಣಗಳನ್ನು ಎತ್ತಿ ತೋರಿಸುತ್ತದೆ. ಸಂಸ್ಕೃತಿಯು ಸಂಸ್ಕಾರದಿಂದ ಬಂದಿದೆ. ಸಂಸ್ಕಾರದ ಅರ್ಥ ಅಂದಗೊಳಿಸುವುದು, ಸುಧಾರಿಸುವುದು, ಉತ್ತಮಪಡಿಸುವುದು ಎಂದರ್ಥ ಬರುತ್ತದೆ. ಸಾಮಾನ್ಯವಾಗಿ ಆದರ್ಶಗಳಿಂದ ಮಾನವ ಜೀವನವು ಅಂದವಾಗಿಸಿಕೊಳ್ಳುವ, ಉತ್ತಮಪಡಿಸಿಕೊಳ್ಳುವ ಮತ್ತು ಮೌಲ್ಯಗಳನ್ನಾಧರಿಸಿಕೊಳ್ಳುವಂತೆ ಮಾಡುವ ವಿಧಾನವನ್ನು ಸಂಸ್ಕೃತಿ ಎನ್ನುತ್ತೇವೆ. ಸಂಸ್ಕೃತಿಯು ಮಾನವ ಜೀವನದ ಪ್ರತೀಕವಾಗಿದೆ. ಅವನ ಸಮಸ್ತ ಸಾಧನೆಗಳನ್ನು ಸಂಪೂರ್ಣ ಸಾಮಾಜಿಕ ಬಳುವಳಿಗಳನ್ನು ಪ್ರತಿಬಿಂಬಿಸುತ್ತದೆ. ಅದು ನಿರ್ದಿಷ್ಟ ಸಮಾಜದ ಜನರ ವರ್ತನೆಯನ್ನು ಸೂಚಿಸುತ್ತದೆ. ಒಂದು ಸಮಾಜದ ಜನರ ವರ್ತನೆ ಮತ್ತೊಂದು ಸಮಾಜದಿಂದ ಬೇರೆಯಾಗಿರಬಹುದು. ಆಂತೆಯೇ ವಿಭಿನ್ನವಾದ ಸಂಸ್ಕೃತಿಗಳನ್ನು ಜಗತ್ತಿನಲ್ಲಿ ಕಾಣಬಹುದಾಗಿದೆ. ಮಾನವ ಜನಾಂಗದ ವಿಶೇಷತೆ ಮತ್ತು ಮಹತ್ವ ಅದಕ್ಕಿರುವ ಸಂಸ್ಕೃತಿಯಲ್ಲಿ ಅಡಗಿದೆ. ಜನತೆಯು ತನ್ನ ಸಾಮಾಜಿಕ ಅನುಭವದ ಆಧಾರದ ಮೇಲೆ ನಿರ್ಮಿಸಿಕೊಂಡಿರುವ ಕಲಿತ ಅಂಶಗಳ ವ್ಯವಸ್ಥೆಯೇ ಸಂಸ್ಕೃತಿ ಎನಿಸಿಕೊಳ್ಳುತ್ತವೆ [೧೧].


ಕೋಷ್ಟಕ೩೦ ಒಕ್ಕಲೇಳುವಿಕೆಯಿಂದ ಉಂಟಾಗಿರುವ ಸಾಂಸ್ಕೃತಿಯ ವ್ಯತ್ಯಾಸದ ವಿವರದ್ದಾಗಿದೆ. ಅದರ ಅನ್ವಯ ಉದ್ಯಾನವನದ ಭಾಗದಲ್ಲಿಯೇ ನೆಲೆಸಿ ಒಕ್ಕಲೇಳದ ೪೬% ಮಾಹಿತಿದಾರರನ್ನು ಹೊರತು ಪಡಿಸಿದರೆ, ಸಾಂಸ್ಕೃತಿಕವಾಗಿ ನಾವು ಕಾಡುಗಳಿಂದ ದೂರವಾಗಿದ್ದೇವೆ ಎನ್ನುವ ಸಮೂಹದಲ್ಲಿ ೧೬.೮% ರಷ್ಟಿದ್ದಾರೆ. ಸಾಂಸ್ಕೃತಿಕವಾಗಿ ಈ ಹಿಂದೆ ಅರಣ್ಯ ಪ್ರದೇಶಗಳಲ್ಲಿ ಹೊಂದಿದ್ದ ದೈವಿ ಪವಿತ್ರಸ್ಥಾನಗಳು ಒಕ್ಕಲೆದ್ದ ಮೇಲೆ ಇಲ್ಲದಂತಗಿವೆ ಎನ್ನುವ ಸಮೂಹದಲ್ಲಿ ೧೦.೮% ರಷ್ಟಿದ್ದಾರೆ. ಒಕ್ಕಲೆದ್ದ ಮೇಲೆ ಪೂಜ್ಯನೀಯ ದೇವರುಗಳನ್ನು ನಮ್ಮಲ್ಲಿಯೇ ಸ್ಥಾಪಿಸಿಕೊಳ್ಳಲಾಗಿದೆ ಎನ್ನುವ ಸಮೂಹದಲ್ಲಿ ಮಾಹಿತಿದಾರರು ೧೦% ರಷ್ಟಿದ್ದಾರೆ. ಸಂಘಟಿತ ಆಚರಣೆಗಳು ಇಲ್ಲವಾಗಿವೆ ಎನ್ನುವ ಸಮೂಹದಲ್ಲಿ ಮಾಹಿತಿದಾರರು ೯.೨% ರಷ್ಟಿದ್ದಾರೆ ಮತ್ತು ಆಚರಣೆಗಳು ಭಿನ್ನವಾಗುತ್ತಿವೆ ಎನ್ನುವ ಸಮೂಹದಲ್ಲಿ ೭.೨% ರಷ್ಟಿದ್ದಾರೆ.

ಕೋಷ್ಟಕ ೩೦

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರು ಒಕ್ಕಲೇಳುವಿಕೆಯಿಂದಾಗಿರುವ ಸಾಂಸ್ಕೃತಿಕ ಪರಿಣಾಮಗಳು

ಕ್ರ.ಸಂ	ಸಾಂಸ್ಕೃತಿಕ ವ್ಯತ್ಯಾಸ	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿ ನಾಯ್ಕ	ಮಲೆಕುಡಿಯ	ಗೌಡಲು	ಇತರೆ		
೧	ಪೂಜ್ಯನೀಯ ದೇವರುಗಳನ್ನು ನಮ್ಮಲ್ಲಿಯೇ ಸ್ಥಾಪಿಸಲಾಗಿದೆ	೦	೧೨	೯	೪	೨೫	೧೦
೨	ಆಚರಣೆಗಳು ಭಿನ್ನವಾಗುತ್ತಿವೆ	೦	೮	೭	೩	೧೮	೭.೨
೩	ಸಮೂಹ/ಸಂಘಟಿತ ಆಚರಣೆಗಳು ಇಲ್ಲದಾಗಿವೆ	೦	೮	೬	೯	೨೩	೯.೨
೪	ಕಾಡಿನ ಸಂಪರ್ಕ ದೂರವಾಗಿದೆ	೧	೧೭	೧೫	೯	೪೨	೧೬.೮
೫	ದೈವಿ ಪವಿತ್ರ ಸ್ಥಾನಗಳು ಇಲ್ಲವಾಗುತ್ತಿವೆ	೦	೯	೯	೯	೨೭	೧೦.೮
೬	ಒಕ್ಕಲೇಳದವರು	೧೨	೩೭	೫೩	೧೩	೧೧೫	೪೬
ಒಟ್ಟು		೧೩	೯೧	೯೯	೪೭	೨೫೦	೧೦೦

ಗ್ರಾಫ್ ೧೯ , ಒಕ್ಕಲೇಳುವಿಕೆಯಿಂದಾಗಿರುವ ಸಾಂಸ್ಕೃತಿಕ ಪರಿಣಾಮಗಳು



ಗ್ರಾಫ್ ೧೯ ರ ಪೈ ಚಾರ್ಟ್ ಅನ್ವಯ ಮೂಲ ಸ್ಥಳದಲ್ಲಿ ಒಕ್ಕಲೇಳದೆ ಉಳಿದವರು ೪೬% ರಷ್ಟಿದ್ದಾರೆ. ಅರಣ್ಯ ಸಂಪರ್ಕಗಳು ದೂರವಾಗಿವೆ ಎಂದು (೧೬.೮%) ೧೭% ಮಾಹಿತಿದಾರರು, ಉದ್ಯಾನವನದ ಒಳ ಭಾಗದಲ್ಲಿದ್ದಾಗ ಹಬ್ಬ ಮತ್ತು ಶುಭ ಕಾರ್ಯಗಳಿಗೆ ಕಾಡಿನಿಂದ ದೊರೆಯುತ್ತಿದ್ದ ಔಷಧಿಯುಕ್ತವಾದ ಸಸ್ಯಗಳನ್ನು ಬಳಸಿಕೊಂಡು ಆಚರಣೆಯನ್ನು ಮಾಡುತ್ತಿದ್ದೆವು. ಪೂರ್ವಜರು ಬಿಟ್ಟು ಹೋದ ಅರಣ್ಯ ದೈವಾಚರಣೆಗಳನ್ನು ಅಚರಿಸಿಕೊಳ್ಳುತ್ತಾ ಪ್ರಕೃತಿ ಆರಾಧಕರಾಗಿದ್ದೆವು. ಆದರೆ ಇಂದು ಒಕ್ಕಲೆದ್ದ ನಂತರ ಅವೆಲ್ಲ ದೂರವಾಗಿ ಕಾಡಿನ ಸಂಪರ್ಕವೇ ಇಲ್ಲವಾಗಿದೆ [೧೨]. ಅರಣ್ಯ ಮೂಲಗಳಲ್ಲಿ ದೇವರ ಮತ್ತು ದೈವ ಆಚರಣೆಯ ಮೂಲ ಸಂಸ್ಕೃತಿಯನ್ನು ಹೊಂದಿಕೊಂಡು ಸ್ಥಾಪಿಸಿಕೊಂಡಿದ್ದ ದೈವೀ ಆವಾಸ್ಥಾನಗಳು ಒಕ್ಕಲೇಳುವಿಕೆಯಿಂದ ತೊರೆದಂತಾಗಿದೆ. ಈ ಪ್ರಕ್ರಿಯೆಯ ಮುಖಾಂತರ ದೇವರುಗಳನ್ನು ಆರಾಧಿಸುವ, ಪೂಜೆಗೈಯ್ಯುವ ಎಲ್ಲಾ ಪ್ರಕ್ರಿಯೆಗಳು ಮರೀಚಿಕೆಯಾಗಿವೆ ಎಂದು (೧೦.೮%)೧೧% ರಷ್ಟು ಮಾಹಿತಿದಾರರಿದ್ದಾರೆ. ಅರಣ್ಯ ಮೂಲದಲ್ಲಿ ನಮ್ಮ ಸಂಸ್ಕೃತಿ ಆಚರಣೆಗಳನ್ನು ಉಳಿಸಿಕೊಳ್ಳಲು ಹಾಗೂ ಗಡಿ ದೈವಗಳ ಸ್ಥಾಪನೆ ಮುಖಾಂತರ ನಮ್ಮ ಸೀಮೆಗಳನ್ನು ಕಾಯ್ದುಕೊಂಡಿದ್ದ ಎಲ್ಲಾ ದೇವರು ಮತ್ತು ದೈವಗಳನ್ನು ಸ್ಥಳಾಂತರಗೊಂಡ ಸ್ಥಳದಲ್ಲಿಯೆ ಸ್ಥಾಪಿಸಿಕೊಂಡಿದ್ದೇವೆ ಎಂದು ೧೦% ಮಾಹಿತಿದಾರರು ಹೇಳಿಕೆ ನೀಡಿದ್ದಾರೆ[೧೩]. ಸಾಮಾಜಿಕವಾಗಿ ಸಂಘಟಿತವಾಗಿ ಅರಣ್ಯ ಮೂಲದಲ್ಲಿ ಅರಣ್ಯಗಳಿಂದ ತರುತ್ತಿದ್ದ ಆಹಾರಗಳನ್ನು ಹಬ್ಬ ಹರಿದಿನಗಳಲ್ಲಿ ಹಂಚಿಕೊಂಡು ಭಕ್ಷಿಸುತ್ತಿದ್ದೆವು. ಒಕ್ಕಲೆದ್ದ ನಂತರ ಅನ್ಯ ಸ್ಥಳಗಳಲ್ಲಿ ನೆಲೆಯೂರಿದ ಮೇಲೆ ಎಲ್ಲಾ ಆಚರಣೆಗಳು ಭಿನ್ನವಾಗಿ ನಮ್ಮ ಸಂಸ್ಕೃತಿಯೇ ಇಲ್ಲದಂತಾಗಿದೆ ಎಂದು ೭.೨% ರಷ್ಟು ಮಾಹಿತಿದಾರರು ತಿಳಿಸಿದ್ದಾರೆ. ಒಟ್ಟಾರೆಯ ವಿಶ್ಲೇಷಣೆ ಅನ್ವಯ ಸ್ಥಳಾಂತರದ ಪರಿಣಾಮ ಅರಣ್ಯವಾಸಿಗಳು ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳುವಿಕೆಗೆ ಒಂದೆಡೆ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇನ್ನೊಂದೆಡೆ ಉಳಿಸಿಕೊಳ್ಳುವುದೇ ಕಷ್ಟವಾಗಿ ಪರಿಣಮಿಸುತ್ತಿದೆ.



ಶೈಕ್ಷಣಿಕ ಪರಿಣಾಮಗಳು

ಶಿಕ್ಷಣ ಪ್ರತಿ ಮಗುವಿನ ಕಡ್ಡಾಯ ಹಕ್ಕು. ಶಿಕ್ಷಣದಿಂದ ಮಾತ್ರ ಮಗುವಿನ ಜ್ಞಾನವು ವೃದ್ಧಿಗೊಳ್ಳುತ್ತದೆ. ಒಂದು ಉತ್ತಮ ಸಮಾಜ ನಿರ್ಮಾಣವಾಗಲು ಪ್ರತಿ ವ್ಯಕ್ತಿಯು ಶಿಕ್ಷಿತನಾಗಬೇಕು. ಆ ಮೂಲಕ ಸಮಾಜದಲ್ಲಿರುವ ಹಲವು ಅಡಚಣೆಗಳನ್ನು ತಾನು ಶಿಕ್ಷಣದಿಂದ ಪಡೆದ ಜ್ಞಾನದ ಬಲದಿಂದ ಪರಿಹರಿಸಲು ಸಾಧ್ಯವಾಗುತ್ತದೆ. ಒಬ್ಬ ವ್ಯಕ್ತಿಯ ಬಳಿ ಇರುವ ಹಣ, ಆಸ್ತಿ ಮತ್ತು ಒಡವೆಗಳನ್ನು ಕಿತ್ತುಕೊಳ್ಳಬಹುದು ಆದರೆ, ಆತನ ಬಳಿಯಿರುವ ಶಿಕ್ಷಣದ ಜ್ಞಾನವನ್ನಲ್ಲ. ಇಂದು ಶಿಕ್ಷಣವು ಮಗುವಿನ ಮೂಲಭೂತ ಹಕ್ಕು. ಜ್ಞಾನದ ಸಂಪತ್ತು ಹೆಚ್ಚಿದಂತೆ ಅಜ್ಞಾನ, ವಿಚಾರಹೀನತೆ ಕಡಿಮೆಯಾಗುತ್ತದೆ. ಇದಕ್ಕೆ ಸರಿಸಮಾನವಾದುದು ಪ್ರಪಂಚದಲ್ಲಿ ಯಾವುದೂ ಇಲ್ಲ. ಎಲ್ಲಾ ಕಾಲಕ್ಕೂ ಎಲ್ಲರಿಂದ ಪ್ರಶಂಸೆಗೆ ಪಾತ್ರವಾದದ್ದು 'ಜ್ಞಾನ'. ಶಿಕ್ಷಣದಲ್ಲಿ ಜ್ಞಾನಕ್ಕೆ ಎರಡು ಮುಖಗಳಿವೆ ಒಂದು ಶಿಸ್ತು ಮತ್ತೊಂದು ಪೋಷಣೆಯ ಕಾರ್ಯಗಳನ್ನು ಮಾಡುವುದು. ಶಿಕ್ಷಣವು ಜ್ಞಾನದ ಮುಖಾಂತರವಾಗಿ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನು ಒದಗಿದುತ್ತದೆ. ಭಾವನೆಗಳ ಬೆಳವಣಿಗೆಗೆ ಅವಕಾಶ ಮಾಡಿಕೊಡುತ್ತದೆ. ಶಿಕ್ಷಣದಿಂದ ವ್ಯಕ್ತಿತ್ವ ವಿಕಸನವು ಸಾಧ್ಯ. ಮಗುವಿನ ಸಮಗ್ರ ವ್ಯಕ್ತಿತ್ವವು ವಿಕಸನಗೊಳ್ಳುವಿಕೆ ಶಿಕ್ಷಣ ಇಂದಿನ ಕಾಲಕ್ಕೆ ಅತ್ಯಾವಶ್ಯಕವಾಗಿ ಬೇಕೇ ಬೇಕು. ಅ ಮೂಲಕ ಒಂದು ವಿಷಯವನ್ನು ಅರಿತುಕೊಳ್ಳುವ ಮನೋಧೋರಣೆ, ಕೌಶಲ್ಯ, ಜ್ಞಾನಗಳೆಲ್ಲವೂ ವೃದ್ಧಿಯಾಗುವುದು ಶಿಕ್ಷಣದಿಂದ ಮಾತ್ರ ಸಾಧ್ಯ. ಮಗುವಿನ ಶಿಕ್ಷಣದ ಕಾರ್ಯಕರ್ತರಾಗಿ ಸಾಮಾಜೀಕರಣದ ನಿಯೋಗಿಗಳು ತಮ್ಮದೇ ಆದ ಪಾತ್ರವನ್ನು ನಿರ್ವಹಿಸುತ್ತವೆ. ಸಾಮಾಜೀಕರಣದ ನಿಯೋಗಿಯಾಗಿ ಪ್ರಾಥಮಿಕ ಹಂತದಲ್ಲಿ ಕುಟುಂಬದ ಸದಸ್ಯರೆಲ್ಲರು ಮಗುವಿನ ಸಮಗ್ರ ಬೆಳವಣಿಗೆ ಮತ್ತು ವಿಕಸನದಲ್ಲಿ ಪಾತ್ರವಹಿಸುತ್ತಾರೆ. ತಾಯಿ ಮೊದಲ ಗುರುವಾಗುವುದರೊಂದಿಗೆ ಕುಟುಂಬದ ಸರ್ವರ ಪಾತ್ರಗಳೇನು ಎಂಬುದನ್ನು ಮಗುವಿಗೆ ತಿಳಸಿಕೊಡುತ್ತಾಳೆ. ಶಾಲೆ ಮತ್ತು ಕಾಲೇಜುಗಳಲ್ಲಿ ಶಿಕ್ಷಕರಿಂದ ಮತ್ತು ತನ್ನ ಸ್ನೇಹಿತರಿಂದ ಹಲವಾರು ಅಂಶಗಳನ್ನು ಶಿಕ್ಷಣದ ಮುಖಾಂತರ ಮಗುವು ತನ್ನ ಜ್ಞಾನದಲ್ಲಿ ತುಂಬಿಸಿಕೊಳ್ಳುತ್ತವೆ. ಇನ್ನುಳಿದಂತೆ ಸಮಾಜವು ತಾನು ಹೊಂದಿರುವ ಪರಿಸರದ ಅನುಗುಣವಾಗಿ ಮಗುವು ನೋಡಿ ಕಲಿಯುವ ಮತ್ತು ಕೆಲವನ್ನು ಪ್ರಾಯೋಗಿಕತೆ ಮುಖಾಂತರ ಅನುಭವಕ್ಕೆ ತಂದುಕೊಳ್ಳುವ ಮುಖೇನ ಶಿಕ್ಷಣಕ್ಕೆ ಅಣಿಯಾಗುತ್ತದೆ. ವಾಸ್ತವ ಪ್ರಪಂಚದಲ್ಲಿ ಶಿಕ್ಷಣವು ಅರಣ್ಯ ಪ್ರದೇಶಗಳ ವ್ಯಾಪ್ತಿಯಲ್ಲಿ ದೊರೆಯುವುದೇ ಕಷ್ಟವಾಗಿದೆ. ಕುದುರೆಮುಖ ಅಂತಹ ಅರಣ್ಯ ಪ್ರದೇಶಗಳಲ್ಲಿ ಶಾಲೆಗಳಿಗೆ ಮಕ್ಕಳು ಬರುವುದೇ ಕಷ್ಟ ಸಾಧ್ಯವಾಗಿದೆ. ಮಳೆಗಾಲ ಆರಂಭವಾಯಿತೆಂದರೆ, ಸಂಪೂರ್ಣ ಜಲಾವೃತವಾಗುವ ಕೆಲವು ಪ್ರದೇಶಗಳಿಂದ ಮೂರು ತಿಂಗಳು ಕಾಲ ನದಿ ನೀರು ಹರಿದು ಕಡಿಮೆಯಾಗುವವರೆಗೂ ಶಾಲೆಗೆ ಬರುವುದು ಸಾಧ್ಯವಾಗುವುದಿಲ್ಲ. ಅಂತಹ ಸ್ಥಳಗಳಲ್ಲಿ ಸೇತುವೆ ನಿರ್ಮಾಣ ಮಾಡುವ ಕಾರ್ಯಕ್ಕೆ ಚಾಲನೆ ನೀಡಿದರೆ, ಅರಣ್ಯ ಇಲಾಖೆಯಿಂದ ಅನುಮತಿಗಳು ಅಗತ್ಯ. ಈ ಒಪ್ಪಿಗೆಯ ಅನುಮತಿ ಪತ್ರಗಳು ಇಲಾಖೆಗಳನ್ನು ಸುತ್ತಿ ಬರುವಷ್ಟರಲ್ಲಿ ಮಕ್ಕಳು ೧ ರಿಂದ ೫ ತರಗತಿ ಇಲ್ಲವೆ ೮ನೇ ತರಗತಿಗೆ ವರ್ಗವಾಗುವುದು ಖಂಡಿತ.

ಕೋಷ್ಟಕ ೩೧


ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರು ಒಕ್ಕಲೇಳುವಿಕೆಯಿಂದಾಗಿರುವ ಶೈಕ್ಷಣಿಕ ಪರಿಣಾಮಗಳು

ಕ್ರಸಂ	ಶೈಕ್ಷಣಿಕ ವ್ಯತ್ಯಾಸ	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರ		
1	ಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತಮ ಶಾಲೆಗಳು / ಸೌಲಭ್ಯಗಳು ದೊರಕಿವೆ	೧	೩೧	೧೬	೧೧	೫೯	೨೩.೬
2	ಉನ್ನತ ಶಿಕ್ಷಣಕ್ಕೆ ಹಣ ದೊರೆತಿದೆ	೦	೭	೮	೬	೨೧	೮.೪
3	ಮಕ್ಕಳು ಹಳ್ಳಿಯಿಂದ ನಗರಕ್ಕೆ ತಲುಪುವ ಸಮಯದ ಅಭಾವ ತಪ್ಪಿದೆ	೦	೧೩	೯	೧೧	೩೩	೧೩.೨
4	ಇತರೆ	೦	೩	೧೩	೬	೨೨	೮.೮
5	ಒಕ್ಕಲೇಳದವರು	೧೨	೩೭	೫೩	೧೩	೧೧೫	೪೬
ಒಟ್ಟು		೧೩	೯೧	೯೯	೪೭	೨೫೦	೧೦೦

ಈ ನಿಟ್ಟಿನಲ್ಲಿ ಮಕ್ಕಳು ಶಿಕ್ಷಣವನ್ನು ಪಡೆಯಬೇಕೆಂಬ ಒತ್ತಾಸೆಯಿಂದ ರಾಷ್ಟ್ರೀಯ ಉದ್ಯಾನವನದ ಭಾಗದಿಂದ ಕುಟುಂಬ ಸಮೇತರಾಗಿ ಒಕ್ಕಲೆದ್ದು ಬೇರೆಡೆಗೆ ನಲೆಸಿದ್ದಾರೆ. ಅಂತಹ ಕುಟುಂಬಗಳನ್ನು ಆಧರಿಸಿ ಕೋಷ್ಟಕಳ.೨೧ ಶೈಕ್ಷಣಿಕ ಪರಿಣಾಮದ ವಿವರವನ್ನು ನೀಡುತ್ತದೆ. ಒಕ್ಕಲೇಳದೆ ಉದ್ಯಾನವನದ ಭಾಗದಲ್ಲಿಯೇ ಉಳಿದವರು ೪೬% ರಷ್ಟಿದ್ದಾರೆ. ಇನ್ನುಳಿದಂತೆ ಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತಮ ಶಾಲೆಗಳು/ ಸೌಲಭ್ಯಗಳು ದೊರಕಿವೆ ಎಂದು ೨೩.೬% ರಷ್ಟಿದ್ದಾರೆ. ಮಕ್ಕಳು ಹಳ್ಳಿಗಳಿಂದ ನಗರಕ್ಕೆ ಶಿಕ್ಷಣಕ್ಕೆಂದೇ ತಲುಪುತ್ತಿದ್ದ ಸಮಯದ ಅಭಾವ ತಪ್ಪಿದೆ ಎಂದು ೧೩.೨% ರಷ್ಟಿದ್ದಾರೆ.

ಇತರೆ ಕಾರಣಗಳಿಗಾಗಿ ನಾವು ಒಕ್ಕಲೆದ್ದಿದ್ದೇವೆ ಎಂದು ೮.೮% ರಷ್ಟಿದ್ದಾರೆ ಮತ್ತು ಮಕ್ಕಳ ಉನ್ನತ ಶಿಕ್ಷಣಕ್ಕೆ ಹಣ ದೊರೆತಂತಾಗಿದೆ ಎಂದು ೮.೫% ಮಾಹಿತಿದಾರರು ತಿಳಿಸಿದ್ದಾರೆ.

ಗ್ರಾಫ್ ೨೦ , ಒಕ್ಕಲೇಳುವಿಕೆಯಿಂದಾಗಿರುವ ಶೈಕ್ಷಣಿಕ ಪರಿಣಾಮಗಳು



ಕೋನಾಕೃತಿ ಗ್ರಾಫ್ ೨೦ ರ ಅನ್ವಯ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಉತ್ತಮ ಶಾಲೆಗಳು/ ಸೌಲಭ್ಯಗಳು ದೊರಕಿವೆ ಎಂದು ಒಕ್ಕಲೆದ್ದ ೫೪% ಮಾಹಿತಿದಾರರಲ್ಲಿ ೨೩.೬% ಮಾಹಿತಿದಾರರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಪ್ರಮುಖವಾದ ಕಾರಣ ಉದ್ಯಾನವನದ ವ್ಯಾಪ್ತಿಯಲ್ಲಿ ಮಳೆಗಾಲ ಆರಂಭವಾದರೆ, ಮನೆಯಿಂದ ಶಾಲೆಗೆ ತೆರಳುವಿಕೆಗೆ ಸಾಧ್ಯವಾಗದೆ ಮೂರು ತಿಂಗಳು ಮನೆಯ ಪರಿಸರದಲ್ಲಿಯೇ ಉಳಿಯುವ ಸಂದರ್ಭ ಎದುರಾಗುತ್ತಿತ್ತು. ಸರ್ಕಾರದಿಂದ ಆರಂಭವಾಗಿರುವ ಆಶ್ರಮ ಶಾಲೆಗಳಲ್ಲಿ ತಾತ್ಕಾಲಿಕ ಶಾಲಾ ಶಿಕ್ಷಕರು ಮಾತ್ರ ನೇಮಕಗೊಳ್ಳುತ್ತಿದ್ದಾರೆ. ಇವರು ಎಷ್ಟು ಕಾಲ ಮಕ್ಕಳಿಗೆ ಪಾಠವನ್ನು ಮಾಡುತ್ತಾರೆ ಎಂಬ ಅನುಮಾನವು ವ್ಯಕ್ತವಾಗುತ್ತದೆ. ಈ ಶಿಕ್ಷಕರು ಯಾವುದೇ ಸಮಯದಲ್ಲಿ ಶಾಲೆಗಳನ್ನು ತೊರೆಯುವ ಸಂದರ್ಭಗಳು ಇರುತ್ತವೆ. ಅರಣ್ಯ ವ್ಯಾಪ್ತಿಯ ಶಾಲೆಗಳು ಮಳೆಗಾಲದಲ್ಲಿ ರಜೆಗಳ ಸಂದರ್ಭಗಳನ್ನು ಎದುರುಗೊಳ್ಳುತ್ತವೆ. ಒಮ್ಮೆ ಮುಚ್ಚಿದ ಶಾಲೆಗಳು ಮಳೆ ಪ್ರಮಾಣ ಇಳಿಕೆಯಾದ ಮೇಲೆಯೇ ಆರಂಭವಾಗುವುದು.



ಅಷ್ಟು ಹೊತ್ತಿನಲ್ಲಿ ಮಕ್ಕಳು ಪೂರ್ಣ ಪ್ರಮಾಣದ ಶಿಕ್ಷಣದಿಂದ ವಂಚಿತರಾಗಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಮಗುವು ಶಿಕ್ಷಣದಿಂದ ವಂಚಿತವಾಗಬಾರದೆಂದು ಒಕ್ಕಲೇಳುವ ಅವಶ್ಯಕತೆ ಇದೆ[೧೪]. ಮಕ್ಕಳು ಹಳ್ಳಿಯಿಂದ ನಗರಕ್ಕೆ ತಲುಪುವ ಸಮುಯದ ಅಭಾವ ತಪ್ಪಿದೆ ಎಂದು ಹೇಳಿಕೆ ನೀಡಿರುವವರು ೧೩.೨% ರಷ್ಟಿದ್ದಾರೆ. ಮೂಲವಾಗಿ ಉದ್ಯಾನವನ ಪ್ರದೇಶದಿಂದ ಪಟ್ಟಣದ ಉತ್ತಮ ಶಾಲೆಗೆ ಇಲ್ಲವೆ ಉದ್ಯಾನವನದ ಒಳ ಭಾಗದಲ್ಲಿರುವ ಶಾಲೆಗೆ ಹೋಗುವುದಕ್ಕಾಗಲಿ ಕನಿಷ್ಟ ೬ ಕಿ.ಮೀ ಸಾಗಬೇಕಾದ ಅನಿವಾರ್ಯತೆ ಇತ್ತು. ಈ ಸಂದರ್ಭದಲ್ಲಿ ಯಾವ ಪ್ರಾಣಿಗಳು ಮಕ್ಕಳ ಮೇಲೆ ದಾಳಿ ಮಾಡುವವೋ ಹಾಗೂ ಎಷ್ಟು ಹೊತ್ತಿಗೆ ಮಕ್ಕಳು ಶಾಲೆಯಿಂದ ಬರುತ್ತಾರೆಯೋ ಎಂಬ ಆತಂಕದಲ್ಲಿ ಕಾಲ ದೂಡುವಂತಾಗಿತ್ತು. ಪಟ್ಟಣಕ್ಕೆ ಹೋದ ಮಕ್ಕಳು ಬರುವವರೆಗೂ ಕಾಯುವ ಆತಂಕ ಹೆಚ್ಚಾಗುತ್ತಿತ್ತು. ಈ ಎಲ್ಲಾ ಕಾರಣಗಳಿಂದ ಮಕ್ಕಳ ಭವಿಷ್ಯಕ್ಕೆ ಕಷ್ಟವಾಗಬಾರದೆಂಬ ಉದ್ದೇಶದಿಂದ ಒಕ್ಕಲೇಳಬೇಕಾಯಿತು [೧೫]. ಇತರೆ ಕಾರಣಗಳೆಂದು ೮.೮% ರಷ್ಟಿದ್ದಾರೆ. ಪದವಿ ಶಿಕ್ಷಣವನ್ನು ಮುಗಿಸಿ ಇಂಜಿನಿಯರಿಂಗ್ ಮತ್ತು ಇತರೆ ಉನ್ನತ ಶಿಕ್ಷಣಕ್ಕೆ ಹಣದ ಅಗತ್ಯವಿತ್ತು. ಈ ಕಾರಣದಿಂದಾಗಿ ಒಕ್ಕಲೇಳಬೇಕಾದ ಅನಿವಾರ್ಯತೆ ಉಂಟಾಯಿತು ಎಂದು ೮.೪% ರಷ್ಟಿದ್ದಾರೆ.

ಸ್ಥಳಾಂತರದ ಆರೋಗ್ಯ ಪರಿಣಾಮ

ಆರೋಗ್ಯವೇ ಭಾಗ್ಯ ಎಂಬ ನಾಣ್ಣುಡಿಯಂತೆ, ಆರೋಗ್ಯವು ಸದೃಢವಾಗಿದ್ದರೆ ಎಲ್ಲಾ ಭಾಗ್ಯಗಳನ್ನು ಹೊಂದಲು ಅನುವಾಗುತ್ತದೆ. ಆರೋಗ್ಯದ ಹೊರತು ಯಾವ ಅಂಶವು ಇಂದಿನ ಜಾಗತಿಕ ಜಗತ್ತಿನಲ್ಲಿ ಪ್ರಮುಖ್ಯತೆಯನ್ನು ಗಳಿಸಿಕೊಂಡಿಲ್ಲ. ಮಾನವ ಎಷ್ಟು ಆರೋಗ್ಯವಾಗಿರುತ್ತಾನೋ ಅಷ್ಟು ಕಾಲ ಆತ ದೃಢತೆಯಿಂದ ಯಾವ ಭಯವಿಲ್ಲದೆ ಎಲ್ಲಾ ಕಾರ್ಯಗಳಲ್ಲಿ ತೊಡಗಿಕೊಳ್ಳಬಹುದು. ವಿಶ್ವ ಆರೋಗ್ಯ ಸಂಸ್ಥೆಯ ಸಂವಿಧಾನದ ಪ್ರಕಾರ ಆರೋಗ್ಯವೆಂದರೆ, ' ಸಂಪೂರ್ಣವಾಗಿ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಕಲ್ಯಾಣಕಾರಕ ಅಂಶಗಳನ್ನು ಹೊಂದಿರುವುದು'[೧೬]. "Aboriginal health" means not just the physical well-being of an individual but refers to the social, emotional and cultural well-being of the whole Community in which each individual is able to achieve their full potential as a human being, thereby bringing about the total well-being of their Community[೧೭]. ಆರೋಗ್ಯವು ಜೀವನದ ಭಾಗವಾಗಿ ದೈಹಿಕವಾಗಿ ಸದೃಢತೆಯನ್ನು ಮಾತ್ರ ಹೊಂದಿರದೆ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಭಾವನಾತ್ಮಕವಾಗಿ ಸಮುದಾಯದ ಪ್ರತಿಯೊಬ್ಬ ವ್ಯಕ್ತಿಯು ಅವನ ಮಾನವೀಯ ಜೀವತ್ವವನ್ನು ಸಾಮರ್ಥ್ಯಕ್ಕನುಗುಣವಾಗಿ ಹೊಂದುವುದರೊಂದಿಗೆ ಸಮುದಾಯದ ಸದೃಢತೆಯನ್ನು ಕಾಪಾಡುವುದು. ಉತ್ತಮ ಆರೋಗ್ಯವನ್ನು ಪಡೆಯುವುದು ಮತ್ತು ಹೊಂದುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಆರೋಗ್ಯ ವ್ಯವಸ್ಥೆಗಳಿಗೆ ಹಲವಾರು ಯೋಜನೆಗಳನ್ನು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿ ಪ್ರವಹಿಸುವ ಮತ್ತು ಜಾರಿ ತರುವ ಪ್ರಕ್ರಿಯೆಗಳಿಗೆ ಪಂಚವಾರ್ಷಿಕ ಯೋಜನೆಗಳ ಮುಖಾಂತರವೇ ಅಡಿಪಾಯವನ್ನು ಹಾಕಲಾಗಿದೆ. ಪ್ರತಿ ಗ್ರಾಮಗಳ ಅನುಸಾರವಾಗಿ ಅಲ್ಲಿರುವ

ಜನಸಂಖ್ಯೆಗಳನ್ನು ಗಮನದಲ್ಲಿರಿಸಿಕೊಂಡು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಹಾಗೂ ಪ್ರತಿ ಸಾವಿರ ಜನಸಂಖ್ಯೆಗೆ ಆಶಾ ಕಾರ್ಯಕರ್ತರನ್ನು ನೇಮಿಸಲಾಗಿದೆ.

ವಾಣಿಜ್ಯೋಧ್ಯಮವಾಗಿ ಅಥವಾ ವ್ಯವಹಾರವಾಗಿ ಬೆಳವಣಿಗೆಯಾಗುತ್ತಿರುವ ಆರೋಗ್ಯ ಕ್ಷೇತ್ರ

ಇಂದು ಭಾರತದಾದ್ಯಂತ ಆರೋಗ್ಯ ಕ್ಷೇತ್ರದ ಸೇವಾ ಸೌಲಭ್ಯಗಳು ಹೆಚ್ಚು ಸರ್ಕಾರೇತರ ಆರೋಗ್ಯ ಸೇವಾ ಸಂಸ್ಥೆಗಳಿಂದ ದೊರೆಯಲ್ಪಡುತ್ತಿದೆ. ಸರ್ಕಾರ ಕೇವಲ ಆರೋಗ್ಯ ಕ್ಷೇತ್ರದ ನೀತಿಗಳನ್ನು ರೂಪಿಸಿ ಜಾರಿತರುವಂತಹ ಕಾರ್ಯದಲ್ಲಿ ನಿರತರಾದರೆ, ಸರ್ಕಾರೇತರ ಸಂಸ್ಥೆಗಳ ಮುಖಾಂತರ ಹಲವು ಉತ್ತಮ ಸೇವೆಗಳು ಇಂದು ವಾಣಿಜ್ಯೋಧ್ಯಮವಾಗಿ ರೂಪುಗೊಂಡು ಬೆಳವಣಿಗೆಯಾಗುತ್ತಿದೆ. ಇಂದು ಉತ್ತಮ ಆರೋಗ್ಯ ಬೇಕೆಂದರೆ, ಹಣವನ್ನು ನೀಡಿ ಹೆಚ್ಚಿನ ಚಿಕಿತ್ಸೆಯನ್ನು ಪಡೆಯುವಂತಾಗಿದೆ. ೧೯೭೬ ರಲ್ಲಿ ಕೇವಲ ೧೪% ಇದ್ದ ಸರ್ಕಾರೇತರ ಆರೋಗ್ಯ ಸೇವೆಗಳು (ಪ್ರೈವೇಟ್ ಸೆಕ್ಟರ್), ೧೯೯೩ ರಲ್ಲಿ ೬೭% ರಷ್ಟಾಗಿದೆ. ಇದರೊಂದಿಗೆ ವೈದ್ಯ ಪದವಿ ಪಡೆಯುವವರು ತಮ್ಮದೇ ಆದ ನರ್ಸಿಂಗ್ ಹೋಮ್ ಗಳನ್ನು ತೆರೆದು ವ್ಯವಹಾರಯುತವಾಗಿ ಆರೋಗ್ಯ ಸೇವೆಯನ್ನು ಕಲ್ಪಿಸುತ್ತಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆಯ ವರದಿ ಅನುಸಾರವಾಗಿ ಇಂದು ೪೦೦೦ ಔಷಧಗಳು, ೧೩೦ ಅತ್ಯಾವಶ್ಯಕ ಔಷಧಿಗಳು ಭಾರತದ ಮಾರುಕಟ್ಟೆಯಲ್ಲಿ ಹಣದ ವಹಿವಾಟಿನಲ್ಲಿ ಬಿಕರಿಯಾಗುತ್ತಿದೆ. ಎನ್ ಎಸ್ ಎಸ್ ಓ ಅಧ್ಯಯನದ ಪ್ರಕಾರ ವರದಕ್ಷಿಣೆ ಹೊರತುಪಡೆಸಿದರೆ, ಭಾರತದಲ್ಲಿ ಬಿಕರಿಯಾಗುವ ಅಥವಾ ಪಡೆವ ಅತಿ ದುಬಾರಿ ಸೌಲಭ್ಯವೆಂದರೆ, ಆರೋಗ್ಯವಾಗಿದೆ. ನೂತನವಾಗಿ ಗ್ರಾಮೀಣ ವೈದ್ಯ ಅಧ್ಯಯನದವರು ಗ್ರಹಿಸಿದಂತೆ[೧೪],

೧. ೭೦% ಗ್ರಾಮೀಣ ಕುಟುಂಬದವರು ೬೦% ರಷ್ಟು ವಾರ್ಷಿಕ ವರಮಾನವನ್ನು ಆರೋಗ್ಯಕ್ಕಾಗಿ ವ್ಯಹಿಸುತ್ತಾರೆ.

೨. ತುರ್ತು ಪರಿಸ್ಥಿತಿ ನಿರ್ವಹಣೆಗಾಗಿ ೯೩% ಹಣವನ್ನು ವ್ಯಯಮಾಡುತ್ತಾರೆ.

೩. ಅತಿ ವಯಸ್ಕರರು ಹಾಗೂ ವಯಸ್ಕರರು ಆರೋಗ್ಯ ಸೌಲಭ್ಯಗಳಿಂದ ಗ್ರಾಮೀಣ ಪ್ರದೇಶದಲ್ಲಿ ವಂಚಿತರಾಗಿದ್ದಾರೆ. (೧೪%).

೪. ಅತಿ ಬಡ ಕುಟುಂಬದವರು ತಮ್ಮ ವಾರ್ಷಿಕ ವರಮಾನವನ್ನು ಹೆಚ್ಚಾಗಿ ಆರೋಗ್ಯವನ್ನು ಪಡೆಯುವುದಕ್ಕಾಗಿ ವ್ಯಹಿಸುತ್ತಿದ್ದಾರೆ.

ಗ್ರಾಮೀಣ ಭಾರತದ ಪರಿಸ್ಥಿತಿಗಳು ಆರೋಗ್ಯ ಕ್ಷೇತ್ರದಲ್ಲಿ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿವೆ. ಸಮುದಾಯ ಆರೋಗ್ಯ ಕೇಂದ್ರಗಳ ಮುಖಾಂತರ ಆರೋಗ್ಯ ವೃದ್ಧಿಗೆ ಮತ್ತು ಶೀಘ್ರವಾಗಿ ಹರಡುವ ಕಾಯಿಲೆಗಳಿಗೆ (ಸೋಂಕು) ಪ್ರಾಥಮಿಕ ಚಿಕಿತ್ಸೆಯನ್ನು ಮಾತ್ರ ಪ್ರವಹಿಸಲು ಸಾಧ್ಯವಿದೆ. ಅದನ್ನು ಹೊರತು ಪಡಿಸಿ ಮಾರಣಾಂತಿಕ ಕಾಯಿಲೆಗಳಿಗೆ ಗ್ರಾಮೀಣ ಭಾಗದವರು ಪಟ್ಟಣ ಪ್ರದೇಶದ ದವಾಖಾನೆಗಳ ಬಾಗಿಲನ್ನು ಮುಟ್ಟಲು ಕನಿಷ್ಟ ೩೦ ರಿಂದ ೪೦ ಕಿ.ಮೀ ವ್ಯಾಪ್ತಿಯನ್ನು ಕ್ರಮಿಸಲೇಬೇಕು. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಬಿಳಿಗಲ್ ಗ್ರಾಮದಲ್ಲಿ ಇತ್ತೀಚಿನ ದಿನಗಳಲ್ಲಿ ಸುಮಾರು ೭೫ ವರ್ಷದ ಹಿರಿಯ ಮಹಿಳೆಯನ್ನು ಗ್ರಾಮದಿಂದ ಕಳಸಕ್ಕೆ

ಕೊಂಡೊಯ್ಯುವ ವೇಳೆ ಕಾಲ್ನಡಿಗೆಯಲ್ಲಿ ಮುಖ್ಯ ರಸ್ತೆಗೆ ಹೊತ್ತುಕೊಂಡು ಕ್ರಮಿಸುವ ವೇಳೆ ತಕ್ಷಣಕ್ಕೆ ಸೂಕ್ತವಾದ ಸೌಲಭ್ಯಗಳು ದೊರೆಯದೆ ಮರಣಕ್ಕೆ ತುತ್ತಾದ ಘಟನೆ ಜರುಗಿದೆ[೧೯].

ಕೋಷ್ಟಕ೩.೨ ಮಾಹಿತಿದಾರರು ಒಕ್ಕಲೇಳುವಿಕೆಯಿಂದಾಗಿರುವ ಆರೋಗ್ಯ ಪರಿಣಾಮವನ್ನು ವಿವರಿಸುವುದಾಗಿದೆ. ಅದರಂತೆ, ಉದ್ಯಾನವನ ವ್ಯಾಪ್ತಿಯಲ್ಲಿ ಒಕ್ಕಲೇಳದೆ ಉಳಿದವರು ೪೬% ರಷ್ಟಿದ್ದಾರೆ. ಒಕ್ಕಲೇಳುವ ಪೂರ್ವದಲ್ಲಿ ಇದ್ದಂತಹ ಬಹು ದೂರದ ಆರೋಗ್ಯ ಸೇವಾ ವ್ಯವಸ್ಥೆಗಳು, ಪ್ರಸ್ತುತದ ಸ್ಥಳಗಳಲ್ಲಿ ಆ ಪ್ರಕಾರವಾಗಿದ್ದರೆ ನಮಗೆ ಸಮೀಪದಲ್ಲಿಯೇ ಇರುವುದು. ಶೀಘ್ರವಾಗಿ ಅವಶ್ಯವೆನಿಸಿದಾಗ ಆರೋಗ್ಯ ಸೇವೆಯನ್ನು ಪಡೆಯಲು ಬಹು ದೂರಕ್ಕೆ ಕ್ರಮಿಸುವುದು ತಪ್ಪಿದೆ ಎಂದು ೨೧.೨% ರಷ್ಟು ಮಾಹಿತಿದಾರರು ಅಭಿಪ್ರಾಯವನ್ನು ತಿಳಿಸಿದ್ದಾರೆ. ತುರ್ತು ಸೇವೆಗಳನ್ನು ಶೀಘ್ರವಾಗಿ ಪಡೆಯಬಹುದಾಗಿದ್ದು, ಮೊದಲಿನಂತೆ ಕಾಲ್ನಡಿಗೆಯಲ್ಲಿ ತಲುಪುವ ಪ್ರಮೇಯವೇ ಇಲ್ಲವೆಂದು ೧೧.೨% ರಷ್ಟು ಮಾಹಿತಿದಾರರು ಅಭಿಪ್ರಾಯಿಸಿದ್ದಾರೆ.


ಸಸ್ಯಜನ್ಯ ಮೂಲಗಳಿಂದ ಅರಣ್ಯ ಪ್ರದೇಶಗಳಲ್ಲಿ ಔಷಧಿಗಳನ್ನು ಪಡೆಯುತ್ತಿದ್ದೆವು. ಆದರೆ ಇಂದು ಅನಿವಾರ್ಯವಾಗಿ ಇಂಗ್ಲೀಷ್ ಔಷಧಿಗಳ ಅವಲಂಬನೆ ಮಾಡಬೇಕಾಗಿದೆ ಎಂದು ೧೦% ರಷ್ಟು ಮಾಹಿತಿದಾರರು ಅಭಿಪ್ರಾಯಿಸಿದ್ದಾರೆ. ಉನ್ನತ ಮಟ್ಟದ ಆರೋಗ್ಯ ಸೇವಾ ಕೇಂದ್ರಗಳು, ತಾಲ್ಲೂಕು ಮಟ್ಟದ ಆರೋಗ್ಯ ಕೇಂದ್ರಗಳ ಸೌಲಭ್ಯಗಳನ್ನು ಪಡೆಯಲಾಗಿದೆ ಎಂದು ೮.೮% ರಷ್ಟು ಮಾಹಿತಿದಾರರು ಅಭಿಪ್ರಾಯಿಸಿದ್ದಾರೆ. ಪುನರ್ವಸತೀಕರಣಗೊಂಡಿರುವ ಸ್ಥಳಗಳು ನೈರ್ಮಲ್ಯ ವ್ಯವಸ್ಥೆಯಿಂದ ಕೂಡಿವೆ ಎಂದು ೨% ರಷ್ಟು ಮಾಹಿತಿದಾರರು ಅಭಿಪ್ರಾಯಿಸಿದ್ದಾರೆ. ಇನ್ನುಳಿದಂತೆ ಆರೋಗ್ಯ ಸುಧಾರಣೆಗಾಗಿ ನಾವು ಒಕ್ಕಲೇಳಬೇಕಾಗಿ ಬಂತು ಎಂದು ೦.೮% ರಷ್ಟು ಮಾಹಿತಿದಾರರು ಅಭಿಪ್ರಾಯಿಸಿದ್ದಾರೆ.

ಕೋಷ್ಟಕ ೩.೨

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರು ಒಕ್ಕಲೇಳುವಿಕೆಯಿಂದಾಗಿ ಆರೋಗ್ಯದ ಮೇಲಾಗಿರುವ ಪರಿಣಾಮಗಳು

ಕ್ರಸಂ	ಆರೋಗ್ಯದ ವ್ಯತ್ಯಾಸ	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ		
1	ನೈರ್ಮಲ್ಯ ವ್ಯವಸ್ಥೆಯಿಂದ ಕೂಡಿದ ಸ್ಥಳ	೦	೩	೦	೨	೫	೨
2	ಆರೋಗ್ಯ ಸುಧಾರಣೆ	೦	೦	೨	೦	೨	೦.೮
3	ಆರೋಗ್ಯ ಕೇಂದ್ರಗಳು ಸಮೀಪದಲ್ಲಿವೆ	೧	೧೭	೨೫	೧೦	೫೩	೨೧.೨
4	ಇಂಗ್ಲೀಷ್ ಔಷಧಿಗಳ ಅವಲಂಬನೆ	೦	೧೧	೮	೬	೨೫	೧೦
5	ಉನ್ನತ ಮಟ್ಟದ ಆರೋಗ್ಯ ಸೇವೆಯ ಕೇಂದ್ರಗಳಿವೆ	೦	೧೦	೩	೯	೨೨	೮.೮
6	ತುರ್ತು ಸೇವೆಗಳನ್ನು ಶೀಘ್ರವಾಗಿ ಪಡೆಯಬಹುದು	೦	೧೩	೮	೭	೨೮	೧೧.೨
7	ಒಕ್ಕಲೇಳದವರು	೧೨	೩೭	೫೩	೧೩	೧೧೫	೪೬
	ಒಟ್ಟು	೧೩	೯೧	೯೯	೪೭	೨೫೦	೧೦೦

ಗ್ರಾಫ್ ೨೧ , ಒಕ್ಕಲೇಳುವಿಕೆಯಿಂದಾಗಿ ಆರೋಗ್ಯದ ಮೇಲಾಗಿರುವ ಪರಿಣಾಮಗಳು



ಗ್ರಾಫ್ ೨೧ ರ ಅನ್ವಯ ಒಕ್ಕಲೇಳದವರು ಅಧಿಕ ಪ್ರಮಾಣದಲ್ಲಿದ್ದು ೪೬% ರಷ್ಟು ಪ್ರತಿನಿಧಿಸಿದ್ದಾರೆ. ೨೧.೨% ರಷ್ಟು ಮಾಹಿತಿದಾರರು ಆರೋಗ್ಯ ಕೇಂದ್ರಗಳು ಸಮೀಪದಲ್ಲಿವೆ ಎಂದು ಅಭಿಪ್ರಾಯಿಸಿರುವುದು ಒಕ್ಕಲೆದ್ದ ೫೪% ಮಾಹಿತಿದಾರರಲ್ಲಿ ಅಧಿಕ ಪ್ರಮಾಣದವರಾಗಿದ್ದಾರೆ.
ಈ ಹಿಂದೆ ಉದ್ಯಾನವನ ವ್ಯಾಪ್ತಿಯಲ್ಲಿ ವಾಸ ಮಾಡುವಾಗ ಕಾಯಿಲೆಗಳು ಆರಂಭವಾದಾಗ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ತಲುಪಲು ಕನಿಷ್ಟ ಎಂದರು ಮೂರು ಕಿ.ಮೀ ವ್ಯಾಪ್ತಿಯನ್ನು ಕ್ರಮಿಸಬೇಕಾಗಿತ್ತು. ಆದರೆ ಸ್ಥಳಾಂತರಗೊಂಡ ಮೇಲೆ ಸಮೀಪದ ಸ್ಥಳದಲ್ಲಿ ಅಂದರೆ ೨ ರಿಂದ ೩ ಫರ್ಲಾಂಗ್ ಕ್ರಮಿಸಿದರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೌಲಭ್ಯಗಳಿಗೆ ಲಭ್ಯವಾಗುತ್ತವೆ. ಮೊದಲಿನ ಸ್ಥಳಗಳಿಗಿಂತ ವೇಗವಾಗಿ ತುರ್ತು ಸೇವೆಗಳನ್ನು ಶೀಘ್ರವಾಗಿ ಪಡೆಯಬಹುದಾಗಿದ್ದು, ತುರ್ತು ಸಂದರ್ಭದಲ್ಲಿ ೩೦ ರಿಂದ ೪೦ ಕಿ.ಮೀ ಕ್ರಮಿಸುವ ಪ್ರಮೇಯವಿಲ್ಲ ಎಂದು ೧೧.೨% ರಷ್ಟು ಮಾಹಿತಿದಾರರಿದ್ದಾರೆ. ಅರಣ್ಯ ವ್ಯಾಪ್ತಿ ಪ್ರದೇಶದಲ್ಲಿ ನಾಟಿ ಔಷಧಿಗಳ ಮುಖಾಂತರ ಸಸ್ಯಜನ್ಯ ಔಷಧಿಗಳನ್ನು ಯಾವುದೇ ಅಡ್ಡಪರಿಣಾಮಗಳನ್ನುಂಟು ಮಾಡದಿರವುದರಿಂದ ನೇರವಾಗಿ ತೆಗೆದುಕೊಳ್ಳಬಹುದಿತ್ತು ಮತ್ತು ಗುಣಮುಖವಾಗುವ ಸೂಚನೆಗಳು ಸಿಗುತ್ತಿತ್ತು. ಇಲ್ಲಿನ ಪರಿಸ್ಥಿತಿಗಳಿಗೆ ಅನಿವಾರ್ಯವಾಗಿ ಇಂಗ್ಲೀಷ್ ಔಷಧಿಗಳ ಅವಲಂಬನೆ, ಗುಣಮುಖವಾದ ಕಾಯಿಲೆಗಳು, ಪದೆ ಪದೆ ವೈದ್ಯರನ್ನು ಬೇಟಿಯಾಗುವ ಗೋಜು ಎದುರಾಗಿದೆ ಎಂದು ೧೦% ರಷ್ಟು ಮಾಹಿತಿದಾರರಿದ್ದಾರೆ. ಉನ್ನತ ಮಟ್ಟದ ಆರೋಗ್ಯ ಸೇವೆಯ ಕೇಂದ್ರಗಳಿವೆ ಅವುಗಳನ್ನು ತುರ್ತು ಸಂದರ್ಭದಲ್ಲಿ ಬಳಸಿಕೊಳ್ಳಬಹುದು ಎಂದು ೮.೮% ರಷ್ಟು ಮಾಹಿತಿದಾರರಿದ್ದಾರೆ. ಮೊದಲಿಗಿಂತ ಈಗ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಗಳನ್ನು ಕಾಣಲಾಗುತ್ತಿದ್ದು, ವೈದ್ಯರ ಔಷಧಿಗಳು ಪರಿಣಾಮಕಾರಿಯಾಗಿವೆ ಮತ್ತು ಗುಣಮುಖರಾಗುತ್ತಿದ್ದೇವೆ ಎಂದು ೦.೮% ರಷ್ಟು ಮಾಹಿತಿದಾರರಿದ್ದಾರೆ. ಪುನರ್ವಸತೀಕರಣಗೊಂಡಿರುವ ಸ್ಥಳವು ನೈರ್ಮಲ್ಯದಿಂದ ಕೂಡಿದೆ ಎಂದು ೨% ರಷ್ಟು ಮಾಹಿತಿದಾರರಿದ್ದಾರೆ.



ಸ್ಥಳಾಂತರದ ಆರ್ಥಿಕ ಪರಿಣಾಮ


ಕೋಷ್ಟಕ ೩೩

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರು ಒಕ್ಕಲೇಳುವಿಕೆಯಿಂದಾಗಿ ಆರ್ಥಿಕತೆಯ ಮೇಲಾಗಿರುವ ಪರಿಣಾಮಗಳು

ಕ್ರಸಂ	ಆರ್ಥಿಕತೆಯಲ್ಲಿ ವ್ಯತ್ಯಾಸ	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ		
1	ಬೆಳೆಗಳು ಸಣ್ಣ ಪ್ರಾಯದವುಗಳಾದ್ದರಿಂದ ಆದಾಯ ಕಡಿಮೆಯಾಗಿದೆ	೦	೨೧	೧೬	೬	೪೩	೧೭.೨
2	ಪ್ರಗತಿ ಕ್ಷೀಣಿಸಿದೆ	೧	೫	೬	೪	೧೬	೬.೪
3	ವ್ಯವಹಾರಗಳಲ್ಲಿ ಸ್ಪರ್ಧೆ ಹೆಚ್ಚಾಗಿದೆ	೦	೪	೧	೫	೧೦	೪
4	ವ್ಯವಹಾರದಲ್ಲಿ ಲಾಭ	೦	೦	೨	೩	೫	೨
5	ಕ್ರಯಕ್ಕೆ ಸ್ಥಳಗಳನ್ನು ಕೊಳ್ಳಲಾಗಿ ಆರ್ಥಿಕತೆ ವ್ಯತ್ಯಾಸವಾಗಿದೆ	೦	೯	೯	೮	೨೬	೧೦.೪
6	ಹೊಸ ಉದ್ಯೋಗಗಳು ಸಿಗುತ್ತಿವೆ	೦	೪	೩	೧	೮	೩.೨
7	ಕೂಲಿ ಹೆಚ್ಚು ಸಿಗುತ್ತಿದೆ	೦	೯	೭	೬	೨೨	೮.೮
8	ಇತರೆ	೦	೨	೨	೧	೫	೨
7	ಒಕ್ಕಲೇಳದವರು	೧೨	೩೭	೫೩	೧೩	೧೧೫	೪೬
	ಒಟ್ಟು	೧೩	೯೧	೯೯	೪೭	೨೫೦	೧೦೦

ಮಾನವನ ಆರ್ಥಿಕ ಚಟುವಟಿಕೆಯ ಮೂಲಗಳು ಉತ್ಪಾದನಾಂಗಗಳು. ಉತ್ಪಾದನಾಂಗಗಳ ಮೂಲಕ ಉತ್ಪತ್ತಿಗೊಳ್ಳುವ ವಸ್ತುಗಳನ್ನು ಮಾರುಕಟ್ಟೆ ಮುಖಾಂತರ ಬೇಡಿಕೆಗಳನ್ನು ಪೂರೈಸಲಾಗುತ್ತದೆ. ಉತ್ಪಾದನಾಂಗಗಳು ಯಾವ ಸಮಯದಲ್ಲಿ ತಮ್ಮ ಮೂಲ ಉತ್ಪತ್ತಿಗಳ ಪ್ರಮಾಣದಲ್ಲಿ ಕಡಿಮೆ ಮಟ್ಟಕ್ಕೆ ಇಳಿಯುತ್ತದೆಯೋ ಅಂತಹ ಸಂದರ್ಭವನ್ನು ಇಳಿಮುಖದ ಉತ್ಪಾದಕತೆ ಎಂದು ಕರೆಯಲಾಗುತ್ತದೆ. ಯಾವ ಉತ್ಪಾದನಾಂಗಗಳ ಮೂಲಕ ಉತ್ಪಾದನೆಯು ಹೆಚ್ಚುರುತ್ತದೆ ಅಂತಹ ಸಂದರ್ಭವನ್ನು ಏರಿಕೆ ಮಟ್ಟದ ಉತ್ಪಾದಕತೆ ಎಂದು ಕರೆಯಲಾಗುತ್ತದೆ. ಈ ಎರಡು ಅಂಶಗಳನ್ನು ಗಮನಿಸಿದಾಗ ಆದಾಯ ಮಟ್ಟದಲ್ಲಾಗುವ ಏರಿಕೆ ಮತ್ತು ಇಳಿಕೆಗಳು ಆರ್ಥಿಕತೆಯ ಪ್ರಮಾಣವನ್ನು ನಿರ್ಧರಿಸುತ್ತದೆ. ಆರ್ಥಿಕ ಮಟ್ಟದ ಪ್ರಮಾಣದ ಮುಖಾಂತರ ಉತ್ಪಾದನಾಂಗಗಳಲ್ಲಿ ಉಂಟಾಗಿರುವ ವ್ಯತ್ಯಾಸಗಳನ್ನು ಗ್ರಹಿಸಿ ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದು.

ಗ್ರಾಫ್ ೨೨ , ಒಕ್ಕಲೇಳುವಿಕೆಯಿಂದಾಗಿ ಆರ್ಥಿಕತೆಯ ಮೇಲಾಗಿರುವ ಪರಿಣಾಮಗಳು



ಕೋಷ್ಟಕ೩೩ ಮತ್ತು ಗ್ರಾಫ್ ೨೨ ರ ಅನ್ವಯ ಒಕ್ಕಲೇಳದೆ ಉದ್ಯಾನವನ ವ್ಯಾಪ್ತಿಯಲ್ಲಿಯೇ ಉಳಿದವರು ೪೬% ರಷ್ಟಿದ್ದಾರೆ. ಒಕ್ಕಲೆದ್ದು ಬೇರೆ ಸ್ಥಳಗಳಲ್ಲಿ ಹೊಸದಾಗಿ ಕೃಷಿ ಮಾಡುವಿಕೆಯಲ್ಲಿ ಬೆಳೆಗಳನ್ನು ಬೆಳೆಯಲು ಇತ್ತೀಚಿನ ದಿನಗಳಲ್ಲಿ ಗಿಡಗಳನ್ನು ಹೊಲದಲ್ಲಿ ಪೋಷಿಸಲಾಗಿದೆ [೨೦]. ಈ ಮೂಲಕ ಅವು ಸಣ್ಣ ಪ್ರಾಯದವುಗಳಾಗಿವೆ ಎಂದು ೧೭.೨% ರಷ್ಟು ಮಾಹಿತಿದಾರರಿದ್ದಾರೆ. ಹೊಸದಾಗಿ ನೆಲೆಯೂರಲು ಸ್ಥಳಗಳನ್ನು ಕೊಳ್ಳಲಾಗಿ ಪರಿಹಾರದಲ್ಲಿ ಬಂದಂತಹ ಹಣವನ್ನು ಕೃಷಿಗಾಗಿ ವಿನಿಯೋಗಿಸಲಾಗಿದೆ ಎಂದು ೧೦.೪% ರಷ್ಟು ಮಾಹಿತಿದಾರರಿದ್ದಾರೆ. ಪುನರ್ವಸತೀಕರಣ ಹೊಂದಿದ ಮೇಲೆ ಪ್ರಸ್ತುತವಿರುವ ಸ್ಥಳದಲ್ಲಿ ಹೆಚ್ಚಿನ ಪ್ರಮಾಣದ ಕೂಲಿಯು (ಅಡಿಕೆ ಗೊನೆ ಇಳಿಸುವಿಕೆ) ದೊರೆಯುತ್ತಿದ್ದು, ಆರ್ಥಿಕವಾಗಿ ಅಲ್ಪ ಚೇತರಿಕೆಯನ್ನು ಕಂಡಿದ್ದೇವೆ ಎಂದು ೮.೮% ರಷ್ಟು ಮಾಹಿತಿದಾರರಿದ್ದಾರೆ. ಪುನರ್ವಸತೀಕರಣ ಪರಿಹಾರವನ್ನು ಪಡೆದು ಆರು ತಿಂಗಳಾಗಿದ್ದು, ಹೊಸದಾಗಿ ಭೂಹಿಡುವಳಿಗಳನ್ನು ಕ್ರಯಕ್ಕೆ



ಕೊಳ್ಳಲಾಗಿದೆ ಈ ಮೂಲಕ ನಮ್ಮ ಮೂಲ ಆರ್ಥಿಕ ಸ್ಥಿತಿಯು ಕ್ಷೀಣಿಸಿದ್ದು, ಮುಂದಿನ ದಿನಮಾನದಲ್ಲಿ ಪ್ರಗತಿಯನ್ನು ಹೊಂದಲಿವೆ ಎಂದು ೬.೪% ರಷ್ಟು ಮಾಹಿತಿದಾರರಿದ್ದಾರೆ. ಮೊದಲಿನಿಂದಲೂ ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದ ನಾವು ಮೊದಲಿದ್ದ ಅರಣ್ಯ ಪ್ರದೇಶದಲ್ಲಿ ಸ್ಪರ್ಧೆಗಳಿಲ್ಲದೆ ವ್ಯವಹಾರವು ಮಂದಗತಿಯಲ್ಲಿ ಸಾಗುತ್ತಿತ್ತು. ಇಂದು ಅದೇ ವ್ಯಾಪರವು ಹೊಸ ಜಾಗದಲ್ಲಿ ಕೊಳ್ಳುವವರನ್ನು ಆಕರ್ಷಿಸಲು ಸ್ಪರ್ದೆಗೆ ಒಳಗಾಗುವ ಪ್ರಮೇಯವನ್ನು ಸೃಷ್ಟಿಸಿದೆ[೨೧] ಎಂದು ೪% ರಷ್ಟು ಮಾಹಿತಿದಾರರಿದ್ದಾರೆ. ಹೊಸ ಹೊಸ ಉದ್ಯೋಗಗಳು ಶಿಕ್ಷಣ ಪಡೆದವರಿಗೆ ಸಿಗುತ್ತಿದ್ದು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವಿಕೆಗೆ ಸಹಕಾರಿಯಾಗಿದೆ ಎಂದು[೨೨] ೩.೨% ರಷ್ಟು ಮಾಹಿತಿದಾರರಿದ್ದಾರೆ.

ಸ್ಥಳಾಂತರದ ರಾಜಕೀಯ ಪರಿಣಾಮಗಳು


ಸ್ಥಳಾಂತರದ ಭಾಗವಾಗಿ ಒಕ್ಕಲೇಳುವವರು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಹಲವು ಪರಿಣಾಮಗಳನ್ನು ಅನ್ಯ ಸ್ಥಳದಲ್ಲಿ ಎದುರಿಸಬೇಕಾದ ಅನಿವಾರ್ಯತೆ ಇರುತ್ತದೆ. ಕೆಲವು ಸಂದರ್ಭದಲ್ಲಿ ರಾಜಕೀಯವಾಗಿ ಹೊಸದಾಗಿ ನೆಲೆಯೂರಿದ ಕುಟುಂಬಗಳಿಗೆ ಹಕ್ಕುಗಳನ್ನು ಹೊಂದಲು ಮತ್ತು ಚಲಾಯಿಸಲು ಸ್ಥಳೀಯ ಜನರು ಆಸ್ಪದವನ್ನು ನೀಡುವುದಿಲ್ಲ. ಇಂತಹ ವೇಳೆಯಲ್ಲಿ ಅನ್ಯ ಸ್ಥಳಗಳಲ್ಲಿ ಮೊದಲಿನಂತೆ ಸಾಮಾಜಿಕವಾಗಿ ಒಗ್ಗಟ್ಟಿನಿಂದ ಬದುಕು ಕಟ್ಟಿಕೊಳ್ಳುವುದು ಕಷ್ಟಸಾಧ್ಯವಾಗುತ್ತದೆ. ಮೂಲ ಸ್ಥಳದಲ್ಲಿ ದೊರೆತಂತಹ ಹಕ್ಕು ಬಾಧ್ಯತೆಗಳು ಸ್ಥಳಾಂತರಗೊಂಡಂತಹ ಸ್ಥಳದಲ್ಲಿಯೂ ತಕ್ಷಣಕ್ಕೆ ದೊರೆಯಬೇಕು. ಅವುಗಳಲ್ಲಿ ಮತದಾನದ ಹಕ್ಕು, ಗುರುತಿನ ಚೀಟಿಗಳು, ಖಾಯಂ ವಾಸಸ್ಥಳ ಪ್ರಮಾಣ ಪತ್ರಗಳು ಮತ್ತು ಗ್ರಾಮಪಂಚಾಯತ್ ನಿಂದ ಗ್ರಾಮಸ್ಥರೆಂಬ ದೃಢೀಕೃತ ಪತ್ರಗಳು. ಈ ಪ್ರಕಾರದ ಎಲ್ಲಾ ಮೂಲ ದಾಖಲೆಗಳು ದೊರೆತಾಗ ಸ್ಥಳಾಂತರಗೊಂಡವರು ರಾಜಕೀಯವಾಗಿ ತಮ್ಮ ಹಕ್ಕುಗಳನ್ನು ಚಲಾಯಿಸಲು ಅನುವಾಗುತ್ತದೆ. ಕೋಷ್ಟಕ೩೪ ಮಾಹಿತಿದಾರರು ಒಕ್ಕಲೇಳುವಿಕೆಯಿಂದಾಗಿರುವ ರಾಜಕೀಯ ಪರಿಣಾಮದ ಕುರಿತು ವಿವರಿಸುವುದಾಗಿದೆ. ಅದರಂತೆ, ಒಕ್ಕಲೇಳದೆ ಮೂಲ ಸ್ಥಳದಲ್ಲಿಯೇ ಉಳಿದವರು ೪೬% ರಷ್ಟಿದ್ದಾರೆ. ಯಾವುದೇ ರೀತಿಯ ವ್ಯತ್ಯಾಸವಿಲ್ಲ ಎಲ್ಲವೂ ಸಮಾನವಾಗಿದೆ ಎಂದು ೨೯.೨% ರಷ್ಟು ಮಾಹಿತಿದಾರರಿದ್ದು ಅಧಿಕ ಪ್ರಮಾಣದವರಾಗಿದ್ದಾರೆ. ಸ್ಥಳಾಂತರಗೊಂಡ ನಂತರ ಮೂಲಭೂತ ಸೌಲಭ್ಯಗಳಿಗಾಗಿ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದು ೧೨.೪% ರಷ್ಟು ಮಾಹಿತಿದಾರರಿದ್ದಾರೆ. ಇತರೆ ಕಾರಣಗಳು ಎಂದು ೨.೪% ರಷ್ಟು ಮಾಹಿತಿದಾರರಿದ್ದಾರೆ.

ಕೋಷ್ಟಕ ೩೪

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರು ಒಕ್ಕಲೇಳುವಿಕೆಯಿಂದಾಗಿರುವ ರಾಜಕೀಯ ಪರಿಣಾಮಗಳು

ಕ್ರಸಂ	ರಾಜಕೀಯ ವ್ಯತ್ಯಾಸ	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ		
1	ವ್ಯತ್ಯಾಸವಿಲ್ಲ ಸಮಾನವಾಗಿದೆ	೧	೩೭	೩೫	೨೫	೯೮	೩೯.೨
2	ಸೌಲಭ್ಯಗಳಿಗಾಗಿ ಅರ್ಜಿ ಸಲ್ಲಿಸಿದೆ	೦	೧೬	೯	೬	೩೧	೧೨.೪
3	ಇತರೆ	೦	೧	೨	೩	೬	೨.೪
4	ಒಕ್ಕಲೇಳದವರು	೧೨	೩೭	೫೩	೧೩	೧೧೫	೪೬
	ಒಟ್ಟು	೧೩	೯೧	೯೯	೪೭	೨೫೦	೧೦೦

ಗ್ರಾಫ್ ೨೩ , ಒಕ್ಕಲೇಳುವಿಕೆಯಿಂದಾಗಿರುವ ರಾಜಕೀಯ ಪರಿಣಾಮಗಳು



ಗ್ರಾಫ್ ೨೩ ರ ಅನ್ವಯ ಒಕ್ಕಲೇಳದೆ ಉದ್ಯಾನವನದಲ್ಲಿ ಉಳಿದವರು ೪೬% ರಷ್ಟಿದ್ದಾರೆ. ಮೂಲ ಅರಣ್ಯ ಪ್ರದೇಶಗಳಿಂದ ಒಕ್ಕಲೆದ್ದು ಅನ್ಯ ಸ್ಥಳಗಳಲ್ಲಿ ಬಂದು ನೆಲೆಸಿದ್ದೇವೆ ಹಾಗೂ ನಮ್ಮ ತಾಲ್ಲೂಕಿನ ಪ್ರಾಂತ್ಯವೇ ಆಗಿರುವುದರಿಂದ ನಮಗೆ ಯಾವುದೇ ರೀತಿಯ ರಾಜಕೀಯದ ಹಕ್ಕುಗಳ ವ್ಯತ್ಯಾಸಗಳು ಉಂಟಾಗಿಲ್ಲ ಎಂದು ೩೯.೨% ರಷ್ಟು ಮಾಹಿತಿದಾರರು ಅಭಿಪ್ರಾಯ ಹೊಂದಿದ್ದಾರೆ. ಇತ್ತೀಚಿನ ದಿನಮಾನದಲ್ಲಿ ನಾವು ಸ್ಥಳಾಂತರ ಹೊಂದಿದ್ದೇವೆ ಮತ್ತು ಹಕ್ಕುಗಳನ್ನು ಪಡೆಯುವ ಸಲುವಾಗಿ ಹೊಸದಾಗಿ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದು ೧೨.೪% ರಷ್ಟು ಮಾಹಿತಿದಾರರಿದ್ದಾರೆ. ಇತರೆ ಕಾರಣಗಳೆಂದು ೨.೪% ರಷ್ಟು ಮಾಹಿತಿದಾರರಿದ್ದಾರೆ.



ಯೋಜನಾ ನಿರಾಶ್ರಿತರು

ಭಾರತೀಯ ಸಂದರ್ಭದಲ್ಲಿ ಯಾವುದೇ ಯೋಜನೆಗಳ ಮುಖಾಂತರ ಸ್ಥಳಾಂತರ ಹೊಂದಿದವರಿಗೆ 'ಪುರ್ನವ್ಯವಸ್ಥೆ ಮತ್ತು ಪುನರ್ವಸತೀಕರಣ' ಕಾಯ್ದೆ ಅಡಿ 'ಯೋಜನಾ ನಿರಾಶ್ರಿತರು' ಎಂದು ಗುರುತಿಸುವುದಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ಸರ್ಕಾರದ ಯಾವುದೇ ಹುದ್ದೆಗಳನ್ನು ಸೂಚನೆಗೊಳಿಸಿ ಅರ್ಜಿ ಆಹ್ವಾನಿಸಿದಾಗ ಯೋಜನಾ ನಿರಾಶ್ರಿತರಿಗಾಗಿ ಕೆಲವು ಹುದ್ದೆಗಳನ್ನು ಕಾಯ್ದಿರಿಸುವ ವಾಡಿಕೆ ಇದೆ. ಅದರ ಅನ್ವಯ ಯಾವ ಕುಟುಂಬವು ಯೋಜನೆಗಳ ಮುಖಾಂತರ ಸ್ಥಳಾಂತರಕ್ಕೆ ಒಳಗಾಗಿರುತ್ತದೆಯೋ ಅಂತಹ ಕುಟುಂಬದವರನ್ನು 'ಯೋಜನೆಗಳಿಂದ ನಿರಾಶ್ರಿತರಾದವರು' 'ಪ್ರಜೆಕ್ಟ್ ಡಿಸ್‌ಪ್ಲೇಸ್ಡ್ ಪರ್ಸನ್' ಎಂದು ಪ್ರಮಾಣ ಪತ್ರವನ್ನು ಪಡೆಯುವ ಹಕ್ಕುದಾರರಾಗಿರುತ್ತಾರೆ. ಈ ಆದೇಶದನ್ವಯ ಅವರು ಸರ್ಕಾರಿ ಕೆಲಸಗಳಲ್ಲಿ ಮೀಸಲಾತಿಯನ್ನು ಪಡೆಯಬಹುದು. ನಿಯಮದ ಅನುಸಾರ ಅಧಿಕಾರಿಗಳು ನಡೆದುಕೊಂಡರೆ, ಕುಟುಂಬದ ಮಕ್ಕಳಿಗೆ ಭವಿಷ್ಯದಲ್ಲಿ ಅನುಕೂಲವಾಗಲಿದೆ. ವಾಸ್ತವ ಸಂಗತಿ ಏನೆಂದರೆ, ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಭಾಗದಿಂದ ಒಕ್ಕಲೇಳುವವರಿಗೆ ಈವರೆಗೂ ಯೋಜನಾ ನಿರಾಶ್ರಿತರು ಎಂದು ಪರಿಗಣಿಸುವ ಯಾವ ಕಾರ್ಯವು ನಡೆದಿಲ್ಲ. ಯೋಜನೆಯಿಂದ ಒಕ್ಕಲೆದ್ದ ಸಮುದಾಯಗಳು ಸರ್ಕಾರಕ್ಕೂ ಅರ್ಜಿಯನ್ನು ಸಲ್ಲಿಸಿಲ್ಲ. ಕಾನೂನು ತಜ್ಞರ ಮುಖೇನ ಈ ವ್ಯವಸ್ಥೆಯನ್ನು ಪ್ರಶ್ನಿಸುವ ಎಲ್ಲಾ ಹಕ್ಕುಗಳು ಸಮುದಾಯಗಳಿಗಿವೆ. ಆದರೆ, ಬೆಕ್ಕಿನ ಕೊರಳಿಗೆ ಘಂಟೆ ಕಟ್ಟುವವರ್ಯಾರು ಎಂಬ ಪ್ರಶ್ನೆ ಉದ್ಭವಿಸಿದೆ. ಈ ವಿಷಯದ ಕುರಿತು ಕಾನೂನಾತ್ಮಕ ಚಿಂತನೆ ಅಗತ್ಯವಿದೆ. ಕೋಷ್ಟಕಳ.೨೫ ರಾಷ್ಟ್ರೀಯ ಉದ್ಯಾನವನದಿಂದ ಒಕ್ಕಲೆದ್ದವರನ್ನು ಯೋಜನಾ ನಿರಾಶ್ರತರೆಂದು ದಾಖಲಿಸದ ವಿವರವುಳ್ಳದ್ದಾಗಿದೆ. ಅದರನ್ವಯ ಈವರೆಗೂ ಒಕ್ಕಲೆದ್ದಿರುವ ಯಾವ ಕುಟುಂಬವನ್ನು ಯೋಜನಾ ನಿರಾಶ್ರಿತರೆಂದು ಗುರುತಿಸಿಲ್ಲವೆಂದು ಮಾಹಿತಿದಾರರ ಅಭಿಪ್ರಾಯವಾಗಿದೆ.


ಕೋಷ್ಟಕ ೩೫

ಒಕ್ಕಲೇಳಲ್ಪಟ್ಟವರನ್ನು ಯೋಜನಾ ನಿರಾಶ್ರಿತರೆಂದು ದಾಖಲಿಸದ ವಿವರ

ಕ್ರಸಂ	ಜನಾಂಗ	ಇಲ್ಲ	ಗೊತ್ತಿಲ್ಲ	ಒಟ್ಟು	ಶೇಕಡವಾರು
1	ಮರಾಠಿನಾಯ್ಕ	೦	೧	೧	೦.೪
2	ಮಲೆಕುಡಿಯ	೪೬	೮	೫೪	೨೧.೬
3	ಗೌಡಲು	೪೫	೧	೪೬	೧೮.೪
4	ಇತರೆ	೩೨	೨	೩೪	೧೩.೬
	ಒಟ್ಟು	೧೨೩	೧೨	೧೩೫	೫೪

ಕೋಷ್ಟಕ೩೫ ಮತ್ತು ಗ್ರಾಫ್ ೨೪ ರ ಅನ್ವಯ ಒಕ್ಕಲೇಳಲ್ಪಟ್ಟವರನ್ನು ಯೋಜನಾ ನಿರಾಶ್ರಿತರೆಂದು ದಾಖಲಿಸದ ವಿವರದ್ದಾಗಿದ್ದು, ಮರಾಠಿನಾಯ್ಕ ಸಮುದಾಯದವರು ಗೊತ್ತಿರುವುದಿಲ್ಲವೆಂದು ೦.೪% ರಷ್ಟಿದ್ದಾರೆ. ಮಲೆಕುಡಿಯ ಸಮುದಾಯದವರು ಇಲ್ಲವೆಂದು ೪೬, ಗೊತ್ತಿಲ್ಲವೆಂದು ೮ ಮಾಹಿತಿದಾರರುಒಟ್ಟು ೫೪ ಕುಟುಂಬಗಳು ೨೧.೬% ರಷ್ಟಿದ್ದಾರೆ. ಇತರೆ ಸಮುದಾಯದವರು ಇಲ್ಲವೆಂದು ೩೨, ಗೊತ್ತಿಲ್ಲವೆಂದು ೨ ಮಾಹಿತಿದಾರರುಒಟ್ಟು ೩೪ ಕುಟುಂಬಗಳು ೧೩.೬% ರಷ್ಟಿದ್ದಾರೆ. ಗೌಡಲು ಸಮುದಾಯದವರು ಇಲ್ಲವೆಂದು ೪೫, ಗೊತ್ತಿಲ್ಲವೆಂದು ೧ ಮಾಹಿತಿದಾರರುಒಟ್ಟು ೪೬ ಕುಟುಂಬಗಳು ೧೮.೪% ರಷ್ಟಿದ್ದಾರೆ. ಒಟ್ಟಾರೆಯಾಗಿ ಇಲ್ಲವೆಂದು ೧೨೩, ಗೊತ್ತಿಲ್ಲವೆಂದು ೧೨ ಮಾಹಿತಿದಾರರುಒಟ್ಟು ೧೩೫ ಕುಟುಂಬಗಳು ೫೪% ರಷ್ಟಿದ್ದಾರೆ.

ಗ್ರಾಫ್ ೨೪, ಯೋಜನಾ ನಿರಾಶ್ರಿತರೆಂದು ದಾಖಲಿಸದ ವಿವರ



ರಾಷ್ಟ್ರೀಯ ಉದ್ಯಾನವನದಿಂದ ಒಕ್ಕಲೆದ್ದಿರುವ ೫೪% ಕುಟುಂಬಗಳಲ್ಲಿ ಅಧ್ಯಯನಗೈದಿರುವ ಮರಾಠಿನಾಯ್ಕ, ಮಲೆಕುಡಿಯ, ಗೌಡಲು ಆದಿವಾಸಿ ಸಮುದಾಯಗಳನ್ನಾಗಲಿ, ಇತರೆ ಸಮುದಾಯಗಳನ್ನಾಗಲಿ ಯೋಜನಾ ನಿರಾಶ್ರಿತರೆಂದು ಗುರುತಿಸಿಲ್ಲ.



ಒಕ್ಕಲೇಳುವಿಕೆಗೆ ಎದುರಿಸಿದ ಸವಾಲುಗಳು

ಸ್ಥಳಾಂತರ ಪ್ರಕ್ರಿಯೆಗೆ ಒಳಗಾಗುವವರು ಮತ್ತು ಒಳಗಾದವರು ಮೂಲ ಸ್ಥಳಗಳನ್ನು ಬಿಟ್ಟು ಹೊರಬರುವ ಮುನ್ನ ಹಲವಾರು ಸಮಸ್ಯೆಗಳಲ್ಲಿ ಗೊಂದಲಗಳುಂಟಾಗಿ ಸಿಲುಕಿಕೊಳ್ಳುತ್ತಾರೆ. ಅವುಗಳಲ್ಲಿ ಕುಟುಂಬ ಕಲಹಗಳು, ಜಮೀನಿನ ಮೇಲಿನ ಪಹಣೆ ಮತ್ತು ಪಟ್ಟಾ ವ್ಯವಸ್ಥೆಗಳು, ಅರ್ಜಿ ಸಲ್ಲಿಕೆ, ಸಲ್ಲಿಕೆಯಾದ ಅರ್ಜಿ ಇಲಾಖಾವಾರು ಸಮೀಕ್ಷೆಗೊಳಪಡುವುದು ಮತ್ತು ಅಂತಿಮ ಹಂತವಾಗಿ ನಿಧಿ(ಹಣ) ಕೈಸೇರುವವರೆಗೂ ಒಂದಲ್ಲ ಒಂದು ದಾಖಲೆಗಳನ್ನು ಕಛೇರಿಗಳಿಂದ ಪಡೆದುಕೊಂಡು ಹೋಲಿಕೆ ಮಾಡಿಕೊಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಹಲವಾರು ಬಾರಿ ತಾಲ್ಲೂಕು, ಜಿಲ್ಲಾ, ಗ್ರಾಮ ಮಟ್ಟದ ಕಛೇರಿಗಳಿಗೆ ಸುತ್ತುವಿಕೆ ಅನಿವಾರ್ಯವಾಗಿರುತ್ತದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಿಂದ ಒಕ್ಕಲೆದ್ದವರು ಪರಿಸ್ಥಿತಿಗಳು, ಅತಿ ಸಣ್ಣ ಪ್ರಮಾಣದ ಹಾಗು ದೊಡ್ಡ ಪ್ರಮಾಣದ ರೈತರಾಗಲಿ ಜ್ಞಾನದ ಕೊರತೆಗಳಿದ್ದಾಗ ದಾಖಲೆಗಳನ್ನು ಕಛೇರಿಗಳಿಂದ ತರುವುದು ಕಷ್ಟ ಸಾಧ್ಯವೇ ಸರಿ. ಇಂತಹ ಹಂತದಲ್ಲಿ ಒಮ್ಮೆ ಒಕ್ಕಲೇಳಲು ಮನಸ್ಸು ಮಾಡಿದವರು, ದಾಖಲೆಗಳನ್ನು ಸೇರಿಸುವುದರ ಸಮಯದಲ್ಲಿ ಯಾಕಾದರೂ ಈ ತೀರ್ಮಾನ ಮಾಡಿದೆ ಎಂದೆನಿಸದೆ ಇರದು. ಕಾರಣ ಸಣ್ಣ ದಾಖಲೆಗಳಿಗೂ ನೂರಾರು ಕಿ,ಮೀ ಕ್ರಮಿಸುವುದು, ಅಲ್ಲಿ ಒಂದು ದಿನಕ್ಕೆ ಕೆಲಸಗಳೇನಾದರು ಆಗದಿದ್ದಲ್ಲಿ ಉಳಿದುಕೊಳ್ಳುವ ವ್ಯವಸ್ಥೆ. ಉಳಿದುಕೊಂಡರೆ ಮನೆ ಬಳಿ ಇರುವ ಕೆಲಸ ಕಾರ್ಯಗಳನ್ನು ನಿರ್ವಹಿಸುವವರ್‍ಯಾರು ಎಂಬೆಲ್ಲ ಪ್ರಶ್ನೆಗಳು ಎದುರಾಗುತ್ತವೆ. ಬಂಗಾರು ಪಲ್ಕೆ ಒಂದು ಚಿಕ್ಕ ಗ್ರಾಮ ಮಲೆಕುಡಿಯ ಸಮುದಾಯದವರೇ ಹೆಚ್ಚಾಗಿರುವ ಗ್ರಾಮ. ಈ ಗ್ರಾಮವು ಬೆಳ್ತಂಗಡಿ ತಾಲ್ಲೂಕಿಗೆ ಸೇರಿದ್ದಾಗಿದ್ದು, ಒಂದು ಸಣ್ಣ ಬೆಟ್ಟವನ್ನು ಹಾದು ಹೋದರೆ ಕೇವಲ ೩೨ ಕಿ.ಮೀ. ಆದರೆ ಈಗಿರುವ ವ್ಯವಸ್ಥೆಯಡಿ ಎಳನೀರು ಮಾರ್ಗವಾಗಿ ಸಂಸೆ ಮುಖಾಂತರ ಎಸ್. ಕೆ ಬಾರ್ಡರ್, ಮಾಳ ಮತ್ತು ಬೆಳ್ತಂಗಡಿ ಮಾರ್ಗವನ್ನು ಅನುಸರಿಸಬೇಕು. ಈ ಮಾರ್ಗವಾಗಿ ಹೋಗಬೇಕೆಂದರೆ, ಬೆಳಗ್ಗೆ ೫ ಗಂಟೆಗೆ ಬಿಟ್ಟರೆ ೯.೩೦ಕ್ಕೆ ಬೆಳ್ತಂಗಡಿಯನ್ನು ಸೇರುತ್ತಾರೆ. ಸರಿಸುಮಾರು ೧೩೦ ಕಿ.ಮೀ ಒಬ್ಬ ಅತೀ ಸಣ್ಣ ರೈತ ಕ್ರಮಿಸಬೇಕು. ಬಿಳಿಗಲ್ ಮೂಡಿಗೆರೆ ಗಡಿಯ ಅಂತ್ಯದ ಗ್ರಾಮ. ಈ ಗ್ರಾಮದಿಂದ ಮೂಡಿಗೆರೆ ತಲುಪಲು ಕನಿಷ್ಠ ೪ ತಾಸು ಪ್ರಯಾಣ ಅನಿವಾರ್ಯ. ಶೀರ್ಲು ಗ್ರಾಮದಿಂದ ಶೃಂಗೇರಿ ತಲುಪಲು ೫೭ ಕಿ.ಮೀ ಕ್ರಮಿಸಲೇಬೇಕು. ಇನ್ನುಳಿದಂತೆ ಜಿಲ್ಲಾ ಕೇಂದ್ರಗಳಿಗೆ ತಲುಪಲು ೧೭೦ ಕಿ.ಮೀ ಪ್ರಯಾಣವನ್ನು ಮಾಡಲೇಬೇಕಾದ ಪರಿಸ್ಥಿತಿ ಈ ವ್ಯಾಪ್ತಿಯ ಪ್ರಜೆಗಳಿಗಿದೆ. ಒಬ್ಬ ಸಣ್ಣ ರೈತ ತನಗೆ ಬರುವ ಆದಾಯದಲ್ಲಿ ಕುಟುಂಬ ಖರ್ಚು ವೆಚ್ಚಗಳನ್ನು ನಿಬಾಯಿಸಿಕೊಂಡು ದಾಖಲೆಗಳನ್ನು ಸಂಗ್ರಹಿಸಿ ಕಛೇರಿಗಳಿಗೆ ತಲುಪಿಸುವುದು ಎಂದರೆ, ಕನಿಷ್ಠ ೨ ವರ್ಷ ಕಾಲವನ್ನು ವ್ಯಯಿಸಲೇಬೇಕಾದ ಸ್ಥಿತಿ ಈ ಭಾಗದಲ್ಲಿ ಇದೆ.

ಎಲ್ಲಾ ಮೂಲ ದಾಖಲೆಗಳನ್ನು ಸೇರಿಸಿ ಸ್ಥಳಾಂತರ ಹೊಂದಲು ಅರ್ಜಿ ಸಲ್ಲಿಸಿದರೆ, ಇಲಾಖಾ ವತಿಯಿಂದ ಕನಿಷ್ಠ ಒಂದುವರೆ ವರ್ಷದ ಪ್ರಕ್ರಿಯೆಗಳು ನಡೆಯುತ್ತವೆ. ಅರ್ಜಿಯನ್ನು ಅರಣ್ಯ ಇಲಾಖೆಗೆ ನೀಡಿದರೆ, ಅವರು ತಾಲ್ಲೂಕು ಕಛೇರಿಯ ಕಂದಾಯ ನಿರೀಕ್ಷಕರಿಗೆ ಹಾಗೂ ಮೋಜಣಿ ಅಧಿಕಾರಿಗಳಿಗೆ ಸೂಚಿಸುತ್ತಾರೆ. ಅಲ್ಲಿಂದ ಕೃಷಿ, ತೋಟಗಾರಿಕೆ, ಪಂಚಾಯತ್ ಇಲಾಖೆಗಳು ಮತ್ತು ಇತರ ಇಲಾಖೆಗಳ ಅವಗಹನೆಗೆ ಅರ್ಜಿಗಳನ್ನು ರವಾನಿಸಿ ಮೋಜಣಿ ಕಾರ್ಯವನ್ನು ನಡೆಸುತ್ತಾರೆ. ಮೋಜಣಿ ಕಾರ್ಯಗಳು ಒಮ್ಮೆ ನಡೆದರೆ ಸಾಕೆನಿಸುತ್ತದೆ. ಆದರೆ, ಎರಡು ಬಾರಿ ಮೋಜಣಿ ಕಾರ್ಯವನ್ನು ನಡೆಸುವಾಗ ಮೊದಲಿನ ಹಂತದಲ್ಲಿದ್ದ ಬೆಳೆಗಳ ಪ್ರಮಾಣ ಕಡಿಮೆ ಪ್ರಮಾಣವಾಗಿ ಇಳಿಮುಖವಾಗುತ್ತದೆ. ಈ ಆಧಾರದ ಮೇಲೆ ಅಂತಿಮ ಮೌಲ್ಯವು ಏರ್ಪಟ್ಟು ಜಿಲ್ಲಾಧಿಕಾರಿಗಳ ಸಹಿಯೊಂದಿಗೆ ಚೆಕ್ ವಿತರಿಸಲಾಗುತ್ತದೆ. ಈ ಹಂತದೊಳಗೆ ಮನವಿ ಸಲ್ಲಿಸಿದವರು ಸ್ಥಳಾಂತರಗೊಳ್ಳುವಿಕೆಗೆ ಅಣಿಯಾಗಿ ಬೇರೊಂದು ಸ್ಥಳಗಳನ್ನು ನೋಡಿಕೊಂಡಿರಬೇಕು. ಇಲ್ಲವಾದಲ್ಲಿ ಸ್ಥಳಗಳನ್ನು ಖಾಲಿ ಮಾಡುವುದಕ್ಕೆ ಒತ್ತಡಗಳು ಇಲಾಖಾವತಿಯಿಂದ ಎದುರಾಗುವವು. ಒಮ್ಮೆ ಮನವಿದಾರ ಚೆಕ್ ಪಡೆದು ಸ್ಥಳಾಂತರ ಹೊಂದಿದರೆ, ಮರಳಿ ಅದೇ ಪ್ರದೇಶಕ್ಕೆ ಬರುವ ಪ್ರಮೇಯವೇ ಇರುವುದಿಲ್ಲ. ಭೂ ಸ್ವಾಧೀನ ಪ್ರಕ್ರಿಯೆಗಳಿಗೆ ಒಳಪಟ್ಟು ಅರಣ್ಯ ಇಲಾಖೆ ಸುಪರ್ದಿಗೆ ಸೇರಿರುತ್ತದೆ. ಅರಣ್ಯ ಇಲಾಖೆಯವರು ಪಡೆದ ಜಾಗಗಳನ್ನು ವಾಣಿಜ್ಯ ಬೆಳೆಗಳ ಮರಗಳಿದ್ದರೆ ಅವುಗಳನ್ನು ಕಡಿಸಿ ಹಾಕುತ್ತಾರೆ ಮತ್ತು ಎಂದಿನಂತೆ ಕಾಡಾಗಿ ಆ ಜಾಗವು ಪರಿವರ್ತಿತವಾಗುತ್ತವೆ. ಇನ್ನು ಸ್ಥಳಾಂತರಗೊಂಡು ನೆಲೆಸುವ ಪ್ರದೇಶಗಳಲ್ಲಿ ಜಮೀನುಗಳು ಪಟ್ಟಗಳಾಗಿ ಪರಿವರ್ತಿತವಾಗಿವೆಯೇ, ಬಗರ್ ಹುಕುಂ ಸಾಗುವಳಿಯೇ, ಜಮೀನುಗಳ ಮೇಲೆ ಸಾಲ ಪಡೆದಿದ್ದಾರೆಯೇ, ತೋಟ ಮಾಡಲು ಯೋಗ್ಯವಾದ ಭೂಮಿಯೇ ಇಂತಹ ಹಲವಾರು ಅಂಶಗಳನ್ನು ಗಮನಿಸಿ ಕ್ರಯಕ್ಕೆ ತೆಗೆದುಕೊಳ್ಳಬೇಕು. ಇಲಾಖೆಯಿಂದ ಪುನರ್ವಸತೀಕರಣ ಪರಿಹಾರ ಬರುವುದರೊಳಗಾಗಿ ಈ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕಾದುದು ಪ್ರತಿಯೊಬ್ಬ ಒಕ್ಕಲೇಲುವ ಕುಟುಂಬದವರ ಕರ್ತವ್ಯವಾಗಿದೆ ಹಾಗೂ ಜವಾಬ್ದಾರಿಯೂ ಆಗಿದೆ.


ಕೋಷ್ಟಕ ೩೬

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಮಾಹಿತಿದಾರರು ಒಕ್ಕಲೇಳುವಿಕೆಗೆ ಎದುರಿಸಿದ ಸವಾಲುಗಳು

ಕ್ರಸಂ	ಎದುರಾದ ಸಮಸ್ಯೆಗಳು	ಸಮುದಾಯಗಳು				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಗೌಡಲು	ಇತರೆ		
1	ಬೆಳೆಗಳಿಗೆ ಕಾಡು ಪ್ರಾಣಿಗಳ ಹಾವಳಿ	೦	೧೫	೬	೬	೨೭	೧೦.೮
2	ಜಮೀನು ಸಮೀಕ್ಷಾ ಕಾರ್ಯ ವಿಳಂಬ	೦	೭	೯	೫	೨೧	೮.೪
3	ಜಂಟಿ ಖಾತೆ ಸಮಸ್ಯೆ	೦	೬	೨	೪	೧೨	೪.೮
4	ಆರ್.ಟಿ.ಸಿ ಸಮಸ್ಯೆ	೧	೯	೯	೭	೨೬	೧೦.೪
5	ಜಮೀನು ಒತ್ತುವರಿ ಸಮಸ್ಯೆ	೦	೩	೫	೦	೮	೩.೨
6	ಹಣ ಸಂದಾಯ ವಿಳಂಬ	೦	೬	೭	೬	೧೯	೭.೬
7	ಕಛೇರಿಗಳಿಗೆ ಸುತ್ತುವಿಕೆ	೦	೫	೩	೬	೧೪	೫.೬
8	ಇತರೆ	೦	೩	೫	೦	೮	೩.೨
9	ಒಕ್ಕಲೇಳದವರು	೧೨	೩೭	೫೩	೧೩	೧೧೫	೪೬
	ಒಟ್ಟು	೧೩	೯೧	೯೯	೪೭	೨೫೦	೧೦೦

ಕೋಷ್ಟಕ೩೬ ಮತ್ತು ಗ್ರಾಫ್ ೨೫ ರ ಅನ್ವಯ ಮಾಹಿತಿದಾರರು ಒಕ್ಕಲೇಳುವ ಸಂದರ್ಭದಲ್ಲಿ ಎದುರಾದ ಸವಾಲುಗಳನ್ನು ಕುರಿತು ವಿವರಿಸುವುದಾಗಿದೆ. ಕೋಷ್ಟಕದನ್ವಯ ಬೆಳೆಗಳಿಗೆ ಕಾಡುಪ್ರಾಣಿಗಳ ಹಾವಳಿಗಳಾಗಿದ್ದು, ಅವುಗಳನ್ನು ನಿಯಂತ್ರಸಲು ಹಲವಾರು ಕ್ರಮಗಳನ್ನು ಕೈಗೊಂಡರು ಸಾಧ್ಯವಾಗಲಿಲ್ಲ. ನೆರೆಹೊರೆಯಲ್ಲಿದ್ದ ಕುಟುಂಬಗಳು ಸ್ಥಳಗಳನ್ನು ತೊರೆದು ಒಕ್ಕಲೆದ್ದ ನಂತರ ಪ್ರಾಣಿಗಳು ನೇರವಾಗಿ ಜಮೀನುಗಳಿಗೆ ಹಾವಳಿಯನ್ನು ಇಡುತ್ತಿದ್ದವು. ಅವುಗಳನ್ನು ಎದುರಿಸಲು ಸಿಡಿಮದ್ದು ಸಿಡಿಸುವ ಇಲ್ಲವೆ ವಿದ್ಯುತ್ ಶಕ್ತಿ ಬಳಸಿಕೊಂಡು ಎದುರಿಸುವ ಪ್ರಮೇಯವಿರಲಿಲ್ಲ. ಕಾರಣ ಅರಣ್ಯ ಇಲಾಖೆಯಿಂದ ಈ ಕ್ರಿಯೆಗಳಿಗೆ ಅನುಮತಿ ಇರಲಿಲ್ಲ. ಇದರೊಂದಿಗೆ ನೆರೆಹೊರೆಯವರು ಸಂಪೂರ್ಣವಗಿ ಒಕ್ಕಲೆದ್ದ ಮೇಲೆ ನಾವು ಒಬ್ಬರೇ ಆ ಸ್ಥಳದಲ್ಲಿರುವುದು ಕಷ್ಟ ಸಾಧ್ಯವಾಗುತ್ತಿತ್ತು. ಆದ್ದರಿಂದ ಮೂಲ ಸ್ಥಳದಿಂದ ಒಕ್ಕಲೆದ್ದೆವು ಎಂದು ೧೦.೮% ಮಾಹಿತಿದಾರರಿದ್ದಾರೆ. ಅರಣ್ಯ ಪ್ರದೇಶದವರಾದ ನಾವು ಮೊದಲಿನಿಂದಲೂ ಬಗರ್

ಗ್ರಾಫ್ ೨೫ ಒಕ್ಕಲೇಳುವಿಕೆಗೆ ಎದುರಿಸಿದ ಸವಾಲುಗಳು



ಹುಕುಂ ಸಾಗುವಳಿ ಮಾಡಿಕೊಂಡು ಬಂದಿರುವವರು. ಪಿರ್ತಾರ್ಜಿತವಾಗಿ ನಮಗೆ ಅಲ್ಪ ಪ್ರಮಾಣದ ಭೂ ಹಿಡುವಳಿ ದೊರೆತಿತ್ತಾದರೂ, ಅವುಗಳಿಗೆ ಹೊಂದಿಕೊಂಡಂತೆ ಅರಣ್ಯದ ಭೂಮಿಯನ್ನು ಸಾಗುವಳಿಗೊಳಿಸಲಾಗಿತ್ತು. ಸಾಗುವಳಿಗೆ ಬಳಸಿಕೊಂಡ ಅರಣ್ಯ ಭೂಮಿಯನ್ನು ಸಕ್ರಮದಡಿ ಸೇರಿಸಲು ಹಲವಾರು ಬಾರಿ ಕಛೇರಿಗಳಿಗೆ ಅಲೆಯಬೇಕಾಗಿತ್ತು. ಇದರೊಂದಿಗೆ ಪಹಣಿಗಳಲ್ಲಿ ಈ ಭೂಮಿಯನ್ನು ಸೇರಿಸುವುದು ಬಹಳ ಕಷ್ಟದಾಯಕವಾದ ಸವಾಲಾಗಿ ಸಮಸ್ಯೆಯಾಗಿ ಮಾರ್ಪಟ್ಟಿತ್ತು ಎಂದು ೧೦.೪% ಮಾಹಿತಿದಾರರಿದ್ದಾರೆ. ಒಕ್ಕಲೇಳುವಿಕೆಗೆ ಅರ್ಜಿಯನ್ನು ದಾಖಲೆ ಸಹಿತವಾಗಿ ಇಲಾಖೆಗಳಿಗೆ ನೀಡಲಾಗಿತ್ತು ಆದರೆ, ದಾಖಲೆಗಳನ್ನು ಆಧರಿಸಿ ಜಮೀನುಗಳನ್ನು ಮೋಜಣಿ ಮಾಡುವ ಕಾರ್ಯವು ಸಾಕಷ್ಟು ವಿಳಂಬತೆಯನ್ನು ಹೊಂದಿತು. ಇದರ ಪರಿಣಾಮವಾಗಿ ವಾರ್ಷಿಕವಾಗಿ ಬೆಳೆದ ಬೆಳೆಗಳ ಮೇಲೆ ಪ್ರಾಣಿಗಳ ಹಾವಳಿಯಿಂದ ಇಳುವರಿಯೂ ಕಡಿಮೆಗೊಂಡಿತು ಮತ್ತು ಮೋಜಣಿ ಕಾರ್ಯ ಮಾಡುವಾಗ



ನೈಜ ಮೌಲ್ಯಮಾಪನದಲ್ಲಿ ಮೌಲ್ಯಮಾಪನದ ಪ್ರಮಾಣ ಕಡಿಮೆಗೊಂಡಿತು ಎಂದು ೮.೪% ಮಾಹಿತಿದಾರರಿದ್ದಾರೆ. ದೇವರು ವರ ನೀಡಿದರು ಪೂಜಾರಿ ವರ ನೀಡಲಿಲ್ಲ ಎಂಬಂತೆ, ಮೋಜಣಿ ಕಾರ್ಯಗಳು ಮುಗಿದು ಚೆಕ್ ವಿತರಣೆಯ ಅವಧಿ ಬಂದರೂ ಜಿಲ್ಲಾಧಿಕಾರಿಗಳು ಚೆಕ್‌ಗಳನ್ನು ತಡೆ ಹಿಡಿದು ಮರು ಪರಿಶೀಲನೆಯಲ್ಲಿ ಸಾಕಷ್ಟು ವಿಳಂಬ ಮಾಡಿದರು, ಕೆಲವು ವೇಳೆ ಅಧಿಕಾರಿಗಳು ಮರು ಪರಿಶೀಲನೆ ಮಾಡುವ ಕ್ರಿಯೆಗಳಿಂದ ಚೆಕ್ ವಿತರಣೆಯು ವಿಳಂಬವಾಯಿತು ಎಂದು ೭.೬% ಮಾಹಿತಿದಾರರಿದ್ದಾರೆ. ಮೂಲ ದಾಖಲೆಗಳಾದ ಆರ್.ಟಿ.ಸಿ, ವಾಸಸ್ಥಳ ದೃಢೀಕರಣ ಪತ್ರ, ಪಟ್ಟಾ, ಕೃಷಿ ಬೆಳೆಗಳ ಮೌಲ್ಯಮಾಪನ, ತೋಟಗಾರಿಕ ಬೆಳೆಗಳ ಮೌಲ್ಯಮಾಪನ, ಭೌತಿಕ ಸ್ವತ್ತುಗಳ ಮೌಲ್ಯಮಾಪನ, ಅರಣ್ಯ ಇಲಾಖೆಯ ಮೌಲ್ಯಮಾಲನ ಎಂದು ವಿವಿಧ ಕಛೇರಿಗಳಿಗೆ ದಾಖಲೆಗಳನ್ನು ಹೊಂದಿಸಲು ಸುತ್ತುವಿಕೆ ಕಾರ್ಯವು ಹೆಚ್ಚು ಸಮಯವನ್ನು ತೆಗೆದುಕೊಂಡಿತು ಎಂದು ೫.೬% ರಷ್ಟು ಮಾಹಿತಿದಾರರಿದ್ದಾರೆ. ಎಲ್ಲಾ ಮೂಲ ದಾಖಲೆಗಳನ್ನು ಹೊಂದಿಸಿದ ಮೇಲೆ ಕೊನೆಯ ಹಂತದಲ್ಲಿ ಆರ್.ಟಿ.ಸಿ ಅನ್ವಯ ಜಂಟಿ ಖಾತೆಗೆ ವರ್ಗಾವಣೆಗೊಂಡಿದ್ದ ದಾಖಲೆಗಳಿಂದ ಕುಟುಂಬದ ಅಣ್ಣತಮ್ಮಂದಿರು ಸಹಿ ಮಾಡಬೇಕಾದ ಸಂದರ್ಭಗಳು ಎದುರಾಗಿದ್ದರಿಂದ ಹಣ ಸಂದಾಯವು ವಿಳಂಬವಾಗಿ ಪರಿಣಮಿಸಿತು ಎಂದು ೪.೮% ರಷ್ಟು ಮಾಹಿತಿದಾರರಿದ್ದಾರೆ. ಭೂಹಿಡುವಳಿ ಸಾಗುವಳಿ ಮಾಡುವಾಗ ಪಕ್ಕದ ಅಲ್ಪ ಪ್ರಮಾಣದ ಅರಣ್ಯ ಭೂಮಿಯನ್ನು ಸಾಗುವಳಿ ಮಾಡಲಾಗಿತ್ತು. ಈ ಸಾಗುವಳಿಯು ಒತ್ತುವರಿಯಾಗಿ ಪರಿಣಮಿಸಿತ್ತು. ಒತ್ತುವರಿಯಾದ ಸಾಗುವಳಿ ಜಮೀನನ್ನು ಅರಣ್ಯ ಹಕ್ಕು ದಾಖಲೆಗೊಳಿಸಲು ಸಾಹಸ ಪಡಬೇಕಾದ ಅನಿವಾರ್ಯತೆ ಎದುರಾಯಿತು ಎಂದು ೩.೨% ರಷ್ಟು ಮಾಹಿತಿದಾರರಿದ್ದಾರೆ. ಇತರೆ ಸಮಸ್ಯೆಗಳು ಎಂದು ೩.೨% ರಷ್ಟು ಮಾಹಿತಿದಾರರಿದ್ದಾರೆ. ಒಟ್ಟಿನಲ್ಲಿ ಒಕ್ಕಲೇಳುವಿಕೆಯು ಸಾಕಷ್ಟು ಏರುಪೇರುಗಳ ಹಾದಿಯಾಗಿ ಪರಿಣಮಿಸುವುದರೊಂದಿಗೆ ಕಾಲಗಳನ್ನು ಕಳೆಯುವ ಪ್ರಮೇಯದ ಕಾರ್ಯವಾಗಿ ಪರಿಣಮಿಸಿದೆ ಎಂಬುದು ಕುದುರೆಮುಖ ರಾಷ್ಟ್ರೀಯ ಉದ್ಯಾನವನದಿಂದ ಒಕ್ಕಲೆದ್ದ ಸಮುದಾಯಗಳ ಮಾಹಿತಿದಾರರ ಅಭಿಪ್ರಾಯವಾಗಿದೆ.

ಒಕ್ಕಲೆದ್ದವರ ಸಲಹೆಗಳು

ರಾಷ್ಟ್ರೀಯ ಉದ್ಯಾನವನದಿಂದ ಒಕ್ಕಲೆದ್ದಂತಹ ಸಾಮಾಜಿಕ ಸಮುದಾಯದವರು ಅನ್ಯ ಸ್ಥಳಗಳಲ್ಲಿ ಈಗಾಗಲೆ ನೆಲೆಸಿದ್ದಾರೆ. ಸ್ಥಳಾಂತರ ಮತ್ತು ಪುನರ್ವಸತೀಕರಣ ಪರಿಹಾರಗಳ ಪ್ರಕ್ರಿಯೆಗೆ ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳನ್ನು ಎದುರಿಸಿದ್ದಾರೆ ಮತ್ತು ಇಂದಿಗೂ ಎದುರಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಸಮುದಾಯದವರು ತಮಗಾಗಿರುವ ಅನುಭವಗಳನ್ನು ಹಂಚಿಕೊಳ್ಳುತ್ತಾ ಸರ್ಕಾರದಿಂದ ಕೆಲವು ನಿರೀಕ್ಷೆಗಳನ್ನು ಮತ್ತು ಸರ್ಕಾರಕ್ಕೆ ಕೆಲವು ಸಲಹೆಗಳನ್ನು ನೀಡಿದ್ದಾರೆ. ಮೂಲ ಸ್ಥಳಗಳಿಂದ ಒಕ್ಕಲೇಳುವ ಸಂದರ್ಭವು ಕುಟುಂಬ ಹಾಗೂ ಸಮುದಾಯದ ಸದಸ್ಯರಿಗೆ ದುಃಖದ ಸನ್ನಿವೇಶವಾಗಿರುತ್ತದೆ. ಈ ಕ್ರಿಯೆಯ ಮುಖಾಂತರ ಸಮುದಾಯಗಳ ಸಂಬಂಧಗಳನ್ನು ಭೌತಿಕವಾಗಿ ಕಳೆದುಕೊಳ್ಳುವಂತಹ ಸಂದರ್ಭಗಳಾಗಿರುತ್ತವೆ. ಮುಂದಿನ ದಿನಮಾನಗಳ ಕುರಿತಾಗಿ ಹೆಚ್ಚು ಆಲೋಚನೆಗಿಂತ ಹಿಂದೆ ಸಮುದಾಯದಲ್ಲಿ ಹೇಗಿದ್ದೆವು ಎಂಬ ಸನ್ನಿವೇಶಗಳೇ ಹೆಚ್ಚು ನೆನಪಿನಲ್ಲಿ ಉಳಿಯುತ್ತವೆ. ಒಮ್ಮೆ ಸ್ಥಳಾಂತರ ಪ್ರಕ್ರಿಯೆಗೆ ಒಳಗಾದ ಮೇಲೆ


ಆ ಕುಟುಂಬದವರು ವಾಪಾಸು ಬರುವಂತಿಲ್ಲ. ಏಕೆಂದರೆ, ಆ ಸ್ಥಳದ ಸಂಪೂರ್ಣ ಹಕ್ಕು ಸಂಬಂಧಿಸಿದ ಇಲಾಖೆಯ ಸುಪರ್ದಿಗೆ ಒಳಪಟ್ಟಿರುತ್ತದೆ. ಇಂದಿನ ದಿನಮಾನಗಳಲ್ಲಿ ಉದ್ಯಾನವನದಿಂದ ಒಕ್ಕಲೆದ್ದ ಕುಟುಂಬಗಳು ನೆಲೆಯನ್ನು ಕಂಡಿದ್ದರೂ ಸಾಕಷ್ಟು ಸಮಸ್ಯೆಗಳ ನಡುವೆ ತಮ್ಮ ಜೀವನವನ್ನು ನಡೆಸುತ್ತಿವೆ. ಅದು ಸರ್ಕಾರದ ಮುಖೇನ ಪುನರ್ವಸತೀಕರಣಗೊಂಡ ಕುಟುಂಬವಾಗಲಿ ಇಲ್ಲವೆ ಎನ್.ಜಿ.ಓ ಮುಖಾಂತರ ಸ್ಥಳಾಂತರಗೊಂಡ ಕುಟುಂಬಗಳಾಗಲಿ ಸರ್ಕಾರದ ಶಾಸನದ ಎದುರು ಎರಡು ಒಂದೆ. ಎನ್.ಜಿ.ಓ ಮುಖಾಂತರ ಸ್ಥಳಾಂತರಗೊಂಡಿರುವ ಕುಟುಂಬದವರು ಅತೀ ಕಡಿಮೆ ಮೌಲ್ಯಕ್ಕೆ ಸ್ವ ಇಚ್ಛೆ ಮೇರೆಗೆ ಸ್ಥಳಾಂತರವನ್ನು ಹೊಂದಿದ್ದಾರೆ. ಇಂದು ಅವರು ಮಧ್ಯಸ್ಥಿಕೆಗಾರರ ಮುಖಾಂತರ ಪಡೆದ ಭೂಹಿಡುವಳಿಗಳು ಕಂದಾಯ ನಮೂನೆ ೫೩ ರ ಅಡಿಯಲ್ಲಿ ಬಗರ್‌ಹುಕುಂ ಸಾಗುವಳಿ ಎಂದು ನಮೂದಿತವಾಗುತ್ತಿವೆ. ಸಾಲ ತೆಗೆದು ಕಷ್ಟಗಳನ್ನು ಹಾಗೂ ಮಕ್ಕಳ ಶಿಕ್ಷಣವನ್ನು ಮುಂದುವರೆಸೋಣ ಎಂದರೆ, ಆರ್.ಟಿ.ಸಿ ಅನ್ವಯ ಸಾಲಕ್ಕೆ ಜಮೀನು ಒಳಪಡುತ್ತಿಲ್ಲ. ಇರುವ ಮನೆ ಅದೇ ಜಮೀನಿನ ವ್ಯಾಪ್ತಿಯಲ್ಲಿಯೇ ಬಂದರು ಅದನ್ನು ನೊಂದಾವಣೆ ಮಾಡಿಸಲು ಬಗರ್ ಹುಕುಂ ಸಾಗುವಳಿ ಜಮೀನು ಎಂದು ಬರುವುದರಿಂದ ನೊಂದಾವಣೆ ಇಲಾಖೆಯವರು ಅನುಮತಿ ನೀಡುತ್ತಿಲ್ಲ. ಈ ಪರಿಸ್ಥಿತಿ ನಮಗೆ ಅತ್ತ ಕಡೆಯೂ ಇಲ್ಲದ ಇತ್ತ ಕಡೆಯೂ ಇಲ್ಲದ ಬೋಳುಗೊಂಡ ಆರ್ಥಿಕತೆಯಾಗಿ ಪರಿಣಮಿಸುತ್ತಿವೆ[೨೩]. ಉನ್ನತ ಶಿಕ್ಷಣ ಕಲಿತ (ಬಿ.ಕಾಂ) ಮಕ್ಕಳು ಹೊರ ಭಾಗದಲ್ಲಿ ವೃತ್ತಿಗಳನ್ನು ಅರಸಿಕೊಂಡು ಹೋದರೆ ನಕ್ಸಲ್ ಪೀಡಿತ ಪ್ರದೇಶದವರೆಂದು ಮುಲಾಜಿಲ್ಲದೆ ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ. ಅಷ್ಟು ವರ್ಷ ಶ್ರಮವಹಿಸಿ ಕಲಿತ ವಿದ್ಯೆಗೆ ಸರಿಯಾದ ಕೆಲಸಗಳು ಸಿಗದಿದ್ದಾಗ ಓದಿ ಪ್ರಯೋಜನವಾದರೂ ಏನು? ಕಳೆದ ವರ್ಷ ಸರ್ಕಾರದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ನೇಮಕಾತಿಯನ್ನು ಕರೆದಾಗ ಮಕ್ಕಳು ಅರ್ಜಿಯನ್ನು ಸಲ್ಲಿಸಿದ್ದವು. ಲಿಖಿತ ಪರೀಕ್ಷೆಯನ್ನು ಪಾಸು ಮಾಡಿದರು. ಆದರೆ. ಆಯ್ಕೆ ಮಾತ್ರ ಆಗಲಿಲ್ಲ. ಕಾರಣ ಸರ್ಕಾರವು ಯೋಜನಾ ನಿರಾಶ್ರಿತರು ಎಂದು ಪ್ರಮಾಣ ಪತ್ರವನ್ನು ನೀಡಿದ್ದರೆ ನಮ್ಮ ಮಗ ಇಂದು ಸರ್ಕಾರ ಸೇವೆಯಲ್ಲಿರುತ್ತಿದ್ದ. ಮನೆಯ ಆರ್ಥಿಕ ಪರಿಸ್ಥಿತಿಗೆ ಊರುಗೋಲಾಗಿ ಪರಿಣಮಿಸುತ್ತಿದ್ದ. ಆದರೆ, ಈ ಪ್ರಮಾಣ ಪತ್ರ ಇಲ್ಲದುದರ ಪರಿಣಾಮವಾಗಿ ಸರ್ಕಾರದ ಸೇವೆಯಿಂದ ವಂಚಿತನಾದ[೨೪]. ಒಕ್ಕಲೇಳುವುದಾಗಿ ಅರ್ಜಿ ಸಲ್ಲಿಸಿದ ಮೇಲೆ ಒಂದು ಬಾರಿ ಮಾತ್ರ ಸಮೀಕ್ಷೆಯನ್ನು ಮಾಡಬೇಕು. ಎರಡು ಬಾರಿ ಸಮೀಕ್ಷೆಗಳನ್ನು ಮಾಡಿದಾಗ ಮೊದಲಿದ್ದ ಬೆಳೆಗಳು ಎರಡನೇ ಹಂತದ ಸಮೀಕ್ಷೆ ವೇಳೆಗೆ ಕಡಿಮೆ ಪ್ರಮಾಣವನ್ನು ಒಳಗೊಂಡಿರುತ್ತದೆ. ಇದರೊಂದಿಗೆ ಒಕ್ಕಲೇಳುವ ಉದ್ದೇಶದಲ್ಲಿ ಬೆಳೆಗಳಿಗೆ ಯಾವುದೇ ಬಂದೋಬಸ್ತ್ ವ್ಯವಸ್ಥೆಯನ್ನು ಮಾಡಿರುವುದಿಲ್ಲ. ಪರಿಣಾಮ ಹಲವು ಕಾಡು ಪ್ರಾಣಿಗಳು ಬೆಳೆಗಳ ಮೇಲೆ ದಾಳಿ ಮಾಡಿ ನಾಶಗೊಳಿಸಿರುತ್ತವೆ. ಆದ್ದರಿಂದ ಅಂತಹ ಸಂದರ್ಭದಲ್ಲಿ ಎರಡನೇ ಬಾರಿ ಸಮೀಕ್ಷೆಗಳನ್ನು ಕೈಗೊಂಡರೆ, ನೈಜವಾದ ಮೌಲ್ಯಮಾಪನಗಳು ಏರು ಪೇರಾಗುವುದು. ಇದರೊಂದಿಗೆ ದೊರೆಯಬೇಕಿದ್ದ ಹಣದ ಮೊತ್ತ ಕಡಿಮೆಯಾಗಿ, ಹೊರ ಪ್ರಪಂಚದಲ್ಲಿ ಸ್ವತ್ತುಗಳನ್ನು ಕ್ರಯಕ್ಕೆ ಪಡೆದುಕೊಂಡು ಜೀವನ ನಡೆಸುವುದು ಕಷ್ಟಸಾಧ್ಯವಾಗುತ್ತದೆ[೨೫]. ಈ ಮೇಲೆ ಉಲ್ಲೇಖಿಸಿರುವ ಎಲ್ಲಾ ಪ್ರಸಂಗಗಳು ಕ್ಷೇತ್ರಾಧ್ಯಯನದಲ್ಲಿ ಕಂಡುಕೊಂಡ ಸತ್ಯವಾಗಿವೆ.

ಕೋಷ್ಟಕ ೩.೭

ಅಧ್ಯಯನಕ್ಕೊಳಪಟ್ಟ ಸಮುದಾಯಗಳ ಒಕ್ಕಲೆದ್ದವರ ಸಲಹೆಗಳು

ಕ್ರಸಂ	ಸರ್ಕಾರಕ್ಕೆ ಸಲಹೆಗಳು	ಜನಾಂಗ				ಒಟ್ಟು	ಶೇಕಡವಾರು
		ಮರಾಠಿನಾಯ್ಕ	ಮಲೆಕುಡಿಯ	ಇತರೆ	ಗೌಡಲು		
1	ವಿಶೇಷ ಸಾಲ ಯೋಜನೆ ರೂಪಿಸಿ	೦	೬	೪	೩	೧೩	೫.೨
2	ಸೂಕ್ತ ಪರಿಹಾರ ನೀಡಿ	೦	೫	೬	೨	೧೩	೫.೨
3	ಮೂಲ ಸೌಕರ್ಯವನ್ನು ಕಲ್ಪಿಸಿ	೦	೪	೫	೩	೧೨	೪.೮
4	ಯೋಜನಾ ನಿರಾಶ್ರಿತರೆಂದು ಗುರುತಿಸಿ	೦	೨೬	೯	೨೯	೬೪	೨೫.೬
5	ಒಂದು ಬಾರಿ ಸಮೀಕ್ಷೆ ನಡೆಸಿ ಅಲ್ಪ ಸಮಯದಲ್ಲಿ ಪರಿಹಾರ ಕಲ್ಪಿಸಿ	೧	೯	೭	೫	೨೨	೮.೮
6	ಇತರೆ	೦	೪	೩	೪	೧೧	೪.೪
7	ಒಕ್ಕಲೇಳದವರು	೧೨	೩೭	೧೩	೫೩	೧೧೪	೪೬
	ಒಟ್ಟು	೧೩	೯೧	೪೭	೯೯	೨೫೦	೧೦೦

ಗ್ರಾಫ್ ೨೬, ಒಕ್ಕಲೆದ್ದವರ ಸಲಹೆಗಳು



ಕೋಷ್ಟಕ೩.೭ ಮತ್ತು ಗ್ರಾಫ್ ೨೬ ರ ಅನ್ವಯ ಒಕ್ಕಲೆದ್ದವರು ಸರ್ಕಾರದಿಂದ ನಿರೀಕ್ಷಿಸುವ ಮತ್ತು ಸರ್ಕಾರಕ್ಕೆ ಸಲಹೆಯನ್ನು ನೀಡಿರುವ ಅಂಶದ ವಿವರವುಳ್ಳದ್ದಾಗಿದೆ. ಅದರಂತೆ, ಯೋಜನಾ ನಿರಾಶ್ರಿತರೆಂದು ಗುರುತಿಸಿದರೆ, ಮಕ್ಕಳ ಭವಿಷ್ಯದಲ್ಲಿ ಅನುಕೂಲವಾಗಲಿದ್ದು, ಸರ್ಕಾರ ಮೀಸಲಾತಿ ಹುದ್ದೆಗಳಲ್ಲಿ ಕೆಲಸವು ಸಿಗುವುದು ಎಂದು ೨೫.೬% ರಷ್ಟು ಮಾಹಿತಿದಾರರಿದ್ದಾರೆ. ಮನವಿದಾರರ ಹೊಂದಿರುವ ಸ್ವತ್ತುಗಳನ್ನು ಒಂದು ಬಾರಿ ಮಾತ್ರ ಸಮೀಕ್ಷೆ ನಡೆಸಿ ಹಣವನ್ನು ಸಂದಾಯ ಮಾಡಬೇಕು. ಎರಡು ಬಾರಿ ಸಮೀಕ್ಷೆ ಮಾಡಿದ್ದಲ್ಲಿ ಕಾಡು ಪ್ರಾಣಿಗಳ ಹಾವಳಿಗೆ ತುತ್ತಾಗಿ ಬೆಳೆಗಳು ನಾಶ ಹೊಂದಿರುತ್ತವೆ. ಇದರಿಂದ ಮೌಲ್ಯಗಳು ಕಡಿಮೆ ಪ್ರಮಾಣಕ್ಕೆ ಇಳಿಯುತ್ತವೆ ಮತ್ತು ಆರ್ಥಿಕ ಸಂಕಷ್ಟವನ್ನು ಎದುರಿಸಬೇಕಾಗುತ್ತದೆ ಎಂದು ೮.೮% ರಷ್ಟು ಮಾಹಿತಿದಾರರಿದ್ದಾರೆ. ವಿಶೇಷ ಸಾಲ ಯೋಜನೆಯನ್ನು ರೂಪಿಸಿ, ಆ ಮೂಲಕ ಒಕ್ಕಲೆದ್ದ ಅತೀ ಸಣ್ಣ ಪ್ರಮಾಣದ ರೈತರ ಪಾಲಿಗೆ ಆರ್ಥಿಕ ಚಟುವಟಿಕೆಗಳನ್ನು ಕ್ರೂಢೀಕರಿಸಿ ಉತ್ತಮ ಬೆಳೆಗಳನ್ನು ಬೆಳೆಯಲು ಹಾಗೂ ಕ್ರಯಕ್ಕೆ ತೆಗೆದುಕೊಂಡ ಜಮೀನಿನ ಸಾಲವನ್ನು ತೀರಿಸುವುದಕ್ಕೆ ಅನುಕೂಲವಾಗುವುದು ಎಂದು ೫.೨% ರಷ್ಟು ಮಾಹಿತಿದಾರರಿದ್ದಾರೆ. ಮನವಿದಾರರು ಹೊಂದಿರುವ ಸ್ವತ್ತುಗಳಿಗೆ ನೈಜ ಮೌಲ್ಯಮಾಪನದ ಮೇಲೆ ನೀಡುವ ಪರಿಹಾರಕ್ಕಿಂತ ಪುನರ್ವಸತೀಕರಣ ಬೈಲವನ್ನು ಆಧರಿಸಿ ನೀಡಿದರೆ ಅನುಕೂಲವಾಗುತ್ತದೆ ಎಂದು ೫.೨% ರಷ್ಟು ಮಾಹಿತಿದಾರರಿದ್ದಾರೆ. ಸ್ಥಳಾಂತರಗೊಂಡ ಪ್ರದೇಶದಲ್ಲಿ ಭೂಮಿಯನ್ನು ಕೊಂಡಾಗ ಅವುಗಳಲ್ಲಿ ನೆಲೆಸಲು ಅವಶ್ಯಕವಾಗಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಿ ಎಂದು ೪.೮% ರಷ್ಟು ಮಾಹಿತಿದಾರರಿದ್ದಾರೆ. ಇತರೆ ಅಂಶಗಳೆಂದು ೪.೪% ರಷ್ಟು ಮಾಹಿತಿದಾರರಿದ್ದಾರೆ.

ಸಾರಾಂಶ

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಮತ್ತು ಪುನರ್ವಸತೀಕರಣಕುರಿತಂತೆ ಕ್ಷೇತ್ರ ಕಾರ್ಯ ಕೈಗೊಂಡು, ದೊರಕಿದಂತಹ ದತ್ತಾಂಶಗಳ ಆಧಾರಿತವಾಗಿ ಸಮುದಾಯಗಳ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಆರೋಗ್ಯ ವಿಭಾಗಗಳಲ್ಲಿ ಕಂಡುಬಂಧಿರುವ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಿಲಾಗಿದೆ. ಎರಡನೇ ಅಧ್ಯಾಯದಲ್ಲಿ ತಾತ್ವಿಕ ಸಿದ್ಧಾಂತದ ಮಾದರಿಗಳನ್ನು ಕುರಿತು ಉಲ್ಲೇಖಿಸಲಾದ, ಸ್ಕುಡರ ಮತ್ತು ಕೋಲ್ಸನ್ ಅವರ ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಮತ್ತು ಪುನರ್ವಸತೀಕರಣಕುರಿತಾದ ನಾಲ್ಕು ಹಂತದ (ನೇಮಿಸುವಿಕೆ ಅಥವಾ ಸೂಚನೆ, ಪರಿವರ್ತನೆ, ಸಾಮರ್ಥ್ಯ ಬೆಳವಣಿಗೆ ಮತ್ತು ಸಂಘಟಿಸು ಅಥವಾ ಏಕೀಕರಣಗೊಳಿಸುವಿಕೆ) ಸಿದ್ಧಾಂತದ ಮಾದರಿಯನ್ನು ಹೋಲಿಕೆ ಮಾಡಿ ನೋಡಿದಾಗ ತಿಳಿದುಬಂದಂತಹ ಅಂಶಗಳೆಂದರೆ, ಅಧ್ಯಾಯ ೩ರಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಅಂತಿಮ ಘೋಷಣೆಯು ಸ್ಥಳೀಯಗಿರಿಜನರ, ರೈತರ ಮತ್ತು ಇತರೆಯವರ ಭೂ ಹಿಡುವಳಿ ಹಕ್ಕು ಭಾಧ್ಯತೆಗಳನ್ನು ಅಂದರೆ, ೧೯೭೨ ರ ವನ್ಯಜೀವಿ ಸಂರಕ್ಷಣೆ ಅಧಿನಿಯಮ ಸೆಕ್ಷನ್ ೨೪ (೧)ಅ ಅನ್ವಯ ಆಕ್ಷೇಪಣೆ ಮತ್ತು ತಿರಸ್ಕರಿಸುವ ಸೆಟಲ್‌ಮೆಂಟ್ ಆಫ್ ಕ್ಲೇಮ್ಸ್ ಪಡೆಯಬೇಕಾಗಿರುವುದು ಕಡ್ಡಾಯವಾಗಿರುತ್ತದೆ. ಆದರೆ, ಅಧಿನಿಯಮದ ಅನುಸಾರವಾಗದೆ ೨೦೦೧ ಜೂನ್ ೧೮ ರಂದು ಅಂತಿಮ ಘೋಷಣೆ ನೀಡಿರುವುದು, ಸ್ಕುಡರ್ ಮತ್ತು ಕೋಲ್ಸನ್

ಅವರು ಉಲ್ಲೇಖಿಸುವ ನೇಮಿಸುವಿಕೆ ಅಥವಾ ಸೂಚನೆಯು ಸ್ಥಳಿಯರಿಗೆ ಸೂಚಿಸದ ಹಾಗೆ ಕಾನೂನು ರಚನೆಕಾರರಿಂದ ಕಾರ್ಯ ರೂಪಿತವಾಗುತ್ತದೆ ಎಂಬ ಅಂಶ ಸತ್ಯವಾಗಿ ಕಂಡು ಜನರ ಹಕ್ಕುಗಳನ್ನು ಹಾಗೂ ಅಸ್ತಿತ್ವವನ್ನು ಪ್ರಶ್ನಿಸುವಂತಾಗಿದೆ. ಎರಡನೇ ಹಂತದ ಪರಿವರ್ತನೆಯಲ್ಲಿ ಅನಿವಾರ್ಯದ ಪರಿಸ್ಥಿತಿಗಳು ಸೃಷ್ಟಿಸಲ್ಪಟ್ಟಾಗ ಅವುಗಳಿಗನುಸಾರವಾಗಿ ಒಕ್ಕಲೇಳುವ ಸ್ಥಿತಿ ಎದುರಾಗಿದೆ. ಇದರಲ್ಲಿ ಮುಖ್ಯವಾಗಿ ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ಇಲಾಖೆಯವರು ಮೊದ ಮೊದಲು ಗಿರಿಜನರು ಮತ್ತು ಇತರೆಯವರೊಂದಿಗೆ ಬೆಳಸಿಕೊಂಡಿದ್ದ ಸಂಬಂಧಗಳನ್ನು ವಿಶ್ಲೇಷಿಸುತ್ತದೆ. ಮೂರನೆ ಹಂತದಲ್ಲಿ ಸಾಮರ್ಥ್ಯ ಬೆಳವಣಿಗೆಯು ಸಾವಲುಗಳನ್ನು ಸ್ವೀಕರಿಸಿ ಪುನರ್ವಸತೀಕರಣಹೊಂದಲು ಸಾಧ್ಯವಾದಂತಹ ಅಂಶಗಳನ್ನು ಗಮದಲ್ಲಿರಿಸಿಕೊಂಡು ಪೂರ್ವ ಸ್ಥಳದಿಂದ ಒಕ್ಕಲೆದ್ದಿರುವುದು ಹಾಗೂ ಸ್ವತಃ ಅವರೇ ನೆಲೆಯನ್ನು ಕಂಡುಕೊಂಡಿರುವುದು. ಅಂತಿಮವಾಗಿ ಸಂಘಟನೆ ಅಥವಾ ಏಕೀಕರಣಕ್ಕೆ ಸಂಬಂಧಿಸಿದಂತೆ: ಪೂರ್ವ ಸ್ಥಳದಿಂದ ಒಕ್ಕಲೆದ್ದು ಅನ್ಯ ಸ್ಥಳಗಳಲ್ಲಿ ಅಲ್ಪ ಸಮಯದಲ್ಲಿ ನೆಲೆಯೂರಿದ್ದಾರೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಲ್ಲಿರುವ ಇತರೆ ಸಮುದಾಯದೊಂದಿಗೆ ಹೊಂದಾಣಿಕೆಯಾಗಲು ಇನ್ನೆರಡು ವರ್ಷಗಳ ಕಾಲದ ಸಮಯವು ಅಗತ್ಯವಿದೆ. ಎಂಬುವ ಅಂಶಗಳನ್ನು ಈ ವಿಶ್ಲೇಷಣಾ ವರದಿಯಲ್ಲಿ ಮನಗಾಣಲಾಗಿದೆ.

ಮೈಕಲ್ ಸೆರನಾ ಅವರ ಐ ಆರ್ ಆರ್‌ನ ತಾತ್ವಿಕ ಸಿದ್ಧಾಂತದ ಅನ್ವಯ, ಒಕ್ಕಲೆದ್ದವರು ಅನ್ಯ ಸ್ಥಳಗಳಲ್ಲಿ ಎದುರುಗೊಳ್ಳುವ ಅಪಾಯ-ದಾರಿದ್ರ್ಯ-ಪುರ್ನರಚನೆಯ ಕುರಿತಾದ ಸಮಸ್ಯೆಗಳನ್ನು ತಮ್ಮ ಸಿದ್ಧಾಂತದಲ್ಲಿ ಉಲ್ಲೇಖಿಸಿದ್ದಾರೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಒಕ್ಕಲೇಳದೆ ವಾಸವಾಗಿರುವವರು ಅಭಿಪ್ರಾಯಿಸಿದಂತೆ, ಒಮ್ಮೆ ನಾವು ಕುದುರೆಮುಖ ಉದ್ಯಾನವನ ವ್ಯಾಪ್ತಿಯಿಂದ ಒಕ್ಕಲೆದ್ದರೆ ಮುಂದಿನ ನಮ್ಮ ಜೀವನವು ಆರ್ಥಿಕ ಅಪಾಯದ ಸಮಸ್ಯೆಗಳನ್ನು ಎದುರಿಸಬೇಕಾಗುವುದು. ಕಾರಣ, ನಾವು ಕೃಷಿಗಾಗಿ ಆಶ್ರಯಿಸಿರುವ ಜಾಗವು ಒಂದರಿಂದ ಎರಡು ಎಕರೆ ಇರಬಹುದು. ಅವುಗಳನ್ನು ಉದ್ಯಾನವನಕ್ಕೆ ವಹಿಸಿ ಒಕ್ಕಲೆದ್ದರೆ ಹೊರಗಿನ ಪ್ರದೇಶದಲ್ಲಿ ಅಲ್ಪ ಸ್ಥಳವನ್ನು ಕ್ರಯಕ್ಕೆ ತೆಗೆದುಕೊಳ್ಳುವುದು ಕಷ್ಟ ಸಾಧ್ಯವಾಗುತ್ತದೆ. ಇದರೊಂದಿಗೆ ನಾವು ಇಲ್ಲಿನ ನೆಮ್ಮದಿಯ ಜೀವನವನ್ನು ಬಿಟ್ಟು ದಾರಿದ್ರ್ಯದ ಜೀವನಕ್ಕೆ ತಲುಪುವುದಲ್ಲದೆ, ಕುಟುಂಬದ ಪುರ್ನರಚನೆಯು ಅಸಾಧ್ಯವಾಗುತ್ತದೆ ಎಂದು ಅಭಿಪ್ರಾಯಿಸುತ್ತಾರೆ. ಅದಕ್ಕೆ ಪೂರಕವಾಗಿ ಉದ್ಯಾನವನದ ಒಳ ಭಾಗದಲ್ಲಿದ್ದವರು ಪುನರ್ವಸತಿ ಹೊಂದಿದ ನಂತರ ಪೂರ್ವ ಕಾಲದಲ್ಲಿ ತಮ್ಮ ಸ್ವಂತದ ಭೂ ಹಿಡುವಳಿಯನ್ನು ಬಿಟ್ಟುಕೊಟ್ಟು ಪುನರ್ವಸತಿ ಹೊಂದಿದ ಮೇಲೆ ಆರ್ಥಿಕ ಜೀವನೋಪಾಯಕ್ಕಾಗಿ ಕೂಲಿಯನ್ನು ಆಶ್ರಯಿಸುವಂತಾಗಿದೆ. ಕೆಲವರಿಗೆ ಭೂ ಹಿಡುವಳಿಗಳಿದ್ದರು, ಅಲ್ಲಿ ಬೆಳೆವ ಬೆಳೆಗಳಿಗೆ ನೀರನ್ನು ಒದಗಿಸಿ ಉಳಿಸಿಕೊಳ್ಳುವುದು ಕೂಡ ಕಷ್ಟಸಾಧ್ಯವಾಗುತ್ತಿದೆ. ಎನ್ ಜಿ ಓ ಮುಖಾಂತರ ಪುನರ್ವಸತಿ ಹೊಂದಿದವರು ಇಂದಿಗೂ ಕೂಡ ಜಮೀನುಗಳನ್ನು ತಮ್ಮ ಸ್ವಂತ ಅನುಭವಕ್ಕೆ ಪಡೆಯಲು ಸಾಧ್ಯವಾಗಿಲ್ಲ. ಪುನರ್ ರಚನೆಯ ಅಂಶದಲ್ಲಿ ಹೆಚ್ಚು ಸೋಲನ್ನು ಅನುಭವಿಸುತ್ತಾ ಬಂಧಿದ್ದಾರೆ. ಸರ್ಕಾರವು ಪುನರ್ವಸತಿ ಹೊಂದುವ ಕುಟುಂಬಗಳಿಗೆ ಅವರ ನೈಜ ಹಿಡುವಳಿಯಲ್ಲಿ ಬೆಳೆದಿರುವ ಇಲ್ಲವೆ ಇರುವ ಬೆಳೆಗಳ ಆಧಾರದ ಮೇಲೆ ಇಲಾಖೆಗಳ

ಸಹಕಾರದೊಂದಿಗೆ ಮೌಲ್ಯವನ್ನು ನಿರ್ಧರಿಸಿ ಅದಕ್ಕೆ ಮನೆ ನಿರ್ಮಾಣಕ್ಕೆ, ಜೀವನಾಂಶ, ಸ್ವತ್ತು ಸಾಗಾಟ ಎಂಬ ಅಂಶಗಳ ಮೇಲೆ ನಿಧಿಯನ್ನು ಸೇರಿಸಿ ನೀಡುತ್ತದೆ. ಆದರೆ, ಒಮ್ಮೆ ಅವರು ಒಕ್ಕಲೆದ್ದು ಪುನರ್ವಸತಿ ವ್ಯವಸ್ಥೆಯನ್ನು ಪಡೆದ ನಂತರ ಅವರಿಗೆ ಮತ್ತು ಅವರಿದ್ದ ಸ್ಥಳಕ್ಕೆ ಯಾವುದೇ ಸಂಬಂಧವಿಲ್ಲ ಮತ್ತು ಸರ್ಕಾರ ಒಕ್ಕಲೆದ್ದವರ ಜೀವನ ಹೇಗಿದೆ ಎಂಬ ಅನುಸರಣಾ ಪ್ರಕ್ರಿಯೆಯನ್ನು ಅನುಸರಿಸುವುದಿಲ್ಲ. ಒಕ್ಕಲೆದ್ದು ಪುನರ್ವಸತಿ ಹೊಂದುವ ಕಾಲಕ್ಕೆ ಸಾಮಾಜಿಕ–ಆರ್ಥಿಕ ಸ್ಥಿತಿಗಳ ಪರಿಹಾರವು ಹೊಂದಾಣಿಕೆಯಾಗದಿದ್ದಲ್ಲಿ ವಿವಿಧ ರೀತಿಯ ಸಂಘರ್ಷಗಳು ಕುಟುಂಬ ಜೀವನದಲ್ಲಿ ಉಂಟಗುವವು ಎಂಬ ಅಂಶವನ್ನು ಉಲ್ಲೇಖಿತ ಸಾಂಖಿಕ ವಿವರಣೆಯಲ್ಲಿ ಕಾಣಲಾಗಿದೆ.

ಕರ್ನಾಟಕ ರಾಜ್ಯದ ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸವಿಸ್ತಾರವಾಗಿ ೬೦೦.೩೨ ಚ.ಕೀಮಿ ಯಲ್ಲಿ ವ್ಯಾಪಿಸಿರುವ ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ಗಿರಿಜನರು, ರೈತರು ಮತ್ತು ಇತರೆ ಅರಣ್ಯವಾಸಿಗಳನ್ನು ಹೊಂದಿರುವ ಪ್ರದೇಶವಾಗಿ ಗುರ್ತಿಸಲ್ಪಟ್ಟಿದೆ. ೨೦೦೧ ರ ಜೂನ್ ೧೮ ರಲ್ಲಿ ಅಂತಿಮ ಘೋಷಣೆಯನ್ನು ನೀಡುವುದರೊಂದಿಗೆ ರಾಷ್ಟ್ರೀಯ ಉದ್ಯಾನವನವಾಗಿ ನಾಮಾಂಕಿತಗೊಂಡಿದ್ದು, ಅದೇ ವೇಳೆಯಲ್ಲಿ ಉದ್ಘೋಷಣೆಗೆ ಸಾಕಷ್ಟು ವಿರೋಧವು ಅಲ್ಲಿನ ಸಾರ್ವಜನಿಕರಿಂದ ವ್ಯಕ್ತವಾಗಿದ್ದು, ಉದ್ಯಾನವನ ವ್ಯಾಪ್ತಿಯಲ್ಲಿ ಅಂತಿಮ ಘೋಷಣೆಯಾದರೆ, ನಮ್ಮ ಭೂ ಹಿಡುವಳಿಗಳು ಎಲ್ಲಿ ಉದ್ಯಾನವನಕ್ಕೆ ಸೇರ್ಪಡೆಗೊಂಡು ನಿರಾಶ್ರಿತರಾಗುತ್ತೇವೆ ಎಂಬ ಭಯದಲ್ಲಿ ರೈತರಿಬ್ಬರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇದರೊಂದಿಗೆ ಕೆಲವು ಒತ್ತಡ ಪೂರ್ವಕ ಸನ್ನಿವೇಶವು ಅರಣ್ಯ ಇಲಾಖೆಯಿಂದ ಒಂದೆಡೆಯಾದರೆ, ನಕ್ಸಲ್ ಪೀಡಿತ ಪ್ರದೇಶವಾಗಿ ನಕ್ಸಲರ ಒತ್ತಡ, ನಕ್ಸಲರನ್ನು ನಿರ್ಬಂಧಿಸುವಿಕೆಗೆ ಸರ್ಕಾರದಿಂದ ನೇಮಕವಾದ ನಕ್ಸಲ್ ನಿಗ್ರಹದಳದ ಒತ್ತಡ ಮತ್ತೊಂದೆಡೆ. ಈ ಒತ್ತಡಗಳ ನಡುವೆ ಸಾಮಾನ್ಯ ಮೂಲಭೂತ ಸೌಕರ್ಯವು ಸಿಗದಂತಾಗಿ ಇರುವಂತಹ ಸ್ಥಿತಿಗಳಲ್ಲಿ ಜಿಲ್ಲಾಡಳಿತ ಮತ್ತು ಅರಣ್ಯ ಹಕ್ಕು ಕಾಯ್ದೆಯಡಿ ಬಗರ್ ಹುಕುಂ ಸಾಗುವಳಿದಾರರಿಗೆ ಅರಣ್ಯಹಕ್ಕು ಪತ್ರದ ಚೀಟಿ ಮುಖಾಂತರ ಸಾಗುವಳಿದಾರರೆಂದು ಗುರ್ತಿಸಲ್ಪಟ್ಟು ಭೂ ಹಿಡುವಳಿಗಳನ್ನು ಹೊಂದಿದ್ದಾರೆ. ಇದರೊಂದಿಗೆ ಇಂದಿಗೂ ಕೂಡ ಕಂದಾಯ ಇಲಾಖೆಯ ನಮೂನೆಗಳಾದ ೫೩ ಮತ್ತು ೫೭ ರಲ್ಲಿ ಸಾಗವಳಿ ಖಾಯಂಗಾಗಿ ಹಲವರು ಅರ್ಜಿಯನ್ನು ದಾಖಲಿಸಿದ್ದಾರೆ. ಉದ್ಯಾನವನ ವ್ಯಾಪ್ತಿಯಲ್ಲಿ ಯಾವುದೇ ಒತ್ತಡ ಪೂರಕ ಸ್ಥಳಾಂತರಕ್ಕೆ ಅವಕಾಶವಿಲ್ಲ ಎಂದು ಸೂಚನ ಫಲಕವನ್ನು ಬಿತ್ತರಿಸಲಾಗಿದೆ. ಆದರೂ ಸ್ವಯಂ ಪ್ರೇರಿತವಾಗಿ ಒಕ್ಕಲೇಳುವವರು ಇಲಾಖೆಗೆ ಪುನರ್ವಸತಿ ಕೋರಿ ಅರ್ಜಿಯನ್ನು ಸಲ್ಲಿಸುತ್ತಾ ಬರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ಥಳಾಂತರ ಮತ್ತು ಪುನರ್ವಸತೀಕರಣದ ಕುರಿತಾದ ಸಂದರ್ಭದಲ್ಲಿ ಕೆಲವು ಅಂಶಗಳನ್ನು ಕ್ಷೇತ್ರಾಧ್ಯಯನದ ಮುಖಾಂತರ ಅವಲೋಕಿಸಿದಂತೆ, ಹಲವಾರು ಸನ್ನಿವೇಶಗಳನ್ನು ಎದುರಿಸಿ, ಅವುಗಳನ್ನು ಸವಾಲಾಗಿ ಪರಿಗಣಿಸಿ ಒಕ್ಕಲೆದ್ದವರು ಒಂದೆಡೆ ಮತ್ತು ಅಲ್ಲೇ ಇರುವವರನ್ನು ಅಧ್ಯಾಯಿಸಿ ಕೆಲವು ಅಂಶಗಳನ್ನು ಸಾಂಖಿಕವಾಗಿ ಉಲ್ಲೇಖಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವು ಶೈಕ್ಷಣಿಕ ಸ್ಥಾನಮಾನ ವಿವರ, ವೃತ್ತಿ ಅಥವಾ ಕಸುಬು, ಭೂ ಹಿಡುವಳಿ, ಪಶು

ಸಂಪತ್ತು, ಒಕ್ಕಲೇಳುವ ಪೂರ್ವದಲ್ಲಿ ಮತ್ತು ನಂತರದಲ್ಲಿನ ಆಸ್ತಿಗಳು, ಒಕ್ಕಲೇಳಲು ಕಾರಣವಾದ ಅಂಶಗಳು, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಆರೋಗ್ಯ ಮತ್ತು ಒಕ್ಕಲೇಳುವ ಸಂದರ್ಭದಲ್ಲಿ ಎದುರಾದ ಸವಾಲುಗಳನ್ನು ಪರಿಗಣಿಸಿ ವಿಶ್ಲೇಷಿಸಲಾಗಿದೆ. ಈ ಅಂಶಗಳ ಆಧಾರಿತವಾಗಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ನೆಲೆಸಿರುವವರು ಪ್ರತಿಶತ ೪೬% ಹಾಗೂ ಅಲ್ಲಿಂದ ಪುನರ್ವಸತಿ ಹೊಂದಿರುವವರು ಪ್ರತಿಶತ ೫೪% ಒಟ್ಟಾರೆಯಾಗಿಪರಿಗಣಿಸಿ ನೋಡುವುದಾದರೆ, ಶೈಕ್ಷಣಿಕವಾಗಿ ೪೦% ಪ್ರತಿಶತ ಅನಕ್ಷರಸ್ಥರು. ಕಾರಣ, ಅರಣ್ಯ ವ್ಯಾಪ್ತಿಯ ದೂರ ಪ್ರದೇಶಗಳಲ್ಲಿ ಶಿಕ್ಷಣದ ಕೊರತೆಯ ಪರಿಸ್ಥಿತಿ, ಇರುವ ಪ್ರದೇಶಗಳಿಂದ ಪೇಟೆ ಸ್ಥಳಗಳಿಗೆ ತಲುಪಿ ಶಿಕ್ಷಣ ಪಡೆಯಲು ಆರ್ಥಿಕ ಪರಿಸ್ಥಿಂಯ ಉತ್ತಮವಾಗಿಲ್ಲದಿರುವುದು, ಮಳೆಗಾಲದಲ್ಲಿ ಇರುವ ಸ್ಥಳಗಳು ನದಿ ನೀರಿನ ಹರಿವು ಹೆಚ್ಚಾಗಿ ನಡುಗಡ್ಡೆಯಂತಾಗುವ ಪ್ರದೇಶದಿಂದ ಶಾಲೆಗೆ ಬರಲು ಆಗದಿರುವುದು. ಈ ಎಲ್ಲಾ ಕಾರಣಗಳಿಂದ ಆ ಪ್ರದೇಶದಲ್ಲಿ ಶಿಕ್ಷಣ ಪ್ರಮಾಣವು ಕಡಿಮೆಯಾಗಿದೆ. ವೃತ್ತಿ ಆಧಾರಿತವಾಗಿ ೫೧.೨% ಪ್ರತಿಶತ ಕೃಷಿಕರು, ೭.೨% ಕೂಲಿಕಾರರು, ಕೃಷಿ ಮತ್ತು ಕೂಲಿಕಾರರು ೧೫.೬% ಮತ್ತು ಕೃಷಿಯೊಂದಿಗೆ ಹೈನುಗಾರಿಕೆ ವೃತ್ತಿಯನ್ನು ೧೫.೨% ಪ್ರತಿಶತ ಜನರು ಜೀವನೋಪಾಯಕ್ಕೆ ಆರ್ಥಿಕ ಮೂಲವಾಗಿ ಹೊಂದಿದ್ದಾರೆ. ಭೂ ಹಿಡುವಳಿಗಳಲ್ಲಿ ೧೧.೨% ಪ್ರತಿಶತರು ಭೂ ಹಿಡುವಳಿ ಇಲ್ಲದೆ ಕೂಲಿಯನ್ನು ಆಶ್ರಯಿಸಿದ್ದಾರೆ, ಅರಣ್ಯ ಸ್ವಂತ ಭೂ ಹಿಡುವಳಿಗೆ ಅರಣ್ಯ ಒತ್ತುವರಿ ಮಾಡಿರುವವರು ೬.೪% ಪ್ರತಿಶತರು, ಅರಣ್ಯ ಹಕ್ಕು ಪತ್ರ ಪಡೆದವರು ೯.೨% ಪ್ರತಿಶತರು ಇದ್ದು, ಪಶು ಸಂಪತ್ತಿನಲ್ಲಿ ಮಾನವನ ತಾಯಿ ಎಂದು ಉಲ್ಲೇಖಿಸಿರುವ ಆಕಳನ್ನೇ ೪೩,೫೩% ಪ್ರತಿಶತ ಹೊಂದಿದ್ದಾರೆ ಇದರೊಂದಿಗೆ ೧೯.೩೮% ಪ್ರತಿಶತ ಹೊಲ ಉಳುವಿಕೆಗೆ ಎತ್ತು/ಹೋರಿಗಳನ್ನು ಹೊಂದಿದ್ದಾರೆ. ಇಲ್ಲಿ ಎತ್ತುಗಳಿಗಿಂತ ಆಕಳಿನ ಪ್ರತಿಶತವೇ ಹೆಚ್ಚಾಗಿರುವುದನ್ನು ಉಲ್ಲೇಖಿಸಲಾಗಿದೆ. ಕಾರಣ, ಉದ್ಯಾನವನ ವ್ಯಾಪ್ತಿಯಲ್ಲಿ ಪರ್ವತ ಶ್ರೇಣಿಗಳು ಸ್ವಾಭಾವಿಕವಾಗಿ ಸೃಷ್ಟಿಯಾಗಿರುವುದರಿಂದ ಅಲ್ಲಿನ ಪರಿಸರದಲ್ಲಿ ಗದ್ದೆ ಪ್ರದೇಶಗಳಂತಹ ಸಮತಟ್ಟಾದ ಪ್ರದೇಶಕ್ಕೆ ಮಾತ್ರ ಕೆಲವರು ಎತ್ತುಗಳನ್ನು ಸೀಮಿತಗೊಳಿಸಿಕೊಂಡಿದ್ದು, ಗದ್ದೆ ರಹಿತರು ಹೆಚ್ಚಾಗಿ ತಮ್ಮ ದಿನ ನಿತ್ಯದ ಆಹಾರ ಕ್ರಮಕ್ಕೆ ಹೆಚ್ಚು ಆಕಳಿನಿಂದ ಉತ್ಪತ್ತಿಯಾಗುವ ಉತ್ಪನ್ನವನ್ನೇ ಆಧರಿಸಿದ್ದಾರೆ. ಒಕ್ಕಲೇಳುವ ಪೂರ್ವದಲ್ಲಿ ಇದ್ದಂತಹ ಸ್ವತ್ತುಗಳು, ಒಕ್ಕಲೆದ್ದು ಪುನರ್ವಸತಿ ಪಡೆದ ನಂತರ ಆಗಿರುವ ವ್ಯತ್ಯಾಸವನ್ನು ಇಲ್ಲಿ ಗಮನಿಸಬಹುದು ಅದರಲ್ಲಿ ಒಕ್ಕಲೇಳುವ ಪೂರ್ವದಲ್ಲಿ ೧ ಎಕರೆ ಜಮೀನು ಮತ್ತು ಮನೆ ಹೊಂದಿದ್ದವರು ೬.೮% ಪ್ರತಿಶತವಿದ್ದಾರೆ. ಒಕ್ಕಲೇದ್ದ ನಂತರ ೧ ಎಕರೆ ಜಮೀನು, ವ್ಯಾಪಾರವನ್ನು ೩.೨% ಪ್ರತಿಶತರು, ೧ ಎಕರೆ ಜಮೀನು, ಮನೆ ಮತ್ತು ಕೂಲಿ ಆಶ್ರಯಿಸಿ ೬% ಪ್ರತಿಶತರು, ೧ ಎಕರೆ ಜಮೀನು ಮತ್ತು ಮನೆಯನ್ನು ೭.೬% ಪ್ರತಿಶತರು ಹೊಂದುತ್ತಾ ಬದಲಾಗಿದ್ದಾರೆ. ಈ ಪ್ರತಿಶತ ಧರವು ಅವರೋಹಣ ಪಥವನ್ನು ಗುರ್ತಿಸುತ್ತದೆ. ಒಕ್ಕಲೇಳುವಿಕೆಗೆ ಕಾರಣವಾದ ಅಂಶದಲ್ಲಿ ೩೮.೮% ಪ್ರತಿಶತರು ಸ್ವ ಇಚ್ಚೆಯಿಂದ ಮೂಲಭೂತ ಸೌಲಭ್ಯಗಳಿಗಾಗಿ ಹೊರಬಂದಿದ್ದೇವೆ ಎಂದು ಉತ್ತರಿಸಿದ್ದಾರೆ. ಮೂಲತಃ ಅರಣ್ಯಾವೃತ ದೂರ ಪ್ರದೇಶಗಳಲ್ಲಿ ನಮಗೆ ಮೂಲಭೂತ ಸೌಲಭ್ಯಗಳನ್ನು ಸರ್ಕಾರ ಮತ್ತು ಕೆಲವು ಇಲಾಖೆಗಳು ಕಲ್ಪಿಸಲಾಗಿಲ್ಲ ಎಂಬ ಅಂಶವನ್ನು ಇಲ್ಲಿ ಉಲ್ಲೇಖಿಸಬಹದು. ಸಾಮಾಜಿಕ ಅಂಶಗಳಲ್ಲಿ ಒಕ್ಕಲೇಳುವಿಕೆಯಿಂದ ಸಮೂಹ ಸಂಬಂಧಿಗಳಿಂದ ದೂರದಲ್ಲಿ ವಾಸವಾಗಿದ್ದೇವೆ ಎಂದು ೨೧.೬%

ಪ್ರತಿಶತರು, ಕುಟುಂಬದಲ್ಲಿ ವಿಘಟನೆಗಳಾಗಿ ಹೋಗಿವೆ ಎಂದು ೧೦% ಪ್ರತಿಶತರು, ಸಾಂಸ್ಕೃತಿಕವಾಗಿ ಹೊಂದಲಾಗಿರುವ ವ್ಯತ್ಯಾಸದಲ್ಲಿ ನಮ್ಮ ಪೂರ್ವದ ದೈವಿ ಸ್ಥಾನಗಳು ಇಲ್ಲವಾಗಿವೆ ಎಂದು ೧೦.೮% ಪ್ರತಿಶತರು, ಕಾಡಿನ ಸಂಪರ್ಕವೇ ಇಲ್ಲವಾಗಿವೆ ಎಂದು ೧೬.೮% ಪ್ರತಿಶತರು, ಸಂಘಟಿತ ಆಚರಣೆಗಳು ಇಲ್ಲವಾಗುತ್ತಿವೆ ಎಂದು ೯.೨% ಪ್ರತಿಶತರು, ಶೈಕ್ಷಣಿಕವಾಗಿ ಮಕ್ಕಳಿಗೆ ವಿದ್ಯಾಬ್ಯಾಸಕ್ಕೆ ಶಾಲೆಗಳು ದೊರೆತಿವೆ ಎಂದು ೨೩.೬% ಪ್ರತಿಶತರು, ಮಕ್ಕಳು ಹಳ್ಳಿಗಳಿಂದ ನಗರಕ್ಕೆ ಬರುವ ಕಾಲಾವಕಶವು ತಪ್ಪಿದೆ ಎಂದು ೧೩.೨% ಪ್ರತಿಶತರು, ಆರೋಗ್ಯ ಕೇಂದ್ರಗಳು ಸಮೀಪದಲ್ಲಿರುವುದರಿಂದ ಶೀಘ್ರದಲ್ಲಿಯೇ ಸೇವೆಯನ್ನು ಪಡೆಯುತ್ತಿದ್ದೇವೆ ಎಂದು ೧೧.೨% ಪ್ರತಿಶತರು, ಆರ್ಥಿಕವಾಗಿ ಬೆಳೆಗಳು ಸಣ್ಣ ಪ್ರಾಯದವುಗಳಾಗಿ ಆದಾಯ ಕಡಿಮೆಯಾಗಿದೆ ಎಂದು ೧೭.೨% ಪ್ರತಿಶತರು, ಕ್ರಯಕ್ಕೆ ಸ್ಥಳಗಳನ್ನು ಪಡೆಯಲಾಗಿ ಆರ್ಥಿಕತೆ ವ್ಯತ್ಯಾಸವಾಗಿದೆ ಎಂದು ೧೦.೪% ಪ್ರತಿಶತರು ಇದ್ದಾರೆ. ಇದರೊಂದಿಗೆ ಮುಂದಿನ ಮಕ್ಕಳ ಭವಿಷ್ಯವು ಉತ್ತಮವಾಗಿರಬೇಕು ಎಂಬ ದಿಶೆಯಲ್ಲಿ ೨೫.೬% ಪ್ರತಿಶತರು ಒಕ್ಕಲೇಳುವವರನ್ನು ಯೋಜನಾ ನಿರಾಶ್ರಿಯರೆಂದು ಸರ್ಕಾರ ಗುರ್ತಿಸಬೇಕು ಎಂದು ಸಲಹೆಗಳನ್ನು ನೀಡಿದ್ದಾರೆ. ಒಟ್ಟಾರೆಯ ಪುನರ್ವಸತೀಕರಣಪ್ರಕ್ರಿಯೆಯು ಸಾಕಷ್ಟು ವ್ಯತ್ಯಾಸಗಳನ್ನು ಹಾಗೂ ಜೀವನ ಶೈಲಿಯ ಬದಲಾವಣೆಗಳನ್ನು ಮಾಡಿರುವುದು ಈ ಅಧ್ಯಯನದಲ್ಲಿ ಕಂಡು ಬಂದಿದೆ.

ಸಮಾರೋಪ

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಸಂದರ್ಭದಲ್ಲಿ ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಮತ್ತು ಪುನರ್ವಸತೀಕರಣಕುರಿತಂತೆ ಕ್ಷೇತ್ರಾಧ್ಯಯನದಲ್ಲಿ ಒಕ್ಕಲೆದ್ದವರನ್ನು ಹಾಗೂ ಒಕ್ಕಲೇಳದೆ ಇರುವವರನ್ನು ಅಧ್ಯಯಿಸಲಾಗಿ, ಒಕ್ಕಲೆದ್ದವರು ಇರುವ ಸ್ಥಾನಗಳನ್ನು ತೊರೆದು ಉದ್ಯಾನವನದಿಂದ ಹೊರಬರಲು ಕಾರಣವಾದಂತಹ ಅಂಶವನ್ನು ಹಾಗೂ ಒಕ್ಕಲೇಳದೆ ಇರುವವರ ತಮ್ಮ ಈಗಿನ ಪರಿಸ್ಥಿತಿಗಳನ್ನು ಯಾವ ರೀತಿ ನಿರ್ವಹಿಸುತ್ತಿದ್ದಾರೆ ಮತ್ತು ಅವುಗಳ ಹಿಂದಿನ ಕಾರಣಗಳನ್ನು ಸ್ಪಷ್ಟಗೊಳಿಸಿಕೊಳ್ಳುವಲ್ಲಿ ಸಾಂಖಿಕವಾಗಿ ಪ್ರತಿಶತಗಳಲ್ಲಿ ರೂಪಿಸಲಾಗಿದೆ. ಸಾಮಾಜಿಕ ಸಂಶೋಧನೆಗಳಲ್ಲಿ ಚಲಕಗಳು ಯಾವ ಸಂದರ್ಭದಲ್ಲಿಯೂ ಒಂದೇ ರೀತಿಯಾಗಿರುವುದಿಲ್ಲ ಎಂಬುದು ಸತ್ಯವಾಗಿದ್ದು, ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಕಾಲಮಿತಿಯಲ್ಲಿ ಪ್ರತಿನಿಧಿಸಿದೆ. ಇದರೊಂದಿಗೆ ಒಕ್ಕಲೆದ್ದವರು ತಮ್ಮ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕವಾಗಿ ಹಲವು ಅಂಶಗಳಲ್ಲಿ ವ್ಯತ್ಯಾಸವನ್ನು ಕಂಡು ಕೊಂಡಿದ್ದು, ಆ ವ್ಯತ್ಯಾಸಗಳನ್ನು ಸರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಇನ್ನು ಹೆಚ್ಚಿನ ಸಹಕಾರವು ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಮೂಲಗಳಿಂದ ಅವಶ್ಯವಾಗಿದೆ. ಇದರೊಂದಿಗೆ ಸರ್ಕಾರವು ಒಕ್ಕಲೆದ್ದವರಿಗೆ ಯೋಜನಾ ನಿರಾಶ್ರಿತರು ಎಂಬ ಪ್ರಮಾಣ ಪತ್ರವನ್ನು ನೀಡಿದರೆ ಮುಂದಿನ ತಮ್ಮ ಮಕ್ಕಳ ಭವಿಷ್ಯವು ಶೈಕ್ಷಣಿಕ ಮತ್ತು ಉದ್ಯೋಗ ಮೀಸಲಾತಿಯಲ್ಲಿ ಅನುಕೂಲಗಳಾಗಲಿವೆ ಎಂದು ಅಭಿಪ್ರಾಯಿಸಿದ್ದಾರೆ. ಇನ್ನು ಒಕ್ಕಲೇಳದೆ ಉದ್ಯಾನವನ ವ್ಯಾಪ್ತಿಯಲ್ಲಿಯೇ ಉಳಿದಿರುವವರಲ್ಲಿ ಅರಣ್ಯಾ ಒತ್ತುವರಿ ಸಮಸ್ಯೆಯಲ್ಲಿ ಅರಣ್ಯ ಹಕ್ಕು ಪತ್ರಕ್ಕಾಗಿ ಅರ್ಜಿಗಳನ್ನು ಸಲ್ಲಿಸಿದ್ದು, ಕಂದಾಯ ಇಲಾಖೆಯ ಧನಾತ್ಮಕ ಉತ್ತರದ ನಿರೀಕ್ಷಣೆಯಲ್ಲಿದ್ದಾರೆ. ಇನ್ನೊಂದೆಡೆ ಒಕ್ಕಲೆದ್ದು ಹೋದವರ

ಭೂಹಿಡುವಳಿಗಳು ಸಮೀಪದಲ್ಲಿಯೇ ಇರುವುದರಿಂದ, ಅರಣ್ಯ ಇಲಾಖೆಯವರು ಒಕ್ಕಲೆದ್ದವರ ಹಿಡುವಳಿಗಳನ್ನು ಪೂರ್ಣ ಪ್ರಮಾಣದಲ್ಲಿ ಭೂ ಸ್ವಾದೀನ ಪಡಿಸಿಕೊಂಡು, ನಾಶ ಮಾಡಿ ಪುನಃ ಅರಣ್ಯವಾಗುವಂತೆ ವ್ಯವಸ್ಥೆಗೊಳಿಸಿರುವುದು, ಕಾಡು ಪ್ರಾಣಿಗಳು ನೇರವಾಗಿ ಇರುವವರ ಭೂ ಹಿಡುವಳಿಗಳಲ್ಲಿ ಬೆಳೆದಿರುವ ಬೆಳೆಗಳ ಮೇಲೆ ಆಶ್ರಯಿಸಿಕೊಂಡಿವೆ. ಈ ಪ್ರಕಾರದ ಕಾಡು ಪ್ರಾಣಿಗಳಿಂದಾದ ನಷ್ಟಕ್ಕೆ ಪರಿಹಾರವನ್ನು ಬಹು ಕಾಲದ ನಂತರ ನೀಡುತ್ತಾರೆ. ಒಕ್ಕಲೆದ್ದವರು ಹೊರ ಪ್ರಪಂಚಕ್ಕೆ ತಮ್ಮನ್ನು ತೊಡಗಿಸಿಕೊಳ್ಳಲು ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವಿವಿಧ ಸಮುದಾಯಗಳೊಂದಿಗೆ ಹೊಂದಾಣಿಕೆಗೆ ಯತ್ನಿಸುತ್ತಿದ್ದಾರೆ. ಆರ್ಥಿಕವಾಗಿ ಸಬಲರಾಗಲು ಕೃಷಿ ಮೂಲವನ್ನೇ ಆಯ್ಕೆ ಮಾಡಿಕೊಂಡು ಕುಟುಂಬವನ್ನು ನಿರ್ವಹಣೆ ಮಾಡುತ್ತಿದ್ದಾರೆ. ಇದರೊಂದಿಗೆ ಆರ್ಥಿಕ ಸದೃಢತೆಗೆ ಹೆಚ್ಚುವರಿ ಕಾಲಾವಕಾಶದ ಅಗತ್ಯತೆ ಇರುವುದು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಅಡಿಟಿಪ್ಪಣಿಗಳು

೦೧. Making Data Meaningfull, A guide to writing stories about numbers, United Nations New York and Geneva, 2009. (page no 1).

೦೨. ಭೈರಪ್ಪ ಕೆ. ಸಮಾಜಶಾಸ್ತ್ರದ ಮೂಲ ತತ್ವಗಳು, ಕೇಂಬ್ರಿಡ್ಜ್ ಪಬ್ಲಿಷಿಂಗ್ ಕಂಪನಿ ಬೆಂಗಳೂರು. ೧೯೯೭. (ಪು.ಸಂ:೧೨೨).

೦೩. ಕೃಷ್ಣಯ್ಯ ಗೌಡ ಹೆಚ್.ಆರ್. ಆರ್ಥಿಕ ವಿಶ್ಲೇಷಣೆ. ಚೇತನ ಬುಕ್ ಹೌಸ್. ಮೈಸೂರು. ೧೯೯೯. ಪು.ಸಂ. ೨೯೨,೨೯೮, ೩೦೧–೩೦೪.

೦೪. ಸಂದರ್ಶನ: ಶ್ರೀ ಪ್ರಶಾಂತ, ಬಿಳಿಗಲ್ ನಿವಾಸಿ. ಸಂಸೆ ಗ್ರಾಮಪಂಚಾಯತ್, ಮೂಡಿಗೆರೆ ತಾಲ್ಲೂಕು. ಚಿಕ್ಕಮಗಳೂರು ಜಿಲ್ಲೆ.

೦೫. ಚಂದ್ರಶೇಖರ್ ಕೆ. ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮ ಸಭೆ ಮತ್ತು ಗ್ರಾಮ ಪಂಚಾಯತ್‌ಗಳ ಪಾತ್ರ, ಅಬ್ದುಲ್ ನಸೀರ್ ಸಾಬ್ ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ. ಮೈಸೂರು. ೧೯೯೯. (ಪು.ಸಂ ೨)

೦೬. Muzaffar Assadi, Interface between Displacement, Rehabilitation and Governance in India: A Critique. Page no:3.

೦೭. ಸಂದರ್ಶನ: ಶ್ರೀ ವಿದ್ಯಾಸಾಗರ ಮತ್ತು ಶ್ರೀ ತಮ್ಮುಗೌಡ, ಬೇಗಾರು ಗ್ರಾಮ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

೦೮. ಸಂದರ್ಶನ: ಶ್ರೀ ಪುಟ್ಟ, ನೇತ್ರವಳ್ಳಿ, ಎಡಗಾರು ಮತ್ತು ಗುಲಗಂಜಿ ಮನೆಯಿಂದ ಪುನರ್ವಸತಿ ಹೊಂದಿದವರು. ಶೃಂಗೇರಿ ತಾಲ್ಲೂಕು, ಚಿ.ಮ.ಜಿಲ್ಲೆ.

೦೯. ಸಂದರ್ಶನ: ಶ್ರೀಮತಿ ಶಾರದ, ನೀಲಂದೂರು, ಬೇಗಾರು ಪಂಚಾಯತ್, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

೧೦. ಸಂದರ್ಶನ: ಶ್ರೀ ಬಾಬು ಮಲೆಕುಡಿಯ, ಕೆರ್ವಾಶೆ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ.

೧೧. ಬೈರಪ್ಪ ಕೆ. ಸಮಾಜಶಾಸ್ತ್ರದ ಮೂಲತತ್ವಗಳು. ಕೇಂಬ್ರಿಡ್ಜ್ ಪಬ್ಲಿಷಿಂಗ್ ಕಂಪನಿ. ಬೆಂಗಳೂರು. ೧೯೯೭. ಪು ಸಂ: ೨೧೯,೨೨೦,೨೨೧.

೧೨. ಸಂದರ್ಶನ: ಶ್ರೀ ಬಾಬು ಮಲೆಕುಡಿಯ, ಪೆರ್ನೋಡಿ, ಮಂಗಳೂರು ತಾಲ್ಲೂಕು. ದ.ಕ ಜಿಲ್ಲೆ.

೧೩. ಸಂದರ್ಶನ: ಶ್ರೀ ಪುಟ್ಟ, ನೇತ್ರವಳ್ಳಿ, ಶೃಂಗೇರಿ ತಾಲ್ಲೂಕು. ಚಿಕ್ಕಮಗಳೂರು ಜಿಲ್ಲೆ.

೧೪. ಸಂದರ್ಶನ: ಶ್ರೀ ದೇವೆಂದ್ರ, ಮೆಣಸಿನಹಾಡ್ಯ. ಕೊಪ್ಪ ತಾಲ್ಲೂಕು, ಚಿಕ್ಕಮಮಗಳೂರು ಜಿಲ್ಲೆ.

೧೫. ಸಂದರ್ಶನ: ಶ್ರೀಮತಿ ಶಾರದ, ನೀಲಂದೂರು. ಶೃಂಗೇರಿ ತಾಲ್ಲೂಕು. ಚಿಕ್ಕಮಗಳೂರು ಜಿಲ್ಲೆ.

೧೬. http://www.who.int/about/mission/en/

೧೭. National Aboriginal Health Strategy, 1989, http://www.ahmrc.org.au

೧೮. Duggal R. Health care Budget in changing political economy. Economic and Political Weekly. May:1997:17-24.

೧೯. ಸಂದರ್ಶನ: ಶ್ರೀ ಪ್ರಶಾಂತ, ಬಿಳಿಗಲ್ ನಿವಾಸಿ. ಕುದುರೆಮುಖ.

೨೦. ಸಂದರ್ಶನ: ಶ್ರೀಮತಿ ವಸಂತ ವೆಂಕಪ್ಪ, ಪರ್ನೋಡಿ, ಮಂಗಳೂರು ತಾಲ್ಲೂಕು, ದ.ಕ ಜಿಲ್ಲೆ.

೨೧. ಸಂದರ್ಶನ: ಶ್ರೀ ವಿಶ್ವನಾಥ, ಮಾಳ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ.

೨೨. ಸಂದರ್ಶನ: ಶ್ರೀ ವಿದ್ಯಾಸಾಗರ, ಬೇಗಾರು, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

೨೩. ಸಂದರ್ಶನ: ಶ್ರೀಮತಿ ಶಾರದ, ನೀಲಂದೂರು, ಬೇಗಾರು ಗ್ರಾಮಪಂಚಾಯತ್, ಶೃಂಗೇರಿ ತಾಲ್ಲೂಕು. ಚಿಕ್ಕಮಗಳೂರು ಜಿಲ್ಲೆ.

೨೪. ಸಂದರ್ಶನ: ಶ್ರೀಮತಿ ವಸಂತ ವೆಂಕಪ್ಪ. ಪೆರ್ನೋಡಿ. ಮಂಗಳೂರು ತಾಲ್ಲೂಕು. ದ.ಕ ಜಿಲ್ಲೆ.

೨೫. ಸಂದರ್ಶನ: ಶ್ರೀ ಸುಧಾಕರ. ಹೊರಳಾನೆ. ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಅಧ್ಯಾಯ ೫

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸ್ಥಳಾಂತರ ಮತ್ತು ಪುನರ್ವಸತೀಕರಣ: ವಿಶ್ಲೇಷಣೆ

ವಿಷಯಗಳು

Development will continue, however, to require changes in land use and water use and
Thus make various degrees of population relocation at times unavoidable…

Dr. Amartya Sen….

ಅಧ್ಯಾಯ ೫

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸ್ಥಳಾಂತರ ಮತ್ತು ಪುನರ್ವಸತೀಕರಣ: ವಿಶ್ಲೇಷಣೆ

ಆಧುನಿಕ ಅಭಿವೃದ್ಧಿಯ ಎರಡು ವಿಭಿನ್ನ ಚಹರೆಗಳೆಂದರೆ, ಸ್ಥಳಾಂತರ ಮತ್ತು ಪುನರ್ವಸತೀಕರಣ. ಸ್ಥಳಾಂತರ ಮತ್ತು ಪುನರ್ವಸತೀಕರಣದ ಭಾಗವಾಗಿ ಇಂದು ಭಾರತದಂತಹ ರಾಷ್ಟ್ರದಲ್ಲಿ ಸ್ಥಳಾಂತರದ ವಿಷಯವು ಚರ್ಚೆಗೆ ಗ್ರಾಸವಾಗಿದೆ. ಜಾಗತೀಕರಣದ ಇಂದಿನ ಕಾಲಕ್ಕೆ ಅಭಿವೃದ್ಧಿ ಮತ್ತು ಬೆಳವಣಿಗೆ ಆಹ್ವಾನಿತವಾದರೂ, ಅದರ ಪರಿಣಾಮ ವ್ಯಕ್ತಿ ಮತ್ತು ಆತನ ಕುಟುಂಬಕ್ಕೆ ದುಃಖಕರವಾದ ಸನ್ನಿವೇಶವನ್ನು ನೀಡುತ್ತದೆ. ಈ ಮೂಲಕ ತಮ್ಮ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಸಂಘಟಿತ ಬದುಕಿನ ಮೂಲ ನೆಲೆಗಳನ್ನು ಕಳೆದುಕೊಳ್ಳುವುದರ ಜೊತೆಗೆ ನಿರಾಶ್ರಿತರಾಗುವ ಭಯವನ್ನುಂಟು ಮಾಡುತ್ತಿದೆ. ಆದರೂ ಇಂದಿನ ಜಾಗತೀಕರಣ ಸ್ಥಿತಿಯಲ್ಲಿ ಅಭಿವೃದ್ಧಿ ಮತ್ತು ಬೆಳವಣಿಗೆ ಕುರಿತಂತೆ ಇರುವ ಚಿಂತನೆಗಳೆಂದರೆ ಅಭಿವೃದ್ಧಿ ಅವಶ್ಯವಾಗಿದೆ, ಹಾಗೂ ಅದರ ಭಾಗವಾಗಿ ಸ್ಥಳಾಂತರವು ದುಃಖಕರವೂ ಕೂಡ ಆಗಿದೆ. ಪುನರ್ವಸತೀಕರಣ ಪರಿಹಾರ ಅಥವಾ ಪ್ಯಾಕೇಜ್ ನೀಡುವ ಮೂಲಕ ಸ್ಥಳಾಂತರದ ವ್ಯತ್ಯಾಸಗಳನ್ನು ಭರಿಸಬಹುದು ಎನ್ನುವ ಮತ್ತೊಂದು ಚಿಂತನೆ. ಭಾರತೀಯ ಮಟ್ಟದಲ್ಲಿ ಸ್ಥಳಾಂತರದ ಪೂರ್ವ ಇತಿಹಾಸವನ್ನು ಗಮನಿಸುವುದಾದರೆ, ಪ್ರಕೃತಿ ವಿಕೋಪ, ಸಂಘರ್ಷಗಳಿಂದಾಗಿರುವ ಸ್ಥಳಾಂತರಕ್ಕಿಂತ ಹೆಚ್ಚು ಅಣೆಕಟ್ಟು, ಗಣಿಗಾರಿಕೆ, ಕಾರ್ಖಾನೆ ಸ್ಥಾಪನೆ, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯಂತಹ ಅಭಿವೃದ್ಧಿ ಕಾರ್ಯಗಳಲ್ಲಾಗಿದೆ. ಸಮೀಕ್ಷೆ ಪ್ರಕಾರ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯಂತಹ ಪ್ರಕಲ್ಪಗಳಿಂದ ೦.೬ ಮಿಲಿಯನ್ ಜನರು ಭಾರತದಲ್ಲಿ ಸ್ಥಳಾಂತರಕ್ಕೆ ಒಳಗಾಗಿದ್ದಾರೆ. ಈ ಪ್ರಕ್ರಿಯೆಯ ಮುಖೇನ ಅಭಿವೃದ್ಧಿ ಪ್ರಕಲ್ಪಗಳ ಸಂಕೋಲೆಗೆ ಆದಿವಾಸಿಗಳು, ದಲಿತರು ಮತ್ತು ಇತರೆ ಹಿಂದುಳಿದ ವರ್ಗಗದವರು ಹೆಚ್ಚು ಬಲಿಯಾಗುತ್ತಿದ್ದಾರೆ. ಸರ್ಕಾರವು ತಕ್ಷಣದ ಕಾಲದಲ್ಲಿ ತೆಗೆದುಕೊಳ್ಳದಿರುವ ಗಂಭೀರವಾದ ಕಾನೂನಾತ್ಮಕ ನಿರ್ಣಯದಿಂದ, ಅರಣ್ಯ ಮೂಲ ನಿವಾಸಿಗಳು ಮೂಲ ಸ್ವತ್ತುಗಳನ್ನು ಕಳೆದುಕೊಂಡು ಯಾವುದೇ ರೀತಿಯ ಪರಿಹಾರ ವ್ಯವಸ್ಥೆಗಳನ್ನು ಸರಿಯಾದ ಸಮಯದಲ್ಲಿ ಪಡೆದುಕೊಳ್ಳಲಾಗುತ್ತಿಲ್ಲ. ಅಭಿವೃದ್ಧಿಯ ಪ್ರಕಲ್ಪಗಳನ್ನೇ ಅನುಷ್ಠಾನಗೊಳಿಸುವುದು ಮುಖ್ಯವೆನಿಸಿರುವ ಸರ್ಕಾರದ ಆಡಳಿತ ನಡೆಸುವವರಿಗೆ ಉಳ್ಳವರ ಪಟ್ಟ ಸಹಿತವಾದ ಭೂಹಿಡುವಳಿಗಳು ಮಾತ್ರ ನೇರವಾಗಿ ಕಂಡುಬರುತ್ತದೆ ಹೊರತು, ಅರಣ್ಯ ವ್ಯಾಪ್ತಿಯ ನಡುವಿನಲ್ಲಿ ಆದಿ ಕಾಲದಿಂದಲೂ ತಮ್ಮ ಬದುಕನ್ನು ಕಟ್ಟಿಕೊಂಡಿರುವ ಆದಿವಾಸಿಗಳ ಪಟ್ಟಾ ರಹಿತವಾದ ಭೂಹಿಡುವಳಿಗಳಲ್ಲ.

ಭೂಹಿಡುವಳಿಗೆ ಸಂಬಂಧಿಸಿದಂತೆ ಆದಿ ಕಾಲದಿಂದಲೂ ಅನೇಕ ರೀತಿಯ ಸಮಸ್ಯೆಗಳನ್ನು ಅರಣ್ಯವಾಸಿ ಆದಿವಾಸಿಗಳು ಮತ್ತು ಇತರೆ ಅರಣ್ಯವಾಸಿಗಳು ಎದುರಿಸುತ್ತಲೇ ಬಂದಿದ್ದಾರೆ. ಆಡಳಿತ ನಡೆಸುವ ಸರ್ಕಾರ ಕಾಲ ಕಾಲಕ್ಕೆ ಭೂಹಿಡುವಳಿಗಳಿಗೆ ಸಂಬಂಧಿಸಿದಂತೆ

ಕ್ರಮಬದ್ಧವಾದ ನಿರ್ಣಯಗಳನ್ನು ತೆಗೆದುಕೊಂಡಿದ್ದರೆ, ಎಲ್ಲಾ ವರ್ಗದವರು ಪಟ್ಟಾ ಸಹಿತ ಭೂಹಿಡುವಳಿಗಳನ್ನು ಹೊಂದುತ್ತಿದ್ದರು. ಆದರೆ ಆಡಳಿತ ನಡೆಸುವ ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆಯ ಕಾರಣ ಇಂದು ಭೂಹಿಡುವಳಿಗಳನ್ನು ಕಳೆದುಕೊಳ್ಳುವ ಸಂದರ್ಭಗಳು ಎದುರಾಗಿವೆ. ರಾಷ್ಟ್ರದಾದ್ಯಂತ ಬಡತನವು ಹೆಚ್ಚಾಗಿರುವುದು ಕನಿಷ್ಟ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ವ್ಯವಸ್ಥೆಗಳಿಂದಲ್ಲ, ಆಶ್ರಯದ ಕೊರತೆಯಿಂದಲ್ಲ, ನಿರುದ್ಯೋಗದಿಂದಲ್ಲ ಬದಲಿಗೆ ಪ್ರಕಲ್ಪಗಳ ಅನುಷ್ಠಾನದಿಂದಾಗಿ ಸ್ಥಳಾಂತರಗೊಳ್ಳುವ ಸಮುದಾಯಗಳಿಗೆ ಕ್ರಮಬದ್ಧವಾದ ಭೂಹಿಡುವಳಿಗಳನ್ನು ನೀಡದೆ ಇರುವುದು ಎಂದರೆ ಅದು ಅತಿಶಯೋಕ್ತಿಯಾಗಲಾರದು. ಯಾವ ಪ್ರಕಲ್ಪಗಳ ಯೋಜನೆಗೆ ಉತ್ಪತ್ತಿಯುತ ಫಲವತ್ತತೆಯಿಂದ ಕೂಡಿರುವ ಭೂಹಿಡುವಳಿಯನ್ನು ನೀಡುತ್ತಾರೋ, ಅದೇ ಪ್ರಕಾರವಾಗಿ ಸ್ಥಳಾಂತರಗೊಂಡವರಿಗೆ ಭೂಹಿಡುವಳಿಗಳನ್ನು ನೀಡಿದ್ದರೆ, ಇಂದು ಬಡತನದ ಸಮಸ್ಯೆಯನ್ನು ರಾಷ್ಟ್ರವು ಎದುರು ನೋಡುತ್ತಿರಲಿಲ್ಲ. ಭಾರತ ರಾಷ್ಟ್ರದಲ್ಲಿ ಇದುವರೆಗೂ ನಡೆದಿರುವ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯ ನಿಟ್ಟಿನಲ್ಲಿನ ಸ್ಥಳಾಂತರದ ಪ್ರಕಲ್ಪಗಳು ಫಲಭರಿತವಾಗದೇ ಇರುವ ಕಾರಣವೆಂದರೆ, ಭೂಹಿಡುವಳಿಯ ಸಮಸ್ಯೆ ಮತ್ತು ಅದರಿಂದ ಉತ್ಪತ್ತಿಯಾಗಳಾಗದೆ ಕ್ಷೀಣಿಸುತ್ತಿರುವ ಆರ್ಥಿಕತೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು ಅವಲೋಕಿಸದರೂ ಕೂಡ, ಎಲ್ಲಾ ಸಮುದಾಯದವರ ಮುಂದಿರುವ ಬೃಹತ್ ಜಟಿಲವಾದ ಸಮಸ್ಯೆಯೆಂದರೆ, ಭೂಹಿಡುವಳಿಯ ಸಮಸ್ಯೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ರಚನೆಯಾಗಿ ಗತಿಸಿದ ಇಷ್ಟು ಕಾಲಕ್ರಮಣಿಕೆಯ ಪ್ರಮುಖವಾದ ಎರಡು ಸನ್ನಿವೇಶಗಳು ಸವಾಲಿನ ರೂಪದಲ್ಲಿ ಕಂಡುಕೊಂಡಿದೆ. ಒಂದು, ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮದ ಮುಖಾಂತರ ಆರಂಭವಾದ 'ಕುದುರೆಮುಖ ಕಬ್ಬಿಣ ಅದಿರು ಕಂಪನಿ'ಯು ಸ್ಥಾಪನೆಯಾಗಿದ್ದು. ಭದ್ರಾ–ತುಂಗ ಮೂಲ, ವನ್ಯಜೀವಿ ಸಂಪತ್ತು, ಅರಣ್ಯ ಸಂಪತ್ತು ಮತ್ತು ಜಲ ಮೂಲ ಸಂಪತ್ತನ್ನು ಕಲುಷಿತಗೊಳಿಸುವ ಅದಿರು ಸೋಸುವಿಕೆ ಕಾರ್ಯದಿಂದ. ಎರಡು, ರಾಷ್ಟ್ರೀಯ ಉದ್ಯಾನವನ ಉದ್ಘೋಷಣೆಯೊಂದಿಗೆ ಗಿರಿಜನರ, ರೈತರ ಮತ್ತು ಇತರೆ ಅರಣ್ಯವಾಸಿಗಳ, ವಾಸದ ಪ್ರದೇಶಗಳನ್ನು ಜನಮುಕ್ತಗೊಳಿಸಿ, ವನ್ಯಜೀವಿ ಮತ್ತು ಮಾನವ ಅಪಹೊಂದಾಣಿಕೆಯ ಸಂಘರ್ಷಗಳನ್ನು ತಡೆಯುವಿಕೆಯೆಡೆ ಜನರನ್ನು ಸ್ಥಳಾಂತರಗೊಳಿಸಿ (ಒಕ್ಕಲೆಬ್ಬಿಸಿ) ಪುನರ್ವಸತಿ ಕಲ್ಪಿಸುವುದು. ಅದರಲ್ಲೂ ಸ್ವಇಚ್ಛೆ ಮೇರೆಗೆ ಎಂಬ ನಾಣ್ಣುಡಿಯಡಿಯಲ್ಲಿ ಸಂಕೋಲೆಗಳಿಂದ ಬಂಧಿಸಿಬಿಡುವ ಸನ್ನಿವೇಶಗಳನ್ನಾಧರಿಸಿ. ಈ ಮೇಲಿನ ಎರಡು ಸನ್ನಿವೇಶಗಳು ಸ್ಥಳೀಯಜನತೆಗೆ ಪರಿಸರ ಉಳಿಸಿಕೊಳ್ಳುವ ಜಿದ್ದಿಗೆ ಬೀಳುವಂತೆ ಮತ್ತು ಉಳಿಸಿಕೊಂಡಿದ್ದನ್ನು ಅನುಭವಿಸದೇ ತೊರೆದುಕೊಳ್ಳುವ ಜಿಜ್ಞಾಸೆಗೆ ಬೀಳುವಂತೆ ತಮ್ಮ ಅಸ್ತಿತ್ವಕ್ಕೆ ಪ್ರಶ್ನೆಮಾಡಿಕೊಳ್ಳುವಂತೆ? ಸೃಷ್ಟಿಯಾಗಿದೆ. ವಾಸ್ತವವಾಗಿ ಸೃಷ್ಟಿಯಾಗಿರುವ ಸನ್ನಿವೇಶಗಳನ್ನು ಕುರಿತು ಕ್ಷೇತ್ರಾಧ್ಯಯನದಲ್ಲಿ ಸ್ಥಳಿಯರನ್ನು ಪ್ರಶ್ನಿಸಿದಾಗ ಹಲವಾರು ಋಣಾತ್ಮಕ ಮತ್ತು ಧನಾತ್ಮಕ ನಿಲುವುಗಳು ಹೊರಹೊಮ್ಮಿದವು, ಅವುಗಳನ್ನಾಧರಿಸಿ ನಿಲುವುಗಳನ್ನು ಈ ಅಧ್ಯಾಯದಲ್ಲಿ ಕ್ರೋಢೀಕರಿಸಿ ರಚಿಸಲಾಗಿದೆ. ಅಧ್ಯಾಯ ೩ ರಲ್ಲಿ ಸ್ಥಳಿಯರು ಸ್ಥಳಾಂತರ (ಒಕ್ಕಲೆಬ್ಬಿಸುವಕೆ) ಮತ್ತು

ಪುನರ್ವಸತೀಕರಣದ ಕುರಿತಾದ ಸವಾಲುಗಳನ್ನು ಸಂಗತಿಗಳ ಆಧಾರವಾಗಿ ಸ್ಪಷ್ಟಗೊಳಿಸಲಾಗಿದೆ. ಅಧ್ಯಾಯ ೪ರಲ್ಲಿ ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಮತ್ತು ಪುನರ್ವಸತೀಕರಣದ ಕುರಿತಾದ ಸಾಂಖಿಕ ವಿಶ್ಲೇಷಣಾ ವರದಿಯನ್ನು ಉಲ್ಲೇಖಿಸಿ, ಪ್ರಸ್ತುತ ಅಧ್ಯಯನದಲ್ಲಿ ಪುನರ್ವಸತೀಕರಣಗೊಂಡವರು ಎದುರಾದ ಸವಾಲುಗಳನ್ನು ಸಾದ್ಯತೀಕರಣಗೊಳಿಸಿಕೊಂಡಿರುವ ಕುರಿತಾಗಿ ತಿಳಿಯೋಣ.

೧. ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಮತ್ತು ಪುನರ್ವಸತೀಕರಣದ ಸಾಧ್ಯತೆಗಳು

೦೧. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಉದ್ಘೋಷಣೆಯಾದ ಸಂದರ್ಭದಲ್ಲಿ ಗಿರಿಜನರಿಗೆ ಮತ್ತು ರೈತರಿಗೆ ಸೂಚನಾ ಪತ್ರವನ್ನು ಕಂದಾಯ ಇಲಾಖೆಯಿಂದ ನೀಡಿದರು. ಸೂಚನಾ ಪತ್ರ ಕೈ ಸೇರಿದ ನಂತರ ಗಿರಿಜನರು ಮತ್ತು ರೈತರು ಒಗ್ಗಟ್ಟಾಗಿ ರಾಷ್ಟ್ರೀಯ ಉದ್ಯಾನವನ ಮಾಡಬಾರದಾಗಿ ಹೋರಾಟವನ್ನು ಆರಂಭಿಸಿದವು. ಈ ಹೋರಾಟದ ಮುಂದಿನ ಭಾಗವಾಗಿ ಕರ್ನಾಟಕ ವಿಮೋಚನಾ ರಂಗ ಆರಂಭವಾಯಿತು. ರಾಷ್ಟ್ರೀಯ ಉದ್ಯಾನವನ ರಚನೆ ವಿರುದ್ಧ ಹೋರಾಟ ನಡೆಯುವಾಗಲೇ ಸರ್ಕಾರ ಅಂತಿಮ ಘೋಷಣೆಯನ್ನು ೨೦೦೧ ಜೂನ್ ೧೮ ರಂದು ಹೊರಡಿಸಿತು. ಈ ಸಂದರ್ಭದಲ್ಲಿ ಕರ್ನಾಟಕ ವಿಮೋಚನಾ ರಂಗದ ಕೆಲವು ಹೋರಾಟಗಾರರು ನಕ್ಸಲೀಯವಾದದ ಪರವಾಗಿ ನಿಂತು ನಕ್ಸಲ್ ಚಟುವಟಿಕೆಗಳನ್ನು ಆರಂಭಿಸಿದರು. ಅಲ್ಲಲ್ಲೇ ಸಭೆ ಸೇರುವುದು, ಚರ್ಚಿಸುವುದು ಇತರೆಯವುಗಳಾಗಿ ಕಾರ್ಯಚಟುವಟಿಕೆಗಳು ಚಿಗುರೊಡೆದವು. ಇಂತಹ ಸಂದರ್ಭದಲ್ಲಿ ಚುನಾವಣಾ ಕಣವೂ ರಂಗೇರಿತ್ತು. ಇತ್ತ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಕಲ್ಲುಗುಡ್ಡೆ ಪ್ರದೇಶದ ಮೆಣಸಿನಹಾಡ್ಯ, ಕೆರೆಕಟ್ಟೆ, ಮುಂತಾದ ಸ್ಥಳಗಳಲ್ಲಿ ಚುನಾವಣಾ ಬಹಿಷ್ಕಾರಿಸಿ ಹೋರಾಟಕ್ಕೆ ಮುನ್ನುಗ್ಗಿದೆವು. ತರುವಾಯದ ಸಮಯದಲ್ಲಿ ನಕ್ಸಲೀಯ ಚಟುವಟಿಕೆಗಳು ಗರಿಗೆದರಿ ಚುರುಕುಗೊಂಡಿದ್ದ ಕಾಲದಲ್ಲಿ ನಕ್ಸಲ್ ನಿಗ್ರಹ ದಳದವರು ರಾಷ್ಟ್ರೀಯ ಉದ್ಯಾನವನಕ್ಕೆ ಕಾಲಿಟ್ಟರು. ಈ ಸಂದರ್ಭದಲ್ಲಿ ಸರ್ಕಾರವು ಉದ್ಯಾನವನ ಗಡಿ ಗುರುತಿಸುವಕಾರ್ಯವನ್ನು ನೆಡೆಸುತ್ತಿತ್ತು. ಆದರೆ, ಒಳ ಪ್ರದೇಶದಲ್ಲಿರುವವರಿಗೆ ಯವುದೇ ಸರ್ವೆಯ ಕುರಿತಾದ ವಿಷಯವನ್ನು ಹಾಗೂ ದಾಖಲಾತಿಯನ್ನು ನೀಡದೆ ಮೌನವನ್ನು ವಹಿಸಿತ್ತು. ನಕ್ಸಲೀಯ ಚಟುವಟಿಕೆಗಳು ಚುರುಕುಗೊಂಡಿದ್ದ ಕಾಲದಲ್ಲಿ ನಕ್ಸಲ್ ನಿಗ್ರಹದಳದವರು ಕಾರ್ಯಚರಣೆಗಳನ್ನು ನಡೆಸಿ ಸಾಕಷ್ಟು ಕೇಸ್‌ಗಳನ್ನು ಸಾಮಾನ್ಯ ಜನರ ಮೇಲೆ ಹಾಕತೊಡಗಿದರು. ಇದೆ ಸಂದರ್ಭಕ್ಕೆ ಅಪಾಯಗಳು ತಪ್ಪಿದ್ದಲ್ಲ ಎಂದು ಹೆದರಿದ ಶ್ರೀಮಂತರು ರಾಜಕೀಯ ಪ್ರಭಾವದಿಂದ ತಮ್ಮ ಜಮೀನುಗಳನ್ನು ಇಲಾಖೆಗೆ ವಹಿಸಿ ಸ್ವ ಇಚ್ಚೆಯ ಮೇರೆಗೆ ಪರಿಹಾರವನ್ನು ಪಡೆದು ಹೊರ ನಡೆದರು. ಕೂಲಿ ನೀಡುತ್ತಿದ್ದ ಶ್ರೀಮಂತ ವ್ಯಕ್ತಿಯೇ ಇಲ್ಲಿಂದ ಹೊರಹೋದ ಮೇಲೆ ಕೂಲಿ ಮಾಡುವವರ ಗತಿ ಏನು? ಎಂಬ ಆಲೋಚನೆಯಲ್ಲಿ ಬಡ ಮತ್ತು ಸಣ್ಣ ರೈತರು ಸ್ವ ಇಚ್ಚೆಯ ಸ್ಥಳಾಂತರಕ್ಕೆ ಅರ್ಜಿಸಲ್ಲಿಸಿ ಇರುವ ಸ್ಥಳಗಳಿಂದ ಹೊರ ಹೋದರು. ಎಂದು ಮೆಣಸಿನಹಾಡ್ಯದ ಗೌಡಲು ದೇವೇಂದ್ರ ಅವರ ಅಭಿಪ್ರಾಯ.

೦೨. ಕಾಡಿನಲ್ಲಿಯೇ ಇದ್ದು ತಕ್ಕ ಮಟ್ಟಿನ ವಿದ್ಯಾಭ್ಯಾಸ ಪಡೆದಿರುವ ಮಕ್ಕಳು ದುಡಿಮೆಯನ್ನು ನಂಬಿಕೊಂಡು ಬೆಂಗಳೂರು ಮತ್ತು ಪಟ್ಟಣ ಪ್ರದೇಶಗಳನ್ನು ಸೇರಿಕೊಂಡಿದ್ದಾರೆ. ಹಬ್ಬ ಹರಿದಿನಗಳಲ್ಲಿ ಮಾತ್ರ ನಮ್ಮ ಸ್ಥಳಗಳಿಗೆ ಬಂದು ಮರುದಿನ ಕೆಲಸಕ್ಕೆ ಮರಳುತ್ತಾರೆ. ಇಷ್ಟರ ನಡುವೆ ಇರುವ ನಾವು ೭೦ ವರ್ಷ ಮೀರುತ್ತಿರುವ ತಂದೆ ತಾಯಿಗಳು ಕೃಷಿಯನ್ನು ಆಶ್ರಯಿಸಿ ಜೀವಿಸುವುದು ಕಷ್ಟಸಾಧ್ಯ. ಈ ತರಹದ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಉದ್ಯಾನವನ ವೃದ್ಧಾಶ್ರಮದ ತಾಣಗಳಾಗಿ ಪರಿಣಮಿಸುತ್ತಿವೆ ಮತ್ತು ಕೂಲಿಯನ್ನು ಮಾಡುವುದಕ್ಕೆ ರಟ್ಟೆಯಲ್ಲಿ ಶಕ್ತಿಯಿಲ್ಲ. ನಮ್ಮನ್ನು ನೋಡಿಕೊಳ್ಳುವವರು ಯಾರು ಇಲ್ಲ, ಇವೆಲ್ಲ ಕಾರಣಗಳಿಂದ ನಾವು ಹೊರಬರುವುದಕ್ಕಾಗಿ ಅರಣ್ಯ ಇಲಾಖೆಗೆ ಸ್ವ ಇಚ್ಛೆಯ ಮೇರೆಗೆ ಒಕ್ಕಲೇಳುವುದಕ್ಕೆ ಅರ್ಜಿಯನ್ನು ಸಲ್ಲಿಸಿ ಪುನರ್ವಸತೀಕರಣ ಹೊಂದುತ್ತಿದ್ದೇವೆ ಎಂದು ಮೇಗೂರು ಒಟ್ಟಳ್ಳದ ರಾಮೇಗೌಡರ ನಿಲುವುಗಳು.

೦೩. ಇಂದಿಗೆ ೪ ವರ್ಷವಾಗಿದೆ ನನ್ನ ಕೈ ಕಾಲುಗಳು ಸ್ವಾಧೀನ ಇಲ್ಲವಾಗಿದೆ. ಕೃಷಿ ಕಾರ್ಯ ಮಾಡಿಕೊಂಡಿದ್ದವನು ನಾನು. ಮಕ್ಕಳು ಎಂದಿನಂತೆ ಕಾಲೇಜಿಗೆ ತೆರಳಿದ್ದರು, ಮನೆಯವರು ಪಕ್ಕದ ಮನೆಯ ಕಾರ್ಯಕ್ಕೆ ಹೋಗಿದ್ದರು. ಕೃಷಿ ಕಾರ್ಯದಲ್ಲಿ ನಿರತನಾಗಿದ್ದ ನನಗೆ ಇದ್ದಕ್ಕಿದ್ದ ಹಾಗೆ ಒಂದು ದಿನ ಕೈ ಕಾಲುಗಳು ಊದಿಕೊಂಡು ಸ್ವಾಧೀನ ಇಲ್ಲವಾದವು. ಈ ವ್ಯವಸ್ಥೆಯಲ್ಲಿ ನನಗೆ ಕೃಷಿ ಮಾಡಲು ಆಗುತ್ತಿಲ್ಲ. ಮಕ್ಕಳ ಶಿಕ್ಷಣವೂ ಕೂಡ ಅರ್ಧಕ್ಕೆ ನಿಂತರೆ ಅವರ ಭವಿಷ್ಯ ಆಳಾಗುವುದು. ಈ ದೃಷ್ಟಿಯಿಂದ ನಾವು ಒಕ್ಕಲೇಳುವಿಕೆಗೆ ಅರ್ಜಿಸಲ್ಲಿಸಿ ಪುನರ್ವಸತಿ ಪಡಿಯುತ್ತಿದ್ದೇವೆ. ಆರೋಗ್ಯವೇ ಇಲ್ಲವೆಂದ ಮೇಲೆ ಈ ಕಾಡಿನಲ್ಲಿ ಹೇಗಿರುವುದು ಹಾಗೂ ಮಕ್ಕಳ ಶಿಕ್ಷಣಕ್ಕೆ ಹಣ ಹೊಂದಿಸುವುದು ಕೂಡ ಇಂದಿಗೆ ಸಾಧ್ಯವಾಗದ ಮಾತು. ಎಂದು ಮೇಗೂರು ಒಟ್ಟಳ್ಳದ ಮಂಜೇಗೌಡರ ಅಭಿಪ್ರಾಯ.

೦೪. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಉದ್ಘೋಷಣೆಯಾಗುವಾಗ ಗಡಿ ಗುರ್ತಿಸುವಿಕೆ ಕಾರ್ಯಕ್ಕೆ ಚಾಲನೆ ನೀಡಿದರು. ಈ ಕುರಿತಂತೆ ಹಲವಾರು ಬಾರಿ ಉಪ ವಿಭಾಗಾಧಿಕಾರಿಗಳಿಗೆ, ಕಂದಾಯ ಇಲಾಖಾ ವ್ಯವಸ್ಥಾಪಕರಿಗೆ ಜನ ವಸತಿ ಪ್ರದೇಶಗಳನ್ನು ಹೊರತುಪಡಿಸಿ ಗಡಿಗಳನ್ನು ಉಲ್ಲೇಖಗೊಳಿಸಬೇಕೆಂದು ಮನವಿ ಮಾಡಿದೆವು ಜೊತೆಗೆ ಉದ್ಯಾನವಿರೋಧಿ ಒಕ್ಕೂಟದೊಂದಿಗೆ ಹೋರಾಟವನ್ನು ಮಾಡಿದೆವು. ನಮ್ಮ ಯಾವುದೇ ಬೇಡಿಕೆಗಳಿಗೆ ಸ್ಪಂದಿಸದೆ ಏಕಾ ಏಕಿಯಾಗಿ ೨೦೦೧ ಜೂನ್ ೧೮ ರಂದು ಅಂತಿಮ ಘೋಷಣೆಯನ್ನು ಹೊರಡಿಸುವುದರೊಂದಿಗೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು ರಚನೆಮಾಡಿದ್ದಾರೆ. ಯಾವುದೇ ಉದ್ಯಾನವನ ರಚನೆಯ ಪೂರ್ವದಲ್ಲಿ ಅಲ್ಲಿನ ಸ್ಥಳಿಯರ ಸ್ವೀಕೃತಿ ಮತ್ತು ತಿರಸ್ಕಾರದ ಕುರಿತಾಗಿ ಅಂದರೆ, ಸೆಟಲ್ಮೆಂಟ್ ಆಫ್ ಕ್ಲೇಮ್ಸ್‌ಗಳನ್ನು ಕ್ರಮಗೊಳಿಸಬೇಕು, ಈ ಪ್ರಕ್ರಿಯೆಯ ಯಾವ ಮಾನದಂಡವನ್ನು ಪಾಲಿಸದೇ ರಾಷ್ಟ್ರೀಯ ಉದ್ಯಾನವನವನ್ನು ರಚನೆ ಮಾಡಿ ನಮ್ಮ ಹಕ್ಕುಗಳನ್ನು ಮತ್ತು ಅಸ್ತಿತ್ವವನ್ನು ನಾವೇ ಪ್ರಶ್ನಿಸಿಕೊಳ್ಳುವಂತಾಗಿದೆ. ಈ ಮೂಲಕ ನಮಗೆ ತಿಳಿದಿರುವುದು, ಯಾವುದೇ ಹೋರಾಟವಾಗಲಿ, ಸತ್ಯಾಗ್ರಹವಾಗಲಿ ಪ್ರಭುತ್ವಕ್ಕೆ ಅರ್ಥವಾಗುವುದಿಲ್ಲ. ದಿನಕ್ಕೊಂದು ಕಾನೂನು ರಚನೆ ಯಾವಾಗ ಯಾವ ಕಾನೂನು ರಚನೆಯಾಗಿ ಒಮ್ಮೆಲೆ

ಬಿಡಬೇಕಾಗುವುದೋ ಎಂಬ ಆತಂಕದಿಂದ ಒಕ್ಕಲೇಳಲು ಸ್ವಯಂಪ್ರೇರಿತವಾಗಿ ಒಪ್ಪಿ ಇಲಾಖೆಗೆ ಪುನರ್ವಸತೀಕರಣಕ್ಕೆ ಅರ್ಜಿ ಹಾಕಿದೆವು, ಎಂದು ಮೇಣಸಿನಹಾಡ್ಯ, ಕಲ್ಲುಗುಡ್ಡೆ ಸೋಮಣ್ಣ ಅವರ ಅನುಭವದ ನಿಲುವುಗಳು.

೦೫. ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಾದ್ದರಿಂದ ಯಾವುದೇ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುವಿಕೆಗೆ ಅವಕಾಶ ಸಿಗುತ್ತಿರಲಿಲ್ಲ. ರಸ್ತೆ, ವಿದ್ಯುತ್, ಉತ್ತಮ ಶಾಲೆ, ಆಸ್ಪತ್ರೆ, ದಿನಸಿ ವ್ಯವಸ್ಥೆಯಂತಹ ಅಂಶಗಳು ಕೊರತೆಯಾಗಿದ್ದವು. ಇಂತಹ ಸನ್ನಿವೇಶಗಳಲ್ಲಿ ಇಲಾಖೆಗೆ ಹಲವಾರು ಬಾರಿ ಮನವಿ ಮಾಡಿದರೂ ಕೂಡ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅನುಮತಿ ದೊರೆಯದಾಗಿತ್ತು. ಒಮ್ಮೆ ಹಳ್ಳದ ಮೇಲೆ ಸೇತುವೆ ನಿರ್ಮಾಣ ಕಾರ್ಯಕ್ಕೆ ಗ್ರಾಮ ಪಂಚಾಯತ್ ನಿಂದ ಹಣ ಬಿಡುಗಡೆಯಾಗಿ ಕಾರ್ಯಾರಂಭ ಮಾಡುವುದಕ್ಕೆ ಸಕಲ ಪರಿಕರಗಳನ್ನು ವ್ಯವಸ್ಥೆಗೊಳಿಸಲಾಗಿತ್ತು, ಆದರೆ ರಾಷ್ಟ್ರೀಯ ಉದ್ಯಾನವನದಲ್ಲಿ ಏಕಾಏಕಿ ಈ ಪ್ರಕಾರದ ವ್ಯವಸ್ಥೆಗೆ ವನ್ಯಜೀವಿ ಮಂಡಳಿಯ ಅನುಮತಿ ಪಡೆಯಬೇಕಾಗುತ್ತದೆ ಎಂಬ ಅಂಶಗಳನ್ನು ಮುಂದಿಟ್ಟು ಸೇತುವೇ ಕಾರ್ಯವನ್ನು ನಿಲ್ಲಿಸಲಾಯಿತು. ನಮಗೆ ಸಿಗಬೇಕಾದ ಮೂಲಭೂತ ಸೌಲಭ್ಯಗಳು ದೊರೆಯದೆ ಇರುವ ಸ್ಥಳಗಳಿಂದ ಪೇಟೆ ಸ್ಥಳಗಳಿಗೆ ೮ ರಿಂದ ೧೦ ಕಿ.ಮೀ ದೂರ ಕಾಲುನಡಿಗೆಯಲ್ಲಿ ಕ್ರಮಿಸ ಬೇಕಿತ್ತು. ಆಸ್ಪತ್ರೆಗಳಿಂದ ತುರ್ತಾಗಿ ಸೇವೆ ಪಡೆಯುವುದು ಕೂಡ ಕಷ್ಟ ಸಾಧ್ಯವಾಗಿತ್ತು. ಇವೆಲ್ಲ ಅಂಶಗಳನ್ನು ಗಮನದಲಿರಿಸಿಕೊಂಡು ಉದ್ಯಾನವನ ವ್ಯಾಪ್ತಿಯಿಂದ ಪುನರ್ವಸತಿ ಹೊಂದಿದೆವು ಎಂದು ಬೆಳ್ತಂಗಡಿ ವಲಯದ ಬೆಲ್ಲ ಸ್ಥಳದಿಂದ ಪೆರ್ನೋಡಿ ಸ್ಥಳಕ್ಕೆ ಪುನರ್ವಸತಿ ಹೊಂದಿರುವ ಶ್ರೀ ಪುಟ್ಟಣ್ಣ ಮಲೆಕುಡಿಯ ಅವರ ಅಭಿಪ್ರಾಯ.

೦೬. ಮೂಲಭೂತ ಸೌಕರ್ಯಗಳ ಕೊರತೆ ಎದುರಿಸುತ್ತಿರುವ ನಾವು, ಶಾಲೆಯ ವ್ಯವಸ್ಥೆಗಳನ್ನು ಪಡೆಯದೇ ಶೈಕ್ಷಣಿಕವಾಗಿ ಹಿಂದುಳಿದು ಭೌದ್ಧಿಕವಾಗಿ ಸಮರ್ಥರಾಗಲಿಲ್ಲ. ಶಿಕ್ಷಣ ಪಡೆಯದ ಹೊರತು ಉತ್ತಮವಾದ ಉದ್ಯೋಗ ಸಿಗುವುದಿಲ್ಲ. ಉತ್ತಮ ಉದ್ಯೋಗ ಸಿಗದಿದ್ದರೆ, ಆರ್ಥಿಕವಾಗಿ ಉನ್ನತಮಟ್ಟಕ್ಕೆ ಏರಲು ಸಾಧ್ಯವಿಲ್ಲ. ಸರಿಸುಮಾರು ೨೦೧೧ರ ವೇಳೆಯಲ್ಲಿ ನಮ್ಮ ಮಗ ಸಂದರ್ಶನಕ್ಕೆಂದು ಬೆಂಗಳೂರಿನ ಕಂಪನಿಯೊಂದಕ್ಕೆ ತೆರಳಿ ಆಯ್ಕೆಯಾಗಿದ್ದನು, ನಕ್ಸಲ್ ಪೀಡಿತ ಪ್ರದೇಶದವರೆಂದು ನಮ್ಮ ಮಗನ ಆಯ್ಕೆಯನ್ನು ನಿರಾಕರಿಸಿದರು. ಇದರ ನಡುವೆ, ಮಳೆಗಾಲದಲ್ಲಿ ಕುತ್ಲೂರು ಅಳಂಬ ಸುತ್ತಿಗಟ್ಟೆಯು ಅಕ್ಷರ ಸಹ ನಡುಗಡ್ಡೆಯಾಗಿ ಪರಿಣಮಿಸುತ್ತದೆ. ಹೊಳೆಯ ಹರಿವು ಕಡಿಮೆಯಾಗದ ಹೊರತು ಮಕ್ಕಳಾಗಲಿ, ದೊಡ್ಡವರಾಗಲಿ ಅದನ್ನು ದಾಟಿ ಶಾಲೆಗಳಿಗೆ ಹಾಗೂ ಇತರೆ ದಿನವಹಿ ಕೆಲಸ ಕಾರ್ಯಗಳಿಗೆ ತೆರಳುವುದು ಸುಲಭವಾಗಿರಲಿಲ್ಲ. ಆದ್ಧರಿಂದ ಮಕ್ಕಳ ಭವಿಷ್ಯ ಮತ್ತು ಅವರ ಶೈಕ್ಷಣಿಕ ಹಿತದೃಷ್ಟಿಯಿಂದ ಕುದುರೆಮುಖ ಉದ್ಯಾನವನದಿಂದ ಸ್ವ ಇಚ್ಛೆಯ ಮೇರೆಗೆ ಅರ್ಜಿ ಸಲ್ಲಿಸಿ ಪೆರ್ನೋಡಿ ಸ್ಥಳಕ್ಕೆ ಪುನರ್ವಸತಿ ಹೊಂದಿದ್ದೇವೆ. ಪುನರ್ವಸತಿ ಹೊಂದಿದರೇ ಸಾಲದು ಆ ಜಾಗದಿಂದ ಹೊರಬಂದು ಇರುವ ಸ್ಥಿತಿಯನ್ನು ಕಳೆದುಕೊಂಡರು ಎನ್ನುವಂತಾಗಬಾರದೆಂದು ಹೈನುಗಾರಿಕೆ ಚಟುವಟಿಕೆಯನ್ನು ಆರಂಭಿಸಿ ಆರ್ಥಿಕವಾಗಿ ಸದೃಢರಾಗಲು ಪ್ರಯತ್ನಿಸುತ್ತಿದ್ದೇವೆ ಎಂದು ಶ್ರೀಮತಿ ವಸಂತ ಮಲೆಕುಡಿಯ ಅವರ ನಿಲುವು.

೦೭. ಗಂಡ ಮತ್ತು ಮಗ ಇಬ್ಬರು ದೈವಾಧೀನರಾದ ಮೇಲೆ ೪ ಹೆಣ್ಣು ಮಕ್ಕಳೊಂದಿಗೆ ಬೆಲ್ಲ ಸುತ್ತುಗಟ್ಟಿಯಲ್ಲಿ ವಾಸ ಮಾಡುವುದು ಹಾಗೂ ಮಕ್ಕಳ ಭವಿಷ್ಯರೂಪಿಸುವುದು ಕಷ್ಟಸಾಧ್ಯವಾಯಿತು. ಇದರೊಂದಿಗೆ ಅನಕ್ಷರಸ್ಥೆಯಾದ ನಾನು ವಿಧವೆಯಾಗಿ ಸಮುದಾಯದ ಕಟ್ಟುಪಾಡುಗಳನ್ನು ಮೀರಿ ನಿಲ್ಲಬೇಕಿತ್ತು. ಪ್ರತಿ ಕಾರ್ಯಕ್ಕೂ ಅಕ್ಕ ಪಕ್ಕದ ದೂರದ ಅಣ್ಣ ತಮ್ಮಂದಿರು ನೆರೆಹೊರೆಯವರನ್ನು ಅಂಗಲಾಚಬೇಕಿತ್ತು. ಆ ಸಂದರ್ಭಕ್ಕೆ ಇಲಾಖೆಯಿಂದ ಸ್ವ ಇಚ್ಛೆ ಮೇರೆಗೆ ಪರಿಹಾರ ಪಡೆದು ಹೋರಹೋಗುವವರು ಅರ್ಜಿ ಸಲ್ಲಿಸುವ ಕುರಿತು ಸೂಚನೆಯನ್ನು ಕೇಳಿದೆ. ಈ ಸ್ಥಳದಲ್ಲಿರುವುದರಿಂದ ಹೆಣ್ಣು ಮಕ್ಕಳನ್ನು ವಿವಾಹ ಮಾಡುವುದು, ಇತರೆ ಕಾರ್ಯಗಳಿಗೆ ಅವರು ಬರುವುದು ದುಸ್ತರವಾಗುವುದು ಹಾಗೂ ಮುಖ್ಯವಾಹಿನಿಯಲ್ಲಿ ಸೇರಿಕೊಳ್ಳುವುದರಿಂದ ಇತರೆ ಮಕ್ಕಳಂತೆ ನಮ್ಮ ಮಕ್ಕಳು ಎಲ್ಲಾ ಸೌಲಭ್ಯವನ್ನು ಪಡೆದುಕೊಳ್ಳುತ್ತಾರೆ ಎನ್ನುವ ದೃಷ್ಟಿಯಲ್ಲಿ ಒಕ್ಕಲೇಳಲು ಅರ್ಜಿ ಸಲ್ಲಿಸಿ ೩ ವರ್ಷಗಳ ನಂತರ ಪುನರ್ವಸತಿಹೊಂದಿದೆ, ಎಂದು ಕೆರ್ವಾಶೆಯಲ್ಲಿ ನೆಲೆಸಿರುವ ಶ್ರೀಮತಿ ಗಿರಿಜಾ ಮಲೆಕುಡಿಯ ಅವರ ನಿಲುವುಗಳು.

೦೮. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ರಚನೆಗೂ ಪೂರ್ವದಲ್ಲಿ ನಾವು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದು, ಅಕ್ರಮ ಸಕ್ರಮದಡಿ ಅರ್ಜಿಯನ್ನು ಕಂದಾಯ ಇಲಾಖೆಗೆ ಎಷ್ಟು ಬಾರಿ ಸಲ್ಲಿಸಿದರು ಪಟ್ಟವಾಗಿ ಪರಿವರ್ತನೆಯಾಗಲಿಲ್ಲ. ಆ ವೇಳೆಗೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಘೋಷಣೆಯಾಗಿ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನಗೊಳ್ಳತೊಡಗಿತು. ಈ ಸಂದರ್ಭದಲ್ಲಿ ಸರ್ಕಾರವೇ ಒಂದು ಆದೇಶವನ್ನು ಉದ್ಯಾನವನ ರಚನೆ ಮಾಡುವಾಗ ಅನ್ವಯಿಸಿತು. ಅದು ೧೯೮೦ರ ಹಿಂದಿನಿಂದ ಬಗರ್ ಹುಕುಂ ಸಾಗುವಳಿ ಮಾಡುವವರಿಗೂ ಪರಿಹಾರ ನೀಡುತ್ತೇವೆ ಎಂದು. ಈ ಸಂದರ್ಭಗಳನ್ನು ಅನುಕರಿಸಿ ಮುಂದಿನ ಕಾನೂನುಗಳು ಹೇಗೋ ಏನೋ ಎಂದುಕೊಂಡು ರಾಷ್ಟ್ರೀಯ ಉದ್ಯಾನವನದಿಂದ ಪುನರ್ವಸತಿಯನ್ನು ಪಡೆದು ಒಕ್ಕಲೆದ್ದೆವು. ಉದ್ಯಾನವನ ವ್ಯಾಪ್ತಿಯಲ್ಲಿ ಮುಂದಿನ ದಿನ ಮಾನಗಳಲ್ಲಿ ಬಗರ್ ಹುಕುಂ ಮತ್ತು ಒತ್ತುವರಿ ಸಾಗವಳಿದಾರರಿಗೆ ಸಕ್ರಮದ ಅವಕಾಶ ಎಂದಿಗೂ ಆಗುವುದಿಲ್ಲ ಎಂಬುದನ್ನು ಪ್ರಸ್ತುತದವರೆಗೂ ಕಂಡುಕೊಂಡು ಬಂದಿದ್ದೇವೆ ಎಂದು ಬೆಳ್ತಂಗಡಿ ಬೆಲ್ಲಾ ಸುತ್ತುಗಟ್ಟಿಯಿಂದ ಪುನರ್ವಸತಿ ಹೊಂದಿರುವ ಶ್ರೀ ಬಾಬು ಮಲೆಕುಡಿಯ ಅವರ ನಿಲುವು.

೦೯. ವಾಸ್ತವದ ಸಂಗತಿ ಎಂದರೆ, ಹಲವು ವರ್ಷಗಳ ಹೋರಾಟದ ಫಲವಾಗಿ ಒತ್ತುವರಿ ಸಾಗುವಳಿ ಮೇಲೆ ಜಿಲ್ಲಾ ಆಡಳಿತ ಮತ್ತು ಅರಣ್ಯ ಹಕ್ಕು ಅಧಿನಿಯಮ ೨೦೦೬ ರ ಅನ್ವಯ ಅರಣ್ಯ ಹಕ್ಕು ಪತ್ರವನ್ನು ಪಡೆದಿದ್ದೇವೆ. ಆದರೆ, ಈ ಅರಣ್ಯ ಹಕ್ಕು ಪತ್ರವು ಮೂಲ ಪಟ್ಟವಾಗದೇ ಇರುವ ಕಾರಣ ಯಾವ ಬ್ಯಾಂಕಿನಲ್ಲೂ ಸಾಗುವಳಿ ಮಾಡಿದ ಭೂ ಹಿಡುವಳಿಯ ಮೇಲೆ ಸಾಲ ಸೌಲಭ್ಯವನ್ನು ನೀಡುವುದೇ ಇಲ್ಲ. ಈ ಕುರಿತು ಬ್ಯಾಂಕ್ ಮತ್ತು ಕಂದಾಯ ಇಲಾಖೆ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಅಧಿಕಾರಿಗಳಿಗೂ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಅಲ್ಲದೆ ಅರಣ್ಯ ಹಕ್ಕು ಪತ್ರದಲ್ಲಿ ಅರಣ್ಯ ಇಲಾಖೆಯ ಮತ್ತು ಜಿಲ್ಲಾಡಳಿತ ಮೊಹರುಗಳಿರುವುದರಿಂದ ಸಾಲವನ್ನು ನೀಡುವುದಕ್ಕೆ ಹಾಗೂ ಅಡಮಾನ ಮಾಡುವುದಕ್ಕೆ ಸರ್ಕಾರದಿಂದಲೇ ಆಕ್ಷೇಪವಿರುವ ಕಾರಣ ಇದು ಬಲ

ಕೈ ಯಿಂದ ದಾನ ಮಾಡಿ ಎಡ ಕೈಯಿಂದ ಕಿತ್ತುಕೊಂಡಂತಾಗಿದೆ. ಎಂದು ಸಿಂಗ್ಸಾರ್‌ನಿಂದ ಪುನರ್ವಸತಿ ಹೊಂದಿರುವ ಶ್ರೀ ತಮ್ಮಯ್ಯ ಅವರ ನಿಲುವು. ಈ ವಿಷಯ ಕುರಿತಂತೆ ಉದ್ಯಾನವನದ ಒಳ ಭಾಗದಲ್ಲಿರುವ ಬಿಳಿಗಲ್ ಹಾಗೂ ಕೆಂಗನಕೊಂಡ ನಿವಾಸಿಗಳದ್ದು ಇದೇ ನಿಲುವಾಗಿದೆ.

೧೦. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಒಳಭಾಗದಲ್ಲಿ ಅಂಡಾರು ಪ್ರದೇಶದಲ್ಲಿ ಮೂಲನಿವಾಸಿಗಳಾಗಿ ಕಾಲು ಎಕರೆ ಜಮೀನು ಪ್ರದೇಶದಲ್ಲಿ ಇಬ್ಬರು ಗಂಡು ಮಕ್ಕಳೊಂದಿಗೆ ಕೂಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೆವು. ಅಲ್ಪ ಕಾಲದಲ್ಲಿ ಮನೆಯ ಯಜಮಾನರು ತೀರಿಕೊಂಡರು, ಸಂಸಾರದ ಜವಾಬ್ದಾರಿಯು ಕ್ರಮೇಣ ನನ್ನ ಮೇಲೆಯೇ ಭಾರವಾಯಿತು. ಕೂಲಿಗಾಗಿ ಹೆಣ್ಣು ಮಗಳಾದ ನಾನು ಅಕ್ಕ ಪಕ್ಕದ ಊರುಗಳಿಗೆ ಹೋಗುವುದು ಕಾಡಿನಲ್ಲಿ ಒಂಟಿ ಜೀವನ ಸಾಗಿಸುವುದು, ಹಲವರ ದೃಷ್ಟಿ ಬೇರೆಯದೇ ರೀತಿಯಾಗಿ ಪರಿಣಮಿಸಿತು. ಈ ಸಂದರ್ಭಗಳು ನಮಗೆ ಅಗಳು ನುಂಗಲಾರದ ತುತ್ತಾಗಿ ಪರಿಣಮಿಸಿತು. ಇದರೊಂದಿಗೆ ಸಾಕಷ್ಟು ಹೆಣ್ಣು ಮಕ್ಕಳು ಮೊದಲ ಹೆರಿಗೆಗೆ ತವರು ಮನೆಗೆ ಬರುವುದು ಸಹಜ. ಹೆರಿಗೆ ಸಮಯದಲ್ಲಿ ನೋವು ಕಾಣಿಸಿಕೊಂಡಾಗ ಅರಣ್ಯದ ಒಳಪ್ರದೇಶಗಳಿಂದ ಆಸ್ಪತ್ರೆಗಳಿಗೆ ತಲುಪುವುದು ಬಹಳ ಕಷ್ಟವಾಗುತ್ತಿತ್ತು. ಇದಲ್ಲದೆ ಅಂಗನವಾಡಿಯಲ್ಲಿ ಸಿಗುವ ಗರ್ಭಿಣಿಯರಿಗೆ ಪೌಷ್ಟಿಕ ಆಹಾರ ಪಡೆದುಕೊಳ್ಳುವುದಕ್ಕೂ, ಇಳಿಜಾರ ಪ್ರದೇಶದಲ್ಲಿ ನಡೆದುಕೊಂಡು ಹೋಗುವುದು ತುಂಬು ಗರ್ಭಿಣಿಯರಿಗೆ ತುಂಬಾ ಪ್ರಯಸದ ಕಾರ್ಯವಾಗಿ ಪರಿಣಮಿಸುತ್ತಿತ್ತು. ಆದ್ದರಿಂದ ಪುನರ್ವಸತಿ ಸೌಲಭ್ಯವನ್ನು ಪಡೆದು ಇಬ್ಬರು ಗಂಡು ಮಕ್ಕಳೊಂದಿಗೆ ಅಂಡಾರು ಪ್ರದೇಶದಿಂದ ಕೂಡು ಬೆಟ್ಟು ಮಾಳ ಪ್ರದೇಶಕ್ಕೆ ಬಂದು ನೆಲೆಸಿದೆವು. ಇಲ್ಲಿ ನಮಗೆ ಹೆಚ್ಚು ಕೂಲಿ ಸಿಗುವುದರೊಂದಿಗೆ, ಮಕ್ಕಳು ವಿವಿಧ ವ್ಯಾಪಾರದಲ್ಲಿ ತೊಡಗಿ ಆರ್ಥಿಕವಾಗಿ ಇಂದು ಸದೃಡರಾಗಲು ಕಾರಣವಾಗಿದೆ. ಅಂದು ನಾನು ತೆಗೆದುಕೊಂಡ ನಿರ್ಧಾರ ಇಂದು ಫಲಪ್ರಧವಾಗಿ ಮಕ್ಕಳು ಆರ್ಥಿಕವಾಗಿ ಸದೃಡರಾಗಿ ವ್ಯಾಪಾರದಲ್ಲಿ ಅಭಿವೃದ್ಧಿಯನ್ನು ಕಂಡುಕೊಂಡಿದ್ದಾರೆ. ಎಂಬುದು ಶ್ರೀಮತಿ ವಾರಿಜ ಮಲೆಕುಡಿಯ ಕೂಡು ಬೆಟ್ಟು ನಿವಾಸಿ ಅವರ ನಿಲುವು.

೧೧. ಕಾನೂನು ತೊಡಕುಗಳ ಕಾರಣದಿಂದ ಇದ್ದವರೆಲ್ಲ ಊರು ಬಿಟ್ಟು ಹೋದರು, ಇದರೊಂದಿಗೆ ಕಾಡು ಪ್ರಾಣಿಗಳು ನೇರವಾಗಿ ನಾವು ಬೆಳೆದ ಬೆಳೆಗಳಿಗೆ ಮುತ್ತಿಗೆ ಹಾಕುತ್ತಿದ್ದವು, ಅವುಗಳನ್ನ ಬೆದರಿಸಲು ಶಬ್ದದ ಮಾರ್ಗಗಳನ್ನು ಬಳಸಬೇಕಾಗಿತ್ತು. ಆದರೆ, ಅದಕ್ಕೆ ಇಲಾಖೆಯಿಂದ ಅನುಮತಿ ಇಲ್ಲ. ಇವೆಲ್ಲದರ ನಡುವೆ ನಮಗೆ ಭದ್ರತೆ ಎಂಬುದು ಇಲ್ಲವಾಗಿ, ಪತಿಪತ್ನಿ ಇಬ್ಬರೇ ವಾಸವಾಗಿರುವುದು ಸರಿ ಎನಿಸದೇ ಮುಡುಬಾ ಗ್ರಾಮದಿಂದ ಪುನರ್ವಸತಿ ಹೊಂದುತ್ತಿದ್ದೇವೆ ಎಂಬುದು ಶ್ರೀ ಅಶೋಕ್ ಅವರ ನಿಲುವು.

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಒಳಭಾಗದಲ್ಲಿ ನೆಲೆಸಿರುವವರ ಸಾಧ್ಯತೆಗಳು

೦೧. ಪ್ರಕೃತಿಯ ಮೂಲನಿವಾಸಿಗಳಾದ ನಾವು ಮೊದಲಿನಿಂದಲೂ ಪ್ರಕೃತಿಯ ಮಡಿಲಲ್ಲಿ ಬೆಳೆದಿರುವುದು, ಈ ಪ್ರದೇಶವನ್ನು ಬಿಟ್ಟು ಹೊರ ಪ್ರದೇಶದಲ್ಲಿ ಹೋಗಿ ನೆಲೆಸುವುದಕ್ಕೆ ಹಾಗೂ ಅಲ್ಲಿನ ಆಚಾರಗಳಿಗೆ ನಮ್ಮ ಆಚಾರ, ಸಂಪ್ರದಾಯಗಳು, ಆಚರಣೆಗಳು ಹೊಂದಾಣಿಕೆಯಾಗದ ಕಾರಣ ನಾವು ಇಲ್ಲಿಯೇ ಇರುತ್ತೇವೆ. ಅಲ್ಲದೆ, ಬಗರ್ ಹುಕುಂ ಸಾಗುವಳಿಗೆ ಪರಿಹಾರ ದೊರೆಯುವುದಿಲ್ಲ, ಇದರೊಂದಿಗೆ ಕೇವಲ ಮೂಲಭೂತ ಸೌಕರ್ಯನವನ್ನು ಅರಸಿ ಇಲ್ಲಿಂದ ನಾವು ಬಿಟ್ಟು ಹೋದರೆ, ನಮ್ಮ ಸಾಮಾಜಿಕ ಸಂಘಟನೆ ಹಾಗೂ ಸಾಂಸ್ಕೃತಿಕ ಅಂಶಗಳು ನಶಿಸಿ ಹೋಗುವುದು. ಇದರೊಂದಿಗೆ ಕುಟುಂಬ ವಿಘಟನೆಗಳು ಆರಂಭವಾಗಿ ಒಬ್ಬರಿಗೊಬ್ಬರು ನೋಡದಾಗುವೆವು, ಆದ್ದರಿಂದ ಸಂಘನೆಯೊಂದಿಗೆ ಜೀವನ ಚೆನ್ನಾಗಿದೆ. ಇದನ್ನು ಹೊರತು ಪಡಿಸಿ ಹೋಗಲಾರೆವು ಎಂಬುದು ಬೆಳ್ತಂಗಡಿಯ ಮುತ್ತಾಜೆ ನಿವಾಸಿಗಳ ನಿಲುವು.

೦೨. ಅಕ್ರಮ ಸಕ್ರಮದಡಿ ನಮಗೆ ಅರಣ್ಯ ಹಕ್ಕು ಪತ್ರ ದೊರಕಿವೆ. ಈ ಮೂಲಕ ನಾವು ಇದ್ದಷ್ಟು ದಿನ ನಮ್ಮನ್ನು ಯಾರು ಪ್ರಶ್ನೆ ಮಾಡುವಂತಿಲ್ಲ. ಜೊತೆಗೆ ಸರ್ಕಾರವೇ ಸಾಗುವಳಿ ಹಕ್ಕುಗಳನ್ನು ನೀಡಿದ ಮೇಲೆ ನಾವು ಇಲ್ಲಿ ಇರುವುದಕ್ಕೆ ಹಕ್ಕನ್ನು ಪಡೆದಂತಾಗಿದೆ. ಇದರೊಂದಿಗೆ ನಾವು ಸ್ವತಂತ್ರವಾಗಿ ಬೆಳೆಗಳನ್ನು ಬೆಳೆದು ಮಾರಾಟಮಾಡಿ ಬಂದ ಹಣದಿಂದ ನಮ್ಮ ಆರ್ಥಿಕ ಮೂಲವನ್ನು ಅಭಿವೃದ್ಧಿ ಪಡಿಸಿಕೊಳ್ಳಬಹುದು. ಎಂಬುದು ಬಂಗಾರು ಪಲ್ಕೆ ನಿವಾಸಿಗಳ ನಿಲುವು.

೦೩. ಸರ್ಕಾರ ನೀಡದ ಮೂಲಭೂತ ಸೌಕರ್ಯದ ಭಾಗವಾದ ರಸ್ತೆ ನಿರ್ಮಾಣ, ವಿದ್ಯುತ್ ಹಾಗೂ ವಾಸಕ್ಕೆ ಅಗತ್ಯವಾದ ಮನೆ ನಿರ್ಮಾಣವನ್ನು ನಾವೇ ಮಾಡಿಕೊಂಡಿದ್ದೇವೆ. ರಸ್ತೆ ನಿರ್ಮಾಣಕ್ಕೆ ಸಂಘಟನೆಯಾಗಿ ಎಲ್ಲರೂ ಎಳನೀರು ಪ್ರದೇಶದಿಂದ ಬಂಗಾರು ಪಲ್ಕೆಗೆ ರಸ್ತೆ ಅಭಿವೃದ್ಧಿಗೆ ಪಂಚಾಯ್ತಿಯಿಂದ ಅನುಮತಿ ಪಡೆದು ಕಾಮಗಾರಿ ಆರಂಭ ಮಾಡಿಕೊಂಡು ರಸ್ತೆ ನಿರ್ಮಾಣ ಪೂರ್ಣಗೊಳಿಸಿದ್ದೇವೆ. ವಿದ್ಯುತ್ ಶಕ್ತಿಯ ಅಭಾವವನ್ನು ನಿವಾರಿಸಲು ಟರ್ಬೈನ್ ಗಳನ್ನು ಆಮದು ಮಾಡಿಕೊಂಡು ಝರಿ ಹರಿಯುವ ಪ್ರದೇಶದಿಂದ ಕೊಳವೆ ಮೂಲಕ ಸಂಬಂಧವನ್ನು ಕಲ್ಪಿಸಿ ೪ಕಿ.ವ್ಯಾ ವಿದ್ಯುತ್ ಉತ್ಪಾದನೆ ಮಾಡಿಕೊಂಡು ನೆರೆಹೊರೆಯವರೊಂದಿಗೆ ಹಂಚಿಕೊಂಡು ಜೀವನ ಸಾಗಿಸುತ್ತಿದ್ದೇವೆ. ಮಕ್ಕಳನ್ನು ಸರ್ಕಾರದ ಆಶ್ರಮ ಶಾಲೆಗಳಲ್ಲಿ ಓದಲು ಕಳುಹಿಸುತ್ತಿದ್ದೇವೆ. ಮತ್ತು ಕೃಷಿ ಹೊರತು ಪಡಿಸಿ ನಮಗೆ ಯಾವುದೇ ಕಾರ್ಯ ತಿಳಿದಿಲ್ಲದಿರುವುದು ವಾಸ್ತವ ಸಂಗತಿ. ಆದ್ದರಿಂದ ನಾವೇ ಮೂಲ ಭೂತ ಸೌಕರ್ಯಗಳನ್ನು ಮಾಡಿಕೊಂಡು ಇಲ್ಲಿಯೇ ನೆಲೆಸಿದ್ದೇವೆ. ಎಂಬುದು ಬಂಗಾರು ಪಲ್ಕೆ ಮತ್ತು ಮುತ್ತಾಜೆಯ ಶ್ರೀ ಶಿವಯ್ಯ ಮಲೆಕುಡಿಯರ ನಿಲುವು.

೦೪. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಿಂದ ಹೊರಬರುವವರಿಗೆ ಸಾಕಷ್ಟು ಪರಿಹಾರ ಸಿಗುತ್ತಿದೆ ಎಂಬ ಗುಂಗಿನಲ್ಲಿ ಶೃಂಗೇರಿ ಭಾಗದಲ್ಲಿ ಕೃಷಿ ಭೂಮಿಯ ಬೆಲೆ ಏರಿಕೆ ಮಾಡುತ್ತಿದ್ದಾರೆ. ವಾಸ್ತವ ಎಂದರೆ, ಅಲ್ಲಿನ ಪ್ರದೇಶಗಳಲ್ಲಿ ಬೇಸಿಗೆ ಸಮಯಕ್ಕೆ ಕುಡಿಯುವ

ನೀರಿನ ಅಭಾವ ಹೆಚ್ಚಾಗುತ್ತಿದ್ದೆ. ಬಾವಿ ತೋಡಿದರೆ ನೀರು ಬರುತ್ತಿಲ್ಲ. ಉದ್ಯಾನದ ಒಳಭಾಗದಲ್ಲಿರುವ ನಾವು ಇರುವ ಜಮೀನನ್ನು ಅಲ್ಪ ಮೊತ್ತಕ್ಕೆ ಮಾರಿಕೊಂಡು ಹೋದರೆ, ಅಲ್ಲಿ ಒಂದು ಸೆಂಟ್ಸ್ ಜಾಗವನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲದ ಮಾತು. ಹೀಗಾಗಿ ಶೀರ್ಲು ಪ್ರದೇಶನವನ್ನು ಬಿಟ್ಟು ಎಲ್ಲಿಯೂ ಹೋಗಲಾರೆವು. ಇಲಿಯೇ ಉಳಿಯುತ್ತೇವೆ. ಎಂಬುದು ಕೆರೆಕಟ್ಟೆ ಶೀರ್ಲು ನಿವಾಸಿಗಳ ನಿಲುವು.

೦೫. ಸರ್ಕಾರವೇ ಒತ್ತಾಯ ಪೂರ್ವಕವಾದ ಪುನರ್ವಸತೀಕರಣಕ್ಕೆ ಆಸ್ಪದ ನೀಡಿಲ್ಲ ಮತ್ತು ಸ್ವಯಂ ಪ್ರೇರಿತವಾಗಿ ಸ್ಥಳಾಂತರಗೊಳ್ಳುವವರಿಗೆ ಯಾವ ಅಡೆ ತಡೆಯು ಇಲ್ಲ. ಈ ನಿಟ್ಟಿನಲ್ಲಿ ನಾವು ಸರ್ಕಾರದ ಎಲ್ಲಾ ಇಲಾಖೆಗಳ ಸಹಕಾರ ನಿರೀಕ್ಷಿಸುತ್ತಾ, ಅರಣ್ಯಗಳಿಗೆ ಬೆಂಕಿ ತಗುಲಿದಾಗ ಅರಣ್ಯ ಇಲಾಖೆ ಸಿಬ್ಬಂದ್ಧಿಯೊಂದಿಗೆ ಬೆಂಕಿ ನಂದಿಸುವ ಕಾರ್ಯಕ್ಕೆ ನಾವು ಹೋಗುತ್ತೇವೆ. ಪರಸ್ಪರ ಸಹಕಾರ ಮತ್ತು ಸಹಭಾಗಿತ್ವದ ಕಾರ್ಯ ಚಟುವಟಿಕೆಯಲ್ಲಿ ನಮಗೆ ಅವರು ಅವರಿಗೆ ನಾವು ಸಹಾಯದ ಹಸ್ತವನ್ನು ನೀಡಿ ಇಲ್ಲಿಯೇ ಉಳಿದಿದ್ದೇವೆ. ಎಂಬುದು ಬಿಳಿಗಳ್ ನಿವಾಸಿಗಳ ನಿಲುವು.

೨. ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಮತ್ತು ಪುನರ್ವಸತೀಕರಣದ ಪರಿಣಾಮಗಳ ಕುರಿತು ಸ್ಥಳಿಯರ ನಿಲುವುಗಳು

ಸರಳ ಜೀವನ

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಅರಣ್ಯಾಶ್ರಿತ ಗಿರಿಜನ, ರೈತರು ಮತ್ತು ಇತರೆಯವರ ಮೊದಲಿದ್ದ ಸರಳವಾದ ಜೀವನ ಇಂದು ಇಲ್ಲವಾಗಿದೆ. ಇಲ್ಲಿನ ಗಿರಿಜನರ, ರೈತರ ಬದುಕನ್ನು ಕುರಿತು ತಿಳಿಯಲು ಒಳಹೊಕ್ಕು ನೋಡಬೇಕಾದುದು ಅವಶ್ಯವಾಗಿದೆ. ಪ್ರಕೃತಿಯ ಮಡಿಲಲ್ಲಿ ಸರಳತೆ ಮತ್ತು ಸಹಜವಾಗಿ ಯಾರ ಹಂಗಿಲ್ಲದೆ ಸ್ವತಂತ್ರವಾಗಿ ಬದುಕುತ್ತಿದ್ದ ಪ್ರಕೃತಿ ಮಕ್ಕಳ ಸಾಮಾಜಿಕ ನಡೆನುಡಿ, ಪಾರಂಪಾರಿಕ ಕಟ್ಟುಪಾಡು, ಪ್ರಕೃತಿ ಸಂಪನ್ಮೂಲಗಳು, ನ್ಯಾಯ ಪದ್ಧತಿ ಹೀಗೆ ಒಂದೊಂದೆ ಅಂಶಗಳು ಉದ್ಯಾನವೆಂಬ ಅರಣ್ಯ ಸಂರಕ್ಷಣೆಯ ನಾಮಾಂಕಿತವು 'ಸಿಡಿಲೊಡೆದ ಮರವು ಹೇಗೆ ಛಿದ್ರವಾಗುವುದೋ' ಹಾಗೆ ಒಕ್ಕಲೆಬ್ಬಿಸುವಿಕೆಯ ಕ್ರಿಯೆಯು ಸಮುದಾಯವನ್ನು ಛಿದ್ರವಾಗಿಸಿದೆ. ಸಾಮಾಜಿಕವಾಗಿ ಒಗ್ಗಟ್ಟಿನಿಂದ ತಮ್ಮ ಸಂಸ್ಕೃತಿಯನ್ನು ಸಂಪ್ರದಾಯಗಳನ್ನು ಉಳಿಸಿಕೊಂಡು ಬಂಧಿದ್ದ ಆದಿವಾಸಿ ಸಮುದಾಯಗಳು ಒಕ್ಕಲೇಳುವಿಕೆಯಿಂದ ಸಮುದಾಯ ವಿಘಟನೆಯ ಹಾಗೂ ಸಂಸ್ಕೃತಿಯ ಅಳಿವಿನತ್ತ ಜೀವನ ಸಾಗುತ್ತಿದೆ. ರೈತರು ಮಲೆನಾಡಿನ ಸಿರಿಸೊಬಗಿನಲ್ಲಿ ಪ್ರಕೃತಿಯೊಂದಿಗೆ ಕಂಡಿದ್ದ ಕೃಷಿ ವೈಭವವು ಇಲ್ಲದಾಗುತ್ತಿವೆ. ಕುದುರೆಮುಖ ವ್ಯಾಪ್ತಿಯು ರಾಷ್ಟ್ರೀಯ ಉದ್ಯಾನವನವಾಗಿ ಘೋಷಣೆಯಾದ ಮೇಲೆ ಸ್ಥಳಿಯರ ಸರಳ ಜೀವನವು, ಪ್ರಕೃತಿಯೊಂದಿಗಿನ ಸಹಜ ಸಹಮತವಾದ ಹೊಂದಾಣಿಕೆಯ ಜೀವನ ಶೈಲಿ ನಶಿಸಿ ಹೋಗುತ್ತಿದೆ. ಉದ್ಯಾನವನ ಪರಿಸರವು ನಿರ್ಮಾಣವಾದ ಮೇಲೆ ಕಾನೂನುಗಳು ವಿಧಿಸುವ ನಿರ್ಬಂಧತೆ, ಅದರಿಂದ ಹೊರ ಬಂದು ಸ್ವತಂತ್ರವಾಗಿ ಬದುಕುವ ಹಪಹಪಿಸುವಿಕೆ ಒಕ್ಕಲೇಳಲು ಕಾರಣವಾಗಿದೆ. ಇಲ್ಲಿನ ಜನರು ಕಾನೂನುಗಳು ಯಾವ ಸಮಯದಲ್ಲಿ ಹೇಗೆ ರೂಪುಗೊಳ್ಳುವುದು

ಎಂಬ ಆತಂಕದಲ್ಲಿ ಜೀವನವನ್ನು ಸಾಗಿಸುತ್ತಿದ್ದಾರೆ. ರಾಷ್ಟ್ರೀಯ ಉದ್ಯಾನವನವಾದ ಮೇಲೆ ಮೊದಲಿದ್ದ ನಮ್ಮ ಸರಳ ಜೀವನವು ಇಲ್ಲದಾಗಿದೆ. ಪ್ರಕೃತಿಯಲ್ಲಿ ದೊರೆಯುವ ಸಹಜವಾದ ಕಿರುಉತ್ಪನ್ನಗಳ ಆಹಾರ ತಯಾರಿಕೆಯು ವಾತಾವರಣಕ್ಕೆ ಅನುಗುಣವಾಗಿ ದೇಹದ ಸಮಶೀತೋಷ್ಣತೆಯನ್ನು ಕಾಪಾಡುತ್ತಿತ್ತು. ಆದರೆ ಇಂದು ಆ ಕಿರುಉತ್ಪನ್ನಗಳನ್ನು ಸಂಗ್ರಹಿಸಲು ಕಾನೂನುಗಳು ಅಡ್ಡಿಪಡಿಸುತ್ತಿವೆ. ಕುಡಿಯುವ ನೀರು ಸಹ ಗಣಿಗಾರಿಕೆಯಂತಹ ಭೂ ಗರ್ಭವನ್ನು ಸೀಳುವ ಕಾರ್ಯದಿಂದಾಗಿ ನದಿ ಹಂಚಿನ ಸಮುದಾಯಗಳು ಕಲುಷಿತ ನೀರನ್ನು ಸೇವಿಸುವಂತೆ, ಜಲಚರಗಳು ಸಾವುನೋವು ಕಾಣುವಂತೆ, ವರ್ಷದ ಇಳುವರಿಯಲ್ಲಿ ಸಾಕಾಗುವಷ್ಟು ಬೆಳೆ ಬೆಳೆಯುತ್ತಿದ್ದ ರೈತರು ಇಳುವರಿ ಕಾಣದಾಗುವಂತೆ ಮಾಡಿತು. ಗಣಿಗಾರಿಕೆಯನ್ನು ವಿರೋಧಿಸಿ, ಪ್ರಕೃತಿಯನ್ನು ಉಳಿಸಿಕೊಳ್ಳಲು ಮಾಡಿದ ಹೋರಾಟವು ಯಶಸ್ಸುಗೊಳಿಸಿಕೊಟ್ಟರು, ನೆಲೆ ನಿಲ್ಲುವಿಕೆಗೆ ಉದ್ಯಾನವನ ಕಾನೂನುಗಳು ಆಸ್ಪದ ನೀಡದಾಗಿದೆ. ನೆಹರು ಅವರ ಪಂಚಶೀಲ ತತ್ವದಲ್ಲಿ ಗಿರಿಜನರನ್ನು ಅವರಿರುವ ಸ್ಥಳದಲ್ಲಿಯೇ ಅಭಿವೃದ್ಧಿ ಪಡಿಸಬೇಕು ಎಂದು ಉಲ್ಲೇಖಿಸಿದ್ದಾರೆ. ಆದರೆ, ವನ್ಯಜೀವಿ ಕಾಯ್ದೆಗಳು, ಸಂರಕ್ಷಣಾ ಕಾಯ್ದೆಗಳು ವನ್ಯಜೀವಿ ಮತ್ತು ಮಾನವ ನಡುವೆ ಸಂಘರ್ಷಗಳು ಏರ್ಪಟ್ಟು ಪ್ರಾಣಿಗಳು ಅಳಿವಿನಂಚಿನಲ್ಲಿವೆ ಎಂದು ಅವುಗಳ ರಕ್ಷಣೆಗೆ ಅಭಿವೃದ್ಧಿಗೆ ಮನ್ನಣೆ ನೀಡಿವೆ ಹೊರತು, ಇರುವವರನ್ನು ಅಲ್ಲಿಯೇ ಹೇಗೆ ಮುಖ್ಯವಾಹಿನಿಗೆ ತರಬೇಕೆಂದು ಊಹಿಸಲಾಗಲಿಲ್ಲ. ಮೂಲಭೂತ ಸೌಕರ್ಯಗಳನ್ನು ಪ್ರತಿ ಮೂಲೆಯಲ್ಲಿಯೂ ಕೊಡಬೇಕೆಂದು ಸರ್ಕಾರದ ಚಿಂತನೆ ಇದೆ ಎಂದು ಸರ್ಕಾರ ನಡೆಸುವ ಜನಪ್ರತಿನಿಧಿಗಳು ಹೇಳುತ್ತಾರೆ. ಆದರೆ, ಅನುಷ್ಠಾನ ಮಾತ್ರ ಶೂನ್ಯಕ್ಕೆ ಸಮಾನಾಗಿವೆ. ಈ ದಿಶೆಯಲ್ಲಿ ಮಕ್ಕಳ ಭವಿಷ್ಯಕ್ಕಾಗಿ ಮತ್ತು ಕಾನೂನುಗಳು ಯಾವ ಸಮಯದಲ್ಲಿ ಹೇಗೆ ಅನುಷ್ಠಾನಗೊಳ್ಳುತ್ತವೆ ಎಂಬ ಆತಂಕದಲ್ಲಿ, ಸ್ವಇಚ್ಚೆಯ ಹೆಸರಲ್ಲಿ ಇದ್ದ ಸರಳ ಜೀವನವನ್ನು ತೊರೆದು ಸರಳ ಬದುಕನ್ನು ಕಟ್ಟಿಕೊಳ್ಳಲು ಒಕ್ಕಲೆದ್ದಿವೆ ಅರಣ್ಯವಾಸಿಗಳು ಪರದಾಡುತ್ತಿದ್ದಾರೆ.

ಸಾಮಾಜಿಕ ವ್ಯವಸ್ಥೆ

ಮಾನವ ಸಂಘಜೀವಿ, ಅಂತೆಯೇ ಆತನು ಸಮೂಹವೊಂದರ ಜೀವಿಯಾಗಿ ಸಮಾಜದಲ್ಲಿ ಗುರುತಿಸಿಕೊಂಡಿದ್ದಾನೆ. ಮಾನವನ ಜೀವನದಲ್ಲಿ ಸಾಮಾಜಿಕ ಜೀವನ ಬಹಳ ಪ್ರಮುಖವಾದ ಅಂಶವಾಗಿದೆ. ಆತನ ಸರ್ವತೋಮುಖ ಜೀವನದ ಏಳಿಗೆಯಲ್ಲಿ ಸಮಾಜದಲ್ಲಿರುವ ಸಾಮಾಜಿಕ ನಿಯೋಗಿಗಳು ತಮ್ಮದೇ ಆದ ಪಾತ್ರಗಳನ್ನು ನಿರ್ವಹಿಸುತ್ತಾರೆ. ವ್ಯಕ್ತಿಯ ಸಮಗ್ರ ಜೀವನದ ಸಾಮಾಜಿಕರಣದೆಡೆಗೆ ಸಾಮಾಜಿಕ ನಿಯೋಗಿಗಳು ಕೊಡುಗೆಗಳನ್ನು ನೀಡುವುದರೊಂದಿಗೆ ಪರಿಪೂರ್ಣರನ್ನಾಗಿಸುತ್ತಾರೆ. ಸಾಮಾಜಿಕ ಜೀವನವೆಂದರೆ ಒಗ್ಗಟ್ಟಿನಿಂದ ಒಟ್ಟಾಗಿ ಬಾಳುವುದು ಮತ್ತು ಸಂಬಂಧಗಳನ್ನು ಉಳಿಸಿಕೊಳ್ಳುವುದು. ರಾಷ್ಟ್ರೀಯ ಉದ್ಯಾನವನ ಘೋಷಣೆಯಾದ ಮೇಲೆ ಒಳ ಭಾಗದಲ್ಲಿ ನೆಲೆಸಿರುವ ಕೆಲವೇ ಗಿರಿಜನ ಸಮುದಾಯಗಳಲ್ಲಿ ಮಾತ್ರ ಸಾಮಾಜಿಕ ಜೀವನವನ್ನು ಕಾಣಬಹುದು, ಒಕ್ಕಲೆದ್ದು ಹೊರ ಪ್ರಪಂಚಕ್ಕೆ ಮುಖ್ಯವಾಹಿನಿಯಲ್ಲಿ ಸೇರಿಕೊಂಡ ಗಿರಿಜನ ಮತ್ತು ಇತರೆ ಅರಣ್ಯವಾಸಿಗಳ ಸಾಮಾಜಿಕ ಜೀವನ ಅಲ್ಲಿನ ಜೀವನಕ್ಕೆ ಹೊಂದಿಕೊಳ್ಳಲು ಪ್ರಯತ್ನದ ಮೇಲೆ ಪ್ರಯತ್ನಗಳನ್ನು ನಡೆಸುತ್ತಿದೆ. ಸ್ಕುಡರ್

ಮತ್ತು ಕಲ್ಸನ್ ಅವರ ತಾತ್ವಿಕ ಸಿದ್ಧಾಂತದ ಆಧಾರ ಮೇಲೆ ಉದ್ಯಾನವನದಿಂದ ಒಕ್ಕಲೆದ್ದ ಸಮುದಾಯಗಳು ತಮ್ಮ ಹೊಂದಾಣಿಕೆಯನ್ನು ಇತರೆ ಸ್ಥಳಗಳಲ್ಲಿ ಕಂಡಕೊಳ್ಳಲು ಸಾಕಷ್ಟು ಸಮಯದ ಅವಶ್ಯಕತೆಗಳು ಎದುರಾಗುತ್ತವೆ ಎಂದು ಉಲ್ಲೇಖಿಸಿದ್ದಾರೆ. ಅದರಂತೆ, ಹೋಲಿಕೆಗಳನ್ನು ಮಾಡಿದಾಗ ಒಳಭಾಗದಲ್ಲಿರುವ ಸಮುದಾಯಗಳು ಹೆಚ್ಚು ಹೊಂದಾಣಿಕೆ ಮತ್ತು ಒಗ್ಗಟ್ಟಿನ ಸಾಮಾಜಿಕ ಜೀವನದಲ್ಲಿ ನೆಲೆಸಿದ್ದಾರೆ. ಆದರೆ, ಪುನರ್ವಸತಿಗೊಂಡವರು ಏಕಾಂಗಿಯಾಗಿ ಇತರೆ ಸಮುದಾಯಗಳ ಸಾಮಾಜಿಕ ಜಾಲಬಂದಕ್ಕೆ ಹೊಂದಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಒಂದು ವೇಳೆ ಈ ರಾಷ್ಟ್ರೀಯ ಉದ್ಯಾನವನ ಘೋಷಣೆಯಾಗದಿದ್ದರೆ, ಇಂದಿಗೂ ಕೂಡ ಗಿರಿಜನರು ಮತ್ತು ಅರಣ್ಯ ವಾಸಿಗಳು ಸಾಮಾಜಿಕ ಸಂಬಂಧದಲ್ಲಿ ಪ್ರಭುದ್ಧವಾಗಿ ನೆಲೆಗಳನ್ನು ಕಂಡುಕೊಳ್ಳುತ್ತಿದ್ದರು. ಆದರೆ, ಉದ್ಯಾನವನ ಘೋಷಣೆಯು ಅವರ ಆದರ್ಶಗಳನ್ನು ತೊರೆಯುವುದರೊಂದಿಗೆ, ಅವಿಭಕ್ತ ಕುಟುಂಬ, ಸಮುದಾಯದೊಳಗಿನ ನಂಟುಗಳನ್ನು ಕಡಿದುಕೊಂಡು ಹೊರ ಬೀಳುವಿಕೆಗೆ ಹಿಂಬದಿಯಿಂದ ಕಾನೂನುಗಳ ಸಂಕೋಲೆಯಲ್ಲಿ ಅಪಹೊಂದಾಣಿಕೆಗಳನ್ನು ತಂದೊಡ್ಡಿ ವಿಘಟನೆ ಹೊಂದುವಂತೆ ಮಾಡಿದೆ. ಒಟ್ಟಿನಲ್ಲಿ ಪುನರ್ವಸತಿ ಹೊಂದಿರುವ ಸಮುದಾಯಗಳು ಮುಖ್ಯವಾಹಿನಿಯಲ್ಲಿ ಸಾಮಾಜಿಕ ಜೀವನದ ಹೊಂದಾಣಿಕೆಯ ಸಮಸ್ಯೆಯನ್ನು ಎದುರಿಸುತ್ತಿವೆ. ಈ ಪ್ರಕ್ರಿಯೆಯು ಮುಂದಿನ ಪೀಳಿಗೆಯಲ್ಲಿ ನಮ್ಮವರು ಎಂಬ ಭಾವನೆ ಮರೆಮಾಚಿ ನಾನು ಮತ್ತು ನನ್ನದು ಎಂಬ ಸ್ವಾರ್ಥತೆಯನ್ನು ಹೆಚ್ಚಿಸುತ್ತಾ ವ್ಯಕ್ತಿ ಮತ್ತು ಕುಟುಂಬವನ್ನು ಏಕಾಂಗಿಯನ್ನಾಗಿಸುತ್ತದೆ. ಸಾಮಾಜಿಕ ಸಮಸ್ಯೆಗಳು ಬಡತನವನ್ನು ಹೆಚ್ಚಿಸಿ ಬಡವರನ್ನು ಬಡವರನ್ನಾಗಿಸುತ್ತಿವೆ, ಸಂಪನ್ಮೂಲ ಕೊರತೆಗಳಿಂದ ಸಮುದಾಯ ತಲ್ಲಣಗೊಳ್ಳುತ್ತಿದೆ ಮತ್ತು ಸಮುದಾಯಗಳ ಸೌಹಾರ್ದತೆಯ ಒಗ್ಗಟ್ಟು ಮುರಿದು ಚೂರಾಗಿದೆ.

ಸಾಂಸ್ಕೃತಿಕ ವ್ಯವಸ್ಥೆ

ಸಂಸ್ಕೃತಿಯು ಮಾನವನ ಜೀವನ ವಿಧಾನದ ಪ್ರತೀಕವಾಗಿದೆ. ಸಂಸ್ಕೃತಿಯು ಜೀವನ ವಿಧಾನದಲ್ಲಿ ರೂಢಿಸಿಕೊಂಡಿರುವ ಸ್ವಯಂ ನಿರ್ಮಿತ ವ್ಯವಸ್ಥೆಗಳನ್ನು ಒಳಗೊಳ್ಳುವುದರೊಂದಿಗೆ ಮಾನವನ ಸಾಧನೆಗಳನ್ನು ಹಾಗೂ ಆತನ ಸಾಮಾಜಿಕ ವ್ಯವಸ್ಥೆಯ ಅಂಶಗಳನ್ನು ಒಳಗೊಂಡಿರುತ್ತದೆ. ಸಂಸ್ಕೃತಿಯು ನಿರ್ಧಿಷ್ಟ ಸಮುದಾಯವೊಂದರ ಸಾಮಾಜಿಕ ವರ್ತನೆಗಳು, ಸಂಪ್ರದಾಯ–ಆಚರಣೆಗಳು ಮತ್ತು ಆದರ್ಶಗಳು 'ಸಂಸ್ಕೃತಿಯನ್ನು' ಪ್ರತಿನಿಧಿಸುತ್ತವೆ. ಸಂಸ್ಕೃತಿಯು ಪ್ರಕೃತಿ ನಿರ್ಮಿತವಲ್ಲ. ಅದು ಮಾನವನ ನಿರ್ಮಿತ. ಸಮಾಜ ಜೀವನದ ಸಾರ. ಸಂಸ್ಕೃತಿಯು ಸಮಾಜದ ಆಶೋತ್ತರಗಳನ್ನು, ಧೇಯೋದ್ದೇಶಗಳನ್ನು, ಲೋಕರೂಢಿಗಳು, ನೈತಿಕ ನಿಯಮಗಳು, ಧರ್ಮ, ಕಲೆ, ಸಾಹಿತ್ಯ, ಶಿಕ್ಷಣ, ಜೀವನ ಮೌಲ್ಯಗಳು, ಆದರ್ಶಗಳು ಮೊದಲಾದವುಗಳ ಮೇಲೆ ಸಮಾಜ ಜೀವನವು ಸುಭದ್ರವಾಗಿರುತ್ತವೆ. ಸಂಸ್ಕೃತಿಯು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸಲ್ಪಡುವಂತಹ ಆಚರಣೆಗಳ ಕ್ರೋಡೀಕರಣದ ಅಮೂರ್ತ ಸ್ವರೂಪದವುಗಳು. ಉಲ್ಲೇಖಿತ ವ್ಯಾಖ್ಯೆಯಂತೆ ಸಾಮಾಜಿಕ ವರ್ತನೆಯನ್ನು, ಪೀಳಿಗೆಯಿಂದ ಪೀಳಿಗೆಗೆ ಸಂಪ್ರದಾಯ ಮತ್ತು ಆಚರಣೆಗಳ ಕಟ್ಟು ಪಾಡುಗಳನ್ನು ಪ್ರವಹಿಸುತ್ತಾ ಆದರ್ಶವಾದವನ್ನು ಉಳಿಸಿಕೊಂಡು ಬೆಳೆಸಿಕೊಳ್ಳುವುದೇ ಸಂಸ್ಕೃತಿಯಾಗಿದೆ. ನಿರಂತರತೆಯನ್ನು ಹೊಂದಿರುವ ಸಂಸ್ಕೃತಿಯು

ಸಮುದಾಯದಲ್ಲಿ ನಿರಂತರವಾಗಿ ಸಾಗುತ್ತದೆ. ಅದು ಆ ಸಮುದಾಯದಲ್ಲಿ ಅಸ್ತಿತ್ವದಲ್ಲಿರುವ ವಿಚ್ಛಿನ್ನವಾದ ಒಂದು ವ್ಯವಸ್ಥೆಯಾಗಿದೆ. ಇದರೊಂದಿಗೆ ಸದಾ ಬೆಳೆಯುತ್ತಾ ಸಾಗುವ ಸಂಸ್ಕೃತಿಯು ತನ್ನಲ್ಲಿರುವ ಅಂಶಗಳೊಂದಿಗೆ ಪೀಳಿಗೆಗಳ ಹೊಸ ಹೊಸ ಅಂಶಗಳನ್ನು ಸೇರಿಸಿಕೊಳ್ಳುತ್ತಾ ಪ್ರವಹಿಸುತ್ತದೆ. ಕಾಲಗತಿಯಲ್ಲಿ ಸಂಸ್ಕೃತಿಯ ಕೆಲವು ಅಂಶಗಳು ಗೌಣವಾದರೆ ನೂತನ ಅಂಶಗಳು ಒಳಗೊಳ್ಳುವುದರೊಂದಿಗೆ ಸಾಗುತ್ತಿರುತ್ತದೆ. ಅನಿವಾರ್ಯ ಸನ್ನಿವೇಶಗಳಲ್ಲಿ ಸಮುದಾಯಗಳು ಬದಲಾವಣೆಗಳಿಗೆ ಒಳಪಟ್ಟಾಗ ಸಂಸ್ಕೃತಿಯೂ ಪರಿವರ್ತನೆಗೊಳ್ಳುತ್ತದೆ. ಈ ಪರಿವರ್ತನೆಯ ಹಾದಿಯಲ್ಲಿ ಅವುಗಳದೇ ಆದ ವೇಗಗಳನ್ನು ಅನುಸರಿಸಿಕೊಂಡು ಬದಲಾವಣೆಗೆ ಒಳಪಡುತ್ತದೆ. ವಿಲಿಯಮ್ ಎಫ್ ಆಗರ್ಬರ್ನ್ ೧೯೨೨ ರಲ್ಲಿ ಸಾಂಸ್ಕೃತಿಕ ಹಿಂಬೀಳಿಕೆಯನ್ನು ಪ್ರತಿಪಾದಿಸಿದರು. ಅದರಂತೆ ಸಂಸ್ಕೃತಿಯು, ತಂತ್ರಜ್ಞಾನವು ಸಾಮಾಜಿಕ ಪರಿಸರದ ಮೇಲೆ ಬೀರುವ ಪರಿಣಾಮಗಳಿಂದ ಸಾಂಸ್ಕೃತಿಕ ಹಿಂಬೀಳಿಕೆಯು ಪ್ರವಹಿಸುತ್ತದೆ. ಸಾಮಾಜಿಕವಾಗಿ ಬದಲಾಗುವ ಪರಿಸ್ಥಿತಿಯು ಅಪಹೊಂದಾಣಿಕೆಯ ನಿಟ್ಟಿನಲ್ಲಿ ಸಂಸ್ಕೃತಿಯು ಮಂದಗತಿಯಲ್ಲಿ ಮುನ್ನೆಡೆಯುತ್ತದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿಯೂ ಕೂಡ ಸಾಂಸ್ಕೃತಿಕ ಮಂದಗತಿಯ ಚಲನೆಗಳು ಆರಂಭವಾಗಿದೆ, ಒಳಭಾಗದಲ್ಲಿದ್ದವರು ದೈವಗಳ ಆಚರಣೆ, ಸಾಮುದಾಯಿಕವಾಗಿ ಒಂದುಗೂಡಿಕೊಂಡು ನೇರವೇರಿಸುತ್ತಿದ್ದ ಸಂಸ್ಕಾರ ವಿಧಿಗಳು ಮತ್ತು ಸಾಂಪ್ರದಾಯಿಕ ಸಂಸ್ಕೃತಿಯನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಕಾಲ ಕಾಲಕ್ಕೆ ಅರಣ್ಯಗಳಿಂದ ದೊರಕುವ ಪೂಜ್ಯನೀಯ ವಸ್ತುಗಳನ್ನು ಕಲೆಹಾಕಿ ಪ್ರಕೃತಿ ಮತ್ತು ಪೂರ್ವಜರ ಹಬ್ಬ ಆಚರಣೆಗಳನ್ನು ನೆಡೆಸಿಕೊಂಡು ಬರುತ್ತಿದ್ದಾರೆ. ಆದರೆ, ಸ್ಥಳಾಂತರ ಮತ್ತು ಪುನರ್ವಸತೀಕರಣ ಯೋಜನೆಯು ಘೋಷಣೆಯಾದ ಮೇಲೆ ಸಮುದಾಯದ ಕೆಲ ಸದಸ್ಯರು ತಮ್ಮ ಕುಟುಂಬಗಳೊಂದಿಗೆ ಸಾಮಾಜಿಕವಾಗಿ ವಿಘಟನೆಗೆ ಒಳಪಡುವುದರೊಂದಿಗೆ ಬೇರೆಡೆ ನೆಲೆಗಳನ್ನು ಕಂಡುಕೊಳ್ಳುತ್ತಿದ್ದಾರೆ. ಇದರೊಂದಿಗೆ ತಮ್ಮಲ್ಲಿಯೇ ಆದಿ ಕಾಲದಿಂದಲೂ ಪೂಜಿಸುತ್ತಿದ್ದ ಆದಿ ದೈವಗಳನ್ನು ಅವರು ನೆಲೆಸುವಲ್ಲಿಯೇ ಹೊಸ ಜಾಗವನ್ನು ಸೃಷ್ಟಿ ಮಾಡಿ ಪ್ರತಿಷ್ಠಾಪಿಸುತ್ತಿದ್ದಾರೆ. ಈ ಸನ್ನವೇಶಗಳು ಸಾಮುದಾಯಿಕವಾಗಿ ನೆರವೇರಿಸುತ್ತಿದ್ದ ಹಬ್ಬಗಳ ಆಚರಣೆಯನ್ನು ಸೀಮಿತವಾಗಿ ಕುಟುಂಬಗಳು ಮಾತ್ರ ಆಚರಣೆಯಲ್ಲಿ ಪಾಲ್ಗೊಳ್ಳುವಂತೆ ಮತ್ತು ಸಮುದಾಯದಿಂದ ಬೇರ್ಪಡುವಂತ ಸನ್ನಿವೇಶವನ್ನು ಉಂಟುಮಾಡಿವೆ. ನಮ್ಮಲ್ಲಿಯ ಪೂರ್ವಜರ ದೈವಾರಾಧನೆಯ ಸಂಸ್ಕೃತಿಯನ್ನು ಇಲ್ಲವಾಗಿಸುತ್ತಿದೆ. ಅರಣ್ಯ ಸಂರಕ್ಷಣೆಯ ಕಾಯ್ದೆಯ ಅಡಿಯಲ್ಲಿ ಈ ಹಿಂದೆ ನರಸಿಂಹ ಪರ್ವತದಲ್ಲಿ ಋಷ್ಯಶೃಂಗೇಶ್ವರ ಜಾತ್ರೆಯ ಸಂದರ್ಭದಲ್ಲಿ ಸಾಂಪ್ರದಾಯಿಕವಾಗಿ ಸಮಸ್ತ ಸಮುದಾಯದವರು ಪಾಲ್ಗೊಳ್ಳುತ್ತಿದ್ದ ಬೇಟೆಯಂತಹ ಪದ್ದತಿಗಳು, ಬೇಟೆಯಲ್ಲಿ ದೊರೆತ ಆಹಾರವನ್ನು ಹಂಚಿಕೊಂಡು ಸೇವಿಸುತ್ತಿದ್ದ ಎಲ್ಲಾ ಸಂದರ್ಭಗಳು, ನೃತ್ಯ, ಹಾಡುಗಳು ಎಲ್ಲವೂ ಮರೆಯಾಗಿ ಹೋಗಿವೆ. ಇದರೊಂದಿಗೆ ಸಾಂಸ್ಕೃತಿಕ ಕುರುಹುಗಳು ನಮ್ಮಿಂದ ಬೇರೆಡೆಗೆ ಸಾಗುತ್ತಿದ್ದು, ಮಂದಗತಿಯಲ್ಲಿ ನಾವು ಎಲ್ಲವನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬುದು ಕೊಪ್ಪ ತಾಲೂಕಿನ ನೇತ್ರವಳ್ಳಿಯಲ್ಲಿ ನೆಲೆಸಿರುವ ಪುಟ್ಟ ಅವರ ಅಭಿಪ್ರಾಯ.

ಆರ್ಥಿಕ ವ್ಯವಸ್ಥೆ

ಮಾನವನು ಸಮುದಾಯದಲ್ಲಿ ತನ್ನ ಪ್ರತಿಷ್ಠೆಯನ್ನು ಗುರುತಿಸಿಕೊಳ್ಳುವಿಕೆಗೆ ಅವನ ಆರ್ಥಿಕ ಸ್ಥಿತಿಯು ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಮಾನವನಲ್ಲಿ ವಿವಿಧ ಪ್ರಕಾರ (ಕೃಷಿ, ಮಾರಾಟ, ಸರಕು ಬದಲಾವಣೆ) ಆರ್ಥಿಕ ಮೂಲವನ್ನು ಗುರ್ತಿಸಬಹುದಾದರೂ, ಭಾರತೀಯ ಸಂದರ್ಭದಲ್ಲಿ ಮೊದಲು ಕೃಷಿಯ ವಲಯಕ್ಕೆ ಪ್ರಥಮಾದ್ಯತೆಯನ್ನು ನೀಡುತ್ತಾರೆ. ಕೃಷಿ ಹಿಂದಿನಿಂದಲೂ ಎಲ್ಲಾ ಸಮುದಾಯಗಳಲ್ಲಿ ಅವರ ಮೂಲ ಜೀವನವನ್ನು ಸಾಗಿಸಿಕೊಂಡು ಬರುವಲ್ಲಿ ಸಾಕಷ್ಟು ಕೊಡುಗೆಯನ್ನು ನೀಡಿದೆ. ಅರಣ್ಯ ಮೂಲದ ಗಿರಿಜನ ಮತ್ತು ಇತರೆ ಅರಣ್ಯವಾಸಿಗಳಿಗೆ ಮೂಲ ಜೀವನೋಪಾಯದ ಆರ್ಥಿಕತೆಯೆಂದರೆ, ಅದು ಕೃಷಿ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ರಚನೆಗೂ ಮೊದಲು ಹಚ್ಚ ಹಸಿರಿನ ತಾಣದಲ್ಲಿ ಸ್ವತಂತ್ರದ ಕೃಷಿ ಬದುಕನ್ನು ಕಟ್ಟಿಕೊಂಡಿದ್ದೆವು. ಅರಣ್ಯಗಳಲ್ಲಿ ಸಿಗುವ ಉತ್ಪತ್ತಿಗಳನ್ನು ಬಳಸಿಕೊಂಡು ಕೃಷಿಯೊಂದಿಗೆ ಅಮೂಲ್ಯವಾದ ಜೀವನವನ್ನು ಕಟ್ಟಿಕೊಂಡಿದ್ದೆವು. ಮಳೆ ಆಧಾರಿತ ಮತ್ತು ನದಿ ಪಾತ್ರದ ನಮ್ಮ ಕೃಷಿ ಆರ್ಥಿಕತೆಗೆ ಎಂದಿಗೂ ಕೊರತೆಯನ್ನುಂಟು ಮಾಡಲಿಲ್ಲ, ಬದಲಿಗೆ ಸಾಕಷ್ಟು ಉತ್ಪತ್ತಿಗಳನ್ನು ನೀಡುವುದರೊಂದಿಗೆ ಪ್ರಕೃತಿಯಲ್ಲಿ ಸಹಜ ಆಹಾರದೊಂದಿಗೆ ಯಾವುದೇ ರೋಗ ರುಜಿನಗಳ ಭಯವಿಲ್ಲದೆ, ಬದುಕಿದ್ದೆವು. ಉದ್ಯಾನವನ ರಚನೆಯಾದ ಮೇಲೆ ಬೆಳೆಗಳಿಗೆ ಬೇಕಾದ ರಸಗೊಬ್ಬರಗಳನ್ನು ಉಪಯೋಗಿಸಲು ಮತ್ತು ಮೂಲಭೂತ ಸೌಕರ್ಯಗಳನ್ನು ಬಳಸಿಕೊಳ್ಳಲು ಇಲಾಖೆಯ ಅನುಮತಿ ಕಡ್ಡಾಯವಾಯಿತು. ಈ ನಡುವೆ ಸಾಕಷ್ಟು ಬಿಗುವಿನ ವಾತಾವರಣ ಸೃಷ್ಟಿಯಾಯಿತು. ಉದ್ಯಾನವನದ ಒಳಭಾಗದಲ್ಲಿರುವ ಸಣ್ಣ ಮತ್ತು ಅತಿ ಸಣ್ಣ ರೈತರ ಆರ್ಥಿಕ ಸ್ಥಿತಿ ಸೀಮಿತತೆಗೆ ಒಳಪಟ್ಟಿದ್ದು, ಇಂತಹ ಸಮಯದಲ್ಲಿ ಹುಲಿ ಯೋಜನೆ ಅನುಷ್ಠಾನದ ಹೆಸರಿನಲ್ಲಿ ಸರ್ಕಾರೇತರ ಸಂಸ್ಥೆಗಳು ಉದ್ಯಾನವನಕ್ಕೆ ಕಾಲಿರಿಸಿ ಆಮಿಶಗಳನ್ನು ಒಡ್ಡುವ ಮೂಲಕ ಸಣ್ಣ ಪ್ರಮಾಣದ ರೈತರನ್ನು ಮೊದಲು ಆಧ್ಯತೀಕರಿಸಿ ಒಕ್ಕಲೆಬ್ಬಿಸಲು ಆರಂಭ ಮಾಡಿದರು. ಇದರ ಫಲವಾಗಿ ಕುದುರೆಮುಖದ ಸಿಂಗ್ಸಾರ್ ಮತ್ತು ಆವಂತಿ ಪ್ರದೇಶದಲ್ಲಿನ ಗಿರಿಜನ ಸಮುದಾಯವನ್ನು ಗುರಿ ಮಾಡಿಕೊಂಡು ಸ್ವ ಇಚ್ಛೆಯ ಹಾಗೂ ಮಕ್ಕಳ ಭವಿಷ್ಯದ ಸಬೂಬುಗಳನ್ನು ಮುಂದಿರಿಸಿ ಒಕ್ಕಲೇಳುವಂತೆ ಪ್ರೋತ್ಸಾಹಿಸಿದರು. ಅಲ್ಲದೆ ಸರ್ಕಾರವೂ ಕೂಡ ಸ್ವ ಇಚ್ಛೆಯ ಮೇರೆಗೆ ಅರ್ಜಿ ಸಲ್ಲಿಸುವವರನ್ನು ಪರಿಗಣಿಸಿ ಪರಿಹಾರ ನೀಡುವುದನ್ನು ಕೂಡ ಆರಂಭಿಸಿತು. ಇಲಾಖಾ ವತಿಯಿಂದ ಇದ್ದ ನಿರ್ಬಂಧಗಳನ್ನು ಒಪ್ಪಿಕೊಳ್ಳಲಾರದೆ ನಮ್ಮ ಸ್ಥಳಗಳನ್ನು ಬಿಟ್ಟು ಹೊರ ವಲಯಕ್ಕೆ ಪುನರ್ವಸತಿ ಹೊಂದಿದೆವು. ಇದರ ಪರಿಣಾಮ ಇಂದು ನಾವು ಪುನರ್ವಸತಿಯಿಂದ ಹಣವನ್ನು ಗಳಿಸಿದ್ದೇವೆ ಹೊರತು, ಪ್ರಾಕೃತಿಕ ಸಂಪತ್ತಿನ ಮೂಲ ಆರ್ಥಿಕತೆಯಿಂದ ಹೊರಗುಳಿದು ಬದುಕನ್ನು ನಾಶಪಡಿಸಿಕೊಳ್ಳುತ್ತಿದ್ದೇವೆ. ಸರ್ಕಾರೇತರ ಸಂಸ್ಥೆಗಳ ಮುಖಾಂತರ ಹೊರ ಬಂದವರು ಸರಿಯಾದ ಭೂ ಹಿಡುವಳಿಯ ಪಟ್ಟಗಳು, ಪಹಣೆಗಳು ದೊರೆಯದೆ ಇಂದಿಗೂ ಆತಂಕದ ಪರಿಸ್ಥಿತಿಯಲ್ಲಿ ಕೈತೊಳೆಯುವಂತಾಗಿದೆ. ಉದ್ಯಾನವನದ ಒಳ ಭಾಗದಲ್ಲಿನ ಮೂಲ ಆರ್ಥಿಕತೆಯಾದ ಹೈನುಗಾರಿಕೆ, ಕೃಷಿ ಮತ್ತು ಕಾಡು ಉತ್ಪತ್ತಿಯ ಸಂಗ್ರಹವೇ ಪರಿಪೂರ್ಣವಾದ ಆರ್ಥಿಕತೆಯಾಗಿತ್ತು. ಎಂದು ನೆಮ್ಮಾರಿನಲ್ಲಿ ವಾಸವಾಗಿರುವ ಶ್ರೀ ರಾಜೇಶ್ ಅವರ ನಿಲುವು. ಉದ್ಯಾನವನದ ಹೊರ

ವಲಯಕ್ಕೆ ಬಂದವರೆಲ್ಲರ ಆರ್ಥಿಕ ಸ್ಥಿತಿಗಳು ಮೊದಲಿನ ಹಂತಕ್ಕೆ ತಲುಪಲು ಸಾಕಷ್ಟು ಸಮಯದ ಅವಶ್ಯಕತೆ ಇದೆ. ಬೆಳೆಗಳು ಬೆಳೆಯಲು ಸಮಯ ಬೇಕು ಹಾಗೂ ಅಡಿಕೆ ಕೃಷಿ ಇಲ್ಲಿ ಮೂಲ ಕೃಷಿ ಆಗಿರುವುದರಿಂದ ಕ್ರಯಕ್ಕೆ ಪಡೆದ ಜಮೀನುಗಳಲ್ಲಿ ಅಡಿಕೆ ಕೃಷಿ ಮಾಡಿರುವುದರಿಂದ ಅವುಗಳು ಪ್ರಾಯಕ್ಕೆ ಬಂದು ಫಲ ಬಿಡುವಿಕೆಗೆ ಕಾಲಾವಕಾಶದ ಅಗತ್ಯವಿದೆ. ಜೊತೆಗೆ ಉದ್ಯಾನವನದ ಒಳಭಾಗದಲ್ಲಿದ್ದವರು ಕೂಡ ಮಳೆ ಆಧಾರಿತ ಆರ್ಥಿಕತೆಯಲ್ಲಿ ಕೊಂಚಮಟ್ಟಿನ ಏರುಪೇರುಗಳು ಆಗುವುದು ಸಹಜ, ಆದರೆ ಪುನರ್ವಸತಿ ಹೊಂದಿದ ಮೇಲೆ ಮೊದಲಿನ ಆದಾಯದ ಆರ್ಥಿಕ ಸ್ಥಿತಿಯತ್ತ ಬರಲು ಸಮಯಬೇಕಾಗಿದೆ.

ಶಿಕ್ಷಣ

'ಮಾನವನ ಅಜ್ಞಾನವೆಂಬ ಕತ್ತಲನ್ನು ಕಳೆಯುವ ಜ್ಯೋತಿಯೇ ಶಿಕ್ಷಣ'. ಶಿಕ್ಷಣ ಮಗುವಿನ ಸಾಮಾಜೀಕರಣದ ಪ್ರಮುಖವಾದ ಹಂತ. ಈ ಹಂತದ ಮೂಲಕವೇ ಮಗುವು ಸಾಮಾಜಿಕ ಬದುಕಿನಲ್ಲಿ ತನ್ನ ತನವನ್ನು ಕಂಡುಕೊಳ್ಳುವುದು. ಮೂಲತಃ ಅರಣ್ಯ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳಲ್ಲಿ ಅವಶ್ಯವಾಗಿರುವುದು ಶಿಕ್ಷಣವೂ ಕೂಡ ಹೌದು. ರಾಷ್ಟ್ರೀಯ ಉದ್ಯಾನವನದ ಭಾಗವಾಗಿರುವ ಈ ಪ್ರದೇಶದಲ್ಲಿ ಮೊದಲಿನಿಂದಲೂ ಗುಣಮಟ್ಟದ ಶಿಕ್ಷಣಕ್ಕೆ ಕೊರತೆಯಿದೆ. ಒಂದೆಡೆ ಮಳೆಗಾಲ ಆರಂಭವಾಯಿತೆಂದರೆ, ನಡುಗಡ್ಡೆಯಾಗಿ ಪರಿಣಮಿಸುವ ಸ್ಥಳಗಳಿಂದ ಮಕ್ಕಳು ಶಾಲೆಗೆ ತೆರಳುವುದು ಕಷ್ಟ ಸಾಧ್ಯವಾಗುತ್ತಿತ್ತು. ಗ್ರಾಮಪಂಚಾಯಿತಿ ಮುಖಾಂತರ ಅಂತಹ ಸ್ಥಳಗಳಿಗೆ ಸೇತುವೆ ನಿರ್ಮಾಣ ಕಾರ್ಯಕ್ಕೆ ಆದೇಶ ಮತ್ತು ಹಣ ಬಿಡುಗಡೆಯಾಗಿ ಕಾರ್ಯಾರಂಭ ಮಾಡುವಾಗ ಅರಣ್ಯ ಇಲಾಖೆಯವರು ಆದೇಶ ಉಲ್ಲಂಘನೆ ಎಂದು ಮತ್ತು ಅರಣ್ಯ ಇಲಾಖೆಯ ಅನುಮತಿ ಪಡೆಯಬೇಕೆಂಬ ಉತ್ತರಗಳನ್ನು ನೀಡಿ ಸೇತುವೆ ನಿರ್ಮಾಣ ಕಾರ್ಯಗಳನ್ನು ಸ್ಥಗಿತಗೊಳಿಸುತ್ತಿದ್ದರು. ಮೊದಲಿನಿಂದಲೂ ಅರಣ್ಯ ಪ್ರದೇಶದ ವಾಸಿಗಳಾದ ನಾವು ಶಿಕ್ಷಣವನ್ನು ಪಡೆಯುವಲ್ಲಿ ಯಶಸ್ಸನ್ನು ಕಾಣದಾದೆವು. ಆದರೆ ನಮ್ಮ ಮಕ್ಕಳಿಗೆ ಅಂತಹ ಸಂದರ್ಭ ಬರಬಾರದೆಂಬ ನಿಟ್ಟಿನಲ್ಲಿ ಅವರನ್ನು ಪೇಟೆ ಶಾಲೆಗೆ ಸೇರಿಸುವುದು ಒಂದೆಡೆ ಸಾಧ್ಯವಾದರೆ, ಈ ಸ್ಥಳದಿಂದ ಬಸ್ ಸಂಚಾರದ ಮುಖಾಂತರ ಕಳುಹಿಸುವುದು ಇನ್ನು ಕಷ್ಟದ ಕೆಲಸವಾಯಿತು. ಕಾರಣ ಅವರು ಶಾಲೆಗೆ ಹೋಗಿ ಕಲಿತು ಪುನಃ ಮನೆ ಸೇರುವಷ್ಟರಲ್ಲಿ ಕತ್ತಲಾಗುತ್ತಿತ್ತು. ಕತ್ತಲಾದರೆ, ಕಾಡು ಪ್ರಾಣಿಗಳ ಆವಳಿಗಳಲ್ಲಿ ಎಲ್ಲಿ ಸಿಕ್ಕಿಕೊಳ್ಳುತ್ತರೋ ಎಂಬ ಆತಂಕದಲ್ಲಿಯೇ ಜೀವನ ಕಳೆಯಲು ಸಾಧ್ಯವಿಲ್ಲ ಎಂಬ ನಿಟ್ಟಿನಲ್ಲಿ ಉದ್ಯಾನವನದ ಬಹಳಷ್ಟು ಕುಟುಂಬಗಳು ಈ ಉದ್ದೇಶವನ್ನೇ ಮುಂದಿರಿಸಿಕೊಂಡು ಕೆರೆಕಟ್ಟೆ ವಲಯ, ಬೆಳ್ತಂಗಡಿ ಮತ್ತು ಕಾರ್ಕಳವಲಯದಿಂದ ಒಕ್ಕಲೆದ್ದಿದ್ದಾರೆ. ಕುದುರೆಮುಖ ವಲಯಲದಲ್ಲಿ ಕಂಪನಿ ಆರಂಭವಾದಾಗ ಕೇಂದ್ರೀಯ ವಿದ್ಯಾಲಯದ ಮುಖಾಂತರ ಶಾಲೆಯನ್ನು ಸ್ಥಾಪಿಸಿ ವಿವಿಧ ರಾಜ್ಯಗಳಿಂದ ಕಂಪನಿ ಕಾರ್ಯಕ್ಕೆ ನಿಯೋಜನೆಗೊಳ್ಳವ ಅಧಿಕಾರಿಗಳ ಮಕ್ಕಳಿಗೂ ಅನುಕೂಲವಾಗಲೆಂದು ಕೇಂದ್ರೀಯ ವಿದ್ಯಾಲಯವನ್ನು ನಿರ್ಮಾಣ ಮಾಡಿ ಎಲ್ಲರಿಗೂ ಸಮಾನವಾದ ಶಿಕ್ಷಣವನ್ನು ನೀಡುತ್ತಿದ್ದರು. ಕುದುರೆಮುಖ ವಲಯದಲ್ಲಿ ಮಗು ಅಂಗನವಾಡಿಯಿಂದ ಪದವಿ ಪೂರ್ವದವರೆಗೆ ಶಿಕ್ಷಣವನ್ನು ಪಡೆಯುವಷ್ಟು ಸೌಲಭ್ಯ ಅಂದು ರಚನೆಯಾಗಿತ್ತು. ಕಂಪನಿಯು ತನ್ನ ಕಾರ್ಯವನ್ನು ಸ್ಥಗಿತಗೊಳಿಸಿ

ರಾಷ್ಟ್ರೀಯ ಉದ್ಯಾನವನಕ್ಕೆ ಬಿಟ್ಟುಕೊಟ್ಟ ನಂತರ ಕ್ರಮೇಣವಾಗಿ ಎಲ್ಲಾ ಶಾಲೆಗಳು ಮುಚ್ಚ ತೊಡಗಿವೆ, ಹಾಗೂ ಪುನರ್ವಸತೀಕರಣದ ಸೌಲಭ್ಯದಡಿಯಲ್ಲಿ ಒಂದೊಂದೇ ಕುಟುಂಬಗಳು ಸ್ಥಳಗಳನ್ನು ಬಿಟ್ಟು ಹೋಗುತ್ತಿವೆ ಎಂದು ಕುದುರೆಮುಖ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರ ಅಭಿಪ್ರಾಯ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನದಿಂದ ಒಕ್ಕಲೆದ್ದು ಪುನರ್ವಸತಿ ಹೊಂದಿರುವ ಬಹಳಷ್ಟು ಕುಟುಂಬಗಳು ಮೂಲಭೂತ ಸೌಕರ್ಯದ ಹೆಸರಲ್ಲಿ ಮಕ್ಕಳ ಭವಿಷ್ಯ ಉತ್ತಮವಾಗಬೇಕು ಎಂಬ ಮೂಲ ಉದ್ದೇಶದಿಂದಲೇ ಪುನರ್ವಸತಿಯನ್ನು ಪಡೆದಿದ್ದಾರೆ. ಪುನರ್ವಸತಿ ಪಡೆದ ನಂತರ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಪಡೆಯಲು ಸಹಕಾರಯುತವಾದ ವಾತಾವರಣ ದೊರಕಿದೆ, ಇದರೊಂದಿಗೆ ಕಾಡಿನಿಂದ ನಾಡಿಗೆ ಪ್ರಯಾಣಿಸಿ ಕಲಿಯಲು ಕಳೆಯುತ್ತಿದ್ದ ಕಾಲ ಉಳಿದು ಓದಿನ ಕಡೆ ಗಮನ ಹರಿಸಲು ಮಕ್ಕಳಿಗೆ ಸಹಾಯವಾಗಿದೆ. ನಮ್ಮ ಪ್ರದೇಶಗಳಲ್ಲಿ ಆಶ್ರಮ ಶಾಲೆಗಳು ಹೆಸರಿಗೆ ಮಾತ್ರ ಇವೆ. ಆದರೆ, ಖಾಯಂ ಉಪಾಧ್ಯಾಯರು ಯಾರು ಕಾರ್ಯ ನಿರ್ವಹಿಸಲು ಬರುವುದಿಲ್ಲ. ಖಾಯಂ ಉಪಾಧ್ಯಾಯರು ಹಾಗೂ ಸಿಬ್ಬಂಧಿ ವರ್ಗದವರು ನೇಮಕವಾದರೆ, ಆಶ್ರಮ ಶಾಲೆಗಳು ಕೂಡ ಹೆಸರಾಗಬಹುದು. ಆದರೆ, ಈ ಪರಿಸ್ಥಿತಿಯು ಕಾಡಿನಲ್ಲಿ ಕಲಿಯುತ್ತಿದ್ದ ಪ್ರಕೃತಿ ಸಹಜ ಶಿಕ್ಷಣವನ್ನು ಮುಂದೆಂದಿಗೂ ಅವರು ಕಲಿಯಲು ಸಾಧ್ಯವಿಲ್ಲ ಎಂದು ಮೆಣಸಿನಹಾಡ್ಯದ ಶ್ರೀ ದೇವೆಂದ್ರ ಅವರ ನಿಲುವು.

ರಾಜಕೀಯ ವ್ಯವಸ್ಥೆ

ಒಂದು ನಿರ್ದಿಷ್ಟ ಸಮುದಾಯಕ್ಕೆ ಕಾನೂನು ಬದ್ಧವಾಗಿ ಕೊಡಮಾಡಲ್ಪಟ್ಟಿರುವ ಹಕ್ಕುಗಳು, ಭಾಗವಹಿಸುವಿಕೆ, ಪ್ರತಿನಿಧಿಗಳ ಆಯ್ಕೆ ಮತ್ತು ನಿಲುವು ಗೊತ್ತುವಳಿ ಪಡಿಸುವಿಕೆಗೆ ನೀಡಿರುವ ವ್ಯವಸ್ಥೆಗಳೇ ರಾಜಕೀಯ. ರಾಜಕೀಯವೆಂಬುದು ವ್ಯಕ್ತಿಯು ಭಾಗವಹಿಸುವಿಕೆಯಿಂದ ಆರಂಭವಾಗಿ ಕುಟುಂಬ, ಸಮುದಾಯ, ಸ್ಥಳೀಯಪ್ರದೇಶ, ಪಟ್ಟಣ ಮತ್ತು ನಗರಗಳಲಿರುವ ಬೃಹತ್ ಸಮುದಾಯದವರೆಗೂ ಭಾಗವಹಿಸುವಿಕೆಯನ್ನು ಹೊಂದಿರುವ ಅಂಶವಾಗಿದೆ. ರಾಜಕೀಯ ವ್ಯವಸ್ಥೆಯೆಂಬುದು ಕಾಲ ಕಾಲಕ್ಕೆ ಜನಸಂಖ್ಯೆ, ಸಮಸ್ಯೆಗಳು, ಆರ್ಥಿಕ ಪ್ರಗತಿ ಮತ್ತು ಕಾನೂನುಗಳ ಆಧಾರಿತವಾಗಿ ಬದಲಾವಣೆಗೆ ಒಳಪಡುತ್ತದೆ. ಅಂತೆಯೇ ಒಂದು ದೇಶದ ನಿರ್ದಿಷ್ಟವಾದ ಭೂ ಪ್ರದೇಶದ ಮೇಲೆ ಅಲ್ಲಿನ ರಾಜಕೀಯ ವ್ಯವಸ್ಥೆಯು ಸಂಪೂರ್ಣವಾದ ಸಾರ್ವಭೌಮತ್ವದ ಅಧಿಕಾರವನ್ನು ಹೊಂದಿರುತ್ತದೆ. ಸಾರ್ವಭೌಮತ್ವದ ಅಧಿಕಾರದಡಿಯಲ್ಲಿ ಪ್ರಭುತ್ವವು ರಾಜಕೀಯ ವ್ಯವಸ್ಥೆಗಳನ್ನು ತಿದ್ದುಪಡಿಗೆ ಒಳಪಡಿಸುತ್ತದೆ. ಅದರ ಮುಖಾಂತರ ಆರ್ಥಿಕ ಪ್ರಗತಿ, ಸಂಪನ್ಮೂಲ ರಕ್ಷಣೆ, ವಾಣಿಜ್ಯ ಉತ್ತೇಜನ, ವಿದೇಶಿ ಬಂಡವಾಳ ಮುಂತಾದ ಅಂಶಗಳನ್ನು ಅಭಿವೃದ್ಧಿಯ ಮಾನದಂಡಗಳಲ್ಲಿ ವಿವೇಚಿಸಿ ನಿರ್ಧಿಷ್ಟ ಮಾನದಂಡಗಳನ್ನು ರಚಿಸಿ ಕಾನೂನು ಚೌಕಟ್ಟಿನಲ್ಲಿಡಲು ಪ್ರಯತ್ನಿಸುತ್ತದೆ. ಈ ಎಲ್ಲಾ ವ್ಯವಸ್ಥೆಗಳನ್ನು ಆಧುನಿಕ ರಾಜ್ಯದ ವ್ಯವಸ್ಥೆಗಳಲ್ಲಿ ಕಾಣುತ್ತವೆ, ಆದರೆ ಮೂಲಗಳು ಮಾತ್ರ ಆದಿ ಸಮುದಾಯಗಳಿಂದ ಪಡೆದ ಜ್ಞಾನದ ಆಧಾರಿತವಾಗಿ ಇಂದು ಮುಂದುವರೆದಿವೆ ಎಂದರೆ ತಪ್ಪಾಗಲಾರದು. ಕುದುರೆಮುಖ ರಾಷ್ಟ್ರೀಯ ಉದ್ಯಾನವನ

ಸಂದರ್ಭದಲ್ಲಿ ಅವಲೋಕಿಸುವುದಾದರೆ, ಅನೇಕ ಗಿರಿಜನ ಸಮುದಾಯಗಳು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳು ನೆಲೆಯೂರಿರುವ ಮಲೆನಾಡ ಪ್ರದೇಶವಾಗಿದ್ದು, ಜನ ಸಂಖ್ಯೆಗೆ ಅನುಗುಣವಾಗಿ ಸ್ಥಳೀಯಸಂಸ್ಥೆಗಳ ಆಡಳಿತ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಪಂಚಾಯತ್ ವ್ಯವಸ್ಥೆಗಳ ಮುಖಾಂತರ ಉದ್ಯಾನವನ ಪ್ರದೇಶದಲ್ಲಿ ಪ್ರತಿ ಕುಟುಂಬದ ಸದಸ್ಯರನ್ನು ಪರಿಗಣಿಸಿ ಮತದಾನ ಗುರುತು ಚೀಟಿ, ಪಡಿತರ ಚೀಟಿ, ಆಧಾರ್ ಪತ್ರ, ವಾಸ ಸ್ಥಳ ದೃಡಿಕರಣ ಪತ್ರ ಮುಂತಾದ ಎಲ್ಲಾ ದಾಖಲೆಗಳನ್ನು ಹೊಂದುವಂತಹ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇದರೊಂದಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿ ತರುವ ಯೋಜನೆಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇದರೊಂದಿಗೆ ಪ್ರತಿ ಕುಟುಂಬದ ವಾಸದ ಸ್ಥಳದಲ್ಲಿ ನಿರ್ಮಲ ಭಾರತ ಮತ್ತು ಸ್ವಚ್ಚ ಭಾರತ ಅಭಿಯಾನದಡಿಯಲ್ಲಿ ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿರುವುದು ಮತ್ತು ಅದನ್ನು ಪಡೆದಿರುವ ಪ್ರತಿಯೊಬ್ಬರು ಸ್ವಚ್ಚತೆಯ ಕೊಡುಗೆಯನ್ನು ಆ ಪ್ರಾಂತ್ಯಕ್ಕೆ ಸಲ್ಲಿಸಿದ್ದಾರೆ. ಈ ವ್ಯವಸ್ಥೆಗೆ ರಾಜ್ಯ ಸರ್ಕಾರದಿಂದ ಪುರಸ್ಕಾರವನ್ನು ಕೆರೆಕಟ್ಟೆ ವಲಯವು ಪಡೆದುಕೊಂಡಿದೆ. ವಾಸ್ತವದ ಸಂಗತಿ ಎಂದರೆ, ರಾಷ್ಟ್ರೀಯ ಉದ್ಯಾನವನದಲ್ಲಿರುವ ಪ್ರದೇಶಗಳಲ್ಲಿ ಪಂಚಾಯತ್ ಮುಖಾಂತರ ತೆಗೆದುಕೊಳ್ಳುವ ಅಭಿವೃದ್ಧಿ ತೀರ್ಮಾನಗಳನ್ನು ಸಂಬಂಧಿಸಿದ ವಲಯ ಅರಣ್ಯ ಅಧಿಕಾರಿಗಳ ಕಛೇರಿಗೆ ಸಲ್ಲಿಸಲಾಗುತ್ತದೆ. ಆದರೆ, ರಾಷ್ಟ್ರೀಯ ಉದ್ಯಾನವನವು ಕೇಂದ್ರೀಯ ಮತ್ತು ರಾಜ್ಯ ವ್ಯವಸ್ಥೆಯಡಿಯಲ್ಲಿ ಬರುವುದರಿಂದ ಇಲ್ಲಿ ತೆಗೆದುಕೊಳ್ಳುವ ತೀರ್ಮಾನದ ಕುರಿತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ವರದಿಯನ್ನು ಸಲ್ಲಿಸಿ ಚರ್ಚೆಗೆ ಇಡಬೇಕು. ಈ ಚರ್ಚೆಗಳು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಹಾಗೂ ಕೇಂದ್ರ ತಂಡದ ಅನುಮತಿ ಮೇರೆಗೆ ನೀಡಲಾದ ಮಾರ್ಗಸೂಚಿಗಳ ಅನ್ವಯ ಮಾತ್ರ ಅಭಿವೃದ್ಧಿ ಕಾರ್ಯಗಳನ್ನು ನೆರವೇರಿಸಲು ಸಹಕರಿಸುತ್ತದೆ. ಒಂದು ವೇಳೆ ಪಂಚಾಯತ್ ವ್ಯವಸ್ಥೆಯಲ್ಲಿ ವಾರ್ಡ ಸಭೆಗಳ ಮುಖಾಂತರ ಸಾರ್ವಜನಿಕ ನಿರ್ಣಯಗಳು ಒಮ್ಮತವಾಗಿದ್ದಲ್ಲಿ ವನ್ಯಜೀವಿ ಇಲಾಖೆಯಿಂದ ಸಹಮತ ದೊರೆಯದಿದ್ದರೆ, ಸಾರ್ವಜನಿಕರು ತೆಗೆದುಕೊಂಡ ನಿರ್ಧಾರಗಳು ಅನೂರ್ಜಿತಗೊಳ್ಳತ್ತವೆ. ಈ ವ್ಯವಸ್ಥೆಯ ಕುರಿತು ಹಲವಾರು ಬಾರಿ ತಾಲ್ಲೂಕುಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಚರ್ಚೆಯಾಗಿ ಮಂಡನೆಯಾದರು ಇಂದಿಗೂ ಪ್ರಯೋಜನವಾಗಿಲ್ಲ. ಇದರೊಂದಿಗೆ ಮೂಲಭೂತ ಸೌಕರ್ಯದಡಿ ವಿದ್ಯುತ್, ರಸ್ತೆ ಮತ್ತು ಇತರ ಸೌಲಭ್ಯಗಳಿಗೆ ಪಂಚಾಯತ್ ಮುಖಾಂತರ ಸೌಲಭ್ಯ ನೀಡಿದರೆ, ವನ್ಯಜೀವಿ ಇಲಾಖೆ ಅನುಮತಿ ಪಡೆಯಬೇಕು ಎಂಬ ಸಬೂಬು ನೀಡುತ್ತದೆ. ಈ ಸನ್ನಿವೇಶಗಳನ್ನು ಅವಲೋಕಿಸಿ ಸ್ವ ಇಚ್ಚೆ ಮೇರೆಗೆ ಒಕ್ಕಲೆದ್ದ ಕುಟುಂಬಗಳು ಸಿಕ್ಕ ಪರಿಹಾರದಲ್ಲಿ ಪುನರ್ವಸತಿ ಹೊಂದಿ ಹೊರಭಾಗದಲ್ಲಿ ನೆಲೆಸಿ ೩ ರಿಂದ ೪ ವರ್ಷಗಳಾಗಿವೆ, ಇಂದಿಗೂ ಅವರು ಹಣ ವ್ಯಯಿಸಿ ಪಡೆದ ಭೂ ಹಿಡುವಳಿಗಳು ಅವರ ಹೆಸರಲ್ಲಿಲ್ಲ, ಬ್ಯಾಂಕಿನಿಂದ ಸಾಲ ಯೋಜನೆ ಸ್ವೀಕರಿಸಲು ಆಧಾರ್, ಪಡಿತರ ಮತ್ತು ಚುನಾವಣ ಗುರುತು ಚೀಟಿಗಳಿಲ್ಲ. ಎಲ್ಲಾ ಸೌಲಭ್ಯಗಳನ್ನು ಪಡೆಯಲು ಅರ್ಜಿ ಸಲ್ಲಿಸಿ ೨ ವರ್ಷಗಳಾದರೂ ವ್ಯವಸ್ಥೆಗಳು ಸರಿ ಹೊಂದಿಲ್ಲ ಎಂಬ ಜಿಜ್ಞಾಸೆಯಲ್ಲಿ ಪುನರ್ವಸತಿ ಹೊಂದಿರುವವರ ಅಳಲಾಗಿದೆ.

ಆರೋಗ್ಯ ವ್ಯವಸ್ಥೆ

ಆರೋಗ್ಯ ಎಂಬ ಸ್ಥಿತಿಯು ಮಾನವನ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಅಂಶಗಳ ಸಮತೋಲನತೆಯನ್ನು ವ್ಯಕ್ತಪಡಿಸುತ್ತದೆ. ಕೇವಲ ದೈಹಿಕವಾಗಿ ಸದೃಢರಾಗಿ ಮಾನಸಿಕವಾಗಿ ಸದೃಢರಿಲ್ಲವೆಂದರೆ, ಅದು ಆರೋಗ್ಯದ ಸ್ಥಿತಿಯನ್ನು ವ್ಯಕ್ತಪಡಿಸುವುದಿಲ್ಲ. ಸದೃಢವಾದ ಆರೋಗ್ಯ ಸ್ಥಿತಿಗೆ ಮಾನವನನಿಗೆ ಪೂರಕವಾದ ಆಹಾರ, ವ್ಯಾಯಾಮ, ಧ್ಯಾನ ಮತ್ತು ಪರಿಸರ ಸಮತೋಲನತೆ ಅತ್ಯಾವಶ್ಯಕ. ಇದರೊಂದಿಗೆ ಮಾನವನು ಬದುಕುತ್ತಿರುವ ಪರಿಸರದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ ವ್ಯವಸ್ಥೆಗಳು ಮತ್ತು ಅವನಲ್ಲಿರುವ ಜ್ಞಾನ, ಆರೋಗ್ಯ ಸ್ಥಿತಿಯನ್ನು ಸೂಚಿಸುವ ಸೂಚಕಗಳಾಗಿವೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಸಂದರ್ಭದಲ್ಲಿ ಒಳಭಾಗದಲ್ಲಿ ನೆಲೆಸಿರುವ ಮಾನವನರ ಆರೋಗ್ಯ ವ್ಯವಸ್ಥೆಗಳನ್ನು ಅವಲೋಕಿಸಿದಾಗ, ಗಿರಿಜನರು ಮತ್ತು ಇತರೆ ಅರಣ್ಯವಾಸಿಗಳು ನೆಲೆಯೂರಿರುವ ಸ್ಥಳಗಳು ಸಂಪೂರ್ಣ ಅರಣ್ಯಾವೃತ ಪ್ರದೇಶಗಳಿಂದ ಕೂಡಿದ್ದು, ಅಲ್ಲಿರುವ ಸಂಪನ್ಮೂಲಗಳ ಬಳಕೆಯಿಂದ (ಔಷಧಿ ಸಸ್ಯಗಳು, ವಾತಾವರಣಕ್ಕೆ ತಕ್ಕಂತೆ ದೊರೆಯುವ ಸೊಪ್ಪು, ಹಣ್ಣು) ಆರೋಗ್ಯ ಸ್ಥಿತಿಯಲ್ಲಿ ಹೆಚ್ಚು ಪ್ರಮಾಣದ ವ್ಯವತ್ಯಾಸವೇನು ಕಾಣುವುದಿಲ್ಲ. ಆದರೆ, ತುರ್ತು ಸಂದರ್ಭಗಳು ಎದುರಾದಾಗ (ಗರ್ಭಿಣಿಯರು, ವಯಸ್ಕರು ಮತ್ತು ಜೀವಾಪತ್ತಿನ ಖಾಯಿಲೆಗಳವರನ್ನು) ಅಗತ್ಯ ಸೇವೆಗಳಿಗೆ ಹತ್ತಿರವೆಂದರೆ, ೨೦ ರಿಂದ ೩೦ ಕಿ.ಮೀ ವ್ಯಾಪ್ತಿಯನ್ನು ಕ್ರಮಿಸಲೇಬೇಕು. ಮೂಡಿಗೆರೆ ಕುದುರೆಮುಖ ವ್ಯಾಪ್ತಿಯವರು ಕಳಸಕ್ಕೆ, ಕೆರೆಕಟ್ಟೆ ವ್ಯಾಪ್ತಿಯವರು ಶೃಂಗೇರಿ, ಬೆಳ್ತಂಗಡಿ ಮತ್ತು ಕಾರ್ಕಳ ವ್ಯಾಪ್ತಿಯವರು ಸಂಬಂಧಿಸಿದ ತಾಲ್ಲೂಕು ಆಸ್ಪತ್ರೆಗಳಿಗೆ ತಲುಪಲು ಕನಿಷ್ಟ ಒಂದ ರಿಂದ ಒಂದುವರೆ ತಾಸು ಮಾರ್ಗದಲ್ಲಿ ಪಯಣಿಸಲೇಬೇಕು. ಈ ಸಂದರ್ಭಗಳಲ್ಲಿ ಕೆಲವರನ್ನು ಮುಖ್ಯ ರಸ್ತೆಯವರೆಗೂ ಇರುವ ಪ್ರದೇಶಗಳಿಂದ ಹೊತ್ತು ತರುವ ಕಾಲ್ನಡಿಗೆಯ ಮಾರ್ಗಗಳಿವೆ. ಈ ಮಾರ್ಗಗಳಲ್ಲಿ ಕ್ರಮಿಸುವುದು ಮಳೆಗಾಲದಲ್ಲಿ ಸ್ವಲ್ಪ ಪ್ರಾಯಸದ ಕೆಲಸವೇ ಆಗಿದೆ. ಈ ಪರಿಯ ವ್ಯವಸ್ಥೆಗಳನ್ನು ಹೊರತು ಪಡಿಸಿದರೆ, ಯಾವುದೇ ಖಾಯಿಲೆಗಳು ಅಷ್ಟು ಪ್ರಮುಖವಾಗಿ ಕಂಡುಬಂಧಿಲ್ಲ. ಮೇಲಾಗಿ ಈ ಭಾಗದ ಜನರು ಹೆಚ್ಚು ನೈಸರ್ಗಿಕವಾದ ಕುಡಿಯುವ ನೀರಿನ ಮೂಲಗಳನ್ನು ಹೊಂದಿರುವುದು ಹಾಗೂ ಹಳ್ಳ ಮತ್ತು ಝುರಿಗಳು ಹರಿದು ಬರುವಾಗ ಔಷಧಿ ಸಸ್ಯಗಳ ಮಡಿಲಲ್ಲಿ ಪ್ರವಹಿಸುವಾಗ ಅವುಗಳ ಗುಣಗಳನ್ನು ಜೊತೆಯಲ್ಲಿ ಕೊಂಡೊಯ್ಯುವಿಕೆ ಕ್ರಮದಿಂದಾಗಿ ಜನರು ನೀರಿನ ಮೂಲಗಳಿಂದ ಬರುವ ಬಹಳಷ್ಟು ರೋಗಗಳಿಂದ ಮುಕ್ತವಾಗಿದ್ದಾರೆ ಎಂದರೆ ತಪ್ಪಾಗಲಾರದು. ಉದ್ಯಾನವನದಿಂದ ಮೂಲಭೂತ ಸೌಕರ್ಯಗಳನ್ನು ಹರಸಿ ಪುನರ್ವಸತಿ ಹೊಂದಿರುವವರು, ನೈಸರ್ಗಿಕ ಮೂಲದ ವ್ಯವಸ್ಥೆಗಳನ್ನು ಹೊರತು ಪಡಿಸಿ ಸರ್ಕಾರ ಮುಖಾಂತರ ಆರೋಗ್ಯ ವ್ಯವಸ್ಥೆಯಡಿಯಲ್ಲಿ ದೊರೆಯುತ್ತಿರುವ ಎಲ್ಲಾ ಮೂಲಗಳಿಂದ ತುರ್ತು ವ್ಯವಸ್ಥೆ, ಆರೋಗ್ಯ ಕೇಂದ್ರಗಳ ಬಳಕೆ ಎಲ್ಲಾ ಅಂಶಗಳಿಗೂ ಸಮೀಪದಲ್ಲಿದ್ದು ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಆದರೂ ಮೊದಲಿನ ಪರಿಸರದ ಆರೋಗ್ಯ ಸ್ಥಿತಿಯನ್ನು ಈಗಿರುವ ಪ್ರದೇಶದಲ್ಲಿ ಪಡೆಯಲು ಸಾಧ್ಯವಿಲ್ಲವೆಂದು ಅವರೇ ಹೇಳುತ್ತಿದ್ದಾರೆ.

ಮಾನವ ಹಕ್ಕುಗಳ ಪ್ರಶ್ನೆ

೧೯೯೮ ರಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನವೆಂದು ಕರ್ನಾಟಕ ರಾಜ್ಯ ಪತ್ರದ ಅನ್ವಯ ಘೋಷಣೆಯನ್ನು ಹೊರಡಿಸಲಾಯಿತು. ತದನಂತರ ೨೦೦೧ ರ ಜೂನ್ ೧೮ ರಂದು ಅಂತಿಮ ಘೋಷಣೆ ಹೊರಡಿಸುವುದರೊಂದಿಗೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನವೆಂದು ಅಂತಿಮಗೊಳಿಸಲಾಯಿತು. ೧೯೭೨ರ ವನ್ಯಜೀವಿ ರಕ್ಷಣಾ ಕಾಯ್ದೆಯ ೨೪ (೧) ನೇ ವಿಧಿಯ ಪ್ರಕಾರ, ಈ ರೀತಿ ಅಂತಿಮ ಘೋಷಣೆಗೆ ಸರ್ಕಾರ ಶಿಫಾರಸ್ಸು ಮಾಡುವ ಮೊದಲು ಸಂಬಂಧಿಸಿದ ಗಿರಿಜನರು ಮತ್ತು ರೈತರಿಂದ ಆಕ್ಷೇಪಣೆ ಮತ್ತು ತಿರಸ್ಕರಿಸುವ ಸೆಟಲ್ಮೆಂಟ್ ಆಫ್ ಕ್ಲೇಮ್ಸ್ ಪಡೆಯುವುದು ಕಡ್ಡಾಯವಾಗಿರುತ್ತದೆ. ಈ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲವೆಂಬುದಾಗಿ ಚಿಕ್ಕಮಗಳೂರು ಉಪವಿಭಾಗಾಧಿಕಾರಿಗಳೇ ತಮ್ಮ ಪತ್ರದಲ್ಲಿ ಒಪ್ಪಿರುತ್ತಾರಲ್ಲದೆ, ಈ ಶಿಫಾರಸ್ಸನ್ನು ಮತ್ತು ಕುದುರೆಮುಖ ರಾಷ್ಟ್ರೀಯ ಉದ್ಯಾನವನವೆಂದು ಅಂತಿಮ ಘೋಷಣೆಯನ್ನು ಹೊರಡಿಸಿರುವ ಸಿಂಧುತ್ವವನ್ನು ಪ್ರಶ್ನಿಸಲು ಅನುವುಮಾಡಿಕೊಡುತ್ತದೆ. ಈ ವ್ಯವಸ್ಥೆಯು ಮೊದಲು ಆ ಪ್ರದೇಶದ ಜನರ ಅಸ್ತಿತ್ವವನ್ನು ಮತ್ತು ಬದುಕುವ ಹಕ್ಕುಗಳನ್ನು ಪ್ರಶ್ನಿಸಿದಂತಾಗಿ ಹಕ್ಕುಗಳ ಸಂಘರ್ಷಕ್ಕೆ ಎಡೆಮಾಡಿಕೊಟ್ಟಿದೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯನ್ನು ಪರಿಗಣಿಸಿ ಸ್ಥಳೀಯಗಿರಿಜನರಿಂದ ಮತ್ತು ರೈತರಿಂದ ಹಕ್ಕು ಪತ್ರಗಳನ್ನು ಮಂಡಿಸಲು ಕರೆದ ಎಲ್ಲಾ ಸಭೆಗಳಲ್ಲಿ ಉದ್ಯಾನವನ ರಚನೆಗೆ ವಿರೋಧವೇ ವ್ಯಕ್ತವಾಗಿ ಯಾರು ಕೂಡ ಸಕಾರಾತ್ಮಕವಾಗಿ ಸ್ಪಂದಿಸದೇ ಇರುವುದು ಕಂಡು ಬಂಧಿದ್ದರೂ ಕೂಡ ಅಂತಿಮ ಘೋಷಣೆಗೆ ಶಿಫಾರಸ್ಸನ್ನು ಮಾಡಲಾಗಿದೆ. ಆಗಲೂ ಜನರ ಹಿತಾಸಕ್ತಿಯನ್ನು ಕಡೆಗಣಿಸಲಾಗಿದೆ.

ಉದ್ಯಾನವನ ರಚನೆಗೂ ಮುನ್ನವೇ ಗಿರಿಜನರು ಮತ್ತು ರೈತರು ಝರಿಗಳಿಂದ ಹರಿದು ಬರುವ ನೀರನ್ನು ಕೃಷಿ ಕಾರ್ಯ ಮಾಡುವುದಕ್ಕೆ ಪೈಪ್‌ಗಳನ್ನು ಬಳಸಿ ಬಳಕೆ ಮಾಡುತ್ತಿದ್ದರು. ಇದರೊಂದಿಗೆ ಅರಣ್ಯ ಪ್ರದೇಶದ ಕೆಲವು ಸ್ಥಳಗಳು ಅವರ ಭೂ ಹಿಡುವಳಿಗಳಿಗೆ ಹತ್ತಿರವಿದ್ದುದ್ದರ ಪರಿಣಾಮ ಒತ್ತುವರಿ ಮಾಡಿ ಕೃಷಿ ಮಾಡಲಾಗಿತ್ತು. ಆದರೆ, ಅಂತಿಮ ಶಿಫಾರಸ್ಸಿನ ನಂತರ ನೀರನ್ನು ಬಳಕೆ ಮಾಡುವಿಕೆಗೆ ಹಾಗೂ ಒತ್ತುವರಿ ಪ್ರದೇಶದಲ್ಲಿ ಕೃಷಿ ಮಾಡುವುದಕ್ಕೆ ಅರಣ್ಯ ಇಲಾಖೆಯವರೇ ನೇರವಾಗಿ ಬಳಸದಂತೆ ಒತ್ತಡವನ್ನು ಏರುತ್ತಿದ್ದಾರೆಂದು ಉಪವಿಭಾಗಾಧಿಕಾರಿಗಳ ನೇತೃತ್ವದ ಸಭೆಯಲ್ಲಿ ನೇರವಾಗಿ ಚರ್ಚಿಸಲಾಗಿದೆ. ಆದರೂ ಯಾವುದೇ ನಿರ್ಣಯವನ್ನು ಜಿಲ್ಲಾಧಿಕಾರಿಗಳ ಕಛೇರಿಯಿಂದ ಪ್ರಕಟಿಸಲಿಲ್ಲ.

ರಾಷ್ಟ್ರೀಯ ಉದ್ಯಾನವನ ಮಾಡದಂತೆ ಮತ್ತು ಅರಣ್ಯ ಇಲಾಖೆಯವರ ಒತ್ತಡವನ್ನು ಪ್ರಶ್ನಿಸಿ ಚಿಕ್ಕಮಗಳೂರು ವಿಭಾಗದ ಶೃಂಗೇರಿ ಕೆರೆಕಟ್ಟೆ ವಲಯದ ಹಾಗೂ ಕೊಪ್ಪ ತಾಲೂಕಿನ ಕಲ್ಲುಗುಡ್ಡೆ ಗ್ರಾಮ ಸಭೆಗಳಲ್ಲಿ ನಿರ್ಣಯ ಕೈಗೊಂಡು ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯಲ್ಲಿಯೂ ನಿರ್ಣಯವನ್ನು ಅಂಗೀಕಾರ ಮಾಡಿ ಸರ್ಕಾರಕ್ಕೆ ತಲುಪಿಸಲಾಗಿದೆ. ಈ ಮೇಲಿನ ಎಲ್ಲಾ ನಿರ್ಣಯಗಳನ್ನು ಉಲ್ಲಂಘಿಸಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ರಚಿಸಲು

ಶಿಫಾರಸ್ಸು ಮಾಡಿ ಅಂತಿಮಗೊಳಿಸಲಾಗಿದೆ. ಅದರಂತೆ ಸ್ಥಳೀಯ ಪಂಚಾಯತ್ ಮತ್ತು ಜನ ಪ್ರತಿನಿಧಿಗಳ ನಿರ್ಣಯಕ್ಕೂ ಮೌಲ್ಯವಿಲ್ಲದಂತಾಗಿದೆ.

ರಾಷ್ಟ್ರೀಯ ಉದ್ಯಾನವನ ಘೋಷಣೆಯಾದರೆ, ಎಲ್ಲಿ ನಮ್ಮ ಜಮೀನುಗಳು ಉದ್ಯಾನವನಕ್ಕೆ ಸೇರಿ ಪರಿಹಾರ ದೊರಕದಾಗುವವು ಎಂಬ ಆತಂಕದಲ್ಲಿ ಇಬ್ಬರು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಅರಣ್ಯ ಇಲಾಖೆಯವರು ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮತ್ತು ಮೂಲಭೂತ ಸೌಕರ್ಯಗಳನ್ನು ಅನುಷ್ಠಾನಗೊಳ್ಳುವುದಕ್ಕೆ ಬಿಡುವುದಿಲ್ಲವೆಂದು ಸಾಕಷ್ಟು ದೂರುಗಳು ಉಪವಿಭಾಗಾಧಿಕಾರಿಗಳಿಗೆ ಎಲ್ಲಾ ವಲಯಗಳಿಂದಲೂ ವರದಿಯಾಗಿದೆ, ಅಲ್ಲದೆ ಸಂಘ ಸಂಸ್ಥೆಗಳು, ಗಿರಿಜನ ಹಿತರಕ್ಷಣಾ ಸಮಿತಿ, ಇತರೆ ಅವರು ಎಲ್ಲಾ ಸೇರಿ ಉದ್ಯಾನವನ ರಚನೆಯಾಗಬಾರದೆಂದು ಪ್ರತಿಭಟನೆ ಮಾಡಿದರೂ ಕೂಡ ಪ್ರಭುತ್ವವು ಯಾವುದನ್ನು ಲೆಕ್ಕಿಸದೇ ಉದ್ಯಾನವನವನ್ನು ಘೋಷಣೆಮಾಡಿದೆ. ಇದು ಮಾನವನ ಬದುಕುವ ಹಕ್ಕನ್ನೇ ಪ್ರಶ್ನಿಸಿದಂತಾಗಿದೆ.

೧೯೮೭ರಲ್ಲಿ ಸ್ಥಳಿಯರಿಗೆ ಯಾವುದೇ ಮುನ್ಸೂಚನೆ ನೀಡದೆ ರಕ್ಷಿತಾರಣ್ಯಗಳನ್ನು ಸೇರಿಸಿಕೊಂಡು ಏಕಪಕ್ಷೀಯವಾಗಿ ರಾಷ್ಟ್ರೀಯ ಉದ್ಯಾನವನವೆಂದು ಘೋಷಣೆ ಮಾಡಿದ್ದಾರೆ, ಒಳ ಭಾಗದಲ್ಲಿ ಅನೇಕ ರೈತರು ತಾವು ಸಾಗುವಳಿ ಮಾಡಿರುವ ಸಾಗುವಳಿ ಚೀಟಿಯನ್ನು ಹೊಂದಿದ್ದರು, ಯಾವುದನ್ನು ಪರಿಗಣಿಸದೇ ಅಂತಿಮ ಘೋಷಣೆಯನ್ನು ಹೊರಡಿಸಿ ಎಲ್ಲರು ಆತಂಕಕ್ಕೆ ಒಳಗಾಗುವಂತೆ ಮಾಡಲಾಗಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ರಾಷ್ಟ್ರೀಯ ಉದ್ಯಾನವನ ಘೋಷಣೆ ಹಿನ್ನೆಲೆಯಲ್ಲಿ ಸ್ಥಳೀಯಜನರು ತಮ್ಮ ಹಕ್ಕುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಸಾಕಷ್ಟು ಸಂಘರ್ಷಗಳನ್ನು ಎದುರುಗೊಂಡಿದ್ದಾರೆ. ಇದರೊಂದಿಗೆ ಉದ್ದೇಶಿತ ಅರಣ್ಯ ನೀತಿಗಳು ಕಾನೂನಿನೊಂದಿಗೆ ವಿಲೀನವಾಗಿ ಗಿರಿಜನರ ಮತ್ತು ರೈತರ ಅಸ್ತಿತ್ವ ಮತ್ತು ಹಕ್ಕನ್ನು ಪ್ರಶ್ನಿಸುವಂತಾಗಿದೆ. ಮುಂದುವರೆದಂತೆ ರಾಷ್ಟ್ರೀಯ ಉದ್ಯಾನವನ ಘೋಷಣೆ ನಂತರವೂ ಕೂಡ ಮೂಲಭೂತ ಸೌಕರ್ಯಗಳನ್ನು ಪಡೆಯುವಿಕೆಗೂ ಕೂಡ ಜನ ಸಾಮಾನ್ಯರು ಸಾಕಷ್ಟು ಹರಸಾಹಸ ಪಡಬೇಕಾದಂತಹ ಸ್ಥಿತಿ ಎದುರಾಗಿದೆ. ಉದ್ಯಾನವನದ ಕಾನೂನುಗಳು ಮುಂದಿನ ದಿನ ಮಾನಗಳಲ್ಲಿ ಯಾವ ರೀತಿಯಾಗಿ ಪರಿಣಮಿಸುವವೋ ಎಂಬ ಆತಂಕದಿಂದ ಒಕ್ಕಲೆದ್ದು ಪುನರ್ವಸತೀಕರಣಪರಿಹಾರ ತೆಗೆದುಕೊಂಡರೆ, ಹೊರ ಪ್ರಪಂಚದಲ್ಲಿ ಇಂದಿಗೂ ಕೂಡ ಸೌಲಭ್ಯಗಳನ್ನು ಪಡೆಯಲು ಅರ್ಜಿ ಸಲ್ಲಿಸಿ ಕಾಲಗಳು ಉರುಳಿವೆ. ಜೊತೆಯಲ್ಲಿ ಎನ್ ಜಿ ಓ ಮೂಲಕ ಹೊರ ಬಂದವರು ಸರಿಯಾದ ಕ್ರಮದಲ್ಲಿ ಇಲ್ಲದ ಭೂ ಹಿಡುವಳಿಗಳನ್ನು ಕ್ರಯಕ್ಕೆ ಪಡೆದು ಕಂದಾಯ ಇಲಾಖೆಗೆ ತಮ್ಮ ಹೆಸರಿಗೆ ವರ್ಗಾಯಿಸಲು ಅರ್ಜಿಸಲ್ಲಿಸಿದರೆ, ಅವರ ಹೆಸರಿಗೆ ಬಾರದಂತಹ ೫೩ ಮತ್ತು ೫೪ ನಮೂನೆಯಲ್ಲಿ ಉಲ್ಲೇಖಿಸಲ್ಪಟ್ಟು ಇಂದಿಗೂ ಅವರ ಹೆಸರಿಗೆ ಬಾರದಾಗಿವೆ. ಇವು ಅವರು ಪಡೆದಿರುವ ಸೌಲಭ್ಯಗಳ ವಿಫಲತೆ ಎಂದೇ ಹೇಳಬಹುದು. ಈ ಎಲ್ಲಾ ಅಂಶಗಳನ್ನು ಅವಲೋಕಿಸಿದರೆ, ಸರ್ಕಾರ ಕೇವಲ ಸ್ವ ಇಚ್ಚೆಯೆಂಬ ಸಂಕೋಲೆಯಲ್ಲಿ ಬಂಧಿಸಿ ಪುನರ್ವಸತಿ ಹೊಂದುವವರನ್ನು ಯಾವುದೇ ಸೌಲಭ್ಯವನ್ನು ನೀಡದೆ ಕೇವಲ ಅವರು

ಹೊಂದಿರುವ ಭೂ ಹಿಡುವಳಿಗಳ ಆಧಾರಿತವಾಗಿ ಮೌಲ್ಯವನ್ನು ಪರಿಗಣಿಸಿ ಅಷ್ಟೇ ಮೌಲ್ಯವನ್ನು ಅವರಿಗೆ ನೀಡಿ ಅಲ್ಪ ಮಟ್ಟಿನ ಸಹಾಯಾರ್ಥವಾಗಿ ಜೀವನೋಪಾಯಕ್ಕೆ ಹಣವನು ನೀಡುತ್ತಿದೆ. ಇದನ್ನು ಹೊರತುಪಡಿಸಿ ಅವರ ಜೀವನ ಹೇಗಿದೆ ಎಂಬ ಅನುಸರಣೆಯನ್ನು ಕೂಡ ಮಾಡಿಲ್ಲದಿರುವುದು, ಈ ಅಧ್ಯಯನದಲ್ಲಿ ಕಂಡುಬಂಧಿದೆ.

೩. ಸ್ಥಳಾಂತರ ಮತ್ತು ಪುನರ್ವಸತೀಕರಣ ಕುರಿತಂತೆ ಪರಿಸರ ಮತ್ತು ಸಮುದಾಯಗಳ ಹೋರಾಟಗಾರರು, ಪತ್ರಕರ್ತರು ಮತ್ತು ಅರಣ್ಯ ಇಲಾಖೆಯವರ ನಿಲುವುಗಳು

ಮಾನವನ ಅನುಭೋಗಿಯ ನಡವಳಿಕೆಯ ಫಲವಾಗಿ ಇಂದು ಅರಣ್ಯ ಸಂಪತ್ತುಗಳು ನಾಶ ಹೊಂದುತ್ತಿವೆ. ಅನಗತ್ಯವಾದ ಪ್ರಕಲ್ಪಗಳ ಅನುಷ್ಠಾನಕ್ಕೆ ಪ್ರಭುತ್ವವು ಅನುಮತಿ ನೀಡುವುದರ ಪರಿಣಾಮವಾಗಿ ಅರಣ್ಯವಾಸಿತ ಗಿರಿಜನ, ರೈತರು ಮತ್ತು ಇತರೆ ಅರಣ್ಯ ವಾಸಿಗಳು ಒಕ್ಕಲೇಳುವ ಪ್ರಕ್ರಿಯೆಯಲ್ಲಿ ಬದುಕನ್ನು ಕಟ್ಟಿಕೊಳ್ಳಬೇಕಿದೆ. ಕುದರೆಮುಖ ರಾಷ್ಟ್ರೀಯ ಉದ್ಯಾನವನದ ಇತಿಹಾಸದಲ್ಲಿ ತಾರಕಕ್ಕೇರಿರುವ ಚರ್ಚಿವಾದ ವಿಷಯವೆಂದರೆ, ಒಂದು ಕಬ್ಬಿಣ ಅದಿರಿನ ಸಂಪನ್ಮೂಲವನ್ನು ಕಡಿಮೆ ಬೆಲೆಗೆ ಅನ್ಯ ರಾಷ್ಟ್ರಗಳಿಗೆ ಮಾರಿಕೊಂಡು, ಭೂ ಗರ್ಭವನ್ನು ಸೀಳಿ ಹಸಿರು ಪರಿಸರವನ್ನು ನಾಶಪಡಿಸಲು ಹೊರಟಿದ್ದು, ಮತ್ತೊಂದು ನಾಲ್ಕು ರಕ್ಷಿತಾರಣ್ಯಗಳನ್ನು ಒಟ್ಟಿಗೆ ಸೇರಿಸಿ ಸ್ಥಳೀಯಜನರ ಗಮನಕ್ಕೆ ಯಾವುದೇ ಸೂಚನೆಗಳನ್ನು ನೀಡದೆ ಏಕಪಕ್ಷೀಯವಾಗಿ ೧೯೮೭ ರಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಘೋಷಣೆ ಮಾಡಿ, ಸ್ಥಳಿಯರಿಂದ ಆಕ್ಷೇಪಣೆ ಮತ್ತು ತಿರಸ್ಕೃತದ ಸೆಟಲ್ಮೆಂಟ್ ಆಫ್ ಕ್ಲೇಮ್ಸ್ ಗಳನ್ನು ಪಡೆಯದೇ ೨೦೦೧ ರಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಅಂತಿಮ ಘೋಷಣೆಯನ್ನು ಹೊರಡಿಸಿದ್ದು. ಈ ಸಂದರ್ಭದಲ್ಲಿ ಅತಿ ಹೆಚ್ಚು ಕೇಂದ್ರಿಕೃತವಾದ ವಸ್ತು ವಿಷಯವೆಂದರೆ, ಅದು ಭದ್ರ ನದಿಯನ್ನು ಕಲುಷಿತಗೊಳಿಸಿದ ಕುದುರೆಮುಖ ಅದಿರು ಕಂಪನಿಯ ಕಾರ್ಯಗಳು. ಈ ಕಾರ್ಯಗಳ ವಿರುದ್ಧ ಧ್ವನಿ ಎತ್ತಿ ಪರಿಸರ ಸಂರಕ್ಷಣೆಗೆ ಮುನ್ನೆಡೆದವರೇ ಪರಿಸರ ಹೋರಾಟಗಾರರು. ಪರಿಸರ ಹೋರಾಟಗಾರರು ಎಂದಾಕ್ಷಣ ವ್ಯಕ್ತಿಯನ್ನು ಮಾತ್ರ ಕೇಂದ್ರೀಕರಿಸುವುದಿಲ್ಲ, ಬದಲಿಗೆ ಸಂಘಟನೆಗಳು, ಸರ್ಕಾರೇತರ ಸಂಸ್ಥೆಗಳು ಕೂಡ ಹೋರಾಟದ ಭಾಗವಾಗಿ ಪರಿಗಣಿಸಲ್ಪಡುವುದು. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಸಂದರ್ಭದಲ್ಲಿ ಕಬ್ಬಿಣ ಅದಿರು ಕಂಪನಿಯು ನಡೆಸಿದ ಕಾರ್ಯಗಳಲ್ಲಿ ಮುಖ್ಯವಾಗಿ ಅರಣ್ಯ ಪರಿಸರ ನಾಶ, ಭದ್ರಾ ಮತ್ತು ತುಂಗ ಮೂಲಗಳು ಕಲುಷಿತಗೊಂಡು ಜಲಚರ, ವನ್ಯಜೀವಿ ಮತ್ತು ನದಿ ಪಾತ್ರದ ಜನ ಸಮುದಾಯಗಳಿಗೆ ಉಂಟಾದಂತಹ ತೊಂದರೆಗಳು ಮತ್ತು ಅಪಾರ ಪ್ರಮಾಣದ ಸ್ಫೋಟಕಗಳನ್ನು ಬಳಸಿ ಭೂಗರ್ಭ ನಿಕ್ಷೇಪಗಳನ್ನು ಹೊರ ತೆಗೆದದ್ದು. ಒಂದು ವೇಳೆ ಕಂಪನಿ ಕಾರ್ಯವನ್ನು ಪರಿಸರ ಉಳಿಸಿ ಹೋರಾಟದ ಮುಖಾಂತರ ತಡೆಗಟ್ಟದಿದ್ದಲ್ಲಿ ಪ್ರಸ್ತುತದ ವೇಳೆಗಾಗಲೇ ಕುದುರೆಮುಖ ಪರಿಸರವು ಪಶ್ಚಿಮ ಘಟ್ಟ ಪ್ರದೇಶದಿಂದ ಕಣ್ಮರೆಯಾಗಿ ಹೋಗುತ್ತಿತ್ತು. ಕುದುರೆಮುಖ ಪರಿಸರ ಇಂದಿಗೂ ಉಳಿದಿದೆ ಎಂದರೆ, ಅದಕ್ಕೆ ಕಾರಣ ಅಂದು ಪರಿಸರ ಉಳಿಸುವಿಕೆಗೆ ಹೋರಾಟ ನಡೆಸಿದ ಸಾಹಿತಿಗಳು, ಪರಿಸರ ತಜ್ಞರು, ಸ್ಥಳೀಯ ಸಂಘಟಿತ ಹೋರಾಟಗಾರರು ಮತ್ತು ಸರ್ಕಾರೇತರ ಸಂಸ್ಥೆಗಳು. ಮುಂದುವರೆದಂತೆ ಸುಪ್ರೀಂ ಕೋರ್ಟಿನ ಹಸಿರು ಸಂರಕ್ಷಣೆಯ ತೀರ್ಪು. ಈ ದಿಶೆಯಲ್ಲಿ ವನ್ಯಜೀವಿ ಮತ್ತು ಅರಣ್ಯ ಸಂರಕ್ಷಣೆಯ

ವಿಷಯವು ಕೂಡ ಪ್ರಚಲಿತಕ್ಕೆ ಬಂದು ಮಾನವ ಮತ್ತು ವನ್ಯಜೀವಿ ಸಂಘರ್ಷಣೆಯನ್ನು ತಡೆದು ಮಾನವ ಸಮೂಹಗಳ ಸ್ಥಳಾಂತರ ಮತ್ತು ಪುನರ್ವಸತೀಕರಣದ ವ್ಯವಸ್ಥೆಯು ಮುಖ್ಯವಾಹಿನಿಯಲ್ಲಿ ಪ್ರತಿಧ್ವನಿಸಿತು. ಈ ಕುರಿತಂತೆ ಸಂಶೋಧನೆಯ ಭಾಗವಾಗಿ ಕೆಲವು ಪರಿಸರ ಹೋರಾಟಗಾರರನ್ನು ಸಂದರ್ಶಿಸಿ ಅವರ ನಿಲುವನ್ನು ಈ ಸಂದರ್ಭಲ್ಲಿ ಲಿಖಿತವಾಗಿ ರಚಿಸಲು ಬಯಸುತ್ತೇನೆ.

ಪರಿಸರ ಹೋರಾಟಗಾರರ ನಿಲುವುಗಳು

ದಿ:೦೬/೧೨/೨೦೧೬ ರಲ್ಲಿ ಚಿಕ್ಕಮಗಳೂರಿನಲ್ಲಿ ವಾಸವಾಗಿರುವ ರಾಜ್ಯ ವನ್ಯಜೀವಿ ಮಂಡಳಿಯ ಮಾಜಿ ಅಧ್ಯಕ್ಷರಾದ ಶ್ರೀಯುತ ಗಿರಿಜಾಶಂಕರ (ಭದ್ರಾ ಹುಲಿ ಅಭಯಾರಣ್ಯ ಯೋಜನೆ ಅಡಿಯಲ್ಲಿ ಸ್ಥಳಾಂತರ ಮತ್ತು ಪುನರ್ವಸತೀಕರಣ ಕುರಿತಂತೆ ಸಾಕಷ್ಟು ಅನುಭವವನ್ನು ಹೊಂದಿದ್ದು, ರಾಜ್ಯ ವನ್ಯಜೀವಿ ಮಂಡಳಿಯಲ್ಲಿ ಅಧ್ಯಕ್ಷರಾಗಿಯೂ ಕೂಡ ಅನುಭವವನ್ನು ಪಡೆದುಕೊಂಡಿದ್ದಾರೆ.) ಅವರನ್ನು ಸಂದರ್ಶಿಸಿದ ಸಂದರ್ಭದಲ್ಲಿ ಹಲವು ಪ್ರಮುಖಾಂಶಗಳಾದ ಗಿರಿಜನರ ಪುನರ್ವಸತಿ, ಗಿರಿಜನರ ಅಭಿವೃದ್ಧಿ ಮತ್ತು ಗಿರಿಜನರು ಹಾಗೂ ಕುದುರೆಮುಖ ಉದ್ಯಾನವನದ ರೈತರು ಎದುರಿಸುತ್ತಿರುವ ಸವಾಲುಗಳ ಕುರಿತು ಚರ್ಚಿಸಲಾಯಿತು. ಅದರಂತೆ,

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಒಳಭಾಗದಲ್ಲಿರುವ ಜನಸಂಖ್ಯೆಯಲ್ಲಿ ಗಿರಿಜನರೇ ಹೆಚ್ಚಾಗಿದ್ದಾರೆ. ಮೂಲತಃ ಉದ್ಯಾನವನ ಘೋಷಣೆಯ ಹಿಂದಿನ ಮೂರು ತಲೆಮಾರುಗಳಿಂದಲೂ ಈ ಪ್ರಾಂತ್ಯಗಳಲ್ಲಿ ಕೃಷಿಯನ್ನು ಮೂಲ ಕಸುಬನ್ನಾಗಿಸಿಕೊಂಡು ಜೀವನವನ್ನು ಸಾಗಿಸಿಕೊಂಡು ಬಂಧಿದ್ದಾರೆ. ಗಿರಿಜನರೊಂದಿಗೆ ಇತರೆ ಅರಣ್ಯವಾಸಿಗಳು ಕೂಡ ಅರಣ್ಯದೊಂದಿಗೆ ಕೃಷಿಯನ್ನು ಮೂಲ ಕಸುಬನ್ನಾಗಿ ಆಯ್ಕೆಮಾಡಿಕೊಂಡು ಜೀವನೋಪಾಯ ಕಂಡುಕೊಂಡಿದ್ದಾರೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಘೋಷಣೆಯಾದ ನಂತರ ಗಿರಿಜನರು ಮತ್ತು ಇತರೆ ಅರಣ್ಯವಾಸಿಗಳು ಇಂದಿಗೂ ಮೂಲ ಸೌಕರ್ಯದ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವುಗಳನ್ನು ಪಡೆಯಲು ಸಾಕಷ್ಟು ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. ಆದರೆ, ಉದ್ಯಾನವನ ವ್ಯಾಪ್ತಿಯಾದ್ದರಿಂದ ಸೌಲಭ್ಯಗಳು ಸಿಗುವುದು ಕಷ್ಟಸಾಧ್ಯವಾಗುತ್ತಿದೆ. ಇನ್ನು ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಮತ್ತು ಪುನರ್ವಸತೀಕರಣಕ್ಕೆ ಸಂಬಂಧಿಸಿದಂತೆ, ಮೂಲಭೂತ ಸೌಕರ್ಯಗಳನ್ನು ಆಧರಿಸಿ ಉದ್ಯಾನವನದಿಂದ ಹೊರ ಬರಲು ಸಾಕಷ್ಟು ಕುಟುಂಬಗಳು ಅರ್ಜಿ ಸಲ್ಲಿಸಿವೆ ಮತ್ತು ಈಗಾಗಲೇ ೨೦೦೫ ರಿಂದ ಪುನರ್ವಸತಿ ಪಡೆದಿರುವ ಹಲವು ಕುಟುಂಬಗಳು ಅರಣ್ಯದಂಚಿನಲ್ಲಿ ಬಂದು ನೆಲೆಸಿವೆ.. ಅವುಗಳಲ್ಲಿ ಕೆಲವು ಸರ್ಕಾರೇತರ ಸಂಸ್ಥೆಗಳಿಂದ ಪುನರ್ವಸತಿ ಪಡೆದು ಒಕ್ಕಲೆದ್ದಿರುವ ಕುಟುಂಬಗಳಿಗೆ ಸಿಕ್ಕಿರುವ ಪರಿಹಾರ ತುಂಬಾ ಕಡಿಮೆಯಾಗಿದ್ದು, ಅವರಿಗೆ ಇನ್ನು ಹೆಚ್ಚಿನ ಪರಿಹಾರವನ್ನು ನೀಡುವುದು ಅವಶ್ಯವಿದೆ. ಜೊತೆಯಲ್ಲಿ ಅವರ ಕೌಶಲ್ಯಗಳನ್ನು ಗುರುತಿಸಿ ವೃತ್ತಿಪರವಾದ ತರಬೇತಿಗಳನ್ನು ನೀಡಿದ್ದಲ್ಲಿ ಅವರ ಆರ್ಥಿಕ ಸ್ಥಿತಿ ಉತ್ತಮಪಡಿಸುವಿಕೆಗೆ ಪ್ರಯತ್ನಿಸಿದಂತಾಗುತ್ತದೆ. ಸರ್ಕಾರದ ವತಿಯಿಂದ ದೊರೆಯುತ್ತಿರುವ ಪುನರ್ವಸತಿ ಪ್ಯಾಕೇಜ್ ಕೂಡ ಬಹಳ ಕಡಿಮೆ ಪ್ರಮಾಣದ್ದಾಗಿದ್ದು, ಅದನ್ನು ಮೂರು ಪಟ್ಟು ಪರಿಹಾರಕ್ಕೆ ಹೆಚ್ಚಿಸಿದರೆ, ಉದ್ಯಾನವನದಿಂದ ಹೊರ ಬರುವ ಕುಟುಂಬಗಳಿಗೆ ಹೊರಪ್ರಪಂಚದಲ್ಲಿ ಸದೃಢವಾಗಿ ನಿಲ್ಲಲು

ಅನುಕೂಲವಾಗುತ್ತದೆ. ಹುಲಿ ಯೋಜನೆ ಮತ್ತು ಕಾಂಬೋ ಯೋಜನೆಯ ನಿಧಿಗಳನ್ನು ಈ ಪರಿಹಾರಕ್ಕೆ ವಿನಿಯೋಗಿಸಿದರೆ, ಇನ್ನು ಹೆಚ್ಚಿನ ಪ್ರಮಾಣದಲ್ಲಿ ಪರಿಹಾರವನ್ನು ಪುನರ್ವಸತಿ ಹೊಂದುವವರಿಗೆ ನೀಡಬಹುದು. ಇಂದಿನ ವಾಸ್ತವ ಸ್ಥಿತಿಯಲ್ಲಿ ಅರಣ್ಯ ಸಂರಕ್ಷಣೆ ಅನಿವಾರ್ಯವಾಗಿದೆ ಮತ್ತು ಸ್ವಯಂ ಪ್ರೇರಿತವಾಗಿ ಹೊರಬರುವ ಕುಟುಂಬಗಳಿಗೆ ನೆಲೆನಿಲ್ಲಲು ನಿಧಿಗಳ ಅವಶ್ಯವಿದ್ದು, ಸರ್ಕಾರವು ನೀಡುತ್ತಿರುವ ಪರಿಹಾರ ಪ್ಯಾಕೇಜ್‌ನ್ನು ಹೆಚ್ಚುಗೊಳಿಸುವುದು ಒಳ್ಳೆಯದು. ಇದರಿಂದ 'ಉದ್ಯಾನವನಕ್ಕಾಗಿ ಭೂಮಿಯನ್ನು ಬಿಟ್ಟು ಬರುವವರಿಗೆ ಯಾಕಾದರೂ ಹೊರ ಬಂದೆನೆಂಬ ಭಾವನೆ ಎಂದಿಗೂ ಬರಬಾರದು'. ಎಂಬುದಾಗಿ ತಿಳಿಸಿದರು. (ಶಂಕರ, ೨೦೧೬)

ಶ್ರೀ ಸುರೇಶ ಭಟ್ಟರು, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಸಂಸೆ ಗ್ರಾಮಪಂಚಾಯತಿ ವ್ಯಾಪ್ತಿಯ ಕೆಂಗನಕೊಂಡ ಗ್ರಾಮದ ನಿವಾಸಿಯಾಗಿದ್ದು, ಗ್ರಾಮ ಅರಣ್ಯ ಹಕ್ಕು ಸಮಿತಿಯ ಕಾರ್ಯದರ್ಶಿಗಳಾಗಿ ನೇಮಕಗೊಂಡಿದ್ದಾರೆ. ೧೯೯೭ ರಿಂದ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ರಚನೆಯ ವಿರುದ್ಧ ಮತ್ತು ಕುದುರೆಮುಖ ಗಣಿಗಾರಿಕೆ ವಿರುದ್ಧ ಹಾಗೂ ಗಿರಿಜನರಿಗೆ ನೀಡುವ ಅರಣ್ಯಹಕ್ಕು ಪತ್ರದ ಪರವಾಗಿ ಹೋರಾಟವನ್ನು ಆರಂಭಿಸಿದವರು. ಭಟ್ಟರು ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ನಿವಾಸಿಯೂ ಆಗಿದ್ದು, ಸ್ಥಳಾಂತರ ಮತ್ತು ಪುನರ್ವಸತೀಕರಣಕ್ಕೆ ಸಂಬಂಧಿಸಿದಂತೆ ಹೋರಾಟಗಳಲ್ಲಿ ಭಾಗವಹಿಸಿ ಕಂಡುಕೊಂಡ ಅನುಭವಗಳನ್ನು ಸಂದರ್ಶನದಲ್ಲಿ ಪ್ರತಿ ಸನ್ನಿವೇಶಗಳನ್ನು ತಿಳಿಸಿಕೊಟ್ಟರು.

೧೯೮೭ರಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ಮೈಸೂರು ಫಾರಸ್ಟ್ ಆಕ್ಟ್ ೧೯೧೬ ರಲ್ಲಿ ಈ ವ್ಯಾಪ್ತಿಯಲ್ಲಿ ಗುರುತಿಸಿದ್ದ ಅಂಡಾರು, ಸೌತ್ ಭದ್ರಾ, ತುಂಗಾ, ನಾರಾವಿ ಫಾರೆಸ್ಟ್ ಮತ್ತು ನರಸಿಂಹ ಪರ್ವತಗಳನ್ನು ಸೇರಿಸಿಕೊಂಡು ಉದ್ಯಾನವನವೆಂದು ಕರ್ನಾಟಕ ರಾಜ್ಯಪತ್ರದಲ್ಲಿ ಘೋಷಣೆಯನ್ನು ಹೊರಡಿಸಿದರು. ಆದರೂ ಸ್ಥಳೀಯಗಿರಿಜನ ಮತ್ತು ರೈತರ ಗಮನಕ್ಕೆ ತರುವುದಕ್ಕೆ ೧೯೯೭ ನೇ ಇಸವಿ ವರೆಗೂ ಕಾಯ್ದು ನಂತರ ಉದ್ಘೋಷಣೆಗೆ ಸರ್ಕಾರ ಮುಂದಾದಾಗ, ೧೦ ವರ್ಷಗಳ ಅವಧಿವರೆಗೆ ಯಾರ ಗಮನಕ್ಕೂ ತರದೇ ಏಕೆ ಸುಮ್ಮನಿದ್ದಿರೀ, ಎಂದು ಎಲ್ಲಾ ವರ್ಗದವರು ರಾಷ್ಟ್ರೀಯ ಉದ್ಯಾನವನ ರಚನೆ ವಿರುದ್ಧ ಹೋರಾಟಕ್ಕೆ ಇಳಿದರು. ಇದೇ ಸಮಯದಲ್ಲಿ ಗಣಿಗಾರಿಕೆ ವಿರುದ್ಧದ ಹೋರಾಟವು ಪರಿಸರವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸಾಕಷ್ಟು ಬೃಹತ್ ಪ್ರತಿಭಟನೆಗೆ ನಾಂದಿಹಾಡಿತು. ಸಂಸೆ ಭಾಗದಲ್ಲಿ ನಾವು (ಭಟ್ಟರು) ಮತ್ತು ಶೃಂಗೇರಿ ಭಾಗದಲ್ಲಿ ಕಲ್ಕುಳಿ ವಿಠಲ್ ಹೆಗ್ಡೆ ಅವರು ಪ್ರಮುಖ ಪಾತ್ರ ವಹಿಸುವುದರೊಂದಿಗೆ ಗಿರಿಜನ ಮತ್ತು ಅರಣ್ಯನಿವಾಸಿಗಳ ಸಹಭಾಗಿತ್ವದೊಂದಿಗೆ ಜನಸಂಘಟನೆ ಹಾಗೂ ಸಮಾವೇಶಗಳನ್ನು ನಡೆಸುತ್ತಾ, ನದಿ ಪಾತ್ರದ ಜನ ಸಮುದಾಯಕ್ಕೆ, ಪರಿಸರಕ್ಕೆ ಗಣಿಗಾರಿಕೆಯಿಂದ ಆಗುತ್ತಿರುವ ಅನಾನುಕೂಲಗಳ ಕುರಿತು ಜನಜಾಗೃತಿ ಮೂಡಿಸುತ್ತಾ, ಸರ್ಕಾರ ಮತ್ತು ಸುಪ್ರೀಂ ಕೋರ್ಟ್‌ಗಳಲ್ಲಿ ದಾವೆಯನ್ನು ಊಡಿ ಗಣಿಗಾರಿಕೆಯನ್ನು ಸ್ಥಗಿತಗೊಳಿಸುವಂತೆ ಮಾಡಲಾಯಿತು. ಇದರಿಂದ ಕುದುರೆಮುಖದ ಹಸಿರಿನ ಪರಿಸರ ಮರುಕಳಿಸುವಿಕೆಗೆ ಸಾಧ್ಯವಾಯಿತು ಅಲ್ಲದೆ ವನ್ಯಜೀವಿ, ಜಲಚರಗಳು ಹಾಗೂ ನದಿ ಪಾತ್ರದ ಜನ ಸಮುದಾಯಗಳಿಗೆ ಕುಡಿಯುವ ನೀರಿನ

ಭವಣೆಯನ್ನು ತಗ್ಗಿಸಿದಂತಾಯಿತು. ಕೃಷಿ ಮೂಲ ಆರ್ಥಿಕ ಚಟುವಟಿಕೆಯನ್ನು ಹೊಂದಿರುವ ಈ ಭಾಗದ ಗಿರಿಜನ ಮತ್ತು ರೈತರು ಎಂದಿಗೂ ಪರಿಸರವನ್ನಾಗಲಿ, ಅರಣ್ಯ ಪ್ರದೇಶವನ್ನಾಗಲಿ ನಾಶ ಮಾಡಲಿಲ್ಲ. ಬದಲಿಗೆ ಪ್ರಭುತ್ವವು ನೀಡಿದ ಪರವಾನಗಿ ಮೇಲೆ ಭೂಗರ್ಭವನ್ನು ಸೀಳಿ ಅದಿರು ನಿಕ್ಷೇಪಗಳನ್ನು ತೆಗೆದ ಗಣಿಗಾರಿಕೆ ಕಾರ್ಯಗಳಿಂದ ಅರಣ್ಯ ನಾಶ ಸಂಭವಿಸಿದೆಯೇ ಹೊರತು. ರೈತರಿಂದ ಅರಣ್ಯ ನಾಶ ಎಂದಿಗೂ ಆಗಿಲ್ಲ ಮತ್ತು ಅದು ಸಾಧ್ಯವಿಲ್ಲದ ಕಾರ್ಯವೂ ಕೂಡ ಹೌದು. ಕೃಷಿ ಚಟುವಟಿಕೆಗಳಿಗಾಗಿ ರೈತರು ಕೇವಲ ಭೂ ಹಿಡುವಳಿಗಳನ್ನು ಬಳಸಿ ತಿನ್ನುವುದಕ್ಕೆ ಅನ್ನವನ್ನು ಬೆಳೆದಿದ್ದಾನೆ ಹೊರತು ಭೂ ಗರ್ಭವನ್ನು ಸೀಳಿ ಅಲ್ಲಿನ ಪರಿಸರವನ್ನು ನಾಶ ಮಾಡಿಲ್ಲ ಎಂಬುದು ಇವರ ವಾದ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಅಂತಿಮ ಘೋಷಣೆ ನಂತರ ಗಿರಿಜನರು ಮತ್ತು ರೈತರು ಆತಂಕಕ್ಕೆ ಒಳಗಾದ ಸನ್ನಿವೇಶವೆಂದರೆ, ಒಕ್ಕಲೆಬ್ಬಿಸುವ ಪ್ರಕ್ರಿಯೆ ಎಲ್ಲಿ ಚಾಲನೆ ದೊರೆತು ನಾವು ಬೀದಿಗೆ ಬೀಳುತ್ತೇವೆ ಎಂಬುದು. ಆದರೆ, ಶ್ರೀಯುತ ಬೋರೆ ಮತ್ತು ಶ್ರೀಯುತ ಸಿಂಗ್ ಅಂತಹ ಅಧಿಕಾರಿಗಳು ಉದ್ಯಾನವನವನ್ನು ಅವಲೋಕಿಸಿ ಜನವಸತಿಗಳಿಂದ ಪರಿಸರ ನಾಶವಾಗಿಲ್ಲ, ಸರ್ಕಾರ ಯಾರನ್ನು ಬಲವಂತವಾಗಿ ಒಕ್ಕಲೆಬ್ಬಿಸುವುದಿಲ್ಲ ಮತ್ತು ಸ್ವ ಇಚ್ಛೆ ಮೇರೆಗೆ ಪುನರ್ವಸತಿ ಹೊಂದುವವರನ್ನು ತಡೆಯುವುದಿಲ್ಲ ಎಂಬ ವರದಿಯನ್ನು ಸೂಚನೆಗೈದು ಹಳ್ಳಿ ಪರಿಸರದಲ್ಲಿ ಸೂಚನಾ ಫಲಕಗಳನ್ನು ಸ್ಥಾಪಿಸಿದ ಮೇಲೆ ಎಲ್ಲರಿಗೂ ಸ್ವಲ್ಪ ಧೈರ್ಯ ಬಂದಿದೆ. ಸದ್ಯದ ಪರಿಸ್ಥಿತಿಯಲ್ಲಿ ಮೂಡಿಗೆರೆ ಭಾಗದಿಂದ ಯಾವ ಕುಟುಂಬವು ಹೊರ ಹೋಗುವ ಇಂಗಿತವನ್ನು ವ್ಯಕ್ತಪಡಿಸಿಲ್ಲ. ಆದರೆ ಕಳೆದ ನಾಲ್ಕು ವರ್ಷಗಳಲ್ಲಿ ಸಿಂಗ್ಸಾರ್ ಮತ್ತು ಆವಂತಿ ಪ್ರದೇಶಗಳಿಂದ ಸರ್ಕಾರೇತರ ಸಂಸ್ಥೆಗಳ ಮುಖಾಂತರ ಕಡಿಮೆ ಪರಿಹಾರಕ್ಕೆ (೨ ರಿಂದ ೪ ಲಕ್ಷ ರೂ) ಒಕ್ಕಲೆದ್ದವರು ತರೀಕೆರೆ ಲಕ್ವಳ್ಳಿಯಲ್ಲಿ ಸೌಲಭ್ಯ ಪಡೆಯಲಾಗದೆ ವಾಸವಿದ್ದಾರೆಂಬುದು ಇತ್ತೀಚೆಗೆ ತಿಳಿದುಬಂದಿದೆ. ಕೆರೆಕಟ್ಟೆ ಮತ್ತು ಬೆಳ್ತಂಗಡಿ ವಲಯದಲ್ಲಿ ಹೆಚ್ಚು ಪುನರ್ವಸತೀಕರಣ ಹೊಂದಿದವರನ್ನು ಕ್ಷೇತ್ರದಲ್ಲಿ ನೀವು ಕಾಣಬಹುದು. ಈ ಎರಡು ವಲಯಗಳಲ್ಲಿ ಭೂ ಹಿಡುವಳಿ ಹೆಚ್ಚಿದ್ದವರ ಮಕ್ಕಳು ಚೆನ್ನಾಗಿ ಶಿಕ್ಷಣ ಪಡೆದು ಹೊರ ರಾಷ್ಟ್ರಗಳಲ್ಲಿ ಮತ್ತು ಬೆಂಗಳೂರು ಪ್ರದೇಶಗಳಲ್ಲಿ ಒಳ್ಳೆಯ ಕೆಲಸದಲ್ಲಿ ನಿರತರಾಗಿರುವ ಕಾರಣ ಇದ್ದ ತಂದೆ ತಾಯಿಗಳು ಕೃಷಿ ಕಾರ್ಯವನ್ನು ಮಾಡಲಾಗದೆ ಅವರ ಬಳಿ ಸೇರಿಕೊಂಡಿದ್ದಾರೆ ಮತ್ತು ಅವರಿಗೆ ಅವಶ್ಯವಿಲ್ಲದ ಜಮೀನುಗಳನ್ನು ಉದ್ಯಾನವನಕ್ಕೆ ಬಿಟ್ಟುಕೊಟ್ಟು ತೆರಳಿದ್ದಾರೆ. ಈ ಜಮೀನುಗಳ ಮಾಲಿಕರು ಹೋದ ಮೇಲೆ ನಮಗೇನು ಕೆಲಸ ಅಂತ ಅವರನ್ನು ನಂಬಿದ್ದ ಕೂಲಿಕಾರರೂ ಕೂಡ ಉದ್ಯಾನವನವನ್ನು ಬಿಟ್ಟು ಪುನರ್ವಸತಿ ಹೊಂದಿದ್ದಾರೆ. ಕೃಷಿ ಆಧಾರಿತ ಕುಟುಂಬಗಳಿರುವ ಈ ಪ್ರದೇಶದಲ್ಲಿ ೮೦% ಸಣ್ಣ ರೈತರು ಮತ್ತು ೨೦% ಜಮೀನ್ದಾರರುಗಳಿದ್ದು, ಕೃಷಿ ಚಟುವಟಿಕೆಗೆ ಅಗತ್ಯವಾದ ಜಲ ಮೂಲಗಳು ಸರ್ವಕಾಲಿಕವಾಗಿರುವುದರಿಂದ ಉತ್ಪತ್ತಿ ಚೆನ್ನಾಗಿದ್ದು, ಆರ್ಥಿಕ ಮೂಲಗಳು ಸದೃಡವಾಗಿರುವಾಗ ಯಾವ ಕಾರಣಕ್ಕಾಗಿ ಈ ಪ್ರದೇಶವನ್ನು ಬಿಟ್ಟು ಹೋಗಬೇಕು ಎಂಬುದು ಎಲ್ಲರ ಪ್ರಶ್ನೆಯಾಗಿದೆ. ಆದ್ದರಿಂದ ಯಾವ ಕುಟುಂಬದವರು ಸಹ ಪುನರ್ವಸತೀಕರಣಕ್ಕೆ ಸಮ್ಮತಿಯನ್ನು ಮೂಡಿಗೆರೆ ಭಾಗದಲ್ಲಿ ಸೂಚಿಸಿಲ್ಲ. ಇದರೊಂದಿಗೆ ಬಗರ್ ಹುಕುಂ ಸಾಗುವಳಿದಾರರೇ ಹೆಚ್ಚಿದ್ದು ಕಂದಾಯ ಇಲಾಖೆ ಮುಖಾಂತರ ಪರಿಹಾರವೂ ಕೂಡ ಅವರಿಗೆ ದೊರಕುವುದು ಸಾಧ್ಯವಿಲ್ಲ. ನಮೂನೆ ೫೦ ಮತ್ತು ೫೩ ರ ಅಕ್ರಮ ಸಕ್ರಮ ಅಡಿಯಲಿ

ಹಲವಾರು ಬಾರಿ ಅರ್ಜಿ ಸಲ್ಲಿಸಿದ್ದರು ಅರಣ್ಯ ಭೂಮಿ ಎಂದು ಕಂದಾಯ ಇಲಾಖೆಯವರೇ ಕಡೆಗಣಿಸುತ್ತಿದ್ದಾರೆ. ಆದರೆ, ೨೦೦೬ರ ಅರಣ್ಯ ಹಕ್ಕು ಅಧಿನಿಯಮ ಜಾರಿಯಾದ ಮೇಲೆ ಗಿರಿಜನರಿಗೆ ೨೦೦೫ ರ ಹಿಂದೆ ವಾಸವಿದ್ದ ಎಲ್ಲರಿಗೂ ಅರಣ್ಯ ಹಕ್ಕು ಪತ್ರ ಜಿಲ್ಲಾಡಳಿತದಿಂದ ದೊರಕಿದೆ. ಆದರೆ, ಸರ್ಕಾರ ಮಾಡಿರುವ ಈ ಕಾರ್ಯದಿಂದ ಅವರೊಂದಿಗೆ ಇತರೆ ಅರಣ್ಯವಾಸಿಗಳೂ ಕೂಡ ಬಹು ಹಿಂದಿನಿಂದಲೂ ಅವರೊಟ್ಟಿಗೆ ವಾಸವಿದ್ದು, ಒತ್ತುವರಿ ಸಾಗುವಳಿಯನ್ನು ಮಾಡುತ್ತಾ ಬಂದಿದ್ದಾರೆ. ಅವರನ್ನು ಕೂಡ ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬಹುದಾಗಿತ್ತು. ವಯಸ್ಸಾದ ಪೂರ್ವಜರ ಹೇಳಿಕೆಗಳ ಮೇಲೆ ಇತರೆ ಅರಣ್ಯವಾಸಿಗಳ ಜಮೀನುಗಳನ್ನು ಅರಣ್ಯ ಹಕ್ಕು ಪತ್ರಕ್ಕೆ ಒಳಪಡಿಸಲು ಸಾಧ್ಯವಿದೆ. ಅಧಿಕಾರಿಗಳ ಇಚ್ಛಾಸಕ್ತಿ ಇಲ್ಲದಿರುವುದರಿಂದ ಅದು ಇಂದಿಗೂ ಸಾಧ್ಯವಾಗಿಲ್ಲ. ವಾಸ್ತವದಲ್ಲಿ ಅರಣ್ಯ ಹಕ್ಕು ಪತ್ರದಿಂದ ಗಿರಿಜನರು ಭೂ ಸಾಗುವಳಿಯನ್ನು ಮಾತ್ರ ಮಾಡಬಹುದು ಬಿಟ್ಟರೆ ಅವರು ಯಾವುದೇ ಬ್ಯಾಂಕ್ ಮತ್ತು ಲೇವಾದೇವಿಗಳಲ್ಲಿ ಅಡಮಾನ ಮಾಡಿ ಸಾಲವನ್ನು ಪಡೆಯುವ ಹಾಗಿಲ್ಲ. ಈ ವ್ಯವಸ್ಥೆ ಒಂದು ಕೈಯಿಂದ ಕೊಟ್ಟು ಮತ್ತೊಂದು ಕೈಯಿಂದ ಕಿತ್ತುಕೊಂಡಂತಾಗಿದೆ. ಇವುಗಳನ್ನು ಹೊರತು ಪಡಿಸಿದರೆ, ಅರಣ್ಯ ಇಲಾಖೆಯು ಮೂಲಭೂತ ಸೌಕರ್ಯಗಳಾದ ರಸ್ತೆ ನಿರ್ಮಾಣ ಕಾರ್ಯಕ್ಕೆ ಅಲ್ಲಲ್ಲೇ ಅಂದರೆ, ಕಂದಾಯ ಭೂಮಿ ಜೊತೆಯಲ್ಲಿ ಅರಣ್ಯ ಭೂಮಿ ಇರುವೆಡೆ ಅನುಮತಿಗಾಗಿ ಕಾರ್ಯ ಸ್ಥಗಿತಗೊಳಿಸಿದ್ದಾರೆ ಹೊರತು, ಇತ್ತೀಚಿನ ದಿನಗಳಲ್ಲಿ ಯಾವ ಸಮುದಾಯಗಳ ಮೇಲೂ ಒತ್ತಡವನ್ನು ತರುವ ಯಾವ ಕಾರ್ಯವನ್ನು ಮಾಡಿಲ್ಲ. ಪುನರ್ವಸತೀಕರಣಕ್ಕೆ ಸಂಬಂಧಿಸಿದಂತೆ, ಸರ್ಕಾರ ಪರಿಹಾರವನ್ನು ಹೆಚ್ಚಿಸಿ ನೀಡುವುದು ಸೂಕ್ತ ಎಂಬುದು ನನ್ನ ಅಭಿಪ್ರಾಯವೆಂದು ತಿಳಿಸಿದರು.

ಶ್ರೀಯುತ ಕಲ್ಕುಳಿ ವಿಠಲ ಹೆಗಡೆ ಅವರು, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲೂಕಿನ ನಿವಾಸಿಗಳು. ಕುದುರೆಮುಖ ಗಣಿಗಾರಿಕೆ ವಿರುದ್ಧ ಜನ ಸಹಭಾಗಿತ್ವದ ಸಂಘಟನೆಯೊಂದಿಗೆ ತುಂಗ ಮೂಲದ ಪರಿಸರ ಉಳಿವಿಗಾಗಿ ಹೋರಾಟ ನೆಡೆಸಿದವರು. ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಮತ್ತು ಪುನರ್ವಸತೀಕರಣ ಯೋಜನೆಯಲ್ಲಿ ಗಿರಿಜನ ಮತ್ತು ರೈತರಿಗೆ ಆಗಿರುವ ಸಮಸ್ಯೆಗಳ ಮೂಲಗಳನ್ನು ಕುರಿತು ಸಂದರ್ಶನದಲ್ಲಿ ವಿವರಿಸಿದ್ದಾರೆ.

೧೯೮೭ ರಲ್ಲಿ ಮೂಲ ನಿವಾಸಿಗಳ ಗಮನಕ್ಕೆ ಸೂಚನೆಯನ್ನು ನೀಡದೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಘೋಷಣೆಯಾಯಿತು, ನಂತರದ ಅವಧಿಯಲ್ಲಿ ೨೦೦೧ ರಂದು ಅಂತಿಮ ಘೋಷಣೆಗೆ ಒಳಪಟ್ಟು ಬ್ರಿಟೀಷ್ ಕಾಲದಲ್ಲಿ ಕಾಯ್ದಿರಿಸಿದ ಅರಣ್ಯ ಪ್ರದೇಶಗಳನ್ನೊಳಗೊಂಡಂತೆ ಕಂದಾಯ ಭೂಮಿಯನ್ನು ಸೇರಿಸಿಕೊಂಡು ಗಡಿ ಪ್ರದೇಶವನ್ನಾಗಿಸಿ ಉದ್ಯಾನವನವನ್ನು ರಚನೆ ಮಾಡಿದರು. ಕುದುರೆಮುಖ ಉದ್ಯಾನವನದ ರಚನೆಯ ಮೂಲವನ್ನೇ ಅಸಿಂಧು ಎಂದು ಹೇಳವುದಕ್ಕೆ ಸಾಕಷ್ಟು ಅಂಶಗಳು ಇದರಲ್ಲಿ ದೊರೆಯುತ್ತಿವೆ. ಅಲ್ಲದೆ ವಿದೇಶಿ ಕಂಪನಿಗಳಿಂದ ಹಣ ಪಡೆದು ಅರಣ್ಯ ಪ್ರದೇಶಗಳಲ್ಲಿ ಸಿಂಗಳೀಕ ಮಂಗಗಳ ಪ್ರಭೇದದ ಪ್ರಾಣಿಗಳನ್ನು ಸಮೀಕ್ಷೆ ಮಾಡಿ, ಅಳಿವಿನಂಚಿನಲ್ಲಿವೆ ಅವುಗಳನ್ನು ರಕ್ಷಿಸಬೇಕು ಎಂಬ ವರದಿ

ನೀಡಿದ ಸರ್ಕಾರೇತರ ಸಂಸ್ಥೆಗಳ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸದೆ ಏಕಪಕ್ಷಿಯವಾಗಿ ರಾಷ್ಟ್ರೀಯ ಉದ್ಯಾನವನವೆಂದು ಘೋಷಿಸಿರುವುದು ಈ ಭಾಗದ ಜನರಿಗೆ ಹಗುರವಾಗಿ ಪರಿಗಣಿಸುವ ವಿಷಯವಾಗಿರಲಿಲ್ಲ. ಈ ವಿಷಯ ಕುರಿತಂತೆ ರಾಷ್ಟ್ರೀಯ ಉದ್ಯಾನವನ ವಿರೋಧಿಸಿ ಅನೇಕ ಒಕ್ಕೂಟಗಳು ಒಂದೆಡೆ ಸೇರಿ ಉದ್ಯಾನವನ ರಚನೆ ಮಾಡದ ಹಾಗೆ ಮನವಿಯನ್ನು ಸಲ್ಲಿಸಲಾಯಿತಾದರು, ಅಂತಿಮವಾಗಿ ಘೋಷಣೆಯನ್ನು ಹೊರಡಿಸಲಾಯಿತು. ವಾಸ್ತವದಲ್ಲಿ ರಾಷ್ಟ್ರೀಯ ಉದ್ಯಾನವನದ ಪರಿಕಲ್ಪನೆ ಅಮೆರಿಕಾದಂತಹ ಬಂಡವಾಳ ಶಾಹಿ ರಾಷ್ಟ್ರಗಳದ್ದಾಗಿದ್ದು, ಹಿಂಬದಿಯ ರಾಜಕಾರಣದ ಮುಖಾಂತರ ಇಲ್ಲಿನ ಅರಣ್ಯ ಸಂಪತ್ತಿನ ಮೇಲೆ ನಿಯಂತ್ರಣ ಸಾಧಿಸಿ, ಭೌದ್ಧಿಕ ಸ್ವಾಮ್ಯತೆಯನ್ನು ಹೊಂದುವುದು ಮೂಲ ಉದ್ದೇಶವಾಗಿದೆ. ಈ ವ್ಯವಸ್ಥೆಯಡಿಯಲ್ಲಿ ಅಂತಹ ಬಂಡವಾಳಶಾಹಿ ರಾಷ್ಟ್ರದ ಕಂಪನಿಗಳಿಂದ ನಿಧಿಯನ್ನು ಪಡೆದು, ಸರ್ಕಾರದ ಮುಖಾಂತರ ಜಾರಿಯಾದ ಉದ್ಯಾನವನ ಯೋಜನೆಯಲ್ಲಿ ಹಾಗೂ ಹುಲಿ ಯೋಜನಾ ಅನುಷ್ಠಾನ ಸರ್ಕಾರದಿಂದಲೇ ಚರ್ಚೆಯಲ್ಲಿರುವ ಸಂದರ್ಭದಲ್ಲಿ ಹುಲಿ ಯೋಜನೆ ಅನುಷ್ಠಾನವೆಂದು ಸ್ಥಳೀಯಮೂಲ ನಿವಾಸಿಗಳನ್ನು ಅಲ್ಪ ಮೊತ್ತದ ಮೌಲ್ಯಕ್ಕೆ ಒಕ್ಕಲೆಬ್ಬಿಸುವುದು ಎಂದರೆ ಅದು ಸರ್ಕಾರದ ಮೂಲ ಅಸ್ತಿತ್ವವನ್ನೇ ಪ್ರಶ್ನಿಸಿದಂತಾಗುತ್ತದೆ. ಸರ್ಕಾರದ ಪುನರ್ವಸತಿ ಯೋಜನಾ ಅನುದಾನ ೨೦೦೫ ರಿಂದ ಆರಂಭವಾದರೆ, ಸರ್ಕಾರೇತರ ಸಂಸ್ಥೆಗಳ ಒಕ್ಕಲೆಬ್ಬಿಸುವಿಕೆ ಕಾರ್ಯ ೨೦೦೨ ರಿಂದಲೇ ಆರಂಭವಾಗಿತ್ತು. ಈ ಸರ್ಕಾರೇತರ ಸಂಸ್ಥೆಗಳ ಕಾರ್ಯ ಚಟುವಟಿಕೆಗಳ ಮೂಲದಿಂದಲೇ ರಾಷ್ಟ್ರೀಯ ಉದ್ಯಾನವನದ ಸಮಸ್ಯೆಗಳು ಚಿಗುರೊಡೆದು ನಕ್ಸಲ್ ಚಟುವಟಿಕೆ, ಪೋಲಿಸ್ ಕಾರ್ಯಾಚರಣೆ, ಅರಣ್ಯ ಇಲಾಖೆಯ ಮುಖಾಂತರ ಮೂಲಭೂತ ಸೌಕರ್ಯಕ್ಕೆ ಅಡ್ಡಿಪಡಿಸುವಿಕೆಯ ಕಾರ್ಯಗಳು ಗತಿಸಿ, ಗೌರವಯುತವಾಗಿ ಉದ್ಯಾನವನದಿಂದ ಹೊರ ಹೋಗುವ ಕುಟುಂಬಗಳಿಗೆ ೧:೩ ಪರಿಹಾರವನ್ನು ನೀಡಬೇಕಾದ ಸರ್ಕಾರ, ಸ್ವ ಇಚ್ಛೆಯ ಸಂಕೋಲೆಯಲ್ಲಿ ಒಂದು ರೂಪಾಯಿಯ ನಾಲ್ಕಾಣೆ ಭಾಗವನ್ನು ನೀಡಿ ಹೊರ ಪ್ರಪಂಚಕ್ಕೆ ಕಳುಹಿಸುತ್ತಿದೆ. ಇದು ಅಡ್ಡಕತ್ತರಿಯಲ್ಲಿ ಸಿಲುಕಿರುವ ಅತಂತ್ರದ ಸ್ಥಿತಿಯನ್ನು ಪ್ರತಿಬಿಂಬಿಸುತ್ತಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಇಂದಿಗೂ ಕೂಡ ರೆವಿನ್ಯೂ ಎನ್‌ಕ್ಲೋಷರಸ್‌ಗಳನ್ನು ಪ್ರತ್ಯೇಕವಾಗಿ ಗುರುತಿಸಿಲ್ಲ, ಅದರ ಬದಲಿಗೆ ರಕ್ಷಿತಾರಣ್ಯಗಳನ್ನು ಸೇರಿಸಿಕೊಂಡು ಏಕಾಏಕಿಯಾಗಿ ಗಡಿಗಳನ್ನು ಗುರುತಿಸಿ ಮಾನವ ವಸತಿ ಜಾಗಗಳನ್ನು ಒಳಗೊಂಡಿದೆ ಮತ್ತು ಒಕ್ಕಲೆಬ್ಬಿಸುವ ಪ್ರಕ್ರಿಯೆಗೆ ಚಾಲನೆ ನೀಡಿದೆ. ಇದೇ ಸಂದರ್ಭದಲ್ಲಿ ನಕ್ಸಲರ ಹೋರಾಟವು ಈ ಭಾಗದಲ್ಲಿ ಹೆಚ್ಚಾಗಿ, ಅವರನ್ನು ನಿಯಂತ್ರಿಸಲು ನಕ್ಸಲ್ ನಿಗ್ರಹ ದಳದ ಅನುಷ್ಠಾನವಾಯಿತು, ನಕ್ಸಲರ ಸಶಸ್ತ್ರ ಹೋರಾಟವನ್ನು ಹತ್ತಿಕ್ಕುವ ಸಲುವಾಗಿ ತನಿಖೆಗಳ ಹೆಸರಲ್ಲಿ ಮುಗ್ಧ ಜನರನ್ನು ಕಂಬಿಗಳ ಹಿಂದೆ ತಿಂಗಳುಗಳ ಕಾಲ ಕಳೆಯುವಂತೆ ಕೇಸ್‌ಗಳನ್ನು ಹಾಕತೊಡಗಿದರು. ಈ ಹಿಂಸೆಗಳನ್ನು ತಾಳಲಾರದೆ ಕೆಲವು ಕುಟುಂಬಗಳು ಹಾಗೂ ಹೊರ ವಲಯದಲ್ಲಿ ವಾಸವಿದ್ದು, ಉದ್ಯಾನವನದ ಒಳಭಾಗದಲ್ಲಿ ಜಮೀನು ಹೊಂದಿದವರು ಸ್ವ ಇಚ್ಛೆಯ ಒಪ್ಪಿಗೆ ಮೇರೆಗೆ ಅರಣ್ಯ ಇಲಾಖೆಗೆ ಜಮೀನು ಬಿಟ್ಟುಕೊಟ್ಟು ಪುನರ್ವಸತಿ ಪರಿಹಾರವನ್ನು ಪಡೆದು ಸ್ಥಳವನ್ನು ತ್ಯಜಿಸಿದರು. ಅಂದು ಗಿರಿಜನ ಮತ್ತು ಸ್ಥಳೀಯರೈತರನ್ನು ಎದುರು ಕುಳ್ಳಿರಿಸಿ ಸರ್ಕಾರ ಸಭೆ ನಡೆಸಿ ಅವರ ಬೇಡಿಕೆಗಳನ್ನು ಪೂರೈಸಿದ್ದರೆ ಈ ಸಮಸ್ಯೆ ಎದುರಾಗುತ್ತಿರಲಿಲ್ಲ. ಆದರೆ, ಸಶಸ್ತ್ರಗಳನ್ನು ಹಿಡಿದು ಹೋರಾಡಿದವರ

ಬೇಡಿಕೆಗಳನ್ನು ಒಪ್ಪಿ ಅವರನ್ನು ನಕ್ಸಲ್ ಪ್ಯಾಕೇಜ್ ಅಡಿಯಲ್ಲಿ ಬೆಂಬಲಿಸಿತೇ ಹೊರತು. ಮತ್ತೊಂದೆಡೆ ಹೆಚ್ಚು ಅಧಿಕಾರಿಗಳ ಸಂಪರ್ಕದಲ್ಲಿದ್ದು, ಸರ್ಕಾರದೊಂದಿಗೆ ಹಲವು ಬೇಡಿಕೆಗಳನ್ನು ಇಟ್ಟು ಚರ್ಚಿಸಿದ ಮುಗ್ಧ ಜನರನ್ನು ಮತ್ತು ಪ್ರಜಾಸತ್ತಾತ್ಮಕ ಹೋರಾಟದವರನ್ನಲ್ಲ ಎಂಬುದೇ ವಿಪರ್ಯಾಸ. ಒಂದು ಕುಟುಂಬ ಮತ್ತು ಸಮುದಾಯವನ್ನು ಪೂರ್ವಜರು ಬೆಳೆಸಿದ ನಾಡಿನೊಂದಿಗೆ ಬದುಕು ಕಟ್ಟಿಕೊಳ್ಳಲು ಬಿಡದೆ ಅವರನ್ನು ಸ್ಥಳಾಂತರ ಮಾಡಿದರೆ, ಅವರ ಸಂಸ್ಕೃತಿ, ಭಾಷೆ, ಸಾಮಾಜಿಕತೆ ಹಾಗೂ ಆರ್ಥಿಕತೆ ನಾಶವಾಗುವುದಲ್ಲದೆ, ಆ ಕುಟುಂಬವು ಗಟ್ಟಿಯಾಗಿ ನೆಲೆ ಕಾಣಲು ಸುಮಾರು ಎರಡು ಪೀಳಿಗೆಗಳ ಅಂತರವಾದರೂ ಬೇಕು. ಅನ್ಯ ಸ್ಥಳಗಳಲ್ಲಿ ಇವರು ನೆಲೆಸಿದರು, ಅಲ್ಲಿನ ಸ್ಥಳಿಯರು ಇವರನ್ನು ಒಪ್ಪಿಕೊಳ್ಳುವುದು ಅಂದುಕೊಂಡಷ್ಟು ಸುಲಭವಿಲ್ಲ. ಇಂದು ಕುದುರೆಮುಖ ರಾಷ್ಟ್ರೀಯ ಉದ್ಯಾನವನದಿಂದ ಒಕ್ಕಲೇಳುವವರಿಗೆ ಸರ್ಕಾರ ನೀಡುತ್ತಿರುವ ಪರಿಹಾರದ ಹಣವನ್ನು ೧:೩ ಕ್ಕೆ ಏರಿಸುವ ಮೂಲಕ ಅವರಿಗೆ ನ್ಯಾಯವನ್ನು ಒದಗಿಸುವುದು ಸೂಕ್ತವೆಂದು ಅಭಿಪ್ರಾಯಿಸಿದರು. (ಹೆಗ್ಡೆ, ೨೦೧೭)

ಸಮುದಾಯಗಳ ಹೋರಾಟಗಾರರು

ಶ್ರೀ ದೇವೇಂದ್ರ, ಮೆಣಸಿನಹಾಡ್ಯ, ಗೌಡಲು ಸಮುದಾಯದವರು ಮತ್ತು ಕರ್ನಾಟಕ ರಾಜ್ಯ ಮಲೆಕುಡಿಯರ ಸಂಘ. ಬೆಳ್ತಂಗಡಿ. ಅಧ್ಯಕ್ಷರಾದ ಶ್ರೀ ಅಣ್ಣಪ್ಪ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಜಯರಾಂ ಅವರುಗಳನ್ನು ಸಂದರ್ಶಿಸಲಾಗಿತ್ತು. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಗೌಡಲು ಮತ್ತು ಮಲೆಕುಡಿಯ ಸಮುದಾಯದವರು ಎದುರುಗೊಳ್ಳುತ್ತಿರುವ ಹಲವು ಸವಾಲುಗಳನ್ನು ಕುರಿತು ಸವಿವರವಾಗಿ ಉತ್ತರಿಸಿದರು. (ಬಬೆಳ್ತಂಗಡಿ, ೨೦೧೭) ಅದರಂತೆ,

ರಾಜ್ಯದ ಬುಡಕಟ್ಟು ಸಮುದಾಯದಲ್ಲಿ ವಿರಳವಾದ ಜನಸಂಖ್ಯೆಯನ್ನು ಹೊಂದಿರುವ ಗೌಡಲು ಮತ್ತು ಮಲೆಕುಡಿಯ ಸಮುದಾಯವು ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ತಮ್ಮ ನೆಲೆಗಳನ್ನು ಕಂಡುಕೊಂಡಿದ್ದಾರೆ. ಕೃಷಿಯ ಕಸುಬನ್ನು ಮೂಲ ವೃತ್ತಿಯಾಗಿ ಪರಿಗಣಿಸಿರುವ ಸಮುದಾಯವು ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಒಳಭಾಗದಲ್ಲಿ ಮೂಡಿಗೆರೆ- ಸಂಸೆ, ಬಿಳಿಗಲ್,ಕಳಸ, ಕಾರ್ಲೆ, ಕೊಪ್ಪ ಭಾಗದಲ್ಲಿ ಮೆಣಸಿನಹಾಡ್ಯ, ಮೇಗೂರು, ಕಲ್ಗುಡ್ಡೆ , ಶೃಂಗೇರಿ ಭಾಗದಲ್ಲಿ ಕೆರೆಕಟ್ಟೆ, ಗುಲಗಂಜಿಮನೆ, ಎಡಗಾರು, ಸುಂಕದಮಕ್ಕಿ, ಹಾದಿಕಿರೂರು, ಮೆರ್ಕಲ್, ಬೆಳ್ತಂಗಡಿಯ ಮುತ್ತಾಜೆ, ಬೆಲ್ಲ, ಕುತ್ಲೂರು, ಆಳಂಬ, ಕಾರ್ಕಳದ ಕೆರ್ವಾಶೆ, ಅಂಡಾರು ಪ್ರದೇಶಗಳಲ್ಲಿ ಜನವಸತಿಗಳನ್ನು ಹೊಂದಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಘೋಷಣೆಗೂ ಮುನ್ನ ಅಂದರೆ, ಬ್ರಿಟೀಷ್ ಕಾಲದಿಂದಲೂ ನಮ್ಮ ಸಮುದಾಯವು ಈ ವ್ಯಾಪ್ತಿಯಲ್ಲಿ ನೆಲೆಸಿ ಧರ್ಮಸ್ಥಳ ಮತ್ತು ಕುಕ್ಕೆ ಸುಬ್ರಮಣ್ಯ ಸ್ವಾಮಿಗಳ ಸೇವೆ ನಿಷ್ಠೆಯಲ್ಲಿ ನಿರಂತರತೆಯನ್ನು ಕಾಯ್ದುಕೊಂಡು ಬಂಧಿದ್ದೇವೆ. ಗೌಡಲು ಮತ್ತು ಮಲೆಕುಡಿಯ ಸಮುದಾಯವು ಪ್ರಸ್ತುತವಾಗಿ ಕುದುರೆಮುಖ ಉದ್ಯಾನವನ ವ್ಯಾಪ್ತಿಯಲ್ಲಿ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿ ಅಂಚಿಗೆ ತಲುಪಿದೆ. ಅರಣ್ಯ ಇಲಾಖೆಯವರ ಉದಾಸೀನ ಮನೋಭಾವನೆಯು

ಮೂಲಭೂತ ಸೌಕರ್ಯಗಳಾದ ರಸ್ತೆ, ವಿದ್ಯುತ್, ಶಾಲೆ ಮತ್ತಿತರ ಸೌಲಭ್ಯಗಳು ದೊರಕಿದರೆ, ಇಲ್ಲಿಂದ ಹೊರ ಹೋಗುವುದಿಲ್ಲ ಎಂಬ ಕಾರಣಗಳನ್ನಿಟ್ಟುಕೊಂಡು ಎರಡು ಸಮುದಾಯದವರನ್ನು ಮೂಲಭೂತ ಸೌಕರ್ಯಗಳಿಂದ ವಂಚಿಸುತ್ತಿದ್ದಾರೆ. ಸ್ಥಳಾಂತರ ಮತ್ತು ಪುನರ್ವಸತೀಕರಣಯೋಜನೆ ಅನುಷ್ಠಾನವಾದಾಗ ನಕ್ಸಲ್ ಚಳುವಳಿ ಆರಂಭವಾಯಿತು. ನಕ್ಸಲರ ಗೋಜಿಗೆ ಹೋಗದ ಎರಡು ಸಮುದಾಯದವರನ್ನು ನಕ್ಸಲ್ ನಿಗ್ರಹದಳದವರು ತನಿಖೆ ಮಾಡುವ ನಿಟ್ಟಿನಲ್ಲಿ ನಕ್ಸಲರೊಂದಿಗೆ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಮತ್ತು ತಿಂಗಳಾಂತ್ಯಕ್ಕಿಂತ ಹೆಚ್ಚಿನ ಸರಕುಗಳನ್ನು ತಂದು ಮನೆಯಲ್ಲಿರಿಸಿಕೊಂಡು ನಕ್ಸಲರಿಗೆ ನೀಡುತ್ತಿದ್ದಾರೆ ಎಂಬ ಗುಮಾನಿಯಲ್ಲಿ ಎಲ್ಲರಿಗೂ ತೊಂದರೆ ನೀಡಿದ್ದಾರೆ. ಇಷ್ಟೇ ಅಲ್ಲದೆ ಸಮುದಾಯದವರ ನೆಂಟರು ಯಾರೇ ಬಂದರು ಅನುಮಾನದಿಂದ ಅವರನ್ನು ನೋಡುವುದು ಮತ್ತು ಗೊತ್ತಿಲ್ಲದ ರೀತಿಯಲ್ಲಿ ಅವರ ದೂರವಾಣಿ ಕರೆಗಳನ್ನು ಕದ್ದಾಲಿಸುವ ಕ್ರಿಯೆಗಳು ಇಂದಿಗೂ ಕೆಲವರ ಮೇಲೆ ನಡೆಯುತ್ತಿದ್ದೆ. ಈ ಪ್ರಕ್ರಿಯೆಗೆ ಹಲವಾರು ಕುಟುಂಬಗಳು ಆತಂಕಕ್ಕೆ ಒಳಗಾಗಿ ಉದ್ಯಾನವನದಿಂದ ಒಕ್ಕಲೆದ್ದಿದ್ದಾರೆ. ಒಂದೆಡೆ ಅರಣ್ಯ ಇಲಾಖೆಯ ಉದಾಸೀನ ಮನೋಭಾವ, ಇನ್ನೊಂದೆಡೆ ನಕ್ಸಲರು, ಮತ್ತೊಂದೆಡೆ ನಕ್ಸಲ್ ನಿಗ್ರಹ ಧಳದವರು, ಈ ಸ್ಥಿತಿ ಇಲ್ಲಿ ವಾಸಿಸುವ ಗಿರಿಜನ ಸಮುದಾಯದವರನ್ನು ತ್ರಿಶಂಕು ಸ್ಥಿತಿಗೆ ತಂದು ನಿಲ್ಲಿಸಿದೆ. ಬಗರ್ ಹುಕುಂ ಸಾಗುವಳಿದಾರರು ಈ ವ್ಯಾಪ್ತಿಯಲ್ಲಿದ್ದು, ಅರಣ್ಯ ಹಕ್ಕು ಪತ್ರಕ್ಕೆ ಅರ್ಜಿಯನ್ನು ಸಲ್ಲಿಸಿದ್ದರು ದಕ್ಷಿಣ ಕನ್ನಡ ಜಿಲ್ಲಾ ವಿಭಾಗದಲ್ಲಿ ಜಿಲ್ಲಾಡಳಿತದಿಂದ ಅನುಮೋದನೆ ದೊರೆತಿಲ್ಲ. ಅಲ್ಲದೆ ಅರಣ್ಯ ಹಕ್ಕು ಪತ್ರವನ್ನು ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ ನೀಡುತ್ತಿದ್ದು, ದಕ್ಷಿಣ ಕನ್ನಡ ಜಿಲ್ಲೆಯವರು ಮಾತ್ರ ನೀಡದಿರುವುದು ಸೋಜಿಗದ ಸ್ಥಿತಿಯನ್ನು ಸೃಷ್ಟಿಸಿದೆ. ೨೦೦೬ ರ ಅರಣ್ಯ ಹಕ್ಕು ಅಧಿನಿಯಮವು ಈ ವ್ಯಾಪ್ತಿಯಲ್ಲಿ ಸರಿಯಾದ ಕ್ರಮದಲ್ಲಿ ಅನುಷ್ಠಾನಗೊಂಡಿರುವುದಿಲ್ಲ, ಕಾರಣ ರಸ್ತೆ ನಿರ್ಮಾಣಕ್ಕೆ ಮತ್ತು ಕಾಡು ಉತ್ಪತ್ತಿ ಪಡೆಯುವುದಕ್ಕೆ ವಿಧಿಗಳಲ್ಲಿ ಲಿಖಿತಗೊಳಿಸಲಾಗಿದೆ. ಆದರೆ, ಅವು ಯಾವುವು ಸಮುದಾಯಗಳಿಗೆ ದಕ್ಕದೇ ಇರುವುದು ಅಧಿಕಾರಿಗಳ ನಿರ್ಲಕ್ಷ್ಯವನ್ನು ಸೂಚಿಸುತ್ತದೆ. ನಕ್ಸಲ್ ಪ್ಯಾಕೇಜ್ ಹೆಸರಲ್ಲಿ ಹಣ ಪೋಲಾಗಿದೆ ಹೊರೆತು ಸಂಪೂರ್ಣ ಫಲ ನೀಡಿಲ್ಲ. ಸುಲ್ಕೇರಿಮೊಗ್ರು ಪ್ರದೇಶದಲ್ಲಿ ೧೯೦ ಎಕರೆ ಜಮೀನು ಪ್ರದೇಶವನ್ನು ಗಿರಜನ ಪುನರ್ವಸತಿಗೆ ಕಾಯ್ದಿರಿಸುವ ಕುರಿತು ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ಅವರಿಂದ ಆದೇಶವಾಗಿದೆ. ಆದರೆ, ಇಂದಿಗೆ ಆ ಪ್ರದೇಶ ರಬ್ಬರ್ ಪ್ಲಾಂಟೇಷನ್ ಗಳಾಗಿ ಬದಲಾಗಿದೆ. ಒಕ್ಕಲೆದ್ದು ಪುನರ್ವಸತಿ ಪಡೆದಿರುವ ಸಮುದಾಯದವರು ಇಂದಿಗೂ ಸರಿಯಾದ ನೆಲೆ ಕಾಣಲು ಪಡೆದಿರುವ ಪರಿಹಾರದ ನಿಧಿಯು ಸಾಕಷ್ಟಿಲ್ಲ. ಹೊರ ಪ್ರದೇಶದಲ್ಲಿ ಅವರು ಪರಿಹಾರ ಪಡೆದ ನಿಧಿಗಿಂತ ಮೂರು ಪಟ್ಟು ಮೌಲ್ಯಗಳು ಹೆಚ್ಚಾಗಿದ್ದು, ನೆಲೆ ಕಾಣುವುದು ಕಷ್ಟವಾಗಿದೆ. ಈ ದಿಶೆಯಲ್ಲಿ ಸರ್ಕಾರವು ಪರಿಹಾರ ನಿಧಿಯನ್ನು ಹೆಚ್ಚುಗೊಳಿಸಿ ಪುನರ್ವಸತಿ ಕಲ್ಪಿಸುವಾಗ ಭೂಮಿಯನ್ನು ನೀಡಿದರೆ, ಭೂಮಿ ಪಡೆಯುವ ಸಂಕಷ್ಟ ತಪ್ಪುವುದು, ಜೊತೆಯಲ್ಲಿ ಸರ್ಕಾರದ ವತಿಯಿಂದ ಇಲಾಖೆಗಳಲ್ಲಿ ಸಣ್ಣ ವೃತ್ತಿಯನ್ನು ನೀಡಿದರು ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುವುದು ಖಂಡಿತ ಎಂದು ತಿಳಿಸಿದರು.

ಪತ್ರಕರ್ತರ ನಿಲುವುಗಳು

ಶ್ರೀ ದಿನೇಶ್ ಪಟವರ್ದನ್, ಪತ್ರಕರ್ತರು. ಉದಯ ಬುಲೆಟಿನ್ ಅಂತರ್ಜಾಲ ತಾಣದ ಪತ್ರಿಕೆಯ ಮೂಲಕ ಸುದ್ದಿ ಪ್ರಕಟಣೆ ಕಾರ್ಯವನ್ನು ಮಾಡುತ್ತಾಬಂಧಿದ್ದಾರೆ. ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರಾದ ಇವರು ಚಿಕ್ಕಮಗಳೂರಿನಲ್ಲಿ ನೆಲೆಸಿದ್ದಾರೆ. ಕುದುರೆಮುಖ ಗಣಿಗಾರಿಕೆ, ಹೋರಾಟಗಳು, ಜನರ ಪುನರ್ವಸತಿ, ನಕ್ಸಲ್ ಹೋರಾಟಗಳ ಕುರಿತಾಗಿ ಸೂಕ್ಷ್ಮಾವಲೋಕನವನ್ನು ಮಾಡಿ ಸುದ್ದಿಯನ್ನು ಪ್ರಕಟಗೊಳಿಸುತ್ತಿದ್ದರು. ಈ ಮೇಲಿನ ಅಂಶಗಳನ್ನು ಒಳಗೊಂಡಂತೆ ಕುದುರೆಮುಖದ ಒಟ್ಟಾರೆಯ ಚಿತ್ರಣವನ್ನು ಸಂದರ್ಶನದಲ್ಲಿ ಎಳೆ ಎಳೆಯಾಗಿ ವಿವರಿಸಿದ್ದಾರೆ. (ಪಟವರ್ಧನ, ೨೦೧೮)

ಭಾರತೀಯ ಸಂದರ್ಭವನ್ನು ಅವಲೋಕಿಸುವುದಾದರೆ, ದೇಶದಲ್ಲಿ ಇದುವರೆಗೂ ಅಭಿವೃದ್ಧಿಗೋಸ್ಕರ, ಸಂರಕ್ಷಣೆಗಾಗಿ ನಡೆದಿರುವ ಯಾವ ಪುನರ್ವಸತಿಯೂ ಸಫಲತೆಯನ್ನು ಕಂಡಿಲ್ಲ. ಕಾರಣ ಸ್ಥಳಾಂತರವೇ ಅವೈಜ್ಞಾನಿಕವಾಗಿರುವ ಪರಿಕಲ್ಪನೆ. ದೇಶದಲ್ಲಿಯೇ ಅತ್ಯುತ್ತಮ ಪುನರ್ವಸತಿ ಎಂದು ಹೆಸರಾಗಿರುವ 'ಭದ್ರಾ ಹುಲಿ ಪುನರ್ವಸತಿ ಯೋಜನೆ' ಯಲ್ಲಿ ಕೂಡ ಇಂದಿಗೂ ಹಲವಾರು ಬೇಡಿಕೆಗಳನ್ನು ಪೂರೈಸದಿರುವುದು ಮತ್ತು ಅವುಗಳನ್ನು ಪೂರೈಸಿಕೊಡಿ ಎಂದು ಕೋರ್ಟನಲ್ಲಿ ದಾವೆಗಳಿರುವುದು ಪುನರ್ವಸತಿ ಯೋಜನೆಯ ವಿಫಲತೆಗೆ ಕನ್ನಡಿ ಹಿಡಿದಂತಿದೆ. ಕುದುರೆಮುಖ ಸಂದರ್ಭದಲ್ಲಿ ಮೊದಲಿನಿಂದಲೂ ಸ್ಥಳಾಂತರ ಮತ್ತು ಪುನರ್ವಸತೀಕರಣಕುರಿತಂತೆ ನಮಗೆ ಒಲವಿಲ್ಲದೆ, ಅದನ್ನು ತೀವ್ರವಾಗಿ ವಿರೋಧಿಸುತ್ತಲೇ ಬಂದಿದ್ದೇವೆ ಮತ್ತು ಇಂದಿಗೂ ಅದು ಅವೈಜ್ಞಾನಿಕ ಪ್ರಕ್ರಿಯೆ ಎಂದೇ ಹೇಳುತ್ತಿದ್ದೇವೆ. ಕುದುರೆಮುಖ ಗಣಿಗಾರಿಕೆ ಆರಂಭವಾದಗಲೇ ಮಲ್ಲೇಶ್ವರದಲ್ಲಿದ್ದ ೬೯ ಕುಟುಂಬಗಳ ಸ್ಥಳಾಂತರವಾಯಿತು ಮತ್ತು ಅವರಿಗೆ ಕಲ್ಪಿಸಿರುವ ವಾಸಿತ ಕಟ್ಟಡಗಳು ಕೂಡ ಬಹಳ ಚಿಕ್ಕದ್ದಾಗಿದು, ಸರಿಯಾದ ಪುನರ್ವಸತಿ ಪ್ಯಾಕೇಜ್‌ನ್ನು ನೀಡಲಿಲ್ಲ. ಅಂದು ದಿನಗೂಲಿ ನೌಕರರಿಗೆ ಉತ್ತಮವಾದ ಸೌಲಭ್ಯಗಳನ್ನು ನೀಡುವಲ್ಲಿ ಕಂಪನಿ ವಿಫಲವಾಯಿತು. ಆದರೆ, ಲಾಭವನ್ನು ಮಾತ್ರಗಳಿಸಿತು. ಅದೇ ಸಂದರ್ಭದಲ್ಲಿ ಈ ಪರಿಸರ ವಿರೋದಿ ಯೋಜನೆ ವಿರುದ್ಧ ಸಾಕಷ್ಟು ಹೋರಾಟಗಳನ್ನು ಕುರಿತು ವರದಿಯನ್ನು ಮಾಡಲಾಗಿತ್ತು ಮತ್ತು ಇದಕ್ಕೆ ಇಡಿ ಪತ್ರಿಕೋಧ್ಯಮವೇ ಬೆಂಬಲವಾಗಿತ್ತು. ಇದಕ್ಕೆ ಕಾರಣ ನದಿ ಮೂಲಗಳನ್ನು ಉಳಿಸಿಕೊಳ್ಳುವುದು ಮತ್ತು ನಾಶವಾಗುತ್ತಿರುವ ಪರಿಸರವನ್ನು ತಡೆಯುವುದಾಗಿತ್ತು. ಕುದರೆಮುಖ ರಾಷ್ಟ್ರೀಯ ಉದ್ಯಾನವನ ೧೯೮೭ ರಲ್ಲಿ ಘೋಷಣೆಯಾಗಿತ್ತು, ಮತ್ತು ಅಂತಿಮ ಘೋಷಣೆ ನಡುವೆ ಇದ್ದ ಕಾಲದಲ್ಲಿ ಉದ್ಯಾನವನ ರಚನೆ ಆಗಬಾರದು ಎಂದು ಮನವಿ ಮತ್ತು ಹೋರಾಟಗಳನ್ನು ಮಾಡಲಾಯಿತು. ಆದರೂ ಸರ್ಕಾರ ೨೦೦೧ ರಲ್ಲಿ ಅಂತಿಮ ಘೋಷಣೆಯನ್ನು ಹೊರಡಿಸಿಯೇ ತೀರಿತು. ಮೂಲ ಹೋರಾಟದಲ್ಲಿ ಸ್ಥಳಿಯರನ್ನು ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸಬಾರದು ಎಂಬ ಮನವಿ ಇದ್ದರೂ ಕೂಡ, ಸರ್ಕಾರೇತರ ಸಂಸ್ಥೆಗಳವರು ಕಾಣದ ಹಾಗೆ ಕೆಲವು ಪ್ರದೇಶಗಳಲ್ಲಿ ಹುಲಿ ಯೋಜನೆ ಹೆಸರಲ್ಲಿ ಸ್ಥಳಿಯರನ್ನು ಆತಂಕಕ್ಕೆ ಒಳಪಡಿಸಿ ಒಕ್ಕಲೇಳುವಂತೆ ಮಾಡಿದರು. ಒಕ್ಕಲೆಬ್ಬಿಸುವಿಕೆಯ ವಿರುದ್ಧ ಹೋರಾಟಗಳು ನಡೆಯುತ್ತಿದ್ದ ಸಂದರ್ಭದಲ್ಲಿ ನಕ್ಸಲ್ ಮೂಮೆಂಟ್ ಆರಂಭವಾಯಿತು. ನಕ್ಸಲ್ ಮೂಮೆಂಟ್

ನಿಂದ ಯಾರಿಗೂ ಅನ್ಯಾಯವಾಗಲಿಲ್ಲ, ಬದಲಿಗೆ ಜನರನ್ನು ಒಕ್ಕಲೆಬ್ಬಿಸುವ ಪ್ರಕ್ರಿಯೆಯನ್ನು ತಡೆದರು. ಜನರು ಸ್ವಲ್ಪ ನಿರಾಳವಾಗಿ ಉಸಿರಾಡಲು ಆರಂಭಿಸಿದರು. ಮೆಣಸಿನಹಾಡ್ಯದಂತಹ ದೂರ ಪ್ರದೇಶಗಳಲ್ಲಿ ಇಂದಿಗೆ ರಸ್ತೆ ಸಂಪರ್ಕಗಳು ಇದೆ ಎಂದರೆ, ಅದಕ್ಕೆ ಕಾರಣ ನಕ್ಸಲ್ ಮೂಮೆಂಟ್. ರಾಷ್ಟ್ರೀಯ ಉದ್ಯಾನವನದ ಬಹು ಭಾಗದಲ್ಲಿ ಅಲ್ಲಲ್ಲೇ ಸೇತುವೆ ಮತ್ತು ಕಾಂಕ್ರೀಟ್ ರಸ್ತೆಗಳಾಗಿವೆ ಎಂದರೆ, ಅದಕ್ಕೆ ಕಾರಣ ನಕ್ಸಲ್ ಅನುದಾನದ ಬಳಕೆಯಿಂದಲೇ ಎಂಬುದುರಲ್ಲಿ ಎರಡು ಮಾತಿಲ್ಲ. ಈ ಪ್ರಾಂತ್ಯದಲ್ಲಿ ನಕ್ಸಲ್ ಮೂಮೆಂಟ್ ನಿಂದ ಯಾವ ಪ್ರಜೆಗೂ ಎಂದಿಗೂ ಹಾನಿ ಸಂಭವಿಸಲಿಲ್ಲ. ಬದಲಿಗೆ ನಕ್ಸಲ್ ನಿಗ್ರಹ ದಳದವರು ಕೂಂಬಿಂಗ್ ಮಾಡುವ ಕಾರ್ಯಚರಣೆಯಲ್ಲಿ ಸ್ಥಳೀಯಜನರಿಗೆ ಸಾಕಷ್ಟು ಹಿಂಸೆಗಳಾಗಿವೆ ಮತ್ತು ಅದರಿಂದ ಭಯಭೀತರಾದ ಕೆಲವು ಕುಟುಂಬಗಳು ಎಲ್ಲಿ ಕೇಸ್ ಹಾಕುತ್ತಾರೋ ಎಂಬ ಆತಂಕದಿಂದ ಸ್ಥಳಗಳನ್ನು ತ್ಯಜಿಸಲು ಆರಂಭಿಸಿದರು. ಶಾಂತಿಯುತವಾದ ಇಂತಹ ಪ್ರದೇಶದಲ್ಲಿ ನಕ್ಸಲ್ ಚಟುವಟಿಕೆಗಳು ಬಹಳಷ್ಟು ಕಾಲ ನೆಲೆನಿಲ್ಲಲಿಲ್ಲ, ಅವರೊಳಗಿದ್ದ ಹೊಂದಾಣಿಕೆಯ ಕೊರತೆ ಮತ್ತು ಕಾರ್ಯತಂತ್ರಗಳನ್ನು ರೂಪಿಸುವುದರಲ್ಲಿ ಮುಂದಿಡುತ್ತಿದ್ದ ಹೆಜ್ಜೆಗಳು ಗೊಂದಲಮಯವಾಗಿ ಪರಿಣಮಿಸಿದ ಕಾರಣ ನೆಲೆನಿಲ್ಲಲು ಸಾಧ್ಯವಾಗಲಿಲ್ಲ ಮತ್ತು ಪೋಲಿಸ್ ಎನ್‌ಕೌಂಟರ್‌ಗಳಲ್ಲಿ ನಾಲ್ಕುಜನ ಮರಣ ಹೊಂದಿದ ನಂತರ ನಕ್ಸಲ್ ಚಟುವಟಿಕೆ ಸಂಪೂರ್ಣ ನಿಯಂತ್ರಣಕ್ಕೆ ಒಳಪಟ್ಟಿತು. ಇದುವರೆಗೂ ನಡೆದ ಎನ್‌ಕೌಂಟರ್‌ಗಳು ಸಾಕಷ್ಟು ಹತ್ತಿರದಿಂದಲೇ ನಡೆದಿದ್ದಾವೆ ಮತ್ತು ಕೆಲ ಎನ್‌ಕೌಂಟರ್‌ಗಳು ಫೇಕ್ ಆಗಿ ಕೂಡ ತನಿಖೆಯಲ್ಲಿ ಗೊತ್ತಾಗಿವೆ. ಎನ್‌ಕೌಂಟರ್ ಕಾರ್ಯಚರಣೆಯ ಕೆಲ ಅಧಿಕಾರಿಗಳಿಗೂ ಕೂಡ ಶಿಕ್ಷೆಯಾಗಿದ್ದು ಇದೆ. ಆದರೆ, ನಕ್ಸಲ್ ಹೆಸರಲ್ಲಿ ಹಲವರು ವಿವಿಧ ಆಯಾಮಗಳಿಂದ ಲಕ್ಷ್ಮೀ ಕೃಪೆಗೆ ಒಳಗಾಗಿರುವುದಂತು ಸತ್ಯ. ಮಾಜಿ ಸಂಸದರಾದ ಶ್ರೀಕಂಠಪ್ಪ ಅವರ ಕಾಲದಲ್ಲಿ ಒಂದು ಸಾವಿರಕ್ಕು ಮಿಗಿಲಾದ ಜನ ಪೋಲಿಸ್ ಕಾರ್ಯಾಚಾರಣೆ ವಿರುದ್ಧ ಧ್ವನಿ ಎತ್ತಿದ ಮೇಲೆ ಪತ್ರಿಕೋಧ್ಯಮವೂ ಕೂಡ ಪ್ರಜೆಗಳ ಪರವಾಗಿ ನಿಂತ ಮೇಲೆ ಪೋಲಿಸ್ ಹಿಂಸೆಗಳು ಕ್ರಮೇಣ ಕಡಿಮೆಯಾಗುತ್ತಾ ಬಂತು. ನಗರಿ ಬಾಬಯ್ಯ, ಶಿವಸುಂದರ್ ಮತ್ತು ಗಿರಿಜಾಶಂಕರ ನೇತೃತ್ವದ 'ಶಾಂತಿಗಾಗಿ ನಾಗರಿಕ ವೇದಿಕೆ' ತಂಡ ಈ ಪ್ರಾಂತ್ಯದಲ್ಲಿ ಅಧ್ಯಯನ ನಡೆಸಿದರು. ಮುಖ್ಯವಾಗಿ ನಕ್ಸಲ್ ರ ಬೇಡಿಕೆ ಮತ್ತು ಸ್ಥಳೀಯಜನರ ಬೇಡಿಕೆಗಳೇನು ಎಂಬುದನ್ನು ತಿಳಿದು ಸರ್ಕಾರದ ಮುಂದೆ ಸಭೆ ಮಾಡಬೇಕು, ಹಾಗೂ ಶಸ್ತ್ರ ಸಜ್ಜಿತ ಹೋರಾಟಗಳು ಈ ಪ್ರಾಂತ್ಯಕ್ಕೆ ಅಗತ್ಯವಿಲ್ಲ ಎಂಬ ಮನವೊಲಿಸುವಿಕೆ ಕಾರ್ಯಗಳು ನಡೆದವು. ಅಷ್ಟು ವೇಳೆಗೆ ನಕ್ಸಲ್ ಚಳುವಳಿಯಲ್ಲಿದ್ದವರಲ್ಲಿಯೇ ಎರಡು ಬಣಗಳಾಗಿ ಹೋದ ಮೇಲೆ ಕೆಲವರು ಹೊರಬಂದು ನಗರಗಳಲ್ಲಿ ಬದುಕು ಕಟ್ಟಿಕೊಳ್ಳತ್ತಿದ್ದಾರೆ. ಕುದುರೆಮುಖದ ಪ್ರಮುಖ ಚರ್ಚಿತ ವಿಷಯವೆಂದರೆ, ಅದು ಮೂಲಭೂತ ಸೌಕರ್ಯಗಳನ್ನು ಜನರ ಹತ್ತಿರ ಕೊಡುವುದಕ್ಕೆ ಅರಣ್ಯ ಇಲಾಖೆ ಅವರು ತಡೆ ಮಾಡುತ್ತಿದ್ದಾರೆ ಎಂಬುದು. ಅರಣ್ಯ ಇಲಾಖೆಯಿಂದ ಸೋಲಾರ್ ದೀಪಗಳನ್ನು ಕೊಟ್ಟಿದ್ದಾರೆ, ಅವುಗಳು ಬೇಸಿಗೆ ಅಂತಹ ಕಾಲದಲ್ಲಿ ಚಾರ್ಜ ಆಗಿ ಬೆಳಕನ್ನು ನೀಡುತ್ತವೆ. ಆದರೆ, ಮಳೆಗಾಲ ಮತ್ತು ಚಳಿಗಾಲದಲ್ಲಿ ಸೂರ್ಯನ ಬೆಳಕು ಬೀಳದೇ ಇರುವಂತಹ ಸಂದರ್ಭದಲ್ಲಿ ಅದರ ಕಾರ್ಯ ಸ್ಥಗಿತವಾಗುತ್ತದೆ ಅಂತಹ ಕಾಲಕ್ಕೆ ಮತ್ತೆ ಸೀಮೆ ಎಣ್ಣೆ ದೀಪಗಳನ್ನು ಮನೆಯಲ್ಲಿ ಉರಿಸಬೇಕಾದ ಸಂದರ್ಭಗಳು ಮರುಕಳಿಸುತ್ತಿವೆ. ಸೌದೆ ಬಳಕೆ

ನಿಷೇದಕ್ಕಾಗಿ ಗ್ಯಾಸ್ ಸೌಲಭ್ಯ ಕೊಟ್ಟರು, ಕೊಡುವ ಒಂದು ಗ್ಯಾಸ್ ಸಿಲೆಂಡರ್ ನಿಂದ ಅಡುಗೆ ಮಾಡಬಹುದು ಬಿಟ್ಟರೆ ರಾತ್ರಿ ಮನೆಯಲ್ಲಿ ಬೆಳಕು ಕಾಣಬೇಕು ಎಂದರೆ, ಮತ್ತೆ ಸೀಮೆ ಎಣ್ಣೆ ದೀಪ ಬೇಕು. ಆಗಾಗಿ ಅಲ್ಲಿನ ಗಿರಿಜನರು ಸಿಲಿಂಡರ್ ಬೇಡ, ಸಿಲಿಂಡರ್ ಹೊಂದಿದರೆ, ತಿಂಗಳಿಗೆ ಸಿಗುವ ರೇಷನ್ ಹಾಗೂ ಸೀಮೆ ಎಣ್ಣೆ ಕೂಡ ಬಂದಾಗುತ್ತೆ ನಾವು ಉಪವಾಸ ಕೂರುವ ಸ್ಥಿತಿ ಎದುರಾಗುತ್ತದೆ ಎಂದು ಹೋರಾಟವನ್ನು ಮಾಡುತ್ತಿದ್ದಾರೆ. ಜಿಲ್ಲಾಡಳಿತದಿಂದ ಅರಣ್ಯ ಹಕ್ಕು ಪತ್ರ ನೀಡಿದ್ದಾರೆ, ಅದು ಯಾವ ಬ್ಯಾಂಕ್ ಗಳಲ್ಲೂ ಪ್ಲೆಡ್ಜ್ ಮಾಡಿ ಸಾಲ ಯೋಜನೆ ಪಡೆಯುವುದಕ್ಕೆ ಸಾಧ್ಯವಿಲ್ಲ. ಇಂತಹ ಗೊಂದಲಗಳ ನಡುವೆ ಕೈ ಮತ್ತು ಬಾಯಿ ಕಟ್ಟಿದ ವಾತಾವರಣದಲ್ಲಿ ಇರಲಾರದೆ, ಸ್ವ ಇಚ್ಛೆಯ ಮೇರೆಗೆ ಪರಿಹಾರ ಪಡೆದು ಪುನರ್ವಸತಿ ಹೊಂದುತ್ತಿದ್ದಾರೆ. ಒಟ್ಟಾರೆಯಲ್ಲಿ ಸ್ಥಳಾಂತರ ಮತ್ತು ಪುನರ್ವಸತೀಕರಣ ಪರಿಕಲ್ಪನೆಯೇ ಅವೈಜ್ಞಾನಿಕ ಮತ್ತು ಹಣ ಸಂಪಾದನೆಯ ವಾಮ ಮಾರ್ಗ ಅಂದರೆ ಅದು ತಪ್ಪಾಗಲಾರದು.

ಅರಣ್ಯ ಇಲಾಖೆಯ ನಿಲುವುಗಳು

ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ವನ್ಯಜೀವಿ ಸಂರಕ್ಷಣಾ ವಿಭಾಗಕ್ಕೆ ಆಡಳಿತಾತ್ಮಕವಾಗಿ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕುವಿಭಾಗದಲ್ಲಿ ತನ್ನ ಮೂಲ ಕಛೇರಿಯನ್ನು ಹೊಂದಿದ್ದು, ಪ್ರಸ್ತುತವಾಗಿ ಶ್ರೀ ಗಣೇಶ್ ಭಟ್ ಅವರು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾಗಿ (ಡಿ.ಎಫ್.ಒ) ಕಾರ್ಯನಿರ್ವಹಿಸುತ್ತಿದ್ದಾರೆ. ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಆಡಳಿತಕ್ಕೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ಕೊಲ್ಲೂರಿನ ಮೂಕಾಂಬಿಕ ಮತ್ತು ಕುಂದಾಪುರದ ಸೋಮೇಶ್ವರ ವನ್ಯಜೀವಿ ಅಭಯಾರಣ್ಯಗಳ ವ್ಯಾಪ್ತಿ ಒಳಪಡುತ್ತದೆ. ಸಂಶೋಧನಾ ದೃಷ್ಟಿಯಿಂದ ರಾಷ್ಟ್ರೀಯ ಉದ್ಯಾನವನವನ್ನು ಮಾತ್ರ ಆಯ್ಕೆ ಮಾಡಿರುವುದರಿಂದ ಎರಡು ಅಭಯಾರಣ್ಯಗಳ ಕುರಿತ ಮಾಹಿತಿಗಳು ಉದ್ಯಾನವನದ ಅಧ್ಯಯನಕ್ಕೆ ಗೌಣವಾಗಿವೆ. ದಿ: ೨೨/೧೧/೨೦೧೭ ರಲ್ಲಿ ಡಿ.ಎಫ್.ಒ ಅವರೊಂದಿಗೆ ಕುದರೆಮುಖ ರಾಷ್ಟ್ರೀಯ ಉದ್ಯಾನವನದ ವಾಸ್ತವದ ಸ್ಥಿತಿಗತಿಗಳ ತಿಳುವಳಿಕೆಗಾಗಿ ಸಂದರ್ಶನ ಪ್ರಕ್ರಿಯೆಯನ್ನು ಅನುಸರಿಸಲಾಗಿದೆ. ಸಂದರ್ಶನ ಪ್ರಕ್ರಿಯೆಯಲ್ಲಿ ಅಧಿಕಾರಿಗಳು ಆಡಳಿತಾತ್ಮಕ ಮತ್ತು ಉದ್ಯಾನವನ ನಿರ್ವಹಣೆ ಕುರಿತ ಮಾಹಿತಿಗಳನ್ನು ನಮ್ಮೊಂದಿಗೆ ಅಂಚಿಕೊಂಡಿದ್ದಾರೆ. ಅದರ ಸವಿಸ್ತಾರವಾದ ಮಾಹಿತಿ ಮುಂದಿನಂತಿದೆ. (ಶ್ರೀ ಗಣೇಶ ಭಟ್, ೨೦೧೭)

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸ್ಥಳಾಂತರ ಮತ್ತು ಪುನರ್ವಸತೀಕರಣಯೋಜನೆಯು ಸರ್ಕಾರದ ಆದೇಶದಂತೆ ೨೦೦೫ ರಿಂದ ಆರಂಭವಾಗಿದೆ. ಈ ಯೋಜನೆಯಡಿಯಲ್ಲಿ ಯಾವ ವ್ಯಕ್ತಿ ಅಥವಾ ಕುಟುಂಬವು ಸ್ವ ಇಚ್ಛೆಯಿಂದ ಉದ್ಯಾನವನ ಬಿಟ್ಟು ಒಕ್ಕಲೇಳುವ ಹಿಂಗಿತವನ್ನು ಲಿಖಿತ ಪತ್ರದ ಮುಖಾಂತರ ಅರ್ಜಿ ಸಲ್ಲಿಸುತ್ತಾರೋ, ಅವರು ಪುನರ್ವಸತಿಗೆ ಅರ್ಹರಾಗಿರುತ್ತಾರೆ. ಉದ್ಯಾನವನ ವ್ಯಾಪ್ತಿಯಲ್ಲಿ ಯಾವುದೇ ಒತ್ತಡ ಪೂರ್ವಕ ಪುನರ್ವಸತಿಗೆ ಅವಕಾಶವಿಲ್ಲವೆಂಬುದನ್ನು ಸೂಚನಾ ಫಲಕಗಳಲ್ಲಿ ಬಿಂಬಿಸಲಾಗಿದೆ. ಪುನರ್ವಸತಿ ಹೊಂದುವ ಇಂಗಿತ ವ್ಯಕ್ತ ಪಡಿಸುವವರು, ಅರ್ಜಿಗಳೊಂದಿಗೆ ಪರಿಪೂರ್ಣವಾದ ದಾಖಲೆಗಳನ್ನು

ನೀಡಿದ ಮೇಲೆ ಪರಿಶೀಲನೆಗೆ ಒಳ ಪಡುತ್ತದೆ. ಪರಿಶೀಲನೆಯಲ್ಲಿ ಪರಿಪೂರ್ಣಗೊಂಡ ಮೇಲೆ ಭೂ ಸ್ವಾಧೀನ ಪ್ರಕ್ರಿಯೆ ಮುಖಾಂತರ ಜಿಲ್ಲಾಧಿಕಾರಿಗಳ ಮುಖಾಂತರ ಗಮನಕ್ಕೆ ತಂದು ಕಂದಾಯ ಇಲಾಖೆಯ ಸುಪರ್ಧಿಯಲ್ಲಿ ಭೂ ಸ್ವಾಧೀನಕ್ಕೆ ಪಡೆದುಕೊಂಡು ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಹೆಸರಿಗೆ ಅವರ ಭೌತಿಕವಾದ ಸ್ವತ್ತುಗಳನ್ನು (ಹೊಲ, ಗದ್ದೆ, ಮನೆ) ನೊಂದಾಯಿಸಲಾಗುತ್ತದೆ.

ಅರಣ್ಯ ಹಕ್ಕು ಅಧಿನಿಯಮದಡಿಯಲ್ಲಿ ಗಿರಿಜನರಿಗೆ ಅವರು ಮಾಡಿರುವ ಸಾಗುವಳಿ ಆಧಾರಿತವಾಗಿ 'ಅರಣ್ಯ ಹಕ್ಕು ಪತ್ರಗಳನ್ನು' ನೀಡಿದ್ದು, ಪೂರ್ಣ ಪ್ರಮಾಣದ ಸಾಗುವಳಿದಾರರನ್ನಾಗಿ ಜಿಲ್ಲಾಡಳಿತದಿಂದ ಗುರ್ತಿಸಲ್ಪಟ್ಟಿದೆ ಮತ್ತು ಅದರ ಮೇಲೂ ಕೆಲವು ಗಿರಿಜನರು ಮೂಲಭೂತ ಸೌಕರ್ಯ ಇದ್ದವರು ಹಾಗೂ ಇಲ್ಲದವರೂ ಕೂಡ ಉದ್ಯಾನವನದಿಂದ ಹೊರ ಹೋಗಲು ಬಯಸಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇನ್ನು ಕೆಲವರು ಮೂಲಭೂತ ಸೌಕರ್ಯ ಇಲ್ಲವಾದರೂ ನಾವು ಇಲ್ಲಿಯೇ ಇರುತೇವೆ ಎಂದು ಉಳಿದುಕೊಂಡಿದ್ದಾರೆ. ಅರಣ್ಯ ಹಕ್ಕು ಪತ್ರ ದೊರೆತಿರುವವರು ಯಾವುದೇ ಕಾರಣಕ್ಕೂ ಪರಾಭಾರೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ ಮತ್ತು ಒಮ್ಮೆ ಅವರು ಹೊರ ಹೋಗಲು ಇಚ್ಛಿಸಿದಲ್ಲಿ ಅರಣ್ಯ ಹಕ್ಕು ಪತ್ರದಲ್ಲಿ ನಮೂದಿಸಿರುವ ಭೂ ಹಿಡುವಳಿ ವಿಸ್ತೀರ್ಣದಲ್ಲಿರುವ ಸ್ವತ್ತಿಗೆ ಮಾತ್ರ ಮೌಲ್ಯಗಳು ನಿಗದಿತವಾಗುತ್ತವೆ ಹೊರತು ಒತ್ತುವರಿ ಪ್ರದೇಶಕ್ಕೆ ಮೌಲ್ಯಗಳು ಅನ್ವಯಿಸುವುದಿಲ್ಲ.

ಪುನರ್ವಸತಿಗಾಗಿ ಅರ್ಜಿ ಸಲ್ಲಿಸುವವರಿಗೆ ಅವರು ಹೊಂದಿರುವ ಪಟ್ಟಾ ಮತ್ತು ಅರಣ್ಯ ಸಾಗುವಳಿ ಚೀಟಿಗಳ ಆಧಾರವಾಗಿ ತಾಲ್ಲೂಕುಮಟ್ಟದ ಸಮಿತಿಗಳ ಮುಖಾಂತರ ಸಮೀಕ್ಷೆ ಕಾರ್ಯಗಳು ನಡೆದು ಮೌಲ್ಯಗಳು ನಿರ್ಧಾರವಾಗುತ್ತವೆ. ಇದರ ಆಧಾರದ ಮೇಲೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಗಮನಕ್ಕೆ ತರುವ ಮೂಲಕ ಸಹಿಯೊಂದಿಗೆ ಹಣದ ಹುಂಡಿಗಳನ್ನು ವಿತರಿಸಲಾಗುತ್ತದೆ. ೧೦ ಲಕ್ಷ ಒಂದು ಗಂಟಿನ ಪರಿಹಾರ ಯೋಜನೆಯು ಹುಲಿ ಯೋಜನೆ ಅನುಷ್ಠಾನಗೊಂಡ ಪ್ರದೇಶಗಳಿಗೆ ಮಾತ್ರ ಅನ್ವಯವಾಗುತ್ತಿದ್ದು, ಆ ಯೋಜನೆಯಲ್ಲಿ ಹಣವನ್ನಾದರೂ ಪಡೆಯಬಹುದು ಇಲ್ಲವೆ ಹಣದ ಬದಲಾಗಿ ಭೂಮಿ ಮತ್ತು ಮನೆಯನ್ನು ೧೫ಲಕ್ಷದ ಮೌಲ್ಯ (ಬದಲಾದ ಸರ್ಕಾರಿ ಬೆಲೆಗಳಿಗೆ)ದ ಒಳಗಿನ ಸ್ವತ್ತುಗಳನ್ನು ಆಶ್ರಯಿಸಲು ಅವಕಾಶವಿದೆ. ಈ ಯೋಜನೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನಕ್ಕೆ ಅನ್ವಯಿಸುವುದಿಲ್ಲ ಹಾಗೂ ಈ ಪ್ರಾಂತ್ಯಕ್ಕೆ ಕುಟುಂಬವು ಹೊಂದಿರುವ ಪಟ್ಟಾದ ಆಧಾರಿತವಾಗಿ ನಿಗಧಿಯಾಗುವ ನೈಜ ಮೌಲ್ಯಕ್ಕೆ ಹಣದ ಹುಂಡಿಗಳು ದೊರೆಯುತ್ತದೆ.

ಕುದುರೆಮುಖ ವ್ಯಾಪ್ತಿಯಲ್ಲಿ ಮಾನವ ಮತ್ತು ವನ್ಯಜೀವಿಗಳ ಸಂಘರ್ಷಗಳ ಕುರಿತು ವರದಿಯಾಗಿಲ್ಲ. ಆ ಪ್ರಕಾರದ ಸನ್ನಿವೇಶಗಳು ಆನೆ ವಾಸಿಸುವ ಪ್ರದೇಶಗಳಲ್ಲಿ ಹೆಚ್ಚಾಗಿರುತ್ತವೆ. ನಮ್ಮ ವ್ಯಾಪ್ತಿಯಲ್ಲಿ ಕಾಡು ಕೋಣ, ಕುರಿ ಇವುಗಳಿಂದ ಉಂಟಾಗಿರುವ ನಷ್ಟಕ್ಕೆ ಇಲಾಖೆಯಿಂದ ಸರ್ಕಾರ ನಿಗದಿ ಪಡಿಸಿರುವ ಬೆಂಬಲ ಬೆಲೆ ಆಧಾರಿತವಾಗಿ ಪರಿಹಾರವನ್ನು ನೀಡಲಾಗಿದೆ. ಇತ್ತೀಚೆಗೆ ಅಂತಹ ಯಾವ ವರದಿಯೂ ನಾಲ್ಕು ವಲಯಗಳಲ್ಲಿ ಕಂಡುಬಂದಿಲ್ಲ.

ಕುದುರೆಮುಖ ಉದ್ಯಾನವನಕ್ಕೆ ಇದ್ದ ಮೇಜರ್ ಥ್ರೆಟ್ ಅಂದರೆ, ಅದು ನಕ್ಸಲ್ ಚಟುವಟಿಕೆ. ಈಗ ಈ ಚಟುವಟಿಕಗೆಳು ಸಂಪೂರ್ಣವಾಗಿ ಸ್ಥಗಿತವಾಗಿದೆ ಮತ್ತು ಹಿಂದೆ ಇದ್ದ ಬಿಗುವಿನ ವಾತಾವರಣ ಇಂದು ಇಲ್ಲದಾಗಿದೆ. ಕಳೆದ ಮೂರು ತಿಂಗಳ ಹಿಂದೆ ನಕ್ಸಲ್ ಗುಂಪೊಂದು ಅರಣ್ಯ ಇಲಾಖೆಯ ಮಾತೋಳಿ ಶಿಬಿರದ ಮೇಲೆ ದಾಳಿ ಮಾಡಿದೆ, ಆದರೆ ಯಾವ ಸಿಬ್ಬಂದಿಗೂ ಅಲ್ಲಿ ತೊಂದರೆಯಾಗಿಲ್ಲ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ನಾಲ್ಕು ವಲಯಗಳಲ್ಲಿ ಹೆಚ್ಚು ಪುನರ್ವಸತಿ ಆಗಿರುವುದು ಶೃಂಗೇರಿ ತಾಲ್ಲೂಕುಕೆರೆಕಟ್ಟೆ ವಲಯದಲ್ಲಿ. ಜನವಸತಿ ಹೆಚ್ಚು ಇರುವ ಪ್ರದೇಶವೆಂದರೆ, ಕೆರೆಕಟ್ಟೆ ವಲಯ ಪ್ರದೇಶ. ಅಲ್ಲಿಂದ ಜನರು ಪುನರ್ವಸತಿ ಹೊಂದಿದ ನಂತರ ಕಂದಾಯ ಇಲಾಖೆಯವರು ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ಉದ್ಯಾನವನದ ಹೆಸರಿಗೆ ನೊಂದಾಯಿಸಿ ಭೂ ಹಿಡುವಳಿ ವ್ಯವಸ್ಥೆಯನು ಪೂರ್ಣಗೊಳಿಸಲಾಗುತ್ತದೆ.

ಇಕೋ ಟೂರಿಸಂ ಸಂಬಂಧ ಪಟ್ಟಂತೆ ಪ್ರಕ್ರಿಯೆ ಕೈಗೊಳ್ಳುವುದಕ್ಕೆ ಸರ್ಕಾರದ ಆದೇಶವೇ ಇದೆ. ಇಕೋ ಟೂರಿಸಂ ಹೆಸರಲ್ಲಿ ಬಂದ ಪ್ರವಾಸಿಗಳು ಪ್ಲಾಸ್ಟಿಕ್ ತ್ಯಾಜ್ಯ ಬಿಸಾಡುವ ಸ್ಥಳಗಳನ್ನು (ಜಲಪಾತ) ಬಂದ್ ಮಾಡಲಾಗಿದೆ ಅಲ್ಲದೆ ಅಲ್ಲಿ ವಿಹಾರಕ್ಕೆ ಅವಕಾಶವನ್ನು ನೀಡಿರುವುದಿಲ್ಲ.

ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದಂತೆ, ಗ್ರಾಮಪಂಚಾಯತ್ ಮುಖಾಂತರ ನಿರ್ಣಯ ತೆಗೆದುಕೊಂಡಿರುವ ಪತ್ರಗಳು ಬಂಧಿವೆ. ಅವುಗಳನ್ನು ಪರಿಶೀಲಿಸಿದಾಗ ಅರಣ್ಯ ಭೂಮಿ ಇರುವ ಕಡೆ ವ್ಯವಸ್ಥೆಗೊಳಿಸಲು ಕಾಲವಕಾಶ ಬೇಕಾಗುತ್ತದೆ. ನ್ಯಾಷಿನಲ್ ಪಾರ್ಕಗೆ ಸಂಬಂಧಿಸಿದಂತೆ ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯ ಸಭೆಯಲ್ಲಿ ಮನವಿಗೆ ಒಪ್ಪಿಗೆ ಸಿಕ್ಕ ನಂತರ ಪ್ರಕ್ರಿಯೆ ಚಾಲನೆ ನೀಡಲು ಅವಕಾಶ ಸಿಗುತ್ತದೆ. ಆದರೆ, ಸಮಯ ಇಂತಿಷ್ಟೇ ಅಂದು ನಿಗದಿ ಮಾಡುವುದಕ್ಕೆ ಸಾಧ್ಯವಿಲ್ಲ.

ಕರ್ನಾಟಕ ಮತ್ತು ಭಾರತದಲ್ಲಿ ಈವರೆಗೂ ಆಗಿರುವ ಉತ್ತಮ ಪುನರ್ವಸತಿ ಯೋಜನೆ ಯಾವುದು ಎಂದು ಹೇಳುವುದು ಕಷ್ಟ. ಕಾರಣ ಆಯಾ ಸ್ಥಳದ ಸಂದರ್ಭಕ್ಕೆ ಅನುಗುಣವಾಗಿ ಪುನರ್ವಸತಿಗಳು ಏರ್ಪಟ್ಟಿರುತ್ತವೆ. ಇರುವಂತಹ ಪುನರ್ವಸತಿಯಲ್ಲಿ ಭದ್ರಾ ಹುಲಿ ಅಭಯಾರಣ್ಯದ ಪುನರ್ವಸತಿಯನ್ನು ಹೇಳಬಹುದು. ಆದರೆ ನಾವು ಪರಿವೀಕ್ಷಣೆ ಮಾಡಿಲ್ಲ.

ಕುದುರೆಮುಖ ಉದ್ಯಾನವನ ಭಾಗದಿಂದ ಸ್ಥಳಾಂತರ (ಒಕ್ಕಲೆದ್ದು) ಪುನರ್ವಸತಿ ಹೊಂದಿರುವ ಕುಟುಂಬಗಳ ವಾಸ್ತವದ ಪರಿಸ್ಥಿತಿಯನ್ನು ಇಲಾಖೆಯಿಂದ ಅವಲೋಕನ ಮಾಡಿಲ್ಲ. ಆದರೆ, ಚೆನ್ನಾಗಿರ ಬಹುದೆಂದು ನಮ್ಮ ಭಾವನೆ ಇದೆ. ಮುಂದಿನ ದಿನಗಳಲ್ಲಿ ಸರ್ಕಾರ ಆದೇಶಿಸಿದರೆ, ಪರಿಶೀಲನೆ ಸಾಧ್ಯವಿದೆ ಎಂದು ತಿಳಿಸಿದರು.

೪. ಸ್ಥಳಾಂತರ ಮತ್ತು ಪುನರ್ವಸತೀಕರಣ ಕುರಿತಂತೆ ಹೋರಾಟದ ಸ್ವರೂಪ ಮತ್ತು ಪರಿಣಾಮಗಳು

ಜೀವ ವಿಕಾಸದ ಸಿದ್ಧಾಂತದ ಪ್ರಕಾರ 'ಯಾವ ಜೀವಿಯು ಕಡಿಮೆಯಾದ ಶಕ್ತಿಯನ್ನು ಹೊಂದಿರುವುದೋ, ಆ ಜೀವಿಯು ಶಕ್ತಿಯುತವಾದ ಜೀವಿ ಎದುರು ಹೆಚ್ಚು ದಿನಗಳ ಕಾಲ ಜೀವಿಸಲಾರದು. The inferior (disadvantaged) members of the same species would gradually die out, leaving only the superior (advantaged) members of the species[೧], ಎನ್ನುವ ಹಾಗೆ ಪರಿಸರದಲ್ಲಿ ಉಳಿಯುವಿಕೆಗಾಗಿ ನಿರಂತರ ಹೋರಾಟವು ಪ್ರತಿ ಜೀವಿಗೂ ಅವಶ್ಯವಾಗಿದೆ. ಮಾನವ ಸಾಮಾಜಿಕವಾಗಿ ಸಂಘಜೀವಿಯಾಗಿದ್ದಾನೆ. ತನ್ನ ಸಂಘ ಪರಿವಾರದ ಉಳಿವಿಗಾಗಿ ಆತನು ಒಂದಲ್ಲ ಒಂದು ಪ್ರಕಾರವಾಗಿ ಹೋರಾಟದಲ್ಲಿ ತೊಡಗಿಕೊಂಡಿದ್ದಾನೆ. ಇತಿಹಾಸದಲ್ಲಿ ಒಂದು ಸಾಮ್ರಾಜ್ಯ ಇನ್ನೊಂದು ಸಾಮ್ರಾಜ್ಯದ ಮೇಲೆ ಹಿಡಿತವನ್ನು ಸಾಧಿಸುವ ನಿಟ್ಟಿನಲ್ಲಿ ಹೋರಾಟವನ್ನು ಮಾಡುತ್ತಿದ್ದರು. ಅದಕ್ಕೆ ಪ್ರತಿಯಾಗಿ ತಮ್ಮ ಜಹಗೀರುಗಳನ್ನು ಪುನಃ ಪಡೆಯಲು ಮರು ಹೋರಾಟಗಳು ಸೃಷ್ಟಿಯಾಗುತ್ತಿದ್ದವು. ಬ್ರಿಟೀಷ್ ವಸಾಹತು ಕಾಲದಲ್ಲಿ ಕಂಪನಿಯ ನಿಯಮಗಳ ವಿರುದ್ಧ ಮತ್ತು ಸ್ವತಂತ್ರವನ್ನು ಬಯಸಿ ಇಡೀ ದೇಶವೇ ತಮ್ಮ ತನವನ್ನು ಉಳಿಸಿಕೊಳ್ಳಲು ಹೋರಾಟವನ್ನು ಆರಂಭಿಸಬೇಕಾಯಿತು. ಸ್ವತಂತ್ರ ನಂತರ ಅಭಿವೃದ್ಧಿಯ ಹೆಸರಲ್ಲಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳಿಂದ ಆಗುತ್ತಿರುವ ಸ್ಥಳಾಂತರ ಪ್ರಕ್ರಿಯೆಗೆ ಪ್ರಜೆಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಡಬೇಕಾಗಿದೆ. ಜಾಗತಿಕ ಜಗತ್ತಿನ ಮುಕ್ತ ವ್ಯಾಪಾರ, ರಿಯಾಯ್ತಿ ತೆರಿಗೆಯ ಬಂಡವಾಳ ಊಡಿಕೆ, ವಿಶೇಷ ಕಾನೂನುಗಳ ರಚನೆ ಮುಖಾಂತರ ನಮ್ಮಲ್ಲಿರುವ ಪರಿಸರ ಸಂಪತ್ತಿನ ಮೇಲೆ ಅನೈತಿಕವಾಗಿ ಬೌದ್ಧಿಕ ಸ್ವಾಮ್ಯತೆಯನ್ನು ಹೊಂದುವ ಹುನ್ನಾರವನ್ನು ಬಂಡವಾಳ ಶಾಹಿಗಳು ನಡೆಸಿವೆ. ಇದರ ಫಲವಾಗಿ ಅರಣ್ಯ ಮತ್ತು ವನ್ಯಜೀವಿ ಸಂಪತ್ತನ್ನು ರಕ್ಷಿಸುವ ನಿಟ್ಟಿನಲ್ಲಿ ವಿವಿಧ ಯೋಜನೆಗಳು ಜಾರಿಯಾಗುತ್ತಾ, ಉಳ್ಳವರನ್ನು ಮಾತ್ರ ಪರಿಗಣಿಸಿ ಉಳ್ಳದವರನ್ನು ಕಡೆಗಣಿಸಲಾಗುತ್ತಿದೆ. ಈ ಅಂಶಗಳ ಮುಖಾಂತರ ಮೂಲ ಸಮಸ್ಯೆಯು ಕಂಡುಬರುತ್ತಿರುವುದು ಭೂಹಿಡುವಳಿಯ ವ್ಯಾಪಕವಾದ ಹಂಚಿಕೆಯಲ್ಲಿ. ಕಳೆದ ಸುಮಾರು ವರ್ಷಗಳಲ್ಲಿ ಅಭಿವೃದ್ಧಿಗಾಗಿ ವ್ಯಹಿಸಲ್ಪಟ್ಟ ಭೂಪ್ರದೇಶಗಳಿಂದ ಸ್ಥಳಾಂತರಕ್ಕೆ ಒಳಗಾದವರು ೨೧.೩ ಮಿಲಿಯನ್‌ಗಳಷ್ಟಿದ್ದಾರೆ. ಅದರಲ್ಲಿ ಆದಿವಾಸಿ ಸಮುದಾಯಗಳು ೪೦%ರಷ್ಟಿದೆ. ಮೂಲ ನೆಲೆಗಳನ್ನು ಕಳೆದುಕೊಂಡ ಎಲ್ಲಾ ಸಮುದಾಯಗಳ ಸಾಮಾಜಿಕ–ಆರ್ಥಿಕ ಸಂಕಷ್ಟಕ್ಕೆ ಕಾರಣವಾಗಿರುವುದು ಭೂಹಿಡುವಳಿಗಳು.

ಸರ್ಕಾರವು ತಾನು ರೂಪಿಸುವ ಅಭಿವೃದ್ಧಿ ಪ್ರಕಲ್ಪಗಳಲ್ಲಿ ಮುಂದಾಲೋಚನೆಯಾಗಿ ಸಮುದಾಯಗಳಿಗೆ ಭೂಹಿಡುವಳಿಗಳನ್ನು (ಫಲವತ್ತತೆಯ) ಗುರುತಿಸಿ ನಂತರ ಪ್ರಕಲ್ಪಗಳನ್ನು ಅನುಷ್ಠಾನ ಮಾಡಿದರೆ, ಈ ಪ್ರಕಾರದ ಸಂದಿಗ್ಧತೆಯು ಎದುರಾಗದು. ಆದರೆ, ಆಡಳಿತ ನಡೆಸುವ ಸರ್ಕಾರದ ಚುಕ್ಕಾಣಿ ಇಡಿದವರು ಅಭಿವೃದ್ಧಿಯನ್ನು ಮಾತ್ರ ಪರಿಗಣಿಸಿ ಪ್ರಕಲ್ಪಗಳನ್ನು ಜಾರಿತರುವ ಹಾಗೂ ಸ್ವಾ ಅಭಿವೃದ್ಧಿ ಆರ್ಥಿಕತೆ ನಿಟ್ಟಿನಲ್ಲಿಯೇ ಯೋಚಿಸುವ ದೃಷ್ಟಿಯಿಂದಾಗಿ ಇಂದು ಪ್ರಜೆಗಳು ತಮ್ಮ ಅಸ್ಥಿತ್ವವನ್ನು ಉಳಿಸಿಕೊಳ್ಳುವೆಡೆ ಹಾಗೂ ಭೂಹಿಡುವಳಿಯನ್ನು ಪಡೆಯುವೆಡೆ ಹೋರಾಟದ

ಅನಿವಾರ್ಯತೆ ಇದೆ. ಪುನರ್ವಸತೀಕರಣಕ್ಕೆ ಸಂಬಂಧಿಸಿದಂತೆ, ಇದುವರೆಗೂ ಭಾರತದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ನಡೆದಿರುವ ಸ್ಥಳಾಂತರ ಪ್ರಕ್ರಿಯೆಗೆ ನೀಡಿರುವ ಪುನರ್ವಸತೀಕರಣ ಪರಿಹಾರಗಳು ಸಾಕಷ್ಟು ಪ್ರಶ್ನೆಗೆ ಎಡೆಮಾಡಿಕೊಟ್ಟಿದೆ. ಸ್ಥಳಾಂತರ ಪೂರ್ವದಲ್ಲಿ ಆದಿವಾಸಿ ಮತ್ತು ಅರಣ್ಯವಾಸಿತ ಸಮುದಾಯಗಳು ಹೊಂದಿದ್ದ ಫಲವತ್ತಾದ ಭೂಹಿಡುವಳಿಗಳನ್ನು ಪುನರ್ವಸತೀಕರಣ ಹೊಂದಿದ ಪ್ರದೇಶದಲ್ಲಿ ಪಡೆಯಲಾಗಿಲ್ಲ. ಸ್ಥಳಾಂತರ ಹೊಂದುವ ಸಂದರ್ಭದಲ್ಲಿ ಸರ್ಕಾರವು ನೀಡಿದ ಭರವಸೆಯನ್ನು ಇಂದಿಗೂ ಕೂಡ ಪರಿಹರಿಸಲಾಗಿಲ್ಲ. ಆ ಪರಿಹಾರವನ್ನು ಪಡೆಯುವ ಸಲುವಾಗಿ ಪುನರ್ವಸತೀಕರಣಗೊಂಡ ಬಹುಪಾಲು ಸಾಮಾಜಿಕ ಸಮುದಾಯಗಳು ಕೋರ್ಟ್ ಮೆಟ್ಟಿಲನ್ನು ಏರಿ ಪರಿಹಾರ ನೀಡುವಂತೆ ದಾವೆಗಳನ್ನು ಊಡಿವೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಸಂದರ್ಭದಲ್ಲಿ ಮೂರು ಬಾರಿ ಬದಲಾದ ಪರಿಸ್ಥಿತಿಗಳಿಗೆ ಪುನರ್ವಸತೀಕರಣ ಯೋಜನೆಯನ್ನು ಘೋಷಿಸಲಾಗಿದೆ. ಈ ಪ್ರಕಾರವಾಗಿ ಸರ್ಕಾರವು ಕ್ಷಣಕ್ಷಣಕ್ಕೆ ಬದಲಿಸುವ ನಿರ್ಧಾರಗಳು ಸಮುದಾಯಗಳನ್ನು ಆತಂಕಕ್ಕೆ ಒಳಗಾಗುವಂತೆ ಮಾಡುತ್ತದೆ. ಸುಪ್ರೀಂ ಕೋರ್ಟ್‌ನ ಆದೇಶದ ಅನುಸಾರ ಅರಣ್ಯಾಶ್ರಿತ ಸಮುದಾಯಗಳು ಹೊಂದಿರುವ ಭೂಹಿಡುವಳಿಗಳನ್ನು ತೊರೆಯ ಬೇಕಾಗಿದೆ[೨]. ಅದೇ ಕಾಲಕ್ಕೆ ರಾಷ್ಟ್ರೀಯ ಉದ್ಯಾನವನವೆಂದು ಘೋಷಣೆಯನ್ನು ಕೂಡ ಮಾಡಲಾಯಿತು. ಈ ಎರಡು ಸಂದರ್ಭಗಳು ಉದ್ಯಾನವನ ಭಾಗದಲ್ಲಿ ಸಾಮಾಜಿಕ ಸಮುದಾಯಗಳಿಗೆ ಬಿಗುವಾದ ವಾತಾವರಣವನ್ನು ಉಂಟುಮಾಡಿತು. ಪರಿಣಾಮವಾಗಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನವು ರಚನೆಯಾದರೆ, ಗಿರಿಜನರಿಗೆ, ರೈತರಿಗೆ ಮತ್ತು ಅರಣ್ಯವಾಸಿಗಳಿಗೆ ಉಂಟಾಗಬಹುದಾದಂತಹ ಅತಂತ್ರ ಸ್ಥಿತಿಯ ವಿರುದ್ಧ, ಹಲವಾರು ಸಂಘಟನೆಗಳು ಹೋರಾಟಕ್ಕೆ ಸಿದ್ಧಗೊಂಡವು.

ಹೋರಾಟದ ಸ್ವರೂಪ

೧೯೮೦ರ ಆಸುಪಾಸಿನಲ್ಲಿ ಪರಿಸರದ ಸಮಸ್ಯೆಗಳ ವಿರುದ್ಧ ಹೋರಾಟಗಳು ಭಾರತ ಮತ್ತು ಕರ್ನಾಟಕ ರಾಜ್ಯದಾದ್ಯಂತ ಆರಂಭವಾಯಿತು. ೧೯೮೦ಕ್ಕೂ ಮೊದಲು ಪರಿಸರದ ಅಸಮತೋಲನವು ಕಂಡಿತ್ತಾದರೂ, ಮೂಲ ಹೋರಾಟ ಆರಂಭವಾಗಿದ್ದು ೧೯೮೦ರ ಕಾಲದಲ್ಲಿ. ಆ ಕಾಲದಲ್ಲಿ ಪರಿಸರ ಕ್ರಮಣಿಕೆಯಲ್ಲಿ ಉಂಟಾದ ಹೆಚ್ಚುವರಿ ಕಾರ್ಖಾನೆಗಳ ಸ್ಥಾಪನೆ, ಅರಣ್ಯಗಳ ಪ್ರಮಾಣ, ಅಂತರ್ಜಲ ಪ್ರಮಾಣ ಮತ್ತು ವಾತಾವರಣದಲ್ಲಾದ ಬದಲಾವಣೆಗಳಿಂದ ಹೆಚ್ಚೆತ್ತುಕೊಂಡು ಪರಿಸರವನ್ನು ಉಳಿಸುವ ಹೋರಾಟಗಳು ಆರಂಭವಾದವು. ಪರಿಸರ ಉಳಿಸುವ ಹೋರಾಟದ ಭಾಗವಾಗಿ ಬೀದಿ ನಾಟಕ, ಸೈಕಲ್ ಜಾಥ, ಚಳುವಳಿ, ಪಥ ಸಂಚಲನ, ಬಂದ್‌ಗಳ ಸ್ವರೂಪದಲ್ಲಿ ಜನರನ್ನು ಆಕರ್ಷಿಸುವ ಹಾಗೂ ವಿಷಯವನ್ನು ಮುಟ್ಟಿಸುವ ಕಾರ್ಯತಂತ್ರಗಳನ್ನು ಬಳಸಿಕೊಳ್ಳಲಾಯಿತು. ಈ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸುವುದರೊಂದಿಗೆ ಪರಿಸರವನ್ನು ಉಳಿಸುವ ಬೆಳೆಸುವ ಹಲವು ಮಾರ್ಗಗಳನ್ನು ಪ್ರಾತ್ಯಕ್ಷಿಕೆ (ಡೆಮೋ)ಮೂಲಕ ಪ್ರದರ್ಶಿಸಲಾಯಿತು. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ೧೯೯೯ರಿಂದ ಪರಿಸರ ಉಳಿಸುವ ಮತ್ತು ರಾಷ್ಟ್ರೀಯ ಉದ್ಯಾನವನ ರಚನೆಯ ವಿರುದ್ಧ ಹೋರಾಟವು ಆರಂಭವಾಯಿತು. ೧೯೯೯ರಲ್ಲಿ ತುಂಗಾ ಮೂಲ ಉಳಿಸಿ ಪ್ರಜಾಸತ್ತಾತ್ಮಕ ಹೋರಾಟದ ಮುಖಾಂತರ ಜನರಲ್ಲಿ

ಜಾಗೃತಿಯನ್ನು ಮೂಡಿಸಲು ಜಾಥ, ಸಮಾವೇಶಗಳು, ಸರ್ಕಾರಕ್ಕೆ ಅಧಿಕಾರಿ ವರ್ಗಗಳ ಮುಖಾಂತರ ಮನವಿಯನ್ನು ಸಲ್ಲಿಸಲಾಯಿತು. ಚುನಾವಣಾ ಕಾಲವಾದ್ದರಿಂದ ಜನಪ್ರತಿನಿಧಿಗಳಿಗೆ ಕುದುರೆಮುಖ ಗಣಿಗಾರಿಕೆಯನ್ನು ನಿಲ್ಲಿಸುವಂತೆ ಒತ್ತಾಯಿಸಲಾಯಿತು. ಶಿವಮೊಗ್ಗ, ದಾವಣಗೆರೆ ಮತ್ತು ಬೆಂಗಳೂರಿನಲ್ಲಿ ಸಮಾವೇಶ ಮತ್ತು ಜಾಥಗಳನ್ನು ನಡೆಸುವ ಮೂಲಕ ಸರ್ಕಾರದ ಗಮನವನ್ನು ಸೆಳೆಯುವ ಪ್ರಯತ್ನ ಮಾಡಲಾಯಿತು. ಸುಪ್ರೀಂ ಕೋರ್ಟ್‌ನಲ್ಲಿ ಗಣಿಗಾರಿಕೆ ವಿರುದ್ಧ ದಾವೆಯನ್ನು ಊಡುವುದರೊಂದಿಗೆ ಸುಪ್ರೀಂ ಕೋರ್ಟ್‌ನ ಗಮನವನ್ನು ಪರಿಸರದತ್ತ ಸೆಳೆದು ಗಣಿಗಾರಿಕೆಯನ್ನು ನಿಲ್ಲಿಸುವಂತೆ ಹೋರಾಟ ಮಾಡಲಾಯಿತು.

೧೯೯೮-೯೯ರಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಉದ್ಘೋಷಣೆ ಮತ್ತು ಸುಪ್ರೀಂ ಕೋರ್ಟ್ ಅರಣ್ಯ ಪ್ರದೇಶದಲ್ಲಿ ನೆಲೆಸಿರುವ ಆದಿವಾಸಿಗಳನ್ನು ಒತ್ತುವರಿ ಪ್ರದೇಶಗಳಿಂದ ಹೊರಬರುವಂತೆ ಆದೇಶವನ್ನು ಪ್ರಕಟಿಸಿತು. ಈ ಸಂದರ್ಭಗಳು ಉದ್ಯಾನವನ ವ್ಯಾಪ್ತಿಯ ಸಮುದಾಯಗಳನ್ನು ಬಿಗುವಿನ ವಾತಾವರಣದಲ್ಲಿರಿಸಿತು. ಈ ವೇಳೆಯಲ್ಲಿ ಉದ್ಯಾನವನ ರಚನೆಯನ್ನು ವಿರೋಧಿಸಿ ಅನೇಕ ಸಂಘಟನೆಗಳು ರಚನೆಗೊಂಡು ಉಪವಿಭಾಗಾಧಿಕಾರಿಗಳವರಿಗೆ ನೇರವಾಗಿ ಮನವಿಯನ್ನು ಸಲ್ಲಿಸಿದವು. ಈ ಸಂದರ್ಭದಲ್ಲಿ ಆದಿವಾಸಿಗಳು ಎದುರಿಸುತ್ತಿರುವ ಭೂಹಿಡುವಳಿ ಸಮಸ್ಯೆಗಳನ್ನೇ ಗುರಿಯಾಗಿಸಿಕೊಂಡು ಸಶಸ್ತ್ರ ಹೋರಾಟವನ್ನು ನಕ್ಸಲ್ ಚಳುವಳಿಗಾರರು ಕರ ಪತ್ರ ಹಂಚುವಿಕೆ, ಜಮೀನ್ದಾರರುಗಳಿಗೆ ಕಾರ್ಮಿಕರನ್ನು ಶೋಷಿಸದಂತೆ ಎಚ್ಚರಿಕೆ ನೀಡುವುದು, ಅರಣ್ಯ ಇಲಾಖೆಯ ಸಿಬ್ಬಂಧ್ಧಿಗಳು ಹಪ್ತಾ ವಸೂಲಿ ಮಾಡುವುದನ್ನು ತಡೆಯುವಿಕೆಯ ಕಾರ್ಯಗಳನ್ನು ಜೊತೆಯಲ್ಲಿ ಜನರಿಗೆ ಸಭೆಗಳನ್ನು ನಡೆಸುವ ಮುಖಾಂತರ ಸ್ಥಳಾಂತರ ಮತ್ತು ಪುನರ್ವಸತೀಕರಣದ ಪರಿಣಾಮಗಳ ಕುರಿತು ಜಾಗೃತಿ ಮತ್ತು ಅರಿವನ್ನು ಮೂಡಿಸುವ ಪ್ರಯತ್ನದ ಹೋರಾಟವನ್ನು ನಡೆಸಿದರು.

ಹೋರಾಟಗಳ ವಿವರಗಳು

ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮವು, ಕಬ್ಬಿಣ ಅದಿರು ನಿಕ್ಷೇಪವನ್ನು ಪರೀಕ್ಷೆಗಳ ಮುಖಾಂತರ ಖಚಿತ ಪಡಿಸಿಕೊಂಡ ನಂತರ, ಮಲ್ಲೇಶ್ವರದ ೬೯ ಕುಟುಂಬಗಳ ಭೂ ಹಿಡುವಳಿಗಳನ್ನು ಸುಪರ್ಧಿಗೆ ತೆಗೆದುಕೊಂಡು 'ಕುದುರೆಮುಖ ಕಬ್ಬಿಣ ಅದಿರು ಕಂಪನಿ'ಯನ್ನು ಆರಂಭಿಸಿತು. ೧೯೬೯ ರಿಂದ ೧೯೯೯ ರವರೆಗು ಕಬ್ಬಿಣ ಅದಿರು ಉತ್ಪನನ ಕಾರ್ಯದಲ್ಲಿ ತೊಡಗಿಸಿಕೊಂಡು, ಮಲ್ಲೇಶ್ವರ ಗ್ರಾಮದ ೬೯ ಕುಟುಂಬಗಳ ಪೈಕಿ ಒಬ್ಬರನ್ನು ಒಳಗೊಂಡಂತೆ, ದಿನಗೂಲಿ ನೌಕರರು ಸೇರಿ ಹತ್ತು ಸಾವಿರ ಜನ ತಮ್ಮ ಜೀವನೋಪಾಯವನ್ನು ಈ ಕಾರ್ಖಾನೆ ಆಧಾರಿತವಾಗಿ ಕಂಡುಕೊಂಡಿದ್ದರು. ೧೯೯೯ ರ ವೇಳೆಗೆ ಕಂಪನಿ ಪರವನಾಗಿ ಮುಗಿಯುವ ವೇಳೆಗೆ ಮರು ಪರವಾನಗಿ ಪಡೆಯಲು ಸಿದ್ಧಗೊಳ್ಳುತ್ತಿದ್ದ ವೇಳೆಗೆ, ನದಿ ಮೂಲ ಹಾಗೂ ಪರಿಸರವನ್ನು ಉಳಿಸಿಕೊಳ್ಳುವ ಸಲುವಾಗಿ ಗಿರಿಜನ, ರೈತರು ಮತ್ತು ಅರಣ್ಯವಾಸಿಗಳು ಸೇರಿ ಸಾರ್ವಜನಿಕ ಹೋರಾಟವನ್ನು 'ತುಂಗಾ ಮೂಲ ಉಳಿಸಿ' ಎಂಬ ಕರೆಯೊಂದಿಗೆ ಆರಂಭಿಸಿದರು.

ಹೋರಾಟದ ಪರಿಣಾಮಗಳು

೦೧. ಹೋರಾಟದ ಭಾಗವಾಗಿ ರಾಜ್ಯದ ಸಾಹಿತಿಗಳು, ಪರಿಸರ ತಜ್ಞರು ಮುಂತಾದವರು ಬೆಂಬಲವನ್ನು ಘೋಷಿಸಿದರು.

೦೨. ಕರ್ನಾಟಕ ವಿಮೋಚನಾ ರಂಗ ಆರಂಭದೊಂದಿಗೆ ಗಿರಿಜನ, ರೈತರು ಮತ್ತು ಅರಣ್ಯವಾಸಿಗಳ ಸಂಘಟನೆ ಆರಂಭವಾಗಿ, ಗಣಿಗಾರಿಕೆ ವಿರುದ್ಧ ಹೋರಾಟ ಗಟ್ಟಿಗೊಳ್ಳುತ್ತಾ ಸಾಗಿತು.

೦೩. ಹೋರಾಟದ ಭಾಗವಾಗಿ ಹಲವಾರು ಜಿಲ್ಲೆಗಳಲ್ಲಿ ಸಮಾವೇಶಗಳನ್ನು ಮಾಡುವ ಮುಖಾಂತರ ಜನಜಾಗೃತಿ ಮತ್ತು ಸರ್ಕಾರದ ಮಟ್ಟದಲ್ಲಿ ಚರ್ಚೆಯಾಗುವಂತೆ ಮಾಡಲಾಯಿತು.

೦೪. ಸುಪ್ರೀಂಕೋರ್ಟ ಮೆಟ್ಟಿಲನ್ನೇರಿ, ಗಣಿಗಾರಿಕೆಗೆ ತಡೆಯನ್ನೊಡ್ಡುವಂತೆ, ಹೋರಾಟಗಳನ್ನು ತೀವ್ರಗೊಳಿಸಲಾಯಿತು.

೦೫. ಅಂತಿಮವಾಗಿ ಸುಪ್ರೀಂ ಕೋರ್ಟ, ೨೦೦೫ ರ ವೇಳೆಗೆ ಕಂಪನಿ ತನ್ನೆಲ್ಲ ಕಾರ್ಯ ಸ್ಥಗಿತಗೊಳಿಸ ಬೇಕೆಂದು, ಜನಪರ ಹೋರಾಟಕ್ಕೆ ಬೆಂಬಲ ನೀಡಿತು.

೦೬. ಜನಪರ ಹೋರಾಟಕ್ಕೆ ಸಂದ ಜಯವಾಗಿ, ಕುದುರೆಮುಖ ಪರಿಸರದ ವನ್ಯಜೀವಿ, ನದಿ ಮೂಲಗಳು ಮತ್ತು ನದಿ ಪಾತ್ರದ ಜನರಿಗೆ ಮೊದಲಿನ ಪರಿಸರ ಮರುಕಳಿಸುವ ಹಾಗೂ ನದಿ ಮೂಲಗಳು ಉಳಿದುಕೊಳ್ಳುವ ಸ್ಥಿತಿ ಹೊದಗಿಬಂತು.

ಕುದುರೆಮುಖ ರಾಷ್ಟ್ರೀಯ ಉದ್ಯಾನವನವೆಂದು ೧೯೮೭ ರಲ್ಲಿ 'ಕರ್ನಾಟಕ ರಾಜ್ಯ ಪತ್ರ'ದಲ್ಲಿ ಘೋಷಣೆಯಾಯಿತು. ೧೯೮೭ ರಿಂದ ೧೯೯೮ ರ ವೇಳೆಯವರೆಗೂ ಸ್ಥಳೀಯ ಜನರಿಗೆ ಯಾವುದೇ ಸೂಚನೆ ಹಾಗೂ ನೋಟೀಸ್‌ಗಳನ್ನು ನೀಡದೆ ಸರ್ಕಾರ ಸಮ್ಮನಿದ್ದು, ಏಕಾಏಕಿ ೧೯೯೮ರ ವೇಳೆಯಲ್ಲಿ ರಾಷ್ಟ್ರೀಯ ಉದ್ಯಾನವನದ ಉದ್ಘೋಷಣೆ ಹೊರಡಿಸಿ, ಸಾರ್ವಜನಿಕರಿಂದ ಹಕ್ಕುಗಳನ್ನು ಹಾಗೂ ಇಚ್ಚೆ ವ್ಯಕ್ತಪಡಿಸುವಿಕೆಗೆ ಸೂಚನಾ ಪತ್ರವನ್ನು ಹೊರಡಿಸುತ್ತದೆ. ಈ ಸಮಯದಲ್ಲಿಯೇ ಮರು ಆರಂಭವಾದದ್ದೇ, ರಾಷ್ಟ್ರೀಯ ಉದ್ಯಾನವನ ರಚನೆಯನ್ನು ವಿರೋಧಿಸಿ ಹೊರಟ ಹೋರಾಟಗಳು. 'ಕುದುರೆಮುಖ ರಾಷ್ಟ್ರೀಯ ಉದ್ಯಾನವನ' ವಿರೋಧಿಸಿ ಅನೇಕ ಸಂಘಟನೆಗಳು ಹೋರಾಟಕ್ಕೆ ಇಳಿಯುತ್ತವೆ ಮತ್ತು ಉಪವಿಭಾಗಾಧಿಕಾರಿಗಳವರ ಗಮನಕ್ಕೆ ಉದ್ಯಾನವನದ ರಚನೆ ಕುರಿತಂತೆ ಗಿರಿಜನ, ರೈತರು ಮತ್ತು ಅರಣ್ಯವಾಸಿಗಳೆಲ್ಲರು ವಿರೋಧವನ್ನು ವ್ಯಕ್ತಪಡಿಸಿ ಮನವಿಯನ್ನು ಸಲ್ಲಿಸುತ್ತಾರೆ. ಆದರೂ ಸರ್ಕಾರವು ೨೦೦೧ ಜೂನ್ ೧೮ರಂದು ನಾಲ್ಕು ರಕ್ಷಿತಾರಣ್ಯಗಳನ್ನು ಒಳಗೊಂಡಂತೆ, ಸಾರ್ವಜನಿಕರಿಂದ ಯಾವುದೇ ಸೆಟಲ್ಮೆಂಟ್ ಆಫ್ ಕ್ಲೇಮ್ಸ್ ಗಳನ್ನು ಪಡೆಯದೆ ವನ್ಯಜೀವಿ ಕಾಯ್ದೆಯ ೨೪ (೧) ವಿಧಿಯನ್ನು ಉಲ್ಲಂಘಿಸಿ, ರೆವಿನ್ಯೂ ಎನ್‌ಕ್ಲೋಷರ್‌ಗಳನ್ನು ಒಳಗೊಂಡಂತೆ, ಸಮರ್ಪಕವಾದ ಗಡಿಗಳನ್ನು ಗುರ್ತಿಸದೆ ರಾಷ್ಟ್ರೀಯ ಉದ್ಯಾನವನವನ್ನು ಘೋಷಣೆ ಮಾಡುತ್ತಾರೆ.

ರಾಷ್ಟ್ರೀಯ ಉದ್ಯಾನವನಕ್ಕೆ ವಿರೋಧ ಏಕೆ? ೧) ಮೂಲ ನಿವಾಸಿಗಳಾಗಿರುವ ಗಿರಿಜನರನ್ನು ಎತ್ತಂಗಡಿ ಮಾಡಲಾಗುತ್ತದೆ. ೨) ಇಲ್ಲಿಯ ಅಮೂಲ್ಯವಾದ ಜೀವ ವೈವಿಧ್ಯತೆಯ ಲೂಟಿಗೆ ಅವಕಾಶ ಮಾಡಿಕೊಡುತ್ತದೆ. ೩) ಪ್ರವಾಸೋಧ್ಯಮ ಹೆಸರಲ್ಲಿ ರೆಸಾರ್ಟ ಸಂಸ್ಕೃತಿ ಆರಂಭವಾಗುತ್ತದೆ ಮತ್ತು ೪) ಔಷಧಿ ಸಸ್ಯಗಳ ಮೇಲಿನ ಹಕ್ಕನ್ನು ಜನರು ಕಳೆದುಕೊಳ್ಳುತ್ತಾರೆ[೩]. ಎಂಬ ನಿಟ್ಟಿನಲ್ಲಿ ವಿರೋಧಗಳು ಆರಂಭವಾದವು. ಅಂದು ಹೋರಾಟದ ಭಾಗವಾಗಿ ಅನೇಕ ಸಂಘಟನೆಗಳು ಉದ್ಯಾನವನ ರಚನೆ ವಿರುದ್ಧ ಮನವಿಗಳನ್ನು ಮತ್ತು ಹೋರಾಟಗಳನ್ನು ಮುಂದುವರೆಸಿದ್ದವು. ಅವುಗಳಲ್ಲಿ –

ಚಿಕ್ಕಮಗಳೂರು ಜಿಲ್ಲಾ ಆದಿವಾಸಿ ಗಿರಿಜನ ಹಿತರಕ್ಷಣಾ ಸಮಿತಿ ಶೃಂಗೇರಿ, ಕುದುರೆಮುಖ ಗಿರಿಜನ–ರೈತ–ಸಂತ್ರಸ್ಥರ ಹೋರಾಟ ಸಮಿತಿ, ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಸಂತ್ರಸ್ಥರ ಸಮಿತಿ, ಕುದುರೆಮುಖ ರೈತರ ಮತ್ತು ಪುನರ್ವಸತಿಗರ ಹಿತರಕ್ಷಣಾ ಸಮಿತಿ, ಗಿರಿಜನರ ಕ್ಷೆಮಾಭಿವೃದ್ಧಿ ಯುವಕ ಸಂಘ, ನೆಮ್ಮಾರು., ಕರ್ನಾಟಕ ವಿಮೋಚನಾ ರಂಗ. ರಾಜ್ಯ ಸಮಿತಿ., ಶ್ರೀ ದುರ್ಗಾ ಪರಮೇಶ್ವರಿ ಯುವ ಸಂಘ. ಮೆಣಸಿನಹಾಡ್ಯ. ಮತ್ತು ಶೃಂಗೇರಿ ತಾಲೂಕಿನ ಲೋಕಶಕ್ತಿ ಪಕ್ಷ.[೪] ಉಲ್ಲೇಖಿತ ಸಂಘಗಳೆಲ್ಲವೂ ಕೂಡ ಗಿರಿಜನ ಮತ್ತು ರೈತರ ಹಾಗೂ ಅರಣ್ಯವಾಸಿಗಳನ್ನು ಒಳಗೊಂಡಂತೆ ಪ್ರಜಾಸತ್ತಾತ್ಮಕ ಹಾದಿಯಲ್ಲಿ ಹೋರಾಟ ಮಾಡುತ್ತಾ ಸಾಗುತ್ತಿದ್ದವು. ಈ ವೇಳೆಯಲ್ಲಿ ಕರ್ನಾಟಕ ವಿಮೋಚನಾ ರಂಗ ಸಂಘಟನೆಯಲ್ಲಿ ಮಾವೋ, ಲೆನಿನ್ ಮತ್ತು ಮಾರ್ಕ್ಸ ಸಿದ್ಧಾಂತದ ಒಲವಿದ್ದ ಕೆಲವರು ನಕ್ಸಲ್ ಚಟುವಟಿಕೆಗಳ ಹಾದಿಯನ್ನು ಒಪ್ಪಿಕೊಂಡು ತಿರುವುಗಳನ್ನು ಪಡೆದುಕೊಂಡರು. ಈ ಹಂತದಿಂದ ಆರಂಭವಾದದ್ದೇ ಕುದುರೆಮುಖ ಇತಹಾಸದಲ್ಲಿನ ಅಚ್ಚಳಿಯದ ಪ್ರಸಂಗಗಳು. ಕರ್ನಾಟಕ ರಾಜ್ಯದ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಗಿರಿಜನರ, ರೈತರ ಮತ್ತು ಇತರೆ ಅರಣ್ಯವಾಸಿಗಳ ಸಮಸ್ಯೆಗಳನ್ನು ಮುಂದೊಡ್ಡಿಕೊಂಡು ನಕ್ಸಲ್‌ವಾದದಲ್ಲಿ ನಂಬಿಕೆ ಇರುವ ಕೆಲವು ಯುವಕರ ಗುಂಪೊಂದು ಉದ್ಯಾನವನದ ನಿತ್ಯಹರಿದ್ವರ್ಣ ಕಾಡುಗಳ ಮಧ್ಯೆ ಭೂಗತ ಕಾರ್ಯವನ್ನು ಮಾಡುವುದರೊಂದಿಗೆ ನಕ್ಸಲ್ ಚಟುವಟಿಕೆಯನ್ನು ಆರಂಭಗೊಳಿಸಿತು. ಈ ಕಾರ್ಯ ಚಟುವಟಿಕೆಗಳ ಬೆಳವಣಿಗೆಯಿಂದ ಕರ್ನಾಟಕ ರಾಜ್ಯವೇ ಕಳವಳಪಡಬೇಕಾದಂತಹ ಸ್ಥಿತಿಗೆ ಬಂದಿತು. ಸರಿಯಾದ ಕ್ರಮದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳದೆ ಅತಂತ್ರ ಸ್ಥಿತಿಯತ್ತ ಈ ಭಾಗದ ಜನರು ವಾಲುವಂತೆ ಸರ್ಕಾರ ಮಾಡಿತು. ಪ್ರಸ್ತುತ ಅಧ್ಯಾಯದಲ್ಲಿ ಸಂಶೋಧನಾ ಭಾಗವಾಗಿ, ಈ ಹಿಂದೆ ನಕ್ಸಲ್ ಹೋರಾಟದಲ್ಲಿದ್ದು, ಈಗ ನಾಗರೀಕ ಸಮುದಾಯದ ಮುಂದೆ ಶರಣಾಗತಿಯಾದ ಶ್ರೀ ಸಿರಿಮನೆ ನಾಗರಾಜ ಮತ್ತು ಶ್ರೀ ನೀಲಗುಳಿ ಪದ್ಮನಾಭ ಅವರನ್ನು ಸಂದರ್ಶಿಸಿ, ಸಂಗ್ರಹಿಸಿದ ಹೋರಾಟದ ಅಂಶಗಳನ್ನು ಈ ಭಾಗಕ್ಕೆ ಉಲ್ಲೇಖಿಸಲಾಗಿದೆ. ಅದರಂತೆ, ಮುಖ್ಯವಾಹಿನಿಗೆ ಬಂದಿರುವ ಇವರ ಹೋರಾಟಗಳಲ್ಲಿ ಕಂಡ ಅನುಭವದ ಸಾರವನ್ನು ಇಲ್ಲಿ ತಿಳಿಸಲಾಗಿದೆ.

ಕುದುರೆಮುಖ ವ್ಯಾಪ್ತಿಗೆ ಸಂಬಂಧಿಸಿದಂತೆ, ಗಣಿಗಾರಿಕೆಯ ಕಂಪನಿ ವಿರುದ್ಧ 'ತುಂಗ–ಭದ್ರ ನದಿ ಮೂಲ ಉಳಿಸಿ' ಹೋರಾಟದ ಮುಖಾಂತರ 'ಕನಾಟಕ ವಿಮೋಚನಾ ರಂಗ' ದಲ್ಲಿ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ಗುರುತಿಸಿಕೊಳ್ಳಲು ಪ್ರಾರಂಭಿಸಿದೆವು. ಗಣಿಗಾರಿಕೆಯು

ಸ್ಥಗಿತವಾಗುವ ವೇಳೆಗೆ ಈ ವ್ಯಾಪ್ತಿಯಲ್ಲಿ ೧೯೮೭ ರ 'ಕರ್ನಾಟಕ ರಾಜ್ಯ ಪತ್ರದಲ್ಲಿ' ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಘೋಷಣೆಯಾಗಿದ್ದು, ೧೯೯೭ ರ ವರೆಗೂ ಯಾವ ಸೂಚನೆಯನ್ನು ನೀಡದೆ ರಚನೆಗಾಗಿ ಉದ್ಘೋಷಣೆಯನ್ನು ಸರ್ಕಾರವು ಹೊರಡಿಸಿತು. ಈ ಸಂದರ್ಭದಲ್ಲಿ ಜನರನ್ನು ಏಕಾಏಕಿಯಾಗಿ ತಮ್ಮ ಹಕ್ಕುಗಳನ್ನು ಮತ್ತು ತಕರಾರುಗಳನ್ನು ಮಂಡಿಸಲು ಆಹ್ವಾನವಿತ್ತ ಜಿಲ್ಲಾಡಳಿತ ಹಾಗೂ ಸರ್ಕಾರದ ವಿರುದ್ಧ ಸ್ಥಳಿಯವಾಗಿ ಸಂಘಟಿತರಾಗಿದ್ದ, ಹಲವು ಸಂಘಟನೆಗಳು 'ರಾಷ್ಟ್ರೀಯ ಉದ್ಯಾನವನ ರಚನೆ ವಿರುದ್ಧ' ರಚನೆ ಮಾಡಬಾರದಾಗಿ ಮನವಿಯನ್ನು ಸಲ್ಲಿಸಿ ಹೋರಾಟವನ್ನು ಆರಂಭಿಸಿದರು. ಇದಕ್ಕೆ ಕಾರಣವಾಗಿದ್ದು, ೧)ಗಿರಿಜನರೇ ಈ ಪ್ರಾಂತ್ಯದಲ್ಲಿ ಹೆಚ್ಚಾಗಿದ್ದು, ಬಗರ್ ಹುಕುಂ ಸಾಗುವಳಿಯಲ್ಲಿ ೧೯೮೦ ರ ಹಿಂದಿನಿಂದಲೂ ವಾಸ ಮಾಡುತ್ತಾ ಬಂಧಿದ್ದು, ಸಣ್ಣ ಪ್ರಮಾಣದ ರೈತರಾಗಿದ್ದಾರೆ. ೨) ಇತರೆ ಪಾರಂಪರಿಕ ಅರಣ್ಯವಾಸಿಗಳು ಸಹ ಗಿರಿಜನರಂತೆ ೧೯೮೦ ಕ್ಕೂ ಮೊದಲಿನಿಂದಲೂ ಇಲ್ಲಿಯೇ ನೆಲೆ ಕಂಡುಕೊಂಡಿದ್ದು, ಸಣ್ಣ ಮತ್ತು ದೊಡ್ಡ ಪ್ರಮಾಣದ ರೈತರಾಗಿದ್ದಾರೆ. ೩) ಆದಿ ಕಾಲದಿಂದಲೂ ಇಲ್ಲಿಯೇ ವಾಸ ಮಾಡಿಕೊಂಡು ಬಂಧಿರುವ ಆದಿವಾಸಿ ಗಿರಿಜನರ ನಾಡು, ಸಂಸ್ಕೃತಿ, ಕಲೆಗಳು, ಭಾಷೆ, ಸಾಮಾಜಿಕತೆಗಳು ಉಳಿದು ಮುಂದಿನ ಪೀಳಿಗೆಯವರೆಗೂ ಪ್ರವಹಿಸಬೇಕು ಎಂಬ ಉದ್ದೇಶ. ೪) ಭೂ ಹಿಡುವಳಿಗಳು ದೊಡ್ಡ ಪ್ರಮಾಣದಲ್ಲಿ ಒತ್ತುವರಿಯಾಗಿ ಕೆಲವೇ ಕೆಲವು ಜಮೀನ್ದಾರರುಗಳ ಕಪಿ ಮುಷ್ಟಿಯಲ್ಲಿದ್ದು, ಅದನ್ನು ತೆರವುಗೊಳಿಸಿದರೆ, ಭೂ ಹಿಡುವಳಿ ರಹಿತಾಗಿರುವ ದಲಿತ, ಆದಿವಾಸಿ, ಕೂಲಿ ಕಾರ್ಮಿಕರಿಗೆ ಹಂಚಿದ್ದಲ್ಲಿ ಅವರು ಕೂಡ ನೆಲೆ ಕಂಡುಕೊಂಡು ಸಾಧ್ಯವಾದಷ್ಟು ಮಟ್ಟಿಗೆ ಉತ್ತಮ ಜೀವನ ನಡೆಸುವರು ಎಂಬ ಉದ್ದೇಶ. ೫) ಉದ್ಯಾನವನ ವ್ಯಾಪ್ತಿಯಿಂದ ಆದಿವಾಸಿ ಗಿರಿಜನರನ್ನು, ಭೂ ರಹಿತರನ್ನು, ಸಣ್ಣ ಪ್ರಮಾಣದ ರೈತರನ್ನು ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯ ನಿಟ್ಟಿನಲ್ಲಿ ಎತ್ತಂಗಡಿ ಇಲ್ಲವೆ ಒಕ್ಕಲೆಬ್ಬಿಸಿ ಅತಂತ್ರ ಸ್ಥಿತಿಗೆ ತಂದೊಡ್ಡುತ್ತಾರೆ ಎಂಬ ಉದ್ದೇಶ. ೬) ಅರಣ್ಯ ಪ್ರದೇಶಗಳಲ್ಲಿ ವಾಸವಾಗಿರುವ ಗಿರಿಜನ, ರೈತರು ಮತ್ತು ಮುಗ್ಧರಿಂದ ಅರಣ್ಯ ಇಲಾಖೆಯವರು ಹಪ್ತ ವಸೂಲಿ ಮಾಡಿಕೊಂಡು ಮೋಜು ಮಾಡುವಿಕೆಯನ್ನು ತಡೆಗಟ್ಟುವ ಉದ್ದೇಶ. ೭) ಪರಿಸರ ಪ್ರವಾಸಿತಾಣಗಳ ಹೆಸರಲ್ಲಿ ರೆಸಾರ್ಟ ದಂದೆಗಳನ್ನು ಸ್ಥಾಪಿಸಿ ಮುಗ್ಧ ಆದಿವಾಸಿಗಳನ್ನು ಸ್ವೇಚ್ಛಾಚಾರವಾಗಿ ಬಳಸಿಕೊಂಡು ಅವರ ಜೀವನವನ್ನು ನಾಶ ಮಾಡುವವರನ್ನು ತಡೆಯುವ ಅಂದಿನ ವಾಸ್ತವದ ಉದ್ದೇಶಗಳಿಂದ ನಕ್ಸಲ್ ಗುಂಪಿನೊಂದಿಗೆ ಹೋರಾಟಕ್ಕೆ ಇಳಿದರು. ಈ ಮೇಲಿನ ಉದ್ದೇಶಗಳಿಗನುಸಾರವಾಗಿ ಪ್ರಜಾಸತ್ತಾತ್ಮಕ ಹೋರಾಟದಲ್ಲಿಯೇ ಮುಂದುವರೆದಿದ್ದರೆ ಯಾವ ಪ್ರಶ್ನೆಯೂ ಉದ್ಭವಿಸುತ್ತಿರಲಿಲ್ಲ, ಬದಲಾಗಿ 'ಶಸ್ತ್ರಗಳನ್ನು' ಹಿಡಿದು ಸಮಗ್ರ ಹೋರಾಟದ ಮುಖಾಂತರ ನ್ಯಾಯ ಒದಗಿಸುತ್ತೇವೆ ಎಂಬ ನಿಟ್ಟಿನಲ್ಲಿ ಹೋದ ಹಾದಿಯು, ಪ್ರಭುತ್ವದ ಮುಂದೆ ಹೆಚ್ಚು ದಿನ ಬದುಕುಳಿಯಲು ಹಾಗೂ ಸರಾಗವಾಗಿ ಸಾಗಲು ಸಾಧ್ಯವಾಗದಾಯಿತು.

ಜನತಾ ನ್ಯಾಯಾಲಯ: ಯಾವುದೇ ಸಮಸ್ಯೆಗಳ ಅನ್ವಯ ಸೂಕ್ಷ್ಮವಾಗಿ ಆಲೋಚಿಸಿ, ಅದರಿಂದಾಗಬಹುದಾದ ಸಮಸ್ಯೆಗಳು ಮತ್ತು ಪರಿಹಾರಗಳನ್ನು ಕೂಲಂಕಷವಾಗಿ ಚರ್ಚಿಸಿ, ನಮ್ಮ ನಮ್ಮಲ್ಲಿಯೇ ಮತದಾನ ಮಾಡಿಕೊಳ್ಳುವ ಮುಖಾಂತರ ಧನಾತ್ಮಕವಾಗಿ ರೂಪುಗೊಳ್ಳುತ್ತಿದ್ದ

ನಿಲುವುಗಳ ಮೇಲೆ ಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಈ ಮುಖೇನ ಸಭೆಯಲ್ಲಿ ಅಂತಿಮ ತೀರ್ಮಾನದ ಬಳಿಕವಷ್ಟೆ ಕಾರ್ಯ ಸಾಧನೆಗೆ ಮುಂದಡಿ ಇಡುತ್ತಿದ್ದರು.

ನಕ್ಸಲ್ ನಿಗ್ರಹದಳ: ನಕ್ಸಲ್ ಚಟುವಟಿಕೆಯನ್ನು ಈ ಭಾಗದಲ್ಲಿ ನಿಯಂತ್ರಣಗೊಳಿಸಲು ಸರ್ಕಾರದವತಿಯಿಂದ ನಕ್ಸಲ್ ನಿಗ್ರಹ ಪಡೆಯನ್ನು ಈ ವ್ಯಾಪ್ತಿಯಲ್ಲಿ ಸ್ಥಾಪಿಸಿದರು. ನಕ್ಸಲ್ ಚಟುವಟಿಕೆಯ ಆರಂಭದ ಕಾಲದಲ್ಲಿ ಶಸ್ತ್ರಗಳನ್ನು ಹಿಡಿದು ಮೆಣಸಿನಹಾಡ್ಯದಲ್ಲಿ ಪ್ರದರ್ಶನ ನೀಡುತ್ತಿರುವಾಗ ಆದಿವಾಸಿ ಮಹಿಳೆ ಈರಮ್ಮನ ತೋಳುಗಳಿಗೆ ಅನಿಶ್ಚಿತವಾಗಿ ಹಾರಿ ಗುಂಡು ತಗುಲಿತು. ಈ ಸಂದರ್ಭದಿಂದ ಪೋಲಿಸ್ ಇಲಾಖೆ ಎಚ್ಚೆತ್ತುಕೊಂಡು, ಪ್ರಭುತ್ವಕ್ಕೆ ವಿರುದ್ಧವಾಗಿರುವ ಸಶಸ್ತ್ರ ನಕ್ಸಲ್ ಪಡೆಯನ್ನು ನಿಗ್ರಹಗೊಳಿಸುವ ಉದ್ದೇಶದಿಂದ ನಿಗ್ರಹ ದಳದ ಕಾರ್ಯಾರಂಭವಾಯಿತು. ನಕ್ಸಲ್ ನಿಗ್ರಹ ದಳ ಕಾರ್ಯಚರಣೆ ಆರಂಭದಿಂದ ಆದಿವಾಸಿ ಗಿರಿಜನರು, ರೈತರು, ಕರ್ನಾಟಕ ವಿಮೋಚನ ರಂಗದ ಹಲವರು ಸೇರಿದಂತೆ ಎಲ್ಲರ ಮೇಲು ನಕ್ಸಲರಿಗೆ ಸಹಾಯವನ್ನು ಮಾಡುತ್ತಿರುವವರು ಮತ್ತು ಸಭೆ ಸೇರಿ ಕರ ಪತ್ರಗಳನ್ನು ಹಂಚಿ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ ಎಂಬ ಗುಮಾನೆಯಲ್ಲಿ ಹಲವಾರು ಕೇಸುಗಳನ್ನು ಹಾಕಿ ನರಳುವಂತೆ ಮಾಡಿದರು. ಇದೇ ಸಂದರ್ಭದಲ್ಲಿ ಕಾರ್ಕಳದ ಈದು ಸ್ಥಳದಲ್ಲಿ ನವಂಬರ್ ೧೩, ೨೦೦೩ ರಲ್ಲಿ ಪಾರ್ವತಿ ಮತ್ತು ಹಜೀಮ ಅವರನ್ನು ಎನ್‌ಕೌಂಟರ್ ಹೆಸರಲ್ಲಿ ಹತ್ಯೆ ಮಾಡಲಾಯಿತು. ತದನಂತರ ಸಾಲು ಸಾಲಾಗಿ ಎನ್‌ಕೌಂಟರ್‌ಗಳಲ್ಲಿ ಹಲವು ಮುಖ್ಯ ನಾಯಕರೆಲ್ಲ ಹತ್ಯೆಯಾಗಿ ಹೋದರು. ನಕ್ಸಲ್ ನಿಗ್ರಹದಳದವರು ಈ ವ್ಯಾಪ್ತಿಯಲ್ಲಿ ಯಾವುದೇ ಪ್ರದೇಶಗಳಲ್ಲಿ ಹೋದರು ಸರಾಗವಾಗಿ ಬರುವಂತಹ ರೀತಿಯಲ್ಲಿ ಕರತಲಮಲಕವಾಗಿ ತರಬೇತಿಯನ್ನು ಹೊಂದಿದ್ದು ಮಾತ್ರವಲ್ಲದೆ, ಸುತ್ತಲು ಇರುವ ಜನ ವಾಸಿತ ಪ್ರದೇಶಗಳಲ್ಲಿ ಪೋಲಿಸ್ ಮಾಹಿತಿದಾರರನ್ನು ನೇಮಿಸಿ, ಯಾರಾದರು ನಕ್ಸಲ್ ಅನುಮಾನದ ವ್ಯಕ್ತಿ ಪ್ರತ್ಯಕ್ಷನಾದರೆ, ಊರಿಗೆ ಹೊಸಬರು ಬಂದರೆ, ಮಾಹಿತಿ ನೀಡಿ ಅವರಿಂದ ಅರ್ದ ತಾಸಿನ ವೇಳೆಯಲ್ಲಿ ಸ್ಥಳಕ್ಕೆ ತಲುಪಿ ತನಿಖೆ ನಡೆಸುವಷ್ಟು ವೇಗವನ್ನು ಪಡೆದುಕೊಂಡಿದ್ದರು ಮತ್ತು ಆ ಯುಕ್ತಿಯ ಸೌಲಭ್ಯವನ್ನು ಹೊಂದಿದ್ದರು.

ಚಟುವಟಿಕೆ ಸ್ಥಗಿತತೆ: ನಕ್ಸಲ್ ಚಟುವಟಿಕೆಗಳು ಆರಂಭವಾಗಿ ನೆಲೆಯೂರುವ ವೇಳೆಗೆ, ನಕ್ಸಲ್ ನಿಗ್ರಹ ಪಡೆ ಮತ್ತು ಪೋಲಿಸ್ ಕಾರ್ಯಚರಣೆಯಿಂದಾಗಿ, ಮುಗ್ಧ ಆದಿವಾಸಿ ಗಿರಿಜನ, ರೈತರು ಮತ್ತು ಇತರೆ ಕೂಲಿಕಾರರು, ಅರಣ್ಯವಾಸಿಗಳ ಮೇಲೆ ಇಲ್ಲ ಸಲ್ಲದ ಆರೋಪಗಳನ್ನು ಒಡ್ಡಿ, ಕೇಸ್ ದಾಖಲೆ ಮಾಡುವುದರೊಂದಿಗೆ ಅವರನ್ನು ಕೋರ್ಟ ಮೆಟ್ಟಿಲನ್ನು ಏರುವ ಹಾಗೆ ಕಿರುಕುಳ, ಹಿಂಸೆಯನ್ನು ನೀಡಿದರು. ಎನ್‌ಕೌಂಟರ್ ಹೆಸರಲ್ಲಿ ಅನೇಕ ಮುಗ್ಧರನ್ನು, ನಾಯಕರನ್ನು ಹತ್ಯೆಗಯ್ಯಲಾಯಿತು. ಈ ಅವ್ಯವಸ್ಥೆಗಳನ್ನು ಅವಲೋಕಿಸಿ ನಮ್ಮಲ್ಲಿ ಭಿನ್ನವಾದ ಅಭಿಪ್ರಾಯಗಳು ಮೂಡಿ ಕೆಲವರು ಮುಖ್ಯವಾಹಿನಿಗೆ ಸೇರ್ಪಡೆಯಾದೆವು ಮತ್ತು ಕೆಲವರು ಕೋರ್ಟಗಳಲ್ಲಿ ಕೇಸುಗಳನ್ನು ಎದುರಿಸಿ ಜೈಲು ಸೇರಬೇಕಾಯಿತು. ಮುಖ್ಯವಾಹಿನಿಗೆ ಬಂದಾಗ ನಾಗರೀಕ ಸಮಾಜದಿಂದ ಮುಕ್ತ ಮನಸ್ಸಿನಿಂದ ಸ್ವಾಗತ ದೊರೆಯಿತು. ಕೆಲವರಿಗೆ ನಕ್ಸಲ್ ಪ್ಯಾಕೇಜ್ ಫಲಾನುಭವಿಗಳೆಂದು ಗುರ್ತಿಸಲು ಸರ್ಕಾರ ಕೆಲವು ಸವಲತ್ತುಗಳ ಪ್ಯಾಕೇಜ್ ನೀಡಿದರೂ

ಇಂದಿಗೂ ಅದನ್ನು ಯಾರೂ ಸ್ವೀಕರಿಸದಿರುವುದು. ನಮ್ಮ ನಿಲುವುಗಳಿಗೆ ಹಾಗೂ ಸ್ವಾಭಿಮಾನಕ್ಕೆ ತಂದ ಜಯವಾಗಿದೆ. ಈ ಪ್ರಕಾರವಾಗಿ ಪ್ರಭುತ್ವದ ಮುಂದೆ ಬಹಳ ಕಾಲಗಳವರೆಗೂ ಚಟುವಟಿಕೆ ಸಾಗಲು ಅಸಾಧ್ಯವಾಯಿತು. ವಾಸ್ತವದಲ್ಲಿ ನಕ್ಸಲ್ ಹೆಸರಲ್ಲಿ ಅನೇಕ ಜನರು ತಮ್ಮ ಜೇಬುಗಳನ್ನು ತುಂಬಿಸಿಕೊಂಡಿದ್ದಾರೆ ಹೊರತು. ಸರ್ಕಾರದಿಂದ ನಕ್ಸಲ್ ಪ್ಯಾಕೇಜ್ ಹೆಸರಲ್ಲಿ ನೀಡಿದ ಯಾವ ಯೋಜನೆಯು ಸರಿಯಾದ ಕ್ರಮದಲ್ಲಿ ಅನುಷ್ಠಾನಗೊಂಡಿಲ್ಲ ಎಂಬುದಕ್ಕೆ ಉದ್ಯಾನವನದ ಒಳಭಾಗದಲ್ಲಿ ಅಲ್ಲಲ್ಲಿ ಮಾಡಿರುವ ಅರ್ಧ ಕಾಂಕ್ರೀಟ್ ರಸ್ತೆಗಳೇ ಸಾಕ್ಷಿಗಳಾಗಿವೆ. (ಶ್ರೀ ಸಿರಿಮನೆ ನಾಗರಾಜು, ೨೦೧೮).

ಗಿರಿಜನ ಮತ್ತು ರೈತರಲ್ಲಿ ಸರ್ಕಾರದ ಮೇಲೆ ವಿಶ್ವಾಸದ ಕೊರತೆ: ೨೦೦೪-೦೫ ರಲ್ಲಿ ನಕ್ಸಲ್ ಗುಂಪುಗಳು ಈ ಪ್ರಾಂತ್ಯಕ್ಕೆ ಬಂದು ಸಫಲರಾಗುವ ಸನ್ನಿವೇಶದಲ್ಲಿ ಸರ್ಕಾರವು ಮೇಲಿಂದ ಮೇಲೆ ಪ್ಯಾಕೇಜ್‌ಗಳನ್ನು ಮತ್ತು ಯಾರನ್ನು ಒಕ್ಕಲೆಬ್ಬಿಸುವದಿಲ್ಲ ಎಂದು ಸಾರಿ ಹೇಳಿದರು, ಜನರು ಸಂಶಯದಿಂದ ನೋಡುವ ಪರಿಪಾಠ ಬೆಳೆಯಿತು. ಅದಕ್ಕೆ ಪೂರಕವಾದ ಉದಾಹರಣೆಯಂದರೆ,

೦೧. ಸಮಸ್ಯೆ ಉಲ್ಬಣಗೊಂಡ ಕಳೆದ ವರ್ಷಾಂತ್ಯದಲ್ಲಿ ೬೦ ಕೋಟಿ ರೂ.ಗಳ ಅಭಿವೃದ್ಧಿ/ ಪುನರ್ವಸತಿ ಪ್ಯಾಕೇಜ್ ತಯಾರಿಸಿ ಅದರ ಅನುಷ್ಠಾನಕ್ಕೆ ಹಿರಿಯ ಅಧಿಕಾರಿ ಶ್ರೀ ಚಿರಂಜೀವಿ ಸಿಂಗ್ ನೇತೃತ್ವದ ಸಮಿತಿ ರಚಿಸಿರುವುದಾಗಿ ಸರ್ಕಾರ ಪ್ರಕಟಿಸಿರುತ್ತದೆ. ಆದರೆ, ಅದರ ಅನುಷ್ಠಾನದ ಚಿನ್ಹೆಯೇ ಕಾಣದಾಗಿದ್ದು.

೦೨. ನಂತರ, ೨೦೦೫ ರ ಫೆಬ್ರವರಿಯಲ್ಲಿ ಸ್ವ-ಇಚ್ಛೆಯಿಂದ , ಅಭಯಾರಣ್ಯವನ್ನು ತೆರವು ಮಾಡಲು ಒಪ್ಪಿರುವ ಗಿರಿಜನ ಕುಟುಂಬಗಳಿಗೆ ಈ ಹಿಂದೆ ಕೈಗೊಂಡ 'ಭದ್ರಾ ಪುನರ್ವಸತಿ' ರೀತಿಯಲ್ಲಿ ಪುನರ್ವಸತಿಕಲ್ಪಿಸುವುದಾಗಿ ಸರ್ಕಾರ ತಿಳಿಸಿತ್ತು. ಈ ರೀತಿ ಸ್ವ ಇಚ್ಛೆಯಿಂದ ಅಭಯಾರಣ್ಯ ಬಿಡಲು ೨೧೧ ಕುಟುಂಬಗಳು ಒಪ್ಪಿದ್ದು, ೨೧ ಕೋಟಿ ರೂಪಾಯಿಯ ಪ್ಯಾಕೇಜ್ ಸಿದ್ಧಪಡಿಸಿರುವುದಾಗಿ ಸರ್ಕಾರ ಮತ್ತೆ ಘೋಷಿಸಿರುತ್ತದೆ.

೦೩. ಈ ಪ್ರದೇಶದ ಅಭಯಾರಣ್ಯ ವ್ಯಾಪ್ತಿಯುನ್ನು ೧.೧೧ ಲಕ್ಷ ಎಕರೆಗೆ ಇಳಿಸುವಂತೆ ಒಂದು ಮನವಿಯನ್ನು ಕೇಂದ್ರ ಸರ್ಕಾರ ಮತ್ತು ಸುಪ್ರೀಂ ಕೋರ್ಟ‌ಗೆ ಸಲ್ಲಿಸುವುದಾಗಿ, ಹಾಗೆ ಈ ಹೆಚ್ಚುವರಿ ಭೂಮಿಯ ಖಾತೆಯನ್ನು ರೈತರು ಮತ್ತು ಗಿರಿಜನರಿಗೆ ನೀಡುವುದಾಗಿ ತಿಳಿಸಲಾಗಿದೆ. ಆದರೆ ಸದ್ಯದ ಬಿಗಿ ಅರಣ್ಯ ನೀತಿ ಮತ್ತು ಸುಪ್ರೀಂ ಕಟ್ಟಾಜ್ಞೆಯ ಹಿನ್ನೆಲೆಯಲ್ಲಿ ಇವುಗಳು ಎಷ್ಟರ ಮಟ್ಟಿಗೆ ಫಲಕಾರಿಯಾಗಬಹುದೆಂಬುದೇ ದೊಡ್ಡ ಪ್ರಶ್ನೆಯಾಗಿ ಸಂಭವಿಸಿದೆ (ಕಮ್ಮರಡಿ, ೨೦೦೫)[೫].

ಈ ಮೇಲಿನ ಅಂಶಗಳನ್ನು ಪರಿಗಣಿಸಿದರೆ, ಸರ್ಕಾರವು ಕಾನೂನು ಮತ್ತು ನೀತಿನಿರೂಪಣ ವಿಷಯದಲ್ಲಿ ಗೊಂದಲಗಳನ್ನು ಸೃಷ್ಟಿಸಿಕೊಂಡು ಒಂದಕ್ಕೊಂದು ಸಮಂಜಸವಲ್ಲದ ಹೇಳಿಕೆ ಮತ್ತು ನೀತಿಗಳನ್ನು ರೂಪಿಸಿ ಗಿರಿಜನ, ರೈತರು ಮತ್ತು ಇತರೆ ಅರಣ್ಯವಾಸಿಗಳನ್ನು ಸಾಕಷ್ಟು ಗೊಂದಲಕ್ಕೀಡಾಗುವಂತೆ ಮಾಡಿದೆ.

ನಕ್ಸಲೀಯ ಚಟುವಟಿಕೆಯ ಪರಿಣಾಮಗಳು

೦೧. ಸರ್ಕಾರದ ದ್ವಂದ್ವಮಯವಾದ ನೀತಿಗಳು ಆಧಾರರಹಿತವಾಗಿ ಘೋಷಣೆಗೊಳ್ಳ ತೊಡಗಿದವು.

೦೨. ನಕ್ಸಲ್ ನಿಗ್ರಹ ದಳದವರ ಪ್ರವೇಶ, ಆದಿವಾಸಿ ಗಿರಿಜನ, ರೈತರು ಮತ್ತು ಇತರೆ ಅರಣ್ಯವಾಸಿಗಳ ಮೇಲೆ ಕೇಸುಗಳನ್ನು ಹಾಕಲಾಯಿತು ಅಲ್ಲದೆ ಕೋರ್ಟಗಳಿಗೆ ಅಲೆಯುವ ಪರಿಸ್ಥಿತಿಯನ್ನು ಉಂಟುಮಾಡಲಾಯಿತು.

೦೩. ಮೇಲ್ಜಾತಿಯ ರೈತರ ಮೇಲೆ ಭೂ ಮಾಲಿಕರು ಎಂಬ ಹಣೆ ಪಟ್ಟಿ ಕಟ್ಟಿ ಒತ್ತಡ ಹೇರಿ ಬೆದರಿಸಿ ಹಣ ವಸೂಲಿ ಮಾಡುತ್ತಿದ್ದರು.

೦೪. ಶಸ್ತ್ರಗಳನ್ನು ಹಿಡಿದು ಅವುಗಳನ್ನು ತೋರಿಸಿ ಬೆದರಿಸಿ ಊಟವನ್ನು ಕೇಳುತ್ತಿದ್ದರು ಎಂದು ತನಿಖೆಗಳಿಂದ ತಿಳಿದ ಮೇಲೆ ನಿಗ್ರಹ ದಳದವರ ಕಾರ್ಯಚರಣೆಯನ್ನು ಹೆಚ್ಚಿಸಿದರು.

೦೫. ಈ ವ್ಯಾಪ್ತಿಯಲ್ಲಿ ಇರುವ ವಾಸಿತ ಮನೆಗಳಿಗೆ ನೆಂಟರು ಬಂದರೆ ಅವರನ್ನು ಅನುಮಾನದ ದೃಷ್ಟಿಯಲ್ಲಿ ನೋಡುವ ಪರಿಪಾಟಲುಗಳು ಎದುರಾದವು.

೦೬. ಕಾಡುಗಳ ಮಧ್ಯೆ ನಿರ್ಮಿಸಲಾಗಿದ್ದ ಹಲವಾರು ಸೇತುವೆಗಳು ಪೋಲಿಸರು ಬರುವುದಕ್ಕೆ ಸಹಾಯವಾಗುತ್ತವೆಂದು ಅವುಗಳನ್ನು ನಕ್ಸಲರು ನಾಶಪಡಿಸಿದ್ದಾರೆಂದು ವರದಿಗಳಾದವು.

೦೭. ಪೋಲಿಸ್ ಸುಳಿವು ನೀಡಿರುವವರನ್ನು ಗುರುತಿಸಿ ಅವರನ್ನು ತಳಿಸಿದ್ದಾರೆಂದು ಕೆಲವು ಪತ್ರಿಕೆಗಳಲ್ಲಿ ವರದಿಯಾಯಿತು.

೦೮. ಆದಿವಾಸಿ ಗಿರಿಜನರು ಮತ್ತು ಕೆಲವು ರೈತರ ಮಕ್ಕಳು ಈ ಸಿದ್ಧಾಂತವನ್ನು ಒಪ್ಪಿಕೊಂಡು ಸರ್ಕಾರವನ್ನು ಇದುವರೆಗೂ ಅಭಿವೃದ್ಧಿಗಾಗಿ ನೀಡದಿರುವ ಸೌಲಭ್ಯಗಳನ್ನು ಕೇಳುವ ಮಟ್ಟಿಗೆ ತಯಾರಾದರು ಮತ್ತು ಶಿಕ್ಷಣಕ್ಕೆ ಮಾನ್ಯತೆ ನೀಡುವಂತೆ ಒತ್ತಾಯಿಸ ತೊಡಗಿದರು.

೦೯. ನಕ್ಸಲ್ ಚಟುವಟಿಕೆ ಆರಂಭದಿಂದ ಎಂದೂ ಈ ಪ್ರದೇಶಗಳ ಕಡೆ ಗಮನ ಹರಿಸದ ಸರ್ಕಾರವು ಸೌಲಭ್ಯಗಳನ್ನು ನೀಡಲು ಗಮನ ಹರಿಸಿದ್ದಲ್ಲದೆ. ಪ್ರಜಸತ್ತಾತ್ಮಕ ಹೋರಾಟಕ್ಕಿಂತ ಶಸ್ತ್ರ ಹೋರಾಟಕ್ಕೆ ತಕ್ಷಣ ಗಮನ ಹರಿಸುತ್ತದೆ ಎಂದು ಊಹಿಸತೊಡಗಿದರು.

೧೦. ನಕ್ಸಲ್ ನಿಗ್ರಹ ದಳದವರಿಂದ ಎನ್‌ಕೌಂಟರ್ ಮುಖಾಂತರ ಹಲವಾರು ನಕ್ಸಲ್ ನಾಯಕರು ತಮ್ಮ ಪ್ರಾಣವನ್ನು ಬಿಡಬೇಕಾಯಿತು. ಅಲ್ಲದೆ ಈ ಸಂದರ್ಭದಿಂದ ಕೆಲವರು ನಾಗರೀಕ ಸಮುದಾಯದೆಡೆ ಮುಖ್ಯವಾಹಿನಿಗೆ ಮುಖ ಮಾಡಿನಿಂತರು ಮತ್ತು ನಕ್ಸಲ್ ಚಟುವಟಿಕೆ ದಿನ ಕಳೆದಂತೆ ತನ್ನ ಸ್ಥಿತಿಯನ್ನು ಈ ಭಾಗದಲ್ಲಿ ಕಳೆದುಕೊಳ್ಳುತ್ತಾ ಹೋಯಿತು.

೧೧. ನಕ್ಸಲ್ ಪ್ಯಾಕೇಜ್ ಈ ಪ್ರಾಂತ್ಯಗಳಿಗೆ ಘೋಷಣೆಯಾದ ಮೇಲೆ ಅದರಿಂದ ಕೆಲವರು ಹಣವನ್ನು ಲೂಟಿ ಮಾಡಿದರು, ಬ್ಯಾನರ್ ಮತ್ತು ಕರ ಪತ್ರಗಳನ್ನು ಅಲ್ಲಲ್ಲಿಯೇ ಕಾಣಿಸುವಂತೆ ಮಾಡುವುದು ಮತ್ತು ಎದರಿಸಿ ಬೆದರಿಸಿ ಹಣ ಕಿತ್ತುಕೊಳ್ಳುವ ಕಾರ್ಯವನ್ನು ಕೆಲವರು ಮಾಡುತ್ತಿದ್ದರು.

೧೨. ನಕ್ಸಲ್ ಚಟುವಟಿಕೆ ಆರಂಭವಾದ ಮೇಲೆ ಈ ಪ್ರಾಂತ್ಯಕ್ಕೆ ಹೆಚ್ಚು ಅಭಿವೃದ್ಧಿ ಕಾರ್ಯಗಳು ಅನುಷ್ಠಾನಗೊಂಡವು ಜೊತೆಯಲ್ಲಿ ಜನರು ಅನುಮಾನ ಬಂದಂತಹ ಅಂಶಗಳನ್ನು ಪ್ರಶ್ನಿಸದೇ ಯಾವುದನ್ನು ಸ್ವೀಕರಿಸಲು ಸಿದ್ಧವಿಲ್ಲದಂತೆ ತಯಾರಾಗಿದ್ದರು.

೧೩. ಅರಣ್ಯ ಇಲಾಖೆಯ ಕೆಲವರು ಹಪ್ತ ವಸೂಲಿ ಮಾಡುವ ದಂದೆಗೆ ಕಡಿವಾಣ ಕೂಡ ಬಿದ್ದಿತಲ್ಲದೆ, ಅನ್ಯ ಕಾರ್ಯಗಳಲ್ಲಿ ಮೂಗು ತೂರಿಸುವ ಕಾರ್ಯವನ್ನು ಸ್ಥಗಿತಗೊಳಿಸಿತು.

ಈ ಮೇಲಿನ ಅಂಶಗಳ ಆಧಾರಿತವಾಗಿ ನಕ್ಸಲ್ ಹೋರಾಟಕ್ಕೆ ಕಡಿವಾಣ ಬಿದ್ದರು ಸಹ, ರಾಷ್ಟ್ರೀಯ ಉದ್ಯಾನವನದಿಂದ ಸ್ಥಳಾಂತರ ಮತ್ತು ಪುನರ್ವಸತೀಕರಣಕಾರ್ಯವು ಕೆಲ ಕಾಲದ ಮಟ್ಟಿಗೆ ಸ್ಥಗಿತವಾದರೂ, ಮತ್ತೆ ಆತಂಕದ ವಾತಾವರಣದಲ್ಲಿ ಆದಿವಾಸಿ ಗಿರಿಜನರು, ರೈತರು ಹಾಗೂ ಇತರೆ ಅರಣ್ಯವಾಸಿಗಳು ಒಕ್ಕಲೇಳುವುದನ್ನು ತಡೆಯಲು ಸಾಧ್ಯವಾಗಿಲ್ಲ. ಸ್ವ-ಇಚ್ಛೆ ಮೇರೆಗೆ ಒಕ್ಕಲೇಳುವ ಯಾವ ಕುಟುಂಬದವರನ್ನು ತಡೆದು ನಿಲ್ಲಿಸುವ ಹಕ್ಕು ಯಾರಿಗೂ ಇಲ್ಲವೆಂದು ಅರಿತವರು ಯಾವ ಹೋರಾಟಕ್ಕು ಇಚ್ಛೆ ವ್ಯಕ್ತಪಡಿಸದೇ ಸ್ಥಬ್ಧರಾಗಿದ್ದಾರೆ.

ಕರ್ನಾಟಕ: ಅರಣ್ಯ ಭೂಒತ್ತುವರಿ
(ಕುದುರೆಮುಖ ಪ್ರಾಂತ್ಯವನ್ನು ಅವಲೋಕಿಸಿ)

ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು ಅಂತಿಮ ಘೋಷಣೆ ಮಾಡಿದ ನಂತರ ಆದಿವಾಸಿಗಳ ಭೂಹಿಡುವಳಿ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಯಿತು. ಕುದುರೆಮುಖ ಪ್ರಾಂತ್ಯವನ್ನು ಅಂತಿಮ ಘೋಷಣೆ ಮಾಡುವ ಮುನ್ನ ಸ್ಥಳೀಯಆದಿವಾಸಿ ಸಮುದಾಯದ ಸದಸ್ಯರೆಲ್ಲರು ಸೇರಿ ಉದ್ಯಾನವನದ ಒಳಭಾಗದಲ್ಲಿರುವ ತಮ್ಮ ಕ್ಲೇಮುಗಳ ಕುರಿತಾಗಿ ಉಪವಿಭಾಗಾಧಿಕಾರಿಗಳಿಗೆ ಹಾಗೂ ಸಂಬಂಧಿಸಿದ ಗ್ರಾಮ ಲೆಕ್ಕಿಗರು ಮತ್ತು ರೆವಿನ್ಯೂ ತನಿಖಾಧಿಕಾರಿಗಳಿಗೆ ಹಲವು ಬಾರಿ ಮನವಿಯನ್ನು ಸಲ್ಲಿದ್ದರು. ಆದರೂ ಈ ಎಲ್ಲಾ ಅಂಶಗಳನ್ನು ಮೀರಿ ಜನವಿರೋಧದ ನಡುವೆಯೇ ಕುದುರೆಮುಖ ಪ್ರಾಂತ್ಯವನ್ನು ರಾಷ್ಟ್ರೀಯ ಉದ್ಯಾನವನವನ್ಯಾಗಿ ಘೋಷಣೆ ಮಾಡಲಾಯಿತು. ಅದೇ ಕಾಲಕ್ಕೆ ಸುಪ್ರೀಂ ಕೋರ್ಟ್ ಅರಣ್ಯದ ಒಳಭಾಗದಲ್ಲಿರುವವರು ಭೂಒತ್ತುವರಿ ಮಾಡಿಕೊಂಡಿರುವವರು ತಕ್ಷಣವೇ ಸ್ಥಳವನ್ನು ಬಿಡಬೇಕೆನ್ನುವ ಆದೇಶವನ್ನು ಪ್ರಕಟಿಸಿತು. ಈ ಸಂದಿಗ್ಧ ಪರಿಸ್ಥಿಯಲ್ಲಿ ಆದಿವಾಸಿಗಳು ಮತ್ತು ಪ್ರಾಂತ್ಯದ ಇತರೆ ಅರಣ್ಯವಾಸಿ ಸಮುದಾಯಗಳೆಲ್ಲವೂ ಸೇರಿಕೊಂಡು ತೀವ್ರವಾದ ಹೋರಾಟಕ್ಕೆ ಮುಂದಡಿಯಾದರು. ಗಣಿಗಾರಿಕೆ ವಿರುದ್ಧ ಪ್ರಜಾಸತ್ತಾತ್ಮಕ ಹೋರಾಟವನ್ನು ಸಂಘಟನೆ ಮುಖಾಂತರ ಜಯಿಸಿದ ಕರ್ನಾಟಕ ವಿಮೋಚನಾ ರಂಗವು ಇದರ ಭಾವಾಗಿ ಉದ್ಯಾನವನ ರಚನೆ ವಿರುದ್ಧ ಹೋರಾಟಕ್ಕೆ ಜೊತೆಯಾಗಿತ್ತು. ದಿನಕಳೆದಂತೆ ಆದಿವಾಸಿ ಸಮುದಾಯಗಳಿಗೆ ಅರಣ್ಯ ಇಲಾಖೆವತಿಯಿಂದ ಒತ್ತುವರಿ ತೆರವುಗೊಳಿಸುವಂತೆ ನೋಟಿಸ್ ನೀಡಲಾಯಿತು. ಇನ್ನೊಂದೆಡೆ ಅರಣ್ಯ ಇಲಾಖೆಯ ಸಿಬ್ಬಂದ್ಧಿಗಳು ಅನ್ಯ ಪ್ರಚೋದಿತ ಒತ್ತಡ ಕಾರ್ಯವನ್ನು ಮಾಡತೊಡಗಿದರು. ಇದೇ ವೇಳೆಯಲ್ಲಿ ಮಾರ್ಕ್ಸ್, ಲೆನಿನ್ ಮತ್ತು ಮಾವೋ (ನಕ್ಸಲ್) ಸಿದ್ಧಾಂತಗಳಲ್ಲಿ ನಂಬಿಕೆಹೊಂದಿದ್ದ ಗುಂಪೊಂದು ಆದಿವಾಸಿಗಳ ಭೂಹಿಡುವಳಿ, ಒತ್ತುವರಿ ಮತ್ತು

ಒಕ್ಕಲೆಬ್ಬಿಸುವಿಕೆಯ ವಿರುದ್ಧ ಸಶಸ್ತ್ರ ಹೋರಾಟವನ್ನು ಆರಂಭಿಸಿತು. ೧೭ ನವಂಬರ್ ೨೦೦೩ ರಂದು ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಅಂಚಿನ ಭಾಗವಾಗಿರುವ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಈದು ಎಂಬ ಗ್ರಾಮದಲ್ಲಿ ಇಬ್ಬರು ನಕ್ಸಲ್ ಮಹಿಳೆಯರನ್ನು ಪೋಲಿಸ್ ಎನ್‌ಕೌಂಟರ್‌ನಲ್ಲಿ ಹತ್ಯೆಗಯ್ಯಲಾಗಿತ್ತು. ಈ ಕ್ರಮವು ರಾಜ್ಯಾದಾದ್ಯಂತ ಚರ್ಚೆಗೆ ಗ್ರಾಸವಾಗಿ ಹಲವಾರು ಗುಂಪುಗಳು ನಕಲಿ ಹತ್ಯೆಯೆಂದು, ಸರ್ಕಾರದ ಹೈಪರ್ ಆಕ್ಟ್ ಎಂದು, ಸಾಮಾಜಿಕ ಚಳುವಳಿಗಳಿಗೆ ನಿಶಬ್ಧತೆಯಿಂದಿರಲು ನೀಡಿದಂತಹ ಸಂದೇಶಗಳು ಎಂದು ಗುರುತಿಸಿದವು. ಈ ವೇಳೆಗೆ ಸರ್ಕಾರ ರಾಷ್ಟ್ರೀಯ ಉದ್ಯಾನವನದಿಂದ ಒಕ್ಕಲೇಳುವವರಿಗೆ ೬೦ ಕೋಟಿ ರೂ ಗಳ ಪ್ಯಾಕೇಜ್‌ನ್ನು ಘೋಷಣೆ ಮಾಡಿತು. ಈ ಎರಡು ಹತ್ಯೆಗಳ ಪರಿಣಾಮ ಕುದುರೆಮುಖ ವ್ಯಾಪ್ತಿಯಲ್ಲಿ ನಕ್ಸಲ್ ನಿಗ್ರಹ ದಳ ಕಾರ್ಯಚರಣೆಗೆ ಆರಂಭವಾಯಿತು. ಸರ್ಕಾರದ ವತಿಯಿಂದ ನಕ್ಸಲ್ ಪುನರ್ವಸತೀ ಪ್ಯಾಕೇಜ್‌ನ್ನು ಘೋಷಿಸಿದರೂ ಕೂಡ ಯಾವ ನಕ್ಸಲರು ಅದನ್ನು ಒಪ್ಪಿಕೊಳ್ಳಲಿಲ್ಲ. ಕಾರಣ ಕುದುರೆಮುಖ ವ್ಯಾಪ್ತಿಯಲ್ಲಿರುವ ನೈಸರ್ಗಿಕ ಸಂಪನ್ಮೂಲವು ಸಾಮ್ರಾಜ್ಯಶಾಹಿಗಳ ಮತ್ತು ಬಂಡವಾಳಗಾರರ ಹಿತಾಸಕ್ತಿಗೆ ಒಳಪಡುವುದು ಎಂದು, ಈ ಪ್ರಕ್ರಿಯೆಯು ಗೌಡಲು, ಮಲೆಕುಡಿಯ ಮತ್ತು ಇತರೆ ಅರಣ್ಯವಾಸಿಗಳ ಅಸ್ಥಿತ್ವನ್ನು ನುಂಗಿಬಿಡುವುದು ಎಂದು, ಆದಿವಾಸಿಗಳ ಮತ್ತು ಇತರೆ ಅರಣ್ಯವಾಸಿಗಳನ್ನು ಸ್ಥಳಾಂತರಗೊಳಿಸುವುದರಿಂದ ಸಂಸ್ಕೃತಿ ನಾಶವಾಗುವುದು ಮತ್ತು ಅಂತಿಮವಾಗಿ ಪ್ಯಾಕೇಜ್‌ನ್ನು ಸ್ವೀಕರಿಸಿದರೆ, ನಕ್ಸಲರ ಮೇಲೆ ಅಪವಾದಗಳು ಬರುವುದಾದ್ದರಿಂದ ಸರ್ಕಾರದ ಆಹ್ವಾನವನ್ನು ನಿರಾಕರಿಸಿದರು.

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ನಕ್ಸಲರ ಚಳುವಳಿಗಳು ಆರಂಭವಾದದ್ದು, ಮೂಲ ಆದಿವಾಸಿಗಳನ್ನು ಅರಣ್ಯ ಪ್ರದೇಶದಿಂದ ಒಕ್ಕಲೆಬ್ಬಿಸುವ ಹುನ್ನಾರವನ್ನು ತೆಡೆಯುವಿಕೆಗಾಗಿ. ೧೯೮೭ರಲ್ಲಿ ಮೊದಲ ಬಾರಿಗೆ ಉದ್ಯಾನವನವನ್ನಾಗಿ ಘೋಷಣೆ ಮಾಡುವ ಸಮಯದಲ್ಲಿ ಐದು ಕಾಯ್ದಿರಿಸದ ಅರಣ್ಯ ಪ್ರದೇಶಗಳನ್ನು ಸೇರಿಸಿಕೊಂಡು ರಾಷ್ಟ್ರೀಯ ಉದ್ಯಾನವನವನಾಗಿ ಮಾರ್ಪಡಿಸಲಾಯಿತು. ತದನಂತರ ೧೪ ಜೀವವೈವಿಧ್ಯತೆಗಳಲ್ಲಿ ಒಂದಾದ ತಾಣವೆಂದು ಘೋಷಿಸಲಾಯಿತು. ಈ ಪ್ರಕ್ರಿಯೆಯು ಅರಣ್ಯ ಪ್ರದೇಶಗಳಲ್ಲಿ ಮಾನವ ವಸತಿಗಳನ್ನು ನಿಷೇಧಿಸುವ ಪ್ರಕ್ರಿಯೆಗೆ ಚಾಲನೆಯನ್ನು ನೀಡಿತು. ಇದರ ವಿರುದ್ಧ ಆದಿವಾಸಿಗಳು ತಮ್ಮ ನೈಜ ಹಕ್ಕುಗಳನ್ನು ಪ್ರಶ್ನಿಸಿ ಒಕ್ಕಲೇಳುವುದಿಲ್ಲವೆಂದು ಹೋರಾಟಕ್ಕೆ ಇಳಿದರು. ವಾಸ್ತವದ ಸಂಗತಿ ಎಂದರೆ, ೬೧,೦೦೦ ಹೆಕ್ಟೇರ್ ಪ್ರದೇಶವನ್ನು ಹೊಂದಿರುವ ಉದ್ಯಾನವನದಲ್ಲಿ ೩,೫೦೦ ಹೆಕ್ಟೇರ್ ಪ್ರದೇಶವನ್ನು ಮಾನವ ವಸತಿ ಕ್ಲೇಮುಗಳೆಂದು ಘೋಷಿಸಿ ಎನ್ನುವ ಅಂಶವನ್ನು ಹೊಂದಿತ್ತು. ಉದ್ಯಾನವನ ವ್ಯಾಪ್ತಿಯಲ್ಲಿ ವಾಸವಾಗಿರುವ ಸಮುದಾಯಗಳೆಲ್ಲವು ಒತ್ತುವರಿ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಸರ್ಕಾರವು ಅಕ್ರಮ ಸಕ್ರಮದಡಿ ಅರ್ಜಿ ಆಹ್ವಾನಿಸಿದಾಗ ಕೂಡ ಅರ್ಜಿಯನ್ನು ಸಲ್ಲಿಸಿದ್ದಾರೆ. ಈ ಕುರಿತು ಅನೇಕ ಬಾರಿ ಸಭೆಗಳು ಜರುಗಿವೆಯಾದರೂ ಅನುಷ್ಠಾನಕ್ಕೆ ಬಾರದಿರುವುದು ಸೋಜಿಗದ ಸಂಗತಿಯಾಗಿ ಮಾರ್ಪಟ್ಟಿದೆ. ಇರುವ ಅತೀ ಸಣ್ಣ ರೈತರು ಹೊಂದಿರುವ ೧ ರಿಂದ ೩೦ ಎಕರೆ ಪ್ರದೇಶಗಳನ್ನು ತೊರೆದು ಹೋಗುವುದು ಎಲ್ಲಿಗೆ ಎಂಬ ಪ್ರಶ್ನೆ ಅವರನ್ನು ಕಾಡುತ್ತಿದೆ. ನಕ್ಸಲ್ ಚಳುವಳಿಯು ಈ ಭಾಗದಲ್ಲಿ ತನ್ನ ಅಸ್ಥಿತ್ವವನ್ನು ಉಳಿಸಿಕೊಳ್ಳಲು

ಸಾಧ್ಯವಾಗದಿರುವುದು, ಒತ್ತುವರಿ ಭೂಹಿಡುವಳಿ ಸಮಸ್ಯೆಯು ಕೇವಲ ನಿರ್ದಿಷ್ಟ ವರ್ಗಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ, ಬದಲಿಗೆ ಬಡವ, ಶ್ರೀಮಂತರೆನ್ನುವರ ಆದಿಯಾಗಿ ಈ ಸಮಸ್ಯೆಯು ಉಲ್ಬಣಿಸಿತ್ತು. ಇರುವ ಸಮಸ್ಯೆಗಳ ಮೇಲೆ ಎಲ್ಲಾ ವರ್ಗಗಳಲ್ಲಿ ಅರಿವನ್ನು ತರುವ ಕಾರ್ಯವನ್ನು ಮಾಡುವುದು ಅವರಿಗೆ ಕಷ್ಟಸಾಧ್ಯವಾಯಿತು. ರಾಷ್ಟ್ರೀಯ ಉದ್ಯಾನವನ ಒತ್ತುವರಿ ತೆರವುಗೊಳಿಸುವ ವಿಷಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ ಬದಲಿಗೆ ಅಲ್ಲಿರುವ ಸಂಪತ್ತುಗಳ ಮೇಲೆ ಸಾಮ್ರಾಜ್ಯಶಾಹಿಗಳ, ಜಾಗತೀಕರಣದ ಪ್ರಭಾವವು ಉಂಟಾಗಿ ಪರಿಸರ ಅಭಿವೃದ್ಧಿಯ ನಾಮದೇಯದಲ್ಲಿ ಸ್ವತ್ತುಗಳನ್ನು ಬಂಧಿಸಿಡುವುದಾಗಿತ್ತು. ಈ ಎಲ್ಲಾ ಸಂಗತಿಗಳನ್ನು ಅರಿತ ಮೇಲೆ ಸಶಸ್ತ್ರ ಹೋರಾಟದ ಭಾಗ ಕಡಿಮೆಗೊಳ್ಳುತ್ತಾ ಸಾಗಿತು. ಕುದುರೆಮುಖ ಪ್ರದೇಶದಲ್ಲಿ ವಾಸವಾಗಿರುವ ವಿವಿಧ ಸಾಮಾಜಿಕ ಗುಂಪುಗಳಲ್ಲಿ ಒಂದೇ ಪ್ರಕಾರವಾದ ನಿರ್ಣಯಗಳು ಕಂಡು ಬರುತ್ತಿರಲಿಲ್ಲ. ಬದಲಿಗೆ ಅನೇಕ ಸಂಘಟನೆಗಳು ತಮ್ಮದೇ ಆದ ಕೆಲವು ನಿಲುವುಗಳನ್ನು ಪ್ರಕಟಗೊಳಿಸುತ್ತಿದ್ದವು. ನಾಗರೀಕ ಸೇವಾ ಟ್ರಸ್ಟ್ ಆದಿವಾಸಿಗಳು ಅರಣ್ಯಗಳಲ್ಲಿಯೇ ಉಳಿಯಬೇಕು, ಅರಣ್ಯ ಕಿರುಉತ್ಪನ್ನಗಳನ್ನು ಸಂಗ್ರಹಿಸವ, ಅಲ್ಲಿನ ಸಂಪನ್ಮೂಲಗಳನ್ನು ಬಳಸುವ ಹಕ್ಕುಗಳನ್ನು ಉಳಿಸುವ ಕುರಿತಂತೆ ಅಭಿಪ್ರಾಯಗಳನ್ನು ಮಂಡಿಸಿತು. ಇದರೊಂದಿಗೆ ಟ್ರಸ್ಟ್ ಕಾಯ್ದಿರಿಸುವ ಅರಣ್ಯಗಳ ಬಗ್ಗೆ ಎಂದಿಗೂ ಚಕಾರವನ್ನು ಎತ್ತಲಿಲ್ಲ, ಆದರೆ ಆದಿವಾಸಿಗಳನ್ನು ಒಕ್ಕಲೆಬ್ಬಿಸುವ ಕುರಿತು ತೀವ್ರವಾದ ವಿರೋಧವನ್ನು ವ್ಯಕ್ತಪಡಿಸುತ್ತಿತ್ತು. ಕದುರೆಮುಖ ರಾಷ್ಟ್ರೀಯ ಉದ್ಯಾನವನ ವಿರೋಧಿ ಒಕ್ಕೂಟವು ನವ ಸಾಮ್ರಾಜ್ಯಶಾಹಿತ್ವದ ಪರಿಸರ ಪ್ರವಾಸೋದ್ಯಮವನ್ನು ಪುಷ್ಟೀಕರಿಸಿತು ಮತ್ತು ಪ್ರೇರೇಪಿಸಿತು. ಈ ಮೂಲಕ ಜಂಟಿ ಅರಣ್ಯ ನಿರ್ವಹಣೆ ಕಾರ್ಯವನ್ನು ಜಾರಿ ತರುವುದರೊಂದಿಗೆ ಒಕ್ಕಲೆಬ್ಬಿಸುವಿಕೆಯ ಹುನ್ನಾರವನ್ನು ತಡೆಯುವಿಕೆಗೆ ಸಮ್ಮತಿಯನ್ನು ಸೂಚಿಸಿತ್ತು. ಇದರೊಂದಿಗೆ ಕರ್ನಾಟಕ ರಾಜ್ಯವನ್ನು ಪಂಚಾಯತ್ ಶೆಡ್ಯೂಲ್ಡ್ ಏರಿಯಾಗಳನ್ನಾಗಿ ಮಾರ್ಪಡಿಸಿ ಭುರಿಯ ಕಮಿಶನ್ ವರದಿ ಅನುಷ್ಠಾನವಾಗಬೇಕೆಂದು ಒತ್ತಾಯಿಸಿತು. ಚಿಕ್ಕಮಗಳೂರು ಜಿಲ್ಲಾ ಆದಿವಾಸಿ ಗಿರಿಜನ ಹಿತರಕ್ಷಣ ಸಮಿತಿ ಮತ್ತು ಮಲೆಕುಡಿಯರ ಸಂಘ ಭುರಿಯ ಕಮಿಷನ್ ವರದಿಯನ್ನು ಉದ್ಯಾನವನ ವ್ಯಾಪ್ತಿಯಲ್ಲಿ ಅಳವಡಿಸುವುದು, ರಾಷ್ಟ್ರೀಯ ಉದ್ಯಾನವನದ ಭಾಗದಿಂದ ಜನರನ್ನು ಒಕ್ಕಲೆಬ್ಬಿಸುವ ಯೋಜನೆಯನ್ನು ಕೈಬಿಡಬೇಕು, ಆದಿವಾಸಿಗಳ ಸಾಂಸ್ಕೃತಿಕ ಆಚರಣೆ, ಅವರ ಸಾಮಾಜಿಕತೆಗಳನ್ನು ಗೌರವಿಸಬೇಕು ಇದರೊಂದಿಗೆ ಅವರ ನೈಜ ಹಕ್ಕುಗಳಾದ ಕಿರು ಅರಣ್ಯ ಉತ್ಪನ್ನ ಸಂಗ್ರಹ, ಮರಗಳನ್ನು ಬೆಳಸುವಿಕೆ, ತಾವು ಹೊಂದಿರುವ ಭೂಹಿಡುವಳಿಗಳ ಮೇಲೆ ಪಟ್ಟಾ ಮತ್ತು ಪಹಣೆಗಳನ್ನು ಹೊಂದುವಿಕೆಯನ್ನು ಪ್ರೋತ್ಸಾಹಿಸಬೇಕು ಎನ್ನುವ ಬೇಡಿಕೆಗಳನ್ನು ಇಟ್ಟುಕೊಂಡು ಹೋರಾಟವನ್ನು ಮುಂದುವರೆಸಿದವು[೬]. ಈ ವಿವಿಧ ಬೇಡಿಕೆಗಳನ್ನು ಗ್ರಹಿಸಿ ಅಧಿಕ ಜನಸಂಖ್ಯೆಯ ನಡುವೆ ಸಮುದಾಯಗಳಿಗೆ ಸಮಗ್ರ ವಿಷಯವನ್ನು ಅರಿವೆಗೆ ತರುವುದು ನಕ್ಸಲ್ ಚಳುವಳಿಗಾರರಿಗೆ ಕಷ್ಟದಾಯಕವಾದ ಕಾರ್ಯವಾಗಿ ಪರಿಣಮಿಸಿತು. ಇಷ್ಟೆಲ್ಲಾ ಪರಿಣಾಮಗಳು ಉಂಟಾದರು ಸರ್ಕಾರ ಮಾತ್ರ ಒಕ್ಕಲೇಳುವಿಕೆಯ ಕುರಿತಂತೆ ಸ್ವ ಇಚ್ಚೆ ಎಂಬ ಪದಗಳನ್ನು ಮಾತ್ರ ಬಳಸಿ ಒಕ್ಕಲೇಳುವವರಿಗೆ ಪರಿಹಾರವಾಗಿ ಅವರು ಹೊಂದಿರುವ ನೈಜ ಸ್ವತ್ತುಗಳ ಆಧಾರವಾಗಿ ಪರಿಹಾರವನ್ನು ನೀಡುತ್ತಾ ಬರುತ್ತಿದೆ. ಅಭಿವೃದ್ಧಿಯ ಭಾಗವಾಗಿರುವ ಸ್ಥಳಾಂತರ ಪ್ರಕ್ರಿಯೆಯು ಸೃಷ್ಟಿ ಮಾಡುತ್ತಿರುವ ಬಹು ದೊಡ್ಡ ಸಮಸ್ಯೆಯೆಂದರೆ, ಭೂಹಿಡುವಳಿಗ

ಸಮಸ್ಯೆ ಪುನರ್ವಸತೀಕರಣ ಪರಿಹಾರವನ್ನು ಪಡೆದು ಹೊರ ಬರುತ್ತಿರುವ ಆದಿವಾಸಿ ಮತ್ತು ಇತರೆ ಸಮುದಾಯಗಳು ಯಾವ ಸ್ಥಳದಲ್ಲಿ ನೆಲೆಗೊಳ್ಳಬೇಕು ಎಂದು ಸ್ಥಳಗಳನ್ನು ಗುರುತಿಸುವುದೇ ಒಂದು ಸವಾಲಾಗಿ ಪರಿಣಮಿಸಿದೆ. ಇರುವ ಅಲ್ಪ ಭೂಹಿಡುವಳಿಗಳನ್ನು ಉದ್ಯಾನವನಕ್ಕೆ ಬಿಟ್ಟು ಬಂದಿರುವುದು ಹೊರಗಿನ ಪ್ರಪಂಚದಲ್ಲಿ ೨೦*೩೦ರ ಒಂದು ನಿವೇಶವನ್ನು ಕ್ರಯಕ್ಕೆ ಕೊಳ್ಳುವುದು ಕಷ್ಟವಾದ ಸಂದರ್ಭವನ್ನು ಇಂದಿಗೂ ಉದ್ಯಾನವನದಿಂದ ಹೊರಬಂದವರು ಎದುರಿಸುತ್ತಿದ್ದಾರೆ.

೫ ಭಾರತ ಮತ್ತು ಕರ್ನಾಟಕ ಪ್ರಾದೇಶಿಕತೆಯಲ್ಲಿ ನಡೆದಿರುವ ಸ್ಥಳಾಂತರ ಮತ್ತು ಪುನರ್ವಸತೀಕರಣವನ್ನು ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸ್ಥಳಾಂತರ ಮತ್ತು ಪುನರ್ವಸತಿಯೊಂದಿಗೆ ತೌಲನಿಕ ವಿಮರ್ಶೆ.

ಅರಣ್ಯ ಸಂರಕ್ಷಣೆಯ ನಿಟ್ಟಿನಲ್ಲಿ ಭಾರತದಾದ್ಯಂತ ಮತ್ತು ನಮ್ಮ ಕರ್ನಾಟಕ ರಾಜ್ಯದ ಪ್ರಾದೇಶಿಕ ಭಾಗಗಳಲ್ಲಿ ಹಲವು ಯೋಜನೆಗಳ (ಅರಣ್ಯದೊಳಗಿನ ಯೋಜನೆ) ಅನುಷ್ಠಾನಕ್ಕಾಗಿ ಅಲ್ಲಿ ನೆಲೆಸಿರುವ ಆದಿವಾಸಿ ಗಿರಿಜನ, ರೈತರು ಮತ್ತು ಇತರೆ ಅರಣ್ಯವಾಸಿಗಳನ್ನು ಎತ್ತಂಗಡಿ ಅಥವಾ ಒಕ್ಕಲೆಬ್ಬಿಸುವಿಕೆ ಕಾರ್ಯಾಗಳನ್ನು ಹಮ್ಮಿಕೊಂಡು ಪುನರ್ವಸತಿ ಯೋಜನೆ ಅಡಿ ಸ್ಥಳಾಂತರವನ್ನು ಮಾಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಂಶೋಧನಾ ಭಾಗವಾಗಿ ಅಧ್ಯಯನಗೈದಿರುವ 'ಕುದುರೆಮುಖ ರಾಷ್ಟ್ರೀಯ ಉದ್ಯಾನವನ'ದ ಒಕ್ಕಲೆಬ್ಬಿಸುವಿಕೆ ಮತ್ತು ಪುನರ್ವಸತಿ ಯೋಜನೆಯೊಂದಿಗೆ ಪ್ರಾದೇಶಿಕವಾರು ಅನುಷ್ಠಾನಗೊಂಡ ಇತರೆ ಪುನರ್ವಸತಿ ಯೋಜನೆಗಳೊಂದಿಗೆ ಹೋಲಿಕೆ ಅಥವಾ ತೌಲನಿಕವಾಗಿ ವಿಮರ್ಶಿಸಲಾಗಿದೆ.

ಸ್ಥಳಾಂತರ ಮತ್ತು ಪುನರ್ವಸತೀಕರಣಎಂಬ ಎರಡು ಅಂಶಗಳು ಒಕ್ಕಲೆಬ್ಬಿಸುವಿಕೆಯ ಕುರಿತಂತೆ ಕಾರ್ಯನಿರ್ವಹಿಸುವ 'ಒಂದೇ ನಾಣ್ಯದ ಎರಡು ಮುಖಗಳಂತೆ'. ಆದರೂ, ಪುನರ್ವಸತಿ ವ್ಯವಸ್ಥೆಯು ಆಯಾ ರಾಜ್ಯದಲ್ಲಿರುವ ಸರ್ಕಾರ, ಸಂಪನ್ಮೂಲಗಳು, ರೆವಿನ್ಯೂ, ಯೋಜನೆ ಮತ್ತು ಪ್ರಾದೇಶಿಕ ವಿಭಿನ್ನತೆಯನ್ನು ಹೊಂದಿರುತ್ತದೆ. ಯೋಜನೆಗಳು ರಾಜ್ಯ ಸರ್ಕಾರದ ಸುಪರ್ಧಿಯಲ್ಲಿ ಅನುಷ್ಠಾನಗೊಂಡರು ಕೇಂದ್ರ ಸರ್ಕಾರದ ಶಾಸನ ನಿಯಮಗಳಿಗೆ ಒಳಗಾಗುವುದು ಅನಿವಾರ್ಯ. ಈ ಉಲ್ಲೇಖದ ಅನುಸಾರವಾಗಿ ಅರಣ್ಯ ಪ್ರದೇಶವು ರಾಜ್ಯಕ್ಕೂ ಮತ್ತು ಹೆಚ್ಚಿನ ಉಸ್ತುವಾರಿಯಲ್ಲಿ ಕೇಂದ್ರಕ್ಕೂ ಸಂಬಂಧಿಸಿದ್ದಾಗಿದ್ದು, ಯೋಜನೆ ಅನುಷ್ಠಾನಗೊಂಡು ಪೂರ್ಣಗೊಂಡರು ಅಲ್ಲಿದ್ದ ಜನರು ಇತಿಹಾಸದಿಂದ ಮರೆಯಾಗಿ ಹೋಗುವುದು ಸತ್ಯವಾಗಿದೆ. ಯೋಜನೆಗಳು ಮಾತ್ರ ಶೀಘ್ರವಾಗಿ ಜಾರಿಯಾಗುತ್ತವೆ. ಆದರೆ, ಪುನರ್ವಸತಿ ಪರಿಹಾರಗಳು ಮಾತ್ರ ಒಕ್ಕಲೆದ್ದು ಎಲ್ಲೋ ನೆಲೆಸಿ ಒಂದು ತಲೆಮಾರು ಗತಿಸಿದರೂ ಕೂಡ ಸಿಗದಂತಹ ವ್ಯವಸ್ಥೆಯಡಿಯಲ್ಲಿ ಇಂದಿನ ಫಲಾನುಭವಿಗಳು ಬದುಕು ಕಟ್ಟಿಕೊಳ್ಳುವ ಆಸೆಯನ್ನು ಹೊತ್ತವರಾಗಿದ್ದಾರೆ. ಮೇಲಿನ ಉಲ್ಲೇಖಿತ ವಾಕ್ಯಾನುಸಾರ ಶ್ರೀಮತಿ ಅರುಂದತಿ ರಾಯ್ ಅವರು ತಮ್ಮ 'ಗ್ರೇಟರ್ ಕಾಮನ್ ಗುಡ್' ನಲ್ಲಿ ಸರದಾರ್ ಸರೋವರದ ಪುನರ್ವಸತಿ ಕುರಿತು ಈ ರೀತಿ ಹೇಳಿದ್ದಾರೆ.

The millions of displaced people do not exist anymore. When history is written they would not be in it, not even as statistics. Some of them have subsequently been displaced three and four times.... True, they are not being annihilated or taken to gas chambers, but I can warrant that the quality of their accommodation is worse than in any concentration camp of the Third Reich. They are not captive, but they re-define the meaning of liberty and still the nightmare does not end. They continue to be uprooted even from their hellish hovels by government bulldozers..... The millions of displaced people in India are nothing but refugees of an unacknowledged war. ....Arundhati Roy, The Greater Common Good.

'ಕುನೋ' ಅಭಯಾರಣ್ಯ: ಭಾರತದ ಮಧ್ಯಪ್ರದೇಶ ರಾಜ್ಯದಲ್ಲಿರುವ 'ಕುನೋ' (Kuno) ವನ್ಯಜೀವಿ ಅಭಯಾರಣ್ಯವು ಶರಿಯ ಆದಿವಾಸಿ ಗಿರಿಜನರ ವಾಸಸ್ಥಳವಾಗಿದ್ದು, ಭಾರತದ ವನ್ಯಜೀವಿ ಮಂಡಳಿಯ ಶಿಫಾರಸ್ಸಿನ ಮೇರೆಗೆ ಪರಿಸರ ಮತ್ತು ಅರಣ್ಯ ಇಲಾಖೆಯು ಗುಜುರಾತ್ ರಾಜ್ಯದ ಗಿರ್ ಅರಣ್ಯ ಪ್ರದೇಶದಿಂದ ಏಷ್ಯಾ ಸಿಂಹವನ್ನು ಮಧ್ಯಪ್ರದೇಶ ಕುನೋ ಅಭಯಾರಣ್ಯಕ್ಕೆ ಸ್ಥಳಾಂತರಿಸುವ ಯೋಜನೆಯೊಂದನ್ನು ರೂಪಿಸಿತು. ಈ ಯೋಜನೆ ಅನುಷ್ಟಾನಕ್ಕಾಗಿ ೨೪ ಹಳ್ಳಿಗಳ ೫೦೦೦ ಜನರನ್ನು ಅಭಯಾರಣ್ಯದ ಹೊರಭಾಗಕ್ಕೆ ತರುವುದನ್ನು ಉದ್ದೇಶಿಸಿ ಸ್ಥಳಾಂತರ ಮತ್ತು ಪುನರ್ವಸತೀಕರಣದ ಪ್ಯಾಕೇಜ್‌ನ್ನು ಪರಿಸರ ಮತ್ತು ಅರಣ್ಯ ಇಲಾಖಾ ಮಂತ್ರಾಲಯದ BOTD –Benificiary Oriented Scheme of Tribal Development ಅಡಿಯಲ್ಲಿ ೧೮ ವರ್ಷ ಮೇಲ್ಪಟ್ಟ ವ್ಯಕ್ತಿಯನ್ನು ಕುಟುಂಬವೆಂದು ಪರಿಗಣಿಸಿ ೧ ಲಕ್ಷ ರೂಗಳ ಮೌಲ್ಯದಲ್ಲಿ ಒಳಗೊಳ್ಳುವ ಸೌಲಭ್ಯವನ್ನು ಪ್ರಕಟಗೊಳಿಸಿ ಆವ್ಹಾನಿಸಿದ್ದಾರೆ.

The BoTD Package S. No	Heads	Specified norms (Rs. per family)	To be spent by
1	Land Development (for 2 hectares per family)	36,000	Forest dept.
2	House construction (on 5,000 sq. feet per house)	36,000	Beneficiary
3	Community facilities	9,000	Forest dept
4	Fuel and fodder plantation	8,000	Forest dept
5	Pasture development	8,000	Forest dept
6	Transport of household goods	1,000	Beneficiary
7	Cash incentive for shifting	1,000	Beneficiary
8.	Miscellaneous expenses	1,000	Forest dept
TOTAL		Rs. 1,00,000	

ಮೂಲ: https://www.researchgate.net/publication/262123076

ಭೂ ಹಿಡುವಳಿ: ಅಭಯಾರಣ್ಯದ ಒಳಭಾಗದಲಿದ್ದ ಕುಟುಂಬಗಳನ್ನು ಪರಿಗಣಿಸಿ ೨೦೦೧ ರಲ್ಲಿ ಅಭಯಾರಣ್ಯದ ಹೊರ ಭಾಗಕ್ಕೆ ಸ್ಥಳಾಂತರಿಸಿ ೨ ಎಕ್ಟೇರ್ ಭೂ ಹಿಡುವಳಿಯನ್ನು ಪ್ರತಿ ಕುಟುಂಬಕ್ಕೆ ನೀಡಲಾಗಿದೆ. ಆದರೆ, ನೀಡಿರುವ ಭೂ ಹಿಡುವಳಿಗಳಲ್ಲಿ ಕೆಲ ಕುಟುಂಬಗಳಿಗೆ ಕೃಷಿ ಕಾರ್ಯಕ್ಕೆ ಯೋಗ್ಯವಾದ ಭೂ ಹಿಡುವಳಿಯನ್ನು ನೀಡಿಲ್ಲ. ಇದನ್ನು ಕುರಿತು ಹಲವು ಬಾರಿ ಅರಣ್ಯ ಇಲಾಖೆಗೆ ಗಮನಕ್ಕೆ ತರಲಾಗಿ ಕಂದಾಯ ಇಲಾಖೆಯಲ್ಲಿಯೂ ದೂರು ಸಲ್ಲಿಸಿದರಾಗಿದ್ದು, ಮೂರು ವರ್ಷಗಳ ಸತತ ಆಹಾರ ಪೂರೈಕೆಯಲ್ಲಿ ವ್ಯತ್ಯಾಸವನ್ನು ಕಂಡಿದ್ದಾರೆ. ಸ್ಥಳೀಯಜಿಲ್ಲಾಧಿಕಾರಿಗಳು ಆದೇಶಿಸಿದ ನಂತರ ಸಮೀಕ್ಷೆ ನಡೆಸಿ (ಅರಣ್ಯ, ಕಂದಾಯ ಮತ್ತು ಕೃಷಿ ಇಲಾಖೆ) ಬಂಡೆಗಳಿಂದ ಆವೃತವಾದ ಜಾಗವನ್ನು ಪಡೆದಿದ್ದ ಕುಟುಂಬಗಳಿಗೆ ಬೇರೆಡೆ ಭೂ ಹಿಡುವಳಿ ನೀಡಲು ಶಿಫಾರಸ್ಸು ಮಾಡಲಾಗಿದೆ. ಪ್ರಸ್ತುತವಾಗಿ ನೀಡಿರುವ ಭೂ ಹಿಡುವಳಿಗಳು ಅಭಯಾರಣ್ಯದ ಸ್ಥಳದಲ್ಲಿದ್ದ ಭೂಮಿ ಫಲವತ್ತತೆಗಿಂತ ಬಾರಿ ಕಡಿಮೆ ಪ್ರಮಾಣದ ಫಲವತ್ತತೆ ಹೊಂದಿರುವುದು ಮಣ್ಣು ಪರೀಕ್ಷೆಯಿಂದ ದೃಢಪಟ್ಟಿದೆ. ಕೃಷಿ ಚಟುವಟಿಕೆಯನ್ನು ಮೂಲ ಕಸುಬನ್ನಾಗಿ ಹೊಂದಿರುವ ಶರಿಯ ಗಿರಿಜನರು ಅಭಯಾರಣ್ಯದ ಒಳಭಾಗದಲ್ಲಿ ಮಳೆ ಆಶ್ರಿತ ಕೃಷಿ ಚಟುವಟಿಕೆಗಳನ್ನು ಆಧರಿಸಿದ್ದರು, ನದಿ ಪಾತ್ರದವರು ಡೀಸಲ್ ಪಂಪ್‌ಗಳ ಮುಖಾಂತರ ಬೇಸಿಗೆ ಸಮಯದಲ್ಲಿ ನದಿಗಳ ನೀರನ್ನು ಬಳಕೆ ಮಾಡುತ್ತಿದ್ದರು, ಈ ಮೂಲಕ ಸಾಸಿವೆ, ರಾಗಿ, ಬೇಳೆ, ಗೋಧಿ ಮುಂತಾದ ಪದಾರ್ಥಗಳನ್ನು ಬೆಳೆದು ದಲ್ಲಾಳಿಗಳ ಮುಖಾಂತರ ಮಾರಾಟ ಮಾಡುತ್ತಿದ್ದರು. ಅಭಯಾರಣ್ಯದೊಳಗಿರುವ ಈ ಗಿರಿಜನರು ಪುರಾತನ ಕೃಷಿ ಮಾದರಿಯನ್ನು ಅನುಸರಿಸಿಕೊಂಡು ತಾವು ಬೆಳೆ ಬೆಳೆಯುತ್ತಿದ್ದ ಜಾಗದಲ್ಲಿ ಮಾತ್ರ ಬೆಂಕಿಯನ್ನು ಬಳಸಿ ನೆಲವನ್ನು ಹದಗೊಳಿಸಿ ಕೃಷಿಯನ್ನು ಮುಂದುವರೆಸಿದ್ದಾರೆ ಹೊರತು. ಕಾಡಿಗೆ ಎಂದಿಗೂ ಬೆಂಕಿ ನೀಡಿಲ್ಲದಿರುವುದು ಅಧ್ಯಯನದ ವರದಿಗಳಿಂದ ದೃಢಪಟ್ಟಿದೆ. ಸ್ಥಳಾಂತರದ ನಂತರ, ೭೧೫ ಕುಟುಂಬಗಳಲ್ಲಿ ೧೯ ಕುಟುಂಬಗಳು ಅಂದರೆ, ೨.೬%, ೪೦ ಕೆ.ಜಿ ಗಿಂತ ಹೆಚ್ಚಿನ ಬೆಳೆಯನ್ನು ಮಾತ್ರ ಬೆಳೆಯುವುದಕ್ಕೆ ಸಾಧ್ಯವಾಗಿದೆ. ಇದಕ್ಕೆ ಕಾರಣ ಅರಣ್ಯ ಇಲಾಖೆಯಿಂದ ಪಡೆದ ಭೂ ಹಿಡುವಳಿಯಲ್ಲಿ ಫಲವತ್ತತೆ ಇಲ್ಲದಿರುವುದು ಸಮಂಜಸವಾದ ನಿದರ್ಶನವಾಗಿದೆ. ಇನ್ನುಳಿದಂತೆ ಅರಣ್ಯ ಕಿರು ಉತ್ಪತ್ತಿಗಳನ್ನು ಸಂಗ್ರಹಿಸಿ, ಔಷಧಿ ಸಸ್ಯಗಳನ್ನು ಹಾಗೂ ಕಾಡು ಸೊಪ್ಪುಗಳನ್ನು ತಮ್ಮ ನಿತ್ಯ ಬಳಕೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದ ಶರಿಯ ಗಿರಿಜನರಿಗೆ ಅರಣ್ಯ ಇಲಾಖೆಯಿಂದ ಪುನಃ ಅವುಗಳನ್ನು ಸಂಗ್ರಹಿಸಲು ನಿರಾಕರಿಸಲಾಗಿದೆ. ಈ ಮೂಲಕ ಆರ್ಥಿಕ ಮೂಲಾಂಶದ ಕಾಡು ಉತ್ಪತ್ತಿ ಸಂಗ್ರಹವೂ ಕೂಡ ಇಲ್ಲದಂತಾಗಿದೆ[೬]. (Kabra, 2003).

'ಸಾರಿಸ್ಕ' ಹುಲಿ ಅಭಯಾರಣ್ಯ: ರಾಜಸ್ಥಾನದ ಸಾರಿಸ್ಕ ಹುಲಿ ಅಭಯಾರಣ್ಯ ಮತ್ತು ರಾಷ್ಟ್ರೀಯ ಉದ್ಯಾನವನವಾದ ಈ ಪ್ರದೇಶದಲ್ಲಿ ಗುಜ್ಜಾರ್ ಗಿರಿಜನರು ಅತಿ ಹೆಚ್ಚು ಜನಸಂಖ್ಯೆಯಲ್ಲಿದ್ದು, ಮೂಲವಾಗಿ ಹೈನುಗಾರಿಕೆಯನ್ನು ತಮ್ಮ ಆರ್ಥಿಕ ಚಟುವಟಿಕೆಯ ವೃತ್ತಿಯಾನ್ನಾಗಿಸಿಕೊಂಡು ಜೀವನವನ್ನು ಸಾಗಿಸಿಕೊಂಡು ಬಂಧಿದ್ದಾರೆ. ಸಾರಿಸ್ಕಾ ಪ್ರದೇಶದಲ್ಲಿ ಹುಲಿಗಳ ಸಂಖ್ಯೆಯು ಕಡಿಮೆಯಾಗಿದೆ ಎನ್ನುವ ಸಂಗತಿಯನ್ನು ಆಧರಿಸಿ, ಅರಣ್ಯ ಇಲಾಖೆಯವರು ರಣತಂಬೂರ್ ಹುಲಿವಾಸಿತ ಪ್ರದೇಶದಿಂದ ಹುಲಿಗಳನ್ನು ಸ್ಥಳಾಂತರಿಸಿ ಹುಲಿ

ಪ್ರಭೇದಗಳ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ವನ್ಯಜೀವಿ ಮಂಡಳಿಯು ಶಿಫಾರಸ್ಸನ್ನು ಮಾಡಿತು. ಈ ಶಿಫಾರಸ್ಸಿನ ಅನ್ವಯ ಅಭಯಾರಣ್ಯದ ಒಳ ಭಾಗದಲ್ಲಿರುವ ಮೂರು ಮುಖ್ಯ ಹಳ್ಳಿಗಳನ್ನು ಸ್ಥಳಾಂತರಿಸುವ ಪ್ರಕಲ್ಪವೊಂದನ್ನು ರಾಜಸ್ಥಾನ ಸರ್ಕಾರ ನಿರ್ಧರಿಸಿತು. ಈ ಹಿಂದೆ (ಕಾಯ್ದಿರಿಸಿದ ಪ್ರದೇಶವನ್ನಾಗಿಸಿದಾಗ) ಸ್ಥಳಾಂತರಗೊಳ್ಳುವ ಹಳ್ಳಿಗಳ ಪುನರ್ವಸತಿಗಾಗಿ ೨೧, ಏಪ್ರಿಲ್ ೧೯೭೬ ರಲ್ಲಿ ರುಂಧಾ ಬಂಡಿಪುಲ್ ಮತ್ತು ರುಂಧಾ ದುಲ್ವಾ ಕಾಯ್ದರಿಸಿದ ಅರಣ್ಯ ಪ್ರದೇಶಗಳನ್ನು ಕಂದಾಯ ಭೂ ಹಿಡುವಳಿಗಳನ್ನಾಗಿ ಪರಿವರ್ತಿಸಿ ಆದೇಶವನ್ನು ನೀಡಿತು. ೧೯೭೭ ರಲ್ಲಿ ೩೫ ಕುಟುಂಬಗಳನ್ನು ಕರಣಕವಾಸ ಮತ್ತು ೬೯ ಕುಟುಂಬಗಳನ್ನು ಕರಸ್ಕಾ ಹಳ್ಳಿಗಳಿಂದ ರುಂಧಾ ದುಲ್ವಾ ಪ್ರದೇಶಗಳಿಗೆ ಸ್ಥಳಾಂತರಿಸಲಾಯಿತು. ನಂತರ ಹಳ್ಳಿಗಳಿದ್ದ ಪ್ರದೇಶಗಳನ್ನು ಕಾಯ್ದಿರಿಸಿದ ಅರಣ್ಯಗಳಾಗಿ ಪರಿವರ್ತಿಸಲಾಯಿತು ಮತ್ತು ಆ ಪ್ರದೇಶದಲ್ಲಿ ತಮ್ಮ ಸಾಂಸ್ಕೃತಿಕ ಹಬ್ಬಗಳನ್ನು ಆಚರಿಸಲು ಗುಜ್ಜಾರ್ ಸಮುದಾಯಕ್ಕೆ ಮಾತ್ರ ಅವಕಾಶವನ್ನು ನೀಡಲಾಯಿತು. ಸ್ಥಳಾಂತರಗೊಂಡ ಹಳ್ಳಿಗರ ಜೀವನೋಪಾಯಕ್ಕೆ ಕೊಂಚ ಹಣವನ್ನು ನಿಡಲಾಯಿತ್ತು, ಅದರೆ ೧೯ ಕುಟುಂಬಗಳು ಸರ್ಕಾರವು ನೀಡಿದ್ದ ಭೂ ಹಿಡುವಳಿಗಳನ್ನು ಮಾರಿಕೊಂಡು ಉಳಿದಿದ್ದ ಭೂ ಹಿಡುವಳಿ ರಹಿತ ಕುಟುಂಬಗಳೊಂದಿಗೆ ಪುನಃ ಪೂರ್ವದ ಸ್ಥಳಕ್ಕೆ ಬಂದು ನೆಲೆಸಿದರು. ಕಾರಣ ೧೪% ಕೃಷಿ ಚಟುವಟಿಕೆ ಆಧಾರಿತ ಕುಟುಂಬಗಳಿಗೆ ನೀಡಿದ್ದ ಭೂ ಹಿಡುವಳಿಗಳು ವ್ಯವಸಾಯಕ್ಕೆ ಯೋಗ್ಯವಲ್ಲದ ಭೂಮಿಯಾಗಿತ್ತು, ಅಲ್ಲದೆ ಸ್ಥಳಾಂತರಗೊಳ್ಳುವಾಗ ಅರಣ್ಯ ಇಲಾಖೆಯು ನೀಡಿದ್ದ ಭರವಸೆಗಳನ್ನು (ಮೂಲಭೂತ ಸೌಕರ್ಯ) ನೀಡದಿರುವುದು ಪ್ರಮುಖ ಕಾರಣವಾಗಿತ್ತು. ಈ ಅನುಭವದ ಆಧಾರದ ಮೇಲೆ ೧ ಮಿಲಿಯನ್ ಪರಿಹಾರ ಘೋಷಣೆಯೊಂದಿಗೆ ಸರ್ಕಾರ ಪುನರ್ವಸತಿಗೆ ಅಹ್ವಾನವಿತ್ತಿತ್ತು. ಆದರೆ, ಗುಜ್ಜಾರ್ ಮತ್ತು ಇತರೆ ಸಮುದಾಯದವರು ಈ ಯೋಜನೆಯ ಪರಿಹಾರವನ್ನು ನಿರಾಕರಿಸಿದರು. ಹೈನುಗಾರಿಕೆಯ ಮೂಲ ವೃತ್ತಿಯಲ್ಲಿರುವ ನಾವು ನೀರು ಮತ್ತು ಆಹಾರಕ್ಕಾಗಿ ಸ್ಥಳೀಯಅರಣ್ಯ ಮತ್ತು ಅರಣ್ಯ ಉತ್ಪತ್ತಿಗಳನ್ನು ನಂಬಿಕೊಂಡಿದ್ದೇವೆ, ಇನ್ನುಳಿದ ೧೪% ಕುಟುಂಬಗಳು ಕೃಷಿ ಆಧರಿಸಿದ್ದು, ಪುನರ್ವಸತಿ ಹೊಂದುವ ಪ್ರದೇಶದಲ್ಲಿ ಇರುವ ನೀರಿನ ಮತ್ತು ಕೃಷಿಗೆ ಯೋಗ್ಯವಲ್ಲದ ಭೂಮಿಯನ್ನು ಒಪ್ಪುವುದಿಲ್ಲವೆಂದು ಘೋಷಣೆಗೈದರು. ಆದರೂ ಕೆಲವು ಕುಟುಂಬಗಳು ಇರುವ ಸ್ಥಳಗಳನ್ನು ತೊರೆದು ಪರಿಹಾರವನ್ನು ಆಶ್ರಯಿಸಿದ್ದಾರೆ. ಇದರ ಫಲವಾಗಿ ಹೈನುಗಾರಿಕೆಯನ್ನು ಮೂಲ ವೃತ್ತಿಯಾಗಿ ಹೊಂದಿದ್ದ ಸಮುದಾಯವು ಕೃಷಿಯನ್ನು ಜೀವನೋಪಾಯಕ್ಕಾಗಿ ಅವಲಂಬಿಸಬೇಕಾಯಿತು. ವೃತ್ತಿ ಬದಲಾವಣೆಯ ಕಾರಣ ಅಲ್ಲಿನ ಗುಜ್ಜಾರ್ ಸಮುದಾಯಕ್ಕೆ ೪೦% ವಾರ್ಷಿಕ ವರಮಾನವು ಕಡಿಮೆಯಾಗಿ ಜೀವನೋಪಾಯವು ಕಷ್ಟಕರವಾಗಿ ಪರಿಣಮಿಸಿದೆ[೮]. (Meena, 2015).

ನಾಗರಹೊಳೆ ರಾಷ್ಟ್ರೀಯ ಉದ್ಯಾನವನ: ನಾಗರಹೊಳೆಯ ರಾಜೀವ್ ಗಾಂಧೀ ರಾಷ್ಟ್ರೀಯ ಉದ್ಯಾನವನ – ೬೪೩.೩೬ ಚ.ಕೀಮಿ ವ್ಯಾಸದ ಮೈಸೂರು, ಮತ್ತು ಕೊಡಗು ಜಿಲ್ಲೆಗಳನ್ನು ಆಧರಿಸಿ ವಿಶ್ವ ಬ್ಯಾಂಕ್ ಹಾಗೂ ಜಾಗತಿಕ ಪರಿಸರ ಸೌಲಭ್ಯಗಳ ಸಂಸ್ಥೆಯ ಸಹಾಯದಲ್ಲಿ ಅರಣ್ಯ ಮತ್ತು ಹುಲಿ ಸಂರಕ್ಷಣೆಗೆ ಮುಂದಾಗಿದ್ದು, ಉದ್ಯಾನವನ ಪ್ರದೇಶಗಳಲ್ಲಿ ವಾಸಿಸುತ್ತಿರುವ, ಪೂರ್ವ ಕಾಲದಿಂದಲೂ ನೆಲೆಗೊಂಡಿರುವ ಬೆಟ್ಟ ಕುರುಬ, ಜೇನು ಕುರುಬ ಮತ್ತು ಎರವರ ಹಾಡಿಗಳನ್ನು

ನಾಗರಹೊಳೆ ಸಮೀಪದ ನಾಗಾಪುರ ಹಳ್ಳಿಗೆ ೧,೦೭೩ ಆದಿವಾಸಿ ಸಮುದಾಯದ ೪೦ ಹಾಡಿಗಳನ್ನು (೬,೫೭೯ ಏಕ ವ್ಯಕ್ತಿ) ೨೦೦೩ ರ ಒಳಗಾಗಿ ಸ್ಥಳಾಂತರಗೊಳಿಸಲು ನಿರ್ಧರಿಸಿದ್ದರು. ಅದರಂತೆ ಬಿ ಓ ಟಿ ಡಿ – ಬೆನಿಪಿಷಿಯರಿ ಓರಿಯನ್ಟೆಡ್ ಟ್ರೈಬಲ್ ಡೆವೆಲಪ್ ಮೆಂಟ್ ಯೋಜನೆಯ ಮುಖಾಂತರ ಭಾರತ ಸರ್ಕಾರದ ಅರಣ್ಯ ಪರಿಸರ ಅಭಿವೃದ್ಧಿ ಸಹಾಯದೊಂದಿಗೆ ಅರಣ್ಯವಾಸಿಗಳನ್ನು ಅರಣ್ಯದಿಂದ ೨ ತಂಡಗಳಾಗಿ ವಿಂಗಡಿಸಿ ೨೦೫ ಕುಟುಂಬಗಳನ್ನು , ಮೊದಲ ಹಂತದಲ್ಲಿ ೫೦ ಕುಟುಂಬಗಳನ್ನು ೧೯೯೪ ರಲ್ಲಿ ಮತ್ತು ಎರಡನೇ ಹಂತದಲ್ಲಿ ಆಗಸ್ಟ್ ೨೦೦೦ರ ವೇಳೆಗೆ ೧೫೫ ಕುಟುಂಬಗಳನ್ನು ನಾಗಪುರ ಹಳ್ಳಿಗೆ ಸ್ಥಳಾಂತರಿಸಿಲಾಗಿದೆ. ಆದರೂ ಇಂದಿಗೂ ಕೂಡ ಗಿರಿಜನರಿಗೆ ಸರ್ಕಾರದಿಂದ ಬಿಓಟಿಡಿ ಯೋನೆಯ ಮುಖಾಂತರ ಯಾವ ಸೌಲಭ್ಯವೂ ಲಭ್ಯವಾಗಿಲ್ಲದಿರುವುದು ಅವರನ್ನು ಪುನಃ ಕಾಡಿನತ್ತ ಪಯಣಿಸಲು ಪ್ರೇರೇಪಿಸಿದಂತಾಗಿರ್ದೆ. (ಹನುಮಂತಪ್ಪ, ೨೦೧೦).

ಅಣಶಿ ರಾಷ್ಟ್ರೀಯ ಉದ್ಯಾನವನ: ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯ ಅಣಶಿ ರಾಷ್ಟ್ರೀಯ ಉದ್ಯಾನವನವು ೧,೧೧೬,೬೭ ಚ. ಕೀಮಿ ವ್ಯಾಸ ಹೊಂದಿದ್ದು, ದಾಂಡೇಲಿ ಅರಣ್ಯವನ್ನು ೪೭೫.೦೧೮ ಮತ್ತು ಅಣಶಿಯ ೩೫೯.೮೬೬ ಚ.ಕೀಮಿ ವ್ಯಾಸದಲ್ಲಿ ಭಾಗವಾಗಿ ಹೊಂದಿದೆ, ಅಲ್ಲದೆ ಈಚೆಗೆ ಕಾಳಿ ಹುಲಿ ಸಂರಕ್ಷಿತ ಮತ್ತು ರಾಷ್ಟ್ರೀಯ ಉದ್ಯಾನವನ್ನಾಗಿ ನಾಮಕರಣವನ್ನು ಮಾಡಲಾಗಿದೆ. ಈ ಪ್ರದೇಶದಲ್ಲಿ ೫೬ ಗ್ರಾಮಗಳ ೫೦೦ ಕುಟುಂಬಗಳನ್ನು ಮೊದಲ ಹಂತದಲ್ಲಿ ೩೨೦ ಮತ್ತು ಎರಡನೇ ಹಂತದಲ್ಲಿ ೧೮೦ ಕುಟುಂಬಗಳನ್ನು ಜೋಯ್ಡ ಮತ್ತು ಸಮೀಪದ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

ಭದ್ರಾ ಹುಲಿ ಅಭಯಾರಣ್ಯ: ರಾಜ್ಯದ ಚಿಕ್ಕಮಗಳೂರು ಜಿಲ್ಲೆಯ ಭದ್ರಾ ನದಿಯ ತಟದಲ್ಲಿರುವ ಈ ಸ್ಥಳದಲ್ಲಿ, ಭಧ್ರಾ ಹುಲಿ ಮತ್ತು ಅರಣ್ಯ ಸಂರಕ್ಷಣಾ ಯೋಜನೆಯಡಿ ೪೧೯ ಕುಟುಂಬಗಳನ್ನು ಎರಡು ಹಂತದಲ್ಲಿ ಅಂದರೆ, ೨೫೭ ಕುಟುಂಬಗಳು ೬೧%, ೨೦೦೦ ಇಸವಿಯ ಮೊದಲ ಹಂತದಲ್ಲಿ ಹಾಗೂ ಎರಡನೇ ಹಂತದಲ್ಲಿ ೨೩೨ ಕುಟುಂಬಗಳು ೫೧%, ೨೦೦೬ ರಲ್ಲಿ ಎಂ.ಸಿ ಹಳ್ಳಿ ಮತ್ತು ಕೆಳಗೂರು ಗ್ರಾಮಗಳಿಗೆ ಸ್ಥಳಾಂತರಿಸಲ್ಪಟ್ಟಿವೆ. ಭದ್ರಾ ವನ್ಯಜೀವಿ ಅಭಯಾರಣ್ಯ ಭೂಸ್ವಾಧೀನ ಮತ್ತು ಪುನರ್ವಸತಿ ಯೋಜನೆ ಜಾರಿಯ ಕುರಿತಾಗಿ ಸಚಿವ ಸಂಪುಟದ ಟಿಪ್ಪಣಿಯನ್ನು ಪರಾಮರ್ಶಿಸಲಾಗಿದೆ. ಈ ವರದಿಯ ಅನುಸಾರವಾಗಿ ಭದ್ರಾ ಅಭಯಾರಣ್ಯ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳ ೪೯೨.೪೬ ಚ.ಕಿಮೀ ಪ್ರದೇಶದ ವ್ಯಾಪ್ತಿಯಲ್ಲಿ ಹರಡಿದ್ದು, ಭದ್ರಾ ಅಭಯಾರಣ್ಯ ಘೋಷಣೆಯ ಆರಂಭದ ಅಧಿಸೂಚನೆಯನ್ನು ರಾಜ್ಯ ಸರ್ಕಾರವು ಸಂ. ಎ.ಎಫ್.ಡಿ ೨೫ಎಫ್ ಡಬ್ಲ್ಯೂಎಲ್ ೭೪ ದಿ:೬.೯.೧೯೭೪ ಸರ್ಕಾರಿ ಆದೇಶದಲ್ಲಿ ಹೊರಡಿಸಿತು. ಅಂತಿಮ ಅಧಿಸೂಚನೆಯನ್ನು ಸಂ.ಎಫ್.ಈ ೫೮ ಎಫ್ ಡಬ್ಲ್ಯೂಎಲ್ ೯೬ ದಿ:೯.೩.೯೮ರ ಸರ್ಕಾರಿ ಆದೇಶದಲ್ಲಿಹೊರಡಿಸಲಾಯಿತು. ಈ ಆದೇಶದನ್ವಯ ಪ್ರಾಣಿ ಸಂಕುಲವನ್ನು ಪೋಷಿಸುವ ಅದರ ಸಾಮರ್ಥ್ಯವನ್ನು ಮನಗಂಡು, ಭಾರತ ಸರ್ಕಾರವು ೧೯.೧೧.೧೯೯೮ ರಲ್ಲಿ ಹುಲಿ ಯೋಜನೆ ಅಭಯಾರಣ್ಯವಾಗಿ ಮೇಲ್ದರ್ಜೆಗೇರಿಸಿತು. ಭದ್ರಾ ಅಭಯಾರಣ್ಯದಲ್ಲಿ ೭೩೬ ಕುಟುಂಬ ಹೊಂದಿರುವ ೧೬ ಗ್ರಾಮಗಳಿವೆ. ಈ ಗ್ರಾಮದ ೮೬೧

ಎಕರೆ ಕಂದಾಯ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಅಭಯಾರಣ್ಯದ ಹೊರಗೆ ಅವರನ್ನು ೧೨.೭೬ ಕೋಟಿ ರೂ ಅಂದಾಜು ವೆಚ್ಚದಲ್ಲಿ ಪುನರ್ವಸತಿಗೊಳಿಸುವ ಬಗ್ಗೆ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಗಳು ೧೯೯೨ರಲ್ಲಿ ಯೋಜನೆಯೊಂದನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಅದರ ಪ್ರಕಾರ ಪುನರ್ವಸತಿ ಫಲಾಭವಿಗಳ ಕುಟುಂಬದ ಸಂಖ್ಯೆ ೭೩೬ ಮತ್ತು ಸ್ವಾಧೀನ ಪಡಿಸಿಕೊಳ್ಳಲಾದ ಕಂದಾಯ ಭೂಮಿ ೮೬೧.೨೯ ಎಕರೆಗಳು. ಭದ್ರಾ ಅಭಯಾರಣ್ಯದಿಂದ ಮೊದಲ ಹಂತದಲ್ಲಿ ಸ್ಥಳಾಂತರಗೊಂಡವರು ತರೀಕರೆ ತಾಲೂಕಿನ ಎಂ.ಸಿ ಹಳ್ಳಿ ವ್ಯಾಪ್ತಿಯಲ್ಲಿ ಬಂದು ನೆಲೆಸಿದರು. ಆ ಸಮಯದಲ್ಲಿ ಎಂ.ಸಿ ಹಳ್ಳಿಯ ರೈತರು ಮತ್ತು ಇತರೆಯವರು ಈ ಪ್ರಾಂತ್ಯದಿಂದ ಬಂದವರನ್ನು ನಮ್ಮವರೆಂದು ಪರಿಗಣಿಸುತ್ತಿರಲಿಲ್ಲ, ಬದಲಾಗಿ ಹಲವು ವಿಷಯಗಳ ಮೇಲೆ ನಮ್ಮ ಮತ್ತು ಅವರ ನಡುವೆ ಸಂಘರ್ಷಗಳು ಏರ್ಪಟ್ಟು ಸ್ಥಳಕ್ಕೆ ಪೋಲಿಸ್ ಮೊಕ್ಕಾಮ್ ಊಡುವ ಪ್ರಮೇಯವೇರ್ಪಟ್ಟಿತ್ತು. ಪುನರ್ವಸತಿ ಹೊಂದಿದ ಹಲವು ರೈತ ಕುಟುಂಬಗಳು ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಸಿಕ್ಕಂತಹ ಸ್ವತ್ತುಗಳಲ್ಲಿ ತಮ್ಮ ಜೀವನವನ್ನು ಸುಖಿಯಾಗಿಸಿಕೊಂಡಿದ್ದಾರೆ, ಮತ್ತು ಕೆಲವರು ಸಿಕ್ಕ ಸ್ವತ್ತುಗಳನ್ನು ಮಾರಿ, ಮೂಡಿಗೆರೆಯ ವಾತಾವರಣಕ್ಕೆ ಪುನಃ ಸ್ಥಳಾಂತರ ಹೊಂದಿದ್ದಾರೆ. ಮೂಲ ಸ್ಥಳದಿಂದ ಸ್ಥಳಾಂತರವಾಗುವ ಸಂದರ್ಭದಲ್ಲಿ ಸರ್ಕಾರವು ಹಲವು ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿತ್ತು, ಆದರೆ ಇಂದಿಗೂ ಆ ಭರವಸೆಗಳನ್ನು ನೀಡಿಲ್ಲ. ಈ ಕುರಿತಾಗಿ ಭದ್ರಾ ಪುನರ್ವಸತಿಗರು ಕೋರ್ಟ್‌ನಲ್ಲಿ ದಾವೆಯನ್ನು ಹೂಡಿ ೧೩ ವರ್ಷಗಳಿಂದ ಸತತ ಹೋರಾಟ ಮಾಡುತ್ತಾ ಬಂದಿದ್ದೇವೆ. ಆದರೆ ಅದು ಇಂದಿಗೂ ಪರಿಹಾರವಾಗದೇ ಉಳಿದಿದೆ.[೧೦]

ಕುದುರೆಮುಖ ರಾಷ್ಟ್ರೀಯ ಉದ್ಯಾನವನ: ರಾಜ್ಯದ ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ತಾಲೂಕುಗಳನ್ನು ಒಳಗೊಂಡಂತೆ ಹೊಂದಿರುವ ಈ ಉದ್ಯಾನವನವು ೧೯೮೭ರಲ್ಲಿ ಘೋಷಣೆಯಾಗಿ, ಹತ್ತು ವರ್ಷಗಳ ಕಾಲ ಸ್ಥಳಿಯರ ಗಮನಕ್ಕೆ ಬಾರದಂತೆ, ೧೯೯೭-೯೮ರಲ್ಲಿ ಜನರ ಹಕ್ಕು ಪ್ರತಿಪಾದಿಸುವಿಕೆಗೆ ಆಯಾ ಜಿಲ್ಲೆಯ ಉಪ ವಿಭಾಗಾಧಿಕಾರಿಗಳ ನೇತೃತ್ವದ ಮುಖಾಂತರ ಸ್ಥಳೀಯಜನರಿಗೆ ಸೂಚನೆಯನ್ನು ಕಳುಹಿಸಲಾಗುತ್ತದೆ. ಆ ಸೂಚನೆ ಪ್ರಕಾರವಾಗಿ ಸ್ಥಳೀಯ ಜನರು ತಮ್ಮ ಹಕ್ಕುಗಳನ್ನು ಪ್ರತಿಪಾಧಿಸಿ, ರಾಷ್ಟ್ರೀಯ ಉದ್ಯಾನವನದ ರಚನೆಗೆ ವಿರೋಧ ವ್ಯಕ್ತಪಡಿಸಿದರು, ವನ್ಯಜೀವಿ ಕಾಯ್ದೆಯ ೨೪ (೧) ವಿಧಿ ಅನ್ವಯ ಸೆಟಲ್ಮೆಂಟ್ ಆಫ್ ಕ್ಲೇಮ್‌ಗಳನ್ನು ಮಾಡದೆ, ಜನರ ವಿರೋಧವಿದ್ದಾಗ್ಯೂ, ೨೦೦೧ರಲ್ಲಿ ಪೂರ್ಣ ಪ್ರಮಾಣದ ಉದ್ಯಾನವನ್ನಾಗಿ ಘೋಷಣೆ ಹೊರಡಿಸುತ್ತಾರೆ. ಈ ಸಮಯದಲ್ಲಿ ಹಲವು ಸಮಸ್ಯೆಗಳ ನಡುವಿನಲ್ಲಿದ್ದ ಗಿರಿಜನರ ಮತ್ತು ರೈತರ ಪರಿಸ್ಥಿತಿಗಳನ್ನು ಗಮನದಲ್ಲಿರಿಸಿಕೊಂಡು ನಕ್ಸಲ್ ಗುಂಪೊಂದು ಈ ವ್ಯಾಪ್ತಿಯ ಪ್ರದೇಶದಲ್ಲಿ ಕಾಲಿರಿಸಿ ಕಾರ್ಯಚಟುವಟಿಕೆಗಳನ್ನು ಆರಂಭಿಸುತ್ತದೆ. ಈ ವೇಳೆಯಲ್ಲಿ ಸರ್ಕಾರವು ಮೇಲಿಂದ ಮೇಲೆ ಹಲವು ಕಾನೂನು ಮತ್ತು ರೂಪು ರೇಷೆಗಳನ್ನು ರೂಪಿಸಿ ಕ್ರಮ ಬದ್ಧತೆಯನ್ನು ಹೊಂದಿಲ್ಲದಂತೆ ಆದೇಶ ಹೊರಡಿಸಿದರೂ, ಸರ್ಕಾರವನ್ನು ನಂಬದ ಸ್ಥಿತಿಗೆ ಅಲ್ಲಿನ ಗಿರಿಜನರು ಮತ್ತು ರೈತರು ತಲುಪಿದರು. ನಕ್ಸಲ್ ಕಾರ್ಯಚಟುವಟಿಕೆಗಳನ್ನು ನಿಗ್ರಹಿಸಲು ನಕ್ಸಲ್ ನಿಗ್ರಹ ದಳ ಈ ಪ್ರಾಂತ್ಯಕ್ಕೆ ನಿಯೋಜನೆಗೊಂಡ ಮೇಲೆ, ಸ್ಥಳೀಯರು

ತನಿಖೆಗಳನ್ನು ಎದುರಿಸಬೇಕಾಯಿತು. ಎನ್‌ಕೌಂಟರ್‌ಗಳ ಮುಖಾಂತರ ನಕ್ಸಲ್ ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸಲು ಪ್ರಯತ್ನಿಸಲಾಯಿತು. ಸರ್ಕಾರವು ಶಸ್ತ್ರಗಳನ್ನು ಹಿಡಿದು ಹೋರಾಟ ಮಾಡುವವರ ಬೇಡಿಕೆಗಳಿಗೆ ಶೀಘ್ರವೇ ಸ್ಪಂದಿಸ ತೊಡಗಿತು. ಆದರೂ ಈ ಪ್ರದೇಶದಲ್ಲಿ ನಕ್ಸಲ್ ಪ್ಯಾಕೇಜ್ ಮತ್ತು ನಕ್ಸಲ್ ಹೆಸರಿನಲ್ಲಿ ಹಲವಾರು ಜನರು ತಮ್ಮ ಜೇಬುಗಳನ್ನು ತುಂಬಿಸಿಕೊಂಡಿರುವುದು ಸತ್ಯ. ನಕ್ಸಲ್ ಕಾರ್ಯಚರಣೆ ವೇಳೆ ಪೋಲಿಸರು ಸ್ಥಳಿಯರ ಮೇಲೆ ಕೇಸ್ ಗಳನ್ನು ದಾಖಲಿಸತೊಡಗಿದರು, ಸಮೂಹ ಮಾಧ್ಯಮಗಳು ಚುರುಕಾಗಿ ಕಾರ್ಯ ನಿರ್ವಹಿಸಿ ಸ್ಥಳೀಯರ ಪರವಾಗಿ ನಿಂತಾಗ ಪೋಲಿಸ್ ಕಾರ್ಯಚರಣೆಯು ನಿಧಾನ ಗತಿಯಲ್ಲಿ ಸ್ಥಗಿತಗೊಂಡಿತು. ದಿನಗಳು ಗತಿಸಿದಂತೆ ನಕ್ಸಲ್ ಚಟುವಟುಕೆಯು ಸ್ಥಗಿತಗೊಂಡಿತು. ಈ ಮೇಲಿನ ಎಲ್ಲಾ ಕಾರ್ಯ ಚಟುವಟಿಕೆಗಳು ಗತಿಸಿದರೂ, ಸ್ವ ಇಚ್ಚೆ ಮೇರೆಗೆ ಸ್ಥಳಾಂತರಗೊಳ್ಳುವವರು ಸ್ಥಳಾಂತರಕ್ಕೆ ಅರ್ಜಿ ಸಲ್ಲಿಸಿ ಪುನರ್ವಸತಿ ಪರಿಹಾರ ಪಡೆಯುತ್ತಿದ್ದಾರೆ. ಇದರೊಂದಿಗೆ ಸರ್ಕಾರವೇ ಹುಲಿ ಯೋಜನೆಯನ್ನು ಈ ಪ್ರಾಂತ್ಯಕ್ಕೆ ರೂಪಿಸಲು ಯೋಚಿಸುತ್ತಿರುವಾಗಲೇ ಕೆಲವು ಸರ್ಕಾರೇತರ ಸಂಸ್ಥೆಗಳು ಹುಲಿ ಯೋಜನೆ ಇಲ್ಲಿ ಜಾರಿಯಾಗುತ್ತಿದೆ ಎಂದು ಜನರನ್ನು ಒಕ್ಕಲೆಬ್ಬಿಸಿ ಸ್ವ ಇಚ್ಚೆಯ ಸಂಕೋಲೆಯಲ್ಲಿ ಬಂಧಿಸಿ ಅವರ ಸ್ವತ್ತುಗಳನ್ನು ಕಡಿಮೆ ಬೆಲೆಗೆ ಪಡೆದಿದ್ದಾರೆ, ಹಾಗೂ ಪುನರ್ವಸತಿ ವ್ಯವಸ್ಥೆ ಕಲ್ಪಿಸುವ ಸಂದರ್ಭದಲ್ಲಿ ಅವರ ಹಣವನ್ನೇ ಬಳಸಿ ಕೃಷಿ ಜಮೀನುಗಳನ್ನು ಕ್ರಯಕ್ಕೆ ಕೊಡಿಸಿರುತ್ತಾರೆ. ಆದರೆ, ಅದು ಇನ್ನು ಅಕ್ರಮ ಸಕ್ರಮದ ಅಡಿಯಲ್ಲಿ ನೊಂದಾಯಿತವಾಗಿರುವುದರಿಂದ ಕಂದಾಯ ಇಲಾಖೆಯಿಂದ ಸಂತ್ರಸ್ಥರ ಹೆಸರಿಗೆ ವರ್ಗಾಯಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರವು ೨೦೦೫ ರಿಂದ ಪುನರ್ವಸತಿ ವ್ಯವಸ್ಥೆಯನ್ನು ಜಾರಿಗೊಳಿಸಿದ್ದು, ಸ್ವ ಇಚ್ಚೆ ಮೇರೆಗೆ ಅರ್ಜಿ ಸಲ್ಲಿಸುವ ಕುಟುಂಬಗಳ ಸ್ವತ್ತುಗಳನ್ನು ಆಧರಿಸಿ ನೈಜ ಮೌಲ್ಯ (ಆಕ್ಚುಯಲ್ಸ್)ಗಳ ಮೇಲೆ ಹಣದ ಹುಂಡಿಗಳನ್ನು ನೀಡುತ್ತಿದೆ. ಈ ಸ್ಥಳದಿಂದ ಒಮ್ಮೆ ಅವರು ಪುನರ್ವಸತಿ ಹೊಂದಿದ ಮೇಲೆ ಮರು ವಾಪಾಸಾಗಲು ಅವಕಾಶವಿರುವುದಿಲ್ಲ.

ವಿಭಿನ್ನತೆ

೦೧. ಹುಲಿ ಯೋಜನೆಗಳಲ್ಲಿ ಸಂದರ್ಭೋಚಿತ ಒತ್ತಡ ಪೂರ್ವಕ ಸ್ಥಳಾಂತರದಂತೆ ಪ್ರಕ್ರಿಯೆಗಳಿರದೆ, ಸ್ವ ಇಚ್ಚೆ ಮೇರೆಗೆ ಅರ್ಜಿ ಸಲ್ಲಿಸುವಿಕೆಗೆ ಅವಕಾಶ ಕಲ್ಪಿಸಲಾಗಿದೆ.

೦೨. ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು ಸಾರ್ವಜನಿಕರ ವಿರೋಧದ ನಡುವೆಯೇ ಉದ್ಯಾನವನವೆಂದು ಘೋಷಣೆ ಮಾಡಲಾಗಿದೆ.

೦೩. ಸ್ವ ಇಚ್ಚೆ ಮೇರೆಗೆ ಅರ್ಜಿ ಸಲ್ಲಿಸುವ ಕುಟುಂಬಗಳ ಪಟ್ಟಾ ಭೂ ಹಿಡುವಳಿ ಮತ್ತು ವಸತಿ ವ್ಯವಸ್ಥೆಗಳ ಮೇಲಿನ ನೈಜ ಮೌಲ್ವಿಕರಣದ ಆಧಾರದ ಮೇಲೆ ಮೌಲ್ಯಗಳು ನಿರ್ಧಾರವಾಗುತ್ತದೆ.

೦೪. ಆ ಮೌಲ್ಯಗಳಿಗೆ ಸರ್ಕಾರದಿಂದ ಜೀವನ ನಿರ್ವಹಣೆ, ಸ್ವತ್ತು ಸಾಗಾಟ, ಜೀವನೋಪಾಯದ ಆಧಾರಿತವಾಗಿ ಹಣವನ್ನು ನೀಡುತ್ತಾರೆ. (ಸರ್ಕಾರದಿಂದ ಆದೇಶಿಸಿದ ಮೌಲ್ಯಮಾತ್ರ).

೦೫. ನಕ್ಸಲ್ ಕಾರ್ಯಚಟುವಟಿಕೆಗಳನ್ನು ಕಂಡ ಈ ಪ್ರಾಂತ್ಯದಲ್ಲಿ ಸ್ಥಳೀಯರ ಮೇಲೆ ಪೋಲಿಸ್ ಕಾರ್ಯಚರಣೆ ವೇಳೆ ಸಾಕಷ್ಟು ಕೇಸ್‌ಗಳನ್ನು ದಾಖಲಿಸುವ ಮುಖಾಂತರ ಸ್ಥಳೀಯರು ಕೋರ್ಟ್ ಮೆಟ್ಟಿಲುಗಳನ್ನು ಏರಬೇಕಾಯಿತು.

೦೬. ಗಣಿಗಾರಿಕೆ ಪ್ರದೇಶದಿಂದ ಒಮ್ಮೆ ಸ್ಥಳಾಂತರ ಹೊಂದಿದವರು, ರಾಷ್ಟ್ರೀಯ ಉದ್ಯಾನವನದ ಯೋಜನೆಯಿಂದ ಮರು ಸ್ಥಳಾಂತರಕ್ಕೆ ಒಳಗಾಗ ಬೇಕಾದ ಸ್ಥಿತಿ ಬಂದೊದಗಿದೆ.

೦೭. ಮಾನವ ಮತ್ತು ವನ್ಯಜೀವಿ ನಡುವೆ ಸಂಘರ್ಷಗಳು ಇಂದಿಗೂ ಗತಿಸಿಲ್ಲ ಹಾಗೂ ಅವುಗಳ ಆಧಾರಿತವಾಗಿ ಯಾವ ವರದಿಯೂ ಪ್ರಕಟಗೊಂಡಿಲ್ಲ.

೦೮. ಕುದುರೆಮುಖ ಪ್ರದೇಶವು ಮಲೆನಾಡಿನ ಸಂಸ್ಕೃತಿಯನ್ನು ಹೊಂದಿದ್ದು, ಚದುರಿದ ವಾಸಿತ ಮನೆಗಳ ವ್ಯವಸ್ಥೆಗಳನ್ನು ಹಾಗೂ ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡಿರುವ ಕೃಷಿ ವ್ಯವಸ್ಥೆಯನ್ನು ಹೊಂದಿದೆ.

೦೯. ಆದಿವಾಸಿ ಸಮುದಾಯಗಳಾದ ಗೌಡಲು ಅವರನ್ನು ಘಟ್ಟದಲ್ಲಿ, ಮಲೆಕುಡಿಯ ಮತ್ತು ಮರಾಠಿನಾಯ್ಕರನ್ನು ಘಟ್ಟದ ಕೆಳಭಾಗದಲ್ಲಿ ಕಾಣಬಹುದು. ವಿಭಿನ್ನ ಪರಿಸರದಲ್ಲಿ ತಮ್ಮದೇ ಆದ ಸಂಸ್ಕೃತಿಯನ್ನು ಉಳಿಸಿಕೊಂಡಿರುವ ಈ ಸಮುದಾಯಗಳು ತಮ್ಮದೇ ಆದ ಸಾಮಾಜಿಕ ಪರಂಪರೆಯನ್ನು ಹಾಗೂ ಆರ್ಥಿಕ ಮೂಲಗಳನ್ನು ಉಳಿಸಿಕೊಳ್ಳಲು ಸವಾಲುಗಳನ್ನು ಎದುರಿಸುತ್ತಿವೆ.

೧೦. ಪರ್ವತ ಶ್ರೇಣಿಗಳನ್ನು ಹೊಂದಿರುವ ಈ ಉದ್ಯಾನವನವು ನೇತ್ರಾವತಿ, ತುಂಗಾ ಮತ್ತು ಭದ್ರಾ ನದಿಗಳ ಉಗಮ ಸ್ಥಾನವನ್ನು ಹೊಂದಿರುವುದಲ್ಲದೆ, ನೆರೆಯ ಆಂಧ್ರಪ್ರದೇಶ ರಾಜ್ಯಕ್ಕು ಮತ್ತು ನಮ್ಮ ರಾಜ್ಯಕ್ಕು ನದಿ ನೀರು ಹರಿಯುವ ಮುಖಾಂತರ ಹಲವು ಕಾರ್ಯಚಟುವಟಿಕೆಗಳಿಗೆ ಮೂಲಾಧಾರವಾಗಿದೆ.

ಸ್ವಾಮ್ಯತೆ

೦೧. ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯ ನಿಟ್ಟಿನಲ್ಲಿ ಅರಣ್ಯವಾಸಿತ ಗಿರಿಜನರು, ರೈತರು ಮತ್ತು ಇತರೆ ಅರಣ್ಯವಾಸಿಗಳ ಒಕ್ಕಲೇಬ್ಬಿಸುವಿಕೆಗೆ, ಪುನರ್ವಸತಿ ಪರಿಹಾರವಾಗಿ ಒಂದು ರೂಪಾಯಿಯಲ್ಲಿ ನಾಲ್ಕಾಣೆಯ ಭಾಗವನ್ನು ಎಲ್ಲಾ ಯೋಜನೆಗಳಲ್ಲಿ ಸಂತ್ರಸ್ಥರಿಗೆ ನೀಡುತ್ತಿದ್ದಾರೆ.

೦೨. ಪರಿಹಾರ ಪಡೆವವರೆಗೂ ಭರವಸೆಗಳನ್ನು ಸರ್ಕಾರದ ವತಿಯಿಂದ ನೀಡಿದರೂ, ಪುನರ್ವಸತಿ ಪರಿಹಾರ ಪಡೆದು ವರ್ಷಗಳೇ ಕಳೆದರು, ಭರವಸೆಗಳು ನೆನೆಗುದಿಯಲ್ಲಿ ಬಿದ್ದು ಆಶಯಗಳು ಶಿಥಿಲವಾಗುತ್ತಿದೆ.

೦೩. ಸಾಮಾನ್ಯವಾಗಿ ಎಲ್ಲಾ ಯೋಜನೆಗಳನ್ನು ಅವಲೋಕಿಸಿದರೆ, ಅರಣ್ಯ ಪ್ರದೇಶಗಳಲ್ಲಿ ವನ್ಯಜೀವಿಗಳಿಗೆ ಸಿಗುವ ರಕ್ಷಣೆ, ಅಲ್ಲಿ ವಾಸವಿರುವ ಸಾರ್ವಜನಿಕರಿಗೆ ಸಿಗುವುದಿಲ್ಲ, ಬದಲಾಗಿ ಅವರ ನೈಜ ಹಕ್ಕುಗಳಾದ ಅರಣ್ಯ ಕಿರು ಉತ್ಪನ್ನಗಳ ಸಂಗ್ರಹ, ಒತ್ತುವರಿ ಸಾಗುವಳಿ ಭೂಮಿಯ ಹಕ್ಕುಗಳು ಮತ್ತು ಆ ಸ್ಥಳಗಳಲ್ಲಿ ಜೀವಿಸುವ ಹಕ್ಕುಗಳು ಮೊಟುಕುಗೊಂಡಿರುವ ಸನ್ನಿವೇಶಗಳನ್ನೇ ಕಾಣಬಹುದು.

೦೪. ಎಲ್ಲಾ ಸ್ಥಳಾಂತರ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯದ ಕೊರತೆಗಳು, ಇಲ್ಲವೆ ಅಲ್ಲಿನ ವಾತವರಣದ ಅಪ ಹೊಂದಾಣಿಕೆಯ ಸಮಸ್ಯೆಯಿಂದ ಬಿಟ್ಟು ಮರು ಅರಣ್ಯ ಜೀವನಕ್ಕೆ ಮರಳಲು ಹಪಹಪಿಸುತ್ತಿದ್ದಾರೆ ಹಾಗೂ ಇದುವರೆಗೂ ನಡೆದ ಪುನರ್ವಸತೀಕರಣಪ್ರಕ್ರಿಯೆಯು, ಸಂಪೂರ್ಣವಾಗಿ ಫಲಕಾರಿಯಾಗಿದೆ ಎಂದು ಹೇಳಲು ಸಾಧ್ಯವಾಗಿಲ್ಲ.

೦೫. ಸ್ಥಳಾಂತರ ಮತ್ತು ಪುನರ್ವಸತೀಕರಣದ ಹಾದಿಯಲ್ಲಿ ಆದಿವಾಸಿ ಗಿರಿಜನರ, ರೈತರ ಮತ್ತು ಅರಣ್ಯವಾಸಿಗಳ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಸಮಸ್ಯೆಗಳು ಹೆಚ್ಚಾಗುತ್ತಾ ಸಾಗಿವೆ ಹೊರತು ಅವರ ಬೆಳವಣಿಗೆ ಮತ್ತು ಅಭಿವೃದ್ಧಿ ಮಾತ್ರ ಅನೇಕ ವರ್ಷಗಳು ಗತಿಸಿದ ನಂತರವೇ ಆಗುವುದು.

೦೬. ಸ್ಥಳಾಂತರ ಮತ್ತು ಪುನರ್ವಸತೀಕರಣಯೋಜನೆಗಳು ವೈಜ್ಞಾನಿಕ ತಳಹದಿಯ ಮೇಲೆ ನಡೆಯದೆ ತಕ್ಷಣದ ಪರಿಹಾರಗಳಾಗಿ ಮಾತ್ರ ಪರಿಗಣಿಸಿ, ಆ ಸ್ಥಳಗಳಿಂದ ಜನರ ಸ್ಥಳಾಂತರವಾಗುತ್ತಿದೆ.

೦೭. ಅರಣ್ಯ ಪ್ರದೇಶದ ಜನರ ಮೂಲ ವೃತ್ತಿಗಳನ್ನು ಪರಿಗಣಿಸಿ ಆಗಬೇಕಾದಂತಹ ಪುನರ್ವಸತಿಗಳು, ಅದಕ್ಕಿಂತ ವಿಭಿನ್ನವಾದ ವೃತ್ತಿ ಪರಿಸರಗಳು ಉಂಟಾಗುತ್ತಿರುವುದರಿಂದ, ಸ್ಥಳಾಂತರಗೊಂಡವರ ಆರ್ಥಿಕ ಸ್ಥಿತಿಗಳು ಆರೋಹಣ ಪಥದ ಕಡೆ ಸಾಗುವ ಬದಲು ಅವರೋಹಣ ಪಥದೆಡೆ ಸಾಗುತ್ತಿದೆ.

ಭಾರತೀಯ ಸಂದರ್ಭದಲ್ಲಿ ಪ್ರಸ್ತುತದವರೆಗೂ ಸಂಭವಿಸಿರುವ ಪೂರ್ವ ಯೋಜಿತವಾದ ಸರ್ಕಾರದ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯ ಪ್ರಕಲ್ಪಗಳಲ್ಲಿ ವೈಜ್ಞಾನಿಕ ತಳಹದಿಯ ಮೇಲೆ ಯಾವ ಯೋಜನೆಯೂ ಅನುಷ್ಠಾನಗೊಂಡಲ್ಲವೆಂಬುದು ಹಲವರ ಅಭಿಪ್ರಾಯವಾಗಿದೆ. ಕೆಲ ಪರಿಸರ ತಜ್ಞರು ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯೇ ಪ್ರಮುಖವಾದದ್ದು ಎಂದು ವಾದಿಸುವುದುಂಟು, ಆದರೆ ವಾಸ್ತವದಲ್ಲಿ 'ನೋಯದವರೆತ್ತ ನೋವ ಬಲ್ಲರು' ಎಂಬುದು ಅಕ್ಷರ ಸಹ ಸತ್ಯವಾಗಿದೆ. ಈ ನಿಟ್ಟಿನಲ್ಲಿ ಉದ್ದೇಶಿತ ಯೋಜನೆಗಳು ಮತ್ತು ಅವು ಅನುಷ್ಠಾನಗೊಳ್ಳುವ ಪ್ರದೇಶಗಳಿಗೆ ಅದರದೇ ಆದಂತಹ ಮಿತಿಯಿರುತ್ತದೆ, ಅದು ಸತ್ಯವೇ ಸರಿ. ಕೇಂದ್ರ ಸರ್ಕಾರದಿಂದ ರಚಿತವಾಗುವ ಕಾನೂನುಗಳು ಎಲ್ಲಾ ಸಂದರ್ಭಕ್ಕೂ ಅನ್ವಯವಾಗುವುದು ಎಷ್ಟು ಖಚಿತವೋ ಹಾಗೆ ಪ್ರತಿ ಯೋಜನೆಗಳು ಅನುಷ್ಠಾನಗೊಳ್ಳುವಾಗ ಅಲ್ಲಿನ ಜನರಿಗೆ ಸೂಕ್ತವಾದ ಪುನರ್‌ವ್ಯವಸ್ಥೆಗಳನ್ನು ಕಲ್ಪಿಸಿಕೊಡುವುದು ಅಷ್ಟೇ ಜವಾಬ್ದಾರಿಯುತ ಕಾರ್ಯವೂ ಕೂಡ ಆಗಿರುತ್ತದೆ. ಸರ್ಕಾರ ರಚಿಸುವ ಕಾನೂನುಗಳೇ ಜನಪರ ಹಿತದ ತಳಹದಿಯ ಮೇಲೆ ರಚಿತವಾಗದೇ ಇರುವಾಗ, ಈ ಪರಿಯ ಸನ್ನಿವೇಶಗಳು ಅನಿವಾರ್ಯವಾಗಿ ಪ್ರತಿಬಿಂಬಿಸುತ್ತವೆ. ಯಾವುದೇ ಯೋಜನೆಗಳಾಗಲಿ ಅದರಲ್ಲಿ ಜನರ ಸಹಭಾಗಿತ್ವವನ್ನು ಪ್ರೋತ್ಸಾಹಿಸಿದರೆ, ಯೋಜನಾ ಫಲಿತಾಂಶಗಳು ಧನಾತ್ಮಕವಾಗಿಯೇ ಹೊರಬರುತ್ತವೆ.

ಸಮಾರೋಪ

ಸ್ಥಳಾಂತರ (ಒಕ್ಕಲೆಬ್ಬಿಸುವಿಕೆ) ಮತ್ತು ಪುನರ್ವಸತೀಕರಣಪ್ರಕ್ರಿಯೆಗೆ ಸಂಬಂಧಿಸಿದಂತೆ, ಒಳಭಾಗದಲ್ಲಿ ನೆಲೆಸಿರುವವರು ಹಲವು ಧನಾತ್ಮಕ ಅಂಶಗಳ ಆಧಾರಿತವಾಗಿ ಮೂಲಭೂತ ಸೌಕರ್ಯಗಳನ್ನು ಸರ್ಕಾರ ಇಲ್ಲಿಯೇ ಕಲ್ಪಿಸಲಿ, ಹಾಗೂ ಅರಣ್ಯ ಮಕ್ಕಳಾದ ನಾವು ಈ ಪ್ರದೇಶದಿಂದ ಹೊರ ಪ್ರಪಂಚಕ್ಕೆ ಒಕ್ಕಲೆದ್ದರೆ, ಅಲ್ಲಿನ ಸ್ಥಿತಿಗಳಲ್ಲಿ ನಾವು ಸವಾಲುಗಳನ್ನು ಎದುರಿಸಿ ಬದುಕು ಕಟ್ಟಿಕೊಳ್ಳಲು ಸಾಧ್ಯವಿಲ್ಲ ಎಂದು ಅಭಿಪ್ರಾಯಿಸಿದ್ದಾರೆ. ಪರಿಸರ ವಾದಿಗಳಲ್ಲಿ ವಿಭಿನ್ನ ವಾದಗಳನ್ನು ಕಾಣುವಂತಿದ್ದು, ಒಂದು ಪ್ರಕಾರದಲ್ಲಿ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ ಇಂದಿನ ಸ್ಥಿತಿಗಳಿಗೆ ಅನಿವಾರ್ಯವಾಗುವುದರೊಂದಿಗೆ ಸ್ಥಳೀಯ ಜನರನ್ನು ಒಕ್ಕಲೆಬ್ಬಿಸುವುದು ಅನಿವಾರ್ಯವೆಂದು ಒಂದು ಪಂಗಡವು ವಾದಿಸಿದರೆ, ಅರಣ್ಯ ಸಂರಕ್ಷಣೆ ಕೇವಲ ಸ್ಥಳಿಯರನ್ನು ಒಕ್ಕಲೆಬ್ಬಿಸುವಿಕೆಯಿಂದ ಅಸಾಧ್ಯವಾಗುತ್ತದೆ, ಅಲ್ಲದೆ ನೂರಾರು ವರ್ಷಗಳಿಂದ ಗಿರಿಜನರು, ರೈತರು ಮತ್ತು ಅರಣ್ಯವಾಸಿಗಳು ಜೀವಿಸಿರುವುದರಿಂದ ಅರಣ್ಯಗಳು ಉಳಿದಿವೆ ಹೊರತು, ಅರಣ್ಯ ಸಂರಕ್ಷಣೆಯ ನೀತಿಯಿಂದ ಅಲ್ಲ ಎಂದು ಮತ್ತೊಂದು ಪಂಗಡ ಅಭಿಪ್ರಾಯಿಸುತ್ತದೆ. ಸ್ಥಳೀಯ ಸಮುದಾಯದ ಹೋರಾಟಗಾರರು ಸರ್ಕಾರವು ರಚಿಸಿರುವ ಅರಣ್ಯ ಹಕ್ಕು ಅಧಿನಿಯಮವು ಈ ಪ್ರಾಂತ್ಯದಲ್ಲಿ ಕ್ರಮಬದ್ಧವಾಗಿ ಅನುಷ್ಠಾನಗೊಂಡಿಲ್ಲ, ಬದಲಾಗಿ ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಗಿರಿಜನರಿಗೆ ಮತ್ತು ಇತರೆಯವರಿಗೆ ಅರಣ್ಯ ಹಕ್ಕು ಪತ್ರವನ್ನು ನೀಡಿದ್ದಾರೆ. ಆದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಮಲೆಕುಡಿಯ ಸಮುದಾಯದವರು ಅರ್ಜಿಸಲ್ಲಿಸಿದರೆ, ಆ ಅರ್ಜಿಗಳನ್ನು ಕಂದಾಯ ಇಲಾಖೆ ನಿರಾಕರಿಸುತ್ತಿದೆ. ಈ ವ್ಯವಸ್ಥೆಯು ಸರ್ಕಾರದ ಮಲತಾಯಿ ಧೋರಣೆಗೆ ನಿದರ್ಶನವಾಗಿದೆ. ಅಲ್ಲದೆ ಅರಣ್ಯ ಹಕ್ಕು ಅಧಿನಿಯಮದ ಮುಖಾಂತರ ಅರಣ್ಯ ಉತ್ಪತ್ತಿಗಳನ್ನು ಸಂಗ್ರಹಿಸಲು ಅರಣ್ಯ ಅಧಿಕಾರಿಗಳು ಅವಕಾಶವನ್ನು ನೀಡದೆ ನಮ್ಮ ಹಕ್ಕುಗಳನ್ನು ನಿರಾಕರಿಸಿದ್ದಾರೆ ಎಂದು ಅಭಿಪ್ರಾಯಿಸಿದ್ದಾರೆ. ನಕ್ಸಲ್ ಚಟುವಟಿಕೆ ಪ್ರಾಂತ್ಯವಾಗಿದ್ದ ಕುದುರೆಮುಖ ಉದ್ಯಾನವನ ಕಾಲಕಳೆದಂತೆ, ನಕ್ಸಲ್ ನಿಗ್ರಹ ದಳದ ಕಾರ್ಯಚರಣೆಯಲ್ಲಿ ಸ್ಥಗಿತವಾಗಿ ಹೋಗಿದೆ. ಆದರೆ, ನಕ್ಸಲರು ಇದ್ದಂತಹ ಸಮಯದಲ್ಲಿ ಅರಣ್ಯ ಇಲಾಖೆಯವರು ಹಪ್ತಾ ವಸೂಲಿ ಕಾರ್ಯಗಳು ಕಡಿಮೆಗೊಂಡಿದ್ದಲ್ಲದೆ, ಸರ್ಕಾರದ ವತಿಯಿಂದ ನಕ್ಸಲ್ ಪ್ಯಾಕೇಜ್ ಮೂಲಕ ಅಭಿವೃದ್ಧಿಯ ಕೆಲವಾಂಶಗಳನ್ನು ಪಡೆಯುವಲ್ಲಿ ಸಹಾಯಕವಾಗಿದೆ ಎಂದು ನಕ್ಸಲ್ ಚಟುವಟಿಕೆಯಿಂದ ಮುಖ್ಯವಾಹಿನಿಗೆ ಮರಳಿದವರ ಅಭಿಪ್ರಾಯವಾಗಿದೆ.

ಭಾರದಂತಹ ರಾಷ್ಟ್ರದಲ್ಲಿ ವಿವಿಧ ಸಂಸ್ಕೃತಿಗಳ ನೆಲೆಗಳಾಗಿ ಪ್ರತಿ ರಾಜ್ಯಗಳು ಗುರುತಿಸಿಕೊಂಡಿವೆ. ಈ ಹಿನ್ನೆಲೆಯಲ್ಲಿ ಪ್ರತಿ ರಾಜ್ಯಕ್ಕೂ ತನ್ನದೇ ಆದ ಯೋಜನಾ ಅನುಷ್ಠಾನದ ಮಿತಿಗಳುಂಟು. ಆ ಪ್ರಕಾರವಾಗಿ ಹುಲಿ ಯೋಜನೆ, ರಾಷ್ಟ್ರೀಯ ಉದ್ಯಾನವನ ಯೋಜನೆ, ಅರಣ್ಯ ಸಂರಕ್ಷಣೆಯ ನೀತಿಗಳಲ್ಲಿ ಸ್ಥಳೀಯ ಗಿರಿಜನರು, ರೈತರು ಮತ್ತು ಇತರೆ ಅರಣ್ಯವಾಸಿಗಳನ್ನು ಆ ಸ್ಥಳಗಳಿಂದ ಒಕ್ಕಲೆಬ್ಬಿಸುವಿಕೆ ಪ್ರಕ್ರಿಯೆ ಮತ್ತು ಪುನರ್ವಸತಿ ಪ್ರಕ್ರಿಯೆಯು ಸಹಭಾಗಿತ್ವದಲ್ಲಿ ಜರುಗಿದರೆ ಅದು ಫಲಕಾರಿಯಾಗುವುದೇ ಹೊರತು, ಬೊಕ್ಕಸ ಖಾಲಿಯಾಗುವ ನಿರೀಕ್ಷೆಯಲ್ಲಿ ಸ್ವ ಇಚ್ಛೆ, ಯೋಜನಾ ವ್ಯವಸ್ಥೆಗಳು ಎನ್ನುವ ಚೌಕಟ್ಟಿನ ವ್ಯವಸ್ಥೆಯಾದರೆ, ಆ ಸ್ಥಳೀಯ ಜನರ

ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಗಳನ್ನು ನಾಶಗೊಳಿಸಿ, ವೃತ್ತಿ ಬದಲಾವಣೆಯ ಅನಿವಾರ್ಯತೆಯನ್ನು ಉಂಟುಮಾಡಿ, ಅವರ ಜೀವನ ಶೈಲಿಯನ್ನೇ ವಿನಾಶದ ದಿಕ್ಕಿನಡೆ ಪಲ್ಲಟಗೊಳ್ಳುವಂತೆ ಮಾಡಿದಂತಾಗುತ್ತದೆ. ಸರ್ಕಾರವು ಒಕ್ಕಲೆಬ್ಬಿಸುವಿಕೆ ಅನಿವಾರ್ಯವೇ ಎಂಬುದುನ್ನು ನೂರುಬಾರಿ ಆಲೋಚಿಸಿ ಜನರ ಕಲ್ಯಾಣಕ್ಕೆ, ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗದಂತೆ ನಿರ್ಧಾರ ತೆಗದುಕೊಳ್ಳುವುದು ಇಂದಿನ ವ್ಯವಸ್ಥೆಯಲ್ಲಿ ಅನಿವಾರ್ಯವಾಗಿದೆ.

ಅಡಿ ಟಿಪ್ಪಣಿಗಳು

೦೧. ಕಲ್ಕುಳಿ ವಿಠಲ್ ಹೆಗ್ಡೆ, ಕಾಡು ಕಿರುಕುಳ, ನಮ್ಮ ನಾಡು ಪ್ರಕಾಶನ. ೨೦೦೨. (ಪು.ಸಂ–೭೭).
೦೨. ಉಪವಿಭಾಗಾಧಿಕಾರಿಗಳ ಪತ್ರ, ಚಿಕ್ಕಮಗಳೂರು. ಎಲ್ ಎನ್ ಡಿ ೭೫:೯೭–೯೮, ೧೨/೧೦/೧೯೯೯. (ಪು.ಸಂ–೧೦).
೦೩. ಡಾ. ಪ್ರಕಾಶ ಕಮ್ಮರಡಿ ಟಿ. ಎನ್. ನಕ್ಸಲ್ ಪೀಡಿತ ಮಲೆನಾಡಿನ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಗಳು. ಒಂದು ಸ್ವತಂತ್ರ ಅಧ್ಯಯನ. ಸಮಾಜವಾದಿ ಅಧ್ಯಯನ ಕೇಂದ್ರ, ಬೆಂಗಳೂರು. (ಪು.ಸಂ–೯)
೦೪. https://www.researchgate.net/publication/262123076 , Displacement and Rehabilitation of an Adivasi Settlement: Case of Kuno Wildlife Sanctuary, Madhya Pradesh.
೦೫. Dr Muraree Lal Meena, Relocation and Livelihood Concerns of Sariska Tiger Project, , Rajasthan : A Pride or Plight ?, Meena . Space and Culture, India 2015 , 3:2, http://spaceandculture.in/index.php/spaceandculture/article/view/150/pdf_33
೦೬. ಡಾ. ತಾರೀಹಳ್ಳಿ ಹನುಮಂತಪ್ಪ (ಸಂ), ಕರ್ನಾಟಕದ ಬುಡಕಟ್ಟು ಸಮುದಾಯಗಳು. ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ. ೨೦೧೦.
೦೭. ಸಂದರ್ಶನ: ಶ್ರೀ ಮುಯ್ಯೂದ್ದೀನ್, ಎಂ.ಸಿ ಹಳ್ಳಿ ನಿವಾಸಿ ಹಾಗೂ ಭದ್ರಾ ಪುನರ್ವಸತಿ ಯೋಜನೆ ಅಡಿ ಸ್ಥಳಾಂತರ ಹೊಂದಿದವರು.
೦೮. ಸಂದರ್ಶನ: ಶ್ರೀ ಗಿರಜಾ ಶಂಕರ, ಮಾಜಿ ಅಧ್ಯಕ್ಷರು, ರಾಜ್ಯ ವನ್ಯಜೀವಿ ಮಂಡಳಿ. ಚಿಕ್ಕಮಗಳೂರು.
೦೯. ಸಂದರ್ಶನ: ಶ್ರೀ ಸುರೇಶ್ ಭಟ್ಟ, ಕಾರ್ಯದರ್ಶಿಗಳು, ಗ್ರಾಮ ಅರಣ್ಯ ಸಮಿತಿ. ಸಂಸೆ ಗ್ರಾಮಪಂಚಾಯತ್. ಮತ್ತು ಪರಿಸರ ಹೋರಾಟಗಾರರು. ಕೆಂಗನಕೊಂಡ, ಕುದುರೆಮುಖ ವಲಯ. ಮೂಡಿಗೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ.
೧೦. ಸಂದರ್ಶನ: ಶ್ರೀ ಕಲ್ಕುಳಿ ವಿಠಲ ಹೆಗ್ಡೆ, ಪರಿಸರ ಹೋರಾಟಗಾರರು, ಶೃಂಗೇರಿ. ಚಿಕ್ಕಮಗಳೂರು ಜಿಲ್ಲೆ.

ಸಮಾರೋಪ

ವಿಷಯಗಳು

- ಸಮಾರೋಪ
- ಅಧ್ಯಯನ ಫಲಿತಗಳು
- ಸಲಹೆಗಳು
- ಪರಾಮರ್ಶನ ಗ್ರಂಥಗಳು

"In a democracy, the well-being, individuality and happiness of every citizen are important for the overall prosperity, peace and happiness of the nation."

A P J Kalam.....

ಸಮಾರೋಪ

ಸಂಶೋಧನೆಯ ಅಂಗವಾಗಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸ್ಥಳಾಂತರ ಮತ್ತು ಪುನರ್ವಸತೀಕರಣದ ಸವಾಲು ಮತ್ತು ಸಾಧ್ಯತೆಗಳನ್ನು ಅಧ್ಯಾಯಿಸಿ, ಕ್ಷೇತ್ರ ಕಾರ್ಯದ ಮುಖಾಂತರ ಕಂಡುಕೊಂಡ ಸತ್ಯಾಂಶಗಳನ್ನು ಆಧರಿಸಿ ಪಠ್ಯೀಕೃತ ವ್ಯವಸ್ಥೆಯ ಅಂತಿಮ ಹಂತದಲ್ಲಿ ಒಟ್ಟಾರೆಯ ನಿರ್ಣಯದ ಅಂಶಗಳನ್ನು ಈ ಭಾಗದಲ್ಲಿ ಉಲ್ಲೇಖಿಸಲಾಗಿದೆ. ಅದರಂತೆ, ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸ್ಥಳಾಂತರ ಮತ್ತು ಪುನರ್ವಸತೀಕರಣಕುರಿತಂತೆ ಸ್ಥಳೀಯ ನಿವಾಸಿಗಳಿಗಿರುವ ಸವಾಲುಗಳು ಮತ್ತು ಅವುಗಳನ್ನು ಮೀರಿ ಒಕ್ಕಲೇಳುವ ಸಾಧ್ಯತೆಗಳನ್ನು ಕಂಡುಕೊಳ್ಳುವ ನಿಟ್ಟನಲ್ಲಿ ಸಂಶೋಧನೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲಾಗಿ, ಕ್ಷೇತ್ರ ಕಾರ್ಯದ ಮುಖಾಂತರ ಉದ್ದೇಶಗಳನ್ನು ಅವಲೋಕಿಸಿದಾಗ, ಈ ಕೆಳಕಂಡಂತಹ ವಾಸ್ತವಿಕ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

ಜಾಗತಿಕ ಜಗತ್ತಿನ ಪರಿಸರವು ಮುಕ್ತ ವ್ಯಾಪಾರ ನೀತಿಯ ಅಂಗಳದಲ್ಲಿ ಬಂಡವಾಳಶಾಹಿ ರಾಷ್ಟ್ರಗಳ ಹಿಂಬದಿಯ ರಾಜಕಾರಣಕ್ಕೆ ಅರಿವಿಲ್ಲದೆ ತನ್ನನ್ನು ತಾನು ತೆರೆದುಕೊಳ್ಳುತ್ತಿದೆ. ಅಭಿವೃದ್ಧಿ ಹೊಂದುತ್ತಿರುವ ಮತ್ತು ಮೂರನೇ ದರ್ಜೆಯ ರಾಷ್ಟ್ರಗಳು ಅಪಾರವಾದ ಸಂಪತ್ತನ್ನು ತಮ್ಮ ಒಡಲಲ್ಲಿ ಹೊಂದಿದ್ದರು ಅವುಗಳಿಗೆ ಬೇಕಾದ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವಲ್ಲಿ ಬಂಡವಾಳದ ಕೊರತೆಯನ್ನು ಅನುಭವಿಸುತ್ತಿದೆ. ಈ ಸಂದರ್ಭವನ್ನು ಅವಲೋಕಿಸಿಕೊಂಡು ಬಂಡವಾಳವುಳ್ಳ ರಾಷ್ಟ್ರಗಳು ತಮ್ಮ ಬಂಡವಾಳವನ್ನು ಬಳಸಿಕೊಂಡು ಹಗ್ಗದ ಬೆಲೆಗೆ ಆ ರಾಷ್ಟ್ರಗಳ ಕಾರ್ಮಿಕರನ್ನು ಕೂಲಿಗೆ ಬಳಸಿಕೊಳ್ಳುತ್ತಿದೆ. ಈ ಪ್ರಕ್ರಿಯೆ ಮುಖಾಂತರ ಅಲ್ಲಿನ ಸಂಪತ್ತುಗಳನ್ನು ತನ್ನ ಹಿಡಿತಕ್ಕೆ ತಂದುಕೊಳ್ಳುವ ಮತ್ತು ಆ ಸಂಪತ್ತನ್ನು ಬಳಸಿಕೊಂಡು ಉತ್ಪಾದಿಸುವ ಪ್ರತಿ ವಸ್ತುಗಳ ತಯಾರಿಕಾ ಕ್ರಮಗಳ ಮೇಲೆ ಬೌದ್ಧಿಕ ಹಕ್ಕನ್ನು ಹೊಂದಲಾಗುತ್ತಿದೆ. ಈ ಮೂಲಕ ಸಿದ್ಧಗೊಳ್ಳುವ ಪ್ರತಿ ವಸ್ತಗಳ ಮೇಲೆ ಇಂತಿಷ್ಟು ಪೇಟೆಂಟ್‌ಗಳೆಂದು ಹಣವನ್ನು ಖಾತೆಗಳಿಗೆ ವರ್ಗಾಯಿಸುತ್ತಿದ್ದಾರೆ. ವಾಸ್ತವದಲ್ಲಿ ಬಂಡವಾಳಶಾಹಿ ರಾಷ್ಟ್ರಗಳು ಮೂರನೇ ದರ್ಜೆಯ ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸಂಪತ್ತನ್ನು ಬಳಸಿಕೊಂಡು ಸಿದ್ಧವಸ್ತುಗಳನ್ನಾಗಿಸಿ ಮಾರಕಟ್ಟೆಗೆ ತಂದಾಗಲು ಅದಕ್ಕೆ ಬೆಲೆಯನ್ನು ಅವರೇ ನಿಗದಿಗೊಳಿಸುತ್ತಾರೆ. ಸ್ಥಳೀಯ ಸರ್ಕಾರಗಳು ಅವರಿಗೆ ತಮ್ಮ ಕಾರ್ಖಾನೆಗಳನ್ನು ಮಾತ್ರ ಸ್ಥಾಪಿಸಲು ಅನುಮತಿ ನೀಡುತ್ತವೆ ಅಷ್ಟೇ. ಆದರೆ ಅವುಗಳ ಮೇಲೆ ತೆರಿಗೆಯನ್ನು ವಿಧಿಸಿದರೂ ಅದು ಅತ್ಯಲ್ಪ ಮಾತ್ರ. ಎಲ್ಲಿಯ ವರೆಗೆ ಈ ಪರಿಯಾದ ತಿರುಗು ಚಕ್ರವು ಆ ರಾಷ್ಟ್ರದ ಸಂಪನ್ಮೂಲಗಳ ಮೇಲೆ ಚಲಿಸುವುದೋ, ಅಲ್ಲಿಯ ವರೆಗೆ ಮುಂದಿನಪೀಳಿಗೆಗೆ ಉಳಿಯ ಬೇಕಾದ ಎಲ್ಲಾ ಉತ್ಪಾದನಾ ಸಂಪನ್ಮೂಲಗಳು ಗರಿಷ್ಟ ಮಟ್ಟದಲ್ಲಿ ಉಪಯೋಗಿಸಿ ಖಾಲಿ ಮಾಡಲಾಗುತ್ತದೆ. ಮುಂದಿನ ಪೀಳಿಗೆ ತನ್ನಲ್ಲಿ ಇಲ್ಲದ ಸಂಪನ್ಮೂಲಕ್ಕಾಗಿ ದುಪ್ಪಟ್ಟು ಹಣವನ್ನು ಅವರಿಗೆ ನೀಡಿ ಕೊಂಡುಕೊಳ್ಳುವ ಪರಿಸ್ಥಿತಿ ಎದುರಾಗುತ್ತದೆ.

ಭಾರತೀಯ ಸಂದರ್ಭದಲ್ಲಿ, ಜಾಗತಿಕ ಜಗತ್ತಿನ ಮುಕ್ತ ವ್ಯಾಪರ ನೀತಿ, ವಿಶ್ವಬ್ಯಾಂಕ್ ಪ್ರಯೋಜಿತ ಅಭಿವೃದ್ಧಿ ಪ್ರಕಲ್ಪಗಳು, ಉದ್ಯೋಗ ನೀಡುವ ನೆಪದಲ್ಲಿ ಕಾರ್ಖಾನೆಗಳ ಸ್ಥಾಪನೆಗೆ ಹರಿದು ಬರುತ್ತಿರುವ ಬಂಡವಾಳಗಳು (ಬಂಡವಾಳಶಾಹಿ ರಾಷ್ಟ್ರಗಳ) ಭಾರತೀಯರ ಮೂಲ ಸಂಸ್ಕೃತಿಯನ್ನು, ಸಾಮಾಜಿಕ ಜೀವನದ ಸಂಬಂಧದ ಒಡನಾಟವನ್ನು ಹಾಗೂ ಮೂಲ ಆರ್ಥಿಕತೆಯನ್ನು ಕಿತ್ತುಕೊಳ್ಳುತ್ತಿದೆ. ಸಂಪತ್ಭರಿತ ಕೃಷಿ ನಾಡಾಗಿದ್ದ ಭಾರತವು, ದೇಶಿ ಹಸು/ಎಮ್ಮೆಗಳ ಸಗಣಿಗಳಿಂದ ವೃದ್ಧಿಗೊಳಿಸಿಕೊಳ್ಳುತ್ತಿದ್ದ ಗೊಬ್ಬರಗಳನ್ನು ತಾವು ಬೆಳೆವ ಬೆಳೆಗಳಿಗೆ ಒದಗಿಸಿ ಉತ್ತಮ ಇಳುವರಿ ಹಾಗೂ ಆರೋಗ್ಯಯುತವಾದ ಆಹಾರ ಧಾನ್ಯಗಳನ್ನು ಪಡೆಯುತ್ತಿತ್ತು. ಆದರೆ, ಹಸಿರು ಕ್ರಾಂತಿಯ ಪರಿಣಾಮ ಅಂತರಾಷ್ಟ್ರೀಯ ಕಂಪನಿಗಳು ತಯಾರುಮಾಡುವ ಕೀಟ ನಾಶಕಗಳ ಬಳಕೆಯಿಂದ ಇತ್ತ ಇಳುವರಿಯೂ ಇಲ್ಲದೆ, ಮುಂದಿನ ೫೦ ವರ್ಷಗಳಿಗೆ ಸವಕಳಿಯನ್ನು ಕಾಣಬೇಕಿದ್ದ ಭೂ ಫಲವತ್ತತೆ ಇಂದಿಗೆ ಕೇವಲ ೧೦% ಫಲವತ್ತಾಗಿ ಮಾತ್ರ ಉಳಿದಿದೆ. ಈ ವ್ಯವಸ್ಥೆಯು ಹೀಗೆಯೆ ಮುಂದುವರೆದರೆ, ಮುಂದಿನ ದಿನಮಾನದಲ್ಲಿ ಬೇರೆ ರಾಷ್ಟ್ರಗಳ ಮೇಲೆ ತುತ್ತು ಅನ್ನಕ್ಕು ಕೈಚಾಚುವ ಸಂದರ್ಭವು ಎದುರಾಗದಿರದು. ಅಭಿವೃದ್ಧಿಯ ಹಾದಿಯಲ್ಲಿ ನಮ್ಮಲ್ಲಿರುವ ಎಲ್ಲಾ ಸಂಪನ್ಮೂಲಗಳನ್ನು (ಭೂಮಿ, ಅರಣ್ಯ, ನದಿ, ವಾಯು) ಎಲ್ಲವನ್ನು ಹೆಚ್ಚಾಗಿಯೇ ಬಳಸಿಕೊಳ್ಳತ್ತಿದ್ದೇವೆ. ಆದರೆ ಪರಿಸರಕ್ಕೆ ಏನನ್ನು ನೀಡುತ್ತಿದ್ದೇವೆ ಎಂಬ ಪ್ರಶ್ನೆಯ ಮುಂದೆ ಪ್ರಶ್ನೆಯೇ ('?') ಉಳಿದಿದೆ. ನಾಗರೀಕತೆಯ ಶೋಕಿಯಲ್ಲಿ ನಮ್ಮ ಮೂಲ ಸಂಸ್ಕೃತಿ, ಸಾಮಾಜಿಕ ಜೀವನ ಎಲ್ಲವೂ ಹಣದ ಆರ್ಥಿಕತೆ ಮುಂದೆ ಮಂಡಿಯೂರಿ ಕುಳಿತುಕೊಳ್ಳುತ್ತಿವೆ, ಭೂಹಿಡುವಳಿಗಳೆಲ್ಲವೂ ನಾಶವಾಗುತ್ತಿವೆ. ಇನ್ನಿರುವ ಅಲ್ಪ ಪ್ರಮಾಣದ ಅರಣ್ಯಗಳನ್ನು ಬಳಸಿಕೊಂಡರೆ, ಅಲ್ಲಿ ಜೀವಿಸಿರುವ, ನಾಗರೀಕತೆಯಿಂದ ದೂರವೇ ಇರುವ ಆದಿವಾಸಿಗಳ ಸಾಮಾಜಿಕ ಬದುಕು ಏನಾಗಬೇಕು. ಅವರಿಗೂ ನಮ್ಮಂತೆ ಬದುಕುವ ಹಕ್ಕಿದೆ. ನಮ್ಮಂತೆ ಅವರ ಸಂಸ್ಕೃತಿಯು ಉಳಿಯಬೇಕಿದೆ. ಅವರು ಕೂಡ ಸಮಾಜದ ಒಂದು ಭಾಗ. ಎಲ್ಲರೂ ಉಳಿಯಬೇಕು ಮತ್ತು ಬದುಕಬೇಕು. ಎಲ್ಲರಿಗೂ ನೆಲೆ ಬೇಕು. ಈ ನಿಟ್ಟಿನಲ್ಲಿ ಸಂಪನ್ಮೂಲದ ಒಂದು ಭಾಗವಾಗಿರುವ ಅರಣ್ಯ ಪ್ರದೇಶಗಳು ನಮ್ಮ ಬದುಕಿನ ಸಾರ. ಅವುಗಳಿಲ್ಲದೆ ಕಾಲಕಾಲಕ್ಕೆ ಸರಿಯಾಗಿ ಮಳೆಯಾಗುವುದಿಲ್ಲ. ಒಂದು ವೇಳೆ ಆದರೂ ಮಳೆಯ ನೀರನ್ನು ತಡೆದು ಇಟ್ಟುಕೊಳ್ಳುವ ಸಾರ ಭೂಮಿಗೆ ಇರುವುದಿಲ್ಲ. ಇದರಿಂದಾಗಿ ಭೂ ಕುಸಿತವುಂಟಾಗಿ ಜಲ ಪ್ರಳಯವೇ ಸಂಭವಿಸುತ್ತದೆ. ಇಂದಿನ ಕೇರಳ ಮತ್ತು ಕೊಡಗು ಪ್ರದೇಶಗಳನ್ನು ಗಮನಿಸಿದರೆ, ವರುಣನ ಆರ್ಭಟಕ್ಕೆ ಕಡಿದಾದ ಭಾಗಗಳಲ್ಲಿ ಅರಣ್ಯಗಳನ್ನು ನಾಶ ಪಡಿಸಿ ನಿರ್ಮಿಸಿದ್ದಂತಹ ಕಾಫೀ ಟೀ ಪ್ಲಾಂಟೇಷನ್‌ಗಳು ಭೂ ಕುಸಿತಕ್ಕೆ ಒಳಗಾಗಿ ಯಾರ ಜಮೀನು ಯಾರದ್ದು ಎಂದು ಹೇಳುವ ನಿಖರತೆ ಇಲ್ಲದಂತಾಗಿದೆ. ಜನ ಜೀವನ ಅಸ್ತವ್ಯಸ್ತವಾಗಿದೆ. ಮುಂದಿನ ದಿನಮಾನಗಳಲ್ಲಿ ಹೇಗೆ ಜೀವನ ಎಂಬಂತಾಗಿದೆ. ಬೆನ್ಜ್ ಕಾರಿನಲ್ಲಿ ಚಲಿಸುತ್ತಿದ್ದವನು, ಪಾದದಿಂದ ಚಲಿಸುತ್ತಿದ್ದ ಕಡುಬಡವನು ಇಂದು ಒಂದೇ ಗಂಜಿ ಕೇಂದ್ರದಲ್ಲಿ ಆಶ್ರಿತರಾಗಿದ್ದಾರೆ. ಈ ಸಂಬಂಧ ಅರಣ್ಯಗಳ ಸಂರಕ್ಷಣೆ ಅಗತ್ಯ.

ಅರಣ್ಯಗಳ ಸಂರಕ್ಷಣೆಯ ದೃಷ್ಟಿ ಇಂದಿನ ದಿನಮಾನದಲ್ಲಿ ಬೇರೆಯದೇ ಆಗಿದೆ. ಭಾರತೀಯ ಸಂದರ್ಭದಲ್ಲಿ ಆದಿ ಕಾಲದಲ್ಲಿ ಸಂಪತ್ಭರಿತವಾಗಿದ್ದ ಅರಣ್ಯ ಸಂಪನ್ಮೂಲಗಳು ಕಾಲಗಳು ಉರುಳಿದಂತೆ ಜನಸಂಖ್ಯೆ ಏರಿಕೆಯಾದಂತೆ ಅರಣ್ಯಗಳ ಪ್ರಮಾಣ ಕ್ಷೀಣಿಸುತ್ತಾ ಬಂದಿವೆ. ವಸಾಹತು ಕಾಲದಲ್ಲಿ ಇಲ್ಲಿದ್ದ ಸಂಪನ್ಮೂಲವನ್ನು ದೋಚಲು ವಿದೇಶಿಗರು ರೈಲು, ರಸ್ತೆ ಮಾರ್ಗಗಳಿಗಾಗಿ ಅರಣ್ಯವನ್ನು ನಾಶ ಮಾಡಿದರು. ಸ್ವತಂತ್ರ ನಂತರ ಅಭಿವೃದ್ಧಿ ಪ್ರಕಲ್ಪಗಳ ಅವಶ್ಯಕತೆಗಾಗಿ ಅರಣ್ಯಗಳನ್ನು ನಾಶ ಮಾಡಿದರು. ಆದರೆ ಇಂದು ಹಿಂದೆ ಮಾಡಿದ ನಾಶಕ್ಕೆ ಅಲ್ಲಿ ವಾಸವಿರುವವರು ತೆರವುಗೊಳ್ಳಬೇಕಾದಂತಹ ಸ್ಥಿತಿ ಬಂದೊದಗಿದೆ. ಸಂರಕ್ಷಣೆ ಅನಿವಾರ್ಯವಾಗಿದೆ. ಸಂರಕ್ಷಣೆಯ ಹೊರತು ಮುಂದಿನ ಪೀಳಿಗೆಗೆ ಸಂಪನ್ಮೂಲವನ್ನು ಉಳಿಸಲಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ. ಇಂದು ಜಾಗತಿಕ ಜಗತ್ತು ವಾತಾವರಣದಲ್ಲಾಗುತ್ತಿರುವ ಏರು ಪೇರಿಗೆ ಅರಣ್ಯಗಳ ನಾಶ ಎಂಬ ಸಬೂಬನ್ನು ಹೇಳುತ್ತಿದೆ. ಆದರೆ, ಅಭಿವೃದ್ಧಿಯ ದಿಶೆಯಲ್ಲಿದ್ದಾಗ ಅರಣ್ಯವನ್ನು ನಾಶ ಪಡಿಸುವಾಗ ಎಲ್ಲಿ ಹೋಗಿತ್ತು ಈ ಜ್ಞಾನವು ಎಂಬಂತಾಗಿದೆ. ಆದರೆ ಕೆಲವು ಬಂಡವಾಳ ರಾಷ್ಟ್ರಗಳು ತಮ್ಮಲ್ಲಿ ಇಲ್ಲದ ಅರಣ್ಯ ಸಂಪನ್ಮೂಲಗಳ ಔಷಧಿಯುಕ್ತವಾದ ಸಸ್ಯ ಸಂಪತ್ತಿನ ಮೇಲೆ ಹಿಡಿತವನ್ನು ಸಾಧಿಸುವುದಕ್ಕಾಗಿ ಸಾಲವನ್ನು ನೀಡುವ ಯೋಜನೆಯಲ್ಲಿ ಅವುಗಳ ಮೇಲೆ ಹಿಡಿತವನ್ನು ಸಾಧಿಸುವ ಹುನ್ನಾರವನ್ನು ನಡೆಸಿವೆ. ಇದರ ಫಲವಾಗಿ ಇಂದು ಸಂರಕ್ಷಣೆಯ ಹೆಸರಲ್ಲಿ ಅಲ್ಲಿರುವ ಜನ ಸಮುದಾಯಗಳನ್ನು ಒಕ್ಕಲೆಬ್ಬಿಸುವಿಕೆಗಾಗಿ ವಿಶೇಷ ಕಾನೂನು ರಚನೆಯನ್ನು ಹುಟ್ಟುಹಾಕುತ್ತಿವೆ. ಈ ಕಾನೂನುಗಳೇ ವನ್ಯಜೀವಿ ಸಂರಕ್ಷಣೆ, ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯಗಳು, ಜೀವವೈವಿಧ್ಯತಾ ತಾಣಗಳು, ಮಳೆ ಆಶ್ರಿತ ಪ್ರದೇಶಗಳನ್ನು ಆಧರಿಸಿ ಹೈಡ್ರೋ ಪ್ರಾಜೆಕ್ಟ್ ಮುಂತಾದವು. ಒಂದು ಅಧ್ಯಯನದ ಪ್ರಕಾರ ಭಾರತದಲ್ಲಿ ೧೯೫೧ ರಿಂದ ೨೦೦೦ದ ಒಳಗಾಗಿ ೨೧.೩ ಮಿಲಿಯನ್ ಜನರು ಇಂತಹ ಅಭಿವೃದ್ಧಿ ಯೋಜನೆಗಳಿಂದ ಸ್ಥಳಾಂತರ ಹೊಂದಿದ್ದಾರೆ. ಅದರಲ್ಲಿ ೪೫% ಆದಿವಾಸಿ ಸಮುದಾಯಗಳೇ ಆಗಿವೆ. ಸ್ಥಳಾಂತರದ ಪರಿಣಾಮದಿಂದಾಗಿ ತಮ್ಮ ಮೂಲ ನೆಲೆಗಳನ್ನು ಕಳೆದುಕೊಂಡು ಗ್ರೀನ್ ಹೌಸ್ಪೀಸ್‌ಗಳಾಗುತ್ತಿದ್ದಾರೆ. ಸರ್ಕಾರವು ನೀಡುತ್ತಿರುವ ಅಲ್ಪ ಪರಿಹಾರದ ಪುನರ್ವಸತೀಕರಣ ಪ್ಯಾಕೇಜ್‌ಗಳ ಆಧಾರಿತವಾಗಿ ಅರಣ್ಯ ಪ್ರದೇಶಗಳ ಹೊರಭಾಗದಲ್ಲಿ ತುಂಡು ಭೂಮಿಯನ್ನು ಕ್ರಯಕ್ಕೆ ಕೊಳ್ಳಲಾಗದ ಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ಇತ್ತ ತಮ್ಮ ಮೂಲ ನೆಲೆಗಳನ್ನು ಕಳೆದುಕೊಂಡು, ಸಾಮಾಜಿಕವಾಗಿ ಸಂಘಟಿತವಾಗಿದ್ದ ಸಮುದಾಯಗಳು ಒಡನಾಟದಿಂದ ಬೇರ್ಪಟ್ಟಿವೆ. ಸಂಸ್ಕೃತಿಯ ನೆಲೆಬೀಡಾಗಿದ್ದ ಅವರ ಅರಣ್ಯದ ತವರುಗಳು ಮುಂದೆಂದು ಇತ್ತ ಸುಳಿಯದಂತೆ ಕಣ್ಮರೆಯಾಗುತ್ತಿವೆ. ಹಣದ ಕೊರತೆಯಾದರೂ ಸಿಗುತ್ತಿದ್ದ ನೈಸರ್ಗಿಕ ಅರಣ್ಯ ಕಿರು ಉತ್ಪನ್ನಗಳಿಂದ ತಮ್ಮ ಹಸಿವನ್ನು ನೀಗಿಸಿಕೊಳ್ಳುತ್ತಿದ್ದ ಅವಕಾಶಗಳು ಕಣ್ಮರೆಯಾಗಿ, ಹಸಿವಿನಲ್ಲಿ ದಿನದೂಡುವ ಪರಿಸ್ಥಿತಿಗಳು ಬಂದಿವೆ. ಪ್ರಭುತ್ವವು ಪರಿಹಾರವಾಗಿ ಕೊಡಮಾಡಿದ ಭೂಹಿಡುವಳಿಯಲ್ಲಿ ಫಲವತ್ತತೆ ಇಲ್ಲದೆ, ಬಿತ್ತಿದ ಬೀಜಕ್ಕೆ ಹಾಕಿದ ಬಂಡವಾಳವು ಉತ್ಪತ್ತಿಯಾಗದೆ ಸಾಲದ ಮೇಲೆ ಸಾಲ ಮಾಡಿಕೊಳ್ಳುತ್ತಾ ಬಡ ಆರ್ಥಿಕತೆಯತ್ತ ಬದುಕು ಸಾಗುತ್ತಿದೆ. ಪುನರ್ವಸತೀಕರಣ ಕಾಲೋನಿಗಳಲ್ಲಿ ಸ್ವಚ್ಛತೆಯಿಲ್ಲದೆ, ಕುಡಿಯುವ ನೀರಿಗೂ ಪರಿತಪಿಸುವಂತಾಗಿ, ಕೂಲಿ ಮಾಡಲು ಬೇರೆ ಊರಿಗೆ ಹೋಗಲು ಹಣವಿಲ್ಲದೆ, ಇತ್ತ ಕೂಲಿಯೂ

ಸಿಗದೆ ಹಳೆಯ ಪ್ರದೇಶಗಳಿಗೆ ಪುನಃ ಹೋಗಲಾರದ ಸ್ಥಿತಿಯಲ್ಲಿ ಅರಣ್ಯ ಆದಿವಾಸಿ ಮತ್ತು ಇತರೆ ಸಮುದಾಯಗಳಿವೆ. ಇಂದಿನ ಪರಿಸ್ಥಿತಿಯ ಮೂಲ, ಬಡವರು ಬಡವರಾಗಿಯೇ ಉಳಿಯುವ ಸ್ಥಿತಿ ತಲುಪಿರುವುದು ಪ್ರಭುತ್ವವು ಅಭಿವೃದ್ಧಿ ಪ್ರಕಲ್ಪಗಳನ್ನು ಅನುಷ್ಠಾನಗೊಳಿಸಿದ್ದು, ಮತ್ತು ಕ್ರಮಬದ್ಧವಾದ ಭೂಹಿಡುವಳಿಗಳನ್ನು ನೀಡದೇ ಇರುವುದು.

ಕುದುರೆಮುಖ ರಾಷ್ಟ್ರೀಯ ಉದ್ಯಾವನಕ್ಕೆ ಸಂಬಂಧಿಸಿದಂತೆ, ಉದ್ಯಾನವನದ ವ್ಯಾಪ್ತಿಯಲ್ಲಿರುವ ಬಹು ಪಾಲು ಆದಿವಾಸಿ ಮತ್ತು ಇತರೆ ಅರಣ್ಯವಾಸಿ ಸಮುದಾಯಗಳು ಅತಿ ಸಣ್ಣ ಪ್ರಮಾಣದ ಭೂಹಿಡುವಳಿಗಳನ್ನು ಹೊಂದಿರುವ ರೈತರೆ ಹೊರತು. ಬೃಹತ್ ಜಮೀನ್ದಾರರಲ್ಲ. ಇಂದಿಗೂ ಅವರು ಒತ್ತಾಯಿಸುತ್ತಿರುವ ಹಕ್ಕುಗಳು ಕೇವಲ ಅರಣ್ಯ ಕಿರು ಉತ್ಪನ್ನ ಸಂಗ್ರಹ, ಭೂಹಿಡುವಳಿಗಳ ಮೇಲೆ ಪಟ್ಟಾ ವ್ಯವಸ್ಥೆ, ಬಗರ್ ಹುಕುಂ ಸಾಗುವಳಿದಾರರನ್ನು ಸಕ್ರಮಗೊಳಿಸವುದು ಮತ್ತು ಒಕ್ಕಲೆಬ್ಬಿಸದಂತೆ ಅಲ್ಲಿಯೇ ಜೀವನವನ್ನು ಕಟ್ಟಿಕೊಳ್ಳುವ ಹಾಗೆ ವ್ಯವಸ್ಥೆಯ ಕಾನೂನುಗಳನ್ನು ಮಾತ್ರ. ಇವುಗಳನ್ನು ಹೊರತು ಪಡಿಸಿ ಅನ್ಯತಾ ಉದ್ದೇಶಗಳು ಯಾವುವು ಇಲ್ಲವೆಂಬುದು ಕ್ಷೇತ್ರಾಧ್ಯಯನದಿಂದ ಕಂಡುಬಂದಿದೆ. ಇನ್ನು ಸ್ವ ಇಚ್ಛೆಯಿಂದ ಉದ್ಯಾನವನವನ್ನು ತೊರೆದು ಹೋಗುವ ಕುಟುಂಬದವರಿಗೆ ಅವರು ಹೊಂದಿರುವ ಸ್ವತ್ತುಗಳನ್ನು ಆಧರಿಸಿ ನೀಡುವ ಪರಿಹಾರ ಅರ್ಜಿಗಳನ್ನು, ದಾಖಲೆಗಳ ಅನುಗುಣವಾಗಿ ಶೀಘ್ರವೇ ಮೋಜಣಿ ಕಾರ್ಯವನ್ನು ನೆರವೇರಿಸುವುದು ಅವಶ್ಯಕತೆ ಇದೆ. ಅರಣ್ಯ ಪ್ರದೇಶಗಳ ಸ್ಥಳದಲ್ಲಿ ಎಷ್ಟೇ ಬಂದುಬಸ್ತ್‌ನ ವ್ಯವಸ್ಥೆಯನ್ನು ಮಾಡಿ ಕಾಡು ಪ್ರಾಣಿಗಳಿಂದ ರಕ್ಷಣೆಗೆ ಮುಂದಾದರೂ, ಅನೇಕ ವೇಳೆ ಅವುಗಳ ಉಪಟಳಕ್ಕೆ ಹಾನಿಯಾಗುವುದು ಸಹಜ. ಅಂತಹ ಸಂದರ್ಭದಲ್ಲಿ ಅವರು ಬೆಳೆದಿರುವ ಬೆಳೆಗಳು ಹಾನಿಯಾಗುವುದು ಒಂದೆಡೆಯಾದರೆ, ಪುನರ್ವಸತೀಕರಣ ಹೊಂದುವ ಯೋಚನೆಯಲ್ಲಿ ವಾರ್ಷಿಕವಾಗಿ ಬೆಳೆಯುವ ಬೆಳೆಗಳಿಗೆ ಬಂದುಬಸ್ತ್ ವ್ಯವಸ್ಥೆಯನ್ನು ಮಾಡಲಾಗಿರುವುದಿಲ್ಲ. ಈ ಎರಡು ವ್ಯವಸ್ಥೆಗಳ ನಡುವೆ ಮೋಜಣಿ ಕಾರ್ಯವನ್ನು ವಿಳಂಬಗೊಳಿಸಿ, ಎರಡೆರಡು ಬಾರಿ ಮೋಜಣಿ ಮಾಡಿದರೆ, ಅರ್ಜಿ ಸಲ್ಲಿಸಿದ ಸಮಯದಲ್ಲಿದ್ದ ಬೆಳೆಗಳು ಕೊನೆಯ ಹಂತಕ್ಕೆ ಇರುವುದಿಲ್ಲ. ಹಾಗಾಗಿ ಅವರಿಗೆ ನೈಜ ಮೌಲ್ಯವು ನಷ್ಟಕ್ಕೆ ಒಳಪಡುವುದರಿಂದ ಆರ್ಥಿಕತೆ ಸಂಕಷ್ಟಕ್ಕೆ ಸಿಲುಕುವುದು. ಆದ್ದರಿಂದ ಸರ್ಕಾರವು ಮತ್ತು ಇಲಾಖೆಯು ಎಷ್ಟು ಸಾಧ್ಯವೋ ಅಷ್ಟು ಬೇಗ ಮೋಜಣಿ ಕಾರ್ಯವನ್ನು ನಡೆಸಿ ಪರಿಹಾರ ನೀಡುತ್ತದೆಯೋ ಅಷ್ಟು ಸಮಯದ ಲಾಭ ಅವರಿಗೆ ದೊರೆತಂತಾಗುತ್ತದೆ.

ಅರಣ್ಯ ಪ್ರದೇಶಗಳು ಒಂದು ದೇಶದ ಅಮೂಲ್ಯ ಸಂಪತ್ತುಗಳು. ಈ ಸಂಪತ್ತಿನ ನಡುವೆ ವನ್ಯಜೀವಿಗಳು, ಗಿರಿಜನರು, ರೈತರು ಮತ್ತು ಇತರೆ ಅರಣ್ಯವಾಸಿಗಳು ತಮ್ಮ ಬದುಕನ್ನು ತಲ ತಲಾಂತರದಿಂದ ಆಶ್ರಯಿಸಿ ಕಟ್ಟಿಕೊಂಡಿದ್ದಾರೆ. ಮೂಲತಃ ಅರಣ್ಯವಾಸಿಗಳೇ ಆಗಿರುವ ಇವರು, ಅರಣ್ಯಗಳನ್ನು ದೇವರುಗಳೆಂದೆ ಪೂಜಿಸಿದ್ದಾರೆಯೇ ಹೊರತು, ಅದನ್ನು ಎಂದಿಗೂ ಅನುಭೋಗಿಯ ದೃಷ್ಟಿಯಲ್ಲಿ ಕಂಡಿಲ್ಲ. ಜಾಗತೀಕರಣದ ಪ್ರಭಾವದಿಂದ ಭೋಗಿಯಾಗಿದ್ದ ಮಾನವ ಅನುಭೋಗಿಯಾಗಿ ಅರಣ್ಯ ಪ್ರದೇಶಗಳ ಸಂಪತ್ತನ್ನು ಬಳಸಿಕೊಂಡು ಅದರ ಪ್ರಮಾಣವನ್ನು ಕಡಿಮೆಗೊಳಿಸಿದ್ದಾನೆ. ಈ ಕಾರಣಗಳಿಗಾಗಿ ಇಂದು ವನ್ಯಜೀವಿ ಮತ್ತು ಅರಣ್ಯ ಸಂರಕ್ಷಣೆಯ

ಹೊಣೆಗಾರಿಕೆ ಪ್ರತಿಯೊಬ್ಬ ನಾಗರಿಕನ ಆಧ್ಯ ಕರ್ತವ್ಯವಾಗಿ ಪರಿಣಮಿಸಿದೆ. ಸರ್ಕಾರವು ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯ ಹಿನ್ನೆಲೆಯಲ್ಲಿ ಜಾರಿಗೆ ತಂದಿರುವ ವನ್ಯಜೀವಿ ಅಭಯಾರಣ್ಯಗಳು ಮತ್ತು ರಾಷ್ಟ್ರೀಯ ಉದ್ಯಾನಗಳಲ್ಲಿ ತಲ ತಲಾಂತರದಿಂದ ಬದುಕು ಕಟ್ಟಿಕೊಂಡಿದ್ದ ಗಿರಿಜನ ಮತ್ತು ಪಾರಂಪರಿಕ ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುವ ಹಾಗೂ ಪುನರ್ವಸತಿ ವ್ಯವಸ್ಥೆಯಡಿ ಅವರಿಗೆ ನೀಡುತ್ತಿರುವ ಪರಿಹಾರಗಳು ತಾತ್ಕಾಲಿಕವಾಗಿದ್ದು, ಈ ಪ್ರಕ್ರಿಯೆಗಳಿಂದ ಹೊರ ಜಗತ್ತಿನ ಚಟುವಟಿಕೆಗಳಿಗೆ ಸ್ಪರ್ಧಿಸುವ ಕೌಶಲ್ಯಗಳಿಲ್ಲದೆ, ವೃತ್ತಿಗಳು ಪಲ್ಲಟಗೊಳ್ಳುವ ಮುಖಾಂತರ ಆರ್ಥಿಕ ಸ್ಥಿತಿಗತಿಯು ಅವರೋಹಣ (ಇಳಿಕೆ) ಪಥದ ಕಡೆ ಸಾಗುವುದು. ಇದರೊಂದಿಗೆ ಒಕ್ಕಲೆದ್ದ ಸಮಯದಲ್ಲಿಯೇ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಕೌಟುಂಬಿಕ ವಿಘಟನೆಗಳೊಂದಿಗೆ ಪಲ್ಲಟಗೊಂಡಿರುವ ಜೀವನ ಶೈಲಿಯ ನಡುವೆ ಸಾಮಾನ್ಯ ಮನುಷ್ಯನಂತೆ ಜೀವನವನ್ನು ಸುಖಿಗೊಳಿಸುವುದು ಅಸಾಧ್ಯ. ಅರಣ್ಯ ಪ್ರದೇಶದಲ್ಲಿರುವ ಒಂದು ಹುಲಿಯನ್ನು ಇತರೆ ಸ್ಥಳಗಳಿಗೆ ಸ್ಥಳಾಂತರಿಸಿದರೆ, ಹೇಗೆ ಅದು ತನ್ನ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಿಲ್ಲದೆ ಪರಿಪಾಟಲಲ್ಲಿ ಬಸವಳಿಯುವುದೋ ಹಾಗೆ ಇವರ ಜೀವನದಲ್ಲೂ ಕೂಡ ಅವ್ಯವಸ್ಥೆಗಳು ಉಂಟಾಗುತ್ತದೆ. ಪಟ್ಟಭದ್ರ ಹಿತಾಸಕ್ತಿಗಳ ಮೂಲಕ ಹೆಚ್ಚು ಮೌಲ್ಯಗಳಿಗೆ ಪರಿಹಾರ ಪಡೆದವರು ಒಂದೆಡೆ ಹಿಂದಿಗಿಂತ ಸುಖಕರ ಜೀವನವನ್ನು ನಡೆಸುತ್ತಿರುವುದು ಮೇಲ್ನೋಟಕ್ಕೆ ಸಮರ್ಪಕವೆಂದು ಸರ್ಕಾರದ ದೃಷ್ಟಿಯಲ್ಲಿ ಕಂಡುಬರುತ್ತಿದೆ. ಈ ನಿಟ್ಟಿನಲ್ಲಿ ಸ್ಥಳಾಂತರ ಮತ್ತು ಪುನರ್ವಸತೀಕರಣ ವ್ಯವಸ್ಥೆಗಳು ಅವೈಜ್ಞಾನಿಕವೇ? ವೈಜ್ಞಾನಿಕವೇ ಎಂಬ ದ್ವಂದ್ವದಲ್ಲಿಯೇ ಇಂದಿಗೂ ಅಡ್ಡ ಗೋಡೆಯ ಮೇಲಿಟ್ಟ ದ್ವೀಪವಾಗಿ ಬಹು ಚರ್ಚಿತ ವಿಷಯವಾಗಿ ಪರಿಣಮಿಸಿದೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸಂದರ್ಭದಲ್ಲಿ, ಕೆಲವು ಸರ್ಕಾರೇತರ ಸಂಸ್ಥೆಗಳು, ಸರ್ಕಾರವೇ ಹುಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಸ್ಪಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳದೆ ಆದೇಶವನ್ನು ಕಾಯ್ದಿರಿಸಿದ ಸಂದರ್ಭದಲ್ಲಿ, ಹುಲಿ ಯೋಜನೆ ಅನುಷ್ಠಾನವಾಗುವುದು ಎಂಬ ವಿಷಯಗಳ ಆಧಾರದ ಮೇಲೆ ಆಮಿಷಗಳನ್ನು ಒಡ್ಡಿ ನೆಲೆನಿಂತವರನ್ನು ಅಲ್ಪ ಮೊತ್ತದ ಮೌಲ್ಯಗಳಿಗೆ ಸ್ವತ್ತುಗಳನ್ನು ಪಡೆದು ಬೇರೆಡೆ ಸ್ಥಳಾಂತರಗೊಳ್ಳುವಂತೆ ಮಾಡಿರುವ ನಿದರ್ಶನಗಳಿವೆ. ಹೀಗೆ ಸರ್ಕಾರದ ವಿವೇಚನೆಯಲ್ಲಿ ಆದೇಶ ಸ್ಥಗಿತವಾಗಿರುವ ಸಂದರ್ಭದಲ್ಲಿ ಸರ್ಕಾರೇತರ ಸಂಸ್ಥೆಗಳು ಆ ಸನ್ನಿವೇಶಗಳನ್ನು ಬಳಸಿಕೊಂಡು ಊಹಪೋಹಗಳಲ್ಲಿ ನೆಲೆನಿಂತವರನ್ನು ಒಕ್ಕಲೆಬ್ಬಿಸುವುದು ಎಷ್ಟು ಸರಿಯಾಗಿದೆ ಎಂಬುದನ್ನು ವಿವೇಚಿಸಬೇಕಾಗಿದೆ. ನಕ್ಸಲ್ ಚಟುವಟಿಕೆಗಳು ಕಾಲೂರಿದ ದಿನಗಳಲ್ಲಿ ಮೇಲಿಂದ ಮೇಲೆ ಹಲವು ಆದೇಶಗಳನ್ನು ಹೊರಡಿಸಿದ ಸರ್ಕಾರದ ಮೇಲೆ ಸ್ಥಳೀಯಜನರು ಇಡುವ ನಂಬಿಕೆಗಳನ್ನು ಪ್ರಶ್ನಿಸುವಂತಾಗಿತ್ತು. ಈ ಪರಿಯ ಸರ್ಕಾರದ ನಡಾವಳಿಗಳು ಜನರನ್ನು ಗೊಂದಲಕ್ಕೀಡು ಮಾಡಿದ್ದಲ್ಲದೆ, ಯಾವ ಕಾನೂನುಗಳು ಹೇಗೆ ಅನುಷ್ಠಾನಗೊಳ್ಳುತ್ತವೆಂಬ ಆತಂಕದಲ್ಲಿ ಕೆಲ ಕುಟುಂಬಗಳು ಸ್ವ ಇಚ್ಛೆ ಮೂಲಕ ಪುನರ್ವಸತಿ ಪರಿಹಾರವನ್ನು ಪಡೆದು ಒಕ್ಕಲೆದ್ದವು. ಈ ಪರಿಯಾಗಿ ಒಕ್ಕಲೆದ್ದ ಕುಟುಂಬಗಳಲ್ಲಿ ಹೊರ ವಲಯದಲ್ಲಿ ನೆಲೆಸಿ, ಉದ್ಯಾನವನದ ಒಳಭಾಗದಲ್ಲಿ ಭೂ ಹಿಡುವಳಿಗಳನ್ನು ಹೊಂದಿದ್ದ ಶ್ರೀಮಂತರು ಮೊದಲಿಗರಾದರೆ, ಅವರನ್ನು ಆಶ್ರಯಿಸಿ

ಜೀವನವನ್ನು ಕಟ್ಟಿಕೊಂಡಿದ್ದ ರೈತಾಪಿ ಕೂಲಿ ವರ್ಗದವರು ನಂತರದವರಾದರು. ತದನಂತರದ ಕಾಲದಲ್ಲಿ ಒಂದೊಂದೆ ಕುಟುಂಬಗಳು ಉದ್ಯಾನವನದಿಂದ ಹೊರಹೋಗುವ ಪರಿಪಾಟಲಲ್ಲಿ ಅರಣ್ಯದೊಂದಿಗಿನ ಅನೇಕ ವರ್ಷದ ಸಂಬಂಧವನ್ನು ಕಡಿದುಕೊಳ್ಳುವ ಚೌಕಟ್ಟಿನಲ್ಲಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ 'ಮಿಸ್ಸಿಂಗ್ ಲಿಂಕ್'ಗಳಾಗಿ ಪರಿವರ್ತನೆ ಹೊಂದಿದ್ದಾರೆ. ಪ್ರಭುತ್ವದ ವ್ಯವಸ್ಥೆ ಅಡಿಯಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನವೆಂದು ಘೋಷಿಸಿರುವುದೇ ಮೂಲ ಕಾರಣವಾಗಿ ಹಾಗೂ ಸೆಟಲ್ಮೆಂಟ್ ಆಫ್ ಕ್ಲೇಮ್ಸ್‌ಗಳಲ್ಲಿ ನೆಲೆಸಿರುವವರ ಹಕ್ಕುಗಳಿದ್ದು, ಅವುಗಳನ್ನು ಪರಿಗಣಿಸದೆ ಜಾರಿಯಾದ ವ್ಯವಸ್ಥೆ, ಉದ್ಯಾನವನದ ಸಿಂಧುತ್ವದ ಮೂಲಕ್ಕೆ ಬೆರಳು ಮಾಡಿ ತೋರಿಸುತ್ತದೆ.

ದೇಶದ ಇಲ್ಲವೆ ರಾಜ್ಯದ ಸರ್ಕಾರಗಳು ಶಾಸನ ರಚನೆಯ ಪರಮಾಧಿಕಾರದ ಸಾರ್ವಭೌಮತ್ವವನ್ನು ಹೊಂದಿರುವುದು, ಅಂಥತ್ವದ ಮುಖೇನ ಬಿಳಿ ಪತ್ರದ ಮೇಲೆ ಕಪ್ಪು ಶಾಹಿಯಲ್ಲಿ ಉಪ್ಪರಿಗೆಯ ಮೇಲೆ ಕುಳಿತಿರುವವ, ಸ್ಥಳೀಯ ಕ್ಷೇತ್ರದ ಯಾವ ಅನುಭವವಿಲ್ಲದೆ ರಚಿಸುವ ಕಾಯ್ದೆಗಳನ್ನು ಜಾರಿಗೆ ತರುವುದಕ್ಕಲ್ಲ. ಬದಲಿಗೆ ತನ್ನ ಆಡಳಿತದ ಪ್ರಾದೇಶಿಕ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಹಭಾಗಿತ್ವವನ್ನು ಪರಿಗಣಿಸಿ ಸರ್ವರ ಕಲ್ಯಾಣವಾಗುವುದರೆಡೆಗೆ ನೆರವೇರುವ ಶಾಸನಗಳನ್ನು ಎಂಬುದನ್ನು ವಿವೇಚಿಸುವ ಅಗತ್ಯವಿದೆ. ಸರ್ಕಾರವು ಸಂವಿಧಾನ ಬದ್ಧವಾಗಿ ರಚಿಸಿರುವ ಇಲಾಖೆಗಳು ಆಡಳಿತದಲ್ಲಿ ಸುವ್ಯವಸ್ಥೆಗಳನ್ನು ಕಾಪಾಡಿ, ಸರ್ಕಾರವು ರಚಿಸುವ ಶಾಸನಗಳನ್ನು ಹಾಗೂ ಯೋಜನೆಗಳನ್ನು ಸಾರ್ವಜನಿಕರ ಒಳಿತಿಗಾಗಿ ನಿರ್ವಹಿಸಲು. ಆದರೆ ಇಲಾಖಾ ಅಧಿಕಾರಿಗಳು ನಿರಂಕುಶರಂತೆ ವರ್ತಿಸುವ ಪರಿಪಾಟಲು ಮತ್ತು ಉದಾಸೀನದ ಮನೋಭಾವನೆಯು ರಾಷ್ಟ್ರ ಕವಿ ಕುವೆಂಪು ಅವರು ರಚಿಸಿದ 'ವಿಜಯನಗರವೋ, ಮೊಗಲರಾಳ್ವಿಕೆಯೋ ಇಂಗ್ಲೀಷರೋ, ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ' ಎನ್ನುವಂತಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದೇಶದ ಶಾಂತಿ, ಸಂತೋಷ ಮತ್ತು ಸಮೃದ್ಧಿಯನ್ನು ಹೊಂದಲು ನಾಗರೀಕರ ನೆಮ್ಮದಿಯ ಜೀವನ ಪ್ರಮುಖವಾಗುತ್ತದೆ ಎಂಬುದನ್ನು ಶಾಸನ ರಚನಾಕಾರರು ಮತ್ತು ಅಧಿಕಾರಿ ವರ್ಗದವರು ಮನಗಾಣಬೇಕಾಗಿದೆ.

ಫಲಿತಗಳು

೦೧. ಜಾಗತಿಕರಣ ವ್ಯವಸ್ಥೆಯು ಪರಿಸರವನ್ನು ಬಂಡವಾಳ ಶಾಹಿಯ ಮುಷ್ಠಿಯಲ್ಲಿ ಬಂದಿಸುವುದರೊಂದಿಗೆ ವಿನಾಶದ ಅಂಚಿನಲ್ಲಿ ನಿಲ್ಲುವಂತೆ ಮಾಡತೊಡಗಿದೆ.

೦೨. ರಕ್ಷಿತಾರಣ್ಯಗಳು, ಅಭಯಾರಣ್ಯಗಳು, ಕಾಯ್ದಿರಿಸಿದ ಪ್ರದೇಶಗಳು ಇತ್ಯಾದಿ ಹೆಸರಲ್ಲಿ ಪರಿಸರ ಸಂರಕ್ಷಕರಾಗಿದ್ದ ಅರಣ್ಯವಾಸಿಗಳನ್ನು ಪುನರ್ವಸತೀಕರಣದ ನಾಮಫಲಕದಲ್ಲಿ ಒಕ್ಕಲೆಬ್ಬಿಸುತ್ತಿದ್ದಾರೆ. ಈ ಪರಿಸ್ಥಿತಿ ಬಂಡವಾಳ ಶಾಹಿಗಳ ದೃಷ್ಟಿಯಲ್ಲಿ ಪರಿಸರ ಸಂರಕ್ಷಣೆಯಾಗಿದೆ.

೦೩. ಬ್ರಿಟೀಷ್ ವಸಾಹತು ಕಾಲದಲ್ಲಿ ಮತ್ತು ಸ್ವತಂತ್ರ ಭಾರತದಲ್ಲಿ ಅರಣ್ಯಗಳ ನಾಶ ಮತ್ತು ಅಭಿವೃದ್ಧಿಯ ಸೋಗಿನಲ್ಲಿ ಅಣೆಕಟ್ಟುಗಳ ನಿರ್ಮಾಣ, ಕಾರ್ಖಾನೆಗಳ ನಿರ್ಮಾಣ,

ಸಂರಕ್ಷಣೆಯ ನೆಪದಲ್ಲಿ ಅಭಯಾರಣ್ಯ, ರಾಷ್ಟ್ರೀಯ ಉದ್ಯಾನವನಗಳು ಮತ್ತು ಜೀವವೈವಿಧ್ಯತಾ ತಾಣಗಳ ರಚನೆ ಮುಖಾಂತರ ಒತ್ತಡ, ಇಲ್ಲವೆ ಸ್ವಯಂ ಪ್ರೇರಿತವಾದ ಸ್ಥಳಾಂತರಕ್ಕೆ ಪ್ರಚೋದನೆಗಳು (ಒಕ್ಕಲೇಳುವಿಕೆಗೆ), ಪುನರ್ವಸತೀಕರಣ ವ್ಯವಸ್ಥೆಯು ಯಶಸ್ಸಿಗಿಂತ ಗೊಂದಲವಾಗಿ ಮಾರ್ಪಾಡಾಗುತ್ತಿದೆ.

೦೪. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ತನ್ನ ವ್ಯಾಪ್ತಿಯೊಳಗೆ ಒಳಗೊಳ್ಳುವ ಸ್ಥಳಗಳು ಮತ್ತು ಅಲ್ಲಿ ನೆಲೆಸಿರುವ ಗಿರಿಜನರು, ರೈತರು ಮತ್ತು ಇತರೆ ಅರಣ್ಯವಾಸಿಗಳು ಬಗರ್ ಹುಕುಂ ಅಡಿಯಲ್ಲಿ ಕೃಷಿ ಕಾರ್ಯ ಕೈಗೊಂಡು ತಮ್ಮ ಜೀವನೋಪಾಯವನ್ನು ಕಂಡುಕೊಂಡಿದ್ದಾರೆ.

೦೫. ರಾಷ್ಟ್ರೀಯ ಉದ್ಯವಾನವನದ ವ್ಯಾಪ್ತಿಯಲ್ಲಿ ನೆಲೆಸಿರುವ ಜನರಲ್ಲಿ ಬಹುಪಾಲು ಕೃಷಿಯನ್ನೇ ಮೂಲ ಕಸುಬನ್ನಾಗಿಸಿಕೊಂಡು, ಕಿರು ಅರಣ್ಯ ಉತ್ಪತ್ತಿಗಳನ್ನು ಸಂಗ್ರಹಿಸಿಕೊಂಡು ತಮ್ಮ ಆರ್ಥಿಕ ಸ್ಥಿತಿಗಳನ್ನು ಸಮಸ್ಥಿತಿಯಲ್ಲಿ ಸಾಗಿಸಿಕೊಂಡು ಬಂದಿದ್ದಾರೆ.

೦೬. ರಾಷ್ಟ್ರೀಯ ಉದ್ಯಾನವನ ರಕ್ಷಣೆಗೆ ಇರುವ ವಲಯವಾರು ಅರಣ್ಯ ಸಿಬ್ಬಂಧಿ ಮತ್ತು ಅವರೊಂದಿಗೆ ಪರಿಸರ ಸೂಕ್ಷ್ಮ ಯೋಜನೆ ಅಡಿಯಲ್ಲಿ ಅರಣ್ಯ ರಕ್ಷಣೆಯ ಕಾರ್ಯವನ್ನು ಕೈಗೊಂಡಿದ್ದಾರೆ. ಇದು ಒಂದೆಡೆ ಸಾರ್ವಜನಿಕ ಸಹಭಾಗಿತ್ವವನ್ನು ಪ್ರೋತ್ಸಾಹಿಸುವಂತಹದ್ದಾಗಿದೆ.

೦೭. ರಾಷ್ಟ್ರೀಯ ಉದ್ಯಾನವನವನ್ನು ಘೋಷಿಸುವ ಸಂದರ್ಭಲ್ಲಿ ಜನರ ಆಕ್ಷೇಪಣೆ ಮತ್ತು ತಿರಸ್ಕೃತ ಅಂಶಗಳಿಗೆ ಸೆಟಲ್ಮೆಂಟ್ ಆಫ್ ಕ್ಲೇಮ್ಸ್ ಗಳನ್ನು ನೀಡದೆ ಉದ್ಘೋಷಣೆ ಹೊರಡಿಸಿರುವುದು ಜನರ ಹಕ್ಕನ್ನು ಕಡೆಗಣಿಸಿದಂತಾಗಿದೆ.

೦೮. ಹುಲಿ ಯೋಜನೆ ಅನುಷ್ಠಾನದ ನಾಮಾಂಕಿತದಲ್ಲಿ ಗಿರಿಜನರನ್ನು ಒಕ್ಕಲೆಬ್ಬಿಸುವ ಯೋಜನೆಗಳು, ಇದೆ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಬಂದ ನಕ್ಸಲೀಯರು ಅವರನ್ನು ನಿಯಂತ್ರಣದಲ್ಲಿಡಲು ನೇಮಕವಾದ ನಕ್ಸಲ್ ನಿಗ್ರಹ ದಳ. ಈ ಮೂರು ವ್ಯವಸ್ಥೆ ನಡುವೆ ಸಿಲುಕಿದ ಗಿರಿಜನರು ಕನಿಷ್ಠ ಸೌಲಭ್ಯವನ್ನು ಪಡೆಯದೆ ನರಕಸದೃಶ್ಯ ಪರಿಸ್ಥಿತಿಯಲ್ಲಿ ಸಿಲುಕಿ ಸರ್ಕಾರ ನೀಡುವ ಪರಿಹಾರಕ್ಕೆ ಕೈ ಒಡ್ಡಿದರು, ಸರ್ಕಾರದ ವಿಳಂಬ ನೀತಿಯಲ್ಲಿ ಆತಂಕಕ್ಕೆ ಒಳಗಾಗಿದ್ದಾರೆ.

೦೯. ರಾಷ್ಟ್ರೀಯ ಉದ್ಯಾನವನದಿಂದ ಮೂಲಭೂತ ಸೌಕರ್ಯಗಳನ್ನು ಆಶ್ರಹಿಸಿ ಒಕ್ಕಲೆದ್ದವರು ಒಂದೆಡೆಯಾದರೆ, ನಕ್ಸಲ್ ಚಟುವಟಿಕೆ ಆಧಾರಿತವಾಗಿ ಪೋಲಿಸ್ ಕಾರ್ಯಾಚರಣೆಯ ವ್ಯವಸ್ಥೆಗಳಿಗೆ ಆತಂಕಗೊಂಡು ಹಲವರು ಪುನರ್ವಸತಿ ಪರಿಹಾರ ಪಡೆದಿದ್ದಾರೆ.

೧೦. ಒಕ್ಕಲೆಬ್ಬಿಸುವಕೆಯ ಪರಿಣಾಮವಾಗಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವ್ಯವಸ್ಥೆಗಳಲ್ಲಿನ ವ್ಯತ್ಯಾಸಗಳು ಇಲ್ಲಿನ ಸಮುದಾಯಗಳ ಒಗ್ಗಟ್ಟನ್ನು ಒಡೆದಂತಾಗಿದೆ.

೧೧. ಉದ್ಯಾನವನದ ಒಳಭಾಗದಲ್ಲಿರುವವರು, ಒಕ್ಕಲೆದ್ದವರ ಸ್ಥಿತಿಗಳನ್ನು ಅವಲೋಕಿಸಿ ಉದ್ಯಾನವನದ ಒಳಭಾಗದಲ್ಲಿಯೇ ನೆಲೆನಿಲ್ಲಲು ಗಟ್ಟಿತನವನ್ನು ಪ್ರದರ್ಶಿಸಿದ್ದಾರೆ. ಇದರೊಂದಿಗೆ ಹೊರ ಭಾಗದಲ್ಲಿ ಇರುವ ಸೌಲಭ್ಯಗಳ ಕೊರತೆ ಮತ್ತು ಭೂ ಹಿಡುವಳಿಯ ಅಧಿಕ ದರದ ಮೌಲ್ಯವನ್ನು ಭರಿಸಲಾಗದ ಸ್ಥಿತಿಯನ್ನು ನಾವು ಹೊಂದಿದ್ದು, ಇಲ್ಲಿಂದ ಒಕ್ಕಲೇಳುವ ಪ್ರಮೇಯವೇ ಇಲ್ಲವೆಂಬ ನಿಲುವಿನಲ್ಲಿದ್ದಾರೆ.

೧೨. ಜನ ಸಮುದಾಯಗಳ ಸಮೂಹ ಬೆಂಬಲದ ಹೊರತು ಹಾಗೂ ಇಚ್ಚಾ ಶಕ್ತಿಯ ಹೊರತು ಪ್ರಭುತ್ವದ ವಿರುದ್ಧದ ಯಾವ ಚಟುವಟಿಕೆಗಳು ಸರಿಯಾದ ನೆಲೆ ನಿಲ್ಲಲು ಸಾಧ್ಯವಿಲ್ಲ ಎಂಬುದು, ಈ ಪ್ರದೇಶದಲ್ಲಿ ಕಂಡುಬರುವ ನಕ್ಸಲ್ ಚಟುವಟಿಕೆಯ ಮರೀಚಿಕೆಯ ಸ್ಥಿತಿ ಉತ್ತಮ ನಿದರ್ಶನವಾಗಿದೆ.

೧೩. ಪ್ರಭುತ್ವದ ವಿರುದ್ಧದ, ನಕ್ಸಲರ ಶಸ್ತ್ರ ಹೋರಾಟಕ್ಕೆ ಸ್ಥಳಿಯ ಜನರಿಗೆ ಅಲ್ಪ ಮಟ್ಟಿನ ಸೌಲಭ್ಯಗಳು (ರಸ್ತೆ, ಇತರೆ) ದೊರಕಿರುವುದು, ಹಾಗೂ ಹಪ್ತಾ ವಸೂಲಿ ಪ್ರಕ್ರಿಯೆ ಸ್ಥಗಿತವಾಗಿರುವುದು ಸ್ಥಳಿಯ ಜನರಿಗೆ ಇರುವ ಸ್ಥಳದಲ್ಲಿ ನೆಲೆ ನಿಲ್ಲಲು ಸಾಧ್ಯವಾಗಿದೆ.

೧೪. ಸರ್ಕಾರದ ಆತುರಾತುರದ ಯೋಜನೆಯ ಘೋಷಣೆಗಳು, ಸ್ಥಿರವಲ್ಲದ ಯೋಜನೆಗಳಿಗೆ ಉದಾಹರಣೆಯಾಗಿರುವುದಲ್ಲದೆ, ಸ್ಥಳಿಯ ಜನರಿಗೆ ಸರ್ಕಾರದ ನಿಲುವುಗಳ ಮೇಲೆ ಅಪನಂಬಿಕೆಯನ್ನು ಹೊಂದುವಂತಹ ಪರಿಸ್ಥಿತಿಯನ್ನು ನಕ್ಸಲ್ ಚಟುವಟಿಕೆಯ ಆರಂಭದ ದಿನಗಳಲ್ಲಿ ಕಾಣುವಂತಾಯಿತು.

೧೫. ಉದ್ಯಾನವನದ ಒಳಬಾಗದಲ್ಲಿರುವ ಜನರಲ್ಲಿ ಇರುವ ದ್ವಂದ್ವಾತ್ಮಕವಾದ ನಿಲುವುಗಳು (ಒಳಭಾಗದಲ್ಲಿಯೇ ಇರುವುದೋ ಅಥವಾ ಹೊರ ಹೋಗುವುದೋ), ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಉದ್ಯಾನವನದ ಒಳಭಾಗದಲ್ಲಿ ಬೆರಳೆಣಿಕೆಯ ಕುಟುಂಬಗಳು ಉಳಿದುಕೊಳ್ಳುವ ಸಾಧ್ಯತೆಯನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲವೆಂದೆನಿಸುತ್ತದೆ.

೧೬. ಪ್ರಭುತ್ವವು ರಚಿಸುತ್ತಿರುವ ಜನ ಸಹಭಾಗಿತ್ವವಲ್ಲದ ಯೋಜನೆಗಳು ಫಲಕಾರಿಯಾಗದೆ, ವಿಫಲವಾಗಿರುವಂತಹ ಎಲ್ಲಾ ಯೋಜನೆಗಳು ಅವೈಜ್ಞಾನಿಕವಾಗಿವೆ, ಎಂದು ಸಾಕ್ಷೀಕರಿಸುವುದಕ್ಕೆ – ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ಭಾರತ ಮತ್ತು ಕರ್ನಾಟಕದ ಪ್ರಾದೇಶಿಕತೆಯಲ್ಲಿ ಜಾರಿಯಾಗಿರುವ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯ ಯೋಜನೆಗಳು ಉತ್ತಮ ನಿದರ್ಶನವಾಗಿದೆ.

೧೭. ಒಕ್ಕಲೆದ್ದವರನ್ನು ಯೋಜನಾ ನಿರಾಶ್ರಿತರೆಂದು ಉಲ್ಲೇಖಿಸಲ್ಪಟ್ಟರೆ, ಮುಂದಿನ ದಿನಗಳಲ್ಲಿ ಶೈಕ್ಷಣಿಕ ಮತ್ತು ಉದ್ಯೋಗ ಮೀಸಲಾತಿ ದೊರಕುವುದು ಎಂಬ ಆಶಯ ಪುನರ್ವಸತೀಕರಣ ಹೊಂದಿದವರದ್ದಾಗಿದೆ.

೧೮. ಉದಾನವನದ ವ್ಯಾಪ್ತಿಯಲ್ಲಿರುವವರು ಇಂದಿಗೂ ಅರಣ್ಯ ಹಕ್ಕು ಪತ್ರಕ್ಕಾಗಿ ಕಂದಾಯ ಇಲಾಖೆಯ ಮೊರೆ ಹೋಗಿರುವುದು ಹಾಗೂ ಹೆಚ್ಚಿನವರು ಅರಣ್ಯ ಒತ್ತುವರಿ ಭೂ ಹಿಡುವಳಿಗಳಲ್ಲಿಯೇ ಕೃಷಿ ಮೂಲ ಆಧಾರಿತ ಚಟುವಟಿಕೆಗಳ ಮುಖಾಂತರ ತಮ್ಮ ಆರ್ಥಿಕ ಜೀವನೋಪಾಯವನ್ನು ಕಂಡುಕೊಂಡಿದ್ದಾರೆ.

೧೯. ಗಣಿಗಾರಿಕೆ ಕಂಪನಿ ಆರಂಭದಲ್ಲಿ ಮಲ್ಲೇಶ್ವರ ಗ್ರಾಮಸ್ಥರು ತಮ್ಮ ಹಿಡುವಳಿಗಳನ್ನು ಬಿಟ್ಟುಕೊಟ್ಟು ಕಂಪನಿ ನೀಡಿದ ಸ್ಥಳಗಳಲ್ಲಿ ಸ್ಥಳಾಂತರಗೊಂಡವರು, ರಾಷ್ಟ್ರೀಯ ಉದ್ಯಾನವನ ಘೋಷಣೆ ನಂತರ ಮರು ಸ್ಥಳಾಂತಕ್ಕೆ ಅಂದರೆ, ಒಕ್ಕಲೇಳುವಿಕೆಗೆ ತಯಾರಾಗಬೇಕಾದ ಸಂದರ್ಭಗಳು ಎದುರಾಗಿವೆ.

೨೦. ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಯ ಆಧ್ಯತಾ ಯೋಜನೆಗಳಲ್ಲಿ, ಸಹಜವಾಗಿ ಆದಿವಾಸಿ ಗಿರಿಜನ, ರೈತರು ಮತ್ತು ಪಾರಂಪಾರಿಕ ಅರಣ್ಯವಾಸಿಗಳು ಅಮೂರ್ತವಾಗಿ

ಹೊಂದಿರುವ ಅರಣ್ಯ ಬಳಕೆಯ ಹಕ್ಕುಗಳು, ನಿಯಮಗಳು ಮತ್ತು ಕಾಯ್ದೆಗಳನ್ನು ಆ ಸ್ಥಳದಲ್ಲಿ ಊರ್ಜಿತಗೊಳಿಸುವುದರಿಂದ ಅವರ ಹಕ್ಕುಗಳು ಪ್ರಥಮವಾಗಿ ಉಲ್ಲಂಘಿಸಲ್ಪಟ್ಟಿವೆ.

೨೧. ಕಾಯ್ದೆಗಳು ಮತ್ತು ನಿಯಮಗಳು ಲಿಖಿತವಾಗಿ ಇದ್ದರೂ ಸಹ, ಅವುಗಳು ಕ್ಷೇತ್ರಗಳಲ್ಲಿ ಅನ್ವಯವಾಗುವಾಗ ಸಾರ್ವಜನಿಕರು ಮತ್ತು ಸಂಬಂಧಿತ ಇಲಾಖೆಯ ಅಧಿಕಾರಿಗಳೊಂದಿಗೆ ಸಂಘರ್ಷವೇರ್ಪಡುವುದಾಗಿದೆ. ಅರಣ್ಯ ಹಕ್ಕುಗಳ ಅಧಿನಿಯಮದ ಪ್ರಕಾರ ಅರಣ್ಯ ಉತ್ಪತ್ತಿ ಸಂಗ್ರಹಿಸಲು ಅನುವು ಮಾಡಿಕೊಡಲಾಗಿದೆ. ಆದರೆ, ಅದನ್ನು ಅರಣ್ಯ ಇಲಾಖಾ ಅಧಿಕಾರಿಗಳು ಹಲವು ಸಂದರ್ಭದಲ್ಲಿ ಮೊಟುಕುಗೊಳಿಸಿರುವ ಹಲವು ನಿದರ್ಶನದ ಪ್ರಸಂಗಗಳಿವೆ ಎಂದು ಸ್ಥಳಿಯರ ಸಂದರ್ಶನದಲ್ಲಿ ಕಂಡುಕೊಳ್ಳಲಾಯಿತು. ಅರಣ್ಯ ಹಕ್ಕು ಸಾಗುವಳಿ ಪತ್ರವನ್ನು ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾತ್ರ ನೀಡುತ್ತಿದ್ದಾರೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಡಮಾಡದಿರುವುದಕ್ಕೆ ಕಾರಣಗಳೇನು? ಎಂಬ ಪ್ರಶ್ನೆ ಉಲ್ಲೇಖವಾಗಿದೆ.

೨೨. ಕುದುರೆಮುಖ ಪ್ರದೇಶವು ರಾಷ್ಟ್ರೀಯ ಉದ್ಯಾನವನವೆಂದು ಘೋಷಣೆಯಾದ ಸನ್ನಿವೇಶವೇ ವನ್ಯಜೀವಿ ಕಾಯ್ದೆಯ ವಿಧಿ ೨೪(೧) ರಂತೆ ಸೆಟಲ್ಮೆಂಟ್ ಆಫ್ ಕ್ಲೇಮ್ಸ್‌ಗಳನ್ನು ಪರಿಪೂರ್ಣಗೊಳಿಸದೆ, ಸಾರ್ವಜನಿಕರ ವಿರೋಧದ ನಡುವೆಯೇ ಅಂತಿಮ ಘೋಷಣೆಯನ್ನು ಹೊರಡಿಸಿರುವುದು, ಅದರ ಮೂಲವನ್ನು ಅಸಿಂಧುವೆಂದು ಪ್ರಶ್ನಿಸುವಂತಹ ಸನ್ನಿವೇಶ ಮತ್ತು ಜನರ ಸಹಭಾಗಿತ್ವವನ್ನು ಪರಿಗಣಿಸಿಲ್ಲವೆಂಬ ಆಕ್ಷೇಪಣೆಗಳು ಉಲ್ಲೇಖವಾಗಿವೆ. ಇದರೊಂದಿಗೆ ನಕ್ಸಲ್ ಚಟುವಟಿಕೆಗಳು ಆರಂಭವಾಗಿ ಪೋಲಿಸ್ ಕಾರ್ಯಚರಣೆಗಳು ಜಾರಿಯಾಗಿ ಜನರು ಕೋರ್ಟ‌ಗಳ ಮೆಟ್ಟಿಲೇರುವಂತಹ ಸಂದರ್ಭಗಳು ಎದುರಾಗಿವೆ. ಅರಣ್ಯ ಇಲಾಖೆಯವರು ಸ್ಥಳಿಯ ಜನರಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ, ವಿದ್ಯುತ್ ಮತ್ತು ಇನ್ನಿತರ ಅಂಶಗಳು ದೊರೆಯದಂತೆ, ರಾಷ್ಟ್ರೀಯ ಉದ್ಯಾನವನವೆಂಬ ಹೆಸರಲ್ಲಿ ಅವಕಾಶವನ್ನು ನೀಡದಾಗಿದ್ದಾರೆ.

೨೩. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಿಂದ ಒಕ್ಕಲೇಳುವ ಕುಟುಂಬಗಳಿಗೆ ಯಾವುದೇ ಒತ್ತಡವನ್ನು ಏರಿ ಒಕ್ಕಲೇಳುವುದಕ್ಕೆ ಅವಕಾಶವನ್ನು ನೀಡಿಲ್ಲ. ಆದರೆ, ಕಾನೂನುಗಳು ಯಾವ ಸಮಯದಲ್ಲಿ ಹೇಗೆ ಅನುಷ್ಠಾನಗೊಳ್ಳುವುದೋ ಎಂಬ ಆತಂಕದಲ್ಲಿ ಹಾಗೂ ಮೂಲಭೂತ ಸೌಕರ್ಯದಲ್ಲಿ ಶಿಕ್ಷಣಕ್ಕೆ ಆದ್ಯತೆ ನೀಡಿ ಕುಟುಂಬಗಳು ಒಕ್ಕಲೇಲುತ್ತಿವೆ. ಈ ಪರಿಯಾಗಿ ಒಕ್ಕಲೇಳುವ ಕುಟುಂಬಗಳು 'ಸ್ವ' ಇಚ್ಚೆ ಮೂಲಕ ಅರ್ಜಿಗಳನ್ನು ಸಲ್ಲಿಸಿ, ದಾಖಲೆಗಳನ್ನು ಕ್ರಮಬದ್ಧವಾಗಿ ಪಟ್ಟಿಕರಿಸಿ ಸಲ್ಲಿಸಿದರೆ, ಇತರ ಇಲಾಖೆಗಳ ಸಹಯೋಗದೊಂದಿಗೆ ನೈಜತೆಯ ಸ್ವತ್ತುಗಳ ಆಧಾರಿತವಾಗಿ ಮೌಲ್ವೀಕರಿಸಲಾಗುತ್ತಿದೆ ಮತ್ತು ಇದಕ್ಕೆ ಪೂರಕವಾಗಿ ಸ್ವತ್ತು ಸಾಗಾಟ, ಭೂ ಹಿಡುವಳಿ ಪರಿಹಾರ, ಜೀವನಾಧಾರ, ಮನೆ ನಿರ್ಮಾಣ ಮತ್ತು ಆದಾಯ ಉತ್ಪನ್ನ ಅಂಶಗಳೆಂದು ಪರಿಹಾರಗಳನ್ನು ನೀಡುತ್ತಿದ್ದಾರೆ. ಈ ಅಂಶಗಳಿಂದ ಬರುವ ನಿಧಿಯು ಉದ್ಯಾನವನದ ಹೊರಭಾಗದಲ್ಲಿ ಸ್ಥಳಗಳನ್ನು ಕ್ರಯಕ್ಕೆ ಕೊಳ್ಳಲು ಅನುವಾಗದೆ ಪುನರ್ವಸತಿ ಹೊಂದದೆ ಕೆಲವು ಕುಟುಂಬದವರಿದ್ದಾರೆ ಮತ್ತು ಕೆಲವರು ದೊರೆತ ನಿಧಿ ಅಂಶಗಳಿಗೆ ಸಾಲವನ್ನು ಪಡೆದು ಸ್ಥಳಗಳನ್ನು ಕ್ರಯಕ್ಕೆ ಕೊಳ್ಳುತ್ತಿದ್ದಾರೆ.

೨೪. ಗಿರಿಜನರ ಮತ್ತು ಅಲ್ಲಿನ ರೈತರ ಮುಗ್ಧತೆಯನ್ನು ಬಳಸಿಕೊಂಡು ಕೆಲವು ಸರ್ಕಾರೇತರ ಸಂಸ್ಥೆಗಳು ಆಮಿಶವೊಡ್ಡಿ ಅವರನ್ನು ಒಕ್ಕಲೆಬ್ಬಿಸುವುದರೊಂದಿಗೆ, ಭೂ ಹಿಡುವಳಿ ಸೌಲಭ್ಯಗಳು ದೊರೆತರು ಅವರ ಸುಪರ್ಧಿಗೆ ಒಳಪಡಲು ಕಂದಾಯ ಇಲಾಖೆಯ ಅಕ್ಷೇಪಣೆಗಳು ಎದುರಾಗುವುದರೊಂದಿಗೆ ಸಂಕಷ್ಟದಲ್ಲಿದ್ದಾರೆ. ಇದು ಸ್ಥಳಾಂತರ ಹೊಂದಿದರು ತಮ್ಮ ಹಕ್ಕನ್ನು ಪಡೆದುಕೊಳ್ಳುವಲ್ಲಿ ವೈಪಲ್ಯತೆಯನ್ನು ಅನುಭವಿಸಿದ್ದಾರೆ ಎಂಬ ನಿದರ್ಶನವಾಗಿದೆ ಹಾಗೂ ಪುನರ್ವಸತಿ ಪಡೆದರೂ ಸಂಪೂರ್ಣವಲ್ಲವೆಂಬಂತಾಗಿದೆ.

೨೫. ಒಕ್ಕಲೆದ್ದವರಲ್ಲಿ ಕೆಲ ಗಿರಿಜನರ ಗುಂಪುಗಳು ಒಮ್ಮೇಲೆಯೇ ಒಕ್ಕಲೆದ್ದು ಒಂದೆಡೆ ನೆಲೆಸಿ ತಮ್ಮ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸ್ಥಿತಿಯನ್ನು ಮೊದಲಿನಂತೆ ಕಾಪಾಡಿಕೊಳ್ಳಲು ಪ್ರಯತ್ನಿಸಿ ಸಾಮಾಜಿಕ– ಸಾಂಸ್ಕೃತಿಕ ಬಲವನ್ನು ಉಳಿಸಿಕೊಂಡಿದ್ದಾರೆ.

೨೬. ರಾಷ್ಟ್ರೀಯ ಉದ್ಯಾನವನ ರಕ್ಷಣೆಗೆ ಇರುವ ವಲಯವಾರು ಅರಣ್ಯ ಸಿಬ್ಬಂಧಿ ಮತ್ತು ಅವರೊಂದಿಗೆ ಪರಿಸರ ಸೂಕ್ಷ್ಮ ಯೋಜನೆ ಅಡಿಯಲ್ಲಿ ಅರಣ್ಯ ರಕ್ಷಣೆಯ ಕಾರ್ಯವನ್ನು ಕೈಗೊಂಡಿದ್ದಾರೆ. ಇದು ಒಂದೆಡೆ ಸಾರ್ವಜನಿಕ ಸಹಭಾಗಿತ್ವವನ್ನು ಪ್ರೋತ್ಸಾಹಿಸುವಂತದ್ದಾಗಿದೆ.

೨೭. ಒಕ್ಕಲೇಳುವ ಪೂರ್ವದಲ್ಲಿದ್ದ ಸ್ವತ್ತುಗಳ ಪ್ರಮಾಣವು ಒಕ್ಕಲೆದ್ದು ಪುನರ್ವಸತಿಗೊಂಡ ಮೇಲೆ ಅದೇ ಪ್ರಮಾಣದ ಸ್ವತ್ತುಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗದಿರುವುದು. ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತಿಯಲ್ಲಿನ ವ್ಯತ್ಯಾಸಕ್ಕೆ ಕಾರಣವಾಗಿದೆ.

೨೮. ಸ್ಕುಡರ್, ಕಲ್ಸನ್ ಮತ್ತು ಮೈಕಲ್ ಸೆರೆನಾ ಅವರ ತಾತ್ವಿಕ ಸಿದ್ಧಾಂತದ ಮಾದರಿಗಳನ್ನು ಅನ್ವಯಿಸಿದಾಗ ಸಿದ್ಧಾಂತಗಳಲ್ಲಿ ಉಲ್ಲೇಖಿಸಿದ ಅಂಶಗಳಾದ ಸೂಚನೆ, ಸಾಮರ್ಥ್ಯ ಅಭಿವೃದ್ಧಿ ಮತ್ತು ಪುರ್ನರಚನೆಗೆ ಸ್ವಯಂ ಪ್ರೇರಿತವಾಗಿ ಒಕ್ಕಲೆದ್ದರೂ ಕೂಡ ಪ್ರಗತಿಗಾಗಿ ಇನ್ನು ಹೆಚ್ಚು ಸಮಯ ಅವಶ್ಯಕವಾಗಿದೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೨೯. ನಕ್ಸಲ್ ಚಟುವಟಿಕಗಳು ಈ ಪ್ರಾಂತ್ಯದಲ್ಲಿ ಕಂಡ ಮೇಲೆ ಪ್ರಭುತ್ವವು ಸ್ಥಳಿಯ ಜನರ ಬೇಡಿಕೆಗಳಿಗೆ ಸ್ಪಂದಿಸಲು ಆರಂಭಿಸಿತು. ಆದರೆ, ಪ್ರಭುತ್ವದ ವಿರುದ್ಧ ಶಸ್ತ್ರ ಹೋರಾಟವು ಈ ಭಾಗದಲ್ಲಿ ಬಹಳ ದಿನಗಳ ಕಾಲ ಉಳಿಯಲು ಸಾಧ್ಯವಾಗದೆ ಹೋಯಿತು. ನಕ್ಸಲ್ ಚಟುವಟಿಕೆಗಳ ಪರಿಣಾಮ ಜನರು ತಮ್ಮ ಹಕ್ಕುಗಳೇನೆಂಬುದನ್ನು ಗ್ರಹಿಸುವ ಜ್ಞಾನವನ್ನು ಬೆಳೆಸಿಕೊಂಡಿದ್ದಾರೆ ಹಾಗೂ ಯಾವುದು ಸರಿ ಮತ್ತು ತಪ್ಪುಗಳು ಎಂಬುದನ್ನು ಪರಾಮರ್ಶಿಸಿ ನೋಡುವ ಜಾಣ್ಮೆಯನ್ನು ಹೊಂದಿದ್ದಾರೆ.

೩೦. ಒಕ್ಕಲೇಳುವಿಕೆಯಿಂದ ಮೂಲ ವೃತ್ತಿಗಳಾದ ಕೃಷಿ ಚಟುವಟಿಕೆ ಆಧರಿಸಿದ್ದ ಕುಟುಂಬಗಳು ಪುನರ್ವಸತಿ ಹೊಂದಿದ ನಂತರ ಅವರ ವೃತ್ತಿಗಳಲ್ಲಿ ಪಲ್ಲಟಗಳಾಗಿ ಆರ್ಥಿಕ ಸ್ಥಿತಿಯಲ್ಲಿ ವ್ಯತ್ಯಾಸಗಳನ್ನು ಹೊಂದಿದ್ದಾರೆ.

೩೧. ಉದ್ಯಾನವನದ ಒಳ ಭಾಗದಲ್ಲಿರುವವರಲ್ಲಿ ಇರುವ ದ್ವಂದ್ವಾತ್ಮಕ ನಿಲುವುಗಳು (ಪುನರ್ವಸತಿ ಹೊಂದಬೇಕೋ ಬೇಡವೋ) ಸ್ವ ಇಚ್ಛೆಯನ್ನು ವ್ಯಕ್ತಪಡಿಸುವಲ್ಲಿ ಪ್ರಶ್ನಾತೀತವಾಗಿ ಉಳಿದಿದೆ.

೩೨. ಪ್ರಸ್ತುತದಲ್ಲಿ ಉದ್ಯಾನವನದ ಒಳಭಾಗದಲ್ಲಿರುವವರು ಪುನರ್ವಸತಿ ಹೊಂದಲು ಬಯಸಿದರು, ಅದಕ್ಕೆ ಅಧಿಕಾರಿ ವರ್ಗದಿಂದ ಮರು ಸಮೀಕ್ಷಾ ಕಾರ್ಯದಲ್ಲಿ ಮೊದಲ

ಸಮೀಕ್ಷೆಯಲ್ಲಿ ದೃಡ ಪಡಿಸಿದ್ದ ಮೌಲ್ಯಕ್ಕಿಂತ ಅರ್ದದಷ್ಟು ಮೌಲ್ಯಗಳು ಕಡಿಮೆಗೊಳ್ಳುವ ಸಂಭವವಿರುವುದರಿಂದ, ಈ ಪ್ರಕ್ರಿಯೆನ್ನು ನಿಲ್ಲಿಸಬೇಕೆಂಬ ಹಕ್ಕುಗಳನ್ನು ಒತ್ತಾಯಿಸುತ್ತಿದ್ದಾರೆ.

೩೩. ಹುಲಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕೋ ಬೇಡವೋ ಎನ್ನುವ ದ್ವಂದ್ವದಲ್ಲಿ ಸರ್ಕಾರವು ಇರುವುದರಿಂದ ಈ ಪ್ರದೇಶದ ಜನರು ಹುಲಿ ಯೋಜನೆಯ ಆತಂಕದಲ್ಲಿದ್ದಾರೆ. ಇದು ಒಂದೆಡೆ ಒತ್ತಡ ಪೂರ್ವಕ ಸ್ಥಳಾಂತರಕ್ಕೆ ಎಲ್ಲಿ ಪ್ರೇರೇಪಿಸುತ್ತದೋ ಎನ್ನುವ ಅಭಿಪ್ರಾಯದಲ್ಲಿದ್ದಾರೆ.

೩೪. ಅರಣ್ಯ ಹಕ್ಕು ಪತ್ರವನ್ನು ಜಿಲ್ಲಾಡಳಿತದ ಕಂದಾಯ ಇಲಾಖೆಯಿಂದಿಂದ ಪಡೆದುಕೊಂಡರು, ಆ ಪತ್ರದ ಮುಖೇನ ಯಾವ ಬ್ಯಾಂಕ್‌ಗಳಲ್ಲೂ ಸಾಲ ಯೋಜನೆಯನ್ನು ಪಡೆದುಕೊಳ್ಳುವುದು ಸಾಧ್ಯವಿರುವುದಿಲ್ಲ. ಈ ಅಂಶವು ಕೊಟ್ಟ ಹಕ್ಕನ್ನು ಇನ್ನೊಂದು ಬದಿಯಿಂದ ಕಿತ್ತುಕೊಂಡಂತಾಗಿದೆ.

೩೫. ಸರ್ಕಾರದ ಯಾವುದೇ ಕಾರ್ಯಗಳು ಸುಗಮವಾಗಿ ಸಾಗುವೆಡೆ ಅಧಿಕಾರಿ ವರ್ಗದವರ ಇಚ್ಚಾಶಕ್ತಿ ಮತ್ತು ಅವರ ದಕ್ಷ ಆಡಳಿತ ಅವಶ್ಯವಾದದ್ದು. ಈ ಹಾದಿಯಲ್ಲಿ ಅರಣ್ಯವಾಸಿತ ಸಮುದಾಯಗಳ ಅಭಿವೃದ್ಧಿಗೆ ಅವಶ್ಯವಾದದ್ದನ್ನು ಗ್ರಹಿಸಿ, ಅವುಗಳು ದೊರೆಯುವಂತೆ ಮಾಡುವ ಇಚ್ಚಾಶಕ್ತಿ ಮತ್ತು ತಾಳ್ಮೆ ಅಧಿಕಾರಿ ವರ್ಗಕ್ಕೆ ಅನಿವಾರ್ಯವಾದದ್ದು.

ಸಲಹೆಗಳು

೦೧. ಕುದುರೆಮುಖ ವ್ಯಾಪ್ತಿಯಲ್ಲಿರುವ ಗಿರಿಜನ ಸಮುದಾಯದ ಹಲವು ಯುವಕರು ಅರೆ ಸರ್ಕಾರಿ ನೌಕರರಾಗಿ ಕುದುರೆಮುಖ ಅರಣ್ಯ ವಲಯಗಳ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಅನುಭವವುಳ್ಳವರಾಗಿದ್ದಾರೆ. ಅವರನ್ನು ನೇಮಕಾತಿ ಪ್ರಕ್ರಿಯೆಯಲ್ಲಿ ಉಲ್ಲೇಖಿಸುವ ಅರ್ಹತೆ ಅನುಸಾರವಾಗಿ ಅಭ್ಯರ್ಥಿಗಳು ಲಭ್ಯವಿದ್ದಲ್ಲಿ ಅವರನ್ನೇ ಸೇವೆಯಲ್ಲಿ ಖಾಯಂ ವಿಲೀನಗೊಳಿಸಿಕೊಂಡರೆ, ಗಿರಿಜನ ಸಮುದಾಯವನ್ನು ಅರಣ್ಯದಲ್ಲಿಯೇ ಉಳಿಸಿದಂತಾಗುವುದು ಮತ್ತು ಕುಟುಂಬವನ್ನು ಪೋಷಿಸಿದಂತಾಗುವುದು.

೦೨. ಅರಣ್ಯ ಹಕ್ಕು ಪತ್ರದ ಮುಖಾಂತರ ಖಾಯಂ ಸಾಗುವಳಿದಾರ ಎಂದು ಉಲ್ಲೇಖಿತವಾದರೂ, ಯಾವುದೇ ಬ್ಯಾಂಕ್‌ಗಳಲ್ಲಿ ಸಾಲ ಯೋಜನೆ ರೂಪಿಸಿಕೊಳ್ಳುವಂತಿಲ್ಲ. ಆದರೆ, ಬ್ಯಾಂಕ್ ಮುಖಾಂತರ ಸಾಲಯೋಜನೆಗೆ ಅನುವು ಮಾಡಿಕೊಟ್ಟಲ್ಲಿ ಕೃಷಿ ಚಟುವಟಿಕಗಳ ಅಭಿವೃದ್ಧಿಗೆ ಮತ್ತು ಮನೆ ನಿರ್ಮಾಣ ಅಭಿವೃದ್ಧಿಗೆ ಅನುಕೂಲವಾಗುವುದರಿಂದ, ಸರ್ಕಾರವು ಕಾನೂನು ತಜ್ಞರೊಂದಿಗೆ ಚರ್ಚಿಸಿ ಸೌಲಭ್ಯಗಳನ್ನು ಪಡೆದುಕೊಳ್ಳುವಂತೆ ಕಾನೂನು ರೂಪಿಸಬಹುದು.

೦೩. ಈ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ವ್ಯಾಪ್ತಿಯಲ್ಲಿ ಸುಲ್ಕೇರಿ ಗ್ರಾಮ ಸ.ನಂ ೬೫/೧ಪಿ೧ ರ ಖುಷ್ಕಿ -೧೯೦ ಎಕ್ರೆ ಜಮೀನನ್ನು ಗಿರಿಜನ ಪುನರ್ವಸತಿ ಕುರಿತಂತೆ (ಎಡಿ:ಎಲ್.ಎಸ್ ಡಿ(೧(ಬಿ)ಪಿಡಿಆರ್/೧೯೫/೧೦-೧೧[ಸಿ. ಎಫ್: ೪೯೧೬೪], ದಿ: ೦೩/೦೪/೨೦೧೧ ರಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ನಡಾವಳಿ ಸಂದರ್ಭದಲ್ಲಿ) ಕಾಯ್ದಿರಿಸುವಿಕೆಗೆ ಆದೇಶವಿದ್ದರೂ, ಅಲ್ಲಿ ರಬ್ಬರ್ ಕೃಷಿಯ ಒತ್ತುವರಿ ಪ್ರದೇಶವಾಗಿದೆಯೆಂದು

ಸ್ಥಳೀಯರು ಉಲ್ಲೇಖಿಸಿದ್ದಾರೆ. ಆದ್ದರಿಂದ ಆ ಪ್ರದೇಶವನ್ನು ಪುನಃ ಗಿರಿಜನರ ಪುನರ್ವಸತಿಗಾಗಿ ಕಾಯ್ದಿರಿಸಿದರೆ ಅನುಕೂಲವಾಗುವುದು.

೦೪. ಸ್ವ ಇಚ್ಛೆ ಅನುಸಾರವಾಗಿ ಪುನರ್ವಸತಿ ಪರಿಹಾರ ಪಡೆದುಕೊಳ್ಳುವವರ ಜಮೀನುಗಳನ್ನು ಎರಡೆರಡು ಬಾರಿ ಸಮೀಕ್ಷೆ ಮಾಡುವ ಬದಲು ಒಂದೇ ಬಾರಿ ಸಮೀಕ್ಷೆ ನೆಡೆಸಿ ನೈಜ ಮೌಲ್ಯವನ್ನು ಅಧಿಕಾರಿಗಳು ಗುರುತಿಸಿ ನೀಡಿದರೆ, ಲಭ್ಯವಾಗುವ ನಿಧಿಯ ಮೌಲ್ಯ ಹೆಚ್ಚಾಗಿರುತ್ತದೆ ಮತ್ತು ಹೊರ ಭಾಗದಲ್ಲಿನ ಸಾಕಷ್ಟು ಸವಾಲುಗಳನ್ನು ಎದುರಿಸಲು ಸಾಮರ್ಥ್ಯ ದೊರೆತಂತಾಗುತ್ತದೆ. ಈಗಿನ ಪ್ರಕಾರದಲ್ಲಿ ಎರಡು ಬಾರಿ ಸಮೀಕ್ಷೆ ಕಾರ್ಯ ನಡೆಸಿದರೆ, ಪುನರ್ವಸತಿ ಹೊಂದಲು ಅರ್ಜಿ ಸಲ್ಲಿಕೆಯಾಗಿರುವುದರಿಂದ ಬೆಳಗಳ ಮತ್ತು ತೋಟಗಳ ಸಂರಕ್ಷಣೆ ಕಾರ್ಯವನ್ನು ಸ್ಥಗಿತಗೊಳಿಸಿರುತ್ತಾರೆ ಮತ್ತು ಅವುಗಳಿಗೆ ಕಾಡು ಪ್ರಾಣಿಗಳಿಂದ ಆವಳಿಗಳುಂಟಾಗಿರುವ ಪ್ರಮೇಯವೇ ಹೆಚ್ಚು. ಇದರಿಂದ ಮರು ಸಮೀಕ್ಷೆಯಲ್ಲಿ ಮೌಲ್ಯಗಳ ವ್ಯತ್ಯಾಸವಾಗಿ ಗಿರಿಜನರು ಮತ್ತು ರೈತರು ಆತಂಕಕ್ಕೆ ಒಳಗಾಗುವ ಸಾಧ್ಯತೆಗಳಿರುವುದರಿಂದ ಒಂದೇ ಬಾರಿ ಆ ಪ್ರಕ್ರಿಯೆ ನಡೆಸುವುದು ಸೂಕ್ತವೆಂದೆನಿಸುತ್ತದೆ.

೦೫. ಸ್ವ ಇಚ್ಛೆ ಮೂಲಕ ಅರ್ಜಿ ಸಲ್ಲಿಸಿ ದಾಖಲೆಗಳು ಕ್ರಮಬದ್ಧವಾಗಿದ್ದಲ್ಲಿ ಶೀಘ್ರವಾಗಿ ಅವರ ಪರಿಹಾರವನ್ನು ನೀಡುವುದರಿಂದ ಉತ್ತಮ ಮೌಲ್ಯವು ಅವರಿಗೆ ದೊರತಂತಾಗುತ್ತದೆ.

೦೬. ಪ್ರಸ್ತುತವಾಗಿ ಸರ್ಕಾರದ ವತಿಯಿಂದ ನೀಡುತ್ತಿರುವ ಪುನರ್ವಸತಿ ಪ್ಯಾಕೇಜ್‌ನ ಗ್ರಾಂಟ್‌ಗಳನ್ನು ಏರಿಕೆ ಮಾಡುವುದರಿಂದ (ಸರ್ಕಾರದ ಅವಮೋಕನದಲ್ಲಿ) ಪರಿಹಾರ ಪಡೆಯುವವರಿಗೂ ಅನುಕೂಲವಾಗುತ್ತದೆ.

೦೭. ಅರಣ್ಯ ಹಕ್ಕುಗಳ ಅನ್ವಯ ಒಳ ಭಾಗದಲ್ಲಿರುವ ಗಿರಿಜನ, ರೈತರು ಮತ್ತು ಪಾರಂಪರಿಕ ಅರಣ್ಯವಾಸಿಗಳಿಗೆ ಕಾಡು ಉತ್ಪತ್ತಿ ಸಂಗ್ರಹಿಸಲು ಅನುಮಾಡಿಕೊಡುವುದರಿಂದ ಅವರ ಆರ್ಥಿಕ ಸ್ಥಿತಿಯು ಅಲ್ಪ ಮಟ್ಟಿನ ಚೇತರಿಕೆಯನ್ನು ಕಾಣುವುದು.

೦೮. ಅರಣ್ಯ ಹಕ್ಕು ಪತ್ರವನ್ನು ಗಿರಿಜನರನ್ನು ಮಾತ್ರ ಕೇಂದ್ರಿಕರಿಸಿ ನೀಡುತ್ತಿರುವುದರಿಂದ, ಅವರೊಂದಿಗೆ ತಲಾಂತರದಿಂದ ಸಾಗುವಳಿ ಮಾಡಿಕೊಂಡು ಬಂದಿರುವ ಇತರೆ ಅರಣ್ಯವಾಸಿಗಳಿಗೂ ನೀಡಿದರೆ ತಾರತಮ್ಯತೆಯನ್ನು ಹೋಗಲಾಡಿಸಬಹುದು.

೦೯. ಉದ್ಯಾನವನದ ಒಳಭಾಗದಲ್ಲಿರುವ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಿಕೆಗೆ ಅರಣ್ಯ ಇಲಾಖೆಯವರು ತಮ್ಮ ಕಾನೂನುಗಳನ್ನು ಅಲ್ಪ ಮಟ್ಟಿನ ಕಾರ್ಯಗಳು ನಡೆಯವುದಕ್ಕೆ ಸಡಿಲಗೊಳಿಸಿಕೊಂಡರೆ, ಸ್ಥಳೀಯರು ಅರಣ್ಯ ಇಲಾಖೆಗೆ ಸಹಾಯಸ್ತವನ್ನು ನೀಡುವುದರಲ್ಲಿ ಅವರು ಹಿಂದೆಬೀಳುವುದಿಲ್ಲ.

೧೦. ಉದ್ಯಾನವನದಿಂದ ಪುನರ್ವಸತಿ ಹೊಂದಿದ ಕುಟುಂಬಗಳು ಹೆಚ್ಚು ದೂರದಲ್ಲಿ ವಾಸಿಸಲು ಸಾಧ್ಯವಿಲ್ಲ. ಆದ್ದರಿಂದ ಆ ಕುಟುಂಬಗಳನ್ನು ಆಧರಿಸಿ ಇಲಾಖೆಯವರು ಅನುಸರಣಾ ನೀತಿಯನ್ನು ವರ್ಷಕ್ಕೊಂದು ಬಾರಿ ಕೆಲ ಕಾಲಗಳವರೆಗೂ ನಡೆಸಿದರೆ, ಆ ಕುಟುಂಬಗಳ ಸ್ಥಿತಿಗತಿಗಳು ಬೆಳವಣಿಗೆಯತ್ತಾ ಸಾಗುತ್ತಿದೇಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲು ಅನುವಾಗುತ್ತದೆ ಮತ್ತು ಸರ್ಕಾರದ ಮಟ್ಟದ ಕಾನೂನು ಚೌಕಟ್ಟಿನಲ್ಲಿ ಸೌಲಭ್ಯಗಳನ್ನು ಕೊಡಿಸಲು ಅನುಕೂಲವಾಗುತ್ತದೆ.

೧೧. ಪುನರ್ವಸತಿ ಹೊಂದುತ್ತಿರುವ ಎಲ್ಲಾ ಸಮುದಾಯದವರಿಗೆ ಯೋಜನಾ ನಿರಾಶ್ರಿತರು ಎಂಬ ಪ್ರಮಾಣ ಪತ್ರವನ್ನು ನೀಡುವುದರಿಂದ (ಕಾನೂನು ತಜ್ಞರೊಂದಿಗೆ ಚರ್ಚಿಸಿ) ಅವರ ಮಕ್ಕಳ ಭವಿಷ್ಯದಲ್ಲಿ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಮೀಸಲಾತಿ ಪಡೆಯಲು ಅನುಕೂಲವಾಗುವುದು.

೧೨. ಲ್ಯಾಂಪ್ಸ್ ಸೊಸೈಟಿಗಳನ್ನು ಬಲ ಪಡಿಸುವುದರೊಂದಿಗೆ, ಕಾಡು ಉತ್ಪತ್ತಿ ಸಂಗ್ರಹಿಸುವ ಪ್ರತಿಯೊಬ್ಬರು ಅಲ್ಲಿಯೇ ಮಾರಾಟ ಮಾಡುವ ಆದೇಶ ನೀಡಿದರೆ, ಸರ್ಕಾರದಿಂದ ಸ್ಥಾಪಿತವಾದ ಲ್ಯಾಂಪ್ಸ್ ಸೊಸೈಟಿಗಳು ಅಧಿಕ ಲಾಭವನ್ನು ಪಡೆಯಲು ಸಾಧ್ಯವಾಗುತ್ತದೆ ಮತ್ತು ಗಿರಿಜನರು ಖಾತೆಗಳನ್ನು ನಿರ್ವಹಿಸುವುದರಿಂದ ವ್ಯವಹಾರವು ಕ್ರಮಬದ್ಧವಾಗಿರುವುದಲ್ಲದೆ, ಖಾತೆ ವ್ಯವಹಾರದ ಮೇಲೆ ಸಾಲ ನೀಡಿಕೆ ಸೌಲಭ್ಯವನ್ನು ಊರ್ಜಿತಗೊಳಿಸುವುದರಿಂದ ಅಭಿವೃದ್ಧಿಗೆ ಸಹಾಯಕವಾಗುವುದು.

೧೩. ಪರಿಸರ ಅಭಿವೃದ್ಧಿ ಸಮಿತಿಗಳನ್ನು ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಸ್ಥಾಪಿಸಿ ಆಮೂಲಕ ಸಮುದಾಯದ ಸಹಭಾಗಿತ್ವವನ್ನು ಅರಣ್ಯ ಇಲಾಖೆ (ಜಂಟಿ ನಿರ್ವಹಣ) ಈಗಾಗಲೇ ವಿಸ್ತರಿಸಿದ್ದು, ಸಮಿತಿಯ ಸದಸ್ಯರುಗಳನ್ನು ಹೆಚ್ಚು ತರಬೇತಿಗೊಳಿಸುವುದರ ಮುಖಾಂತರ ಅರಣ್ಯ ಸಂರಕ್ಷಣಾ ಜವಾಬ್ದಾರಿ ಮತ್ತು ನಿರ್ವಹಣಾ ತಾಂತ್ರಿಕತೆಯನ್ನು ಹೆಚ್ಚಿಸಿದಂತಾಗುವುದು.

೧೪. ಪುನರ್ವಸತಿ ಸೌಲಭ್ಯವನ್ನು ಪಡೆಯುವವರಿಗಾಗಿ ಅವರು ಹೊಂದಿರುವ ಕೌಶಲ್ಯಗಳನ್ನು ಹಾಗೂ ಇಚ್ಚೆ ಇರುವ ವಿಷಯಗಳಲ್ಲಿ ಸಂಬಂಧಿತ ಇಲಾಖೆಗಳ ಮುಖಾಂತರ ತರಬೇತಿಗೊಳಿಸುವುದರಿಂದ ಉದ್ಯಾನವನದಿಂದ ಹೊರಬಂದ ನಂತರ ಆ ಕೌಶಲ್ಯಗಳ ಬಳಕೆಯಿಂದ ಹಾಗೂ ಸಾಲ ಸೌಲಭ್ಯಗಳ ವ್ಯವಸ್ಥೆಯಿಂದ ಕುಟುಂಬ ನಿರ್ವಹಣಾ ವ್ಯವಸ್ಥೆಯು ಪೂರಕವಾಗಿ ನಡೆಯಬಹುದು.

೧೫. ಇಕೋ ಟೂರಿಸಂ ಸ್ಥಳವಾಗಿರುವುದರಿಂದ ಅಲ್ಲಿಯ ಗಿರಿಜನ ಇಲ್ಲವೆ ಇತರೆ ಸಮುದಾಯದ ಯುವಕರಿಗೆ ಸಫಾರಿ ಮತ್ತು ಚಾರಣಗಳಲ್ಲಿ ತರಬೇತಿ ನೀಡಬೇಕು. ಈ ತರಬೇತಿಗಳ ಮುಖಾಂತರ ಸಫಾರಿ ಮತ್ತು ಚಾರಣಕ್ಕೆ ಬರುವವರಿಗೆ ಗೈಡ್‌ಗಳಾಗಿ ಕಾರ್ಯ ನಿರ್ವಹಿಸುವ ಮುಖಾಂತರ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಬಹುದು.

೧೬. ಪೆಸಾ ಕಾಯ್ದೆಯನ್ನು ಈ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುವ ಮುಖಾಂತರ ಸ್ಥಳೀಯರು ಅಗತ್ಯವಿರುವ ಅಭಿವೃದ್ಧಿ ಕಾರ್ಯಗಳಿಗೆ ನೇರ ನಿರ್ಣಯ ತೆಗೆದುಕೊಳ್ಳುವ ಮುಖಾಂತರ ಅಭಿವೃದ್ಧಿಯೆಡೆ ಸಾಗುವಿಕೆಗೆ ಅನುಕೂಲವಾಗುವುದು.

ಪರಾಮರ್ಶನ ಗ್ರಂಥಗಳು

೦೧. ಕಲ್ಕುಳಿ ವಿಠಲ್ ಹೆಗ್ಡೆ, ತುಂಗ–ಭದ್ರಾ ಉಳಿಸಿ ಹೋರಾಟ ಒಕ್ಕೂಟ. ಜನತೆಯ ಹೋರಾಟಕ್ಕೆ ಮಣಿದ ಕತ್ತಿ. ೨೦೦೨.

೦೨. ಕಲ್ಕುಳಿ ವಿಠಲ್ ಹೆಗ್ಡೆ, ಕಾಡು ಕಿರುಕುಳ, ನಮ್ಮ ನಾಡು ಪ್ರಕಾಶನ. ೨೦೦೨.

೦೩. ಕೃಷ್ಣಯ್ಯಗೌಡ ಹೆಚ್.ಆರ್. ಆರ್ಥಿಕ ವಿಶ್ಲೇಷಣೆ. ಚೇತನಾ ಬುಕ್ ಹೌಸ್. ಮೈಸೂರು. ೧೯೯೯.

೦೪. ಗಂಗಾಧರದೈವಜ್ಞ, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೦೫. ಭಟ್ ಹೆಚ್.ಕೆ ಮತ್ತು ಶ್ರೀನಿವಾಸ ಬಿ.ಎಂ, ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಬುಡಕಟ್ಟು ಜನರ ಮರುವಸತಿ. ತಾರಿಹಳ್ಳಿ ಹನುಮಂತಪ್ಪ,(ಸಂ) ಕರ್ನಾಟಕದ ಬುಡಕಟ್ಟು ಸಮುದಾಯಗಳು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೦೬. ನಾಗರಾಜ್ ಎ . ಎನ್, ಯಾರದೋ ಮುಖ ಯಾರದೋ ದೇಹ – ಕುದುರೆಮುಖ. ನಾಗರೀಕ ಸೇವಾ ಟ್ರಸ್ಟ್.

೦೭. ನಾಗರಾಜು ಟಿ. ಭಾರತದಲ್ಲಿ ಶಿಕ್ಷಣ ಮತ್ತು ಸಮಾಜ. ಚೇತನಾ ಬುಕ್ ಹೌಸ್. ಮೈಸೂರು. ೨೦೦೫.

೦೮. ಪ್ರಕಾಶ ಕಮ್ಮರಡಿ ಟಿ. ಎನ್. ನಕ್ಸಲ್ ಪೀಡಿತ ಮಲೆನಾಡಿನ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಗಳು. ಒಂದು ಸ್ವತಂತ್ರ ಅಧ್ಯಯನ. ಸಮಾಜವಾದಿ ಅಧ್ಯಯನ ಕೇಂದ್ರ ಬೆಂಗಳೂರು.

೦೯. ಪ್ರಭಾಕರ ಎ.ಎಸ್, ಬುಡಕಟ್ಟು ಬದುಕಿನ ಸ್ಥಿತ್ಯಾಂತರಂಗಳು, ಪ್ರಸಾರಂಗ: ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಪ್ರಭಾಕರ ಎ.ಎಸ್.,(ಸಂ) ಆದಿವಾಸಿ ಆಖ್ಯಾನ, ಸಿದ್ದಾರ್ಥ ಪ್ರಕಾಶನ: ಹೊಸಪೇಟೆ. ೨೦೦೮.

೧೧. ಬೋರಲಿಂಗಯ್ಯ.ಹಿ.ಚಿ. ಅರಣ್ಯದೊಳಗಿನ ಬುಡಕಟ್ಟುಗಳು: ಒಂದು ವಿವೇಚನೆ, ಸಂ. ಪ್ರಭಾಕರ ಎ.ಎಸ್.ಆದಿವಾಸಿ ಆಖ್ಯಾನ, ಸಿದ್ದಾರ್ಥ ಪ್ರಕಾಶನ, ಹೊಸಪೇಟೆ, 2008.

೧೨. ಬೈರಪ್ಪ ಕೆ. ಸಮಾಜಶಾಸ್ತ್ರದ ಮೂಲ ತತ್ವಗಳು. ಕೇಂಬ್ರಿಡ್ಜ್ ಪಬ್ಲಿಷಿಂಗ್ ಕಂಪನಿ. ಬೆಂಗಳೂರು. ೧೯೯೭

೧೩. ಮಂಜುನಾಥ ಬೇವಿನ ಕಟ್ಟಿ, ಬುಡಕಟ್ಟು ನಂಬಿಕೆಗಳ: ಒಂದು ನೋಟ, ಆದಿವಾಸಿ ಆಖ್ಯಾನ, ಡಾ. ಪ್ರಭಾಕರ ಎ.ಎಸ್ (ಸಂ), ಸಿದ್ದಾರ್ಥ ಪ್ರಕಾಶನ, ಹೊಸಪೇಟೆ.

೧೪. ಮೈತ್ರಿ ಕೆ.ಎಂ, ಬುಡಕಟ್ಟು ಕುಲಕಸುಬುಗಳು, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,೨೦೦೨.

೧೫. ಮೈತ್ರಿ ಕೆ.ಎಂ ಮತ್ತು ಡಾ. ಚಲುವರಾಜು,(ಸಂ), ಬುಡಕಟ್ಟು ಅಧ್ಯಯನ, ಸಂಪುಟ ೪ ಸಂಚಿಕೆ ೧ ಮತ್ತು ಸಂಪುಟ ೪, ಸಂಚಿಕೆ ೨, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೬. ವಿವೇಕ ರೈ ಬಿ.ಎ, ಡಿ. ಯದುಪತಿ ಗೌಡ, ಮಲೆಕುಡಿಯರು. ಪ್ರಸಾರಂಗ, ಮಂಗಳೂರು ವಿಶ್ವವಿದ್ಯಾಲಯ. ೧೯೯೬.
೧೭. ವಿನಾಯಕ ಕುಲಕರ್ಣಿ ಮತ್ತು ಮೃತ್ಯುಂಜಯ ಹೆಗಡೆ. ರಾಜ್ಯಶಾಸ್ತ್ರ. ಚೇತನಾ ಬುಕ್ ಹೌಸ್. ಮೈಸೂರು. ೨೦೦೩.
೧೮. ಶಂಕರ್‌ರಾವ್ ಚ.ನ. ಭಾರತೀಯ ಸಮಾಜದ ಅಧ್ಯಯನ. ಸಂಪುಟ ೨, ಜೈಭಾರತ ಪ್ರಕಾಶನ, ಮಂಗಳೂರು. ೧೯೯೮.
೧೯. Ankur Mishra, Rehblitation and Resettlement of Displaced Person Due to Development, R&R Lawyer Club. 31 july 2009.
೨೦. Antoine Lasgorceix, Ashish Kothari, Displacement and Relocation of Protected Areas: A Synthesis and Analysis of Case Studies.
೨೧. Ashmitha Kabra, Displacement and Rehabilitation of an Adivasi Settlement: Case of Kuno Wildlife Sanctuary, Madhya Pradesh. www.researchgate.net/publication/262123076.
೨೨. Asmitha Kabra, Conservation induced Displacement: A Comparative Study of two Indian protected areas. www.researchgate.net/publication.
೨೩. Chris Williams, Marxism and the environment, An expert from the new Ecology and Socialism. International Socialist Review.
೨೪. Community Leadership For Tiger Consrvation (CLTC) Nagrhole, Final Report. July 2001-june 2002.
೨೫. Duggal R. Health care Budget in changing political economy. Economic and Political Weekly. May:1997:17-24.
೨೬. Gopalkrishna Bhatta, Prof in Zoology, Sir J C B M college, Sringeri, Smt Pushpalatha Bhatta, Sringeri Adventures club, Karnataka state council of science and technology, Bangalore. Under biodiversity prioritize project of WWF India, Conserving Biodiversity –What people says? A case study of merkal village, sringeri taluk, Karnataka. 1997.
೨೭. Jagadeesan S and. Dinesh kumar M, The Sardar Sarovar Project, Foreword.
೨೮. Jagadeesan. S and Dinesh Kumar M, The Sardar Sarovar Project, Assessing Economic and Social Impacts, SAGE publication, (ISBN 978-93-515-0126-8 (HB), 2015.
೨೯. Jana Jagaran, seva mandir, centre for community development, Adivasis and livelihood, case studies on livelihood interventions in adivasi region India. February 2007
೩೦. Karthik K, Karanth, Making Resettlment Work: Bhadra Wildlife Senctury, Biological Conservations 139 (2007).
೩೧. Krishna Swamy O.M, Ranganatham M, Methodology Of Research In Social Science, Himalayan Publishing House, 2011..

೩೨. Lal Das D.K, Practice Of Social Research, Rawat Publication. 2010.

೩೩. Mahesh rangarajan and Ghazala Shahabuddin, Displacement and relocation from protected area: Towards a biological and historical synthesis. (shodhganga.inflibnet.ac.in).

೩೪. Making Data Meaningfull, A guide to writing stories about numbers, United Nations New York and Geneva, 2009. (page no 1).

೩೫. Malini Shankar, Resettling people to protect the tiger, WILDLIFE PROTECTION.

೩೬. Michael M. Cernea, Impoverishment Risks, Risk Management, and Reconstruction: A Model of Population Displacement and Resettlement.

೩೭. Michael Klene, Promode Kant, Case studies on measuring and assessing forest degradation, addressing forest degradation in the context of joint forest management. December 2009.

೩೮. Ministri Of Environment And Forest (NTCA) For Project Tiger. Section 38-0, The Wildlife Protection Act 1972.

೩೯. Muraree Lal Meena, Relocation and Livelihood Concerns of Sariska Tiger Project, , Rajasthan : A Pride or Plight ?, Meena . Space and Culture, India 2015 , 3:2,

೪೦. Muzaffar Assadi, Interface between Displacement, Rehabilitation and Governance in India: A Critique. Page no:3.

೪೧. National Tiger Conservation Act, Govt Of India – Ministry Of Environment And Forest. Stripes Nov- Dec 2009 VOL 1, ISSUES 1.

೪೨. Nathalie UChoueiry, MSc and Marwan Khawaja, PhD, Displacement And Health Status In Low Income Women: Findings From A Population-Based Study In Greater Beirut. (https://www.ncbi.nlm.nih.gov/pmc/articles/PMC2241754)

೪೩. Ram Babu Mallavarapu, International Journal of Human and Social Sciences 1:1 2006, Development, Displacement and Rehabilitation: An Action Anthropological Study on Kovvada Reservoir in West Godavari Agency of Andhra Pradesh, India.

೪೪. M. Romesh Singh, Mining and Its Impact on Tribals in India: Socio - Economic and Environmental Risks, International Journal of Social Science and Humanities Research, Vol. 3, Issue 2, pp: (429-439), Month: April - June 2015,

೪೫. Ravi Sharma, Despair of the displaced, Volume 20 - Issue 26, December 20, 2003 - January 02, 2004, India's National Magazine, from the publishers of THE HINDU.

೪೬. Shankar Gopalakrishna, Undemocratic and Arbitrary: Control, Regulation and Exploriation of India's Forest and Common Lands, Dec 2012, Society for promotion of water lands development. (shodhganga.inflibnet.ac.in).

೪೭. Somashekar R. K., M. Bunty Raj and B.C. Nagaraja, Impact Of Human Settlements On Forest Structure And Composition In Kudremukh National Park, Western Ghats, South India. Unedited Version Of A Paper Submitted To The XII World Forestry Congress, 2003. Canada.

೪೮. Sridhar V.K, Biodiversity Conservation and Rehabilitation of Tribal's from Kudremukh National Park, Seventh Biennial Conference, Indian Society for Ecological Economics (INSEE), Global Change, Ecosystems,Sustainability.December 4-8, 2013.

೪೯. Sugat Srinivas Raju, The Adivasi Precipice, Maoists are only using the anxieties of Adivasis as an entry point to wage their revolutionary war, as is illustrated by a look at a secret survey conducted by the then CPI (ML - People's War)www.outlookindia.com/article.aspx?263527

೫೦. Taking Stock of Rehablitation and Resettlment Schemes STEM Reports, SR-17/2003.

೫೧. Vasant Saberwal, Mahesh Rangrajan and Ashish Kothari, People, Parks and Wildlife, Towards Coexistence, Orient Longman Private Limited, 2001.

೫೨. Vrun Khandelwal, Tiger Conservation In India 2008, Centre For Civil Society. 2008.

ಸರ್ಕಾರದ ದಾಖಲೆಗಳು

೦೧. ಉಪವಿಭಾಗಾಧಿಕಾರಿಗಳ ಪತ್ರ, ಚಿಕ್ಕಮಗಳೂರು. ಎಲ್ ಎನ್ ಡಿ ೭೫:೯೭–೯೮, ೧೨/೧೦/೧೯೯೯.

೦೨. ಕರ್ನಾಟಕ ರಾಜ್ಯ ಪತ್ರ ಭಾಗ –IV-A, ಬೆಂಗಳೂರು, ಸೋಮವಾರ, ಜೂನ್ ೧೮, ೨೦೦೧ (ಜೇಷ್ಠ ೨೮, ಶಕ ವರ್ಷ ೯೨೩) ನಂ, ೧೧೯೫. ಅನುಸೂಚಿಗಳು ಮತ್ತು ದಿಕ್ಕುಗಳ ವಿವರಣೆಗಳು.

೦೩. ಕರ್ನಾಟಕರಾಜ್ಯಗ್ಯಾಸೇಟಿಯರ್, ಭಾಗ–೧, ೧೯೮೪

೦೪. ಕರ್ನಾಟಕರಾಜ್ಯಗ್ಯಾಸೇಟಿಯರ್, ಭಾಗ–೨,

೦೫. ಕರ್ನಾಟಕರಾಜ್ಯಗ್ಯಾಸೇಟಿಯರ್, ಭಾಗ–೨, ೧೯೮೬

೦೬. ಭಾರತ ಸರ್ಕಾರ ಪರವಾಗಿ, ಕರ್ನಾಟಕ ಸರ್ಕಾರದ ಮುದ್ರಣ, ಲೇಖನಾ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರಿಂದ ಮುದ್ರಿತ ಮತ್ತು ಪ್ರಕಟ :– ಅನುಸೂಚಿತ ಬುಡಕಟ್ಟು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, ೨೦೦೬. (೨೦೦೭ರ ಅಧಿನಿಯಮ ಸಂಖ್ಯೆ ೨ – ೨೫ನೇ ಏಪ್ರಿಲ್, ೨೦೧೧ ರಂದು ಜಾರಿಯಲ್ಲಿದ್ದಂತೆ).

೦೭. ಭಾರತ ಸರ್ಕಾರದ ಪರವಾಗಿ, ಕರ್ನಾಟಕ ಸರ್ಕಾರದಿಂದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ. ೨೦೧೧. ವನ್ಯಜೀವಿ (ರಕ್ಷಣಾ) ಅಧಿನಿಯಮ, ೧೯೭೨ (೧೯೭೨ ರ ಅಧಿನಿಯಮ ಸಂಖ್ಯೆ ೫೩) [೧ನೇ ಮೇ, ೨೦೧೧ ರಂದು ಜಾರಿಯಲ್ಲಿದ್ದಂತೆ].

೦೮. Anitha S Arekal, DCF Karkala, Kudremukh Wildelife Range, Kudremukh Management Plan, Karnataka Forest Department revised Management Plan for 2003-13.

೦೯. Land Acquition, Rehablitation and Resettlement Bill, *Govt Of India*, 2011.

೧೦. Land Acquisition Act 1894, 2 feb 1894.

೧೧. The Government Policy of Resettlement and Rehabilitation, As mentioned in the NPRR-2003, Govt of India, 2004 .

೧೨. The Gazette of India, Ministry Of Law and Justice, Forest Right Act 2006.

ಪತ್ರಿಕೆಗಳು

೦೧. ಕನ್ನಡ ಪ್ರಭ, ೦೮/೧೦/೨೦೦೪, ದಂಡಕಾರಣ್ಯದಲ್ಲಿ ಬಿತ್ತಿದ ಬೀಜ ಮಪಳಕೆಯೊಡೆದದ್ದು ಪಶ್ಚಿಮ ಘಟ್ಟದಲ್ಲಿ.

೦೨. ಉದಯವಾಣಿ ದಿನಪತ್ರಿಕೆ, ೦೮/೦೫/೨೦೧೫, ೩೦ ವನ್ಯಜೀವಿ ತಾಣಗಳಿಗೆ ಪರಿಸರ ಸೂಕ್ಷ್ಮ ವಲಯ ಪಟ್ಟ.

೦೩. ಉದಯವಾಣಿ ದಿನಪತ್ರಿಕೆ, ೨೬/೦೪/೨೦೧೫, ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಮತ್ತೆ ಒಕ್ಕಲೆಬ್ಬಿಸುವ ಭೀತಿ.

೦೪. ಉದಯವಾಣಿ ದಿನ ಪತ್ರಿಕೆ, ೨೦/೦೫/೨೦೧೫, ಸೇತುವೆ ನಿರ್ಮಾಣಕ್ಕೆ ಅಡ್ಡಿ: ವನ್ಯಜೀವಿ ಇಲಾಖೆ ಎದುರು ಪ್ರತಿಭಟನೆ.

೦೫. ಉದಯವಾಣಿ ದಿನ ಪತ್ರಿಕೆ, ೦೫/೧೧/೨೦೧೫, ಕಾಡಿನಿಂದ ನಾಡಿಗೆ ಬಂದ ಬಾಬು ಮಲೆಕುಡಿಯರ ಬದುಕು.

೦೬. ದ ಹಿಂದೂ, ಆಗಸ್ಟ್ ೮, ೨೦೧೫, ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಹುಲಿ ಸಂರಕ್ಷಣಾ ಯೋಜನೆಗೆ ಅನುಮತಿ ನೀಡುವುದಿಲ್ಲ.

೦೭. ಪ್ರಜಾವಾಣಿ ದಿನಪತ್ರಿಕೆ ೨೭/೦೪/೨೦೧೫, ಕಸ್ತೂರಿ ರಂಗನ್ ವರದಿ: ವರ್ಗೀಕರಣವೇ ಸರಿಯಿಲ್ಲ ಎಂದ ಸರ್ಕಾರ ಹಾಗೂ ಮಾನದಂಡಕ್ಕೆ ರಾಜ್ಯದ ಅಸಮ್ಮತಿ.

೦೮. ಪ್ರಜಾವಾಣಿ ೧೨/೦೩/೫೦೧೫, ಕುದುರೆಮುಖದಲ್ಲಿ ಉಳಿದಿರುವ ಕುಟುಂಬಗಳ ರಕ್ಷಣೆಗೆ ಒತ್ತಾಯ: ಪುನರ್ವಸತಿಗೆ ಅಗತ್ಯ ಕ್ರಮಕ್ಕೆ.

೦೯. ಪ್ರಜಾವಾಣಿ, ದಿ:೧೦/೦೧/೨೦೧೬, ಪು.ಸಂ 4,:ಕಾಳಿ ಹುಲಿ ಸಂರಕ್ಷಿತಾರಣ್ಯವಾಗಿ' ಮರುನಾಮಕರಣ.

೧೦. ಪ್ರಜಾವಾಣಿ, ೦೭/೦೩/೨೦೧೭, ಉದ್ಯಾನವನ ಪುನರ್ವಸತಿ ಪ್ಯಾಕೇಜ್‌ನ ಫಲಾನುಭವಿಗಳ ತೋಟಕ್ಕೆ ಅಧಿಕಾರಿಗಳ ಭೇಟಿ. ಸ್ಥಳೀಯರ ಅಹವಾಲು ಆಲಿಸಿದ ಡಿಸಿ.

೧೧. ಪ್ರಜಾವಾಣಿ, ೦೨/೦೭/೨೦೧೭, ಹುಲಿ ಸಂರಕ್ಷಿತ ಪ್ರದೇಶದಿಂದ ಸ್ವಯಂ ಪ್ರೇರಿತ ಸ್ಥಳಾಂತರ, ಗಿರಿಜನ ಪುನರ್ವಸತಿ ಪ್ಯಾಕೇಜ್ ಸ್ವರೂಪ ಪರಿಷ್ಕರಣೆಗೆ ಆಗ್ರಹ.

೧೨. ವಿಜಯ ಕರ್ನಾಟಕ ಪತ್ರಿಕೆ, ೦೬/೦೪/೨೦೧೩. ನಾಗರಾಜ ನೇರಿಗೆ, ಕುದುರೆಮುಖ ಗಿರಿ ಶ್ರೇಣಿಯಲ್ಲಿ ಅಭಿವೃದ್ಧಿಯ ಗರಿ ಮೂಡಲಿ,

೧೩. ವಿಜಯ ಕರ್ನಾಟಕ ೦೬/೦೩/೨೦೧೫, ಕುದುರೆಮುಖ ರಾಷ್ಟ್ರೀಯ ಉದ್ಯಾನ: ಪುನರ್ವಸತಿ ಹಣಕ್ಕೆ ಆಗ್ರಹ.

೧೪. ವಿಜಯ ಕರ್ನಾಟಕ, ಆಗಸ್ಟ್ ೭, ೨೦೧೫. ಸಾವಿರ ಕುಟುಂಬಗಳು ಸಂಕಷ್ಟಕ್ಕೆ / ಉದ್ಯಾನವನದಲ್ಲಿ ಹುಲಿಗಳ ಮಾಹಿತಿ ಅಲಭ್ಯ – ಕುದುರೆಮುಖ ಹುಲಿ ಯೋಜನೆಗೆ ಕೇಂದ್ರ ಅಸ್ತು.

೧೫. ವಿಜಯ ಕರ್ನಾಟಕ, ೦೯/೦೪/೨೦೧೭, ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಪುನರ್ವಸತಿ ಪ್ಯಾಕೇಜ್, ಸರಕಾರ ಕೊಟ್ಟ ಪರಿಹಾರಕ್ಕೆ ಅಧಿಕಾರಿಗಳ ಕೊಕ್ಕೆ.

೧೬. ಹೊಸದಿಗಂತ, ೨೬/೧೧/೨೦೧೫, ನಕ್ಸಲ್ ಪೀಡಿತ ಗ್ರಾಮದಲ್ಲಿ ನಿಲ್ಲದ ಹಫ್ತಾ ವಸೂಲಿ.

೧೭. Deccan Herald ,Date: 20/02/2004, Jayalakshmi K, The Nagarahole experience - Tribals and wildlife.

೧೮. Deccan herald, Saturday February 19,2005Adroit move, The package for tribals in Kudremukh National Park should actually reach them.

೧೯. Deccan herald, july 12,2007, Civil Liberties Forum and Komu Souharda Vedike has termed killing of suspected naxals at Wodayarmutt near Menasinahadya in Chikmagalur district as assasination of tribals.

೨೦. Deccan Herald, 12 May 2013:Project Tiger: Bhadra, Kudremukh dropped.

೨೧. DNA, Families *in Kudremukh National Park defy Maoists.* Tuesday, Nov 12, 2013, 14:28 IST, Place: Mangalore. M Raghuram.

೨೨. **The times Of India, May 11, 2002:** Medha to join rally against Kudremukh park.

೨೩. The Hindu, January 7, 2006.Tribal people reject resettlement package.

೨೪. The Hindu, Mangalore November 8,2011, Kudremukh issue gave rise to naxalism.

ಅಂತರ್ಜಾಲ ಪರಾಮರ್ಶನ ಗ್ರಂಥಗಳು

೦೧. http://www.conservationindia.org Karthik.K.Karanth, case study, Insight from A scientific study of Bhadra Resettlement,

೦೨. http://www.conservationindia.org , Ullas Karanth, Lesson from Voluntry Resettlement in Western Ghats – Nagarhole, Bhadra and Kudremukh.

೦೩. http://www.conservationindia.org Tribal Family Prefers Voluntary Relocation Over Forest Rights, by WCS-India Press Release
೦೪. http://www.deccanherald.com/deccanherald/feb202004/top.asp
೦೫. http://re.indiaenvironmentportal.org.in/files/Making%20resettlement%20work.pdf
೦೬. http://www.epw.org.in/showArticles.php?root=2004&leaf=02&filename=6887&filetype=html
೦೭. http://www.thehindu.com/news/national/karnataka/modifiedpackageforsurrenderingnaxalsplanned/article4807764.ece.
೦೮. http://timesofindia.indiatimes.com/india/FinancialpackagetoNaxaliteinfestedareasinKarnatakaannounced/articleshow/16495273.cms.
೦೯. www.outlookindia.com/article.aspx?263527.
೧೦. www.clearias.com/gadgil-reprt-kasturirangan-report-westren-ghats/.
೧೧. http://www.bbc.com/future/story/20170412-is-the-world-running-out-of-fresh-water
೧೨. https://data.worldbank.org/indicator/AG.LND.FRST.ZS?end=2015&start=1990&view=chart
೧೩. https://en.wikipedia.org/wiki/Forestry_in_India#Forestry_in_India_from_1947_to_1990
೧೪. https://en.wikipedia.org/wiki/Conservation_in_India.
೧೫. https://web.archive.org/web/20140328144411/http://www.cs.colostate.edu/~malaiya/ashoka.html
೧೬. http://shodhganga.inflibnet.ac.in/bitstream/10603/61801/8/08_chapter%202.pdf
೧೭. http://www.wiienvis.nic.in/Database/Protected_Area_854.aspx
೧೮. http://www.thehindu.com/todays-paper/tp-national/tp-karnataka/a-mere-ban-on-acacia-is-not-enough- greens/article3801621.ece
೧೯. https://isreview.org/issue/72/marxism-and-environment.
೨೦. http://shodhganga.inflibnet.ac.in/bitstream/10603/126508/7/07_introduction.pdf
೨೧. http://shodhganga.inflibnet.ac.in/bitstream/10603/42080/16/16_chapter3.pdf
೨೨. http://shodhganga.inflibnet.ac.in/bitstream/10603/42080/16/16_chapter3.pdf, The Impact of Displacement (page no 74).
೨೩. http://forcedmigration.org/research-resources/expert-guides/development-induced-displacement-and-resettlement/fmo022.pdf
೨೪. https://commdev.org/wp-content/uploads/2015/06/Impoverishment-Risks-Risk-Management-and-Reconstruction.pdf

೨೫. http://www.prsindia.org/uploads/media/Land%20and%20R%20and%20R/Bill%20Summary%20-%20LARR%20Bill%202015.pdf
೨೬. http:// www.deccma.com (History of resettlement and rehabilitation in India)
೨೭. https://www.ncbi.nlm.nih.gov/pmc/articles/PMC2241754/
೨೮. http://aranya.gov.in/downloads/Final-Notification-Wildlife.pdf, STATEMENT SHOWING THE LEGAL STATUS OF NATIONAL PARKS/WILDLIFE SANCTUARIES/CONSERVATION & COMMUNITY RESERVES OF KARNATAKA AS ON September - 2012 FINAL NOTIFICATION STAGES OF NATIONAL PARKS / WILDLIFE SANCTUARIES.
೨೯. http://www.censusindia.gov.in/2011census/PCA/SC_ST/PCA-A11_Appendix/ST-29-PCA-A11-APPENDIX.xlsx
೩೦. https://isreview.org/issue/72/marxism-and-environment.
೩೧. https://www.kioclltd.in/user/cms/275, A TRIBUTE - PROF SAMPATH IYENGAR.
೩೨. www.businessdictionary.com/definaition/government.html.
೩೩. https:en.oxforddictioneried.com/definition/government
೩೪. http://sw.kar.nic.in/WebPages/PDF2016/scsp.pdf (Page No 7-8)
೩೫. https://www.researchgate.net/publication/262123076
೩೬. http://spaceandculture.in/index.php/spaceandculture/article/view/150/pdf_33
೩೭. http://www.who.int/about/mission/en/
೩೮. National Aboriginal Health Strategy, 1989, http://www.ahmrc.org.au

ಪ್ರಾಥಮಿಕ ಮೂಲ ಮಾಹಿತಿಗಳು

೦೧. ಮಾಹಿತಿ ಹಕ್ಕು ಅಧಿನಿಯಮ ೨೦೦೫ ರ ಅನ್ವಯ, ಕುದುರೆಮುಖ ವನ್ಯಜೀವಿ ವಲಯದ ಮುಖಾಂತರ ಪಡೆದ ದಾಖಲೆಗಳು.
೦೨. ಸಂದರ್ಶನ: ಶ್ರೀ ಮುಯ್ಯೂದ್ದೀನ್, ಎಂ.ಸಿ ಹಳ್ಳಿ ನಿವಾಸಿ ಹಾಗೂ ಭದ್ರಾ ಪುನರ್ವಸತಿ ಯೋಜನೆ ಅಡಿ ಸ್ಥಳಾಂತರ ಹೊಂದಿದವರು.
೦೩. ಸಂದರ್ಶನ: ಶ್ರೀ ಗಿರಜಾ ಶಂಕರ, ಮಾಜಿ ಅಧ್ಯಕ್ಷರು, ರಾಜ್ಯ ವನ್ಯಜೀವಿ ಮಂಡಳಿ. ಚಿಕ್ಕಮಗಳೂರು.
೦೪. ಸಂದರ್ಶನ: ಶ್ರೀ ಸುರೇಶ್ ಭಟ್ಟ, ಕಾರ್ಯದರ್ಶಿಗಳು, ಗ್ರಾಮ ಅರಣ್ಯ ಸಮಿತಿ. ಸಂಸೆ ಗ್ರಾಮಪಂಚಾಯತ್. ಮತ್ತು ಪರಿಸರ ಹೋರಾಟಗಾರರು. ಕೆಂಗನಕೊಂಡ, ಕುದುರೆಮುಖ ವಲಯ. ಮೂಡಿಗೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೦೫. ಸಂದರ್ಶನ: ಶ್ರೀ ಕಲ್ಕುಳಿ ವಿಠಲ ಹೆಗ್ಡೆ, ಪರಿಸರ ಹೋರಾಟಗಾರರು, ಶೃಂಗೇರಿ. ಚಿಕ್ಕಮಗಳೂರು ಜಿಲ್ಲೆ.

೦೬. ಸಂದರ್ಶನ: ಶ್ರೀ ದೇವೇಂದ್ರ, ಮೆಣಸಿನಹಾಡ್ಯ, ಕೊಪ್ಪ ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೦೭. ಸಂದರ್ಶನ: ಶ್ರೀ ಅಣ್ಣಪ್ಪ ಮತ್ತು ಶ್ರೀ ಜಯರಾಂ, ಕರ್ನಾಟಕ ರಾಜ್ಯ ಮಲೆಕುಡಿಯರ ಸಂಘ. ಬೆಳ್ತಂಗಡಿ. ದಕ್ಷಿಣ ಕನ್ನಡ ಜಿಲ್ಲೆ.

೦೮. ಸಂದರ್ಶನ: ಶ್ರೀ ಸಿರಿಮನೆ ನಾಗರಾಜು ಮತ್ತು ಶ್ರೀ ನೀಲಗುಳಿ ಪದ್ಮನಾಭ. ಚಿಕ್ಕಮಗಳೂರು.

೦೯. ಸಂದರ್ಶನ: ಶ್ರೀ ದಿನೇಶ ಪಟವರ್ಧನ, ಹಿರಿಯ ಪತ್ರಕರ್ತರು. ಚಿಕ್ಕಮಗಳೂರು.

೧೦. ಸಂದರ್ಶನ: ಶ್ರೀ ಗಣೇಶ್ ಭಟ್, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕುದುರೆಮುಖ ವನ್ಯಜೀವಿ ವಲಯ, ಕಾರ್ಕಳ. ಉಡುಪಿ ಜಿಲ್ಲೆ.

೧೧. ಸಂದರ್ಶನ: ಶ್ರೀಮತಿ ವಸಾಂತ ವೆಂಕಪ್ಪ ಮಲೆಕುಡಿಯ, ಪುನರ್ವಸತಿಗರು, ಪೆರ್ನೋಡಿ. ಮಂಗಳೂರು ತಾಲೂಕು. ದಕ್ಷಿಣ ಕನ್ನಡ ಜಿಲ್ಲೆ.

೧೨. ಸಂದರ್ಶನ: ಶ್ರೀ ಪುಟ್ಟಣ್ಣ ಮಲೆಕುಡಿಯ, ಬೆಲ್ಲಾ ಸುತ್ತುಗಟ್ಟಿ ಪುನರ್ವಸತಿಗರು, ಪೆರ್ನೋಡಿ. ಮಂಗಳೂರು ತಾಲೂಕು. ದಕ್ಷಿಣ ಕನ್ನಡ ಜಿಲ್ಲೆ.

೧೩. ಸಂದರ್ಶನ: ಶ್ರೀ ಕೀರ್ತಿ ಜೈನ್, ಶಿರಸ್ತೆದಾರರು, ಕಂದಾಯ ಇಲಾಖೆ, ಕಳಸ ಉಪವಿಭಾಗ, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

೧೪. ಸಂದರ್ಶನ: ಶ್ರೀ ಪ್ರಕಾಶ್ ಜೈನ್, ಸದಸ್ಯರು, ಮಲವಂತಿಗೆ ಗ್ರಾಮಪಂಚಾಯತ್. ಬೆಳ್ತಂಗಡಿ ತಾಲ್ಲೂಕು. ದಕ್ಷಿಣ ಕನ್ನಡ ಜಿಲ್ಲೆ.

೧೫. ಸಂದರ್ಶನ: ಶ್ರೀಮತಿ ನಾಗಮ್ಮ ಶಿವಪ್ಪ ಮಲೆಕುಡಿಯ, ಸದಸ್ಯರು, ನಾವೂರು ಗ್ರಾಮಪಂಚಾಯತ್, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

೧೬. ಸಂದರ್ಶನ: ಶ್ರೀ ಬಾಬು ಮಲೆಕುಡಿಯ, ಕೆರ್ವಾಶೆ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ.

೧೭. ಸಂದರ್ಶನ: ಶ್ರೀ ಸಚ್ಚೇಂದ್ರ ಜೈನ್, ಉಪಾಧ್ಯಕ್ಷರು, ಕೆರೆ ಗ್ರಾಮಪಂಚಾಯತ್, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

೧೮. ಸಂದರ್ಶನ: ಶ್ರೀಮತಿ ಗೌರಮ್ಮ, ಅಧ್ಯಕ್ಷರು, ಕೆರೆ ಗ್ರಾಮಪಂಚಾಯತ್, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

೧೯. ಸಂದರ್ಶನ: ಶ್ರೀ ಗೋಪಾಲ ಕೃಷ್ಣ, ಸದಸ್ಯರು, ಕಲ್ಲುಗುಡ್ಡೆ ಗ್ರಾಮಪಂಚಾಯತ್, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

೨೦. ಸಂದರ್ಶನ: ಶ್ರೀ ಬಾಬು ಮಲೆಕುಡಿಯ, ಶಿರ್ಲಾಲು ಗ್ರಾಮ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ.

೨೧. ಸಂದರ್ಶನ: ಶ್ರೀ ಅಣ್ಣು ಮಲೆಕುಡಿಯ, ಮುತ್ತಾಜೆ ಸುತ್ತುಗಟ್ಟೆ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣಕನ್ನಡ ಜಿಲ್ಲೆ.

೨೨. ಸಂದರ್ಶನ: ಶ್ರೀ ರಾಜೇಶ್, ನೆಮ್ಮಾರು, ಶೃಂಗೇರಿ ತಾಲ್ಲುಕು, ಚಿಕ್ಕಮಗಳೂರು ಜಿಲ್ಲೆ.

೨೩. ಸಂದರ್ಶನ: ಶ್ರೀ ಪುಟ್ಟ ಗೌಡ, ನೇತ್ರವಳ್ಳಿ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

೨೪. ಸಂದರ್ಶನ: ಶ್ರೀ ತಮ್ಮೇಗೌಡರು, ಒಟ್ಟಳ್ಳ, ಮೇಗೂರು ಗ್ರಾಮಪಂಚಾಯತ್, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

೨೫. ಸಂದರ್ಶನ: ಶ್ರೀ ಜಿ.ಡಿ ನಾಗೇಗೌಡ, ಮೆಣಸಿನಹಾಡ್ಯ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೨೬. ಸಂದರ್ಶನ: ಶ್ರೀ ಶೇಷಗೌಡ, ಶೀರ್ಲು, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೨೭. ಸಂದರ್ಶನ: ಕು. ಆರತಿ, ಶೀರ್ಲು, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೨೮. ಸಂದರ್ಶನ: ಶ್ರೀ ಅಣ್ಣಪ್ಪ ಗೌಡ. ಮಂಡಲ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೨೯. ಸಂದರ್ಶನ: ಶ್ರೀ ಗುಂಡೇ ಗೌಡ. ಮಂಡಲ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೩೦. ಸಂದರ್ಶನ: ಶ್ರೀ ಅಶೋಕ, ಮುಡುಬಾ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೩೧. ಸಂದರ್ಶನ: ಶ್ರೀ ಸುಧಾಕರ, ಹೊರಳಾನೆ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೩೨. ಸಂದರ್ಶನ: ಶ್ರೀ ನಂಜೇಗೌಡ. ಗುಲಗಂಜಿಮನೆ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೩೩. ಸಂದರ್ಶನ: ಶ್ರೀಮತಿ ಶಾರದ, ಶೀರ್ಲು, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೩೪. ಸಂದರ್ಶನ: ಶ್ರೀ ಮುತ್ತಯ್ಯ ಮಲೆಕುಡಿಯ, ಅಳಂಬ, ಬೆಳ್ತಂಗಡಿ ತಾಲ್ಲುಕು, ದಕ್ಷಿಣ ಕನ್ನಡ ಜಿಲ್ಲೆ.
೩೫. ಸಂದರ್ಶನ: ಶ್ರೀ ರಾಮಚಂದ್ರ ಭಟ್ಟ, ಕುತ್ಲೂರು, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
೩೬. ಸಂದರ್ಶನ: ಶ್ರೀ ಧರಣಪ್ಪ, ಬಜಗೋಳಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ.
೩೭. ಸಂದರ್ಶನ: ಶ್ರೀ ಸೋಮಯ್ಯ ಮಲೆಕುಡಿಯ, ಬಂಗಾರುಪಲ್ಕೆ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
೩೮. ಸಂದರ್ಶನ: ಶ್ರೀಮತಿ ದೇವಕ್ಕ, ಕೊಂಡಾಜೆ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
೩೯. ಸಂದರ್ಶನ: ಶ್ರೀಮತಿ ಜಯಾ ಮಲೆಕುಡಿಯ, ಮಾಪಲ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ.
೪೦. ಸಂದರ್ಶನ: ಶ್ರೀ ತಮ್ಮುಗೌಡ, ಗುಲಗಂಜಿಮನೆ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೪೧. ಸಂದರ್ಶನ: ಶ್ರೀ ಸತೀಶ, ಮೀಗ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೪೨. ಸಂದರ್ಶನ: ಶ್ರೀ ಸುರೇಶ, ಬೆಟಗೇರಿ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೪೩. ಸಂದರ್ಶನ: ಶ್ರೀ ಹೂವಪ್ಪ, ಸಿರಿಮನೆ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೪೪. ಸಂದರ್ಶನ: ಶ್ರೀ ಜಾರಪ್ಪ, ಜರ್ಕಳ, ಕಾರ್ಕಳ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೪೫. ಸಂದರ್ಶನ: ಶ್ರೀಮತಿ ಕೇಶವತಿ ಮಲೆಕುಡಿಯ, ಕಾಸರವಳ್ಳಿ, ಬೆಳ್ತಂಗಡಿ ತಾಲ್ಲೂಕು, ದಕ ಜಿಲ್ಲೆ.
೪೬. ಸಂದರ್ಶನ: ಶ್ರೀ ಸುಧಾಕರ, ಎಡಗಾರು, ಶೃಂಗೇರಿ ತಾಲ್ಲೂಕು. ಚಿಕ್ಕಮಗಳೂರು ಜಿಲ್ಲೆ.
೪೭. ಸಂದರ್ಶನ: ಶ್ರೀ ವಿದ್ಯಾಸಾಗರ, ಬೇಗಾರು, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೪೮. ಸಂದರ್ಶನ: ಶ್ರೀಮತಿ ಶಾರದ, ನೀಲಂದೂರು. ಬೇಗಾರು ಗ್ರಾಮ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
೪೯. ಸಂದರ್ಶನ: ಶ್ರೀ ದೇವಪ್ಪ ಮಲೆಕುಡಿಯ, ಪೆರ್ನೊಡಿ, ಮಂಗಳೂರು ತಾಲ್ಲೂಕು, ದಕ ಜಿಲ್ಲೆ.
೫೦. ಸಂದರ್ಶನ: ಶ್ರೀ ಬಾಬು ಮಲೆಕುಡಿಯ, ಪೆರ್ನೊಡಿ, ಮಂಗಳೂರು ತಾಲ್ಲೂಕು, ದಕ ಜಿಲ್ಲೆ.

ಅನುಬಂಧಗಳು

ವಿಷಯಗಳು

೦೧. ತಿಳುವಳಿಕೆಗಾರರ ವಿವರಗಳು
೦೨. ರಾಷ್ಟ್ರೀಯ ಉದ್ಯಾನವನ ಮತ್ತು ಅಭಯಾರಣ್ಯಗಳ ನಕಾಶೆ
೦೩. ಸರ್ಕಾರಿ ದಾಖಲೆಗಳು, ದಿನ ಪತ್ರಿಕೆಗಳು
೦೪. ಛಾಯಾಚಿತ್ರಗಳು

"Forest on the Peaks and cultural landscape of the tribal People"

"The Horse's Cheek" Kudremukh National Park....

ಅನುಬಂಧ – ೧

ತಿಳುವಳಿಕೆಗಾರರ ಮಾಹಿತಿ (ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಒಳಭಾಗದಲ್ಲಿರುವವರು)

ಕ್ರಸಂ	ವಕ್ತೃಗಳ ಹೆಸರು	ವಯಸ್ಸು	ಲಿಂಗ	ವಿಳಾಸ
೧	ಶ್ರೀ ತಮ್ಮೇಗೌಡರು	೬೨	ಪುರುಷ	ಒಟ್ಟಳ್ಳ, ಶೃಂಗೇರಿ ತಾ. ಚಿ.ಮ. ಜ್ಲೆ
೨	ಶ್ರೀ ಜಿ.ಡಿ ನಾಗೇಗೌಡ	೫೫	ಪುರುಷ	ಮೆಣಸಿನಹಾಡ್ಯ, ಕೊಪ್ಪ ತಾ. ಚಿ.ಮ. ಜ್ಲೆ.
೩	ಕು.ಆರತಿ	೨೫	ಮಹಿಳೆ	ಶೀರ್ಲು, ಶೃಂಗೇರಿ ತಾ, ಚಿ.ಮ. ಜ್ಲೆ.
೪	ಶ್ರೀ ಶೇಷಗೌಡ	೫೮	ಪುರುಷ	ಶೀರ್ಲು, ಶೃಂಗೇರಿ ತಾ, ಚಿ.ಮ. ಜ್ಲೆ.
೫	ಶ್ರೀ ಅಣ್ಣಪ್ಪ ಗೌಡ	೪೯	ಪುರುಷ	ಮಂಡಲ, ಶೃಂಗೇರಿ ತಾ. ಚಿ.ಮ. ಜ್ಲೆ.
೬	ಶ್ರೀ ಗುಂಡೇಗೌಡ	೬೦	ಪುರುಷ	ಮಂಡಲ, ಶೃಂಗೇರಿ ತಾ. ಚಿ.ಮ. ಜ್ಲೆ.
೭	ಶ್ರೀ ಬೆಳ್ಳೇಗೌಡ	೫೩	ಪುರುಷ	ಮಂಡಲ, ಶೃಂಗೇರಿ ತಾ. ಚಿ.ಮ. ಜ್ಲೆ
೮	ಶ್ರೀಮತಿ ಶಾರದ	೪೩	ಮಹಿಳೆ	ಶೀರ್ಲು, ಶೃಂಗೇರಿ ತಾ, ಚಿ.ಮ. ಜ್ಲೆ.
೯	ಶ್ರೀ ದೇವೇಂದ್ರ	೪೦	ಪುರುಷ	ಮೆಣಸಿನಹಾಡ್ಯ, ಕೊಪ್ಪ ತಾ, ಚಿ.ಮ. ಜ್ಲೆ.
೧೦	ಶ್ರೀ ಗೋಪಾಲಕೃಷ್ಣ	೪೫	ಪುರುಷ	ಮೆಣಸಿನಹಾಡ್ಯ, ಕೊಪ್ಪ ತಾ, ಚಿ.ಮ. ಜ್ಲೆ.
೧೧	ಶ್ರೀಮತಿ ಗೌರಮ್ಮ	೫೨	ಮಹಿಳೆ	ಕೆರೆಕಟ್ಟೆ, ಶೃಂಗೇರಿ ತಾ, ಚಿ.ಮ. ಜ್ಲೆ.
೧೨	ಶ್ರೀ ಸುರೇಶ ಭಟ್ಟ	೫೭	ಪುರುಷ	ಕೆಂಗನಕೊಂಡ, ಮೂಡಿಗೆರೆ ತಾ, ಚಿ.ಮ. ಜ್ಲೆ.
೧೩	ಶ್ರೀ ದ್ಯಾಮಗೌಡ	೪೩	ಪುರುಷ	ದಂಟನಕಾಡು, ಮೂಡಿಗೆರೆ ತಾ, ಚಿ.ಮ. ಜ್ಲೆ.
೧೪	ಶ್ರೀ ನಾಗೇಶ	೪೧	ಪುರುಷ	ಶುಂಠಿಕುಂಬ್ರಿ, ಮೂಡಿಗೆರೆ ತಾ, ಚಿ.ಮ. ಜ್ಲೆ.
೧೫	ಶ್ರೀ ಅಪ್ಪುಗೌಡ	೫೫	ಪುರುಷ	ಕಲ್ಲೋಡು, ಮೂಡಿಗೆರೆ ತಾ, ಚಿ.ಮ. ಜಿ.
೧೬	ಶ್ರೀ ಕೃಷ್ಣಾ	೫೫	ಪುರುಷ	ಮೇಲ್‌ಶೀರ್ಲು, ಶೃಂಗೇರಿ ತಾ, ಚಿ.ಮ. ಜಿ.
೧೭	ಶ್ರೀ ಸುಧಾಕರ	೫೭	ಪುರುಷ	ಹೊರಳಾನೆ, ಶೃಂಗೇರಿ ತಾ, ಚಿ.ಮ. ಜಿ.
೧೮	ಶ್ರೀ ಅಶೋಕ	೫೪	ಪುರುಷ	ಮುಡುಬಾ, ಶೃಂಗೇರಿ ತಾ, ಚಿ.ಮ. ಜಿ.
೧೯	ಶ್ರೀಮತಿ ಜಾನಮ್ಮ	೬೧	ಮಹಿಳೆ	ಬಿಳಿಗಲ್, ಶೃಂಗೇರಿ ತಾ, ಚಿ.ಮ. ಜಿ.
೨೦	ಶ್ರೀ ವೆಂಕಟೇಶ	೪೧	ಪುರುಷ	ಬಿಳಿಗಲ್, ಶೃಂಗೇರಿ ತಾ, ಚಿ.ಮ. ಜಿ.
೨೧	ಶ್ರೀಮತಿ ದೀಪ ರಾಜಪ್ಪ	೨೯	ಮಹಿಳೆ	ಬಿಳಿಗಲ್, ಶೃಂಗೇರಿ ತಾ, ಚಿ.ಮ. ಜಿ.
೨೨	ಶ್ರೀ ಸತೀಶ	೩೩	ಪುರುಷ	ಬಂಗಾರುಪಲ್ಕೆ, ಬೆಳ್ತಂಗಡಿ ತಾ, ದ. ಕ. ಜಿ.
೨೩	ಶ್ರೀಮತಿ ನಾಗಮ್ಮ ಶಿವಪ್ಪ	೩೯	ಮಹಿಳೆ	ಮುತ್ತಾಜೆ, ಬೆಳ್ತಂಗಡಿ ತಾ, ದ. ಕ. ಜಿ.
೨೪	ಶ್ರೀ ದೇವಪ್ಪ ಮಲೆಕುಡಿಯ	೪೨	ಪುರುಷ	ಮುತ್ತಾಜೆ, ಬೆಳ್ತಂಗಡಿ ತಾ, ದ. ಕ. ಜಿ.
೨೫	ಶ್ರೀ ಚಿಕ್ಕಪ್ಪ ಕೊರಗು	೫೭	ಪುರುಷ	ಮುತ್ತಾಜೆ, ಬೆಳ್ತಂಗಡಿ ತಾ, ದ. ಕ. ಜಿ.
೨೬	ಶ್ರೀ ಅಣ್ಣು ಮಲೆಕುಡಿಯ	೬೦	ಪುರುಷ	ಮುತ್ತಾಜೆ, ಬೆಳ್ತಂಗಡಿ ತಾ, ದ. ಕ. ಜಿ.
೨೭	ಶ್ರೀ ಎಲಿಯಣ್ಣ ಮಲೆಕುಡಿಯ	೫೦	ಪುರುಷ	ಅತ್ಯಾಡಿ, ಬೆಳ್ತಂಗಡಿ ತಾ, ದ. ಕ. ಜಿ.
೨೮	ಶ್ರೀ ಮುತ್ತಯ್ಯ ಮಲೆಕುಡಿಯ	೫೮	ಪುರುಷ	ಅಳಂಬ, ಬೆಳ್ತಂಗಡಿ ತಾ, ದ. ಕ. ಜಿ.
೨೯	ಶ್ರೀ ರಾಮಚಂದ್ರ ಭಟ್ಟ	೪೪	ಪುರುಷ	ಕುತ್ಲೂರು, ಬೆಳ್ತಂಗಡಿ ತಾ, ದ. ಕ. ಜಿ.
೩೦	ಶ್ರೀ ಧರಣಪ್ಪ	೪೧	ಪುರುಷ	ಬಜಗೋಳಿ, ಕಾರ್ಕಳ ತಾ, ಉಡುಪಿ ಜಿ.

೩೧	ಶ್ರೀಮತಿ ದೇವಕ್ಕ	೪೩	ಮಹಿಳೆ	ಕೊಂಡಾಜೆ, ಬೆಳ್ತಂಗಡಿ ತಾ, ದ. ಕ. ಜಿ.
೩೨	ಶ್ರೀ ಸೋಮಯ್ಯ ಮಲೆಕುಡಿಯ	೪೬	ಪುರುಷ	ಬಂಗಾರು ಪಲ್ಕೆ, ಬೆಳ್ತಂಗಡಿ ತಾ, ದ. ಕ. ಜಿ.
೩೩	ಶ್ರೀಮತಿ ಜಯ ಮಲೆಕುಡಿಯ	೪೧	ಮಹಿಳೆ	ಮಾಪಲ, ಕಾರ್ಕಳ ತಾ, ಉಡುಪಿ ಜಿ.
೩೪	ಶ್ರೀ ದಿನೇಶ	೩೯	ಪುರುಷ	ಕನ್ಯಾಲು, ಕಾರ್ಕಳ ತಾ, ಉಡಪಿ ಜಿ.
೩೫	ಶ್ರೀಮತಿ ಕೇಶವತಿ	೩೩	ಮಹಿಳೆ	ಕಾಸರವಳ್ಳಿ, ಬೆಳ್ತಂಗಡಿ ತಾ, ದ. ಕ. ಜಿ.
೩೬	ಶ್ರೀ ಇಜ್ಜಪ್ಪ ನಾಯ್ಕ	೬೧	ಪುರುಷ	ಎಳನೀರು, ಬೆಳ್ತಂಗಡಿ ತಾ, ದ. ಕ. ಜಿ.
೩೭	ಶ್ರೀಮತಿ ಶೋಭಾ ನಾಯ್ಕ	೪೭	ಮಹಿಳೆ	ಎಳನೀರು, ಬೆಳ್ತಂಗಡಿ ತಾ, ದ. ಕ. ಜಿ.
೩೮	ಶ್ರೀಮತಿ ಬಾಗಿ ಗೌಡತಿ	೫೮	ಮಹಿಳೆ	ಕುತ್ಲೂರುಬೈಲು, ಬೆಳ್ತಂಗಡಿ ತಾ, ದ. ಕ. ಜಿ.
೩೯	ಶ್ರೀ ಭಾಸ್ಕರ್	೪೭	ಪುರುಷ	ಕೂಗುಡುಮನೆ, ಶೃಂಗೇರಿ ತಾ, ಚಿ.ಮ. ಜಿ.
೪೦	ಶ್ರೀ ಸುಧಾಕರ	೪೪	ಪುರುಷ	ಎಡಗಾರು, ಶೃಂಗೇರಿ ತಾ, ಚಿ.ಮ. ಜಿ.
೪೧	ಶ್ರೀ ಕಿಟ್ಟಾ ಶೆಟ್ಟಿ	೫೫	ಪುರುಷ	ಮುಟಲ್ ಪಾಡಿ, ಕಾರ್ಕಳ ತಾ, ಉಡುಪಿ ಜಿ.
೪೨	ಶ್ರೀ ಸದಾಶಿವ ಗೌಡ	೪೮	ಪುರುಷ	ಅಂಡಾರು, ಕಾರ್ಕಳ ತಾ, ಉಡುಪಿ ಜಿ.
೪೩	ಶ್ರೀ ಬೋಜಪ್ಪ ಗೌಡ	೬೩	ಪುರುಷ	ಬೊಳ್ಳೆ, ಬೆಳ್ತಂಗಡಿ ತಾ, ದ.ಕ ಜಿ.
೪೪	ಶ್ರೀ ಶಿವಪ್ಪ ಗೌಡ	೬೮	ಪುರುಷ	ಬೊಳ್ಳೆ, ಬೆಳ್ತಂಗಡಿ ತಾ, ದ.ಕ. ಜಿ.
೪೫	ಶ್ರೀ ಚಂದ್ರಶೇಕರ	೫೦	ಪುರುಷ	ಬೊಳ್ಳೆ, ಬೆಳ್ತಂಗಡಿ ತಾ, ದ.ಕ. ಜಿ.
೪೬	ಶ್ರೀಮತಿ ಪ್ರಮಲ್ಲ	೫೨	ಮಹಿಳೆ	ಎಳನೀರು, ಬೆಳ್ತಂಗಡಿ ತಾ, ದ.ಕ. ಜಿ.
೪೭	ಶ್ರೀಮತಿ ಶಾಮಲ	೩೮	ಮಹಿಳೆ	ಎಳನೀರು, ಬೆಳ್ತಂಗಡಿ ತಾ, ದ.ಕ. ಜಿ.
೪೮	ಶ್ರೀಮತಿ ಬಾಗಿ	೫೧	ಮಹಿಳೆ	ಮುಟಲ್‌ಪಾಡಿ, ಕಾರ್ಕಳ ತಾ, ಉಡುಪಿ. ಜಿ.
೪೯	ಶ್ರೀಮತಿ ಅಮಿತಾನಾಯ್ಕ	೩೭	ಮಹಿಳೆ	ಬಂಗಾರುಪಲ್ಕೆ, ಬೆಳ್ತಂಗಡಿ ತಾ, ದ.ಕ. ಜಿ.
೫೦	ಶ್ರೀಮತಿ ನಾಗಮ್ಮ	೫೮	ಮಹಿಳೆ	ಎಳನೀರು, ಬೆಳ್ತಂಗಡಿ ತಾ, ದ.ಕ. ಜಿ.
೫೧	ಶ್ರೀ ನೇತುನಾಯ್ಕ	೪೦	ಪುರುಷ	ಬೋಳಂಜೆ, ಬೆಳ್ತಂಗಡಿ ತಾ, ದ.ಕ. ಜಿ.
೫೨	ಶ್ರೀ ಶಿವಯ್ಯನಾಯ್ಕ	೬೭	ಪುರುಷ	ಮುಟಲ್‌ಪಾಡಿ. ಕಾರ್ಕಳ ತಾ, ಉಡುಪಿ. ಜಿ.
೫೩	ಶ್ರೀ ಹರೀಶ ನಾಯ್ಕ	೪೪	ಪುರುಷ	ನೂರಾಲ್ ಬೆಟ್ಟು, ಕಾರ್ಕಳ ತಾ.ಉಡುಪಿ ಜಿ.
೫೪	ಶ್ರೀ ಸುಂದರನಾಯ್ಕ	೫೪	ಪುರುಷ	ಮುಟಲ್‌ಪಾಡಿ. ಕಾರ್ಕಳ ತಾ, ಉಡುಪಿ. ಜಿ.
೫೫	ಶ್ರೀಮತಿ ಕೇಶವತಿ	೩೮	ಮಹಿಳೆ	ಕಾಸರವಳ್ಳಿ, ಬೆಳ್ತಂಗಡಿ ತಾ. ದ.ಕ. ಜಿ.
೫೬	ಶ್ರೀ ಕರುಣಾಕರ	೪೨	ಪುರುಷ	ಕಾಸರವಳ್ಳಿ.ಬೆಳ್ತಂಗಡಿ ತಾ. ದ.ಕ. ಜಿ.
೫೭	ಶ್ರೀಮತಿ ಜಯಂತಿ	೫೨	ಮಹಿಳೆ	ಕಾಸರವಳ್ಳಿ, ಬೆಳ್ತಂಗಡಿ ತಾ, ದ.ಕ. ಜಿ.
೫೮	ಶ್ರೀ ವಿಜಯ್	೪೧	ಪುರುಷ	ಎಳನೀರು. ಬೆಳ್ತಂಗಡಿ ತಾ. ದ.ಕ. ಜಿ.
೫೯	ಶ್ರೀಮತಿ ಶೋಭಾ	೪೧	ಮಹಿಳೆ	ಎಳನೀರು. ಬೆಳ್ತಂಗಡಿ ತಾ. ದ.ಕ. ಜಿ.
೬೦	ಶ್ರೀ ಇಜ್ಜಪ್ಪ	೬೦	ಪುರುಷ	ಎಳನೀರು. ಬೆಳ್ತಂಗಡಿ ತಾ. ದ.ಕ. ಜಿ.
೬೧	ಶ್ರೀ ಡೊಂಬಯ್ಯ	೬೮	ಪುರುಷ	ಸವಣಾಲು, ಬೆಳ್ತಂಗಡಿ ತಾ. ದ.ಕ. ಜಿ.
೬೨	ಶ್ರೀ ಲೋಕಯ್ಯ ಮ.ಕು	೬೦	ಪುರುಷ	ಅಲ್ಕ ಬೆಳ್ತಂಗಡಿ ತಾ. ದ.ಕ. ಜಿ.
೬೩	ಶ್ರೀಮತಿ ಪುಟ್ಟಮ್ಮ	೪೦	ಮಹಿಳೆ	ನಾವೂರು. ಬೆಳ್ತಂಗಡಿ ತಾ. ದ.ಕ. ಜಿ.
೬೪	ಶ್ರೀಮತಿ ಬಾಗಿ	೫೮	ಮಹಿಳೆ	ಕುರ್ಲೆಬೈಲು. ಬೆಳ್ತಂಗಡಿ ತಾ. ದ.ಕ. ಜಿ.
೬೫	ಶ್ರೀ ಪದ್ಮಯ್ಯ	೬೦	ಪುರುಷ	ಕುತ್ಲೂರು. ಬೆಳ್ತಂಗಡಿ ತಾ. ದ.ಕ. ಜಿ.
೬೬	ಶ್ರೀಮತಿ ಗಿರಿಜ	೫೨	ಮಹಿಳೆ	ಎಂಡಾಳು, ಬೆಳ್ತಂಗಡಿ ತಾ. ದ.ಕ. ಜಿ.
೬೭	ಶ್ರೀ ಚಂದ್ರಪ್ಪ	೫೫	ಪುರುಷ	ಮುಡುಬ. ಶೃಂಗೇರಿ ತಾ. ಚಿ.ಮ. ಜಿ.
೬೮	ಶ್ರೀಮತಿ ಪ್ರೇಮ	೪೦	ಮಹಿಳೆ	ಕುರುಚಾರು. ಶೃಂಗೇರಿ ತಾ. ಚಿ.ಮ. ಜಿ.
೬೯	ಶ್ರೀಮತಿ ಶಾರದ	೪೪	ಮಹಿಳೆ	ಮುಡುಬ. ಶೃಂಗೇರಿ ತಾ. ಚಿ.ಮ. ಜಿ.
೭೦	ಶ್ರೀಮತಿ ಲಕ್ಷ್ಮಿ	೩೬	ಮಹಿಳೆ	ಕರುಚಾರು. ಶೃಂಗೇರಿ. ತಾ. ಚಿ.ಮ. ಜಿ.

೭೧	ಶ್ರೀ ಬಾಸ್ಕರ	೪೭	ಪುರುಷ	ಕೋಗೂಡುಮನೆ. ಶೃಂಗೇರಿ ತಾ. ಚಿ.ಮ. ಜಿ.
೭೨	ಶ್ರೀ ಸುಧಾಕರ	೩೩	ಪುರುಷ	ಮಾತೋಳಿ. ಶೃಂಗೇರಿ ತಾ. ಚಿ.ಮ. ಜಿ.
೭೩	ಶ್ರೀ ಕಾಡಪ್ಪ	೫೪	ಪುರುಷ	ಎಮ್ಮೆಗುಂಡಿ. ಶೃಂಗೇರಿ ತಾ. ಚಿ.ಮ. ಜಿ.
೭೪	ಶ್ರೀ ಶೇಶಪ್ಪ	೫೮	ಪುರುಷ	ಎಡಗಾರು. ಶೃಂಗೇರಿ ತಾ. ಚಿ.ಮ. ಜಿ.
೭೫	ಶ್ರೀನಿವಾಸ	೫೨	ಪುರುಷ	ಎಡಗಾರು. ಶೃಂಗೇರಿ ತಾ. ಚಿ.ಮ. ಜಿ.
೭೬	ಶ್ರೀಬೋಬಣ್ಣ	೩೮	ಪುರುಷ	ಶೀರ್ಲೂ. ಶೃಂಗೇರಿ ತಾ. ಚಿ.ಮ. ಜಿ.
೭೭	ಶ್ರೀ ಸುಂದರಗೌಡ	೪೪	ಪುರುಷ	ಸುಂಕದಮಕ್ಕಿ. ಶೃಂಗೇರಿ ತಾ. ಚಿ.ಮ. ಜಿ.
೭೮	ಶ್ರೀಮತಿ ಬೆಳ್ಳಮ್ಮ	೭೦	ಮಹಿಳೆ	ಮೆಣಸಿನಹಾಡ್ಯ. ಕೊಪ್ಪ ತಾ. ಚಿ.ಮ. ಜಿ.
೭೯	ಶ್ರೀ ದಿವಾಕರ	೪೯	ಪುರುಷ	ಮುಡುಬ. ಶೃಂಗೇರಿ ತಾ. ಚಿ.ಮ. ಜಿ.
೮೦	ಶ್ರೀ ಬೆಳ್ಳೇಗೌಡ	೪೬	ಪುರುಷ	ಕರುಚಾರು. ಶೃಂಗೇರಿ ತಾ. ಚಿ.ಮ. ಜಿ.
೮೧	ಶ್ರೀ ಮಂಜುನಾಥ	೪೫	ಪುರುಷ	ಒಟ್ಟಳ್ಳ.ಕೊಪ್ಪ ತಾ. ಚಿ.ಮ. ಜಿ.
೮೨	ಶ್ರೀ ಸೋಮಣ್ಣ	೫೦	ಪುರುಷ	ಕಲ್ಲುಗುಡ್ಡೆ.ಕೊಪ್ಪ ತಾ. ಚಿ.ಮ. ಜಿ.
೮೩	ಶ್ರೀ ದೇವೇಂದ್ರ	೩೨	ಪುರುಷ	ಮೆಣಸಿನಹಾಡ್ಯ. ಕೊಪ್ಪ ತಾ. ಚಿ.ಮ. ಜಿ.
೮೪	ಶ್ರೀ ಅಶೋಕ	೫೫	ಪುರುಷ	ಕರುಚಾರು. ಶೃಂಗೇರಿ ತಾ. ಚಿ.ಮ. ಜಿ.
೮೫	ಶ್ರೀ ರಂಗೇಗೌಡ	೫೫	ಪುರುಷ	ಮೆಣಸಿನಹಾಡ್ಯ. ಕೊಪ್ಪ ತಾ. ಚಿ.ಮ. ಜಿ.
೮೬	ಶ್ರೀ ರಾಮಪ್ಪ	೪೬	ಪುರುಷ	ಒಟ್ಟಳ್ಳ. ಕೊಪ್ಪಾ ತಾ. ಚಿ.ಮ. ಜಿ.
೮೭	ಶ್ರೀಮತಿ ಸರೋಜ	೪೩	ಮಹಿಳೆ	ಬಂಗಾರುಪಲ್ಕೆ. ಬೆಳ್ತಂಗಡಿ ತಾ. ದ.ಕ. ಜಿ.
೮೮	ಶ್ರೀ ಸೋಮಯ್ಯ	೪೭	ಪುರುಷ	ಬಂಗಾರುಪಲ್ಕೆ. ಬೆಳ್ತಂಗಡಿ ತಾ. ದ.ಕ. ಜಿ.
೮೯	ಶ್ರೀ ಓಬಯ್ಯ	೫೫	ಪುರುಷ	ಬಂಗಾರುಪಲ್ಕೆ. ಬೆಳ್ತಂಗಡಿ ತಾ. ದ.ಕ. ಜಿ
೯೦	ಶ್ರೀ ನಾಗಪ್ಪ	೫೪	ಪುರುಷ	ಬಂಗಾರುಪಲ್ಕೆ. ಬೆಳ್ತಂಗಡಿ ತಾ. ದ.ಕ. ಜಿ.
೯೧	ಶ್ರೀ ದೇವಪ್ಪ	೫೧	ಪುರುಷ	ಎಂಡಾಳು. ಬೆಳ್ತಂಗಡಿ ತಾ. ದ.ಕ. ಜಿ.
೯೨	ಶ್ರೀ ಸತೀಶ	೪೦	ಪುರುಷ	ಕೊಂಡಾಜೆ. ಬೆಳ್ತಂಗಡಿ ತಾ. ದ.ಕ. ಜಿ.
೯೩	ಶ್ರೀ ದೇವಪ್ಪ	೫೬	ಪುರುಷ	ಆಳಂಬ. ಬೆಳ್ತಂಗಡಿ ತಾ. ದ.ಕ. ಜಿ.
೯೪	ಶ್ರೀ ಮುತ್ತಯ್ಯ	೬೦	ಪುರುಷ	ಆಳಂಬ. ಬೆಳ್ತಂಗಡಿ ತಾ ದ.ಕ. ಜಿ.
೯೫	ಶ್ರೀಮತಿ ಜಯ ಮ.ಕು	೪೪	ಮಹಿಳೇ	ಮಾಪಲ. ಕಾರ್ಕಳ ತಾ. ಉಡುಪಿ. ಜಿ.
೯೬	ಶ್ರೀ ದಿನೇಶ	೪೭	ಪುರುಷ	ಕನ್ಯಾಲು. ಕಾರ್ಕಳ ತಾ. ಉಡುಪ ಜಿ.
೯೭	ಶ್ರೀ ಲಕ್ಷ್ಮಣ	೩೯	ಪುರುಷ	ಬಜಗೋಳೀ. ಕಾರ್ಕಳ ತಾ. ಉಡುಪಿ ಜಿ.
೯೮	ಶ್ರೀ ಜಯಣ್ಣ	೪೦	ಪುರುಷ	ಮಾಳ. ಕಾರ್ಕಳ ತಾ. ಉಡುಪಿ ಜಿ.
೯೯	ಶ್ರೀ ಜಯು	೪೮	ಮಹಿಳೆ	ಕನ್ಯಾಲ. ಕಾರ್ಕಳ ತಾ. ಉಡುಪಿ ಜಿ.
೧೦೦.	ಶ್ರೀ ಓಬಯ್ಯ	೬೮	ಪುರುಷ	ಕೊಂಡಾಡಿ. ಕಾರ್ಕಳ ತಾ. ಉಡುಪಿ. ಜಿ.
೧೦೧.	ಶ್ರೀ ವಿಠಲ್	೭೦	ಪುರುಷ	ಮಾಪಲ. ಕಾರ್ಕಳ ತಾ. ಉಡುಪಿ. ಜಿ.
೧೦೨	ಶ್ರೀ ಮಹಬಲ	೩೬	ಪುರುಷ	ಮಾಪಲ. ಕಾರ್ಕಳ ತಾ. ಉಡುಪಿ. ಜಿ.
೧೦೩	ಶ್ರೀ ಜಿನ್ನು	೪೭	ಪುರುಷ	ಕೊಂಡಾಜೆ. ಬೆಳ್ತಂಗಡಿ ತಾ. ದ.ಕ. ಜಿ.
೧೦೪	ಶ್ರೀ ಸಂಜೀವ	೩೯	ಪುರುಷ	ಎಂಡಾಳು. ಬೆಳ್ತಂಗಡಿ ತಾ. ದ.ಕ. ಜಿ.
೧೦೫	ಶ್ರೀ ರಾಜು	೩೭	ಪುರುಷ	ಶೀರ್ಲಾಳು. ಬೆಳ್ತಂಗಡಿ ತಾ. ದ.ಕ. ಜಿ.
೧೦೬	ಶ್ರೀ ಅಣ್ಣಿ	೫೮	ಪುರುಷ	ಸುರುಳಿ. ಬೆಳ್ತಂಗಡಿ ತಾ. ದ.ಕ. ಜಿ.
೧೦೭	ಶ್ರೀ ಆನಂದ	೩೭	ಪುರುಷ	ಸುರುಳಿ. ಬೆಳ್ತಂಗಡಿ ತಾ. ದ.ಕ. ಜಿ.
೧೦೮	ಶ್ರೀ ಚೆನ್ನಪ್ಪ	೬೭	ಪುರುಷ	ಅಡ್ಯಾಳ್. ಬೆಳ್ತಂಗಡಿ ತಾ. ದ.ಕ. ಜಿ.
೧೦೯	ಶ್ರೀ ಕೋಟಿ	೪೪	ಪುರುಷ	ನಾವೂರು. ಬೆಳ್ತಂಗಡಿ ತಾ. ದ.ಕ. ಜಿ.
೧೧೦	ಶ್ರೀ ರಾಮಣ್ಣ	೪೫	ಪುರುಷ	ಮುತ್ತಾಜೆ. ಬೆಳ್ತಂಗಡಿ ತಾ. ದ.ಕ. ಜಿ.
೧೧೧	ಶ್ರೀ ಚಿಕ್ಕಪ್ಪ	೫೫	ಪುರುಷ	ಮುತ್ತಾಜೆ. ಬೆಳ್ತಂಗಡಿ ತಾ. ದ.ಕ. ಜಿ.
೧೧೨	ಶ್ರೀ ಗೋವಿಂದ	೭೮	ಪುರುಷ	ಮುತ್ತಾಜೆ. ಬೆಳ್ತಂಗಡಿ ತಾ. ದ.ಕ. ಜಿ.
೧೧೩	ಶ್ರೀ ಶಿವಪ್ಪ	೪೪	ಪುರುಷ	ನಾವೂರು. ಬೆಳ್ತಂಗಡಿ ತಾ. ದ.ಕ. ಜಿ.
೧೧೪	ಶ್ರೀಮತಿ ವೆಂಕಮ್ಮ	೮೦	ಮಹಿಳೆ	ಬಂಗಾರುಪಲ್ಕೆ. ಬೆಳ್ತಂಗಡಿ ತಾ. ದ.ಕ. ಜಿ.

೧೧೫	ಶ್ರೀ ಎಳ್ಳುಗೌಡ	೫೫	ಪುರುಷ	ಬಿಳಿಗಲ್. ಮೂಡಿಗೆರೆ ತಾ. ಚಿ.ಮ. ಜಿ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನದಿಂದ ಪುನರ್ವಸತಿ ಹೊಂದಿದವರು.

ಕ್ರ.ಸಂ	ವ್ಯಕ್ತಿಗಳ ಹೆಸರು	ವಯಸ್ಸು	ಲಿಂಗ	ವಿಳಾಸ
೧	ಶ್ರೀ ಕೃಷ್ಣಾ	೩೭	ಪುರುಷ	ಮಾಳ, ಕಾರ್ಕಳ ತಾ, ಉಡುಪಿ ಜಿ.
೨	ಶ್ರೀ ರಾಜೇಶ್	೩೧	ಪುರುಷ	ನೆಮ್ಮಾರು, ಶೃಂಗೇರಿ ತಾ, ಚಿ.ಮ ಜಿ.
೩	ಶ್ರೀ ಸಚ್ಚೇಂದ್ರ	೩೫	ಪುರುಷ	ನೆಮ್ಮಾರು, ಶೃಂಗೇರಿ ತಾ, ಚಿ.ಮ ಜಿ.
೪	ಶ್ರೀ ವಿದ್ಯಾಸಾಗರ	೨೬	ಪುರುಷ	ಬೇಗಾರು, ಶೃಂಗೇರಿ ತಾ, ಚಿ.ಮ ಜಿ.
೫	ಶ್ರೀಮತಿ ಶಾರದ	೩೦	ಮಹಿಳೆ	ನೀಲಂದೂರು, ಶೃಂಗೇರಿ ತಾ, ಚಿ.ಮ ಜಿ.
೬	ಶ್ರೀ ಅರುಣ	೪೧	ಪುರುಷ	ಎನ್.ಆರ್ ಪುರ, ಚಿ.ಮ ಜಿ.
೭	ಶ್ರೀಮತಿ ಲೋಕಮ್ಮ	೪೪	ಮಹಿಳೆ	ಶೃಂಗೇರಿ, ಶೃಂಗೇರಿ ತಾ, ಚಿ.ಮ. ಜಿ.
೭	ಶ್ರೀ ಶೀನು ಗೌಡ	೩೮	ಪುರುಷ	ಕುಂಚೇಬೈಲು, ಶೃಂಗೇರಿ ತಾ, ಚಿ.ಮ ಜಿ.
೮	ಶ್ರೀ ಶೇಶು ಗೌಡ	೪೧	ಪುರುಷ	ಕುಂಚೇಬೈಲು, ಶೃಂಗೇರಿ ತಾ, ಚಿ.ಮ. ಜಿ.
೯	ಶ್ರೀಮತಿ ಗಿರಿಜ ಮ.ಕು	೬೫	ಮಹಿಳೆ	ಕೆರ್ವಾಶೆ, ಕಾರ್ಕಳ ತಾ, ಉಡಪಿ ಜಿ.
೧೦	ಶ್ರೀ ಶ್ರೀಧರ	೬೫	ಪುರುಷ	ಪೆರ್ನೋಡಿ, ಮಂಗಳೂರು ತಾ, ದ.ಕ. ಜಿ.
೧೧	ಶ್ರೀ ಪುಟ್ಟಣ್ಣ	೩೯	ಪುರುಷ	ನೆಲ್ಲಿಕಾರು, ಮಂಗಳೂರು ತಾ, ದ.ಕ. ಜಿ.
೧೨	ಶ್ರೀ ರಾಜು ಮಲೆಕುಡಿಯ	೪೮	ಪುರುಷ	ಕೆರ್ವಾಶೆ, ಕಾರ್ಕಳ ತಾ, ಉಡುಪಿ. ಜಿ.
೧೩	ಶ್ರೀ ಕೃಷ್ಣಪ್ಪ	೪೦	ಪುರುಷ	ಶಿರ್ಲಾಲು, ಕಾರ್ಕಳ ತಾ, ಉಡುಪಿ. ಜಿ.
೧೪	ಶ್ರೀಶೀನು	೪೦	ಪುರುಷ	ಶಿರ್ಲಾಲು, ಕಾರ್ಕಳ ತಾ, ಉಡುಪಿ. ಜಿ.
೧೯	ಶ್ರೀ ಜಾರಪ್ಪ	೪೦	ಪುರುಷ	ಜಾರ್ಕಳ, ಕಾರ್ಕಳ ತಾ. ಉಡುಪಿ. ಜಿ.
೨೦	ಶ್ರೀ ಬಾಬು ಮಲೆಕುಡಿಯ	೭೫	ಪುರುಷ	ಶಿರ್ಲಾಲು, ಕಾರ್ಕಳ ತಾ. ಉಡುಪಿ. ಜಿ.
೨೧	ಶ್ರೀ ವೆಂಕಪ್ಪ	೫೨	ಪುರುಷ	ಪೆರ್ನೋಡಿ, ಮಂಗಳೂರು ತಾ, ದ.ಕ. ಜಿ.
೨೨	ಶ್ರೀಮತಿ ವಸಂತಿ	೪೫	ಮಹಿಳೆ	ಪೆರ್ನೋಡಿ, ಮಂಗಳೂರು ತಾ, ದ.ಕ. ಜಿ.
೨೩	ಶ್ರೀ ಬಾಬು	೬೮	ಪುರುಷ	ಪೆರ್ನೋಡಿ, ಮಂಗಳೂರು ತಾ, ದ.ಕ .ಜಿ.
೨೪	ಶ್ರೀ ದೇವಪ್ಪ	೨೬	ಪುರುಷ	ಪೆರ್ನೋಡಿ, ಮಂಗಳೂರು ತಾ, ದ.ಕ. ಜಿ.
೨೫	ಶ್ರೀಮತಿ ವಾರಿಜ	೬೦	ಮಹಿಳೆ	ಕೂಡುಬೆಟ್ಟು, ಕಾರ್ಕಳ ತಾ. ಉಡುಪಿ. ಜಿ.
೨೬	ಶ್ರೀ ರಮೇಶ ಗೌಡ	೫೭	ಪುರುಷ	ಕುಚ್ಚಿತೋಟ, ಮಾಳ, ಕಾರ್ಕಳ ತಾ. ಉಡುಪಿ. ಜಿ.
೨೭	ಶ್ರೀ ವಿಶ್ವನಾಥ	೨೫	ಪುರುಷ	ಮಾಳ, ಕಾರ್ಕಳ ತಾ. ಉಡುಪಿ. ಜಿ.
೨೮	ಶ್ರೀ ಕೆಂಪೇಗೌಡ	೪೪	ಪುರುಷ	ಕುದುರೆಗುಂಡಿ, ಎನ್ ಆರ್ ಪುರ ತಾ, ಚಿಕ್ಕಮಗಳೂರು ಜಿ
೨೯	ಶ್ರೀ ಪುಟ್ಟಪ್ಪ	೬೪	ಪುರುಷ	ಕುದುರೆಗುಂಡಿ, ಎನ್ ಆರ್ ಪುರ ತಾ, ಚಿ.ಮ. ಜಿ
೩೦	ಶ್ರೀ ತಮ್ಮಯ್ಯ	೬೩	ಪುರುಷ	ಸೊನ್ನೆಕೊಡುಗೆ, ಶೃಂಗೇರಿ ತಾ, ಚಿ.ಮ. ಜಿ.
೩೧	ಶ್ರೀ ವೆಂಕಟೇಶ	೫೦	ಪುರುಷ	ಸೊನ್ನೆಕೊಡುಗೆ, ಶೃಂಗೇರಿ ತಾ, ಚಿ.ಮ. ಜಿ.
೩೨	ಶ್ರೀಮತಿ ಹೂವಮ್ಮ	೭೬	ಮಹಿಳೆ	ನೀಲಂದೂರು, ಶೃಂಗೇರಿ ತಾ. ಚಿ.ಮ. ಜಿ.
೩೩	ಶ್ರೀ ಮಂಜುನಾಥ	೪೫	ಪುರುಷ	ಸೋಂಪುರ, ತರೀಕೆರೆ ತಾ. ಚಿ.ಮ. ಜಿ.
೩೪	ಶ್ರೀಮತಿ ಪದ್ಮಾವತಿ	೫೬	ಮಹಿಳೆ	ಸೋಂಪುರ, ತರೀಕೆರೆ ತಾ. ಚಿ.ಮ. ಜಿ.
೩೫	ಶ್ರೀ ವೆಂಕೆಗೌಡ	೯೦	ಪುರುಷ	ಮೀಗ, ಶೃಂಗೇರಿ ತಾ, ಚಿ.ಮ. ಜಿ.

೩೬	ಶ್ರೀ ಸುರೇಶ	೩೨	ಪುರುಷ	ಬೆಟಗೇರಿ, ಶೃಂಗೇರಿ ತಾ. ಚಿ.ಮ. ಜಿ.
೩೭	ಶ್ರೀ ಹೂವಪ್ಪ	೪೦	ಪುರುಷ	ಸಿರಿಮನೆ, ಶೃಂಗೇರಿ ತಾ. ಚಿ.ಮ. ಜಿ.
೩೮	ಶ್ರೀ ಬೆಳ್ಳೇಗೌಡ	೭೫	ಪುರುಷ	ನೇತ್ರವಳ್ಳಿ, ಶೃಂಗೇರಿ ತಾ, ಚಿ.ಮ. ಜಿ.
೩೯	ಶ್ರೀ ತಮ್ಮುಗೌಡ	೭೩	ಪುರುಷ	ನೇತ್ರವಳ್ಳಿ, ಶೃಂಗೇರಿ ತಾ, ಚಿ.ಮ. ಜಿ.
೪೦	ಶ್ರೀ ಪುಟ್ಟ	೪೪	ಪುರುಷ	ನೇತ್ರವಳ್ಳಿ, ಶೃಂಗೇರಿ ತಾ, ಚಿ.ಮ. ಜಿ.
೪೧	ಶ್ರೀ ಕೆಂಪೇಗೌಡ	೪೪	ಪುರುಷ	ಗಡೇಕಲ್. ಶೃಂಗೇರಿ ತಾ. ಚಿ.ಮ. ಜಿ.
೪೨	ಶ್ರೀಮತಿ ಪ್ರೇಮಲತ	೪೪	ಮಹಿಳೆ	ನೆಮ್ಮಾರು. ಶೃಂಗೇರಿ ತಾ. ಚಿ.ಮ. ಜಿ.
೪೩	ಶ್ರೀ ರಾಮೇಗೌಡ	೪೬	ಪುರುಷ	ನೆಮ್ಮಾರು. ಶೃಂಗೇರಿ ತಾ. ಚಿ.ಮ. ಜಿ
೪೪	ಶ್ರೀಮತಿ ಗಿರಿಜ	೬೪	ಮಹಿಳೆ	ಸಂಸೆ. ಮೂಡಿಗೆರೆ ತಾ. ಚಿ.ಮ. ಜಿ.
೪೫	ಶ್ರೀ ತಮ್ಮುಗೌಡ	೪೧	ಪುರುಷ	ಶಿರ್ಲು. ಶೃಂಗೇರಿ ತಾ. ಚಿ.ಮ. ಜಿ.
೪೬	ಶ್ರೀ ಪುಟ್ಟಪ್ಪ	೬೪	ಪುರುಷ	ಕುದುರೆಗುಂಡಿ. ಎನ್.ಆರ್.ಪುರ ತಾ. ಚಿ.ಮ. ಜಿ.
೪೭	ಶ್ರೀ ಧರ್ಮಪ್ಪ	೬೪	ಪುರುಷ	ಬಿಲ್‌ಗದ್ದೆ. ಶೃಂಗೇರಿ ತಾ. ಚಿ.ಮ. ಜಿ.
೪೮	ಶ್ರೀ ಕೃಷ್ಣಪ್ಪ	೫೨	ಪುರುಷ	ಅಡ್ಡಗದ್ದೆ. ಶೃಂಗೇರಿ ತಾ. ಚಿ.ಮ. ಜಿ.
೪೯	ಶ್ರೀಮತಿ ಸುಶೀಲ	೫೦	ಮಹಿಳೆ	ಬಿಲ್‌ಗದ್ದೆ. ಶೃಂಗೇರಿ ತಾ. ಚಿ.ಮ. ಜಿ.
೫೦	ಶ್ರೀಮತಿ ಯಶೋಧ	೪೪	ಮಹಿಳೆ	ಮೇಗೂರು. ಶೃಂಗೇರಿ ತಾ. ಚಿ.ಮ. ಜಿ.
೫೧	ಶ್ರೀ ಜನಾರ್ಧನ	೪೭	ಪುರುಷ	ಮೇಗೂರು. ಶೃಂಗೇರಿ ತಾ. ಚಿ.ಮ. ಜಿ.
೫೨	ಶ್ರೀ ಚಂದ್ರೇಗೌಡ	೫೦	ಪುರುಷ	ಮೇಗೂರು. ಶೃಂಗೇರಿ ತಾ. ಚಿ.ಮ. ಜಿ.
೫೩	ಶ್ರೀ ಚಿನ್ನೇಗೌಡ	೫೫	ಪುರುಷ	ಮೇಗೂರು. ಶೃಂಗೇರಿ ತಾ. ಚಿ.ಮ. ಜಿ.
೫೪	ಶ್ರೀ ಶೇಶ	೫೮	ಪುರುಷ	ಮೇಗೂರು.. ಶೃಂಗೇರಿ ತಾ. ಚಿ.ಮ. ಜಿ.
೫೫	ಶ್ರೀ ಕಾಳುಗೌಡ	೭೦	ಪುರುಷ	ಅಡ್ಡಗದ್ದೆ. ಶೃಂಗೇರಿ ತಾ. ಚಿ.ಮ. ಜಿ.
೫೬	ಶ್ರೀ ಗಿಡ್ಡ	೬೨	ಪುರುಷ	ಬೇಗಾರು. ಶೃಂಗೇರಿ ತಾ. ಚಿ.ಮ. ಜಿ.
೫೭	ಶ್ರೀ ಬೆಳ್ಳು	೬೪	ಪುರುಷ	ಬೇಗಾರು. ಶೃಂಗೇರಿ ತಾ. ಚಿ.ಮ. ಜಿ.
೫೮	ಶ್ರೀ ಬೆಳ್ಳೇಗೌಡ	೬೪	ಪುರುಷ	ಅಡ್ಡಗದ್ದೆ. ಶೃಂಗೇರಿ ತಾ. ಚಿ.ಮ. ಜಿ.
೫೯	ಶ್ರೀ ನಾಗಣ್ಣ	೫೫	ಪುರುಷ	ಅಡ್ಡಗದ್ದೆ. ಶೃಂಗೇರಿ ತಾ. ಚಿ.ಮ. ಜಿ.
೬೦	ಶ್ರೀ ವಾಸಪ್ಪ	೪೧	ಪುರುಷ	ಮಾಳ. ಕಾರ್ಕಳ ತಾ. ಉಡುಪಿ. ಜಿ.
೬೧	ಶ್ರೀನಿವಾಸ	೫೬	ಪುರುಷ	ಕುಂಚೇಬೈಲು. ಶೃಂಗೇರಿ ತಾ. ಚಿ.ಮ. ಜಿ.
೬೨	ಶ್ರೀ ಸುರೇಶ	೪೪	ಪುರುಷ	ನೆಮ್ಮಾರು. ಶೃಂಗೇರಿ ತಾ. ಚಿ.ಮ. ಜಿ.
೬೩	ಶ್ರೀ ತಮ್ಮಯ್ಯ	೪೩	ಪುರುಷ	ಸೊನ್ನೆಕೊಡುಗೆ. ಶೃಂಗೇರಿ ತಾ. ಚಿ.ಮ. ಜಿ.
೬೪	ಶ್ರೀ ವೆಂಕಟೇಶ	೫೦	ಪುರುಷ	ಸೊನ್ನೆಕೊಡುಗೆ. ಶೃಂಗೇರಿ ತಾ. ಚಿ.ಮ. ಜಿ.
೬೫	ಶ್ರೀಮತಿ ಹೂವಮ್ಮ	೭೬	ಮಹಿಳೆ	ನೀಲಂದೂರು. ಶೃಂಗೇರಿ ತಾ. ಚಿ.ಮ. ಜಿ.
೬೬	ಶ್ರೀ ಮಂಜುನಾಥ	೪೫	ಪುರುಷ	ಸೋಂಪುರ. ತರೀಕೆರೆ ತಾ. ಚಿ.ಮ. ಜಿ.
೬೭	ಶ್ರೀ ಪದ್ಮಾವತಿ	೫೬	ಮಹಿಳೆ	ಸೋಂಪುರ. ತರೀಕೆರೆ ತಾ. ಚಿ.ಮ. ಜಿ.
೬೮	ಶ್ರೀ ವೆಂಕೆಗೌಡಲು	೯೫	ಪುರುಷ	ಬೆಟಗೇರಿ. ಶೃಂಗೇರಿ ತಾ. ಚಿ.ಮ. ಜಿ.
೬೯	ಶ್ರೀ ಹೂವಪ್ಪ	೪೦	ಪುರುಷ	ಸಿರಿಮನೆ. ಶೃಂಗೇರಿ ತಾ. ಚಿ.ಮ. ಜಿ.
೭೦	ಶ್ರೀ ಕೃಷ್ಣ	೩೭	ಪುರುಷ	ಮಾಳ. ಕಾರ್ಕಳ ತಾ. ಉಡುಪಿ. ಜಿ.
೭೧	ಶ್ರೀಮತಿ ವಸಂತ	೫೮	ಮಹಿಳೆ	ನೆಮ್ಮಾರು. ಶೃಂಗೇರಿ ತಾ. ಚಿ.ಮ. ಜಿ.
೭೨	ಶ್ರೀಮತಿ ಕಮಲಾ	೫೫	ಮಹಿಳೆ	ಬಜಗೋಳಿ. ಕಾರ್ಕಳ ತಾ. ಉಡುಪಿ. ಜಿ.
೭೩	ಶ್ರೀ ಶ್ರೀಧರ	೪೪	ಪುರುಷ	ಬಜಗೋಳಿ. ಕಾರ್ಕಳ ತಾ. ಉಡುಪಿ. ಜಿ.
೭೪	ಶ್ರೀ ಜಯರಾಜ	೫೨	ಪುರುಷ	ಸಂಸೆ. ಮೂಡಿಗೆರೆ ತಾ. ಚಿ.ಮ. ಜಿ.
೭೫	ಶ್ರೀ ನಾಗಕುಮಾರ	೬೨	ಪುರುಷ	ಸಂಸೆ. ಮೂಡಿಗೆರೆ ತಾ. ಚಿ.ಮ. ಜಿ.
೭೬	ಶ್ರೀ ಪವನಜಯ	೪೮	ಪುರುಷ	ದಿಡುಪೆ. ಬೆಳ್ತಂಗಡಿ ತಾ. ದ.ಕ. ಜಿ.
೭೭	ಶ್ರೀ ಮಹಾವೀರ	೪೪	ಪುರುಷ	ಬೆಳ್ತಂಗಡಿ. ದ.ಕ. ಜಿ.
೭೮	ಶ್ರೀ ರಾಜೇಂದ್ರ	೫೨	ಪುರುಷ	ಅಳದಂಗಡಿ. ದ.ಕ. ಜಿ.
೭೯	ಶ್ರೀ ಎಳದೇವಿ	೫೮	ಮಹಿಳೆ	ಅಳದಂಗಡಿ. ದ.ಕ. ಜಿ.

೮೦	ಶ್ರೀಮತಿ ಸುವರ್ಣ	೪೮	ಮಹಿಳೆ	ಕುತ್ಲೂರು. ಬೆಳ್ತಂಗಡಿ ತಾ. ದ.ಕ. ಜಿ.
೮೧	ಶ್ರೀಧರ	೪೮	ಪುರುಷ	ಕತ್ಲೂರು. ಬೆಳ್ತಂಗಡಿ ತಾ. ದ.ಕ. ಜಿ.
೮೨	ಶ್ರೀ ಚಂದ್ರೇಗೌಡ	೪೪	ಪುರುಷ	ಬೆಳ್ತಂಗಡಿ. ದ.ಕ. ಜಿ.
೮೩	ಶ್ರೀಮತಿ ಶಾರದ	೫೮	ಮಹಿಳೆ	ನೆಮ್ಮಾರು. ಶೃಂಗೇರಿ ತಾ. ಚಿ.ಮ. ಜಿ.
೮೪	ಶ್ರೀ ಶಿವಸ್ವಾಮಿ	೪೭	ಪುರುಷ	ಶೃಂಗೇರಿ. ಚಿ.ಮ. ಜಿ.
೮೫	ಶ್ರೀಮತಿ ಕಮಲಮ್ಮ	೬೭	ಮಹಿಳೆ	ಜಯಪುರ. ಕೊಪ್ಪ ತಾ. ಚಿ.ಮ. ಜಿ.
೮೬	ಶ್ರೀಮತಿ ಸುಶೀಲಮ್ಮ	೬೧	ಮಹಿಳೆ	ಮೀಗ. ಶೃಂಗೇರಿ ತಾ. ಚಿ.ಮ. ಜಿ.
೮೭	ಶ್ರೀ ಬೋಜೇಗೌಡ	೬೧	ಪುರುಷ	ಗಡೇಕಲ್ಲು. ಶೃಂಗೇರಿ ತಾ. ಚಿ.ಮ. ಜಿ.
೮೮	ಶ್ರೀ ಶಂಕರ	೪೮	ಪುರುಷ	ಶೃಂಗೇರಿ. ಚಿ.ಮ. ಜಿ.
೮೯	ಶ್ರೀಮತಿ ಗಂಗಮ್ಮ	೪೪	ಮಹಿಳೆ	ಅಡ್ಡಗದ್ದೆ. ಶೃಂಗೇರಿ ತಾ. ಚಿ.ಮ. ಜಿ.
೯೦	ಶ್ರೀ ಅಶೋಕ	೩೬	ಪುರುಷ	ಗಡೇಕಲ್ಲು. ಶೃಂಗೇರಿ ತಾ. ಚಿ.ಮ. ಜಿ.
೯೧	ಶ್ರೀ ದುಂಡಯ್ಯ	೫೮	ಪುರುಷ	ಕುಂಚೇಬೈಲು. ಶೃಂಗೇರಿ ತಾ. ಚಿ.ಮ. ಜಿ.
೯೨	ಶ್ರೀ ಹಾಲಪ್ಪ	೩೭	ಪುರುಷ	ಬೇಗಾರು. ಶೃಂಗೇರಿ ತಾ. ಚಿ.ಮ. ಜಿ.
೯೩	ಶ್ರೀ ಅಣ್ಣಯ್ಯ	೫೩	ಪುರುಷ	ಬೇಗಾರು. ಶೃಂಗೇರಿ ತಾ. ಚಿ.ಮ. ಜಿ.
೯೪	ಶ್ರೀ ಮಂಜುನಾಥ	೫೩	ಪುರುಷ	ಮೀಗ. ಶೃಂಗೇರಿ ತಾ. ಚಿ.ಮ. ಜಿ.
೯೫	ಶ್ರೀ ಶಿವ	೪೧	ಪುರುಷ	ನೆಮ್ಮಾರು. ಶೃಂಗೇರಿ ತಾ. ಚಿ.ಮ. ಜಿ.
೯೬	ಶ್ರೀಮತಿ ಲಕ್ಷ್ಮೀ ಆಚಾರಿ	೪೭	ಮಹಿಳೆ	ನೆಮ್ಮಾರು. ಶೃಂಗೇರಿ ತಾ. ಚಿ.ಮ. ಜಿ.
೯೭	ಶ್ರೀಮತಿ ಲೋಕಮ್ಮ	೬೧	ಮಹಿಳೆ	ಶೃಂಗೇರಿ. ಚಿ.ಮ. ಜಿ.
೯೮	ಶ್ರೀ ಅರುಣ	೪೪	ಪುರುಷ	ಶೃಂಗೇರಿ. ಚಿ.ಮ. ಜಿ.
೯೯	ಶ್ರೀಮತಿ ಸುಮಿತ್ರ	೩೪	ಮಹಿಳೆ	ಮುಡುಬ. ಶೃಂಗೇರಿ ತಾ. ಚಿ.ಮ. ಜಿ.
೧೦೦	ಶ್ರೀಮತಿ ಲೀಲ	೪೮	ಮಹಿಳೆ	ಅಂಡಾರು. ಕಾರ್ಕಳ ತಾ. ಉಡುಪಿ. ಜಿ.
೧೦೧	ಶ್ರೀ ಸಂಜೀವ	೪೩	ಪುರುಷ	ನೆಲ್ಲಿಕಾರು. ಕಾರ್ಕಳ ತಾ. ಉಡುಪಿ. ಜಿ.
೧೦೨	ಶ್ರೀಮತಿ ವಾಸಂತಿ	೪೮	ಮಹಿಳೆ	ನೆಲ್ಲಿಕಾರು. ಕಾರ್ಕಳ ತಾ. ಉಡುಪಿ. ಜಿ.
೧೦೩	ಶ್ರೀ ದೇಜು	೪೪	ಪುರುಷ	ನಾರಾವಿ.ಬೆಳ್ತಂಗಡಿ ತಾ. ದ.ಕ. ಜಿ.
೧೦೪	ಶ್ರೀ ವೆಂಕಪ್ಪ	೪೭	ಪುರುಷ	ಈದು.ಕಾರ್ಕಳ ತಾ. ಉಡುಪಿ. ಜಿ.
೧೦೫	ಶ್ರೀ ದೇವು	೧೯	ಪುರುಷ	ಕುತ್ಲೂರು. ಬೆಳ್ತಂಗಡಿ ತಾ. ದ.ಕ. ಜಿ.
೧೦೬	ಶ್ರೀ ಲೋಕಯ್ಯ	೫೫	ಪುರುಷ	ನಾವೂರು. ಬೆಳ್ತಂಗಡಿ ತಾ. ದ.ಕ. ಜಿ.
೧೦೭	ಶ್ರೀ ಸುರೇಶ	೩೯	ಪುರುಷ	ಕುತ್ಲೂರು. ಬೆಳ್ತಂಗಡಿ ತಾ. ದ.ಕ. ಜಿ.
೧೦೮	ಶ್ರೀ ಹೊನ್ನಪ್ಪ	೪೬	ಪುರುಷ	ನೆಲ್ಲಿಕಾರು.ಕಾರ್ಕಳ ತಾ. ಉಡುಪಿ. ಜಿ.
೧೦೯	ಶ್ರೀ ದೇವಮ್ಮ	೫೫	ಮಹಿಳೆ	ಸಂಸೆ. ಮೂಡಿಗೆರೆ ತಾ. ಚಿ.ಮ. ಜಿ.
೧೧೦	ಶ್ರೀ ಶೀನು	೫೪	ಪುರುಷ	ನೆಲ್ಲಿಖಾರು. ಕಾರ್ಕಳ ತಾ. ಉಡುಪಿ ಜಿ.
೧೧೧	ಶ್ರೀ ದೇವಿಕ	೩೧	ಮಹಿಳೆ	ಬಜಗೋಳಿ. ಕಾರ್ಕಳ ತಾ. ಉಡುಪಿ. ಜಿ.
೧೧೨	ಶ್ರೀ ನಾರಾಯಣ	೪೯	ಪುರುಷ	ನಾವೂರು. ಬೆಳ್ತಂಗಡಿ ತಾ. ದ.ಕ. ಜಿ.
೧೧೩	ಶ್ರೀ ತಿಮ್ಮಪ್ಪ	೪೬	ಪುರುಷ	ಬೆಳ್ತಂಗಡಿ. ದ.ಕ. ಜಿ.
೧೧೪	ಶ್ರೀ ಗಣೇಶ	೪೩	ಪುರುಷ	ಬೆಳ್ತಂಗಡಿ. ದ.ಕ. ಜಿ.
೧೧೫	ಶ್ರೀ ಚಂದಯ್ಯ	೬೮	ಪುರುಷ	ಕುತ್ಲೂರು. ಬೆಳ್ತಂಗಡಿ ತಾ. ದ.ಕ. ಜಿ.
೧೧೬	ಶ್ರೀ ಲಕ್ಷ್ಮಣ	೩೭	ಪುರುಷ	ಕುತ್ಲೂರು. ಬೆಳ್ತಂಗಡಿ ತಾ. ದ.ಕ. ಜಿ.
೧೧೭	ಶ್ರೀ ಚೆಲುವಮ್ಮ	೬೬	ಮಹಿಳೆ	ಕೂಡುಬೆಟ್ಟು. ಕಾರ್ಕಳ ತಾ. ಉಡುಪಿ. ಜಿ.
೧೧೮	ಶ್ರೀ ಅಣ್ಣಿ	೬೬	ಪುರುಷ	ಕೆರ್ವಾಶೆ. ಕಾರ್ಕಳ ತಾ. ಉಡುಪಿ. ಜಿ.
೧೧೯	ಶ್ರೀ ಪ್ರಸನ್ನ	೫೬	ಪುರುಷ	ಮಾಳ. ಕಾರ್ಕಳ ತಾ. ಉಡುಪಿ. ಜಿ.
೧೨೦	ಶ್ರೀ ಸದಾನಂದ	೪೬	ಪುರುಷ	ಮಾಳ. ಕಾರ್ಕಳ ತಾ. ಉಡುಪಿ. ಜಿ.
೧೨೧	ಶ್ರೀ ಶ್ರೀಧರ	೩೮	ಪುರುಷ	ಕೆರ್ವಾಶೆ. ಕಾರ್ಕಳ ತಾ. ಉಡುಪಿ. ಜಿ.
೧೨೨	ಶ್ರೀಮತಿ ಗೌರಿ	೪೪	ಮಹಿಳೆ	ಈದು. ಕಾರ್ಕಳ ತಾ. ಉಡುಪಿ. ಜಿ.
೧೨೩	ಶ್ರೀ ದೇವಪ್ಪ	೪೪	ಪುರುಷ	ಕೆರ್ವಾಶೆ. ಕಾರ್ಕಳ ತಾ. ಉಡುಪಿ. ಜಿ.

೧೨೪	ಶ್ರೀ ಚಂದ್ರ	೫೮	ಪುರುಷ	ಮಾಳ. ಕಾರ್ಕಳ ತಾ. ಉಡುಪಿ. ಜಿ.
೧೨೫	ಶ್ರೀ ರಮೇಶ	೪೧	ಪುರುಷ	ಮಾಳ. ಕಾರ್ಕಳ ತಾ. ಉಡುಪಿ. ಜಿ.
೧೨೬	ಶ್ರೀಮತಿ ಗುಲಾಬಿ	೪೭	ಮಹಿಳೆ	ಬಿಳಿಗಲ್. ಮೂಡಿಗೆರೆ ತಾ. ಚಿ.ಮ. ಜಿ.
೧೨೭	ಶ್ರೀ ನಾಗ	೪೧	ಪುರುಷ	ದಂಟನಕಾಡು. ಮೂಡಿಗೆರೆ ತಾ. ಚಿ.ಮ. ಜಿ.
೧೨೮	ಶ್ರೀ ದ್ಯಾಮ	೪೩	ಪುರುಷ	ದಂಟನಕಾಡು. ಮೂಡಿಗೆರೆ ತಾ. ಚಿ.ಮ. ಜಿ.
೧೨೯	ಶ್ರೀ ರಾಮ	೪೦	ಪುರುಷ	ದಂಟನಕಾಡು. ಮೂಡಿಗೆರೆ ತಾ. ಚಿ. ಮ. ಜಿ.
೧೩೦	ಶ್ರೀ ಕೃಷ್ಣ	೪೫	ಪುರುಷ	ಕೆಂಗನಕೊಂಡ. ಮೂಡಿಗೆರೆ ತಾ. ಚಿ.ಮ. ಜಿ.
೧೩೧	ಶ್ರೀಮತಿ ಗಿರಿಜ	೪೧	ಮಹಿಳೆ	ದಂಟನಕಾಡು. ಮೂಡಿಗೆರೆ ತಾ. ಚಿ.ಮ. ಜಿ.
೧೩೨	ಶ್ರೀಮತಿ ನಾಗಮ್ಮ	೫೭	ಮಹಿಳೆ	ದಂಟನಗಾಡು. ಮೂಡಿಗೆರೆ ತಾ. ಚಿ.ಮ. ಜಿ.
೧೩೩	ಶ್ರೀ ರಮೇಶ	೩೪	ಪುರುಷ	ಕೆಂಗನಕೊಂಡ.ಮೂಡಿಗೆರೆ ತಾ. ಚಿ.ಮ. ಜಿ.
೧೩೪	ಶ್ರೀ ಶೇಶು	೩೮	ಪುರುಷ	ಚಿಟ್ಟಿಗಲ್. ಮೂಡಿಗೆರೆ ತಾ. ಚಿ.ಮ. ಜಿ.
೧೩೫	ಶ್ರೀ ಅಪ್ಪುಗೌಡ	೬೧	ಪುರುಷ	ಕಲ್ಲೋಡು. ಮೂಡಿಗೆರೆ ತಾ. ಚಿ.ಮ. ಜಿ.

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩ ೨೭೬, ಹೊಸಪೇಟೆ ತಾ, ಬಳ್ಳಾರಿ ಜಿಲ್ಲೆ

ಸ್ಥಳಾಂತರ ಮತ್ತು ಪುನರ್ವಸತೀಕರಣ: ಸವಾಲು ಮತ್ತು ಸಾಧ್ಯತೆಗಳು

(ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು ಅನುಲಕ್ಷಿಸಿ)

Questionnaire For Case Study and Group Discussion

ವ್ಯಕ್ತಿ ಸಂದರ್ಶನದ ಪ್ರಶ್ನಾವಳಿ

೧ **ಕೌಟುಂಬಿಕ**

೦೧. ನಿಮ್ಮ ಕುಟುಂಬವನ್ನು ಯಾರು ಮುನ್ನಡೆಸುತ್ತಾರೆ? ಮುಖ್ಯ ತೀರ್ಮಾನಗಳನ್ನು ಕುಟುಂಬದ ಎಲ್ಲ ಸದಸ್ಯರು ಸೇರಿ ತೆಗೆದುಕೊಳ್ಳುವಿರಾ ಅಥವಾ ಕುಟುಂಬದ ಮುಖ್ಯಸ್ಥರೇ ತೆಗೆದುಕೊಳ್ಳುತ್ತಾರೆಯೇ?

೦೨. ಈ ಹಿಂದೆ ಕುಟುಂಬದ ಮುಖ್ಯ ತೀರ್ಮಾಗಳನ್ನು ಯಾರು ತೆಗೆದುಕೊಳ್ಳುತ್ತಿದ್ದರು?

೦೩. ತೀರ್ಮಾನಗಳನ್ನು ತೆಗೆದುಕೊಳ್ಳುವ ವ್ಯಕ್ತಿ ಬದಲಾಗಿದ್ದರೆ ಅದಕ್ಕಿರುವ ಕಾರಣಗಳೇನು?

೦೪. ನಿಮ್ಮ ಕುಟುಂಬದ ಒಟ್ಟಾರೆಯ ಸ್ಥಿತಿ ಈ ಹಿಂದಿಗಿಂತ ಬದಲಾಗಿದೆ ಎಂದು ನಿಮಗೆ ಅನ್ನಿಸುತ್ತಿದೆಯೇ?

ಹೌದು ಇಲ್ಲ

೫. ಬದಲಾಗಿದ್ದರೆ ಅದಕ್ಕೆ ಯಾವ ಕಾರಣಗಳನ್ನು ಕೊಡಬಯಸುತ್ತೀರಿ

೦೬. ಕೂಡು ಕುಟುಂಬಗಳು ಇವೆಯೇ?

೦೭. ಈಗ ಕುಟುಂಬಗಳು ಬದುಕುತ್ತಿರುವ ರೀತಿ ಬದಲಾಗಿದೆ ಎಂದೆನ್ನಿಸುವುದೇ? ಅದಕ್ಕೆ ಏನು ಕಾರಣಗಳು

೦೮. ನಿಮ್ಮ ಕುಟುಂಬದಲ್ಲಿ ಹೆಣ್ಣು ಪ್ರಮುಖ ತೀರ್ಮಾನಗಳನ್ನು ತೆಗೆದುಕೊಳ್ಳುವಳೇ?

೦೯. ಹೌದು / ಇಲ್ಲ ಕಾರಣಗಳೇನು?

೧೦. ನಿಮ್ಮ ಸಮುದಾಯದ ಕುಟುಂಬಗಳ ಸ್ವರೂಪ ಬದಲಾಗುತ್ತಿದೆಯೇ? ಅದಕ್ಕೆ ಕಾರಣಗಳೇನು?

೨ ಸಾಮಾಜಿಕ

೦೧. ನಿಮ್ಮ ಸುತ್ತ ಬದುಕುತ್ತಿರುವ ಇತರ ಜಾತಿಗಳು ನಿಮ್ಮನ್ನು ಯಾವ ಬಗೆಯಲ್ಲಿ ನಡೆಸಿಕೊಳ್ಳುತ್ತಿವೆ?

೦೨. ನಿಮ್ಮ ಸುತ್ತ ಬದುಕುತ್ತಿರುವ ಇತರೆ ಜಾತಿಗಳಿಗಿಂತ ನಿಮ್ಮ ಜಾತಿಯು ಹಿಂದುಳಿದಿದೆ ಎಂದು ತಾವು ಭಾಸುವಿರಾ?

೦೩. ಹಿಂದುಳಿದಿದ್ದರೆ ಅದಕ್ಕೆ ಯಾವ ಯಾವ ಕಾರಣಗಳನ್ನು ನೀಡಬಯಸುವಿರಿ

೦೪. ನಿಮ್ಮ ಸಮುದಾಯವನ್ನು ಇತರೆ ಮೇಲ್ಜಾತಿಯವರು ಕೆಳಜಾತಿ/ಅಸ್ಪೃಶ್ಯರು/ಅಪರಾಧಿ ಸಮುದಾಯವೆಂದು ನೋಡುತ್ತಿವೆಯೇ?

೦೫. ಹಾಗೆ ನೋಡಲು ಕಾರಣವೇನು?

೦೬. ಅವರು ನಿಮ್ಮ ಸಮುದಾಯವನ್ನು ಹೀನಾಯವಾಗಿ ನೋಡುತ್ತಿದ್ದರೆ ಅದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

೦೭. ಹೀಗೆ ನಿಮ್ಮನ್ನು ಹೀನಾಯವಾಗಿ ನೋಡುವುದು ಹಿಂದಿಗಿಂತ ಜಾಸ್ತಿ ಆಗುತ್ತಿದೆಯೋ ಅಥವಾ ಕಡಿಮೆ ಆಗಿದೆಯೇ?

೦೮. ಕಡಿಮೆ ಅಥವಾ ಹೆಚ್ಚಾಗುತ್ತಿರುವುದಕ್ಕೆ ಕಾರಣಗಳೇನು?

೦೯. ಇತ್ತೀಚೆಗೆ ನಿಮ್ಮ ಸಮುದಾಯದವರ ಮೇಲೆ ಯಾವುದಾದರೊಂದು ಕಾರಣಕ್ಕೆ ಮೇಲ್ಜಾತಿಯವರು ಹಲ್ಲೆ ಮಾಡಿದ ಉದಾಹರಣೆಗಳಿವೆಯೇ ಕಾರಣಗಳೇನು? ಆಗ ನಿಮ್ಮ ನೆರವಿಗೆ ಬಂದವರಾರು? (ಪೋಲೀಸ್/ದಸಂಸಂ/ಇತರೆ ಸಂಘಟನೆಗಳು)

೧೦. ಮೊದಲಿಗಿಂತ ಈಗ ನಿಮ್ಮ ಸಮುದಾಯವರು ಒಗ್ಗಟ್ಟಾಗಿರಬೇಕು, ದೌರ್ಜನ್ಯಗಳನ್ನು ಎದುರಿಸಬೇಕು ಎನ್ನಿಸುತ್ತಿದೆಯೇ?

೧೧. ಯಾವ ಬಗೆಯಲ್ಲಿ ತಮ್ಮ ಸಮುದಾಯ ಒಗ್ಗಟ್ಟಾಗಿರಬೇಕು? ಮತ್ತು ಪ್ರತಿರೋಧಿಸಬೇಕೆನ್ನಿಸುತ್ತಿದೆ?

೧೨. ಜಾತಿ ಸಂಘಟನೆ ಇದೆಯಾ? ಅದರಿಂದ ಸಮುದಾಯ ಬಲಗೊಳ್ಳುತ್ತದೆ ಎಂದು ಅನ್ನಿಸುತ್ತಿದೆಯಾ?

೧೩. ನಿಮ್ಮ ಸಮುದಾಯ ಉಚ್ಛ್ರಾಯ ಸ್ಥಿತಿಗೆ ಬರಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಬಹುದು.?

೧೪. ನಿಮ್ಮ ಸಮುದಾಯ ಹಿಂದುಳಿದಿರುವುದಕ್ಕೆ ನಿಮ್ಮ ಸಮಾಜದ ಒಳಗೇ ಇರುವ ಮೂಢ ನಂಬಿಕೆಗಳು/ ಸಣ್ಣತನ/ ಆಂತರಿಕ ವಿಘಟನೆ ಕಾರಣ ಎನ್ನಿಸುವುದೇ?

೧೫. ಮೊದಲಿಗಿಂತ ಈಗ ನಿಮ್ಮ ಸಮುದಾಯದವರು ಮುಂದುವರೆದಿದ್ದಾರೆ ಎಂದೆನ್ನಿಸುವುದೇ?

೧೬. ಮುಂದುವರೆದಿದ್ದರೆ ಅಥವಾ ಹಿಂದುಳಿದಿದ್ದರೆ ಅದಕ್ಕೆ ಯಾವ ಕಾರಣಗಳನ್ನು ಕೊಡಬಯಸುತ್ತೀರಿ?

೧೭. ಈಗಲೂ ನೀವು ಕಾಡಲ್ಲಿರಲು ಬಯಸುತ್ತೀರಾ?

೧೮. ಹೌದು / ಇಲ್ಲ ಇದಕ್ಕೆ ಯಾವ ಯಾವ ಕಾರಣಗಳನ್ನು ಕೊಡಬಯಸುತ್ತೀರಿ?

೧೯. ಕಾಡಲ್ಲಿರುವುದರಿಂದಾಗಿ ತಮ್ಮ ಸಮುದಾಯ ಹಿಂದುಳಿದಿದೆ ಎಂದೆನ್ನಿಸುವದೇ ?

೩. ಆರ್ಥಿಕ

೦೧. ನಿಮ್ಮ ಮನೆಯಲ್ಲಿನ ಸದಸ್ಯರು ಈಗ ಯಾವ ಯಾವ ದುಡಿಮೆಗಳಲ್ಲಿ ತೊಡಗಿಕೊಂಡಿದ್ದಾರೆ?

೦೨. ಹೆಚ್ಚು ಆದಾಯ ಬರುವ ಯಾವ ದುಡಿಮೆಗಳಲ್ಲಿ ನಿಮ್ಮ ಕುಟುಂಬದವರು ತೊಡಗಿಕೊಂಡಿದ್ದಾರೆ?

೦೩. ಈ ಹಿಂದೆ ನಿಮ್ಮ ತಂದೆ, ನೀವು ಮತ್ತು ನಿಮ್ಮ ತಾತ ಯಾವ ಯಾವ ದುಡಿಮೆಗಳಲ್ಲಿ ತೊಡಗಿಕೊಂಡಿದ್ದರು?

೦೪. ನಿಮ್ಮ ಕುಲ ಕಸಬು ಯಾವುದು?

೦೫. ಇಂದಿಗೂ ನಿಮ್ಮ ಕುಲ ಕಸಬು ಪ್ರಸ್ತುತ ಅನ್ನಿಸುತ್ತಿದೆಯೇ?

೦೬. ಹೌದು /ಇಲ್ಲ ಕಾರಣಗಳಾವವು?

೦೭. ಕುಲ ಕಸಬನ್ನು ಬಿಟ್ಟು ಬೇರೆ ದುಡಿಮೆಯಲ್ಲಿ ತೊಡಗಿಕೊಳ್ಳಬೇಕೆಂದು ಅನ್ನಿಸಿದಾಗ ನೀವು ನಿರೀಕ್ಷಿಸಿದ ನೆರವು ಸಿಕ್ಕಿತೇ?

೦೮. ಹೌದು / ಇಲ್ಲ ಹೇಗೆ? ಯಾರ ನೆರವು? ಸಿಕ್ಕಿತು? / ಯಾಕೆ ಸಿಗಲಿಲ್ಲ?

೦೯. ಸರಕಾರ ತಮ್ಮನ್ನು ಅಭಿವೃದ್ಧಿ ಪಡಿಸಲು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅವು ಗೊತ್ತಿವೆಯೆ?

೧೦. ಸರಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿ ಪಡಿಸುತ್ತವೆ ಎಂದು ನಿಮಗನ್ನಿಸುತ್ತಿದೆಯೇ?

೧೧. ಹೌದು /ಇಲ್ಲ -ಕಾರಣಗಳಾವು?

೧೨. ನಿಮಗೆ ಕೃಷಿ ಭೂಮಿ ಇದೆಯೇ?

೧೩. ನಿಮಗೆ ಕೃಷಿ ಭೂಮಿ ಇದ್ದರೆ ಅದನ್ನು ತಾವು ಹೇಗೆ ಪಡೆದುಕೊಂಡಿರಿ?

೧೪. ಕೃಷಿ ಇಂದು ನಿಮ್ಮ ಕುಟುಂಬವನ್ನು ಸಾಕಬಲ್ಲದು ಎಂದೆನ್ನಿಸುತ್ತಿದೆಯೇ?

೧೫. ಹೌದು / ಇಲ್ಲ -ಕಾರಣಗಳಾವವು?

೧೬. ನಿಮ್ಮ ಮನೆಯ ಹೆಣ್ಣು ಮಕ್ಕಳೂ ಸಹ ದುಡಿಮೆಯಲ್ಲಿ ತೊಡಗಿರುವರೇ?

೧೭. ಯಾವ ಯಾವ ದುಡಿಮೆಗಳಲ್ಲಿ ತೊಡಗಿದ್ದಾರೆ?

೧೮. ಇಂದು ನಿಮ್ಮ ಸಮುದಾಯವು ಯಾವ ಬಗೆಯ ದುಡಿಮೆಗಳಲ್ಲಿ ತೊಡಗಿಕೊಂಡಿದೆ ಬೇಗ ಅಭಿವೃದ್ಧಿಯಾಗಬಹುದೆಂದು ಭಾವಿಸುವಿರಿ

೧೯. ಸ್ಥಳೀಯ ಭೂಮಾಲಿಕರು /ಶ್ರೀಮಂತರು /ಮೇಲ್ಜಾತಿಯವರು /ಸರಕಾರ ಸಾಲ ಕೊಟ್ಟು ನಿಮ್ಮ ಜಮೀನು/ಮನೆ ಮತ್ತು ಇತರೆ ಆಸ್ತಿಗಳನ್ನು ವಶಪಡಿಸಿಕೊಂಡಿದ್ದಿದೆಯೇ?

೨೦. ಯಾವ ಕಾರಣಗಳಿಗಾಗಿ ಸಾಲ ಮಾಡಿದ್ದಿರಿ? ಯಾರ ಬಳಿ ಸಾಲ ಮಾಡಿದ್ದಿರಿ?

೨೧. ಹಿಂದೆಗಿಂತಲೂ ಈಗ ಹೆಚ್ಚು ಹೆಚ್ಚು ದುಡಿಮೆಯ ಅವಕಾಶಗಳು ಇವೆ ಎಂದೆನ್ನಿಸುವುದೇ?

೨೨. ಯಾವ ದುಡಿಮೆ ನಿಮಗೆ ಹೆಚ್ಚು ಇಷ್ಟವಾಗುತ್ತದೆ ಏಕೆ?

೨೩. ಹೊಸ ಹೊಸ ದುಡಿಮೆಯ ವಿಧಾನಗಳನ್ನು ಅವಲಂಬಿಸಿ ತಮ್ಮ ಸಮುದಾಯ ಬದಲಾಗುತ್ತಿದೆ ಎಂದು ಅನ್ನಿಸುತ್ತಿದೆಯೇ?

೨೪. ಕಾರಣಗಳನ್ನು ಕೊಡಿ

೪. ಶಿಕ್ಷಣ

೧. ನಿಮ್ಮ ಮನೆಯಲ್ಲಿ ಎಷ್ಟ ಜನ ಓದು ಬರಹ ಕಲಿತಿದ್ದಾರೆ?

೨. ಸರಕಾರಿ ನೌಕರಿಯಲ್ಲಿರುವವರು ಎಷ್ಟು? ಯಾವ ನೌಕರಿ ಮಾಡುತ್ತಿದ್ದಾರೆ?

೩. ನಿಮ್ಮ ಊರಲ್ಲಿ ಶಾಲೆ ಇದೆಯೇ?

೪. ನಿಮ್ಮ ಮಕ್ಕಳನ್ನು ಕಳುಹಿಸಲಾಗುತ್ತಿದೆಯೇ?

೫. ಹೌದು /ಇಲ್ಲ -ಕಾರಣಗಳಾವವು?

೬. ಶಿಕ್ಷಣ ಪಡೆದರೆ ನಿಮ್ಮ ಸಮುದಾಯ ಬದಲಾಗುತ್ತದೆ ಎಂದು ಭಾವಿಸುವಿರಾ?

೭. ಹೌದು / ಇಲ್ಲ ಕಾರಣಗಳಾವವು?

೮. ನೌಕರಿ ಪಡೆದು ಪಟ್ಟಣದಲ್ಲಿರುವ ನಿಮ್ಮವರು ನಿಮ್ಮ ಹಳ್ಳಿಗೆ, ನಿಮ್ಮ ಸಮುದಾಯಕ್ಕೆ ಯಾವ ಬಗೆಯಲ್ಲಾದರೂ ನೆರವಿಗೆ ಬಂದಿದ್ದರೇ?

೯. ಹೌದು /ಇಲ್ಲ -ಕಾರಣಗಳೇನು?

೮. ಹೀಗೆ ನೌಕರಿ ಪಡೆದು ಪಟ್ಟಣದಲ್ಲಿರುವ ನಿಮ್ಮವರು ಮುಂದುವರಿದಿದ್ದಾರೆ ಎಂದೆನ್ನಿಸುವುದೇ?

೧೦. ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರುವಿರಾ?

೧೧. ಹೌದು /ಇಲ್ಲ -ಕಾರಣಗಳೇನು?

೧೨. ನಿಮ್ಮ ಹಳ್ಳಿಯ ಪರಿಸರದಲ್ಲಿ ಶಾಲೆಗಳಿವೆಯೇ? (ಆಶ್ರಮಶಾಲೆ /ಇತರೆ ಶಾಲೆಗಳು)

೧೩. ಅಲ್ಲಿಯ ಶಿಕ್ಷಕರು ತಮ್ಮ ಮಕ್ಕಳಿಗೆ ಪರಿಣಾಮಕಾರಿಯಾಗಿ ಕಲಿಸುತ್ತಿರುವರೇ?

೧೪. ಹೌದು / ಇಲ್ಲಿ -ಕಾರಣಗಳೇನು?

೧೫. ಮೀಸಲಾತಿಯ ಮೂಲಕ ನೌಕರಿ ಸಿಗಬಹುದೆಂದು ಭಾಸಿದ್ದೀರಾ?

೧೬. ಮೀಸಲಾತಿ ಹಿಂದುಳಿದ ಸಮುದಾಯಗಳನ್ನು ಸಬಲೀಕರಿಸಬಲ್ಲದು ಎಂದು ಭಾವಿಸಿದ್ದೀರಾ?

೫. ಸಾಂಸ್ಕೃತಿಕ

೦೧. ಈ ಹಿಂದೆ ಸಮುದಾಯ ಯಾವ ಯಾವ ಹಬ್ಬ, ಹರಿದಿನಗಳನ್ನು ಆಚರಿಸುತ್ತಿತ್ತು?

೦೨. ಈ ಆಚರಣೆಗಳು ಕಾಲ ಕಾಲಕ್ಕೆ ಬದಲಾಗುತ್ತಾ ಬಂದಿವೆಯೇ?

೦೩. ಹೌದು / ಇಲ್ಲ, ಹೇಗೆ ಬದಲಾಗಿವೆ/ ಬದಲಾಗಿಲ್ಲ?

೦೪. ಸಮುದಾಯದ ಆಚರಣೆಗಳು ಇಂದಿಗೂ ಪ್ರಸ್ತುತ ಅಂತ ಅನ್ನಿಸುತ್ತಿವೆಯೇ?

೦೫. ಹೌದು / ಇಲ್ಲ -ಕಾರಣಗಳು?

೦೬. ಪ್ರಮುಖವಾಗಿ ಯಾವ ಆಚರಣೆಗಳು ನಿಮ್ಮ ಸಮುದಾಯದಲ್ಲಿ ಬದಲಾಗಿವೆ?

೦೭. ಯಾವ ಯಾವ ಹೊಸ ಆಚರಣೆಗಳು ಹೊಸದಾಗಿ ನಿಮ್ಮಿಂದ ಆಚರಿಸಲ್ಪಡುತ್ತಿವೆ ಕಾರಣಗಳೇನು?

೦೮. ನಿಮ್ಮ ಸಮುದಾಯದ ನಂಬಿಕೆ. ಸಂಪ್ರದಾಯಗಳು ಇವತ್ತಿಗೂ ಪ್ರಸ್ತುತ ಎಂದು ಅನ್ನಿಸುತ್ತಿದೆಯೇ?

೦೯. ಹೌದು /ಇಲ್ಲ -ಕಾರಣಗಳೇನು?

೧೦. ನಿಮ್ಮ ಸಮುದಾಯದ ನಂಬಿಕೆ ಸಂಪ್ರದಾಯಗಳು ಮೂಲಸ್ಥಿತಿಯಲ್ಲಿ ಉಳಿದಿವೆಯೋ ಅಥವಾ ಬದಲಾಗಿವೆಯೋ?

೧೧. ಹೀಗಾಗುವುದಕ್ಕೆ ಕಾರಣಗಳೇನು?

೧೨. ಈಗಿನ ಯುವಕರಲ್ಲಿ ನಿಮ್ಮ ಸಮುದಾಯದ ನಂಬಿಕೆ ಸಂಪ್ರದಾಯಗಳ ಕುರಿತು ಯಾವ ಭಾವನೆಗಳಿವೆ?

೧೩. ಇದಕ್ಕೆ ಕಾರಣಗಳೇನಿರಬಹುದು?

೧೩. ನಿಮ್ಮ ಸಮುದಾಯದಲ್ಲಿ ಈಗ ಮದುವೆಗಳು ಹೇಗೆ ನಡೆಯುತ್ತವೆ? ಹಿಂದೆ ಹೇಗೆ ನಡೆಯುತ್ತಿದ್ದವು?

೧೪. ನಿಮ್ಮಲ್ಲಿಯ ಪಾರಂಪರಿಕ ಆಹಾರ ಪದ್ಧತಿ, ವೇಷಭೂಷಣ, ವೈದ್ಯ ಪದ್ಧತಿ ಹಾಡು ಕುಣಿತಗಳು ಉಳಿದಿವೆಯೇ?

೧೫. ಯಾಕೆ ಇವು ಉಳಿದಿವೆ? ಮತ್ತು ಉಳಿದಿಲ್ಲ?

೧೬. ನಿಮ್ಮ ಸಂಸ್ಕೃತಿ, ಜೀವನ ವಿಧಾನ ತಾನಾಗಿಯೇ ಬದಲಾಯಿತೇ ? ಅಥವಾ ಹೊರಗಿನ ಪ್ರಭಾವಗಳಿಂದಾಗಿ ಬದಲಾಯಿತೇ?

೧೭. ನಿಮ್ಮ ಮೂಲದೇವರು ಯಾವುದು? ಮನೆ ದೇವರು ಯಾವುದು?

೧೮. ಈಗ ಯಾವ ಯಾವ ಬೇರೆ ದೇವರುಗಳನ್ನು ಪೂಜಿಸುತ್ತಿದ್ದೀರಿ? ಯಾಕಾಗಿ ಪೂಜಿಸುತ್ತೀರಿ?

೧೯. ನಿಮ್ಮದೇ ದೇವರುಗಳಿಗೆ ಗುಡಿಗಳನ್ನು ನಿರ್ಮಿಸಲಾಗಿದೆಯೇ?

೨೦. ಯಾವಾಗ ನಿರ್ಮಿಸಲಾಯಿತು? ಯಾಕೆ ನಿರ್ಮಿಸಲಾಗಿಲ್ಲ?

೨೧. ದೇವರನ್ನು ಕುರಿತ ನಂಬಿಕೆಗಳು ಹಿಂದಿನಂತೆ ಈಗಲೂ ಬಲವಾಗಿವೆ ಎನ್ನಿಸುತ್ತಿದೆಯೇ?

೨೨. ಹೌದು / ಇಲ್ಲ ಕಾರಣಗಳಾವವು?

೨೩.ನಿಮ್ಮ ಸಮುದಾಯದಲ್ಲಿ ಯಾರಾದರು ಮತಾಂತರವಾಗಿದ್ದಾರಿಯೇ?

೨೪. ಹೌದು / ಇಲ್ಲ ಕಾರಣಗಳಾವವು?

೨೫. ಹೀಗೆ ಮತಾಂತರಗೊಂಡವರು, ಮತಾಂತರಗೊಳ್ಳದಿರುವವರಿಗಿಂತ ಮುಂದುವರೆದಿದ್ದಾರೆಯೇ?

೨೬ ನಿಮಗೂ ಮತಾಂತರವಾಗಬೇಕಿನ್ನಿಸಿದೆಯೇ?

೨೭. ಏಕೆ ?

೬. ರಾಜಕೀಯ

೧. ತಾವು ಪ್ರತಿ ಚುನಾವಣೆಯಲ್ಲಿ ಮತ ಚಲಾಯಿಸುವಿರಾ?

೨. ಹೌದು / ಇಲ್ಲ ಕಾರಣಗಳು?

೩. ಹಿಂದಿನಿಂದಲೂ ಯಾವ ಪಕ್ಷವನ್ನು ಬೆಂಬಲಿಸುತ್ತಾ ಬಂದಿದ್ದೀರಿ?

೪. ಯಾಕೆ ಆ ಪಕ್ಷವನ್ನು ಬೆಂಬಲಿಸಿದಿರಿ?

೫. ಈಗ ಯಾವ ಪಕ್ಷವನ್ನು ಬೆಂಬಲಿಸುತ್ತಿದ್ದೀರಿ?

೬. ಯಾಕೆ ಈ ಪಕ್ಷವನ್ನು ಬೆಂಬಲಿಸುತ್ತಿದ್ದೀರಿ?

೭. ನಿಮ್ಮ ಸಮುದಾಯಕ್ಕೆ ರಾಜಕೀಯ ಮೀಸಲಾತಿ ದೊರಕಿದೆಯೇ?

೮. ಯಾವ ಹಂತದಲ್ಲಿ (ಗ್ರಾಮ/ತಾಲೂಕು/ ಜಿಲ್ಲಾ ಪಂಚಾಯ್ತಿ) ಸಿಕ್ಕಿದೆ?

೯. ಹೀಗೆ ಸಿಕ್ಕಿದ ಮೀಸಲಾತಿಯಿಂದ ಸಮುದಾಯಕ್ಕೆ ಒಳಿತಾಗಿದೆಯೇ?

೧೦. ಹೌದು / ಇಲ್ಲ ಕಾರಣಗಳೇನು ?

೧೧. ಯಾವ ರಾಜಕೀಯ ಪಕ್ಷ ನಿಮ್ಮ ಸಮುದಾಯದ ಹಿತ ಬಯಸುತ್ತಿದೆ ಎಂದು ಭಾವಿಸುತ್ತೀರಿ? ಹೇಗೆ?

೧೨. ತಾವು ಯಾವ ಯಾವ ಸಂಘಟನೆಗಳಲ್ಲಿ ಪಾಲ್ಗೊಂಡು ಚಳುವಳಿಗಳಲ್ಲಿ ತೊಡಗಿದ್ದೀರಿ?

೧೩. ಯಾಕೆ ಸಂಘಟನೆಯಲ್ಲಿ ತೊಡಗಿಕೊಂಡಿರಿ? ಇದರಿಂದ ತಮಗೆ ಮತ್ತು ಸಮುದಾಯಕ್ಕೆ ಆದ ಲಾಭಗಳೇನು?

೧೪. ನಿಮ್ಮ ಸಮುದಾಯ ಸಾಂಘಿಕವಾಗಿ ಯಾವ ಯಾವ ಚಳುವಳಿಗಳಲ್ಲಿ ತೊಡಗಿಕೊಂಡಿದೆ?

೧೫. ಆ ಚಳುವಳಿ / ಹೋರಾಟದ ಫಲಿತಗಳೇನು?

೧೬. ಸಂವಿಧಾನಬದ್ಧ ಮೀಸಲಾತಿಯಿಂದ ಶೋಷಿತ ಸಮದಾಯಗಳು ಅಭಿವೃದ್ಧಿ ಆಗುತ್ತದೆ ಎಂದು ಭಾಸುವಿರಾ?

೧೭. ಹೇಗೆ ?

೧೮. ಸರಕಾರದ ಯಾವ ಇಲಾಖೆ ನಿಮ್ಮ ಸಮುದಾಯಕ್ಕೆ ಪೂರಕವಾಗಿದೆ ಮತ್ತು ಯಾವ ಇಲಾಖೆ ಮಾರಕವಾಗಿದೆ?

೧೯. ಏಕೆ?

೨೦. ಈ ಕಾಲದ ಟಿ ವಿ, ಸಿನೇಮಾ ಮುಂತಾದ ಸಂಗತಿಗಳು ನಿಮ್ಮ ಸಮುದಾಯದ ಮೇಲೆ ಪ್ರಭಾವ ಬೀರಿವೆ ಎಂದೆನ್ನಿಸುವುದೇ?

೨೧. ಸಮುದಾಯಕ್ಕೆ ಅದರದ್ದೇ ಆದ ನ್ಯಾಯ ವ್ಯವಸ್ಥೆ ಕಟ್ಟೆಮನೆ / ಕುಲ ಪಂಚಾಯ್ತಿ ವ್ಯವಸ್ಥೆ ಇದೆಯೇ?

೨೨. ಈ ಹಿಂದೆ ಈ ವ್ಯವಸ್ಥೆ ಇತ್ತೇ?

೨೩. ಈ ಕುಲಪಂಚಾಯ್ತಿ ಸ್ವರೂಪ ಬದಲಾಗಿದೆಯೇ? ಬದಲಾಗಿದ್ದರೆ ಹೇಗೆ ಮತ್ತು ಏಕೆ ಬದಲಾಗಿದೆ?

೨೪. ಈಗ ಕುಲದ ನ್ಯಾಯ ಪಂಚಾಯ್ತಿಯನ್ನು ಯಾರು ನಿರ್ವಹಿಸುತ್ತಾರೆ ?

೨೫. ಕುಲ ಪಂಚಾಯ್ತಿಯನ್ನು ಸಮುದಾಯದ ಎಲ್ಲರೂ ಗೌರವಿಸುವರೇ?

೨೬. ಈಗ ಸಮುದಾಯದ ವ್ಯಾಜ್ಯಗಳು ಕುಲ ಪಂಚಾಯ್ತಿಯನ್ನು ಮೀರಿ ಕೋರ್ಟು ಕಛೇರಿಗಳಿಗೆ ಹೋಗಿವೆಯೇ?

೨೭. ಕಾರಣಗಳೇನು ?

೨೮. ನಿಮ್ಮ ಸಮುದಾಯ ಹಿಂದೆ ಇದ್ದ ಸ್ಥಿತಿಯಲ್ಲಿಯೇ ಇದೆಯೇ ಅಥವಾ ಬದಲಾಗಿದೆ ಎಂದೆನ್ನಿಸುತ್ತಿದೆಯೇ?

೨೯. ಕಾರಣಗಳೇನು?

೭. **ಸ್ಥಳಾಂತರ** : ಸ್ಥಳಾಂತರ ಮತ್ತು ಪುನರ್ವಸತೀಕರಣ ಕುರಿತಂತೆ ಸ್ಥಳಿಯರ ನಿಲುವುಗಳು

(ಸ್ಥಳಾಂತರಗೊಳ್ಳುವರು/ ಸ್ಥಳಾಂತರಗೊಂಡಿರುವವರು: ಸವಾಲು ಮತ್ತು ಸಾಧ್ಯತೆಗಳ ಮಾಹಿತಿ)

೧. ಕಾಡಿನಿಂದ ನಿಮ್ಮನ್ನು ಒಕ್ಕಲೆಬ್ಬಿಸಲಾಗಿದೆಯೇ? ಯಾವ ಕಾಡಿನಿಂದ ಒಕ್ಕಲೆಬ್ಬಿಸಲಾಗಿದೆ? ಯಾವಾಗ?
೨. ನಿಮ್ಮನ್ನು ಒಕ್ಕಲೆಬ್ಬಿಸುವ ಸಂದರ್ಭದಲ್ಲಿ ನಿಮ್ಮ ಒಪ್ಪಿಗೆಯನ್ನು ಸರಕಾರ ಪಡೆದುಕೊಂಡಿತ್ತೆ? ಅಥವಾ ಒತ್ತಾಯದಿಂದ ಒಕ್ಕಲೆಬ್ಬಿಸಲಾಯಿತೇ?
೩. ಹೌದು / ಇಲ್ಲ ಕಾರಣಗಳೇನು ?
೧. ನೀವು ಯಾವ ಯೋಜನೆಯಿಂದಾಗಿ ಸ್ಥಳಾಂತರಗೊಂಡಿದ್ದೀರ?
ಸೂಚನೆ:– ರಾಷ್ಟ್ರೀಯ ಉದ್ಯಾನವನ ಘೋಷಣೆ–1, ಹುಲಿ ಸಂರಕ್ಷಣಾ ಯೋಜನೆ–2, ಎಲಿಫೆಂಟಾ ಕಾರಿಡಾರ್–3, ರಕ್ಷಿತಾರಣ್ಯಗಳು–4,
ಅಣೆಕಟ್ಟು ನಿರ್ಮಾಣ ಮತ್ತು ಹಿನ್ನೀರಿನ ಪ್ರವಾಹ–5, ನಕ್ಸಲ್ ಕಾರ್ಯಾಚರಣೆ–6, ಇತರೆ–7
೨. ಎಷ್ಟು ವರ್ಷದಿಂದೆ ಸ್ಥಳಾಂತರಗೊಂಡಿದ್ದೀರ?
೦–೫ವರ್ಷ, ೫–೧೦, ೧೦–೧೫, ೧೫–೨೦, ೨೦–೨೫, >೨೫
೩. ಯಾರ ಮೂಲಕ ಸ್ಥಳಾಂತರಗೊಳ್ಳಲು ಪ್ರೇರಣೆಯಾಯಿತು?
ಸೂಚನೆ: ಸ್ವಯಂ, ಪೋಷಕರು/ಮಕ್ಕಳು, ಸಮುದಾಯ/ಸ್ನೇಹಿತರು, ಸರ್ಕಾರದ ಅಧಿಕಾರಿಗಳು, ಜನಪ್ರತಿನಿಧಿಗಳು, ಪುನರ್ವಸತೀಕರಣ ಪ್ಯಾಕೇಜ್, ಇತರೆ.
೪. ಸ್ಥಳಾಂತರಗೊಳ್ಳುವಿಕೆಗೆ ಕಾರಣಗಳು:

ಸೂಚಚನೆ: ಸ್ವಯಂ, ಕುಟುಂಬದ ಒತ್ತಾಸೆ, ಮಕ್ಕಳ ವಿದ್ಯಾಬ್ಯಾಸಕ್ಕಾಗಿ, ವ್ಯಾಪಾರ/ವ್ಯವಹಾರ, ಉದ್ಯೋಗಕ್ಕಾಗಿ, ಇಲಾಖಾ ಕಾರ್ಯಚರಣೆಗಳಿಗೆ ಸಂಬಂಧಿಸಿದಂತೆ, ಸಮುದಾಯ/ಸ್ನೇಹಿತರಿಂದಾಗಿ, ಪುನರ್ವಸತೀಕರಣ ಸೌಲಭ್ಯಗಳು, ಇತರೆ.

೫. ನೀವು ಸ್ಥಳಾಂತರಗೊಳ್ಳಲು ಮತ್ತು ಪುನರ್ವಸತಿ ಸೌಲಭ್ಯ ಕಲ್ಪಿಸಲು ಯಾವ ಇಲಾಖೆಗೆ ಪತ್ರ ನೀಡಿದಿರಿ?
ಸೂಚನೆ: ಅರಣ್ಯ ಇಲಾಖೆ, ಕಂದಾಯ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಇತರೆ
೬. ನೀವು ಸ್ಥಳಾಂತರಗೊಳ್ಳಲು ಮತ್ತು ಪುನರ್ವಸತಿ ಸೌಲಭ್ಯ ಕಲ್ಪಿಸಲು ಇಲಾಖೆಗೆ ಸಮ್ಮತಿ ಪತ್ರ ನೀಡಿ ಪರಿಹಾರವನ್ನು ಪಡೆಯಲು ತೆಗೆದುಕೊಂಡ ಸಮಯ?
೦–೨ವರ್ಷ, ೨–೪, ೪–೬, ೬–೮, >೮
೭. ನೀವು ಸ್ಥಳಾಂತರಗೊಳ್ಳುವಾಗ ನಿಮ್ಮಲ್ಲಿದ್ದ ಆಸ್ತಿಯ ವಿವರಗಳು?
೮. ನಿಮ್ಮ ಆಸ್ತಿ/ಸಂಪತ್ತಿಗೆ ದೊರೆತಂತಹ ಪರಿಹಾರದ ಮೊತ್ತವೆಷ್ಟು? (ರೂಗಳಲ್ಲಿ):
೯. ನಿಮಗೆ ಸಿಕ್ಕ ಪರಿಹಾರದ ಮೊತ್ತದಿಂದ ಯಾವ ಅಂಶಗಳಿಗೆ ವಿನಿಯೋಗಿಸಿದ್ದೀರ? ಕಾರಣಗಳನ್ನು ತಿಳಿಸಿ:
೧೦. ನಿವು ಸ್ಥಳಾಂತರಗೊಳ್ಳುವಿಕೆಗೆ ಯಾವ ಇಲಾಖೆಯಿಂದ ಒತ್ತಾಯ/ಬಲವಂತವಾಯಿತು? ಯಾವ ಪ್ರಕಾರವಾಗಿ ತಿಳಿಸಿ:
೧೧. ಬಲವಂತದ ಸ್ಥಳಾಂತರಕ್ಕೆ ನಿಮ್ಮ ನಿಲುವುಗಳು ಯಾವುವು? ಮತ್ತು ಅವುಗಳನ್ನು ಹೇಗೆ ಅನುಷ್ಟಾನಿಸಿದಿರಿ ತಿಳಿಸಿ:

೧೨. ನಿಮ್ಮೊಂದಿಗೆ ಸಮುದಾಯದ ಎಷ್ಟು ಕುಟುಂಬಗಳು ಸ್ವಯಂ ಪ್ರೇರಿತ ಸ್ಥಳಾಂತರಕ್ಕೆ ಸಮ್ಮತಿಸಿದ್ದವು? ಅವುಗಳಲ್ಲಿ ಎಷ್ಟು ಕುಟುಂಬಗಳಿಗೆ ಪುನರ್ವಸತೀಕರಣ ಸೌಲಭ್ಯ ದೊರೆಯಿತು?

೧೩. ಸ್ಥಳಾಂತರಕ್ಕೆ ಸಮ್ಮತಿಸಿಯೂ ಕೂಡ ಸ್ಥಳಾಂತರಕ್ಕೆ ಒಳಗಾಗದಿರಲು ಕಾರಣಗಳೇನು?

೧೪. ಆ ಕಾರಣಗಳನ್ನು ಹೊರತುಪಡಿಸಿ ಬೇರೆ ಯಾವುದಾದರೂ ಪರಿಹಾರೋಪಾಯವನ್ನು ಕಂಡುಕೊಂಡರೇ ತಿಳಿಸಿ:

೧೫. ನಿಮ್ಮೊಂದಿಗೆ ಸ್ಥಳಾಂತರಗೊಂಡವರು ಎಲ್ಲಿ ನೆಲೆಸಿದ್ದಾರೆ? ತಿಳಿಸಿ:

೧೬.ನೀವು ಸ್ಥಳಾಂತರಗೊಂಡ ಮೇಲೆ ಸಮುದಾಯದೊಂದಿಗಿನ ಸಾಮಾಜಿಕ ಜೀವನಾಂಶಗಳಲ್ಲಿ ವ್ಯತ್ಯಾಸಗಳನ್ನು ಕಾಣುತ್ತಿದ್ದೀರೆ, ಅವು ಯಾವುವು ತಿಳಿಸಿ:

೧೭. ನೀವು ಸ್ಥಳಾಂತರಗೊಂಡ ಮೇಲೆ ಸಮುದಾಯದ ಸಾಂಸ್ಕೃತಿಕ ಜೀವನಾಂಶಗಳು ಇಂದಿಗೂ ಜೀವಂತವೇ ಅಥವಾ ಅವುಗಳನ್ನು ಆಚರಿಸಲು ನಿರ್ಬಂಧ ವಿದಿಸಲಾಗಿದೆಯೇ? ತಿಳಿಸಿ:

೧೮. ನೀವು ಸ್ಥಳಾಂತರಕ್ಕೆ ಒಳಪಟ್ಟು ಪುನರ್ವಸತೀಕರಣ ಸೌಲಭ್ಯಗಳನ್ನು ಪಡೆದ ಮೇಲೆ ಮೊದಲಿಗಿಂತಲೂ ಆರ್ಥಿಕ ಪರಿಸ್ಥಿತಿಗಳು ಉತ್ತಮಗೊಂಡಿವೆಯೇ, ತಿಳಿಸಿ:

೧೯. ನೀವು ಸ್ಥಳಾಂತರಗೊಂಡ ಮೇಲೆ ನಿಮ್ಮ ಮಕ್ಕಳ ವಿದ್ಯಾಬ್ಯಾಸಕ್ಕಾಗಿ ಸರ್ಕಾರ ಕೈಗೊಂಡಿರುವ ಕಾರ್ಯಗಳೇನು? ಮತ್ತು ಅವುಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತಿದ್ದೀರ?

೨೦.ನೀವು ಸ್ಥಳಾಂತರಗೊಂಡ ಮೇಲೆ ನಿಮ್ಮ ಆರೋಗ್ಯ ಸುಧಾರಣೆಗಾಗಿ ಪುನರ್ವಸತೀಕರಣ ಸೌಲಭ್ಯಗಳಲ್ಲಿ ನೀಡಲಾಗಿರುವ ಸಂಪನ್ಮೂಲಗಳೇನು? ಹಾಗೂ ಅವುಗಳು ನಿಮಗೆ ಪೂರ್ವ ಸ್ಥಳದಲ್ಲಿ ಪಡೆಯುತ್ತಿದ್ದ ನೈಸರ್ಗಿಕ ಔಷಧಿ ವಿದಾನಕ್ಕಿಂತ ಉತ್ತಮವೇ? ತಿಳಿಸಿ:

೨೧. ನೀವು ಪಡೆದಿರುವ ಪುನರ್ವಸತೀಕರಣ ಸೌಲಭ್ಯವು ಉತ್ತಮವೆನಿಸಿದ್ದಲ್ಲಿ ಅವುಗಳನ್ನು ಪಡೆಯದೆ ಇರುವ ನಿಮ್ಮ ಸಮುದಾಯದ ಇತರೆಯವರನ್ನು ಪಡೆಯಲು ಸೂಚಿಸುವಿರ:

೨೨.ಸರ್ಕಾರ, ಇಲಾಖೆ ಮತ್ತು ನಿಮ್ಮ ನಡುವೆ ಯಾವುದಾದರು ಸಂಸ್ಥೆ/ಗಳು ಸ್ಥಳಾಂತರ ಕಾರ್ಯಕ್ಕೆ ಮಧ್ಯವರ್ತಿಗಳಾಗಿ ಕಾರ್ಯ ನಿರ್ವಹಿಸಿವೆಯೇ? ತಿಳಿಸಿ:

೨೩.ಈ ಸಂಸ್ಥೆಗಳು ಮಧ್ಯವರ್ತಿಗಳಾಗಿ ಕಾರ್ಯ ನಿರ್ವಹಿಸಿಯೂ ಕೂಡ ನಿಮ್ಮ ಅರ್ಜಿ ಇಲಾಖೆಯಿಂದ ತಿರಸ್ಕೃತಗೊಂಡಿತೇ? ಯಾವ ಕಾರಣಕ್ಕಾಗಿ ತಿಳಿಸಿ:

೨೪. ಈ ಸಂಸ್ಥೆಗಳ ಕಾರ್ಯಚರಣೆ ಕುರಿತು ನಿಮ್ಮ ನಿಲುವುಗಳನ್ನು ವ್ಯಕ್ತಪಡಿಸಿ:

೨೫. ಭವಿಷ್ಯದಲ್ಲಿ ಸ್ಥಳಾಂತರಗೊಳ್ಳಲಿರುವ ಇತರೆ ಸಮುದಾಯಗಳಿಗೆ ನಿಮ್ಮ ಸಲಹೆಗಳು:

೨೬.ಸರ್ಕಾರ, ಇಲಾಖೆ, ಸರ್ಕಾರೇತರ ಸಂಸ್ಥೆಗಳು ಹಾಗೂ ಸಮುದಾಯಕ್ಕೆ ಸ್ಥಳಾಂತರ ಮತ್ತು ಅದರ ಪುನರ್ವಸತೀಕರಣ ಸೌಲಭ್ಯಗಳ ಕುರಿತು ನಿಮ್ಮ ಸಲಹೆಗಳು:

೨೭.ನಿಮ್ಮ ಕುಟುಂಬದಲ್ಲಿ ಯಾರಾದರೂ ಸಾಂಸ್ಥಿಕ ಕಛೇರಿಗಳಲ್ಲಿ ಸದಸ್ಯರೆ?

ಸಂಸ್ಥೆ	ಹೆಸರು	ಲಿಂಗ		*ಸ್ಥಾನ		
		1	2	1	2	3
1 ಗ್ರಾಮ ಪಂಚಾಯತಿ						
2 ಸಹಕಾರ ಸಂಘಗಳು						
3 ಲ್ಯಾಂಪ್ಸ						
4 ಧಾರ್ಮಿಕ ಸಂಸ್ಥೆ						
5 ಸ್ವ ಸಹಾಯ ಸಂಘಗಳು						
6 ಯುವಕ ಸಂಘ						
7 ಜಾತಿ ಗುಂಪುಗಳು						
8 ಮನೊರಂಜನ ಗುಂಪುಗಳು						
9 ಇತರೆ						

ಸೂಚನ: ಪುರುಷ–1, ಮಹಿಳೆ–2. * ಅಧ್ಯಕ್ಷ–1, ಉಪಾಧ್ಯಕ್ಷ–2, ಸದಸ್ಯರು–3.

೨೮.ಇತರೆ ಸಲಹೆಗಳು:

ಅನುಬಂಧ –೨

ನಕಾಶೆಗಳು

ಭಾರತಾದ್ಯಂತ ಉಲ್ಲೇಖಿಸಿರುವ ರಾಷ್ಟ್ರೀಯ ಉದ್ಯಾನವನಗಳು.



ಭಾರತದಾದ್ಯಂತ ಉಲ್ಲೇಖಿಸಿರುವ ವನ್ಯಜೀವಿ ಅಭಯಾರಣ್ಯಗಳು.







ಕೃಪೆ: ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ.


ಅನುಬಂಧ – ೩


ಸರ್ಕಾರಿ ದಾಖಲೆಗಳು ಮತ್ತು ದಿನ ಪತ್ರಿಕೆಗಳು




ಕುದುರೆಮುಖ ಕಬ್ಬಿಣ ಅದಿರು ಕಂಪನಿಯ ಅಧ್ಯಕ್ಷರು ಮತ್ತು ಆಡಳಿತ ನಿರ್ದೇಶಕರಾದ ಶ್ರೀ ಕೆ.ಸಿ ಖನ್ನಾ ಅವರ ಸನ್ಮಾನ ಪತ್ರದಲ್ಲಿ ಉಲ್ಲೇಖವಿರುವ ಕುದುರೆಮುಖ ವಲಯದ ಪೂರ್ವ ಹೆಸರು ಮತ್ತು ಅಂದು ಕಂಪನಿಯ ಸ್ಥಾಪನೆಗೆ ತಮ್ಮ ಜಮೀನುಗಳನ್ನು ನೀಡಿದ ಕುಟುಂಬಗಳ ಸಂಖ್ಯೆ. (ಮೊದಲ ಸ್ಥಳಾಂತರ).


ಕರ್ನಾಟಕ ರಾಜ್ಯಪತ್ರ
FOREST, ENVIRONMENT AND ECOLOGY DEPARTMENT
NOTIFICATION


SCHEDULE
BOUNDARY DESCRIPTION


TABLE
(In Hectares)
Type of Land use
Survey Nos.
Total Area
Forest
Non-Forest
SUB TOTAL
GRAND TOTAL




ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಘೋಷಣಾಪತ್ರ. ಉಪ ವಿಭಾಗಾಧಿಕಾರಿ. ಚಿಕ್ಕಮಗಳೂರು.




ರಾಷ್ಟ್ರೀಯ ಉದ್ಯಾನವನ ಘೋಷಣಾ ಪತ್ರದಲ್ಲಿ ಉಲ್ಲೇಖಿಸಿರುವ ಗ್ರಾಮಗಳು ಮತ್ತು ಸರ್ವೆ ನಂಗಳ ಪಟ್ಟಿ

ಕಾಡಿನಿಂದ ನಾಡಿಗೆ ಬಂದ ಬಾಚು ಮಲೆಕುಡಿಯರ ಬದುಕು






ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಮತ್ತೆ ಒಕ್ಕಲೆಬ್ಬಿಸುವ ಭೀತಿ








ಡೀಸಿ ಎದುರು ಕಷ್ಟ ಬಿಚ್ಚಿಟ್ಟ ಕುತ್ಲೂರು ಆದಿವಾಸಿಗಳು

ಸರಕಾರ ಕೊಟ್ಟ ಪರಿಹಾರಕ್ಕೆ ಅಧಿಕಾರಿಗಳ











ಅನುಬಂಧ – ೪

ಕುದುರೆಮುಖ ರಾಷ್ಟ್ರೀಯ ಉದ್ಯಾನದ ಕ್ಷೇತ್ರಕಾರ್ಯದ ಛಾಯಚಿತ್ರಗಳು



ಬಾಬು ಮಲೆಕುಡಿಯ. ಕೆರ್ವಾಶೆ. ಕಾರ್ಕಳ.



ಝರಿ ನೀರು ಬಳಸಿಕೊಂಡು ವಿದ್ಯುತ್
ಉತ್ಪಾಧಿಸುವ ಯಂತ್ರದೊಂದಿಗೆ ಶಿವಪ್ಪ ಮಲೆಕುಡಿಯ



ಮಲೆಕುಡಿಯರ ಕುಟುಂಬ. ಶಿರ್ಲಾಲು.



ಮಲೆಕುಡಿಯರ ಕುಟುಂಬ. ಕೆರ್ವಾಶೆ.



ದಕ್ಷಿಣ ಕನ್ನಡ ಜಿಲ್ಲೆಯ ಮಲೆಕುಡಿಯ ಸಂಘದ ಸದಸ್ಯರೊಂದಿಗೆ ಸಂಶೋಧನಾರ್ಥಿ.



ಮೆಣಸಿನಹಾಡ್ಯದ ಗೌಡಲು ಕುಟುಂಬ



ಶ್ರೀ ವೆಂಕೇ ಗೌಡ. ಮೀಗ.



ಶ್ರೀ ಗುಂಡೇಗೌಡ. ಶೀರ್ಲು.



ಅಡಿಕೆ ಸ್ವಚ್ಛತಾ ಕಾರ್ಯದಲ್ಲಿ ಗೌಡಲು
ಸಮುದಾಯದವರು



ಶ್ರೀ ಗೋಪಾಲಕೃಷ್ಣ ಗೌಡರ
ಕುಟುಂಬ. ಮೆಣಸಿನಹಾಡ್ಯ



ಶ್ರೀ ಸುರೇಶ ಭಟ್ಟ್, ಕೆಂಗನಕೊಂಡ



ಶ್ರೀ ಪ್ರಕಾಶ್ ಜೈನ್. ಮಲವಂತಿಗೆ



ಗುಲಗಂಜಿಮನೆ ಸ್ಥಳದಿಂದ ನೇತ್ರವಳ್ಳಿ ಸ್ಥಳಕ್ಕೆ
ಪುನರ್ವಸತಿ ಹೊಂದಿದ ಗೌಡಲು ಕುಟುಂಬ



ಭಗವತಿ ಸ್ಥಳದಿಂದ ನೀಲಂದೂರು ಗ್ರಾಮಕ್ಕೆ
ಪುನರ್ವಸತಿ ಹೊಂದಿದ ಗೌಡಲು ಕುಟುಂಬ



ಭದ್ರಾ ಪುನರ್ವಸತಿ ಸ್ಥಳದ ಸರ್ಕಾರದ
ಮನೆಗಳು ಎಂ. ಸಿ ಹಳ್ಳಿ, ಚಿಕಮಗಳೂರು ಜಿ.



ಕೆ.ಐ.ಒ.ಸಿ.ಎಲ್ ಚಿಹ್ನೆ



ಗಣಿಗಾರಿಕೆಯಲ್ಲಿ ಅದಿರು ಸ್ವಚ್ಛಗೊಳಿಸುತ್ತಿದ್ದ ಘಟಕಗಳ ಸ್ಥಗಿತತೆ.



ಕಂಪನಿ ಪುನರ್ವಸತಿ ಕಾಲೋನಿ ಜಾಂಬಳೆ.



ಕಂಪನಿ ವ್ಯವಸ್ಥಾಪಕರೊಂದಿಗೆ ಸಂದರ್ಶನ.



ಅದಿರು ಸ್ವಚ್ಛಗೊಳಿಸಿದ ತ್ಯಾಜ್ಯ ಸಂಗ್ರಹವಾಗಿರುವ ಲಕ್ಯಾ ಡ್ಯಾಮ್



ಲಕ್ಯಾ ಡ್ಯಾಮ್‌ನ ಹೊರ ನೋಟ

